
ಯಕ್ಷಗಾನ ಪದಕೋಶ

ಎಂ. ಪ್ರಭಾಕರ ಜೋಶಿ



1994

ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ,
ಎಂ.ಜಿ.ಎಂ. ಕಾಲೇಜು, ಉಡುಪಿ-576 102

ಯಕ್ಷಗಾನ ಪದಕೋಶ

ಎಂ. ಪ್ರಭಾಕರ ಜೋಶಿ

1994

ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ
ಉಡುಪಿ – 576 102

Yakshagana Padakosha: A Discriptive Lexicon of the technical terms of Yakshagana
by M. Prabhakara Joshy, Lecturer, Besant Pre-University College,
Mangalore – 575 003.

Published by: Regional Resources Centre for Folk Performing Arts, MGM College,
Udupi – 576 102, Karnataka.

ಪುಟಗಳು : viii + 172

ಪ್ರಥಮ ಮುದ್ರಣ : 1994

ಬೆಲೆ : ರೂ. 105

ರೇಖಾಚಿತ್ರಗಳು: ಜಿ. ಆರ್. ಉಪಾಧ್ಯಾಯ, ಮಂಗಳೂರು, ಗಂಜೀಫಾ ರಘುಪತಿ ಭಟ್ಟ.
ಮುದ್ರಕರು : ಮಣಿಪಾಲ ಪವರ್ ಪ್ರೆಸ್, ಮಣಿಪಾಲ.

ಪ್ರಕಾಶಕರ ಎರಡು ಮಾತು

ಯಕ್ಷಗಾನದ ಶಾಸ್ತ್ರೀಯ ವಿವೇಚನೆಯಲ್ಲಿ ಪಳಗಿದ ವಿಮರ್ಶಕ ಮಿತ್ರ ಪ್ರಭಾಕರ ಜೋಶಿಯವರ ಒಂದು ಮುಖ್ಯ ಕೃತಿ 'ಯಕ್ಷಗಾನ ಪದಕೋಶ'. ಯಕ್ಷಗಾನ ಕಲೆಯ ಸಮಗ್ರ ಪಾಂಡಿತ್ಯವನ್ನು ತನ್ನ ವ್ಯಕ್ತಿತ್ವದಲ್ಲಿ ಅನುಭವಪೂರ್ಣವಾಗಿ ಅಳವಡಿಸಿ ತನ್ನ ಉಪನ್ಯಾಸ-ಲೇಖನ- ಕಲೆಯ ಪ್ರತ್ಯಕ್ಷ ಹಾಗೂ ನಿಕಟ ದರ್ಶನಗಳಿಂದಾಗಿ ಶ್ರೀ ಜೋಶಿಯವರು ಈಗಾಗಲೇ ಯಕ್ಷಗಾನ ಪ್ರಪಂಚದಲ್ಲಿ ಸುಪ್ರಸಿದ್ಧರು. ಅವರ ತರ್ಕಶಕ್ತಿ, ವಾಗ್ಮಿಯತೆಯನ್ನು ಅರಿಯದವರಿಲ್ಲ. ಮೆಚ್ಚಿಕೊಳ್ಳದವರಿಲ್ಲ, ಅವರ ಮಾತಿನ ಸಮ್ಮೋಹಿನಿಗೆ ಮರುಳಾಗದವರಿಲ್ಲ.

ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದ ಒಬ್ಬ ಸಂಶೋಧಕ ವಿದ್ವಾಂಸ (ರಿಸರ್ಚ್ ಫೆಲೋ) ಎಂಬ ನೆಲೆಯಲ್ಲಿ ಅವರು ನಮಗೆ ರಚಿಸಿಕೊಟ್ಟ ಪ್ರಸ್ತುತ 'ಯಕ್ಷಗಾನ ಪದಕೋಶ' ಒಂದು ಆಕರಗ್ರಂಥವಾಗಿ ಇದೀಗ ಓದುಗರ ಮುಂದೆ ಇದೆ. ಇದರ ನಿರ್ಮಾಣಕಾಲದ ಪರಿಶ್ರಮ ಮತ್ತು ಪಾಂಡಿತ್ಯಗಳ ಪ್ರಯೋಜನವನ್ನು ಕನ್ನಡಿಗ- ಯಕ್ಷಗಾನಾಭಿಮಾನಿಗಳು ನಿಡುಗಾಲ ಸವಿಯಲೆಂಬ ನಿಟ್ಟಿನಲ್ಲಿ ಇದನ್ನು ಪ್ರಕಟಗೊಳಿಸಿದ್ದೇವೆ. ಪ್ರಕಟನಾ ಕಾರ್ಯದಲ್ಲಿ ನಮ್ಮ ಜೊತೆ ಶ್ರಮಿಸಿದ ಮಿತ್ರ ಜೋಶಿ ಅವರಿಗೂ, ಸುಂದರ ರೇಖಾಚಿತ್ರಗಳನ್ನು ಬರೆದುಕೊಟ್ಟ ತರುಣ ಕಲಾವಿದ 'ಗಂಜೀಫಾ' ಪ್ರಸಿದ್ಧಿಯ ಶ್ರೀ ರಘುಪತಿ ಭಟ್ಟರಿಗೂ ಮತ್ತು ಕಲಾವಿದ ಜಿ. ಆರ್. ಉಪಾಧ್ಯಯರಿಗೂ ಕೇಂದ್ರವು ಚಿರಋಣಿಯಾಗಿದೆ.

ಮುದ್ರಣಾಕಾರ್ಯದಲ್ಲಿ ನೆರವು ನೀಡಿದ ಮಣಿಪಾಲ ಪವರ್ ಪ್ರೆಸ್, ಕರಡು ತಿದ್ದಿದ ಹೇರಂಜೆ ಕೃಷ್ಣ ಭಟ್ಟ, ಕೆ. ಎಂ. ರಾಘವ ನಂಬಿಯಾರ್, ಮಹನೀಯರಿಗೂ ನನ್ನ ಕೃತಜ್ಞತೆ.

ಕು. ಶಿ. ಹರಿದಾಸ ಭಟ್ಟ

ಯುಗಾದಿ : 14-4-1994
ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ
ಎಂ.ಜಿ.ಎಂ. ಕಾಲೇಜು ಆವರಣ
ಉಡುಪಿ- 576 102 (ದ.ಕ.)

ಲೇಖಕನ ಅರಿಕೆ

ಯಕ್ಷಗಾನ ಕಲೆಗೆ ಸಂಬಂಧಿಸಿದ ವಿವಿಧ ಪಾರಿಭಾಷಿಕ ಪದಗಳನ್ನು ವಿವರಿಸುವ ಒಂದು ಗ್ರಂಥವನ್ನು ರಚಿಸಬೇಕು ಎಂದು ಬಹುಕಾಲದಿಂದ ಯೋಚಿಸುತ್ತಿದ್ದೆ. ಈ ಕೆಲಸಕ್ಕೆ ಚಾಲನೆ– ಪ್ರಚೋದನೆ ದೊರತುದು, ಉಡುಪಿಯ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ (ಆರ್.ಆರ್.ಸಿ.)ವು ಘೋಷಿಸಿದ ವಿದ್ವತ್ ಪ್ರೋತ್ಸಾಹದ ಯೋಜನೆಯಿಂದ. ಆ ಯೋಜನೆಯಡಿ, ನನ್ನ ಈ ಗ್ರಂಥದ ಪ್ರಸ್ತಾವವನ್ನು ಅಂಗೀಕರಿಸಿ, ಅದಕ್ಕೆ ಸಂಬಂಧಿಸಿದ ಕ್ಷೇತ್ರಕಾರ್ಯಕ್ಕೆ ನೆರವನ್ನು ಕೊಟ್ಟು, ಇದು ಸಾಕಾರಗೊಳ್ಳುವಂತೆ ಸಕಲ ಪ್ರೋತ್ಸಾಹವನ್ನಿತ್ತು, ಇದೀಗ ಅದರ ಪ್ರಕಟನೆಯ ಭಾರವನ್ನೂ ಹೊತ್ತಿರುವ, ನಮ್ಮ ಸಾಂಸ್ಕೃತಿಕ ರಂಗದ ಹಿರಿಯ ನೇತಾರ ಪ್ರೊ। ಕು. ಶಿ. ಹರಿದಾಸ ಭಟ್ಟರಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ.

ಈ ಗ್ರಂಥಕ್ಕೆ ಸಂಬಂಧಿಸಿ ನಾನು ಕ್ಷೇತ್ರಕಾರ್ಯವನ್ನು ಕೈಗೊಂಡಾಗ, ಕಲಾವಿದರು, ವಿದ್ವಾಂಸರು, ತಜ್ಞರು, ಅಭಿಮಾನಿಗಳು, ಮಿತ್ರರು, ಪ್ರೀತಿಯಿಂದ ಹಲವು ರೀತಿಯ ನೆರವು ನೀಡಿದ್ದಾರೆ. ಮಾಹಿತಿ, ಆತಿಥ್ಯ, ಪ್ರೋತ್ಸಾಹಗಳನ್ನು ತುಂಬು ಮನಸ್ಸಿನಿಂದ ಇತ್ತಿದ್ದಾರೆ. ಅವರೆಲ್ಲರ ಆತ್ಮೀಯತೆಗೆ ಏನು ಹೇಳಲಿ?

ಬಾಲ್ಯದಲ್ಲಿ ನನ್ನಲ್ಲಿ ಯಕ್ಷಗಾನದ ಆಸಕ್ತಿ ಮೂಡಲು ಕಾರಣವಾದ ನನ್ನ ಹುಟ್ಟೂರಿನ ಯಕ್ಷಗಾನ ಸಂಸ್ಥೆ, ಶ್ರೀ ಪರಶುರಾಮ ಕೃಪಾಪೋಷಿತ ಯಕ್ಷಗಾನ ಸಂಘ, ಮಾಳ (ಕಾರ್ಕಳ ತಾಲೂಕು) – ಇದನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ನನ್ನ ಕಲಾಸಕ್ತಿ, ಅಭ್ಯಾಸಗಳಿಗೆ ಪ್ರತ್ಯಕ್ಷ, ಪರೋಕ್ಷ ಪೋಷಣೆ ನೀಡಿದ ಬಂಧುಮಿತ್ರರು, ನಾಡಿನ ಯಕ್ಷಗಾನ ಸಂಸ್ಥೆಗಳು, ಹವ್ಯಾಸಿ ಸಂಘಗಳು, ವೇದಿಕೆಗಳು, ವ್ಯವಸಾಯಿ ಮೇಳಗಳು ಮತ್ತು ಈ ಕಲೆಯಲ್ಲಿ ದುಡಿದ, ದುಡಿಯುತ್ತಿರುವ ಸಾವಿರಾರು ಕಲಾವಿದರು– ಇವರನ್ನೆಲ್ಲ ನೆನೆಯುತ್ತೇನೆ.

ಸಾಕಷ್ಟು ಎಚ್ಚರಿಕೆಯಿಂದ ಈ ಗ್ರಂಥವನ್ನು ಸಿದ್ಧಪಡಿಸಲಾಗಿದ್ದರೂ, ವಿಷಯ ನಿರೂಪಣೆ, ವಿವರಗಳಲ್ಲಿ, ದೋಷಗಳು ಅಸಮಗ್ರತೆಗಳಿರಬಹುದು. ಪ್ರಾಜ್ಞರು ಅವುಗಳನ್ನು ಔದಾರ್ಯದಿಂದ ಸೂಚಿಸಬೇಕಾಗಿ ಬಿನ್ನಹ.

ಈ ಗ್ರಂಥಕ್ಕೆ ಬೇಕಾದ ರೇಖಾಚಿತ್ರಗಳನ್ನು ರಚಿಸಿದ ಹಿರಿಯ ಕಲಾವಿದರಾದ ಜಿ. ಆರ್. ಉಪಾಧ್ಯಾಯ ಮಂಗಳೂರು, ಮತ್ತು ಗಂಜೀಫಾ ರಘುಪತಿ ಭಟ್ಟ ಇವರಿಗೆ ವಿಶೇಷ ಕೃತಜ್ಞತೆಗಳು. ಕೋಶದ ಪರಿಷ್ಕರಣ, ಮುದ್ರಣ ನಿರ್ವಹಣೆಗಳಲ್ಲಿ ವಿಶೇಷ ನೆರವು ನೀಡಿದ ಪ್ರೊ। ಎಚ್. ಕೃಷ್ಣ ಭಟ್ಟ, ಪ್ರೊ। ಪಾದೆಕಲ್ಲು ವಿಷ್ಣು ಭಟ್ಟ, ಕೆ. ಎಂ. ರಾಘವ ನಂಬಿಯಾರ್, ಡಾ। ಪದ್ಮನಾಭ ಕೇಕುಣ್ಣಾಯ ಇವರಿಗೆ ನಾನು ಋಣಿಯಾಗಿದ್ದೇನೆ.

ಮಂಗಳೂರು — ಎಂ. ಪ್ರಭಾಕರ ಜೋಶಿ

26, ಜನವರಿ 1994

ಸೂಚನೆ – ಸಂಕೇತ

- ಇದು ಪ್ರಧಾನವಾಗಿ ಕರಾವಳಿಯ ಯಕ್ಷಗಾನ ರಂಗಭೂಮಿಯ ಬಗೆಗಿನ ಪರಿಭಾಷಾ ವಿವರಕೋಶ. ಗಟ್ಟದಕೋರೆ, ಮೂಡಲಪಾಯ ಪ್ರಭೇದಗಳನ್ನು ಅಂಶತಃ ಗಮನಿಸಿದೆ.

- ಬಳಕೆಯಿರುವ ಶಬ್ದಗಳನ್ನೂ, ಹಿಂದೆ ಬಳಕೆ ಇದ್ದ ಶಬ್ದಗಳನ್ನೂ ಗಮನಿಸಲಾಗಿದ್ದು, 'ಯಕ್ಷಗಾನ ಪರಂಪರೆ' ಎಂಬುದರಲ್ಲಿ, ಬದಲಾಗುತ್ತಿರುವ ಪರಿಕಲ್ಪನೆಯನ್ನು ಅಂಗೀಕರಿಸಲಾಗಿದೆ.


- ವೃಕ್ಷಾದಿಗಳಿಗೂ, ರಾಸಾಯನಿಕ ದ್ರವ್ಯಗಳಿಗೂ ಅಂತಾರಾಷ್ಟ್ರೀಯ ದ್ವಿನಾಮ (binominal)ಗಳನ್ನು ಕಾಣಿಸಿದೆ.


ಸಂಕೇತ ಸೂಚಿ

(ಬ.) = ಬಡಗುತಿಟ್ಟು.
(ತೆ.) = ತೆಂಕುತಿಟ್ಟು.
(ಉ.) = ಉತ್ತರ ಕನ್ನಡತಿಟ್ಟು – ಬಡಗ ಬಡಗು.
(ಮೂ.) = ಮೂಡಲಪಾಯ ಸಂಪ್ರದಾಯ.
(ಗ.) = ಗಟ್ಟದಕೋರೆ ಸಂಪ್ರದಾಯ.

ಸಂಕೇತಾಕ್ಷರ ಇಲ್ಲದೆಡೆ, ಸಾಂದರ್ಭಿಕವಾಗಿ ಸಮಗ್ರ ಯಕ್ಷಗಾನ ರಂಗ, ಅಥವಾ ಕರಾವಳಿಯ ಎಲ್ಲ ತಿಟ್ಟುಗಳಿಗೆ ಅನ್ವಯವೆಂದು ಅರ್ಥ.

= ಪರ್ಯಾಯ ಪದ, ಯಾ, ನೇರ ಸಂಬಂಧವುಳ್ಳ ಪದ.
– ದಪ್ಪ ಅಕ್ಷರದ ಪದಗಳು ಕೋಶದಲ್ಲಿ ಬೇರೆಡೆ ಇವೆ.
– ನೋಡಿ, ನೋಡಿ–, (ನೋಡಿ). – ಇವು ಸಾಂದರ್ಭಿಕ ಸಂಬಂಧ ಸೂಚಕಗಳು.


ಯಕ್ಷಗಾನದ
ಮೂರು ತಿಟ್ಟುಗಳು
ಗೋವಾ
ಉತ್ತರ ಕನ್ನಡ
ಚಿಕ್ಕಮಗಳೂರು
ದಕ್ಷಿಣ ಕನ್ನಡ
ಹಾಸನ
ಕೊಡಗು
ಕೇರಳ
ಅರಬ್ಬೀ ಸಮುದ್ರ
ಬಡಗು ತಿಟ್ಟು
ತೆಂಕು ತಿಟ್ಟು
ಉತ್ತರ ಕನ್ನಡದ ತಿಟ್ಟು
ಉ
ಪ
ಪೂ
ದ


ಕರ್ನಾಟಕ
ಬಯಲಾಟಗಳು
ಬೀದರ್
ಗುಲ್ಬರ್ಗ
ಮಹಾರಾಷ್ಟ್ರ
ಬಿಜಾಪುರ
ರಾಯಚೂರು
ಬೆಳಗಾವಿ
ಧಾರವಾಡ
ಬಳ್ಳಾರಿ
ಗೋವಾ
ಉತ್ತರ ಕನ್ನಡ
ಚಿತ್ರದುರ್ಗ
ಶಿವಮೊಗ್ಗ
ಚಿಕ್ಕಮಗಳೂರು
ತುಮಕೂರು
ಕೋಲಾರ
ಹಾಸನ
ದಕ್ಷಿಣ ಕನ್ನಡ
ಬೆಂಗಳೂರು ಗ್ರಾಮಾಂತರ
ಬೆಂಗಳೂರು ನಗರ
ಮಂಡ್ಯ
ಕೊಡಗು
ಮೈಸೂರು
ಕೇರಳ
ತಮಿಳುನಾಡು
ಆಂಧ್ರ ಪ್ರದೇಶ
ಅರಬ್ಬೀ ಸಮುದ್ರ
ಬಡಗು ತಿಟ್ಟು
ತೆಂಕು ತಿಟ್ಟು
ಉತ್ತರ ಕನ್ನಡ ತಿಟ್ಟು
ಗಾಟ್ಟದ ಗೊಂಬೆ
ಮೂಡಲ ಪಾಯ
ದೊಡ್ಡಾಟ
ಉ
ಪ
ಪೂ
ದ

ಅಂಗದನ ಸುಳಿ: ಅಂಗದನ ಪಾತ್ರದ ಮುಖವರ್ಣಿಕೆಯಲ್ಲಿ ಬರುವ ಸುಳಿಯಂತಹ ವಿನ್ಯಾಸ. ತುಟಿಗಳ ಸುತ್ತ ಮಂಗನ ಮುಖದ ರೂಪ ಬರೆದು, ಅದರ ಎರಡು ತುದಿಗಳಿಗೆ ಕೊಕ್ಕೆಯಾಕಾರದ ಸುಳಿ ಬರೆಯುವರು. ಇವು ಸುಮಾರಾಗಿ ಹನುಮಂತನ ಮುಖದ ಸುಳಿಗಳಂತೆ ಇರುವುವು.

ಅಂಗಿ: ವೇಷಗಳು ಧರಿಸುವ ಅಂಗಿ ಅಥವಾ ದೊಗಲೆಗಳು. ಇವು ಪಾತ್ರಾನುಸಾರ, ವಿವಿಧ ಬಣ್ಣ ಮತ್ತು ಗಾತ್ರಗಳಲ್ಲಿರುತ್ತವೆ. ರಾಜವೇಷ, ಬಣ್ಣದ ವೇಷ, ದೊಡ್ಡ ಪಗಡಿ ವೇಷಗಳಿಗೆ ಇಡಿತೋಳಿನ ಅಂಗಿ. ಹಿಂದೆ, ತೆಂಕುತಿಟ್ಟಿನಲ್ಲಿ ಸ್ತ್ರೀಪಾತ್ರಗಳಿಗೂ ಇಡಿತೋಳಿನ ಅಂಗಿಯಿದ್ದಿತು. ಪುಂಡು (ತರುಣ) ವೇಷಗಳಿಗೆ ಅರ್ಧತೋಳಿನ ಅಂಗಿ. ಬಡಗುತಿಟ್ಟಿನಲ್ಲಿ ಕೇದಗೆ ಮುಂದಲೆ (ಚಿಕ್ಕ ಪಗಡಿ) ವೇಷಗಳಿಗೆ ಅರ್ಧತೋಳಿನ ಅಂಗಿ. ಉತ್ತರ ಕನ್ನಡದಲ್ಲಿ ಎಲ್ಲ ಬಗೆಯ ಪುರುಷ ವೇಷಗಳಿಗೆ ಇಡಿತೋಳಿನ ಅಂಗಿಯಿದ್ದುದು; ಅರೆತೋಳಿನದಿರಲಿಲ್ಲ. ಮೂಡಲಪಾಯ, ಗಟ್ಟದಕೋರೆ ಸಂಪ್ರದಾಯಗಳಲ್ಲೂ ಹಾಗೆಯೇ. ಈಗ ಎಲ್ಲ ಕಡೆಗಳಲ್ಲೂ ಅರ್ವಾಚೀನ ನಾಟಕ ವೇಷಗಳ ಪ್ರಭಾವದಿಂದ ನಿಲುವಂಗಿಗಳು, ತುಂಡಂಗಿಗಳೂ, ಕಪಿಪಾತ್ರಗಳಿಗೆ ರೋಮದ ಅಂಗಿಗಳೂ ಬಳಕೆಗೆ ಬಂದಿವೆ. ನೋಡಿ: **ದಗಲೆ.**

ಅಂಟು: ವಿವಿಧ ರೀತಿಯ ಅಂಟಿಸುವಿಕೆಗಳಿಗೆ ಬಳಸುವ ಅಂಟುಗಳು, ಗಮ್. ವೇಷ ಸಾಮಗ್ರಿಗಳಿಗೆ ಬೇಗಡೆ, ಕನ್ನಡಿ ಹರಳುಗಳನ್ನು ಅಂಟಿಸಲು ಹಲಸಿನ ಮೇಣ ಮತ್ತು ಜೇನು ಮೇಣಗಳನ್ನು ಬೆರೆಸಿ ಕುದಿಸಿದ ಅಂಟು, ಅಥವಾ ಗೇರುಮರದ ಸೊನೆ ಅಂಟು. ಚೆಂಡೆ, ಮದ್ದಲೆಗಳ ಕವಳ (ಚರ್ಮ)ಗಳನ್ನು ಅಂಟಿಸಲು ಹುಣಸೆಬೀಜ ಅರೆದು ಕುದಿಸಿ ಮಾಡಿದ ಅಂಟು. ಮದ್ದಲೆಗೆ ಕರ್ನ ಕೂರಿಸಲು ಗುಲಗುಂಜಿ ಪುಡಿಯ ಅಂಟು.

ಇತರ ಸಾಮಾನ್ಯ ಸಂದರ್ಭಗಳಲ್ಲಿ ಗೋದಿ ಹಿಟ್ಟಿನ ಅಂಟನ್ನು ಬಳಸುವರು. ಈಗ, ಮೀಸೆ ಅಂಟಿಸಲು ರಾಳ ಮತ್ತು ಪೆಟ್ರೊಮ್ಯಾಕ್ಸ್ ಸ್ಪಿರಿಟನ್ನು ಉರಿಸಿ ಮಾಡಿದ ಸ್ಪಿರಿಟ್‌ಗಮ್ ಬಳಕೆಯಿದೆ. ಈಗ ಎಲ್ಲ ವಿಷಯಗಳಿಗೆ, ಮಾರುಕಟ್ಟೆಯ ಆಧುನಿಕ ರೆಸಿನ್‌ಗಳು ಬಳಕೆಗೆ ಬರುತ್ತಿವೆ.

ಅಂಡು (ತೆ.) : ನಿತಂಬ ಎಂಬುದು ಇದರ ಶಬ್ದಾರ್ಥ. ಯಕ್ಷಗಾನದ ವೇಷಕ್ಕೆ ಸೊಂಟದಿಂದ ಮೊಣಕಾಲಿನವರೆಗೆ, ಗಾತ್ರ ನೀಡಲು ಬಳಸುವ ವಸ್ತ್ರಗಳ ಮೊತ್ತಕ್ಕೂ, ಅದರ ಕಟ್ಟುವಿಕೆಯ ವ್ಯವಸ್ಥೆಗೂ ಅಂಡು ಎನ್ನುವರು. ಹಗ್ಗವೊಂದರ ಮೇಲೆ, ಬಟ್ಟೆಗಳನ್ನು ಹರಡಿ ಒಳಗೆ ಗಿಡ್ಡ, ಹೊರಗೆ ಉದ್ದ ಭಾಗವಿಟ್ಟು ಸೊಂಟದ ಸುತ್ತ ಬಿಗಿಯುವರು. ಇದಕ್ಕೆ ಹಳೆಯ, ಮೆತ್ತನೆಯ ವಸ್ತ್ರಗಳನ್ನು ಉಪಯೋಗಿಸುವುದು ಕ್ರಮ. ಹಗ್ಗವನ್ನು ಬಟ್ಟೆಗಳ ಮೇಲಿನಿಂದ ಎರಡು ಸುತ್ತು ಬಿಗಿದು, ಹೊಕ್ಕುಳ ಬಳಿ ಗಂಟು ಹಾಕುವರು. ಅಂಡಿನ ವಸ್ತ್ರಗಳು ಹೊಕ್ಕುಳ ಕೆಳಗಿನ ಭಾಗದಲ್ಲಿ ಪೊಳ್ಳು ಬಿಡಬೇಕು. ಇಲ್ಲಿ ಕಾಂಚೀಧಾಮವನ್ನು ಕಟ್ಟುವುದರಿಂದ, ಬಿಡುವಾಗಿರಬೇಕಾಗುತ್ತದೆ.

ಅಂಡಿನ ವಸ್ತ್ರಗಳ ಮೊತ್ತ, ಗಾತ್ರಗಳು ವೇಷಧಾರಿಯ ದೇಹಗಾತ್ರ, ಅವನು ಧರಿಸುವ ಪಾತ್ರವನ್ನೂ ಹೊಂದಿಕೊಂಡಿರುತ್ತದೆ. ಬಣ್ಣದ ವೇಷಕ್ಕೆ ಅತಿದೊಡ್ಡ, ಕಿರೀಟ ವೇಷಗಳಿಗೆ ಅದಕ್ಕಿಂತ ಚಿಕ್ಕ, ಪುಂಡು ವೇಷಗಳಿಗೆ ಇನ್ನೂ ಚಿಕ್ಕ ಅಂಡನ್ನು ಕಟ್ಟುವರು. ಸ್ತ್ರೀ ವೇಷ, ಋಷಿ ವೇಷಗಳ ಅಂಡು ಮತ್ತಷ್ಟು ಚಿಕ್ಕದು.

ತೆಂಕುತಿಟ್ಟಿನಲ್ಲಿ ದೊಡ್ಡ ಅಂಡಿನ ಬಳಕೆ. ಬಡಗು, ಉ.ಕ. ತಿಟ್ಟುಗಳಲ್ಲಿ ಸಣ್ಣದರ ಬಳಕೆ. ತೆಂಕಣ ವೇಷಗಳು ಆಕಾರದಲ್ಲಿ ದೊಡ್ಡವು. ಅವುಗಳಿಗೆ ಸೊಂಟದ ಕೆಳಗೆ ಬಾಲಮುಂಡು ಇರುತ್ತದೆ, ಹೀಗಾಗಿ ಅಂಡು ಆವಶ್ಯಕ. ಅಂಡಿನ ಮೇಲೆ ಬಿಳಿ ದಟ್ಟಿ ಬಿಗಿದು ಕಟ್ಟುತ್ತಾರೆ, ಅದರ ಮೇಲೆ ಹಿಂಬದಿಯ ಡಾಬು ನಿಲ್ಲುತ್ತದೆ.

ಅಂಡಿನ ಹಗ್ಗ (ತೆ.) : ಮೇಲೆ ಹೇಳಿದಂತೆ, ಅಂಡು ಕಟ್ಟುವಿಕೆಗೆ ಬಳಸುವ ನಾರು, ತೆಂಗಿನ ಹುರಿ ಅಥವಾ ಬಟ್ಟೆಯ ಹಗ್ಗ.

ಅಂಡಿನ ವಸ್ತ್ರ (ತೆ.) : ಅಂಡುಕಟ್ಟಲು ಬಳಸುವ ಬಟ್ಟೆಗಳು. ನೋಡಿ: **ಅಂಡು.**

ಅಂಡುಕುಟ್ಟಿ (ತೆ.) : ಪೂರ್ವರಂಗದ ಕಟ್ಟು ಹಾಸ್ಯಗಳಲ್ಲಿ ಒಂದು ಬಗೆ. ಮಲೆಯಾಳಿ ಬೆಸ್ತರ ಹಾಸ್ಯ. ಬೆಸ್ತ ದಂಪತಿಗಳು ''ಕುಟ್ಟಿ ಕುಟ್ಟಿ ಪೇಶಲೆ ಅಂಡುಕುಟ್ಟಿ ಪೇಶಲೆ'' ಎಂಬ ಪದ್ಯವನ್ನು ಹಾಡಿಕೊಂಡು ಬರುವರು. ಅನಂತರ ಅವರೊಳಗೆ ಜಗಳವಾಗಿ, ಗಂಡನು ಹೆಂಡತಿಗೆ ಹೊಡೆಯುವಾಗ, ಮಕ್ಕಳು (ಅಂಡುಕುಟ್ಟಿಗಳು) 'ಅಡಿಕ್ಕೊಲ್ಲಾ' (ಹೊಡೆಯಬೇಡ) ಎಂದು ತಡೆಯುವರು. 'ಅಡಿಕ್ಕೊಲ್ಲ' ಹಾಸ್ಯವೆಂದರೂ ಇದೇ. ನೋಡಿ: **ಅಡಿಕ್ಕೊಲ್ಲ.**

ಅಂತರ ತೆರೆ (ತೆ.): ಕೆಲವು ವೇಷಗಳ ಪ್ರವೇಶ ದೃಶ್ಯಕ್ಕೆ, ಚಪ್ಪರದಂತೆ ಹಿಡಿಯುವ, ಜಾಲರಿ ಇರುವ ವಸ್ತ್ರ.

ಇದನ್ನು ಕೋಲುಗಳಿಗೆ ಆಧರಿಸಿ ಮೇಲೆ ಚಪ್ಪರದಂತೆ ಹಿಡಿಯುವರು. ರಾಮ, ಶಿವ ಮೊದಲಾದ ವೇಷಗಳಿಗೆ ಬಳಕೆ. ಇದು ಐಚ್ಛಿಕ, ಕಡ್ಡಾಯವಲ್ಲ.

ಅಂತರ ತೆರೆ ಪೊರಪ್ಪಾಡು (ತೆ.) : ಅಂತರ ತೆರೆಯೊಂದಿಗೆ ಮಾಡುವ ಪ್ರವೇಶ ನೃತ್ಯ, ದೃಶ್ಯ.

ಅಂಬಟೆ ಸೂಡಿ : ಸ್ತ್ರೀ ವೇಷದ ಸರಳ ಕೇಶಾಲಂಕಾರ. ಜಡೆಹೆಣೆಯದೆ ಬಿಡಿಕೂದಲನ್ನೆ ಮಡಚಿ ಅಮಟೆಕಾಯಿ ಆಕಾರದಲ್ಲಿ ಗಂಟುಕಟ್ಟುವ ಕ್ರಮ; ಜೋಲುಮುಡಿ. ಸಖಿ, ಸೇವಕಿ ಮೊದಲಾದ ಸಾಮಾನ್ಯ ಪಾತ್ರಗಳಿಗೆ ಬಳಕೆ.

ಅಚ್ಚುಕಟ್ಟು (ತೆ.) : ಬಣ್ಣದ ವೇಷಗಳ ಮುಖವರ್ಣಿಕೆಯ ಮೊದಲ ಹಂತ. ಮುಖದಲ್ಲಿ ಇಡಬೇಕಾದ 'ಚುಟ್ಟಿ'ಗಳ ಸಾಲುಗಳ ವಿನ್ಯಾಸದ ಮೂಲ ರೇಖೆಗಳನ್ನು ಕಪ್ಪುಬಣ್ಣದಲ್ಲಿ ಬರೆಯುವುದು. ನೋಡಿ : **ಚುಟ್ಟಿ, ಜೀವರೇಖೆ.**

ಅಟತಾಳ = ನೋಡಿ : **ಅಷ್ಟತಾಳ.** 14 ಮಾತ್ರಾ ಕಾಲದ ತಾಳ.

ಅಟ್ಟ : 1. ಆಟ ಆಡುವ ರಂಗಸ್ಥಳ; ವೇದಿಕೆ. 2. ರಂಗಸ್ಥಳ ಮತ್ತು ಸಭೆಯ ಚಪ್ಪರ. 3. ರಂಗಸ್ಥಳದ ಮೇಲೆ ಬರುವಂತೆ ಕಟ್ಟುವ ಇನ್ನೊಂದು ರಂಗಸ್ಥಳ; ಅಟ್ಟಳಿಗೆ.

ಅಟ್ಟಣಿಗೆ = ನೋಡಿ : **ಅಟ್ಟಳಿಗೆ.**

ಅಟ್ಟಳಿಗೆ/ಅಟ್ಟಣಿಗೆ : ಆಟದ ರಂಗಸ್ಥಳದ ಮೇಲೆ ಕಟ್ಟುವ ಅಟ್ಟ. ಬಿದಿರು, ಕಟ್ಟಿಗೆ, ಅಡಿಕೆಮರ ಮೊದಲಾದುವನ್ನು ಉಪಯೋಗಿಸಿ ಕಟ್ಟುವ ಮೇಲಿನ ರಂಗಸ್ಥಳ. ಇದು ಕೆಳಗಿನ ರಂಗಸ್ಥಳದ ಅರ್ಧದಷ್ಟಕ್ಕೆ ಬರುವಂತೆ ಇರುತ್ತದೆ. ಹಿಂಬದಿಯಲ್ಲಿ ಅದಕ್ಕೆ ಸಂಕದಂತಹ ಏರುಹಲಗೆಯೂ ಮುಂದಿನಿಂದ ಏಣಿಯೂ ಇರುತ್ತವೆ. ತ್ರಿಶಂಕು ಚರಿತ್ರೆಯಲ್ಲಿ ಇಂದ್ರನು, ತ್ರಿಶಂಕುವು ಸ್ವರ್ಗಕ್ಕೆ ಹೋಗುವ ದೃಶ್ಯದಲ್ಲಿ, ಇದನ್ನು ಬಳಸಿ ತ್ರಿಶಂಕುವನ್ನು ಕೆಳಕ್ಕೆ ತಳ್ಳುವ ದೃಶ್ಯ ತೋರಿಸುತ್ತಾರೆ. ವಿಶ್ವಾಮಿತ್ರನು ಮುಖ್ಯ ರಂಗಸ್ಥಳದಿಂದ ತ್ರಿಶಂಕುವನ್ನು ಏಣಿಯ ಮೂಲಕ ಮೇಲೆ ಕಳಿಸುತ್ತಾನೆ. ಇಂದ್ರನು ಮೇಲೆ ಇರುತ್ತಾನೆ. ಸಮುದ್ರ ಮಥನ ಪ್ರಸಂಗದ ಇಂದ್ರ– ದೂರ್ವಾಸ ಸಂವಾದಕ್ಕೂ ಇದನ್ನು ಬಳಸುವರು. ಐಚ್ಛಿಕ. ಈಗ ಬಳಕೆಯಲ್ಲಿಲ್ಲ.

ಅಟ್ಟಳಿಗೆ ಆಟ : 1. ಮೇಲೆ ಹೇಳಿದಂತೆ ಅಟ್ಟಳಿಗೆಯನ್ನು ಅಳವಡಿಸಿ ಆಡುವ ಆಟ. 2. ನೋಡಿ : **ಅರೆಪ್ಪಾವಿನಾಟ; ಚಪ್ಪರ ಮಂಚ.**

ಅಟ್ಟಹಾಸ/ಅಟ್ಟಾಸು : ಬಣ್ಣದ ವೇಷಗಳು ಹೊಡೆಯುವ ಬೊಬ್ಬೆ; ಆರ್ಭಟೆ. ವೇಷಪ್ರವೇಶಕ್ಕೆ ಮೊದಲು, ಪ್ರವೇಶ ನೃತ್ಯದೊಂದಿಗೆ, ಮತ್ತು ರಂಗದಲ್ಲಿ ಅಟ್ಟಹಾಸದ ಪ್ರಯೋಗವಿರುತ್ತದೆ. ಬಣ್ಣದ ವೇಷವು ಚೌಕಿಯಲ್ಲಿಯ ತನ್ನ ಸ್ಥಳದಲ್ಲಿ ಒಂದು, ಚೌಕಿಯ ಮಧ್ಯದಲ್ಲಿ ಒಂದು, (ರಂಗಕ್ಕೆ ಬೆನ್ನು ಹಾಕಿ) ರಂಗದ ಬದಿಗೆ ಒಂದು, ಹೀಗೆ ಮೂರು ಅಟ್ಟಹಾಸ ಕೊಟ್ಟು, ಅನಂತರ ಪ್ರವೇಶ ನೃತ್ಯ ಆರಂಭಿಸುತ್ತದೆ. ರಂಗಕ್ಕೆ ಬಂದು ಎರಡು ಆರ್ಭಟೆ. ಅನಂತರ ದಂತಧಾವನ, ಸ್ನಾನ, ಭಸ್ಮಧಾರಣ, ಶಿವಪೂಜೆ ಮುಂತಾಗಿ ಒಂದೊಂದು ಅಭಿನಯಗಳ ಕೊನೆಯಲ್ಲಿ ಒಂದೊಂದು ಆರ್ಭಟೆ. ಬಡಗುತಿಟ್ಟಿನಲ್ಲಿ, ಹಲ್ಲುಜ್ಜುವಿಕೆ ಮುಂತಾದೆಡೆ ಒಂದೊಂದು ಕೈಕರಣಕ್ಕೂ ಒಂದೊಂದು ಆರ್ಭಟೆ ಕೊಡುತ್ತಾರೆ– ಪೀಠದಲ್ಲಿ ಕುಳಿತ ಬಳಿಕ ಒಂದು, ಭಾಗವತನು ಮಾತಾಡಿಸಿದೊಡನೆ (ಭಳಿರೇ...) ಒಂದು ಆರ್ಭಟೆ. ಅನಂತರ ಪದ್ಯದ ಅರ್ಥವನ್ನು ಆರಂಭಿಸುವುದಕ್ಕೊಂದು. ಹೀಗೆ, ಒಂದು ಪೂರ್ಣಪ್ರಮಾಣದ ಪ್ರವೇಶ ಇರುವ ರಾಜ ಬಣ್ಣವಾದರೆ, ಅದಕ್ಕೆ ಹದಿನೆಂಟು ಅಟ್ಟಹಾಸ ಆಗಬೇಕು. ಕಾಟು ಬಣ್ಣ (ಕ್ಷುದ್ರ ರಾಕ್ಷಸ) ಪಾತ್ರಕ್ಕಾದರೆ ಕಡಮೆ. ಬಣ್ಣದ ವೇಷಗಳು ಮಾತಾಡುವಾಗಲೂ ಮಧ್ಯೆ ಆರ್ಭಟೆಕೊಡಬೇಕು.

ಗಂಡು ಬಣ್ಣದ ವೇಷಕ್ಕೆ ಆರ್ಭಟೆ 'ಓ'ಕಾರವಾಗಿ, ಹೆಣ್ಣು ಬಣ್ಣವಾದರೆ 'ಆ'ಕಾರವಾಗಿರಬೇಕು. ವಾಲಿಸುಗ್ರೀವಾದಿ ಕಪಿ ಪಾತ್ರಗಳಿಗೆ ''ಬುಯ್ಯೋ... ಹ ಹ ಹ'' ಎಂದಾಗಬೇಕು. ಹಿಂದೆ, ತಾಳಮದ್ದಲೆಯಲ್ಲೂ 'ಬಣ್ಣದ ಅರ್ಥ' (ರಾಕ್ಷಸಾದಿಪಾತ್ರ)ಗಳು ಆರ್ಭಟೆ ಕೊಡುವ ಕ್ರಮವಿತ್ತು. ಬಣ್ಣದ ವೇಷ, ಸಾಯುವಾಗಲೂ ಆರ್ಭಟೆ ಕೊಡಬೇಕು. ಸಾಯುವಾಗ ಕೊಡುವುದಕ್ಕೆ ಮಾತ್ರ ಆರ್ಭಟೆ, ಉಳಿದುದು ಅಟ್ಟಹಾಸವೆಂದು ಒಂದು ಅಭಿಪ್ರಾಯ. ಎಂತಿದ್ದರೂ ಎರಡೂ ಬೊಬ್ಬೆಗಳೇ. ಸಾಯುವಾಗಿನದರ ಧ್ವನಿ ಬೇರೆ ರೀತಿ ಇರಬೇಕೆಂದು ಸಂಪ್ರದಾಯ. ಹಾಗೆಯೇ ರಾಜ ಬಣ್ಣದ ಅಟ್ಟಹಾಸವು ಗಂಭೀರವಾಗಿ, ಕಾಟು ಬಣ್ಣದ್ದು ಸ್ವಲ್ಪ ಅಪರಿಷ್ಕೃತವಾಗಿ, ಹೆಣ್ಣು ಬಣ್ಣದ್ದು ಕೀರಲಾಗಿ, ಕಿರಾತನದಾದರೆ ''ಲಲಲಲ ಹೇ ಹಾ'' ಎಂದು ವಿಚಿತ್ರವಾಗಿ ಇರುತ್ತದೆ. ಅಟ್ಟಹಾಸ ಹೊಡೆಯಲು, ಕುತ್ತಿಗೆವರೆಗೆ ಮುಳುಗುವಂತೆ ನೀರಿನ ಹೊಂಡದಲ್ಲಿ ನಿಂತು, ಅಭ್ಯಾಸ ಮಾಡುವ ಕ್ರಮವಿತ್ತೆಂಬ ಹೇಳಿಕೆ ಇದೆ.

ಅಟ್ಟಹಾಸ, ಆರ್ಭಟೆಗಳ ಕ್ರಮ, ಮತ್ತು ಪ್ರಯೋಗದಲ್ಲಿ, ತಿಟ್ಟುಗಳಿಗನುಸರಿಸಿ ಸ್ವಲ್ಪ

ವ್ಯತ್ಯಾಸಗಳಿವೆ. ತೆಂಕುತಿಟ್ಟಿನಲ್ಲಿ ಅಟ್ಟಹಾಸಗಳ ಬಳಕೆ ವಿಸ್ತೃತವಾಗಿದೆ. ಘಟ್ಟದ ಕೋರೆ ತಿಟ್ಟಿನಲ್ಲಿ ಬಡಗುತಿಟ್ಟಿನಂತೆಯೇ ಇದೆ. ಮೂಡಲಪಾಯದಲ್ಲೂ ಘೋರಪಾತ್ರಗಳಿಗೆ ಆರ್ಭಟೆ ಇದೆ. ಆದರೆ, ಕರಾವಳಿಯ ತಿಟ್ಟುಗಳಂತೆ ಸಂಖ್ಯಾ ನಿಯಮವಿಲ್ಲ. ಅಟ್ಟಹಾಸವನ್ನು ಕೆಲವೆಡೆ 'ಕಾಕು' ಎಂದೂ ಹೇಳುವರು. ನೋಡಿ : **ಆರ್ಭಟೆ; ಕಾಕು; ತೆರೆಪೊರಪ್ಪಾಡು, ಬಣ್ಣದ ವೇಷ, ಬಣ್ಣದ ಪ್ರವೇಶ.**

ಅಟ್ಟಾಸು = ನೋಡಿ : **ಅಟ್ಟಹಾಸ.**

ಅಟ್ಟೆ : ಉರುಟಾದ ದೊಡ್ಡ ಬಳೆಯಾಕಾರ ಎಂದು ಸಾಮಾನ್ಯ ಅರ್ಥ.

1. ಬಣ್ಣದ ವೇಷದ ಬಟ್ಟಲು ಕಿರೀಟದ ಚಕ್ರಾಕಾರವಾದ ಭಾಗ, ತಟ್ಟಿ.

2. ಬಟ್ಟಲು ಕಿರೀಟದ ಸುತ್ತ ಬರುವ ಉಣ್ಣೆಯ ಚಕ್ರ

3. ಮುಂಡಾಸು ಮತ್ತು ಕೇದಗೆ ಮುಂದಲೆಗಳನ್ನು ಕಟ್ಟಲು ಒಳಗಿಂದ ಆಧಾರವಾಗಿ ಕಟ್ಟುವ ಹುಲ್ಲು ಮತ್ತು ಬಟ್ಟೆಯ ಗೋಪುರಾಕೃತಿಗಳು.

4. ಚಂಡೆಯ ಮುಚ್ಚಿಗೆಗಳ ಚರ್ಮಗಳಿಗೆ ಆಧಾರವಾಗಿ ಬಿಗಿಯುವ ಬೆತ್ತದ ಅಥವಾ ಲೋಹದ ಬಳೆ, ರಿಂಗು.

5. ಮದ್ದಲೆ ಮುಚ್ಚಿಗೆಗೆ ಆಧಾರವಾಗಿರುವ ಚರ್ಮದ ಬಳೆಗಳು.

6. ವೀರಭದ್ರ, ಇಂದ್ರಜಿತು ಪಾತ್ರಗಳಿಗೂ, ಇತ್ತೀಚೆಗೆ ಬೇರೆ ಕೆಲವು ಪಾತ್ರಗಳಿಗೂ ಕಿರೀಟದ ಹಿಂಬದಿಗೆ ಕಟ್ಟುವ ಉರುಟು ಅಥವಾ ಗೋಪುರಾಕೃತಿ.

7. ಹೆಣ್ಣು ಬಣ್ಣ (ರಾಕ್ಷಸಿ) ವೇಷದ ಹೊಟ್ಟೆಗೆ, ಆಕಾರ ಬರಲು ಬಿಗಿಯುವ ಬಟ್ಟೆಯ ಸುತ್ತುವಿಕೆ.

ಅಟ್ಟೆಸುಂದುವುದು (-ಸುತ್ತುವುದು) : 1. (ತೆ.) – ಹೆಣ್ಣು ಬಣ್ಣದ ವೇಷಗಳ ಹೊಟ್ಟೆಯ ಆಕಾರವನ್ನು ಹಿಗ್ಗಿಸಲು, ದಗಲೆಯ ಒಳಗಿಂದ ಬಟ್ಟೆ ಸುತ್ತಿಕೊಳ್ಳುವುದು.

2. ಮೇಲೆ ಹೇಳಿದ ಮುಂಡಾಸಿನ, ಮತ್ತು ಕಿರೀಟದ ಅಟ್ಟೆಗಳನ್ನು ಸುತ್ತಿ ತಯಾರಿಸುವುದು, ಮತ್ತು ಕಟ್ಟುವುದು.

ಅಟ್ಟೆ ಸುತ್ತುವುದು = ನೋಡಿ : **ಅಟ್ಟೆಸುಂದುವುದು.**

ಅಡಕೆ/ಅಡಿಕೆ : ಅಡಕೆ, ವೀಳ್ಯದೆಲೆ ಸಹಿತ. ಮೇಳಕ್ಕೆ ಬಿಡಾರ ಕೊಡುವಾಗಲೂ, ಚೌಕಿಯ ಪೂಜೆಗೂ, ಆಟದ ವೀಳ್ಯಸಂಭಾವನೆ ಕೊಡುವಾಗಲೂ ಬೇಕು.

ಅಡಿಕ್ಕೊಲ್ಲ (ತೆ.) : ಒಂದು ಬಗೆಯ ಕಟ್ಟುಹಾಸ್ಯ. ನೋಡಿ : **ಅಂಡುಕುಟ್ಟಿ.**

ಅಡುಗೆ : ಮೇಳದ ತಿರುಗಾಟದಲ್ಲಿಯ ಅಡುಗೆ ವ್ಯವಸ್ಥೆ. ಹಿಂದೆ ಕೆಲವು ಮೇಳಗಳಲ್ಲಿ ಎರಡು ಅಡುಗೆ ವ್ಯವಸ್ಥೆಗಳಿದ್ದುವು. ಬ್ರಾಹ್ಮಣರ ಅಡುಗೆ, ಸಸ್ಯಾಹಾರ. ಇತರರ ಅಡುಗೆ ಮೀನು ಪದಾರ್ಥ ಮೊದಲಾದವು. ಈಗ ಒಂದೇ ಅಡುಗೆಯಿದ್ದು ಸಸ್ಯಾಹಾರದ್ದೆ ಆಗಿದೆ.

ಅಡುಗೆಯವ : ಅಡುಗೆ ಮಾಡುವವನು. ಹಿಂದಿನ ಬಯಲಾಟಗಳ ತಿರುಗಾಟಗಳ ಕ್ರಮದಂತೆ ಈತನು ಮುಂದಿನ ಆಟದ ತಾಣಕ್ಕೆ ಮೇಳದ ಇತರರಿಗಿಂತ ಮೊದಲೇ ತಲುಪಿ ಕೆಲಸ ಆರಂಭಿಸಬೇಕು. ಅಡ್ಡಹೊರೆ (ಅಡ್ಡೋರೆ) ಆಳುಗಳು ಈತನಿಗೆ ಸಹಾಯಕರು. ನೋಡಿ : **ಅಡ್ಡಹೊರೆ.**


ಅಡುಗೆ ಸಾಮಾನು : ಮೇಳದ ಎಲ್ಲರಿಗೆ ಎರಡು ಊಟಗಳಿಗೆ ಬೇಕಾಗುವಷ್ಟು ಧಾನ್ಯಗಳು, ತರಕಾರಿ, ಪಾತ್ರೆಗಳು, ಕಟ್ಟಿಗೆ, ಸಂಬಾರ ಇತ್ಯಾದಿ. ಹರಕೆ ಬಯಲಾಟಗಳಾದರೆ, ಆಟ ಆಡಿಸುವವರು ಇದನ್ನು ಕೊಡಬೇಕು. ಅದಕ್ಕೆ ಆಯಾ ಮೇಳದ ನಿಶ್ಚಿತ ಪಟ್ಟಿ ಇರುತ್ತದೆ. ನೋಡಿ : **ಪಡಿ, ಪಾತ್ರೆ ಸಾಮಾನು.**

ಅಡ್ಡ ಕೇದಗೆ : ಸ್ತ್ರೀ ವೇಷದ ಒಂದು ಆಭರಣ. ಮುಡಿಯ ಮೇಲೆ ಅಡ್ಡಲಾಗಿ ಧರಿಸುವಂತಹದು.

ಅಡ್ಡಚೌಕಿ : ಚೌಕಿ ಅಥವಾ ಬಣ್ಣದ ಮನೆಯಲ್ಲಿ ಹಾಸ್ಯಗಾರನು ಕುಳಿತುಕೊಳ್ಳುವ ಸ್ಥಳ. ಹಾಸ್ಯಗಾರನ ಚೌಕಿ. ಇದು ಚೌಕಿಯ ದೇವರಿಗೆ ಸರಿ ಎದುರಾಗಿ, ಅದರ ಇಕ್ಕಡೆ ಇರುವ ವೇಷಧಾರಿಗಳ ಸಾಲುಗಳ ಕೊನೆಗೆ ಇರುತ್ತದೆ. ಇದು ಸಾಲಿನಲ್ಲಿರುವುದಿಲ್ಲ. ಅಡ್ಡವಾಗಿರುತ್ತದೆ, ಹಾಗಾಗಿ ಅಡ್ಡಚೌಕಿ. ಹಾಸ್ಯಗಾರನು, ಒಂದು ಅರ್ಥದಲ್ಲಿ ವೇಷಧಾರಿಯಲ್ಲ. ಅವನದು ಸರ್ವವ್ಯಾಪಿಯಾದ ಹೆಚ್ಚುವರಿ ಸ್ಥಾನವೆಂಬುದರಿಂದ ಹೀಗಿರಬಹುದು. ಆತನು ಆಗಾಗ ರಂಗಕ್ಕೆ ಹೋಗುತ್ತ ಇರಬೇಕಾದುದರಿಂದ ಅವನ ಸ್ಥಳವು ರಂಗಕ್ಕೆ ಹತ್ತಿರ ಇರಬೇಕಾದುದೂ ಅಗತ್ಯ. ನೋಡಿ : **ಚೌಕಿ, ಹಾಸ್ಯಗಾರನ ಚಾಪೆ.**

ಬಡಗುತಿಟ್ಟಿನಲ್ಲಿ ಅಡ್ಡಚೌಕ(ಕಿ) ಎಂದರೆ, ರಂಗಸ್ಥಳದ ಹಿಂಬದಿಯಲ್ಲಿ ವೇಷಧಾರಿಗಳ ವಿಶ್ರಾಂತಿಗಾಗಿ ಹಾಕಿರುವ ಚಾಪೆ. ಇದು ಹಾಸ್ಯಗಾರನ ಚೌಕಿಗೆ ತಾಗಿಕೊಂಡೇ ಇರುತ್ತದೆ.

ಅಡ್ಡನಾಮ : ವೇಷದ ಹಣೆಯಲ್ಲಿ ಬರೆಯುವ ಅಡ್ಡನಾಮ. ತ್ರಿಪುಂಡ್ರ, ಅಥವಾ ಏಕ ಪುಂಡ್ರ. ಇದು ಬಿಳಿ ಅಥವಾ ಕೆಂಪು ಬಣ್ಣದ್ದಾಗಿದ್ದು ಅದರ ಸುತ್ತ ಸೀಮೆಯ ರೇಖೆ ಇರುತ್ತದೆ. ನಾಮದ ಗಾತ್ರದಲ್ಲಿ ಪಾತ್ರಾನುಗುಣವಾಗಿ ವ್ಯತ್ಯಾಸ ಇರುವುದು. ಹಿಂದೆ ಸ್ತ್ರೀ ಪಾತ್ರಗಳೆಲ್ಲ ಅಡ್ಡನಾಮ (ಅಡ್ಡ




ಅಡ್ಡಿಗೆಗಳು




ಅರಳೋಲೆ



ಗಿಳಿಯೋಲೆ



ಲವಂಗದ ಕಡ್ಡಿ-ಸರಪಳಿ



ಓಲೆ-ಸರಪಳಿ



ಕೊಪ್ಪು-ಸರಪಳಿ



ಅಡ್ಡನಾಮಗಳು



ಅರ್ಧಚಂದ್ರಾಕೃತಿ ಬಣ್ಣ



ಅಶ್ವತ್ಥನ ಎಲೆ



ಅಶ್ವತ್ಥನ ಎಲೆ



ಅಶ್ವತ್ಥನ ಎಲೆ

ಕುಂಕುಮ)ವನ್ನೆ ಧರಿಸುತ್ತಿದ್ದರು. ಅದರ ಕೆಳಗೆ ಬಣ್ಣದ ಅಥವಾ ಬೇಗಡೆಯ ಬೊಟ್ಟು ಇರುತ್ತಿತ್ತು. ದ್ರೋಣ, ಕರ್ಣ, ಋಷಿಗಳು, ಶಿವ, ಇವೆಲ್ಲ ಅಡ್ಡನಾಮದ ವೇಷಗಳು. ನೋಡಿ: **ಅರ್ಧ ಚಂದ್ರಾಕೃತಿನಾಮ, ಗೀರುಗಂಧ.**

ಅಡ್ಡಪೆಟ್ಟಿಗೆ = ನೋಡಿ: **ಅಡ್ಡಹೊರೆ.**

ಅಡ್ಡಸೋಗು/ಅಡ್ಡಹಾಸ್ಯ (ಉ./ಗ.): ಆಟದ ಮಧ್ಯೆ, ಕತೆಯನ್ನು ನಿಲ್ಲಿಸಿ, ಆಡಿತೋರಿಸುವ ಹಾಸ್ಯ ಪ್ರಸಂಗಗಳು. ಇವು ತೆಂಕುತಿಟ್ಟು, ಬಡಗುತಿಟ್ಟುಗಳ ಪೂರ್ವರಂಗದ ಕಟ್ಟು ಹಾಸ್ಯಗಳ ಹಾಗೆ, ಆದರೆ ಪ್ರದರ್ಶನದ ಮಧ್ಯೆ ಬರುತ್ತವೆ. ಸನ್ಯಾಸಿ, ಪೂಜಾರಿ, ದಾಸಯ್ಯ, ಹಾಲಕ್ಕಿ ಮೊದಲಾಗಿ ಅಡ್ಡಸೋಗುಗಳಿರುತ್ತವೆ.

ಅಡ್ಡಹಾಸ್ಯ = ನೋಡಿ: **ಅಡ್ಡಸೋಗು.**

ಅಡ್ಡಹೊರೆ/ಅಡ್ಡೋರೆ: ಸಾಂಪ್ರದಾಯಿಕ ಮೇಳದ ತಿರುಗಾಟದ ಹೊರೆಗಳಲ್ಲಿ ಒಂದು. ಅಡುಗೆಗೆ ಸಂಬಂಧಿಸಿದ ಪಾತ್ರೆ, ಸಾಮಾನುಗಳನ್ನು ಎರಡು ಹೊರೆಗಳನ್ನಾಗಿ ಕಟ್ಟಿ, ದೊಡ್ಡ ಸಲಿಕೆ ಅಥವಾ ಉರುಟು ದಿಮ್ಮಿಗೆ ಎರಡು ತುದಿಯಲ್ಲಿ ಕಟ್ಟಿ, ಭುಜದ ಮೇಲೆ ಸ್ವಲ್ಪ ಅಡ್ಡಲಾಗಿಟ್ಟು ಹೊರುವ ಹೊರೆ. ಎರಡು ಬದಿಗಳಿಗೆ ಚೆರಿಗೆಗಳನ್ನು ಕಟ್ಟಿ ಸಮತೋಲಗೊಳಿಸುವರು.

ಅಡ್ಡಹೊರೆಯವನು: ಅಡ್ಡಹೊರೆಯನ್ನು ಹೊರುವವನು. ಈತನು ಆಟ ಮುಗಿಯುವ ಮೊದಲೇ ಅಡುಗೆಯವನೊಂದಿಗೆ ಹೊರಟು, ಮುಂದಿನ ಬಿಡಾರಕ್ಕೆ ತಲಪಬೇಕು. ಇವನು ಹಗಲು ಅಡುಗೆಗೆ ಮತ್ತು ರಾತ್ರಿ ಬಿಸಿ ನೀರು ತಯಾರಿಸಲು ಅಡುಗೆಯವನಿಗೆ ಸಹಾಯಕನಾಗಿರುತ್ತಾನೆ. ಮುಂದಿನ ಬಿಡಾರಕ್ಕೆ ಬರಲು, ಮೇಳದವರಿಗೆ ದಾರಿ ಸರಿಯಾಗಿ ಗೊತ್ತಾಗುವಂತೆ ಅಲ್ಲಲ್ಲಿ, ತಿರುಗು ರಸ್ತೆಗಳಲ್ಲಿ ಇವನು ಸೊಪ್ಪು ಹಾಕುತ್ತ ಹೋಗಬೇಕು. ನೋಡಿ: **ದಾರಿಸೊಪ್ಪು.** ಈಗ ವಾಹನ ವ್ಯವಸ್ಥೆಗಳಿರುವುದರಿಂದ ಅಡ್ಡಹೊರೆಯ ಕ್ರಮವಿಲ್ಲ.

ಅಡ್ಡಿಗೆ (ತೆ.): ಗಂಡು, ಹೆಣ್ಣು ವೇಷಗಳ ಕೊರಳಿನ ಆಭರಣ. ಸರಗಳಿಗಿಂತ ಗಿಡ್ಡ, ಮತ್ತು ಘನವಾಗಿದ್ದು, ಕಟ್ಟಿದಾಗ ಕೊರಳಿಗೆ ತಾಗಿ ನಿಲ್ಲುತ್ತದೆ. ಗುಂಡಡ್ಡಿಗೆ, ಗೆಜ್ಜೆಅಡ್ಡಿಗೆ, ಹಲ್ಲೆ ಅಡ್ಡಿಗೆ, ಸಂಕಲೆ ಅಡ್ಡಿಗೆ, ಇವು ಅಡ್ಡಿಗೆಯ ಪ್ರಭೇದಗಳು. ನೋಡಿ: **ಕೊರಳಪಟ್ಟಿ.**

ಅಡ್ಡೋರೆ = ನೋಡಿ: **ಅಡ್ಡಹೊರೆ.**

ಅಣೆ (ತೆ.): ಭೂತದ ಬೆನ್ನಿನ ಸುತ್ತ ಇರುವ ಆಯತ ಪ್ರಭಾವಳಿಯಂತಿರುವ ರಚನೆ. ಬಟ್ಟೆ, ಮಣೆ, ಬೇಗಡೆಗಳಿಂದ ಅಲಂಕೃತವಾದ ತಟ್ಟಿ. ಇದಕ್ಕೆ ಕೋಲು ಬತ್ತಿಗಳನ್ನು ಸಿಕ್ಕಿಸಿ ಉರಿಸುವುದೂ ಉಂಟು. ವೀರಭದ್ರ, ರಕ್ತೇಶ್ವರಿ ವೇಷಗಳಿಗೆ ಬಳಕೆಯಿದೆ. ನೋಡಿ: **ತಟ್ಟಿ ವೀರಭದ್ರ.**

ಅತಿಕಾಯನ ಬಣ್ಣ: ಅತಿಕಾಯನ ಪಾತ್ರದ ಮುಖವರ್ಣಿಕೆ. ಮುಖಕ್ಕೆ ಹಸುರು, ಕಣ್ಣಿನಡಿ ಗೆರೆ ಮತ್ತು ಮುದ್ರೆಗಳು, ಮುತ್ತರಿಗಳು ವಿಶಿಷ್ಟವಾಗಿರುತ್ತವೆ. ಎರಡೂ ತಿಟ್ಟುಗಳಲ್ಲಿ ಹೀಗೇ ಇದ್ದರೂ, ಬಡಗಿನಲ್ಲಿ ಮುಖಕ್ಕೆ ನೀಲ ಬಣ್ಣವನ್ನು ಹಚ್ಚುವುದೂ ಉಂಟು. ತೆಂಕುತಿಟ್ಟಿನಲ್ಲಿ ಇದು 'ಪಚ್ಚೆ' ಎಂಬ ವೇಷ ಜಾತಿ. ಅತಿಕಾಯ, ಬಲರಾಮ, ಕೌಂಡ್ಳಿಕ, ವೀರವರ್ಮ, ಶಿಶುಪಾಲ– ಇವೆಲ್ಲ ಹೆಚ್ಚು ಕಡಮೆ ಒಂದೇ ತೆರನಾಗಿರುತ್ತವೆ.

ಅನನಾಸು ನಾರು: ಅನನಾಸು ಗಿಡದ ಗರಿಗಳನ್ನು ಕೊಳೆಸಿ, ತೆಗೆದ ನಾರು. ಬಿಳಿ ಕೆಂಚು ಬಣ್ಣದ ನಯವಾದ ದಾರಗಳಿರುತ್ತವೆ. **ಕೆಂಚುಕೇಸರಿ, ಬಿಳಿಕೇಸರಿ**–ಇವುಗಳಿಗಾಗಿ ಬಳಕೆ.

ಅನುಕೂಲ ಸ್ತ್ರೀಯರು (-ನಾರಿಯರು) (ಬ.): ಸಖಿಯರು, ಸೇವಿಕೆಯರು.

ಅನುಭವ / ಅನುಭೋಗ: ರಂಗಮಾಹಿತಿ, ಸಂಪ್ರದಾಯದ ನಡೆಗಳ, ಮಾತುಗಾರಿಕೆಯ, ಕಥೆಯ, ಪುರಾಣದ ತಿಳುವಳಿಕೆ. ವಂಶಾವಳಿ, ಕೋಷ್ಟಕಗಳು, ನಿಶ್ಚಿತವಾದ ಕ್ರಮಗಳು ಮೊದಲಾದುವುಗಳ ಪರಿಜ್ಞಾನ.

ಅನುಭವ ಕೊಡುವುದು: 1. 'ಅನುಭವ' ಎಂಬುದನ್ನು ತಿಳಿದವನು, ಕಲಾವಿದನು ಇನ್ನೊಬ್ಬನಿಗೆ ತಿಳಿಸಿಕೊಡುವದು. ಸಾಂಪ್ರದಾಯಿಕವಾದ ರಂಗದ ನಡೆಗಳನ್ನು, ಕ್ರಮಗಳನ್ನು ವಿವರಿಸಿ ಯಾ ಮಾಡಿ ತೋರಿಸಿ ಹೇಳಿಕೊಡುವುದು.

2. ಭಾಗವತನು ವೇಷಧಾರಿಗೆ ಸೂಚನೆ ಕೊಡುವುದು. – ನೋಡಿ: **ದಾರಿ.**

ಅನುಭವದಾರಿ: 'ಅನುಭವ'ವುಳ್ಳವ ಎಂದರೆ, ರಂಗ ಸಂಪ್ರದಾಯ, ಪುರಾಣ ಮುಂತಾಗಿ ತಿಳಿವಳಿಕೆ ಇರುವ ವ್ಯಕ್ತಿ. ಈತನು ಕಲಾವಿದನೇ ಆಗಿರಬೇಕೆಂದಿಲ್ಲ.

ಈ ಪದವು ಇನ್ನೊಂದು ಅರ್ಥದಲ್ಲೂ ಬಳಕೆಯಲ್ಲಿದೆ. 'ಅವರೊಬ್ಬ ಅನುಭವದಾರಿ' ಎಂದರೆ, ರಂಗದ ಕಲಾವಿದನಾಗಿ ಉತ್ತಮ ಮಟ್ಟದವನಲ್ಲ

ವಾದರೂ, ಮಾರ್ಗದರ್ಶನ ನೀಡುವ ದೃಷ್ಟಿಯಿಂದ ಉಪಯುಕ್ತ. ಕಸಬುದಾರಿ ಎಂದು ಅರ್ಥ.

ಅನುಭೋಗ = ನೋಡಿ: ಅನುಭವ.

ಅಪಶಕುನ ಹಾಸ್ಯ: ಯುದ್ಧ, ದಿಗ್ವಿಜಯಗಳಿಗೆ ಹೊರಟ ಪಾತ್ರಕ್ಕೆ, ವಿಶೇಷತಃ ರಾಕ್ಷಸರಿಗೆ ದಾರಿಯಲ್ಲಿ ಸಿಗುವ ಅಪಶಕುನದ ಪಾತ್ರಗಳು. ಇದನ್ನು ಹಾಸ್ಯಗಾರನೇ ನಿರ್ವಹಿಸುತ್ತಾನೆ. ಇವು ಮುಖ್ಯವಾಗಿ ಒಂಟಿ ಬ್ರಾಹ್ಮಣ, ಮಡಕೆ ಕುಂಬಾರ, ಕಟ್ಟಿಗೆ ಮಾರುವವನು, ವಿಧವೆ– ಎಂದು ನಾಲ್ಕು. ಬಡಗುತಿಟ್ಟಿನಲ್ಲಿ **ತಟ್ಟೀಬಳಿ** (ನೋಡಿ) ಎಂಬುದೂ ಒಂದು ಹೆಚ್ಚಿಗೆ ಇದೆ. ಈ ಹಾಸ್ಯ ಪಾತ್ರಗಳು ವೇಷದೊಂದಿಗೆ ಹಾಸ್ಯ ಸಂಭಾಷಣೆ ಮಾಡಿ ಹೋಗುತ್ತವೆ. ಆದರೆ, ಕೊನೆಗೆ ಅವುಗಳನ್ನು ಭರ್ತ್ಸನೆ ಮಾಡುವುದಿಲ್ಲ, ಬದಲಾಗಿ ಸಹಾನುಭೂತಿಯಿಂದ ಕಳಿಸುತ್ತಾರೆ. ಹಾಸ್ಯಗಾರನು ಈ ಪಾತ್ರಗಳನ್ನು, ಬೇಗ ಬೇಗನೆ ವೇಷ ಬದಲಾಯಿಸಿ ನಿರ್ವಹಿಸಬೇಕು. ಅವನಿಗೆ ಬಿಡುವು ನೀಡಲು, ವೇಷಗಳು ಪ್ರಯಾಣ ಮುಂದುವರಿಸಿ, ಸ್ವಲ್ಪ ಮಾತಾಡಿಕೊಳ್ಳುತ್ತವೆ.

ಪಾತ್ರಗಳಿಗೆ ಶುಭಶಕುನವಾಗುವ ಸಂದರ್ಭವಿದ್ದರೆ ಅದನ್ನು ದೃಶ್ಯದಲ್ಲಿ ತೋರಿಸುವುದಿಲ್ಲ. ಮಾತಿನಲ್ಲಿ ಹೇಳುವರು.

ಅಪಶ್ರುತಿ: ಹಾಡು ಅಥವಾ ವಾದ್ಯಗಳ ಶ್ರುತಿ ತಪ್ಪುವಿಕೆ. ಶ್ರುತಿಭಂಗ.

ಅಪ್ಪುಕುಟ್ಟಿ (ಬ.): ಬಡಗುತಿಟ್ಟಿನಲ್ಲಿ, ಬೈಂದೂರು ಸೀಮೆಯಲ್ಲಿ, ಕೋಡಂಗಿ ವೇಷಗಳ ನಾಮಾಂತರ.

ಅಬ್ಬರ: 1. ಆಟ ಆರಂಭವಾಗುವ ಮೊದಲು, ಚಂಡೆ, ಮದ್ದಲೆ, ತಾಳ (ಜಾಗಟೆ) ಗಳನ್ನು ಮಾತ್ರ, ಹಾಡುವಿಕೆಯಿಲ್ಲದೆ, ಬಾರಿಸುವ ಕ್ರಮ. ಅಬ್ಬರ ಬಿಡ್ತಿಗೆ. ಶುಷ್ಕವಾದನ. ಇದಕ್ಕೆ ಅಬ್ಬರ ತಾಳವೆಂದೂ ಹೇಳುವರು.

ಬಡಗುತಿಟ್ಟಿನಲ್ಲಿ ಇದು ನಾಲ್ಕು ಬಗೆ:

I. **ಗುಡ್ಡದ ಅಬ್ಬರ**: ಸಾಯಂಕಾಲ ಸಮಯ, ಆಟ ನಡೆಯುವ ಸ್ಥಳದ ಬಳಿ ಎತ್ತರದ ಗುಡ್ಡೆಗೆ ಹೋಗಿ ಬಾರಿಸುವುದು. ಇದೇ ಕೇಳಿ ಬಾರಿಸುವಿಕೆ ಯಾನೆ ಕೇಳಿ ಅಬ್ಬರ. ನೋಡಿ: **ಕೇಳಿ**.

II. **ಚೌಕಿ ಅಬ್ಬರ**: ಸಂಜೆ ಚೌಕಿಯಲ್ಲಿ, ಗಣಪತಿ ಪೂಜೆಗೆ ಮೊದಲು ಬಾರಿಸುವುದು.

III. **ರಂಗಸ್ಥಳದ ಅಬ್ಬರ**: ಸಭಾಲಕ್ಷಣವೆಂಬ ಪೂರ್ವರಂಗದ ಆರಂಭಕ್ಕೆ ಮೊದಲು ರಂಗಸ್ಥಳದಲ್ಲಿ ಬಡಿಯುವುದು. ಪೀಠಿಕೆ.

IV. **ಪ್ರಸಂಗ ಪೀಠಿಕೆ ಅಬ್ಬರ**: ಸಭಾಲಕ್ಷಣ ಮುಗಿದು, ಕಥಾರಂಭಕ್ಕೆ ಮೊದಲು ಬಡಿಯುವುದು. ಇವೆಲ್ಲವೂ ಏಕತಾಳದಲ್ಲಿದ್ದು, ನಾಲ್ಕೂ ಸುಮಾರಾಗಿ ಒಂದೇ ತೆರದ ನಡೆಯಲ್ಲಿರುತ್ತವೆ. ಗುಡ್ಡದ ಅಬ್ಬರ, ಪ್ರಸಂಗ ಪೀಠಿಕೆಗಳು ದೀರ್ಘ. ಉಳಿದ ಎರಡು ಹ್ರಸ್ವ.

ತೆಂಕುತಿಟ್ಟಿನಲ್ಲಿ: ಗುಡ್ಡದ ಅಬ್ಬರಕ್ಕೆ ಮಾತ್ರ ಅಬ್ಬರ, ಅಬ್ಬರ ತಾಳವೆಂದು ಹೆಸರು.

2. ವರ್ಣನಾತ್ಮಕ ಯಾ ಪ್ರಶಂಸಾತ್ಮಕವಾಗಿ– ವೇಷದ ಕೆಲಸದ, ವೇಷಧಾರಿಯ, ಸನ್ನಿವೇಶದ ರಭಸ, ಉತ್ಸಾಹ, ಅಂದಗಳನ್ನು ಸೂಚಿಸುವ ಶಬ್ದ. ಆಟಕ್ಕೆ ಅಬ್ಬರ ತೋಟಕ್ಕೆ ಗೊಬ್ಬರ- ಗಾದೆ.

ಅಬ್ಬರ ಕುಣಿತ: 1. ರಭಸದ, ವೀರಾವೇಶದ ಕುಣಿತ. 2. ಬಣ್ಣದ ವೇಷದ ಪ್ರವೇಶ ನೃತ್ಯ.

ಅಬ್ಬರತಾಳ: 'ಅಬ್ಬರ'ವೆಂಬ ಬಡಿತ, ಮತ್ತು ಅದರ ತಾಳದಸ್ತೆಗಳು, ಸೊಲ್ಲುಗಳು. ತೆಂಕುತಿಟ್ಟಿನಲ್ಲಿ ಇದು ಮೊದಲನೆಯ, ಗುಡ್ಡದ ಅಬ್ಬರಕ್ಕೆ ಮಾತ್ರ ಸಂಬಂಧಿಸುತ್ತದೆ.

ಅಬ್ಬರ ಬಿಡ್ತಿಗೆ: 'ಅಬ್ಬರ'ಕ್ಕೆ ಸಂಬಂಧಿಸಿದ ಬಡಿತದ ಬಿಡ್ತಿಗೆಗಳು ಸಂಪೂರ್ಣವಾಗಿ ಯಾ ಅದರ ಖಂಡಗಳು.

ಅಬ್ಬರ ಮುಕ್ತಾಯ (ಬ.): 'ಅಬ್ಬರ'ದ ಮುಕ್ತಾಯ ಕ್ರಮ, ಅದರ ನುಡಿಕಾರಗಳು, ಸೊಲ್ಲುಕಟ್ಟುಗಳು.

ಅಭಿನಯ: 1. ಸಾಮಾನ್ಯವಾಗಿ, ರಂಗದ ಪಾತ್ರಗಳ ಕೆಲಸ, ರಂಗ ವ್ಯವಹಾರ, ಪಾತ್ರಾಭಿನಯ.

2. ಪದ್ಯಗಳಿಗೆ ಸರಿಯಾಗಿ ಮಾಡುವ ಪದಾಭಿನಯ, ಮತ್ತು ಪದ್ಯಾಭಿನಯ. ಮುದ್ರೆಗಳ ಮೂಲಕ, ಚಲನೆಯ ಮೂಲಕ ಅಭಿವ್ಯಕ್ತಿ.

3. ಕಥಾಸಂದರ್ಭದಲ್ಲೆ, ಒಂದು ಪಾತ್ರವು ಇನ್ನೊಂದು ಪಾತ್ರದೊಂದಿಗೆ, ನಿಜವನ್ನು ಮರೆಮಾಚಿ, ಬೇರೆ ರೀತಿಯಲ್ಲಿ ಹೇಳುವುದು ಯಾ ತೋರಿಸುವುದು. 'ಸುಳ್ಳು ಅಭಿನಯ', ವಂಚಕ ನಟನೆಯ ಸನ್ನಿವೇಶದ ಕೆಲಸ. ನೋಡಿ: **ನಟನೆ**.

ಅಭಿಷೇಕ (ಉ.): 1. ವೇಷದ ಬೆನ್ನಿಗೆ ಕಟ್ಟುವ ಬೆನ್ನುತುಂಡು ಯಾನೆ ಬೆನ್ನು ಶಾಲು.

2. ಬಣ್ಣದ ವೇಷವು ಪೊರಪ್ಪಾಡು ಅಥವಾ ಪ್ರವೇಶ ನೃತ್ಯದಲ್ಲಿ ಅಭಿನಯಿಸುವ ಶಿವಪೂಜೆಯಲ್ಲಿ ಬರುವ ಅಭಿಷೇಕದ ಹಸ್ತಭಾವಗಳು, ಮುದ್ರೆಗಳು.

ಅಭ್ರಕ: ಮುಖವರ್ಣಿಕೆ, ಅಲಂಕರಣಗಳಿಗೆ ಬಳಸುವ ಕಾಗೆಬಂಗಾರ. ಬಿಂಗ.

ಅಮಾವಾಸ್ಯೆ ಪೂಜೆ: ಆಟದ ಮೇಳಗಳಲ್ಲಿ ಅಮಾವಾಸ್ಯೆಯಂದು ಮಧ್ಯಾಹ್ನ ನಡೆಯುವ ವಿಶೇಷ ಪೂಜೆ. ಅಂದು ಹಿಮ್ಮೇಳದ ಸೇವೆಯೂ ಜರಗಬೇಕು. ಪಾಯಸದೂಟವೂ ಇರುತ್ತದೆ. ಕೆಲವು ಮೇಳಗಳಲ್ಲಿ ಸಂಕ್ರಮಣ ದಿನಗಳಲ್ಲೂ ಇಂತಹ ಪೂಜೆ ಇರುತ್ತದೆ. ಈ ಆಚರಣೆಗಳಿಗೆ 'ಪೂಜೆ' ಯೆಂದಷ್ಟೆ ಹೇಳುವುದಿದೆ.

ಈಗ ಇರುವಂತೆ, ಮೇಳಗಳಲ್ಲಿ, ಹಿಂದೆ, ಮಧ್ಯಾಹ್ನ ನಿತ್ಯ ಪೂಜೆ ಇರಲಿಲ್ಲವೆಂಬುದಕ್ಕೆ ಇವು ಸೂಚಕಗಳಾಗಿವೆ.

ಅರದಾಳ: ಅರಿದಾಲ, ಅರ್ದಳ, ಅರ್ದಾಳ, ಹರಿತಾಲ, ಹರದಾಳ. ಹಳದಿ ಬಣ್ಣದ ದ್ರವ್ಯ. ಮುಖವರ್ಣಿಕೆಯ ಮೂಲಲೇಪನಕ್ಕೆ ಈ ಬಣ್ಣ. ಯಕ್ಷಗಾನ, ಭೂತ ವೇಷಗಳಲ್ಲಿ ಹಿಂದೆ ಬಳಕೆ ಯಾಗುತ್ತಿತ್ತು. ನಸುಗೆಂಪು ಛಾಯೆಯುಳ್ಳ ಹಳದಿ ಇದು. ಇದಕ್ಕೆ ಸ್ವಲ್ಪ ಕೆಂಪು ಬಣ್ಣ ಮಿಶ್ರ ಮಾಡುವುದೂ ಉಂಟು. ಇದು ಮೂರು ಮೂಲಗಳಿಂದ ಲಭ್ಯ.

1. **ಖನಿಜ ಅರದಾಳ** – Arsenicum Flavum. ಆರ್ಸೆನಿಕ್ ಮತ್ತು ಗಂಧಕಗಳ ಮಿಶ್ರಣ. ಇದಕ್ಕೆ ದುರ್ವಾಸನೆ ಇದೆ. ಇದೇ ಪ್ರಸಿದ್ಧ ಅರದಾಳ. Yellow orpiment. ಕಲ್ಲು ಅರದಾಳ.

2. **ವೃಕ್ಷ ಅರದಾಳ** – ಅ) ಅರಸಿನ ಗುರ್ಗಿ ಮರ. Garcenia mosella ದ ತೊಗಟೆ, ಕಾಂಡ ದಿಂದ — ಆ) Orpine — (Sedum telephium). ಗಿಡದಿಂದ. ಇದರಲ್ಲಿ ನೇರಳೆ, ಹಳದಿ ಜಾತಿಗಳಿವೆ. — ಇ) ಮರದರಸಿನ – ಬೇರು ಗಳಿಂದ. (Morinda umbelata.) ಈ) ಹಲಸಿನ ಮರಕ್ಕೆ ಬರುವ ಗಡ್ಡೆ ಅರೆದು ತಯಾರಿಸುವುದು.

3. **ಹಳದಿಕಲ್ಲು** – ವಿಶೇಷತ: ಹೊಳೆಗಳಲ್ಲಿ, ತೋಡುಗಳಲ್ಲಿ ಲಭ್ಯ.

ಅರದಾಳವನ್ನು ಅರೆದು ಮುಖಕ್ಕೆ ಬಳಿದ ಅನಂತರ, ಅದರ ಮೇಲೆ ಯಾವುದೇ ಶುಷ್ಕಕ – ಪೌಡರ್ ವಗೈರೆ – ಹಚ್ಚುವ ಕ್ರಮವಿರಲಿಲ್ಲ. ಹಾಗಾಗಿ ಹಿಂದಿನ ಬಣ್ಣಗಾರಿಕೆಗೆ ಹಸಿ ಬಣ್ಣ ಎನ್ನುವರು. ಮಂದವಾದ ಬೆಳಕಿಗೆ ಇದು ಬಹು ಸುಂದರವಾಗಿ ಕಾಣುವುದು.

(ತೆ.) ಈ ಅರದಾಳದ ಬಣ್ಣಕ್ಕೆ 'ಚಾಯ' (ಗೌರವರ್ಣ)ವೆಂದು ಹೆಸರು. ಇದು ಸಾಮಾನ್ಯ ಮನುಷ್ಯ ವರ್ಣವೆಂದು ತಾತ್ಪರ್ಯ. ಬಣ್ಣದ ವೇಷ, ಪಚ್ಚೆ ವೇಷಗಳನ್ನು ಬಿಟ್ಟರೆ, ಉಳಿದೆಲ್ಲ ಪಾತ್ರಗಳಿಗೆ ಇದೇ ಮೂಲವರ್ಣ (base make-up) ನೋಡಿ : **ಚಾಯ.**

ಈಗ ಅರದಾಳದ ಬದಲು ಸಪೇತ (Zinc Oxide)ವೆಂಬ ಬಿಳಿ ಬಣ್ಣಕ್ಕೆ ಅರಸಿನ, ಕೆಂಪು ಸೇರಿಸಿ ಎಣ್ಣೆಯಲ್ಲಿ ಕಲಸಿ ಲೇಪಿಸುವರು. ನೋಡಿ : **ಸಪೇತ.**

ಅರದಾಳದ ಕಲ್ಲು : 1. ಮೇಲೆ ಹೇಳಿದ ಖನಿಜ ಅರದಾಳದ ಕಲ್ಲು, ಖನಿಜದ ಹೆಂಟೆ.

2. ಹಳದಿ ಬಣ್ಣದ ಕಲ್ಲು.

3. ಅರದಾಳ, ಯಾ ಸಪೇತ + ಅರಸಿನ – ಅರೆದು ತಯಾರಿಸಿಡುವ ಕಲ್ಲು.

ಅರಳೆಲೆ : 1. ಅಶ್ವತ್ಥದ ಎಲೆಗಳಂತಿರುವ ಪದಕಗಳುಳ್ಳ ಅರಳೆಲೆ ಸರ.

2. ಅರಳಲೆ ಆಕಾರದ ಕಿವಿಯೋಲೆ. ನೋಡಿ : **ಅರಳೋಲೆ.**

3. ಅರಳಲೆ ಆಕಾರದ ಚಿಕ್ಕಚಿಕ್ಕ ಪದಕಗಳು. ಇವು ಕಿರೀಟದ ಮೇಲ್ಭಾಗದ ಅಲಂಕರಣಕ್ಕೆ, ಕೇಶಾವರಿ (ತಡ್ಪೆ) ಕಿರೀಟಗಳಲ್ಲಿರುವ ಸತ್ತಿಗೆ ಎಂಬ ರಚನೆಗಳಲ್ಲಿ ಬಳಕೆಯಾಗುತ್ತವೆ.

ಅರಳೋಲೆ : ಅರಳಿ ಎಲೆ ಆಕಾರದ ಕಿವಿಯೋಲೆ.

ಅರುವತ್ತನಾಲ್ಕು ಕಟ್ಟು, ನಾಲ್ಕುಕುತ್ತು (ತೆ.) : ತೆಂಕುತಿಟ್ಟಿನ ಇಡಿವೇಷ (ಕಿರೀಟ ವೇಷ ಯಾ ಬಣ್ಣದ ವೇಷ)ವನ್ನು ಪೂರ್ತಿಯಾಗಿ ಧರಿಸಿದಾಗ ವೇಷಧಾರಿಯ ವೇಷದ ಮೇಲೆ ಮತ್ತು ಮೈಯ ಮೇಲೆ ಒಟ್ಟು ಅರುವತ್ತನಾಲ್ಕು ಕಟ್ಟು (ಗಂಟು ಯಾ ಬಿಗಿತಕಟ್ಟು) ಗಳಿರಬೇಕೆಂದೂ, ನಾಲ್ಕು ಕುತ್ತುವಿಕೆ ಎಂದರೆ ಒತ್ತಿಸುರಿಯುವಿಕೆಗಳು, ಇರಬೇಕೆಂದೂ ಹಳೆಯ ನಿಯಮ. ಈಗ ಬದಲಾವಣೆಗಳಿಂದಾಗಿ ಈ ಸಂಖ್ಯೆ ಕಡಿಮೆ ಯಾಗಿದೆ. ಈ ಅರುವತ್ತನಾಲ್ಕು ಕಟ್ಟುಗಳು ಯಾವುವು ಎಂಬ ಬಗ್ಗೆ ಸ್ವಲ್ಪಮಟ್ಟಿನ ಅಭಿಪ್ರಾಯ ಭೇದಗಳಿದ್ದರೂ ಸಾಮಾನ್ಯವಾಗಿ ಅದನ್ನು ಹೀಗೆ ಪಟ್ಟಿ ಮಾಡಬಹುದು :

ಒಳಚಲ್ಲಣಕ್ಕೆ	–	3
ಅಂಡಿಗೆ	–	1
ಗೆಜ್ಜೆಗಳಿಗೆ	–	2
ಕಾಲಕಡಗಗಳಿಗೆ	–	2
ಕಾಲು ಮುಳ್ಳುಗಳಿಗೆ	–	6
ಕಾಲು ಚೆಂಡುಗಳಿಗೆ	–	6
ಮೊಣಕಾಲ ಕೆಳಗೆ ಜಂಗುಗಳಿಗೆ	–	2
ಕಚ್ಚೆಗೆ	–	2
ಕಚ್ಚೆಲಾಡಿಗೆ	–	1
ದಟ್ಟಿ (ಜಟ್ಟಿ)ಗೆ	–	3
ಬಾಲು ಮುಂಡಿಗೆ	–	1

ವೀರಕಸೆಗೆ	—	1
ಮಾರುಮಾಲೆಗೆ	—	1
ಡಾಬುಗಳಿಗೆ	—	3
ದಗಲೆಗಳಿಗೆ	—	6
ಕೈಕಟ್ಟುಗಳಿಗೆ	—	2
ತೋಳ್ಕಟ್ಟುಗಳಿಗೆ	—	2
ಭುಜಮುಳ್ಳುಗಳಿಗೆ	—	4
ಎದೆಪದಕಕ್ಕೆ	—	2
ಅಡ್ಡಿಗೆಗಳಿಗೆ	—	2
ಹಾರಕ್ಕೆ	—	1
ಮೀಸೆಗೆ	—	1
ಚಿಟ್ಟೆಪಟ್ಟಿಗಳಿಗೆ	—	3
ಕರ್ಣಪಾತ್ರಕ್ಕೆ	—	1
ಕಿರೀಟಕ್ಕೆ	—	3
ಕೇದಗೆಗೆ	—	1
ಕೇಸರಿಗೆ	—	1
ಗಡ್ಡಕ್ಕೆ	—	1
ಹೀಗೆ ಅಡಿಯಿಂದ ಮುಡಿಯವರೆಗೆ ಒಟ್ಟು		64

ನಾಲ್ಕು ಕುತ್ತುಗಳೆಂದರೆ, ಕರ್ಣಪಾತ್ರದ ಮೇಲಿನ ಎಡೆಯಲ್ಲಿ, ಕಿವಿಯ ಮೇಲುಭಾಗಕ್ಕೆ ನಿಲ್ಲುವಂತೆ ಚೆನ್ನೆಪ್ಪೂಗಳಿಗೆ ಎರಡು, ಮತ್ತು ಕೆನ್ನೆಪ್ಪೂಗಳಿಗೆ ಎರಡು. ಬಣ್ಣದ ವೇಷಗಳಿಗೆ ಹೂವುಗಳಿಲ್ಲ. ಬದಲಾಗಿ ಓಲೆಗಳನ್ನು ಕಿರೀಟಕ್ಕೆ ಕಟ್ಟುತ್ತಾರೆ. ಕರ್ಣಶಿಖಿ ಪಾತ್ರಗಳನ್ನು (ಆಲವಟ್ಟ)ಗಳನ್ನು ಓಲೆ ಮತ್ತು ಕಿರೀಟದ ಮಧ್ಯೆ ಕುತ್ತುವುದೂ ಉಂಟು. ಈ ಮೇಲೆ ಹೇಳಿದ ಅರುವತ್ತನಾಲ್ಕು ಮತ್ತು ನಾಲ್ಕರ ಲೆಕ್ಕ ಈಗ ಬದಲಾಗಿದೆ. ಕಚ್ಚೆಯ ಬದಲು ಚಲ್ಲಣ ಬಂದಿರುವುದರಿಂದ, ಕಾಲುಮುಳ್ಳು, ಕಾಲ ಚೆಂಡುಗಳು, ಕಡಗಗಳು ಮಾಯವಾಗಿರುವುದ ರಿಂದ ಸಂಖ್ಯೆ ಕಡಮೆಯಾಗಿದೆ. ವೀರಕಸೆ, ಮಾರುಮಾಲೆ ಸೇರಿ ಒಂದೇ ಆಭರಣವಾಗಿದೆ. ಜಂಗು ಬಳಕೆಯಲ್ಲಿಲ್ಲ. ಕೆನ್ನೆಪ್ಪೂ, ಚೆನ್ನೆಪ್ಪೂ ಸೇರಿ ಒಂದೇ ಆಭರಣವಾಗಿದೆ.

ಅರೆಕಚ್ಚೆ : 1. ಮೊಣಕಾಲ ಕೆಳಗಿನವರೆಗೆ ಮಾತ್ರ ನಿಲ್ಲುವ ಬಿಗಿ ಡಬಲ್ ಕಚ್ಚೆ.
2. ಒಂದು ಕಾಲನ್ನು ಪೂರ್ತಿ ಸುತ್ತುವರಿದು, ಒಂದನ್ನು ತೆರೆದು ಇಡುವ ನಿರಿಗೆ ಕಚ್ಚೆ ಯಾ ಪುರೋಹಿತ ಕಚ್ಚೆ. ಇದಕ್ಕೂ, ಪೂರ್ತಿ ಎರಡೂ ಕಾಲು ಮುಚ್ಚುವ ವೀರಕಚ್ಚೆಗೂ ಇಡಿಕಚ್ಚೆ ಯೆಂದೂ ಹೆಸರುಂಟು. ಅರೆಕಚ್ಚೆಯು ಋಷಿ, ಬ್ರಾಹ್ಮಣ, ಬೇಟೆಗಾರ, ದೂತ ಇತ್ಯಾದಿ ಪಾತ್ರ ಗಳಿಗೆ ಬಳಕೆ. ನೋಡಿ : **ಕಚ್ಚೆ, ಇಡಿ ಕಚ್ಚೆ.**

ಅರೆಗುಂಪು (ಬ.): ಮದ್ದಲೆಯ ಬಲಭಾಗಕ್ಕೆ, ನಾಲ್ಕೂ ಬೆರಳು ಜೋಡಿಸಿ ಮೆಲ್ಲನೆ ಯಾ ಒತ್ತಿ ಬಡಿಯುವ ಬಡಿತ. ಸಣ್ಣ ತೋಂ ಕಾರ.
ನೋಡಿ : **ಗುಂಪು, ತೋಂ.**

ಅರೆಝುಂಪೆ : ಝುಂಪೆತಾಳದ ಒಂದು ವಿಧ. ನೋಡಿ : ಐದು ಮಾತ್ರಾಕಾಲದ **ತ್ವರಿತಝುಂಪೆ.**

ಅರೆಥಾಪು : ಮದ್ದಲೆಯ ಬಲದ ಬದಿಗೆ ಕರ್ಣ ಮತ್ತು ಇಂಡಿಗೆಗೆ ತಾಗುವಂತೆ, ಕಿರಿಬೆರಳು ಮತ್ತು ಕೈ ಅಂಚನ್ನು ಬಳಸಿ, ಓರೆಯಾಗಿ ಬಾರಿಸುವ ಪೆಟ್ಟು, ಥಾಪು. ಥಾಂ, ಥಾಂ ಎಂಬಂತೆ ಸ್ವರ ಬರುತ್ತದೆ. ನೇರ ಕೈ ಹಿಡಿದು ಕರ್ಣದ ಬದಿಗೆ ಕಿರುಬೆರಳಿನ ತುದಿಭಾಗ ಮುಟ್ಟುವಂತೆ ಬಡಿದರೂ ಥಾಪು. ಈ ಪೆಟ್ಟುಗಳ ಅರ್ಧದಷ್ಟು ಸ್ವರ ಬರುವಂತೆ ಬಡಿದರೆ, ಅರೆಪೆಟ್ಟು, ಅರೆಥಾಪು ಯಾ ಅರ್ಧಥಾಪು ಎನಿಸುತ್ತದೆ. ನೋಡಿ : **ಥಾಪು.**

ಅರೆಪ್ಪಾವಿನಾಟ (ತೆ.) : ಮಲೆಯಾಳಿ ಶಬ್ದ. 'ಅರ' ಎಂದರೆ ಸೊಂಟ, 'ಪಾವು' ಎಂದರೆ ಕುಣಿತ.
ನೋಡಿ: **ಅಟ್ಟಳಿಗೆ ಆಟ; ಚಪ್ಪರ ಮಂಚ.**

ಅರೆಪ್ಪೆಟ್ಟು : **ಅರ್ಧಪೆಟ್ಟು.**

ಅರೆಬಣ್ಣ (ತೆ.) : ಕೋಲುಕಿರೀಟದ ವೇಷಗಳಲ್ಲಿ ಒಂದು ಪ್ರಕಾರ. ರಾಕ್ಷಸೀ ಸ್ವಭಾವದ್ದಾಗಿದ್ದು, ಬಣ್ಣದ ವೇಷವಲ್ಲದ, ವೇಷ. ಉಗ್ರಮುಖ ವರ್ಣಿಕೆ. ಉದಾ: ಇಂದ್ರಜಿತು, ಹಿರಣ್ಯಾಕ್ಷ. ಇತ್ತೀಚೆಗೆ ಬಳಕೆಗೆ ಬಂದ ಪದಪ್ರಯೋಗವಿದು.

ಅರೆಬಣ್ಣ (ಬ.) : ಬಣ್ಣದ ವೇಷಗಳಲ್ಲಿ ಒಂದು ಜಾತಿ. ವಿಶಿಷ್ಟ ಮುಖವರ್ಣಿಕೆ ಇದ್ದು, ಬಣ್ಣದ ವೇಷದ ಕಿರೀಟದಲ್ಲಿ ಚಿಕ್ಕ ಆಕಾರದ ಕಿರೀಟವನ್ನಿಡುವರು. ಉದಾ : ಮಾರೀಚನ ವೇಷ.
(ಉ.) : ರಾಜ ವೇಷ ಮತ್ತು ಬಣ್ಣದ ವೇಷಗಳ ಮಿಶ್ರ ಕಲ್ಪನೆ. ರಾಜ ಕಿರೀಟಕ್ಕೆ ಹಿಂಬದಿಯಲ್ಲಿ ಒಂದು ಚಕ್ರ ಯಾ ಅಟ್ಟೆಯನ್ನು ಕಟ್ಟುವರು. ಮುಖವನ್ನು ತುಸು ಉಗ್ರವಾಗಿ ಚಿತ್ರಿಸುವರು. ಉದಾ: ಹಿರಣ್ಯಕಶ್ಯಪ.

ಅರೆಮದ್ದಲೆ (ತೆ.) : ಮದ್ದಲೆ ಮತ್ತು ಮೃದಂಗಗಳ ಸಂಕರದಿಂದಾದ ವಾದ್ಯ. ಅರೆಮೃದಂಗ. ಇದರ ಕಟ್ಟುಕವಳಕ್ಕೂ, ಕರ್ಣಕ್ಕೂ ನಡುವೆ ಇರುವ ಅಂತರವು, ಮೃದಂಗದಲ್ಲಿರುವುದಕ್ಕಿಂತ ಹೆಚ್ಚು. ಮದ್ದಲೆಯದಕ್ಕಿಂತ ಕಡಿಮೆ ಇರುತ್ತದೆ. ಕರ್ಣವು ಮದ್ದಲೆಯ ಕರ್ಣಕ್ಕಿಂತ ತುಸು ದಪ್ಪವಾಗಿರುತ್ತದೆ.

ಅರೆಮೃದಂಗ = ನೋಡಿ : **ಅರೆಮದ್ದಲೆ.**

ಅರ್ಥ: 1. ಪ್ರಸಂಗದ ಪದ್ಯಗಳನ್ನು ಆಧರಿಸಿ ಪಾತ್ರಧಾರಿಯು ಆಡುವ ಮಾತುಗಳು. ಪದ್ಯಗಳ ಅರ್ಥ ನಿರ್ವಹಣೆ. ಕರಾವಳಿಯಲ್ಲಿ ಇದು ಸ್ವತಂತ್ರ ಆಶುಭಾಷಣವಾಗಿದ್ದರೆ, ಗಟ್ಟದಕೋರೆ, ಮೂಡಲ ಪಾಯಗಳಲ್ಲಿ ಮೊದಲೇ ಬರೆದಿಡಲ್ಪಟ್ಟುದನ್ನು ಪಾತ್ರಧಾರಿ ಬಾಯಿಪಾಠ ಮಾಡಿ ಒಪ್ಪಿಸುವುದಾಗಿರುತ್ತದೆ.

ಕರಾವಳಿಯ ತಿಟ್ಟುಗಳಲ್ಲಿ ಆಟಗಳಲ್ಲೂ, ತಾಳಮದ್ದಲೆ ಪ್ರಕಾರದಲ್ಲೂ ಇದು ತುಂಬ ವಿಸ್ತಾರವಾಗಿಯೂ ಪ್ರೌಢವಾಗಿಯೂ ಬೆಳೆದಿದೆ. ಪದ್ಯದ ಆಧಾರವೆಂಬುದು ತುಂಬ ಸ್ಥೂಲವಾಗಿ, ಸಡಿಲಾಗಿ ಮಾತ್ರ ಇರುತ್ತದೆ.

ಮೂಲತಃ, ಪ್ರಸಂಗದ ಪದ್ಯಗಳಿಗೆ, ಒಬ್ಬನೇ ನಿರೂಪಕನು ಪ್ರವಚನಾತ್ಮಕವಾಗಿ ಅರ್ಥವಿವರಣೆ ಮಾಡುತ್ತಿದ್ದಿರಬೇಕು. ಹಾಗಾಗಿ ಈ ಪದ ಬಳಕೆಗೆ ಬಂದಿರಬಹುದು.

2. ತಾಳಮದ್ದಲೆಯ ಪಾತ್ರ. ಉದಾ: ''ನಿಮಗಿಂದು ಯಾವ ಅರ್ಥ?'' ''ನೀವು ಭೀಷ್ಮನ ಅರ್ಥ ಹೇಳಿರಿ''. ನೋಡಿ: **ಅರ್ಥಗಾರಿಕೆ.**

ಅರ್ಥಗಾರ (ಉ.) : ತಾಳಮದ್ದಲೆಯ ಪಾತ್ರಧಾರಿ. ಅರ್ಥಧಾರಿ ಎಂಬುದಕ್ಕೆ ಪ್ರಾದೇಶಿಕ ನಾಮಾಂತರ.

ಅರ್ಥಗಾರಿಕೆ / ಅರ್ಥದಾರಿಕೆ : ಆಟ, ತಾಳಮದ್ದಲೆಗಳಲ್ಲಿ ಪ್ರಸಂಗದ ಪದ್ಯಗಳಿಗೆ ಅರ್ಥ ಹೇಳುವಿಕೆ, ಅರ್ಥನಿರ್ವಹಣೆ ಮತ್ತು ಅದರ ಕಲೆಗಾರಿಕೆ, ತಂತ್ರ, ವಿಧಾನ. ಅರ್ಥ ಹೇಳುವ ಕಲೆ. ಇದರ ಮೂಲಕ ಕಥೆಯ, ಪಾತ್ರದ, ಭಾವದ ನಿರ್ವಹಣೆ, ಅಭಿವ್ಯಕ್ತಿ ಆಗುತ್ತದೆ. ಪ್ರಸಂಗದ ಪದ್ಯವು ಸೂಚಿಸುವ ಸನ್ನಿವೇಶ, ಭಾವಗಳನ್ನು ವಿಸ್ತರಿಸಿ ಪ್ರತಿಭೆ, ಪಾಂಡಿತ್ಯ, ಕಲ್ಪನೆಗಳಿಂದ ಪರಿಪುಷ್ಟಗೊಳಿಸಿ ರಂಗದ ನಿಯಮಗಳಿಗೆ, ರಂಗದ ಆವಶ್ಯಕತೆ ಮತ್ತು ರಂಗ ಧರ್ಮಕ್ಕೆ ಅನುಗುಣವಾಗಿ ನಿರ್ವಹಿಸುವುದು ಅರ್ಥಗಾರಿಕೆಯ ಮುಖ್ಯ ಜೀವಾಳ. ಅರ್ಥಗಾರಿಕೆಯು, ಕಥಾಸಂದರ್ಭ, ಪಾತ್ರಸ್ವಭಾವ, ಸ್ಥಾನಮಾನ, ವಯಸ್ಸು, ಪಾತ್ರಜಾತಿಗಳನ್ನು ಹೊಂದಿಕೊಂಡು ಇರಬೇಕು. ಅರ್ಥದ ಗಾತ್ರ, ವೇಗ, ರೀತಿಗಳಿಗೂ ಆಟ ನಡೆಯುವ ಕಾಲ ಅಥವಾ ಜಾವ (ಮೊದಲ ಜಾವದಿಂದ ಬೆಳಗಿನ ಕಾಲದವರೆಗಿನ ಕಾಲವಿಭಾಗ) ಗಳನ್ನೂ ಹೊಂದಿಕೊಂಡಿರುತ್ತದೆ. ಕಾಲಪ್ರಕಾರ ಉತ್ತರೋತ್ತರವಾಗಿ ವೇಗವು ಹೆಚ್ಚು.

ಅರ್ಥಗಾರಿಕೆಯು ಸಾಹಿತ್ಯ ಮತ್ತು ನಾಟಕೀಯ ಕೌಶಲದ ಎಲ್ಲ ಒಳ್ಳೆಯ ಗುಣಗಳನ್ನು ಅಪೇಕ್ಷಿಸುತ್ತದೆ. ಪರಿಣಾಮಕಾರಿಯಾದ ಕಂಠ, ಭಾವಪ್ರಜ್ಞೆ, ಪ್ರಸಂಗದ ಅನುಭವ, ಭಾಷೆ, ಅಚ್ಚುಕಟ್ಟುತನಗಳು ಮುಖ್ಯ ಅಪೇಕ್ಷಣೀಯ ಗುಣಗಳು. ಪೀಠಿಕೆ ಎಂಬ ಪಾತ್ರ ಪ್ರವೇಶದ ಮಾತುಗಳು, ಪದ್ಯದ ಅರ್ಥ, ಸಂವಾದ ಇವು ಅರ್ಥಗಾರಿಕೆಯ ಮುಖ್ಯ ಹಂತಗಳು. ಎತ್ತುಗಡೆ ಅಥವಾ ಸಂದರ್ಭ ಎಂಬುದು ಸಹಕಲಾವಿದನಿಗೆ ಅಥವಾ ಹಾಡಿಗೆ ಕೊಡುವ ಸಂದರ್ಭ ಅಥವಾ ಕೊಂಡಿಯಂತಿರುವುದು.

ಅರ್ಥಗಾರಿಕೆಯು ಕಾಲಕಾಲಕ್ಕೆ ಬದಲಾಗುತ್ತ ಬಂದಿದ್ದು, ಇಡಿಯ ಪದ್ಯದ ಅರ್ಥವನ್ನು ಒಮ್ಮೆಗೇ ಹೇಳಿ ಮುಗಿಸುವುದು ಹಳೆಯ ವಿಧಾನ. ಈಗ ಅಲ್ಲಲ್ಲಿ ಚಿಕ್ಕ ಪ್ರಶ್ನೆ, ಸಂವಾದಗಳ ಮೂಲಕ ಪಾತ್ರಧಾರಿಗಳು ಕೂಡಿಕೊಂಡು ಅರ್ಥ ಹೇಳುವ ಕ್ರಮ ಬಳಕೆಗೆ ಬಂದಿದೆ.

ಅರ್ಥಗಾರಿಕೆಗೆ ಪ್ರಸಂಗದ ಪದ್ಯಗಳು ಮುಖ್ಯ ಆಧಾರ. ಅದರ ಕತೆ, ಪ್ರಸಂಗಕ್ಕೆ ಮೂಲವಾದ ಕಾವ್ಯ ಇವು ಎರಡನೆಯ ಆಧಾರಗಳು. ಪದ್ಯದ ಆಧಾರ ಸ್ಥೂಲವಾಗಿ ಮಾತ್ರ ಇರುತ್ತದೆ. ಅರ್ಥಗಾರಿಕೆ ಅದನ್ನು 'ಮೀರಿ' ಬೆಳೆಯುತ್ತದೆ. ಪ್ರಸಂಗಕ್ಕೆ ಹೊಂದಿಕೆಯಾಗುವಂತೆ ಪಾತ್ರಧಾರಿಯು ತನ್ನ ಇತರ ಅನುಭವಗಳನ್ನು, ಸಂಗ್ರಹ, ಕಲ್ಪನೆ, ಪ್ರೇರಣೆಗಳನ್ನು ಹೊಂದಿಸಬೇಕು. ಚಾರಕ, ಸಖಿ, ಹಾಸ್ಯಪಾತ್ರಗಳು – ಮೊದಲಾದುವುಗಳಿಗೆ ಎಷ್ಟೋ ಬಾರಿ ಪದ್ಯಗಳೇ ಇರುವುದಿಲ್ಲ. ಇಲ್ಲಿ ಸನ್ನಿವೇಶವೇ ಆಧಾರವಾಗಿರುತ್ತದೆ. ಕಿರಾತ ಪಾತ್ರಗಳಿಗೆ ಸ್ವಲ್ಪ ಮೋಡಿ (ಗ್ರಾಮ್ಯ) ಭಾಷೆಯನ್ನು ಬಳಸುವ ರೂಢಿಯಿದೆ.

ಅರ್ಥಗಾರಿಕೆಯೆಂದರೆ, ಸಾಹಿತ್ಯ ವಿಮರ್ಶೆಯಂತೆ, ಕೃತಿಗೆ ನಾವು ಮಾಡುವ ಅಥವಾ ಕೊಡುವ ಅರ್ಥವೂ ಹೌದು. ಸಾಮಯಿಕ ಪ್ರೇರಣೆಗಳನ್ನೂ, ವಿಚಾರಗಳನ್ನೂ ಅದು ಒಳಗೊಳ್ಳುತ್ತದೆ. ಪ್ರಸಂಗ ಪದ್ಯಗಳು ಅರ್ಥವಾಗುವ ಪ್ರಕ್ರಿಯೆ ಸೂಕ್ಷ್ಮವೂ, ಗಹನವೂ ಆಗಿದ್ದು, ಯಕ್ಷಗಾನದ ಅರ್ಥಗಾರಿಕೆಯೆಂಬುದು ಕನ್ನಡ ಭಾಷೆಯು ಹೆಮ್ಮೆಪಟ್ಟುಕೊಳ್ಳಬಹುದಾದ ವಾಙ್ಮಯ ಸಿದ್ಧಿಗಳಲ್ಲೊಂದಾಗಿದೆ.

ಅರ್ಥದಾರಿ: ತಾಳಮದ್ದಲೆಯ ಪಾತ್ರಧಾರಿ. 'ಅರ್ಥದಾರಿ' ಎಂಬುದು 'ವೇಷಧಾರಿ' ಎಂಬುದರಿಂದ ಅಥವಾ ತುಳು 'ಅರ್ಥದಾರ್' (ಅರ್ಥದವರು) ಎಂಬುದರಿಂದ ಬಂದಿರಬಹುದು.

ಅರ್ಥದಾರಿಕೆ = ನೋಡಿ : ಅರ್ಥಗಾರಿಕೆ.

ಅರ್ಥ ಮಾತಾಡುವುದು: ತಾಳಮದ್ದಲೆಯ ಪಾತ್ರವಾಗಿ ಮಾತಾಡುವಿಕೆ. ತಾನೇ ಸ್ವತಃ ಪಾತ್ರವಾಗಿ

ಮಾತಾಡುವುದರಿಂದ ಅರ್ಥ ಮಾತಾಡುವುದು ಎಂಬುದಕ್ಕೆ ಔಚಿತ್ಯ. ಅರ್ಥ ಹೇಳುವುದು ಎಂಬ ಪ್ರಯೋಗವು ಸಹ ಇದ್ದರೂ, ಇದೇ ಹೆಚ್ಚು ಉಚಿತ.

ಅರ್ಥ ಹೇಳುವುದು: ನೋಡಿ: **ಅರ್ಥ ಮಾತಾಡುವುದು.**

ಅರ್ಥಕಳ್ಪು (ತೆ./ಬ.): ಅರ್ಥ ಕಡಿತ. ಕಲಾವಿದ ಅಥವಾ ಸಿಬಂದಿಯ ಸಂಬಳದಲ್ಲಿ, ತಪ್ಪಿಗಾಗಿ ವಿಧಿಸಲಾಗುವ ಕಡಿತದ ಒಂದು ಬಗೆ. ಚಿಕ್ಕ ತಪ್ಪುಗಳಿಗೆ ಅರ್ಥಕಳ್ಪು. ಒಬ್ಬ ವೇಷಧಾರಿಯು ಮಾಡಬೇಕಾದ ಎರಡು ವೇಷಗಳಲ್ಲಿ ಒಂದನ್ನು ಮಾತ್ರ ಮಾಡಿದರೆ ಅರ್ಥಕಳ್ಪು. ಬಣ್ಣಗಾರಿಕೆಯಲ್ಲಿ ರಂಗದ ಕೆಲಸದಲ್ಲಿ ತಪ್ಪಿದರೂ ಚಿಕ್ಕ ಪ್ರಮಾಣದ ಕಳ್ಪು ವಿಧಿಸಬಹುದು. ನೋಡಿ: **ಕಳೆಯುವುದು. ಕಳ್ಪು, ತುಷ್ಪಿ, ಉಳಿ.**

ಅರ್ಧಗುಂಪು (ಬ.): ಮದ್ದಲೆಯಲ್ಲಿ ಬಾರಿಸುವ ಒಂದು ನಾದ ವಿಶೇಷ. ಗುಂಪು ಎಂಬ ನಾದದ ಚಿಕ್ಕರೂಪ. 'ತೋಂ'ಕಾರದ ಸಣ್ಣರೂಪ. ನೋಡಿ: **ಗುಂಪು.**

ಅರ್ಧಚಂದ್ರಾಕೃತಿನಾಮ: 1. ಬಣ್ಣದ ವೇಷಗಳ ಹಣೆಯಲ್ಲಿ ಬರೆಯುವ ಅರ್ಧಚಂದ್ರಾಕೃತಿಯ ನಾಮ. ನೋಡಿ: **ಗೀರುಗಂಧದ ಚುಟ್ಟಿ.**

2. ವೇಷಗಳ ಹಣೆಯಲ್ಲಿ ಬಿಳಿ ಅಥವಾ ಕೆಂಪು ಬಣ್ಣದಲ್ಲಿ ಬರೆಯುವ ಅರ್ಧಚಂದ್ರಾಕೃತಿ ನಾಮ. ಉದಾ: ದ್ರೋಣನ ಅಡ್ಡನಾಮ.

3. ಸ್ತ್ರೀವೇಷದ ಅಡ್ಡ ಕುಂಕುಮ ನಾಮ.

ಅರ್ಧಚಂದ್ರಾಕೃತಿ ಬಣ್ಣ (ತೆ.): ಬಣ್ಣದ ವೇಷಗಳಲ್ಲಿ ಮುಖವರ್ಣಿಕೆಗನುಗುಣವಾಗಿ ಮಾಡಿದ ಒಂದು ವಿಭಾಗ. (ಏಣಿಬಣ್ಣ, ಕತ್ತಿಬಣ್ಣ, ಕತ್ರಿ ಬಣ್ಣ, ಚೇಳುಬಣ್ಣ, ಸುಳಿ ಬಣ್ಣ ಇತರ ವಿಭಾಗಗಳು. ಆಯಾ ಪದ ನೋಡಿ) ಹಣೆಯಲ್ಲಿ ಅರ್ಧಚಂದ್ರಾಕೃತಿ ಬಣ್ಣಗಾರಿಕೆಗಳಿರುತ್ತವೆ. ಬಲಿ, ತಾರಕಾಸುರ, ಶುಂಭ– ಇವು ಅರ್ಧಚಂದ್ರಾಕೃತಿ ಬಣ್ಣಗಳು.

ಅರ್ಧನಾರಿ: ಸಭಾಲಕ್ಷಣ ಪೂರ್ವರಂಗ ಪ್ರಯೋಗದಲ್ಲಿ ಬರುವ ಒಂದು ವೇಷ. ಇದು ಚಂದಭಾಮಾ ಸ್ತ್ರೀವೇಷಗಳ ಅನಂತರ ಬರುತ್ತದೆ. ಇದರ ಪ್ರಯೋಗದ ಕುರಿತು ಎರಡು ಅಭಿಪ್ರಾಯಗಳಿವೆ:

1. ಇತ್ತೀಚೆಗಿನ ವರೆಗೆ ಪ್ರಯೋಗದಲ್ಲಿದ್ದ ಕ್ರಮದಂತೆ, ಅರ್ಧನಾರಿ, ಎಂದರೆ ಸ್ತ್ರೀವೇಷ. ಪಾರ್ವತಿ ವೇಷ. ಅರ್ಧನಾರಿ ಸನ್ನಿವೇಶದಲ್ಲಿ ಈಶ್ವರನೂ, ಪಾರ್ವತಿಯೂ ಒಬ್ಬರು ಇನ್ನೊಬ್ಬರ ವಿರಹದಿಂದ, ಹುಡುಕುವುದಿದೆ. ರಂಗದಲ್ಲಿ ಕೋಡಂಗಿ ಅಥವಾ ಮಾಧವರಾಯ (?)ನೆಂಬ ಹಾಸ್ಯವೇಷದೊಂದಿಗೆ ವಿಚಾರಿಸುತ್ತಾರೆ. ಪರ್ಯಾಯಕ್ರಮದಿಂದ ಎರಡೂ ವೇಷಗಳು ರಂಗಕ್ಕೆ ಬಂದು ನಿರ್ಗಮಿಸುತ್ತವೆ. ಕೊನೆಗೆ ಎರಡೂ ರಂಗಕ್ಕೆ ಬಂದು ನಿರ್ಗಮಿಸಬೇಕು. (ಸಭಾಲಕ್ಷಣ: ಪಾವಂಜೆ ಗುರುರಾವ್ ಪ್ರತಿ. ಸಭಾಲಕ್ಷಣ. ದಿ। ಕುಕ್ಕಿಲ ಕೃಷ್ಣಭಟ್ಟ ಸಂಪಾದಿತ ಪಾರ್ತಿಸುಬ್ಬನ ಯಕ್ಷಗಾನಗಳು: 1975).

2. ಇನ್ನೊಂದು ಅಭಿಪ್ರಾಯದಂತೆ ಈ ಶತಮಾನದ ಆರಂಭದ ವರೆಗೂ ಅರ್ಧನಾರಿ ಎಂಬುದು ಅರ್ಧನಾರೀಶ್ವರ ವೇಷ. ಶಿವಪಾರ್ವತಿ ವೇಷಗಳ ಜೋಡಣೆ. ಒಂದು ಬದಿಗೆ ಮುಡಿ, ಮೀಸೆ, ದಗಲೆ, ಕಚ್ಚೆ ಇನ್ನೊಂದು ಭಾಗಕ್ಕೆ ತುರುಬು, ಮೂಗುತಿ, ದಗಲೆ, ಸೀರೆ– ಹೀಗೆ ಜೋಡಿಸಿ ತಯಾರಿಸುವ ವೇಷ. ಪಾರ್ವತಿಯ ಪಾತ್ರದ ಪದ್ಯಗಳಿಗೆ ಒಂದು ಭಾಗವನ್ನು ತೋರಿಸಿ ಕುಣಿಯುವುದು, ಶಿವನ ಪಾತ್ರದ ಪದ್ಯಗಳಿಗೆ ತಿರುಗಿ ಮತ್ತೊಂದು ಭಾಗ ತೋರಿಸಿ ಕುಣಿಯುವುದು ತೆರೆ ಹಿಡಿದುಕೊಂಡೇ ಇರಬೇಕು. ಈ ಕ್ರಮವು ಬದಲಾಗಿ, ಎರಡು ಪ್ರತ್ಯೇಕ ವೇಷಗಳು ಬಳಕೆಗೆ ಬಂದುವು. (ಮುಳಿಯ ಮಹಾಬಲ ಭಟ್ಟರು ನೀಡಿದ ಮಾಹಿತಿ: ನವೆಂಬರ 1991.)

ಅರ್ಧಪೆಟ್ಟು: ಚೆಂಡೆ, ಮದ್ದಲೆಗಳ ಬಾರಿಸುವಿಕೆಯ ಪೆಟ್ಟಿನ ಒಂದು ವಿಧ. ಇಡಿ ಪೆಟ್ಟಿನ ಅರ್ಧದಷ್ಟು ನಾದವೆಂದರ್ಥ. ಅರೆಪೆಟ್ಟು.

ಅರ್ಧಮುಕ್ತಾಯ: ಪದ್ಯದ ಕೊನೆಯಲ್ಲಿ ಬಾರಿಸುವ ಮುಕ್ತಾಯವನ್ನು ಹ್ರಸ್ವಗೊಳಿಸಿ, ಅರ್ಧ ಅಥವಾ ಅಂಶತಃ ಬಾರಿಸುವುದು. ಉದಾ: ಏಕತಾಳದ

ಮುಕ್ತಾಯ: ತದ್ದಿಂದತ್ತಾ।(1) ಧಿಂದತ್ತಾ।(2)
ದದಿಗಿಣತೊ।(3) ದದಿಗಿಣತೊ।(4) ದದಿಗಿಣ ತೊಂ।(5)–

ಇದರಲ್ಲಿ– 3, 4, 5ನ್ನು ಯಾ 4, 5ನ್ನು ಮಾತ್ರ ಬಾರಿಸುವುದು. ಇದೊಂದು ಹೊಂದಾಣಿಕೆ.

ಅರ್ಧವೀಳ್ಯ: ವೀಳ್ಯವೆಂದರೆ ಆಟಕ್ಕೆ ನೀಡುವ ಸಂಭಾವನೆ, ನಿಗದಿತ ಮೊತ್ತ. ನೋಡಿ: ವೀಳ್ಯ ಅದರ ಅರ್ಧದಷ್ಟನ್ನು ಮಾತ್ರ ನೀಡುವುದು ಅರ್ಧವೀಳ್ಯ. ಮಳೆ ಮೊದಲಾದ ಪ್ರತಿಬಂಧಕಗಳಿಂದ ಆಟಕ್ಕೆ ಅಡ್ಡಿಯಾದರೆ, ಅಂದರೆ, ಸಭಾಲಕ್ಷಣ ಮಾತ್ರ ಪ್ರದರ್ಶನವಾದರೆ, ಅರ್ಧವೀಳ್ಯ. ಪ್ರಸಂಗದ ಮೊದಲ ದೃಶ್ಯ, ಒಡ್ಡೋಲಗ ಆರಂಭವಾದರೆ ಆಟ ಆರಂಭವಾದಂತೆ. ಆಗ ಇಡಿ ವೀಳ್ಯ

ಕೊಡಬೇಕು. ಸಭಾಲಕ್ಷಣವನ್ನು ಆರಂಭಿಸಲಾಗದಷ್ಟು ಅಡ್ಡಿ ಉಂಟಾದರೆ, ಪಡಿ ಮಾತ್ರ.

ಜೋಡಾಟದಲ್ಲಿ ಸೋತಮೇಳಕ್ಕೆ ಅರ್ಧ ವೀಳ್ಯವೆಂಬ ನಿಯಮವು ಕೆಲವು ಕಾಲ ಜಾರಿಯಲ್ಲಿತ್ತು.

ಅಲಂಕಾರವೇಷ: ಜನಪದ ಪ್ರಶಂಸಾತ್ಮಕ ಶಬ್ದ, ಪಾರಿಭಾಷಿಕವಲ್ಲ. ಬಣ್ಣ, ಹಾಸ್ಯ ಪಾತ್ರಗಳನ್ನುಳಿದು, ಬಾಕಿವೇಷಗಳ ಕುರಿತು ಬಳಕೆ. ಸೊಗಸಾದ ಮುಖವರ್ಣಿಕೆ. ಅಚ್ಚುಕಟ್ಟಾದ ವೇಷ ಧರಿಸುವಿಕೆ ಇದ್ದಾಗ ಹೇಳುವ ಮಾತು.

ಅಶರೀರವಾಣಿ: ಕಥಾ ಸಂದರ್ಭದಲ್ಲಿ ಅಶರೀರ ವಾಣಿಯ ಸನ್ನಿವೇಶ ಇದ್ದಾಗ, (ಉದಾ– ಭೀಷ್ಮ ವಿಜಯದಲ್ಲಿ ಭೀಷ್ಮ – ಪರಶುರಾಮರ ಯುದ್ಧ ಸಂದರ್ಭ) ಚೌಕಿಯಲ್ಲಿ, ಭಾಗವತರ ಹಿಂಬದಿಯಲ್ಲಿ ನಿಂತು (ಇತರರು, ಸಾಮಾನ್ಯವಾಗಿ ಹಾಸ್ಯಗಾರ) ಹೇಳುವ ಮಾತುಗಳು.

ಅಶ್ವತ್ಥನ ಎಲೆ (ಉ./ಬ.): 1. ಬಣ್ಣದ ವೇಷದ ಮುಖ ವರ್ಣಿಕೆಯಲ್ಲಿ ಬರುವ ಒಂದು ಬಗೆಯ ಸುಳಿ.
2. ವೇಷದ ಹಣೆಯಲ್ಲಿ ಬಿಡಿಸುವ ಒಂದು ವಿನ್ಯಾಸ. ನೋಡಿ: **ಆಟೀನ್.**

ಅಶ್ವಮೇಧದ ಕುದುರೆ: ಪಾಂಡವಾಶ್ವಮೇಧ, ರಾಮಾಶ್ವಮೇಧ ಮೊದಲಾದ ಪ್ರಸಂಗಗಳಲ್ಲಿ ಬರುವ ವೇಷ. ಇದಕ್ಕೆ ಮಾತು ಇಲ್ಲ. ಇಬ್ಬರು ಹುಡುಗರು, ಒಬ್ಬನು ನೇರ, ಮತ್ತೊಬ್ಬನು ಅವನ ಬೆನ್ನಿಗೆ ತಲೆಕೊಟ್ಟು ನಿಲ್ಲುವರು. ಅವರಿಬ್ಬರ ಮೇಲೆ ತೆರೆಸೀರೆ ಅಥವಾ ವಲ್ಲಿಯನ್ನು ಹೊದೆಸಿ, ನೇರ ನಿಂತವನ ಮುಖಕ್ಕೆ ಕುದುರೆ ಮುಖವಾಡ ಇಡುವರು. ಕುದುರೆ ದೂತನೆಂಬ ಪಾತ್ರವು (ಹಾಸ್ಯಗಾರ) ಇದನ್ನು ಬೇರೆ ಬೇರೆ ಭಾಷೆಯಲ್ಲಿ ಮಾತಾಡಿಸಿ, ಆಚೀಚೆ ನಡೆಸುವುದು, ಸಂಜ್ಞೆ ಮಾಡಿಸುವುದು ಇರುತ್ತವೆ. ನೋಡಿ: **ಕುದುರೆ ದೂತ.**

ಅಷ್ಟತಾಳ: ತಾಳಗಳಲ್ಲೊಂದು. ಬಡಗಿನಲ್ಲಿ ಐದು ಪೆಟ್ಟುಗಳಲ್ಲೂ, ತೆಂಕಿನಲ್ಲಿ ನಾಲ್ಕು ಪೆಟ್ಟುಗಳಲ್ಲೂ (ತಾಳ, ಜಾಗಟೆಗಳಲ್ಲಿ) ಬಾರಿಸಿ ತೋರಿಸುವ ಕ್ರಮ.
ತಧೀಂ। ತಕಧೀಂ॥ ತಕಿಟ। ತಕಧಿಂ– ಇವು ಇದರ ಮೂಲ ಪೆಟ್ಟುಗಳು. ತ್ರಿವುಡೆಯನ್ನು ಹೋಲುತ್ತದೆ.

ಇದರ ಬಿಡ್ತಿಗೆ (ತೆಂಕುತಿಟ್ಟಿನಲ್ಲಿ ಮಾತ್ರ) ಮೂರು ಪೆಟ್ಟುಗಳ ಖಂಡಗಳು.
ಧೀತರಿಕಿಟ। ಕಿಟತಕತಾಂ– ಮೂರು ಬಾರಿ
ಧೀತರಿಕಿಟ ಕಿಟ್ತಕ ತರಿಕಿಟ। ತಾತರಿಕಿಟಕಿಟ್ತಕ ತರಿಕಿಟ
ದಿಧೊಂ। ದತ್ತಾಂ॥ ಧೀಂತ ದದಿಗಿಣ। ತೊ।
ಮುಕ್ತಾಯ:
ತೆಂಕು: ಧಿನ ಧಿನ। ದದಿಂತ್ತಾ। ಧೀಂತ। ದದಿಗಿಣ। ತೋ.
ಬಡಗು: ತಕ್ಕು। ತಾಕಿಟ। ತಕಿಟ। ಕಿಟತಕ। ದದಿನ್ನಾಂತಾ।
ತೃತ। ದದಿಗಿಣ। ತೊ।
ಅಷ್ಟತಾಳಕ್ಕೆ **ಉಡಾಪೆ** ಎಂಬ ಗತಿ ಭೇದವೂ, **ತ್ವರಿತ ಅಷ್ಟ** ಯಾನೆ **ಭೈರವಿ ಅಷ್ಟ**ವೆಂಬ ಪ್ರಭೇದಗಳೂ ಇವೆ. (ಆಯಾ ಶಬ್ದಗಳನ್ನು ನೋಡಿ.)

ಅಷ್ಟತಾಳದ ಪದ್ಯಗಳನ್ನು, ಅರ್ಧದಿಂದ (ಬಡಗುತಿಟ್ಟಿನಲ್ಲಿ) ಅಥವಾ ಕೊನೆಯಲ್ಲಿ (ತೆಂಕುತಿಟ್ಟಿನಲ್ಲಿ) ಉಡಾಪೆ ಗತಿಗೆ ಕೊಂಡು ಹೋಗುವ ಕ್ರಮವಿದೆ. ಕೆಲವೊಮ್ಮೆ ಉಡಾಪೆಯಿಂದ 'ತಿತ್ತಿತ್ತೈ' ಎಂಬ ಕೋರೆತಾಳಕ್ಕೂ ಬದಲಿಸುವುದಿದೆ. ಉಡಾಪೆಯಲ್ಲಿ ಹೇಳಿ, ಪುನಃ ಮೊದಲಿನ ಅಷ್ಟತಾಳದಲ್ಲೆ ಹೇಳಿ ಮುಕ್ತಾಯ ಮಾಡುವುದೂ ಇದೆ. ಈ ಗತಿ ಭೇದಗಳು ಭಾಗವತನ ಮನೋಧರ್ಮಕ್ಕೆ ಸಂಬಂಧಿಸಿದ ಐಚ್ಛಿಕಗಳು. ಗಂಭೀರ ಸನ್ನಿವೇಶಗಳಲ್ಲಿ, ದುಃಖ ಸಂದರ್ಭಗಳಲ್ಲಿ ಗತಿಬದಲಾವಣೆ ಮಾಡಬಾರದೆಂದು ಸಂಪ್ರದಾಯ.

ಅಷ್ಟಬಾರ: ಎಂಟು ಬಾರಗಳು. ಬಾರವೆಂದರೆ ಚರ್ಮದ ಹಗ್ಗ ಅಥವಾ ಪಟ್ಟಿ. ಮದ್ದಲೆಗೆ ಚರ್ಮವನ್ನು ಕೂರಿಸಲು, ಎಡ, ಬಲ ಜೀವ ಕವಳ ಚರ್ಮಗಳಿಗೆ ತೂತುಗಳ ಮೂಲಕ ಸುರಿಯುವ ಬಾರಗಳು ಎಂಟು. ಚರ್ಮಗಳಿಗೆ ಹದಿನಾರು ತೂತು ಕೊರೆದು ಈ ಎಂಟು ಬಾರಗಳನ್ನು ಸಿಕ್ಕಿಸಿ ಎಳೆಯುತ್ತಾರೆ. ಎಂಟು ಹಗ್ಗಗಳ ಎರಡೂ ತುದಿಗಳನ್ನು ತುರುಕಿಸುವುದರಿಂದ, ಹದಿನಾರು ತೂತುಗಳಿಗೆ ಎಂಟು ಬಾರಗಳು. ಚರ್ಮಗಳು ಸರಿಯಾಗಿ ಕುಳಿತ ಅನಂತರ ಇವುಗಳನ್ನು ಎಳೆದು ತೆಗೆದು, ನಿಜ ಬಾರಗಳನ್ನು ತುರುಕಿಸಿ ಕಟ್ಟುವುದು. ಚೆಂಡೆ ಮುಚ್ಚಿಗೆಗೆ ಎಂಟು ಬಾರಗಳ ಬದಲು, ಆರೇ ಬಾರಗಳು. ಕಾರಣ ಅದರ 'ಕಣ್ಣು' (ತೂತು)ಗಳು ಹನ್ನೆರಡು ಮಾತ್ರ. ನೋಡಿ: **ಮುಚ್ಚಿಗೆ.**

ಆ

ಆಂಧ್ರ ಯಕ್ಷಗಾನ: 1. ಆಂಧ್ರದ ಯಕ್ಷಗಾನದ ಅಧ್ಯಯನವು ನಮ್ಮ ಯಕ್ಷಗಾನದ ತಿಳುವಳಿಕೆಗೆ ಅಗತ್ಯ. ತೆಲುಗಿನಲ್ಲಿ ಮೂಲತಃ 'ಯಕ್ಷಗಾನ' ವೆಂಬ ಪದಕ್ಕೆ ಗೀತಪ್ರಬಂಧವೆಂದು ಅರ್ಥ, ನಾವು ಹೇಳುವ ''ಯಕ್ಷಗಾನ ಪ್ರಸಂಗ'' ಅಥವಾ ''ಯಕ್ಷಗಾನ ಕಾವ್ಯ'' ಎಂಬಂತೆ. ಕನ್ನಡದಲ್ಲೂ ಪ್ರಾಯಃ ಮೂಲ ಶಬ್ದಾರ್ಥವು ಪ್ರಬಂಧಪರವೇ ಆಗಿತ್ತು. ಈಗ ಆಂಧ್ರದಲ್ಲೂ, ನಮ್ಮಲ್ಲಿಯಂತೆ, ಗೀತಪ್ರಬಂಧಕ್ಕೂ ಅದರ ಪ್ರದರ್ಶನಕ್ಕೂ ಯಕ್ಷಗಾನವೆಂದು ಕರೆಯುವುದು ಈಚೆಗೆ ರೂಢಿಗೆ ಬಂದಿದೆ. ಯಕ್ಷಗಾನ ಶಬ್ದವು ಆಂಧ್ರದ ಛಂದೋಗ್ರಂಥಗಳಲ್ಲಿ ಹದಿಮೂರನೇ ಶತಮಾನ ದಿಂದಲೂ, ಶಾಸನಗಳಲ್ಲಿ ಹದಿನಾಲ್ಕನೇ ಶತಮಾನ ದಿಂದಲೂ ಉಕ್ತವಾಗಿದೆ.

ಆಂಧ್ರದಲ್ಲಿ ಯಕ್ಷಗಾನವು ದೇವಾಲಯಗಳಲ್ಲಿ ಹಾಡುವ ಪ್ರಬಂಧವಾಗಿ ಮೊದಲು ಬಳಕೆಗೆ ಬಂದು, ಅನಂತರ ರಂಗ ಪ್ರದರ್ಶನಕ್ಕೆ ಅಳವಟ್ಟಿತೆನ್ನುವರು. ಸದ್ಯ, ಕೂಚಿಪುಡಿ, ಕೇಳಿಕೆ, ಭಾಗವತ ಮೇಳ, ಕಲಾಪ, ಚಿಂದು, ವೀಥಿ ನಾಟಕ ಇವುಗಳಿಗೆಲ್ಲ ಯಕ್ಷಗಾನವೆನ್ನುವರು. ಈ ಪ್ರಕಾರ ಗಳೊಳಗೆ ಹಲವು ಸಮಾನ ಅಂಶಗಳಿದ್ದು, ಆ ಪೈಕಿ ಚಿಂದು ಯಕ್ಷಗಾನವೆಂಬುದು ನಮ್ಮ ಬಡಗು– ಉ. ಕ. ಯಕ್ಷಗಾನಗಳೊಂದಿಗೆ ಹತ್ತಿರದ ಸಾಮ್ಯ ಹೊಂದಿದೆ. 'ಚಿಂದು'ವು ಪ್ರಾಯಃ ಅಲ್ಲಿಯ ಸಾಂಪ್ರದಾಯಿಕ ರಂಗಭೂಮಿಯ ಹಳೆಯ ಅಂಶಗಳನ್ನು ಸಾಕಷ್ಟು ಹೊಂದಿದೆ.

ಕನ್ನಡದ ಯಕ್ಷಗಾನ ರಚನೆಗಳಿಗೂ, ರಂಗ ಪ್ರಯೋಗಕ್ಕೂ ಆಂಧ್ರವೇ ಮೂಲ ಪ್ರೇರಕವೆಂದು ದಿ। ಕುಕ್ಕಿಲ ಕೃಷ್ಣಭಟ್ಟರು ಸವಿಮರ್ಶವಾಗಿ ಸಾಧಿಸಿ ದ್ದಾರೆ (ರಂಗವೈಖರಿ: 1981: ಕುಕ್ಕಿಲರ ಲೇಖನ) ಯಕ್ಷಗಾನವೆಂಬ ಶಬ್ದವು ಬಹು ಪ್ರಾಚೀನ ಕಾಲದಿಂದಲೇ ತೆಲುಗಿನಲ್ಲಿ ರೂಢಿಯಲ್ಲಿದೆ, ನಮ್ಮ ಯಕ್ಷಗಾನ ಪ್ರಸಂಗಗಳಲ್ಲಿ ಆವಶ್ಯಕ ಅಂಗವೆಂದು ಭಾವಿಸಲಾಗುವ ದ್ವಿಪದಿ ಛಂದಸ್ಸು ತೆಲುಗು ಮೂಲದ್ದು. ತೆಲುಗಿನ ಏಲೆಗಳೂ, ರಗಡ ಪ್ರಭೇದ ಗಳೂ ನಮ್ಮ ರಚನೆಗಳಲ್ಲಿ ಪಡಿಮೂಡಿವೆ. ಸಭಾಲಕ್ಷಣದಲ್ಲಿ ಬರುವ ''ಹರಿಹರ ವಿಧಿನುತ। ಅಮರ ಪೂಜಿತರೇ...'' ಎಂಬ ತೆಲುಗು ಹಾಡು ತಿರುಪತಿ ಅಣ್ಣಮಾಚಾರ್ಯರ ಕೃತಿ. ಕರಾವಳಿಯ ಬಡಗು ಯಕ್ಷಗಾನಕ್ಕೂ, ಆಂಧ್ರದ ಬಯಲಾಟ ಗಳಿಗೂ ಸಾಮ್ಯವಿದೆ. ''ಬಡಗ'' ಎಂದರೆ ಆಂಧ್ರವೆಂದು ಕನ್ನಡದಲ್ಲಿ ಅರ್ಥವಿದೆ– ಈ ಕಾರಣಗಳನ್ನು ಅವರು ನೀಡಿದ್ದಾರೆ.

ಇಷ್ಟಲ್ಲದೆ, ನಮ್ಮ ಸಭಾಲಕ್ಷಣದಲ್ಲಿ ಬರುವ ''ಚಂದಭಾಮಾ'' ಸ್ತ್ರೀವೇಷಗಳೂ, ಕೆಲವು ಪ್ರಸಂಗ ರಚನೆಗಳಲ್ಲಿ ಕಾಣುವ ದರುಪದ, ದರುವು ಎಂಬವುಗಳೂ ಆಂಧ್ರಮೂಲದ್ದಾಗಿ ಕಾಣುತ್ತವೆ. ನಮ್ಮ ಮೂಡಲಪಾಯದ ವೇಷಗಳಿಗೂ ಕೆಲವು ವಿಷಯಗಳಲ್ಲಿ ಆಂಧ್ರದ ಆಟಗಳ ಹೋಲಿಕೆ ಉಂಟೆನ್ನುವರು.

ಹೀಗೆ, ಪ್ರಬಂಧ ರಚನೆ, ಸಾಮಗ್ರಿಗಳು, ರಂಗ ಪ್ರಯೋಗಗಳ ಸಾಮ್ಯಗಳನ್ನು ನೋಡಿದರೆ ನಮ್ಮ ಯಕ್ಷಗಾನವು ಆಂಧ್ರ ಮೂಲದ್ದಾಗಿರುವುದು ಸಂಭವನೀಯ. ಬಹುಶಃ, ಕನ್ನಡ– ತೆಲುಗು ಪ್ರದೇಶಗಳನ್ನಾಳಿದ ವಿಜಯನಗರದ ಕಾಲದಲ್ಲಿ ಇವು ಕರ್ನಾಟಕಕ್ಕೆ ಪ್ರಸರಣಗೊಂಡಿರಬಹುದು.

2. ಇತ್ತೀಚೆಗಿನವರೆಗೂ, ತೆಲುಗಿನ ''ಚಿಕ್ಕ ಮೇಳ''ಗಳು ಈ ಕಡೆ ಸಂಭಾವನೆಗಾಗಿ ತಿರುಗಾಟ ಮಾಡುತ್ತಿದ್ದುವು. ಹಾಡುಗಾರ, ಮದ್ದಲೆಗಾರ ಮತ್ತು ಎರಡು ವೇಷಗಳಿರುತ್ತಿದ್ದುವು. ವೇಷಗಳು ಸರಳ. ಒಂದು ಪುರುಷ, ಒಂದು ಸ್ತ್ರೀವೇಷ. ಇದು ನಮ್ಮಲ್ಲಿಯ ರಾಧಾಕೃಷ್ಣವೇಷ, ದಾನಾವರ್ತ ಗಳನ್ನು ಹೋಲುತ್ತವೆ. ಇವುಗಳಿಗೂ ನಮ್ಮಲ್ಲಿ ಆಂಧ್ರದವರ ಯಕ್ಷಗಾನ, ತೆಲುಗಿನ ಆಟ ಎನ್ನುತ್ತಿದ್ದರು. ನೋಡಿ: **ರಾಧಾಕೃಷ್ಣವೇಷ; ದಾನಾವರ್ತ.**

ಆಚಾರ್ರ ಹಾಸ್ಯ: 1. ಪೂರ್ವರಂಗ ಸಭಾಲಕ್ಷಣ ಪ್ರಯೋಗದಲ್ಲಿ ಬರುವ ಒಂದು ಕಟ್ಟು ಹಾಸ್ಯ. ಬ್ರಾಹ್ಮಣ ಪುರೋಹಿತ ಹಾಸ್ಯ.

2. ಇನ್ನೊಂದು ಕಟ್ಟುಹಾಸ್ಯ. ಆಚಾರಿ ಭಟ್ಟನ ಹಾಸ್ಯ. ವಿಶ್ವಕರ್ಮಬ್ರಾಹ್ಮಣನ ಅಣಕ.

ಆಟ: ನಾವೀಗ ಶಿಷ್ಟವಾಗಿ, ''ಯಕ್ಷಗಾನ ಪ್ರದರ್ಶನ'' ಅನ್ನುವುದಕ್ಕೆ ಸರ್ವತ್ರ ಬಳಕೆ ಇದ್ದ, ಇರುವ ಹೆಸರು, ಆಟ, ಬಯಲಾಟ. ವೇಷ ಸಹಿತ ಆಡಿ ತೋರಿಸುವುದು ಆಟ. ಇಂಗ್ಲಿಷ್‌ನಲ್ಲೂ ರಂಗ ಪ್ರದರ್ಶನಕ್ಕೆ, ನಾಟಕಕ್ಕೆ ಆಟ ''ಪ್ಲೇ'' ಎಂದೇ ಹೆಸರೆಂಬುದು ಗಮನಾರ್ಹ. ಮರಾಠಿಯಲ್ಲೂ ಆಟವೆಂಬರ್ಥದ ಖೇಳ, ಕೊಂಕಣಿಯಲ್ಲಿ ಖೇಳು ಎಂದಿದೆ. ಕೇರಳದ ಪರಂಪರೆಯಲ್ಲೂ ರಾಮನಾಟ್ಟಂ, ಕೃಷ್ಣಾಟ್ಟಂ, ಮೋಹಿನಿ ಆಟ್ಟಂ ಎಂದೂ, ಪ್ರಬಂಧಕ್ಕೆ ಆಟ್ಟಕಥಾ ಎಂದೂ ಇದೆ. ಆಟಕ್ಕಿಂತ ಭಿನ್ನವಾಗಿ, ಇನ್ನೊಂದು ಪ್ರದರ್ಶನ ಪ್ರಕಾರವು 'ಕೂಟ', ಎಂದರೆ ತಾಳಮದ್ದಲೆ.

ಆಟದ ಗಾಡಿ/ಆಟದವರ ಗಾಡಿ: ಆಟದ ಮೇಳದ ಸಾಮಗ್ರಿ ಸಾಗಿಸುವ ಎತ್ತಿನ ಗಾಡಿ. ಮೇಳದ ಗಾಡಿ.

ಆಟದ ಚಪ್ಪರ : 1. ಆಟವಾಡುವ ರಂಗಸ್ಥಳ, ಚಪ್ಪರ.
2. ಆಡುವ, ಮತ್ತು ನೋಡುವ ಸ್ಥಳಕ್ಕೆ ಹಾಕಿದ ಚಪ್ಪರ.

ಆಟದ ತಿರುಗಾಟ : ಆಟದ ಮೇಳಗಳ, ಕಲಾವಿದರ ಸಂಚಾರ. ನೋಡಿ : **ತಿರುಗಾಟ.**

ಆಟದ ಪದವು (ತೆ.) : ಆಟಗಳನ್ನಾಡುವ ಮೈದಾನು. ಕೆಲವು ಕಡೆ ನಿಶ್ಚಿತವಾದ ಸ್ಥಳದಲ್ಲೆ ತುಂಬ ಆಟಗಳು ಜರಗುವುದರಿಂದ ಆ ಸ್ಥಳಕ್ಕೆ ಈ ಹೆಸರು ಸಲ್ಲುತ್ತದೆ.

ಆಟದ ಪೆಟ್ಟಿಗೆ: ಮೇಳದ ಸಾಮಗ್ರಿಗಳನ್ನು ತುಂಬಿಸುವ ಪೆಟ್ಟಿಗೆಗಳು. ನೋಡಿ: **ಪೆಟ್ಟಿಗೆ, ಪೆಟ್ಟಿಗೆ ಜನ.**

ಆಟದ ಪ್ರಸಂಗ : 1. ಆಟಕ್ಕೆ ನಿರ್ಣೀತವಾದ ಕಥೆ, ಪ್ರಸಂಗ.
2. ಆಟಕ್ಕೆ ಆಗುವ ಪ್ರಸಂಗ. ಕೂಟ, ಅಂದರೆ ತಾಳಮದ್ದಲೆಗೆ ಪ್ರಶಸ್ತವಲ್ಲದ್ದು ಎಂಬ ಅರ್ಥ. ಉದಾ : ಮೀನಾಕ್ಷಿ ಕಲ್ಯಾಣ, ಮಹಿಷಾಸುರ ವಧೆ, ಮೈರಾವಣ ಕಾಳಗ ಇತ್ಯಾದಿ. ಇದಕ್ಕೆ ಭಿನ್ನವಾಗಿ ನೋಡಿ : **ಕೂಟದ ಪ್ರಸಂಗ.**

ಆಟದ ಮೇಳ: ವೃತ್ತಿಪರ ಯಕ್ಷಗಾನ ತಂಡ. ನೋಡಿ : **ಮೇಳ.**

ಆಟದವ : ಆಟಕ್ಕೆ ಸಂಬಂಧಿಸಿದವನು. ಯಕ್ಷಗಾನ ಕಲಾವಿದ, ಸಿಬಂದಿ ಸಹ. ಇದು ಕೆಲವೊಮ್ಮೆ ನಿಂದಾರ್ಥಕವಾಗಿಯೂ ಬಳಕೆಯಾಗುವುದುಂಟು.

ಆಟದವರ ಗಾಡಿ = ನೋಡಿ. **ಆಟದ ಗಾಡಿ.**

ಆಟದ ಸೂಳೆ (ಬ.) : ಸ್ತ್ರೀವೇಷ. ಮುಖ್ಯವಾಗಿ, ಸಭಾಲಕ್ಷಣದಲ್ಲಿ ಬರುವ ಮುಖ್ಯ ಸ್ತ್ರೀವೇಷ. ಈ ಶಬ್ದವು ಹೀನಾರ್ಥಕವೆಂದು ಕೆಲವರು ಭಾವಿಸಿದಂತಿದೆ. ಆದರೆ, ಇದು ಕೇವಲ ವರ್ಣನಾತ್ಮಕ ಮಾತ್ರವಾಗಿದೆ. 'ಸೂಳೆ' ಎಂದರೆ ನರ್ತಕಿ ಎಂದಷ್ಟೆ ಅರ್ಥ. ಹಿಂದೆ ನರ್ತನ ವೃತ್ತಿಯ ತಂಡಗಳಿಗೆ ಸೂಳೆಯರ ಮೇಳವೆಂದೇ ಹೇಳುತ್ತಿದ್ದರು. ಅದರಿಂದ ಬಂದ ಪದಪ್ರಯೋಗ. ಆಟದಸೂಳೆ ಎಂದರೆ, ಗಂಡಸು ಧರಿಸುವ ವೇಷ, ನಿಜಸೂಳೆ (ಸ್ತ್ರೀ ನರ್ತಕಿ) ಅಲ್ಲವೆಂದೂ ಇದಕ್ಕೆ ಅರ್ಥ.

ಆಟದ ಹುಚ್ಚು : 1. ಆಟ ನೋಡುವ ಆಸಕ್ತಿ.
2. ಅತಿರೇಕದ ಆಸಕ್ತಿ. ಕಲಾವಿದರ ನೆಲೆಯಲ್ಲಾದರೆ ಪ್ರಾವೀಣ್ಯವಿಲ್ಲದ, ಆಸಕ್ತಿ ಮಾತ್ರ ಎಂದರ್ಥ.

ಆಟೀನ್ (ತೆ.) : ಅರಳಿ ಎಲೆ ಆಕಾರದ ಬರವಣಿಗೆ. ಇಸ್ಪೀಟು ಆಟದ ಆಟೀನ್ (ಹಾರ್ಟ್ಸ್)ನಿಂದ ಈ ಹೆಸರು. ಇದನ್ನು ಇಂದ್ರಜಿತು ವೇಷದ ಹಣೆಯಲ್ಲಿ ಬರೆಯುವರು. ನೋಡಿ : **ಅಶ್ವತ್ಥನ ಎಲೆ.**

ಆಡಿಕೆ (ಬ.) : 1. ವೇಷಕ್ಕೆ ಕಟ್ಟಿದ ಸಾಮಗ್ರಿಯ ಸಡಿಲುತನದ ಹದ.
2. ಕುಣಿತದಲ್ಲಿ ಅಂಗಾಲುಗಳ ಚಲನ, ಬಳುಕು, ಆಡುವಿಕೆ. ''ಈತನ ಕುಣಿತದಲ್ಲಿ ಆಡಿಕೆ ಚೆನ್ನಾಗಿದೆ.''
3. ಮೇಳಕ್ಕೆ ಬಿಡುವು ಇರುವ ಅವಧಿ. ಹಬ್ಬದ ರಜೆ ಇತ್ಯಾದಿ.

ಆಡಿಸುವುದು : 1. ಆಟದ ಮೇಳವನ್ನು ಕರೆಸಿ, ಹರಕೆಗಾಗಿ, ಅಥವಾ ಕರಾರಿನ ರೂಪದಲ್ಲಿ ಗಳಿಕೆಗಾಗಿ, ಪ್ರದರ್ಶನ ವ್ಯವಸ್ಥೆಗೊಳಿಸುವುದು. ಹೀಗೆ ಮಾಡುವವನಿಗೆ **ಆಡಿಸುವವನೆನ್ನು**ವರು.
2. ಭಾಗವತನು ಆಟವನ್ನು ನಿರ್ವಹಿಸುವುದು, ರಂಗ ನಿರ್ದೇಶನ ಕಾರ್ಯ. ಉದಾ: ''ಪದ ಹೇಳಿದರೆ ಸಾಲದು, ಆಡಿಸಲು ಗೊತ್ತಿರಬೇಕು.'' ''ಈ ಭಾಗವತರು ಆಟ ಆಡಿಸುವುದರಲ್ಲಿ ಗಟ್ಟಿಗ.'' ಇತ್ಯಾದಿ.

ಆದಿಝುಂಪೆ (ಉ.) : ನಿಧಾನಝುಂಪೆಯ ನಾಮಾಂತರ. ನೋಡಿ : **ನಿಧಾನ ಝುಂಪೆ, ಉದ್ಧ ಝುಂಪೆ.**

ಆದಿತಾಳ : ಎಂಟು ಮಾತ್ರೆಗಳ ತಾಳ; ಒಂದು ದ್ರುತ, ಎರಡು ಲಘು; ರಂಗದಲ್ಲಿ ಬಳಕೆಯಾಗುವುದು ಕಡಮೆಯಾಗಿದೆ. ಇದರ ಬಡಿತ ಮತ್ತು ನುಡಿತಗಳು, ವಿಶಿಷ್ಟವಾದ ನಿಶ್ಚಿತವಾದ ವಿನ್ಯಾಸಗಳಿಗೇ ಹೊಂದಿಕೊಂಡಿವೆ. ಸರಳ ನುಡಿತಗಳು ಸಾಧ್ಯವಿದ್ದರೂ, ಸಂಪ್ರದಾಯವಿಲ್ಲ. ಹಾಗಾಗಿ, ಬಳಕೆ ಕಡಮೆಯಾಗುತ್ತಿದೆ. ಸ್ತುತಿ ಪದ್ಯಗಳಿಗೆ ಬಳಕೆ ಇದೆ.

ತೆಂಕುತಿಟ್ಟಿನಲ್ಲಿ, ಹದಿನಾರು ಮಾತ್ರಾಕಾಲದ ಪದ್ಧತಿಯಲ್ಲಿ ಬಳಕೆ ಇದೆ. ಕಾರಣ ಇದರ ಮೂಲ ಪೆಟ್ಟುಗಳು (ಪಾಠಾಕ್ಷರಗಳು) ಎರಡು ಆವರ್ತಗಳ ಅಳತೆಯಲ್ಲಿವೆ.

ತಾಳದಸ್ತು – ಬಡಗುತಿಟ್ಟು: ಮೂರು ದೊಡ್ಡ ಘಾತಗಳು ಮಾತ್ರ. ತಾ ಹತ್ತ ದಿಂದಾ ದಿಕುತಕ। ತಾ ತೋಂ। ತದ್ದಿನ್ನಕ
ಮುಕ್ತಾಯ:
ತಾಕಿಟ। ಕಿಟತಕ। ತೊದಿನಕ ದಿಕುತಕ
ದಿನ್ನಾ ಕಡ್ತಧಿಂ। ದಿನ್ನಾಕಡ್ತಧಿಂ। ದಿನ್ನಾಕಡ್ತಧಿಂ।।
ತೆಂಕುತಿಟ್ಟು : ಐದು ದೊಡ್ಡಘಾತ.
ತದ್ದಿದ್ದತ್ತಾ। ಧಿಂದತ್ತಾ


ಆಯುಧಗಳು




ಬಿಲ್ಲು-ಬಾಣ



ಖಡ್ಗ




ಗದೆಗಳು




ತ್ರಿಶೂಲ



ಸರ್ಪಾಸ್ತ್ರ



ದಂಡ



ಪರಶು



ಚಕ್ರ

ದಿತ್ತಾಕಿಡತಕ। ತರಿಕಿಟತಾಂ
ಬಿಡ್ತಿಗೆ: ಧೂಂ ಧೂಂ। ಕಿಟಾಂ ಕಿಟಧೀಂ। ಕಿಟಾಂ– ಮೂರುಬಾರಿ.
ಧಿನ್ನಕ। ತರಿಕಿಟ। ಕಿಟತಕ। ತರಿಕಿಟ
ದಧ್ಧಿಂ। ದತ್ತಾ। ಧಿಂ ದತ್ತಾ।
ದದಿಗಿಣತೊ। ದದಿಗಿಣತೊ। ದದಿಗಿಣತೊ॥

ಈ ತಾಳದ ಪದ್ಯಗಳನ್ನು, ಮಧ್ಯದಿಂದ ಏಕತಾಳದಲ್ಲೂ, ಕೊನೆಗೆ **ತಿತ್ತಿತ್ತೈ (ಕೋರೆತಾಳ)** ದಲ್ಲೂ ಹಾಡುವ ಕ್ರಮವಿದೆ.

ಒಂಬತ್ತು ಮುಕ್ತಾಯದ ಬಾರಿಸುವಿಕೆಯೂ ಆದಿತಾಳದ ಪದ್ಯಗಳ ಹಾಡುವಿಕೆಯಲ್ಲಿನ ಒಂದು ವಿಶೇಷ. ಇದು ಕೆಲವು ಪದ್ಯಗಳಿಗೆ ಮಾತ್ರ ಇರುತ್ತದೆ.

ಆದಿತ್ರಿವುಡೆ (ಉ.) = ನೋಡಿ: **ನಿಧಾನತ್ರಿವುಡೆ, ಉದ್ಧತ್ರಿವುಡೆ.**

ಆನಿಕೆ (ಬ.): ವೇಷಸಾಮಗ್ರಿ, ವಿಶೇಷತಃ ಮುಂಡಾಸು, ಕರ್ಣಪಾತ್ರ, ಮುರ್ಗಿಸರ ಮುಂತಾದುವು ಒಂದಕ್ಕೊಂದು ಸಮತೋಲ ವಾಗುವ ಹದ. **(Balance).**

ಆನೆ: ಮುಖವಾಡವನ್ನು ಬಳಸಿ ಮಾಡುವ ಆನೆಯ ಪಾತ್ರ.

ಆನೆಕಣ್ಣು (ತೆ./ಬ.): ತೆಂಕುತಿಟ್ಟಿನಲ್ಲಿ ಭೀಮನ ವೇಷಕ್ಕೆ (ಬಡಗಿನಲ್ಲಿ ರುದ್ರಭೀಮನಿಗೆ ಮಾತ್ರ) ಹಣೆಯಲ್ಲಿ ಬಿಡಿಸುವ ಕಣ್ಣಿನ ವಿನ್ಯಾಸ.

ಆನೆ ಕತ್ತಾಳೆ: ಕಳ್ಳಿ ಜಾತಿಯ ಒಂದು ಗಿಡ, ಕತ್ತಾಳೆ. **(Agave Americana)** ಇದರ ನಾರನ್ನು ಮೀಸೆ, ಕೂದಲುಗಳಿಗೂ, ಆಭರಣಗಳ ಬಿಗಿಯುವಿಕೆಗೂ ಬಳಸುತ್ತಿದ್ದರು.

ಆಯುಧ: ರಂಗದಲ್ಲಿ ಬಳಸುವ, ಮರದಿಂದ ಮಾಡಿದ ಆಯುಧಗಳು. ಗದೆ, ಬಿಲ್ಲು, ಬಾಣ, ಚಕ್ರ, ಕತ್ತಿ, ತ್ರಿಶೂಲ, ಕೊಡಲಿ, ವಜ್ರಾಯುಧ, ಯೋಗ ದಂಡ, ಮೊದಲಾದವು. ಇದಕ್ಕೆ ಬಣ್ಣ ಬಳಿದಿರು ತ್ತಾರೆ. ಚಕ್ರಕ್ಕೆ ಬೇಗಡೆ ಹಚ್ಚುವರು. ಗದೆಯನ್ನು ಬಟ್ಟೆಯಿಂದ ತಯಾರಿಸುವುದು ಉಂಟು.

ಆರತಿ: 1. ಆರತಿ ಎತ್ತುವಿಕೆ, ಚೌಕಿಯಲ್ಲಿ ಪೂಜೆಗೆ, ರಂಗಸ್ಥಳದಲ್ಲಿ ಗಣಪತಿ ಪೂಜೆಗೆ, ಆಟದ ಕೊನೆಯಲ್ಲಿ ನಾಯಕ ಪಾತ್ರಕ್ಕೆ, ಕೊನೆಗೆ ಪುನಃ ಚೌಕಿಯಲ್ಲಿ – ಹೀಗೆ.

2. ಆಟದ ನಡುವೆ ಮದುವೆ, ದೇವರ ಪೂಜೆ ದೃಶ್ಯವಿದ್ದರೆ ಆರತಿ ಎತ್ತುವುದು.

ಆರತಿ ತಟ್ಟೆ: ಆರತಿಗಾಗಿ ಇರುವ ಹರಿವಾಣ. ಮೇಳದ ಸಾಮಗ್ರಿಗಳಲ್ಲೊಂದು.

ಆರತಿ ಪದ್ಯ: 1. ಆಟದ ಕೊನೆಯ ದೃಶ್ಯದಲ್ಲಿ ಹೇಳುವ ಪದ್ಯ... ಸೋಬಾನೆ, ಇದು ಏಕತಾಳ ಯಾ ತ್ರಿವುಡೆ ತಾಳದಲ್ಲಿರುತ್ತದೆ. ತ್ರಿವುಡೆ ತಾಳದ ಧವಳಾರಗಳು ಆರತಿ ಪದ್ಯಗಳು. ಏಕತಾಳದ ''ಶ್ರೀ ಸರಸಿಜ ನೇತ್ರೆಯರು'' ಎಂಬ ಪದ್ಯವು ಒಂದು ಪ್ರಸಿದ್ಧ ಆರತಿ ಪದ್ಯ.

2. ಮದುವೆ, ಪೂಜೆ ದೃಶ್ಯಗಳಲ್ಲಿ ಹೇಳುವ ತುಂಡುಪದಗಳು. ಇವು ಹೆಚ್ಚಾಗಿ ಪ್ರಸಂಗದ ಪದ್ಯಗಳಲ್ಲ. ನೋಡಿ: **ತುಂಡುಪದ, ಕಿಸೆಪದ್ಯ.**

ಆರತಿ ಸ್ತ್ರೀವೇಷ: ಆಟದ ಕೊನೆಯ ದೃಶ್ಯದಲ್ಲಿ ಆರತಿ ಎತ್ತುವ ಸ್ತ್ರೀವೇಷ. ಮುಖ್ಯ ಸ್ತ್ರೀವೇಷಧಾರಿಯು ಈ ಪಾತ್ರ ನಿರ್ವಹಿಸು ವುದು. ವೀಳ್ಯ ತೆಗೆದುಕೊಳ್ಳುವಾಗ ಈ ವೇಷವು ಇರಬೇಕು. ಸಭಾಲಕ್ಷಣ(ತೆಂಕು)ದಲ್ಲೂ ಹಾಸ್ಯಗಾರ ವೇಷ ಸ್ತ್ರೀವೇಷಗಳು ಹೊಗಳಿಕೆ ದೃಶ್ಯಗಳಿಗೆ ಇರುತ್ತವೆ.

ಆರನೇ ಕಟ್ಟುವೇಷ (ತೆ.): ಪ್ರಾಚೀನ ವೇಷ ವಿಭಾಗ ಕ್ರಮದಿಂದ ಪಳೆಯುಳಿಕೆಯಾಗಿರುವ ಶಬ್ದ. ಏಳು ಕಟ್ಟು ವೇಷಗಳ ಪೈಕಿ ಒಂದು. ಪ್ರಾಯಶಃ ಇದು ಈಗ ನಾವು ಹೇಳುವ ಪುಂಡು ವೇಷ ಆಗಿರಬೇಕು. ಈಗ ಈ ಹೆಸರು ಬಳಕೆ ಇಲ್ಲ. ನೋಡಿ: **ಕಟ್ಟುವೇಷ.**

ಆರ್ಭಟೆ: 1. ಬಣ್ಣದ ವೇಷಗಳು ಹೊಡೆಯುವ ಬೊಬ್ಬೆ. ನೋಡಿ: **ಅಟ್ಟಹಾಸ.**

2. ಬಣ್ಣದ ವೇಷಗಳು ಸಾಯುವಾಗ ಹೊಡೆಯುವ ಬೊಬ್ಬೆ.

ಆಲಟ್ಟೆ = ನೋಡಿ: **ಆಲವಟ್ಟ.**

ಆಲವಟ್ಟ/ಆಲಟ್ಟೆ (ತೆ.): ನವಿಲುಗರಿಗಳನ್ನು ಸಿಕ್ಕಿ ಸಿರುವ ಚಕ್ರಾಕಾರ ಬೀಸಣಿಗೆ. ಬಣ್ಣದ ವೇಷಗಳಿಗೆ ತೆರೆತಗ್ಗಿಸುವ ದೃಶ್ಯದಲ್ಲಿ, ಮತ್ತು ಪೀಠದಲ್ಲಿ ಕುಳಿ ತಾಗ, ಕರ್ಣ ಪಾತ್ರದ ಹಿಂದೆ ಹಿಡಿಯುವರು. ಅಲ್ಲೆ ಸಿಕ್ಕಿಸಿಡುವುದೂ ಉಂಟು. ಇದು ರಾಜ ಬಣ್ಣಗಳಿಗೆ ಮಾತ್ರ ಬಳಕೆ. ನೋಡಿ: **ಕರ್ಣಶಿಖಿ ಪಾತ್ರ.**

ಆವರ್ತ: 1. ತಾಳದ ಒಂದು ಬಾರಿಯ ನಡೆ. ತಾಳವೊಂದರ ಪೆಟ್ಟುಗಳನ್ನು ಹೇಳಿ ಅಥವಾ ಬಾರಿಸಿ ತೋರಿಸುವ ಆವರ್ತ. ತಾಳಾವರ್ತನೆ.

2. ಪದ್ಯವನ್ನು ಪುನಾರಾವರ್ತನೆ ಮಾಡುವುದು.

ಆವೇಶ: 1. ಪಾತ್ರವು ಕುಣಿತ, ಮಾತುಗಳಲ್ಲಿ ತೋರಿಸುವ ಭಾವಾವೇಶ.

2. ವೇಷವು ಸೋಲುವ ದೃಶ್ಯದಲ್ಲಿ ಕಾಣಿಸುವ, ವಿಶಿಷ್ಟ ಆವೇಶ; ಆವೇಶದ ಕುಣಿತ.

ಆಹೋಹೊ: 'ಹೊಗಳಿಕೆ' ಸನ್ನಿವೇಶಗಳಲ್ಲಿ ಬಳಸುವ ಉದ್ಗಾರ. ನಾಟ್ಯಶಾಸ್ತ್ರ ಸಂಪ್ರದಾಯ ದಲ್ಲೂ ಇರುವಂತಹದು. 'ಹಾಹೂ' 'ಹೂಹೂ' ಮೊದಲಾದ ಉಚ್ಚಾಟನ ವಿಧಿ ಉದ್ಗಾರಗಳಿಂದ ಬಂದಿರಬೇಕು. ಆಹೋಹೋ ಎಂಬುದನ್ನು ಕೋಡಂಗಿ, ಹಾಸ್ಯಗಾರ, ಭಾಗವತ ಇವರು ಬಳಸುವರು. ರಂಗಸ್ಥಳದಲ್ಲಿ ದೇವರ ಹೊಗಳಿಕೆ, ಆಟ ಆಡಿಸುವವರ ಮತ್ತು ಹಣ ಕೊಟ್ಟವರ ಹೊಗಳಿಕೆಗಳಿಗೆ ಈ ಪದ ಬಳಸುವರು. ಒಂದು ಉದಾಹರಣೆ:

ಹಾಸ್ಯಗಾರ: ಆಹೋ. ಹೊ.

ಭಾಗವತ : ಆಹೋ. ಹೊ.

ಹಾಸ್ಯಗಾರ: ಮಧೂರು ಶ್ರೀ ಮಹಾಗಣಪತಿ ದೇವರಯ್ಯ.

ಭಾಗವತ: ಮತ್ತೂ ಶ್ರೀ ಮಹಾಗಣಪತಿ ದೇವರಯ್ಯಾ.

ಹಾಸ್ಯಗಾರ: ಶಾಬಾ (ಶಾಬಾಸ್).

ಭಾಗವತ : ಮತ್ತೂ ಶ್ರೀ ಮಹಾಗಣಪತಿ ದೇವರು.

ಹಾಸ್ಯಗಾರ: ಭಾಲಾ (ಭಲೆ).

ಭಾಗವತ : ವಕ್ರತುಂಡ ಮಹಾಕಾಯ।
ಕೋಟಿ ಸೂರ್ಯಸಮಪ್ರಭ।
ನಿರ್ವಿಘ್ನಂ ಕುರು ಮೇ ದೇವ।
ಸರ್ವಕಾರ್ಯೇಷು ಸರ್ವದಾ॥

ಹಾಸ್ಯಗಾರ: (ಶ್ಲೋಕಚರಣಗಳ ಮಧ್ಯೆ) ಶಾಬಾ, ಭಾಲಾ.

ಭಾಗವತ : ನಂಬಿರುವಂಥಾ ಭಕ್ತರ ಮೇಲೆ ವಾತ್ಸಲ್ಯವಿಟ್ಟು ಕೊಟ್ಟಿರುವಂಥಾ ಶ್ರೀಮುಡಿ ಗಂಧಪ್ರಸಾದ ಶಿವಾರ್ಪಣಮಸ್ತು.

ಹಾಸ್ಯಗಾರ: ದಕ್ಕಿತೋ ದಕ್ಕಿತು.

ಆಟದ ಕೊನೆಯಲ್ಲಾದರೆ, ಭಾಗವತನೂ 'ಶಿವಾರ್ಪಣಮಸ್ತು' ಎಂಬುದರ ಬದಲು, ದಕ್ಕಿತೋ ದಕ್ಕಿತು ಎನ್ನಬೇಕು.

ಬಡಗುತಿಟ್ಟು, ಉ.ಕ.ಗಳಲ್ಲಿ ಸಭಾಲಕ್ಷಣ ವಿಭಾಗದಲ್ಲಿ ಇಂತಹ ಹೊಗಳಿಕೆಯಿಲ್ಲ. ಆಟದ ಕೊನೆಯಲ್ಲಿ ಮಾತ್ರ ಇದೆ.

ಆಳಂಗ: ವೇಷಧಾರಿಗೊಪ್ಪುವ ಆಳುತನ. ಎತ್ತರ ಮತ್ತು ಅಂಗಸೌಷ್ಠವ. ಶರೀರ ಸಂಪತ್ತು.

ಇ

ಇಂಗಲೀಕ: ಕೆಂಪು ವರ್ಣದ್ರವ್ಯ, ಹಿಂಗಲಿಕ, ಇಂಗ್ಲಿಕ, ಹಿಂಗುಳ ಸುಣ್ಣಕ್ಕೆ ಅರಸಿನ ಬೆರೆಸಿ ತಯಾರಿಸಿದ್ದು. (ಇಂಗಿಸಿದ್ದು?) ಕಡುಕೆಂಪಾದ ಮೆದುಕಲ್ಲು ಗಳಿಂದಲೂ ಮಾಡುತ್ತಿದ್ದರು. ಕೋನಾಕೃತಿಯ ಒಂದು ಬಗೆಯ ಕಾಯಿಗಳಿಂದಲೂ ಕೆಂಪು ಬಣ್ಣ ಸಿಗುತ್ತದೆ. ಇದಕ್ಕೆ ರಂಗಿನಕಾಯಿ ಎನ್ನುವರು. ಸದ್ಯ ಹೆಚ್ಚಾಗಿ ರಾಸಾಯನಿಕ ದ್ರವ್ಯವು ಬಳಕೆಯಲ್ಲಿದೆ. (ಸೀಸದ ಆಕ್ಸೈಡ್ ಮತ್ತು ಪಾದರಸದ ಆಕ್ಸೈಡ್) ಮುಖವರ್ಣಿಕೆಗೆ ಬಳಕೆ. ಬಿಳಿ ಬಣ್ಣಕ್ಕೆ ಇಂಗಲಿಕ, ಅರಸಿನ ಹಾಕಿ ವೇಷಗಳ ಮೂಲಲೇಪ (base make-up) 'ಚಾಯ'ವನ್ನು ತಯಾರಿಸುವುದು ಈಗಿನ ಪದ್ಧತಿ. ಗಡ್ಡ, ನಾಮ, ಗೀರು, ರೇಖೆಗಳನ್ನು ಬರೆಯಲು ಕೆಂಪು ಬೇಕು. ನೋಡಿ: **ಕೆಂಪು.**

ಇಂಗಲೀಕದ ಕಲ್ಲು: 1. ಕೆಂಪು ಬಣ್ಣವನ್ನು ಎಣ್ಣೆಯಲ್ಲಿ ಕಲಸಿ ಅರೆದು ಇಡುವ ಕಲ್ಲು.
2. ಕೆಂಪು ಬಣ್ಣದ ಕಲ್ಲು. ನದಿಗಳಲ್ಲಿ ಸಿಗುತ್ತದೆ.

ಇಂಡಿಗೆ/ಹಿಂಡಿಗೆ: ಮದ್ದಲೆಯ ಎರಡೂ ಬದಿಗಳಿಗೆ, ಸುತ್ತ ಇರುವ ಚರ್ಮದ ಸುತ್ತು. ಹೆಣಿಗೆ ಅಟ್ಟೆ. ಇದು ಕವಳ ಚರ್ಮಕ್ಕೂ, ಬಾರಗಳಿಗೂ ಆಧಾರ.

ಇಂದುವದನೆ ಸ್ತ್ರೀವೇಷ (ತೆ.): 1. ಪಾರ್ವತಿ ವೇಷ. ಸಭಾಲಕ್ಷಣದಲ್ಲಿ ಬರುವಂತಹದು. ''ಇಂದು ವದನೆ। ಕುಂದರದನೆ। ಸುಂದರಾಂಗಿ ಪಾರ್ವತಿ''... ಎಂದು ಪದ್ಯವಿರುವುದರಿಂದ ಈ ಹೆಸರು.
2. ಸಭಾಲಕ್ಷಣದಲ್ಲಿ ಬರುವ ಕೋಲಾಟದ ಪದ್ಯಗಳಿಗೆ ಕುಣಿಯುವ ಸ್ತ್ರೀವೇಷಗಳು. ಇವು ಇಂದುವದನೆ ಸ್ತ್ರೀವೇಷಗಳೆಂದೂ, ಇದರಲ್ಲಿ ಮುಖ್ಯವೇಷ (ಮುಖ್ಯ ಸ್ತ್ರೀವೇಷ)ಕ್ಕೂ ಇದೇ ಹೆಸರೆಂದೂ ದಿ। ಕುಕ್ಕಿಲರ ಮತ (ಕುಕ್ಕಿಲ: ಸಂ. ಪಾರ್ತಿಸುಬ್ಬನ ಯಕ್ಷಗಾನಗಳು: 1975).

ಇಜಾರು: 1. ಹಾಸ್ಯಗಾರನು ಧರಿಸುವ ಇಜಾರು; ಪೈಜಾಮ.
2. ವೇಷಧಾರಿಯು ಕಚ್ಚೆಯ ಒಳಗೆ ಧರಿಸುವ ಚಲ್ಲಣ, ವಿಜಾರು.
ತೆ. 3. ಈಗ ಪುರುಷ ವೇಷಗಳಿಗೆ ಕಚ್ಚೆಯ ಬದಲು ಧರಿಸುವ ಚಲ್ಲಣ. ನೋಡಿ: **ಚಲ್ಲಣ.**

ಇಡಿ ಉರುಳಿಕೆ: 1. ಚೆಂಡೆ, ಮದ್ದಲೆಗಳ ಬಾರಿಸುವಿಕೆ ಯಲ್ಲಿ ಒಂದು ಬಗೆಯ ಬಡಿತ. ಉರುಳಿಕೆಯ

ಒಂದು ಕ್ರಮ. ಇಡಿ ತಾಳದಸ್ತೆಯನ್ನು ಮಧ್ಯೆ ಯತಿಯಿಲ್ಲದೆ ಒಟ್ಟಾಗಿ ಉರುಳಿಕೆ ಬಾರಿಸುವುದು. 2. ದೊಡ್ಡ ಪೆಟ್ಟುಗಳ ಉರುಳಿಕೆ. ನೋಡಿ: **ಉರುಳಿಕೆ.**

ಇಡಿಕಚ್ಚೆ: 1. ಕಾಲುಗಂಟಿನವರೆಗೆ ಮುಚ್ಚೆ, ಎರಡೂಕಾಲುಗಳನ್ನು ಆವರಿಸುವ ಕಚ್ಚೆ, ಗಂಡು ಕಚ್ಚೆ; ವೀರಕಚ್ಚೆ. ಅರೆಕಚ್ಚೆಯಲ್ಲದ್ದು, ಇಡಿಕಚ್ಚೆ. 2. ಪುರೋಹಿತ ಕಚ್ಚೆ, ಷಟ್ಪುಚ್ಛಯುಕ್ತ.

ಇಡಿಪೆಟ್ಟು: 1. ತಾಳ, ಜಾಗಟೆ, ಚೆಂಡೆ, ಮದ್ದಲೆಗಳಲ್ಲಿ, ತಾಳದ ಘಾತಕ್ಕೆ ಬರುವ ಪೆಟ್ಟು; ದೊಡ್ಡ ಬಡಿತ.
2. ದೊಡ್ಡನಾದದ ಪೆಟ್ಟು. ಅರ್ಧಪೆಟ್ಟು ಅಲ್ಲದ್ದು. ತಾಂ, ಧೊಂ, ಧೇಂ, ಪ್ಪಾಂ, ಟ್ರಾಂ– ಇತ್ಯಾದಿ.

ಇಡಿವೀಳ್ಯ: ಆಟಕ್ಕೆ ನಿರ್ಣಯಿಸಿದ ಪೂರ್ತಿ ಸಂಭಾವನೆ. ಸಭಾಲಕ್ಷಣ ಮುಗಿದು, ಪ್ರಸಂಗದ ಮೊದಲ ಒಡ್ಡೋಲಗ ಪ್ರಾರಂಭವಾದರೆ, ಇಡಿ ವೀಳ್ಯ ಕೊಡಬೇಕೆಂದು ನಿಯಮ. ನೋಡಿ: **ವೀಳ್ಯ, ಅರ್ಧವೀಳ್ಯ.**

ಇಡಿವೇಷ: ರಾಜವೇಷವೊಂದರ ಎಲ್ಲ ಸಾಮಗ್ರಿ ಕಟ್ಟಿದ ಪೂರ್ತಿವೇಷ. ಕಿರೀಟವೇಷ. ಹಾಸ್ಯ, ಸ್ತ್ರೀ ಪುಂಡು– ವೇಷಗಳು ಇಡಿವೇಷಗಳಲ್ಲ.

ಇದಿರರ್ಥ = ನೋಡಿ: **ಇದಿರು ಅರ್ಥ.**

ಇದಿರು ಅರ್ಥ / ಇದಿರರ್ಥ / ಎದುರರ್ಥ:
1. ತಾಳಮದ್ದಲೆಯಲ್ಲಿ ಒಂದು ಪಾತ್ರಕ್ಕೆ ಇದಿರಾಳಿಯಾಗಿರುವ ಇನ್ನೊಂದು ಪಾತ್ರ. ಉದಾ: ಕೃಷ್ಣಾರ್ಜುನದಲ್ಲಿ ಕೃಷ್ಣ– ಅರ್ಜುನರು.
2. ಇದಿರುವೇಷ ಎಂಬುದರ ಸಮಾನವಾಗಿ– ಪರ್ವದ ಕರ್ಣ, ಸಂಧಾನದ ದುರ್ಯೋಧನ ಮೊದಲಾಗಿ. ನೋಡಿ: **ಇದಿರುವೇಷ.**

ಇದಿರುಲಯ/ಇದಿರ್ಲಯ/ಎದುರುಲಯ: ತಾಳ, ಜಾಗಟೆ, ವಾದ್ಯಗಳ ಬಡಿತದಲ್ಲಿ, ಲಯಕ್ಕೆ ಇದಿರಾಗಿ ಅಥವಾ ಸಹಜಗತಿಗೆ ವಿರುದ್ಧವಾಗಿ ಬಾರಿಸುವುದು. ಇದಕ್ಕೆ ಬೇರೆ ಬೇರೆ ಅರ್ಥಗಳಿವೆ.
1. ಅವಲಯ– ಲಯ ತಪ್ಪುವಿಕೆ.
2. ವಿಷಮಲಯ.
3. ಸ್ಥಾನ ವಿಷಮ, ಬಂಧದ ಎತ್ತುಗಡೆ ಬದಲು.
4. ಪೆಟ್ಟಿನ ಜಾಗ ತಪ್ಪಿಸುವುದು.
5. ಪೆಟ್ಟಿನ ಬಲ ತಪ್ಪಿಸುವುದು- ದೊಡ್ಡಪೆಟ್ಟಿನ ಬದಲು ಚಿಕ್ಕಪೆಟ್ಟು, ಚಿಕ್ಕದರ ಬದಲು ದೊಡ್ಡದು.
6. ಉದ್ದಕ್ಕೂ ಎತ್ತುಗಡೆ ಜಾಗ ಬದಲಾವಣೆ, ತಾಳದ ಮಧ್ಯೆ ಚರಣ ತೆಗೆಯುವುದು.
7. ಅಸಹಜವಾದ 'ಅತೀತ' ಮತ್ತು 'ಅನಾಗತ' ಗ್ರಹಗಳು.

ಇದಿರುವೇಷ (ತೆ.): ಪ್ರತಿನಾಯಕ ಜಾತಿಯವೇಷ. 'ಇದಿರು' = ವಿರುದ್ಧ. ನೋಡಿ: **ಎದುರುವೇಷ, ಎರಡನೆಯವೇಷ.**

ಇದಿರ್ಲಯ = ನೋಡಿ: **ಇದಿರುಲಯ.**

ಇನಾಮು: ಬಹುಮಾನ. ಬಯಲಾಟವನ್ನು ಆಡಿಸುವವರು ಕಲಾವಿದರಿಗೆ ಪ್ರತ್ಯೇಕವಾಗಿ ನೀಡುವ ಹೆಚ್ಚುವರಿ ಹಣ ಅಥವಾ ವಸ್ತುರೂಪದ ಬಹುಮಾನ.

ಇಳಕಲ್ ಸೀರೆ: ಉತ್ತರ ಕರ್ನಾಟಕದ ಇಳಕಲ್‌ನ ಮಗ್ಗದ ಸೀರೆ, ವಿಶೇಷತಃ ಚೌಕುಳಿಗಳುಳ್ಳ ಸೀರೆ. ಸ್ತ್ರೀವೇಷಕ್ಕೆ ಬಳಕೆಯಿದ್ದಿತು.

ಇಳಿ: ಶ್ರುತಿವಿಚಾರದಲ್ಲಿ, ನಾದದ ವಿಷಯದಲ್ಲಿ– ತಗ್ಗುಶ್ರುತಿ, ತಗ್ಗುಸ್ವರ. ಸಾಪೇಕ್ಷ ಕಲ್ಪನೆ.

ಇಳಿಗುಂಜಿ = ನೋಡಿ: **ಕಾಂಚೀಧಾಮ; ವೀರಕಸೆ.**

ಇಳಿಮದ್ದಲೆ (ಬ.): ಬಡಗುತಿಟ್ಟಿನಲ್ಲಿ 'ಏರುಮದ್ದಲೆ' ಬಳಕೆಗೆ ಬಂದ ಬಳಿಕ, ಹಿಂದಿನ ಕ್ರಮದ, ಸಮಶ್ರುತಿಯ ಮದ್ದಲೆಗೆ ಈ ಅಂಕಿತ ಬಂದಿದೆ. ನೋಡಿ: **ಏರು ಮದ್ದಲೆ.**

ಇಳಿಶ್ರುತಿ: ತಗ್ಗುಶ್ರುತಿ. ಹಾಡು, ವಾದ್ಯಗಳ ಶ್ರುತಿ ವಿಚಾರದಲ್ಲಿ ಸಾಪೇಕ್ಷ ಕಲ್ಪನೆ. ಸಾಮಾನ್ಯವಾಗಿ ಹಾರ್ಮೋನಿಯಂನ ಬಿಳಿ ಮೂರರ ವರೆಗಿನ ಆಧಾರ ಶ್ರುತಿಯನ್ನು ಇಳಿಶ್ರುತಿ ಎನ್ನುವುದು ವಾಡಿಕೆ.



ವೀರಭದ್ರ
(ತೆಂಕು)



ಬಣ್ಣದ ವೇಷ (ಬಡಗು)



ನರಸಿಂಹ
(ತೆಂಕು)



ಹನುಮಂತ
(ತೆಂಕು)

ಈ

ಈಂದು : ಬೈನೆ ಮರ. (Bastard Sago, Caryota urenes.) ಇದರ ಸೋಗೆಗಳು ಚಪ್ಪರಕ್ಕೆ, ರಂಗಸ್ಥಳ ಅಲಂಕಾರಕ್ಕೆ ಬಳಕೆ.

ಈಟಿ : ತುದಿಚೂಪಾಗಿರುವ ನೇರ ಆಯುಧ, ಬರ್ಚಿ. ಸಾಂಪ್ರದಾಯಿಕವಾಗಿ ಇರಲಿಲ್ಲ. ಇತ್ತೀಚೆಗೆ ಚಾಲ್ತಿಗೆ ಬಂದಿದೆ. ಬೇಟೆ ಸಂದರ್ಭಗಳಲ್ಲಿ, ಹಾಸ್ಯ ಗಾರನು ಕೋಲನ್ನು ಈಟಿಯಾಗಿ ಬಳಸುವವನು.

ಈಶ್ವರನ ಕಣ್ಣು : ಶಿವನ ವೇಷದ ಹಣೆಯಲ್ಲಿ ಬಿಡಿಸುವ ನಿಟಿಲಾಕ್ಷಿ. ಲಂಬವಾಗಿ ಬರೆಯುವರು. ಅರೆತೆರೆದಂತೆ ಬಿಡಿಸಿ, ರೆಪ್ಪೆ ಹುಬ್ಬು ಬಿಡಿಸುವರು.

ಈಶ್ವರನ ಮುಡಿ : ಶಿವನ ವೇಷದ ಶಿರೋಭೂಷಣ. ಜಟೆ ಕಟ್ಟಿ, ಅದಕ್ಕೆ ಅರ್ಧಚಂದ್ರಾಕೃತಿಯ 'ಚಂದ್ರಕಲೆ'ಯನ್ನು ಸಿಕ್ಕಿಸಿ, ತುದಿಗೆ ಕಾಯಿಸರ ಅಥವಾ ಮುತ್ತಿನ ಸರ ಬಿಗಿದು, ಜರಿಯ 'ಗಂಗೆ' ಸಿಕ್ಕಿಸುವರು. ಈ ವೇಷವು ಕುತ್ತಿಗೆಯ ಕೆಳಗೆ ರಾಜವೇಷದಂತೆಯೆ ಇರುವುದು.

ಉ

ಉಂಡೆ = ನೋಡಿ : ಹತ್ತಿ ಉಂಡೆ.

ಉಗ್ರನರಸಿಂಹ : ಒಂದು ವೇಷ. ಪ್ರಹ್ಲಾದ ಚರಿತ್ರೆಯ ನರಸಿಂಹ. ಉಗ್ರಮುಖವರ್ಣಿಕೆ. ಮುಖದಲ್ಲಿ 'ಅತಿಕರಿಸಿದ' ಸಿಂಹಾಕೃತಿ ಬರೆದು, ಕಿರೀಟ ಇಟ್ಟು, ಕಿರೀಟಕ್ಕೆ ಕೆಂಚುಕೇಸರಿ ಸಿಕ್ಕಿಸುವರು. ರಾಜವೇಷದ ಉಡುಗೆ ತೊಡುಗೆ. ಮುಖವರ್ಣಿಕೆಗೆ ಬದಲು ಸಿಂಹದ ಮುಖವಾಡ ಬಳಸುವುದೂ ಉಂಟು.

ಉಡಾಪಿ = ನೋಡಿ : ಉಡಾಪೆ.

ಉಡಾಪೆ/ಉಡಾಪಿ/ಗುಡಾಪಿ : ತಾಳದ ಗತಿ ಪರಿವರ್ತನೆ, ವಿಶೇಷತಃ ಅಷ್ಟತಾಳದಲ್ಲಿ. ಪದ್ಯದ ಅರ್ಧದಲ್ಲಿ ಅಥವಾ ಕೊನೆಯಲ್ಲಿ 'ಏಕತಾಳ'ದ ಗತಿಯನ್ನು ಹೋಲುವಂತೆ ತಾಳ ಬಡಿಯುವುದು ಮತ್ತು ವಾದ್ಯವಾದನ. ಸದ್ಯ ಇದನ್ನು 'ಏಕತಾಳಕ್ಕೆ ಹೋಗುವುದು' ಎಂದೇ ಹೇಳುವರು. ಮೂಲತಃ ಇದು ತಾಳ ಪರಿವರ್ತನೆಯಲ್ಲ, ಗತಿ ಪರಿವರ್ತನೆ. ಉಡಾಪೆಯಿಂದ ಮುಂದೆ 'ತಿತ್ತಿತ್ತೈ'ಗೆ ತಿರುಗಿಸಿ, ಮುಕ್ತಾಯ ಮಾಡುವುದುಂಟು. ಉಡಾಪೆಯಿಂದ ಪುನಃ ಮಾಮೂಲು ಅಷ್ಟತಾಳಕ್ಕೆ ಬಂದು ಅದರಲ್ಲೆ ಮುಕ್ತಾಯ ಮಾಡುವುದುಂಟು. ಉಡಾಪೆಗತಿಯು ಐಚ್ಛಿಕ. ಗಂಭೀರ, ದುಃಖಾದಿ ಸನ್ನಿವೇಶಗಳಲ್ಲಿ ಉಡಾಪೆ ಸಲ್ಲದೆಂದು ಸಂಪ್ರದಾಯವಿದೆ. ಉಡಾಪೆಗೆ ಮುಕ್ತಾಯವು ಏಕತಾಳದ್ದೆ ಇರುತ್ತದೆ.

ಉಡಾಪೆ ಮಾಡುವುದು/ಉಡಾಪೆಗೆ ಹೋಗುವುದು : 1. ಗತಿಭೇದ ಮಾಡುವಿಕೆ.
2. ಅಷ್ಟತಾಳವನ್ನು ಉಡಾಪೆಗೆ ತಿರುಗಿಸುವುದು.

ಉಡಿ : ಉಡ್ಡಿ, ಹಾರಾಟ, ಲಾಗ, ನರ್ತನದ ಭಾಗ.
1. ನೇರ ಲಾಗ. ನಿಂತಲ್ಲೆ ಕಾಲು ಮಡಚಿ ಮೇಲೆ ಹಾರುವುದು. ಕುಮಚಟ್ಟು. ಬಡಗುತಿಟ್ಟು, ಉ.ಕ.ಗಳಲ್ಲೂ, ಮೂಡಲಪಾಯ, ಘಟ್ಟದ ಕೋರೆಗಳಲ್ಲೂ ಬಳಕೆಯಿದೆ.
2. ತಿರುಗುಲಾಗ, ತಿರುಗುತ್ತ ಹಾರುವುದು. ಪ್ರತಿ ಲಾಗ ಮುಗಿದಾಗ ವೇಷ ಸಭೆಗೆ ಅಭಿಮುಖವಾಗಬೇಕು. ನೋಡಿ : **ಲಾಗ.**

ಉಡಿಗೆಜ್ಜೆ : ಸ್ತ್ರೀ ವೇಷದ ಸೊಂಟದ ಆಭರಣ. 'ಗೆಜ್ಜೆಸರ' ಎನ್ನಬಹುದು. ಹೊಕ್ಕುಳಿನ ಎಡ ಬಲಗಳಲ್ಲಿ ಚಂದ್ರಾಕಾರ ಮೂರು ಎಳೆ ನಿಲ್ಲುವಂತಹ ಆಭರಣ. ಇದು ಸೊಂಟದ ಪಟ್ಟಿ ಅಥವಾ ಡಾಬಿಗೆ ಜೋಡಣೆಯಾಗಿ ಅಥವಾ ಪ್ರತ್ಯೇಕವಾಗಿ ಇರಬಹುದು.

ಉತ್ತರಕನ್ನಡ ತಿಟ್ಟು : ಉತ್ತರತಿಟ್ಟು, ಬಡಗಬಡಗು ತಿಟ್ಟು; ಕರಾವಳಿಯಲ್ಲಿಯ ಯಕ್ಷಗಾನ ಪ್ರಭೇದಗಳಲ್ಲಿ ಒಂದು. ಭಟ್ಕಳದಿಂದ ಕಾರವಾರ ತನಕ, ಘಟ್ಟದ ಮೇಲೆ ಸಿದ್ದಾಪುರದಿಂದ ಯಲ್ಲಾಪುರ ತನಕ ಈ ತಿಟ್ಟಿನ ಪ್ರದೇಶ.

ಉತ್ತರಕನ್ನಡದ ಶೈಲಿಯೆಂಬುದು, ಪ್ರತ್ಯೇಕ ಪ್ರಭೇದವೆ, ಅಥವಾ ಬಡಗುತಿಟ್ಟು ಎಂಬುದರ ಒಂದು ಒಳಪ್ರಕಾರ, ಉಪ ಭೇದವೆ, ಎಂಬುದು ಒಂದು ಪ್ರಶ್ನೆ. ಸ್ಥೂಲಮಾನದಿಂದ ಈ ಪ್ರಭೇದವು ಬಡಗುತಿಟ್ಟನ್ನು ಬಹುವಾಗಿ ಹೋಲುತ್ತದೆ. ಹಿಮ್ಮೇಳ ಸಾಮಗ್ರಿ, ಹಾಡುಗಾರಿಕೆಯ ಶೈಲಿ, ವೇಷಭೂಷಣಗಳು ಹೆಚ್ಚು ಕಡಮೆ ಒಂದೇ ತೆರನಾಗಿವೆ. ಆದರೆ, ಅಭಿವ್ಯಕ್ತಿ ವಿಧಾನ, ಮಂಡನೆಯ ಕ್ರಮಗಳಲ್ಲಿ ಈ ತಿಟ್ಟು ತೆಂಕು, ಬಡಗುತಿಟ್ಟುಗಳಿಗಿಂತ ತುಂಬ ಭಿನ್ನವಾಗಿದೆ. ರಂಗಕ್ರಮ, ಸಂಪ್ರದಾಯಗಳಲ್ಲೂ ಭಿನ್ನತೆಗಳಿವೆ.

ಈ ತಿಟ್ಟಿನ ಪ್ರಧಾನವಾದ ವೈಶಿಷ್ಟ್ಯವೆಂದರೆ, ವಿವರವಾದ, ಪುನರಾವರ್ತನೆಗಳೊಂದಿಗೆಕೂಡಿದ ಪದ್ಯಾಭಿನಯ, ಪದಾಭಿನಯಗಳು. ನರ್ತನ

ದೊಂದಿಗಿನ ಆಂಗಿಕ ಅಭಿನಯವನ್ನು ಈ ತಿಟ್ಟು ಒಂದು ಸಮರ್ಥ ಭಾಷೆಯಾಗಿ ಬೆಳೆಸಿದ್ದು, ಸೂಕ್ಷ್ಮವೂ, ಉತ್ಕೃಷ್ಟವೂ ಆದ ಕಲೆಗಾರಿಕೆಯನ್ನು ಸಾಧಿಸಿದೆ. ಚಿಕ್ಕ ಪ್ರಸಂಗವೊಂದನ್ನು ಆಯ್ದು ಅದನ್ನು ವಿವರವಾಗಿ, ನಿಧಾನವಾಗಿ ಪ್ರದರ್ಶಿಸುವುದು ಇಲ್ಲಿಯ ವಿಧಾನವಾಗಿದೆ. ಭಾಗವತನೂ, ವಾದಕರೂ ಇಲ್ಲಿ ರಂಗದ ನಟರ ಕೆಲಸವನ್ನು ತುಂಬ ಸೂಕ್ಷ್ಮವಾಗಿ ಅನುಸರಿಬೇಕಾಗುತ್ತದೆ. ಮುದ್ರೆಗಳ ಭಾಷೆಯೂ ವಿಸ್ತಾರವಾಗಿದೆ. ಈ ಅಂಶದಲ್ಲಿ ಇದು ನಮ್ಮ ಇತರ ಶಾಸ್ತ್ರೀಯ ನೃತ್ಯ ಪ್ರಕಾರಗಳನ್ನು ಹೋಲುತ್ತದೆ.

ವೇಷಭೂಷಣಗಳಲ್ಲಿನ ಪ್ರತ್ಯೇಕತೆಗಳನ್ನು ಹೀಗೆ ಗುರುತಿಸಬಹುದು. (ಬಡಗುತಿಟ್ಟಿನ ಹೋಲಿಕೆಯಿಂದ ಹೇಳಿದೆ) ಉರುಟು ಎದೆಹಾರಗಳು ಬಳಕೆಯಲ್ಲಿದ್ದುವು, ಕತ್ರಿ ಎದೆಹಾರಗಳಿರಲಿಲ್ಲ. ಮುಂಡಾಸು ಮತ್ತು ಪಗಡಿಗಳಿಗೆ ಕೇದಗೆ ಎಂಬ ಮುನ್ನೆಲೆಯ ಆಭರಣ ಇರಲಿಲ್ಲ. ಕಚ್ಚೆಗೆ, ಚೌಕುಳಿಯ ಕಸೆವಸ್ತ್ರ ಇರಲಿಲ್ಲ. ಬಣ್ಣದ ಸೀರೆಗಳೇ ಇದ್ದುವು. ಎಲ್ಲ ವೇಷಗಳಿಗೂ ಇಡಿ ತೋಳಿನ ಅಂಗಿಗಳೇ ಇದ್ದುವು. ಅರ್ಧತೋಳಿನ ಅಂಗಿಗಳಿರಲಿಲ್ಲ.

ಚೌಕಿಯಲ್ಲಿ ವೇಷಧಾರಿಗಳು, ಉಳಿದ ತಿಟ್ಟುಗಳಂತೆ ಸಾಲುಗಳಲ್ಲಿ ಕುಳಿತುಕೊಳ್ಳದೆ, ಮಂಡಲಾಕಾರವಾಗಿ ಕುಳಿತುಕೊಳ್ಳುತ್ತಿದ್ದರು.

ವೇಷ, ಚೌಕಿಯ ವಿಧಾನಗಳು, ಮುಂತಾದ ವಿಚಾರಗಳಲ್ಲಿ ಈ ತಿಟ್ಟು ಬಡಗುತಿಟ್ಟಿನಿಂದ ಕೆಲವು ಅಂಶಗಳನ್ನು ಪುನಃ ಸ್ವೀಕರಿಸಿದ್ದು, ಇತ್ತೀಚೆಗೆ ಬದಲಾವಣೆಗಳನ್ನು ಕಂಡಿದೆ.

ಉತ್ತರಕನ್ನಡ ಯಕ್ಷಗಾನಕ್ಕೆ ನಾಲ್ಕು ಶತಮಾನಗಳಿಗೂ ಮಿಕ್ಕಿದ ಇತಿಹಾಸವಿದೆ. 1600ರ ಸುಮಾರಿಗೆ ಸೋದೆಯ ಅರಸನೊಬ್ಬನು ಬಿಜಾಪುರದ ಬಾದಶಹನ ಬಳಿಗೆ ದಶಾವತಾರ ಆಟವನ್ನೊಯ್ದ ವಿಚಾರವು ಕರ್ನಲ್ ಮಕೆಂಜಿಯ ಶಿರಸಿ ಕೈಫಿಯತ್ತಿನಲ್ಲಿದೆ (ಮಾಹಿತಿ: ಡಾ। ಜಿ. ಎಸ್. ಭಟ್, ಮೈಸೂರು, 14-9-1992ರ ಪತ್ರ). ಹೊನ್ನಾವರ ಪ್ರದೇಶದ ಹೆಬ್ಬೈಲು ಎಂಬಲ್ಲಿ ಮುನ್ನೂರು ವರ್ಷಗಳ ಹಿಂದೆ ಮೇಳವಿತ್ತೆಂದು ಪ್ರತೀತಿ (ದಿ। ಏಕ್ಬರ್ ಜೋಶಿ, ಗೋಕರ್ಣ- ಇವರು ತಿಳಿಸಿದ್ದು). ಉತ್ತರಕನ್ನಡದ ಆಟದ ಮೇಳವು ಬಡೋದೆಗೆ ಹೋಗಿ, ಮಹಾರಾಷ್ಟ್ರದ ಪೌರಾಣಿಕ ನಾಟಕಗಳಿಗೆ ಆದಿಸ್ಫೂರ್ತಿಯಾದ ವಿಚಾರ ಪ್ರಸಿದ್ಧವಾದದ್ದು.

1965ರ ಬಳಿಕ ಈ ತಿಟ್ಟು, ತನ್ನ ಪ್ರದೇಶದ ಹೊರಗೆ ಹೆಚ್ಚು ಪ್ರಚಾರ ಪ್ರಸಾರಗಳನ್ನು ಪಡೆಯಿತು. ಮಾತ್ರವಲ್ಲ ಗಾನ, ಅಭಿನಯಗಳಲ್ಲಿ ತೆಂಕು, ಬಡಗುತಿಟ್ಟುಗಳ ಮೇಲೆ ಗಾಢವಾದ ಪ್ರಭಾವವನ್ನು ಬೀರಿತು. ತಾನೂ ಕೆಲವಂಶದಲ್ಲಿ ಪ್ರಭಾವಿತವಾಯಿತು. ಸದ್ಯ ಉ. ಕನ್ನಡ ಶೈಲಿ ಮತ್ತು ಬಡಗುತಿಟ್ಟು ತೀರ ಹತ್ತಿರಕ್ಕೆ ಬಂದಿದ್ದು, ಅವು ಒಂದೇ ತಿಟ್ಟಾಗಿ ವಿಲೀನವಾಗುವ ದಿನಗಳು ದೂರವಿಲ್ಲ.

ಉತ್ತರ ಕನ್ನಡ ತಿಟ್ಟಿನ ಹಳೆಯ, ಪ್ರಾತಿನಿಧಿಕ ಎನ್ನಬಹುದಾದ ಅಂಶಗಳನ್ನು ಹೊನ್ನಾವರ ಬಳಿಯ ಕರ್ಕಿಯ ಹಾಸ್ಯಗಾರ ಮನೆತನದ ಮೇಳದಲ್ಲಿ ಇಂದಿಗೂ ಕಾಣಬಹುದು. ಈ ಮೇಳ ಅಸ್ತಂಗತವಾಗುವ ಹಂತದಲ್ಲಿದೆ.

ಉದಯರಾಗ: 1. ಬೆಳಗಿನ ಜಾವದಲ್ಲಿ ಹಾಡುವ ರಾಗ. ಆರಭಿ, ಮೋಹನ, ಭೂಪಾಳಿ, ಭೂಪಾಳಿ, ಮೋಹನ ಕಲ್ಯಾಣಿ, ಜೋಗಿಯಾ, ರೇಗುಪ್ತಿ, ಢವಳಾರ, ಸಾವೇರಿ ಇತ್ಯಾದಿ ರಾಗಗಳು. ಮುಖ್ಯವಾಗಿ ರೇಗುಪ್ತಿ, ಮೋಹನಗಳು ಉದಯರಾಗಗಳೆಂದು ಪ್ರಸಿದ್ಧ.

2. ಉದಯರಾಗದ ರಚನೆ, ಹಾಡು.

ಉದ್ದಂಡಿ ಕಿರೀಟ (ಮೂ.): ರಕ್ಕಸಿಯ ಕಿರೀಟ, ಮುಡಿ. ಕರಾವಳಿಯ ಹೆಣ್ಣುಬಣ್ಣದ ಕಿರೀಟದಂತೆ ಇದೆ. ಸರ್ವತ್ರ ಏಕಪ್ರಕಾರ ಇರುವ ಕಿರೀಟ ಪ್ರಾಯಃ ಇದೊಂದೆ. ಕಿಳಿಭಂಟನ ಕಾಳಗದ ಉದ್ದಂಡಿ ಪಾತ್ರವು, ಮೂಡಲಪಾಯದ ಪ್ರಸಿದ್ಧ ಪಾತ್ರವಾದುದರಿಂದ ಈ ಹೆಸರು ಬಂದಿರಬೇಕು. ಕರಾವಳಿಯಲ್ಲಿ ಶೂರ್ಪನಖಿ ಕಿರೀಟ ಎಂದು ಇದೆ. ಕುತ್ತರಿ ಆಕಾರ. ನೋಡಿ : **ಹೆಣ್ಣು ಬಣ್ಣದ ಕಿರೀಟ, ಕುತ್ತರಿ.**

ಉದ್ದರಝುಂಪೆ = ನೋಡಿ: **ನಿಧಾನ ಝುಂಪೆ, ಆದಿಝುಂಪೆ.**

ಉದ್ದತ್ರಿವುಡೆ = ನೋಡಿ : **ನಿಧಾನ ತ್ರಿವುಡೆ, ಆದಿತ್ರಿವುಡೆ.**

ಉದ್ದನಾಮ: ವೇಷಗಳ ಹಣೆಯಲ್ಲಿ ಬಣ್ಣದ ಉದ್ದನಾಮ. ವೈಷ್ಣವ ನಾಮ ಯಾನೆ ಗೂಟನಾಮ. ಬಿಳಿನಾಮ ಎಳೆದು ಅದಕ್ಕೆ ಕೆಂಪು, ಕಪ್ಪುರೇಖೆಗಳನ್ನು ಅದರ ಎರಡೂ ಪಕ್ಕಗಳಲ್ಲಿ ಎಳೆದು ತೋರಿಸುವರು.

ಬಡಗು, ಉ.ಕ. ಗಳಲ್ಲಿ ಕಪ್ಪುಗೆರೆಯನ್ನು ಎಳೆದು, ಹಣೆಯ ಮಧ್ಯದಲ್ಲಿ ಕಪ್ಪು ಬೊಟ್ಟಿಟ್ಟು, ಪುನಃ ಅಲ್ಲಿಂದ ಮೇಲೆ ನಾಮವನ್ನು ಎಳೆದು, ಅದರ ಬದಿಗೆ ಬಿಳಿ, ಕೆಂಪು ರೇಖೆ ಎಳೆಯುವರು. ಇದು ಮಾಧ್ವಸಂಪ್ರದಾಯದ ನಾಮವನ್ನು ತದ್ವತ್ತಾಗಿ ಹೋಲುವುದು.

ತೆಂಕುತಿಟ್ಟಿನಲ್ಲಿ ಬಿಳಿ ಬಣ್ಣದ ನಾಮವನ್ನು ಗೆರೆಹಾಕಿ, ಅಥವಾ ಚಿಕ್ಕ ಚುಟ್ಟಿ ಅಥವಾ ಮುತ್ತರಿ ಇಟ್ಟು ಎಳೆದು, ಅದಕ್ಕೆ ಆಚೀಚೆ ಕಪ್ಪು, ಕೆಂಪು, ಹಳದಿ ಗೆರೆಗಳನ್ನೆಳೆದು ಜೀವ ಕೊಡುವರು. ಇದು ಹೆಚ್ಚು ಅಗಲವಾಗಿದ್ದು ಇಂಗ್ಲಿಷ್ 'U' ಆಕಾರದಲ್ಲಿರುವುದು. ಇದು ಶ್ರೀ ವೈಷ್ಣವ ಸಂಪ್ರದಾಯದ ನಾಮ (ತಿರುಪತಿನಾಮ)ವನ್ನು ತದ್ವತ್ತಾಗಿ ಹೋಲುವುದು. ಇದು ಕುತೂಹಲ ಕರವಾಗಿದೆ. ತೆಂಕುತಿಟ್ಟಿನ ಮೂಲ ಸ್ಥಾನವಾದ ಕುಂಬಳೆಗೂ ತಿರುಪತಿಗೂ ಸಂಬಂಧವಿದೆ. ತಿರುಪತಿ ದಾಸರು, ಗೊಲ್ಲರು, ಕುಂಬಳೆಗೆ ಬರುತ್ತಿದ್ದರಂತೆ. ತಿರುಪತಿ ದಾಸರಿಗೆ ನೀಡಿದ ಉಂಬಳಿಯೇ ಮಾನ್ಯ ವೆಂಬ ಊರು. ಮಾನ್ಯ ಎಂದರೆ ಉಂಬಳಿಯೆಂದು ಅರ್ಥ. ಅಲ್ಲಿ ತಿರುಪತಿ ವೆಂಕಟರಮಣ ದೇವಾಲಯವೂ, ತೆಲುಗು ಮೂಲದ ಜನಾಂಗವೂ ಈಗಲೂ ಇರುವುವು. (ಈ ಮಾಹಿತಿ ನೀಡಿದವರು ದಿ। ಕುಕ್ಕಿಲ ಕೃಷ್ಣ ಭಟ್ಟರು.)ನೋಡಿ: **ಗೂಟನಾಮ, ಗೋಟುನಾಮ.**

ಉದ್ದಬೊಟ್ಟು: ಸಾಂಪ್ರದಾಯಿಕ ಸ್ತ್ರೀವೇಷದ ಹಣೆಯಲ್ಲಿ ಬರೆಯುವ ಬೊಟ್ಟು, ನಾಮ. ಇದು ಬಾದಾಮಿ ಬೀಜದ ಅಥವಾ ದೀಪಶಿಖೆಯ ಆಕೃತಿಯ ಬರವಣಿಗೆ. ಇದರ ಸುತ್ತ ಬಿಳಿ ಚುಕ್ಕಿ ಗಳನ್ನು ಮತ್ತು ಗೆರೆಗಳನ್ನು ಬರೆದು ಅಲಂಕರಿಸು ತ್ತಾರೆ. ಹಿಂದೆ ಸ್ತ್ರೀ ವೇಷಗಳಿಗೆ ಈ ಉದ್ದಬೊಟ್ಟು ಮತ್ತು ಅಡ್ಡನಾಮ (ಅಡ್ಡ ಕುಂಕುಮ)ವೇ ಇದ್ದುದು. ಈಗಿನ ಪದ್ಧತಿಯ ಉರುಟು ಬೊಟ್ಟು ಬಂದುದು ಸು. 1940ರ ಅನಂತರ. ಸ್ತ್ರೀವೇಷಗಳಿಗೆ ಹಿಂದೆ ಉದ್ದ ನಾಮದಂತಹ ಬೊಟ್ಟು ಇರುತ್ತಿತ್ತು. ಮಧ್ಯೆ ಕೆಂಪು, ಸುತ್ತ ಬಿಳಿ ಗೆರೆ ಎಳೆದು ಆ ಗೆರೆಗಳನ್ನು ಹಣೆಯ ತುದಿಯ ವರೆಗೆ ಬೆಳೆಸು ತ್ತಿದ್ದರು. ಸುಮಾರಾಗಿ ದೀಪದ ಜ್ವಾಲೆಯಂತೆ ಈ ನಾಮವಿರುತ್ತಿತ್ತು.

ಉದ್ದಮುಕ್ತಾಯ: (ತೆ.) 1. ಪದ್ಯದ ಮೊದಲ ಚರಣ ಅಥವಾ ಚರಣಭಾಗ ಆದೊಡನೆ ನೀಡುವ ಬಿಡ್ತಿಗೆ– ನೋಡಿ. **ಬಿಡ್ತಿಗೆ.**

2. ಪೂರ್ತಿ ಮುಕ್ತಾಯ, ಗಿಡ್ಡ ಮುಕ್ತಾಯ ಎಂಬುದರ ವಿರೋಧ ಪದ.

ಪದ್ಯದ ಮೊದಲ ಭಾಗದಲ್ಲಿ ಉದ್ದ ಮುಕ್ತಾಯ (ಬಿಡ್ತಿಗೆ) ಕೊಡುವ ಕ್ರಮವು ಉತ್ತರಕನ್ನಡ ದಲ್ಲೂ ಹಿಂದೆ ರೂಢಿಯಲ್ಲಿತ್ತು. ಇತ್ತೀಚಿನ ವರೆಗೆ ಕರ್ಕಿ ಸಂಪ್ರದಾಯದಲ್ಲಿ ಇದು ಬಳಕೆಯಾಗು ತ್ತಿತ್ತು. ಈಗ ಬಡಗು, ಉ.ಕ.ಗಳಲ್ಲಿ ಒಂದೇ ತರಹದ ಮೊದಲ ಮುಕ್ತಾಯ ಬಳಕೆಯಲ್ಲಿದೆ.

ಉಪ್ಪಾನೆ ಕನ್ನಡಿಸರ: ಸುಮಾರು ಅರ್ಧ ಇಂಚಿನಿಂದ, ಒಂದು ಇಂಚಿನ ಅಳತೆಯ ಚೌಕ ಅಥವಾ ಆಯತ ಹಲ್ಲೆಗಳಿಗೆ, ಕನ್ನಡಿ ಹರಳು ಕೂರಿಸಿ ತಯಾರಿಸಿದ ಸರ.

ಉಪ್ಪುಮಣಿಸರ: ಚಿಕ್ಕ ಚೌಕಾಕಾರದ ಉಪ್ಪಿನ ಮಣಿಗಳ ಸರ. ಮರದ ಮಣಿ, ಬೇಗಡೆಗಳಿಂದ ತಯಾರಿಸುವರು. ಸ್ತ್ರೀವೇಷಕ್ಕೆ ಬಳಕೆ.

ಉಯ್ಯಾಲೆ (ತೆ.): ದೇವೀ ಮಹಾತ್ಮೆ ಪ್ರಸಂಗದ ಸನ್ನಿವೇಶವೊಂದಕ್ಕಾಗಿ ಬಳಸುವ ಉಯ್ಯಾಲೆ. ರಂಗಸ್ಥಳದ ಹತ್ತಿರ, ಅಲಂಕರಿಸಿ ಹಗ್ಗಗಳಿಗೆ ನೇತಾಡಿಸಿಡುವುದು. ಬೆಳ್ಳಿತಗಡು ಹೊದಿಸಿದ್ದೂ ಇರುತ್ತದೆ. ಇದು ಸುಮಾರು ಐವತ್ತು ವರ್ಷಗಳಿಂದೀಚೆಗೆ ಬಳಕೆಯಲ್ಲಿದೆ. ಹಿಂದೆ, ರಂಗದಲ್ಲಿದ್ದ ಪೀಠವೇ ಉಯ್ಯಾಲೆಯಾಗಿಯೂ ಕಲ್ಪಿಸಲ್ಪಡುತ್ತಿತ್ತು.

ಉರುಟು ಎದೆಹಾರ: ಉರುಟು ಆಕೃತಿಯ ಎದೆಪದಕ. ಇದು ಎಲ್ಲ ತಿಟ್ಟುಗಳಲ್ಲೂ ಸಾಂಪ್ರದಾಯಿಕವಾಗಿ ಇದ್ದ ಆಭರಣ. ತೆಂಕು, ಉತ್ತರಕನ್ನಡ ತಿಟ್ಟುಗಳಲ್ಲಿ, ಗಟ್ಟದಕೋರೆ ತಿಟ್ಟಿನಲ್ಲೂ ಬಳಕೆಯಿದೆ. ಬಡಗುತಿಟ್ಟಿನಲ್ಲಿ ಬಣ್ಣದ ವೇಷಗಳಿಗೆ ಮಾತ್ರ ಸದ್ಯ ಬಳಕೆಯಲ್ಲಿದೆ. ಮರದಿಂದ ತಯಾರಿಸಿದ್ದು, ಅದಕ್ಕೆ ಕನ್ನಡಿ ಹರಳುಗಳನ್ನೂ, ಹಳದಿ ಬೇಗಡೆಯನ್ನೂ ಅಂಟಿ ಸಿರುತ್ತಾರೆ. ನೋಡಿ: **ಎದೆಹಾರ, ಕತ್ರಿ ಎದೆಹಾರ.**

ಉರುಟು ಕಿರೀಟ (ತೆ./ಗ.): ರಾಜವೇಷದ ಕೋಲು ಕಿರೀಟ. ಕವುಚಿ ಹಾಕಿದ ತಂಬಿಗೆಯಾಕಾರಕ್ಕೆ ಇಂಗ್ಲಿಷ್ S ಆಕಾರದ ಪಕ್ಕಗಳಿದ್ದು, ತುದಿಯಲ್ಲಿ ನವಿಲುಗರಿಗಳಿವೆ. ಪಕ್ಕಗಳಿಗೆ ಕಪ್ಪು ಉಣ್ಣೆಗೊಂಡೆ ಗಳಿರುತ್ತವೆ. ಹಳೆಯ ಉರುಟು ಕಿರೀಟಗಳಲ್ಲಿ ಸೂಕ್ಷ್ಮ ಕೆತ್ತನೆಗಳಿವೆ. ಇದಕ್ಕೆ ಹಳದಿ ಬೇಗಡೆ ಹಚ್ಚುವರು. ನೋಡಿ: **ಕಿರೀಟ, ಕೋಲು ಕಿರೀಟ.**

ಉರುಟು ಬೊಟ್ಟು: 1. ಪುರುಷ ವೇಷಗಳು ಅಡ್ಡನಾಮದ ಮಧ್ಯಕ್ಕೂ, ಉದ್ದನಾಮದ ಮಧ್ಯಕ್ಕೂ ಬರೆಯುವ ಬೊಟ್ಟು, ತಿಲಕ.

2. ಸ್ತ್ರೀವೇಷಗಳ ಬೊಟ್ಟು, ಉರುಟು ಕುಂಕುಮ ಬರವಣಿಗೆ.

ಉರುಳಿಕೆ (ಹೊರಳಿಕೆ/ಹೊರಡಿಕೆ): ಮದ್ದಳೆ, ಚೆಂಡೆಗಳನ್ನು ಬಾರಿಸುವ ಒಂದು ವಿಧಾನ. ಬೆರಳು, ಕೋಲುಗಳನ್ನು ಉರುಳಿಸಿ, ಪೆಟ್ಟುಗಳು ನಿರಂತರವಾಗಿ ಕೇಳುವಂತೆ ಬಾರಿಸುವುದು. ತರಿಕಿಟ।ಕಿಟತಕ– ಇದು ಮೂಲ ಉರುಳಿಕೆ.

ಬಿಡ್ತಿಗೆ, ಮುಕ್ತಾಯ, ಅಬ್ಬರ, ಕೇಳಿ ಪೀಠಿಕೆಗಳಲ್ಲಿ, ದಸ್ತುಗಳಲ್ಲಿ ಉರುಳಿಕೆ ಇಂತಿಂತಹ ಕಡೆ ಬರಬೇಕೆಂದು ಸಂಪ್ರದಾಯ ನಿರ್ಣಯಗಳಿವೆ. ತೆಂಕುತಿಟ್ಟಿನ ಬಿಡ್ತಿಗೆಯಲ್ಲಿ ಉತ್ತರಾರ್ಧವು ಉರುಳಿಕೆಯಲ್ಲಿ ಬರಬೇಕು.

ಉರುಳಿಕೆಗಳಲ್ಲಿ ಒತ್ತೆ ಉರುಳಿಕೆ (ಒಂಟಿ ಉರುಳಿಕೆ) ಎರಟ್ಟೆ ಉರುಳಿಕೆ (ಜೋಡಿ ಉರುಳಿಕೆ) ನಿಧಾನ, ಗಟ್ಟಿ, ಸಣ್ಣ, ದೊಡ್ಡ ಎಂಬ ಪ್ರಭೇದ ಗಳಿವೆ. **ಚೆರಳು ಉರುಳಿಕೆ, ಗಂಟುಉರುಳಿಕೆ** ಇವು ಇನ್ನೊಂದು ಬಗೆಯ ಪ್ರಭೇದಗಳು. ನೋಡಿ: **ಚೆರಳು ಉರುಳಿಕೆ; ಗಂಟು ಉರುಳಿಕೆ.**

ಉಲಿಯುವುದು (ಬ.): ಏರುಸ್ವರದ ಆಲಾಪ, ಬೊಬ್ಬೆ.

ಉಲ್ಲನ್ : (Woollen) ವೇಷಭೂಷಣಗಳ ಅಂಗೋಪಾಂಗಗಳಿಗೆ ಬೇಕಾಗುವ ಉಣ್ಣೆ, ಕಂಬಳಿ ನೂಲು. ಕಿರೀಟ, ಎದೆಪದಕ, ವೀರಕಸೆ, ಮಾರು ಮಾಲೆಗಳ ಅಲಂಕರಣಕ್ಕೆ ಉಲ್ಲನ್‌ಗೊಂಡೆಗಳು ಬೇಕು. ತಡ್ಪೆ ಕಿರೀಟ, ಡಾಬು, ಕೈಕಟ್ಟು, ಭುಜಕೀರ್ತಿಗಳಿಗೆ ಉಲ್ಲನಿನ ಅಂಚು ಅಲಂಕರಣ. ಕಟ್ಟುವ ಮೀಸೆಗೂ ಉಲ್ಲನ್ ನಾರು ಬಳಕೆಯಿದೆ. ಜಡೆಗೊಂಡೆಗೂ ಉಲ್ಲನ್ ಅಗತ್ಯ.

ಉಲ್ಲನ್ ಗೊಂಡೆ : ಉಣ್ಣೆಗೊಂಡೆ. ವೇಷಸಾಮಗ್ರಿಗೆ ಅಲಂಕರಣ. ನೋಡಿ : **ಉಲ್ಲನ್.**

ಉಲ್ಲನ್ ಡಾಬು : ವೇಷದ ಸೊಂಟಕ್ಕೆ ಕಟ್ಟುವ, ಉಣ್ಣೆ ಅಂಚಿನ ಡಾಬು. ಬೋಳು ಡಾಬಿನ ಜತೆ ಕಟ್ಟುತ್ತಾರೆ.

ಉಲ್ಲನ್ ಮೀಸೆ : ಉಣ್ಣೆನೂಲಿನ ಕಟ್ಟು ಮೀಸೆ. ಅಂಟಿಸಿ ಹಚ್ಚುವ ಕ್ರೇಪ್‌ಹೇರ್ ಮೀಸೆ, ಮತ್ತು ಕಟ್ಟುವ ನಾರು ಮೀಸೆಗಳಿಂದ ಪ್ರತ್ಯೇಕಿಸಲು ಈ ಹೆಸರು.

ಉಳಿ : 1. ಚೆಂಡೆ, ಮದ್ದಲೆ ತಯಾರಿಗೂ, ವೇಷ ಸಾಮಗ್ರಿ ತಯಾರಿಗೂ ಬಳಸುವ ಕಬ್ಬಿಣದ ಆಯುಧಗಳು ಉಳಿ. ಬ. 2. : ಸಂಬಳ ಕಡಿತ. ಉಳಿಕೆ. ನೋಡಿ : **ಕಳ್ಪ.**

ಊ

ಊರ ಮಡಿವಾಳ (ತೆ.) : ಪೂರ್ವರಂಗದಲ್ಲಿ ಬರುವ ಒಂದು ಕಟ್ಟು ಹಾಸ್ಯ. ಮಡಿವಾಳ ಹಾಸ್ಯ. ಕನ್ನಡ, ತುಳು ಮಾತು. – **ತೆಂಕಮಡಿವಾಳ**ನಿಗಿಂತ ಭಿನ್ನ ಎಂಬುದಕ್ಕೆ ಈ ಹೆಸರು.

ಊರಸೆಣಬು : ಸಾಮಗ್ರಿ ಜೋಡಣೆ, ಕಟ್ಟುವಿಕೆಗೆ ಬಳಸುವ ಹಗ್ಗ, ಹಗ್ಗ ತಯಾರಿಯ ಗಿಡ. ನಾರಿನ ಕೋಲು. ಮೀನು ಬಲೆ ಸೆಣಬು. ಕೋಲನ್ನು ಕೊಳೆಸಿ, ನಾರು ತೆಗೆಯುವರು, ಈ ನಾರು ತುಂಬ ಗಟ್ಟಿ.

ಋ

ಋಷಿ ಜುಟ್ಟು : 1. ಋಷಿ ವೇಷದ ಜುಟ್ಟು. ಋಷಿಮುಡಿ. ನಾರು, ಚವರಿಗಳನ್ನು ಸುತ್ತಿ ತಯಾರಿಸುವುದು. ಜುಟ್ಟಿನ ತುದಿಗೆ ಮಣಿಸರ, ಪದಕ ಹೊಂದಿಸುತ್ತಾರೆ.

ಉ. 2. ಋಷಿ ಜುಟ್ಟು. ಶಿಖೆ ಎಂಬ ಆಭರಣ. ಇದಕ್ಕೆ ಜರಿ ಲಾಡಿ ಸುತ್ತಿ, ಪಗಡಿಯನ್ನು ಹೋಲುವಂತೆ ಮಾಡುವರು. ಯಕ್ಷಗಾನ ವೇಷ ಶೈಲಿಗೆ ಇದು ಹೊಂದಿಕೆಯಲ್ಲಿದೆ.

ಎ

ಎಕ್ಕಾವಳಿ : ಏಕಾವಲೀಸರ. ಮುತ್ತು ಅಥವಾ ಕಾಯಿ ಪೋಣಿಸಿದ ಒಂದೆಳೆಸರ. ಸ್ತ್ರೀ, ಪುರುಷ ವೇಷಗಳಿಗೆ ಬಳಕೆ.

ಎಡ$_1$: ಮದ್ದಲೆಯ ಎಡಭಾಗ. ಇದರ ಚರ್ಮದ ಬಿಗಿತ ಕಡಿಮೆ. 'ಧ್ಧಿ' ಎಂಬ ನಾದ ಕೊಡುತ್ತದೆ.

ಎಡ$_2$: ಒತ್ತು , ಉಪ– ಎಂಬ ಅರ್ಥದಲ್ಲಿ ಉದಾ : ಎಡ (ಎಡೆ) ಬಣ್ಣ, ಎಡ ಪುಂಡು ಇತ್ಯಾದಿ.

ಎಡ ಇಂಡಿಗೆ : ಮದ್ದಲೆಯ ಎಡಭಾಗದ ಇಂಡಿಗೆ, ಬಾಯಿಯ ಸುತ್ತ ಇರುವ ಹೆಣಿಗೆ.

ಎಡ ಒತ್ತು : 1. ಮದ್ದಲೆಯ ಎಡಭಾಗದ ಒತ್ತು ಬಡಿತ. ಒತ್ತಿ ಬಾರಿಸುವ ಪೆಟ್ಟು.

2. ಉಪ-ಉಪ. ಒತ್ತು ಎಂದರೂ ಉಪವೇ. ಉದಾ : ಒತ್ತು ಮದ್ದಲೆಗಾರ. ಮತ್ತೊಬ್ಬನೂ ಇದ್ದರೆ ಆತ ಎಡ ಒತ್ತು ಮದ್ದಲೆಗಾರ. ಹಾಗೆಯೇ ಇತರತ್ರ.

ಎಡಕರ್ನ(ರ್ಣ) (ತೆ.): ಮದ್ದಲೆಯ ಎಡ ಚರ್ಮದ ಕಪ್ಪುಭಾಗ. ಕರಣೆ, ಶಾಯಿ. ಹಿಂದೆ ಎಡಕ್ಕೆ ಕರ್ನವಿರಲಿಲ್ಲ. ಹಿಟ್ಟಿನ ಚೋಣ ಇತ್ತು. ಈಗ ಕಿಟ್ಟದ ತೆಳುವಾದ ಕರ್ನ ಹಾಕುತ್ತಾರೆ.

ಎಡಕೊಡುವುದು (ತೆ.) : ಚೆಂಡೆಯ ಬಡಿತಗಳಿಗೆ ಸರಿಯಾಗಿ ಮದ್ದಲೆಯ ಗತ್ತುಗಳನ್ನು ಮಾತ್ರ ಬಾರಿಸುವುದು. ಚೆಂಡೆಗೆ ಸ್ವರಮೇಳ ಕೊಡುವುದು. ಚೆಂಡೆಯ ಬಡಿತವು ಇದರಿಂದ ಎದ್ದು ಬರುವುದು. ಚೆಂಡೆ ಇರುವಾಗ, ಬಿಡ್ತಿಗೆ ಮುಕ್ತಾಯಗಳಿಗೆ, ಮದ್ದಲೆಯಲ್ಲಿ ಎಲ್ಲ ಪೆಟ್ಟುಗಳನ್ನು ಉರುಳಿಕೆಗಳನ್ನು ಬಾರಿಸುವ ಕ್ರಮವಿಲ್ಲ. ಚೆಂಡೆಯ ದೊಡ್ಡ ಪೆಟ್ಟುಗಳಿಗೆ ('ಟಾಂ' ಎಂಬುದಕ್ಕೆ) ಬಲದ ಪೆಟ್ಟು ಬರಬೇಕು. ಉರುಳಿಕೆಗೆ 'ಧೀ' ಕಾರಗಳು ಬರಬೇಕು.

ಬಡಗುತಿಟ್ಟಿನಲ್ಲಿ ಚೆಂಡೆ ಬಾರಿಸುವಾಗಲೂ, ಮದ್ದಲೆಯಲ್ಲಿ ಇಡಿದಸ್ತುಗಳನ್ನು, ಅಂದರೆ ಚಿಕ್ಕ ದೊಡ್ಡ ಪೆಟ್ಟುಗಳನ್ನೂ, ಉರುಳಿಕೆಗಳನ್ನೂ ಬಾರಿಸುವುದು, ಸಾಂಪ್ರದಾಯಿಕ ಕ್ರಮವಾಗಿದೆ. ತೆಂಕುತಿಟ್ಟಿನಂತೆ, ಮದ್ದಲೆ ಮಾತ್ರ ಬಾರಿಸುವುದಾದರೆ ಒಂದು ಬಗೆಯ ಪೆಟ್ಟುಗಳು, ಚೆಂಡೆಯೊಂದಿಗೆ ಬೇರೆ ಕ್ರಮದ ಪೆಟ್ಟುಗಳ 'ಎಡ ಕೊಡುವಿಕೆ' ಎಂಬ ಎರಡು ಕ್ರಮಗಳಿರಲಿಲ್ಲ. ಬಡಗುತಿಟ್ಟಿನಲ್ಲಿ ಸಾಂಪ್ರದಾಯಿಕವಾಗಿ (ಪ್ರಾಯಃ 1950ರ ತನಕವೂ) ಚೆಂಡೆಗೆ ಪ್ರತ್ಯೇಕ ನೇಮಕಗೊಂಡ ಜನ ಇರಲಿಲ್ಲ. ಮದ್ದಲೆಗಾರನೆಂದರೆ ಮದ್ದಲೆ ವಾದಕನೇ. (ತೆಂಕಿನಲ್ಲಿ ಅವನು ಚೆಂಡೆವಾದಕನಾಗಿರುತ್ತಾನೆ.) ಚೆಂಡೆಯನ್ನು ಬಿಡುವು ಇದ್ದ ವೇಷಧಾರಿಗಳು ಬಾರಿಸುವ ಕ್ರಮವಿದ್ದುದರಿಂದ, ಪ್ರಾಯಶಃ ಅಲ್ಲಿ ಎಡಕೊಡುವ ಕ್ರಮವಿರಲಿಲ್ಲ.

ಈಗ ಬಡಗುತಿಟ್ಟಿನಲ್ಲೂ ಚೆಂಡೆಯೊಂದಿಗೆ ಮದ್ದಲೆ ಬಾರಿಸುವಿಕೆಗೆ 'ಎಡಕೊಡುವುದು' ಇದ್ದು, ಪ್ರತ್ಯೇಕ ಪೆಟ್ಟುಗಳು ಬಳಕೆಯಾಗುತ್ತಿವೆ.

ಎಡಚೌಕಿ/ಎಡದ ಚೌಕಿ : ಚೌಕಿ ಅರ್ಥಾತ್ ಬಣ್ಣದ ಮನೆಯ ಎಡಭಾಗ. ಅಂದರೆ, ಚೌಕಿಯ ಅಗ್ರಭಾಗದಲ್ಲಿರುವ 'ದೇವರ' ಎಡ ಪಾರ್ಶ್ವ, ದೇವರಿಗೆ ಮುಖಮಾಡಿ ನಿಂತರೆ ನಮ್ಮ ಬಲದ ಕಡೆ, ಅಲ್ಲಿರುವ ವೇಷಧಾರಿಗಳ ಸಾಲಿಗೂ ಇದೇ ಹೆಸರು.

ತೆಂಕುತಿಟ್ಟಿನ ಹಳೆಯ ಪದ್ಧತಿಯಂತೆ ಎಡದ ಚೌಕಿಯಲ್ಲಿ ಎರಡನೆಯ ಬಣ್ಣದವೇಷ, ಪುಂಡುವೇಷ, ಏಳನೆಯ ಕಟ್ಟುವೇಷ, ಎರಡನೆಯ ಪುಂಡುವೇಷ, ಎರಡನೆಯ ಸ್ತ್ರೀವೇಷಗಳು ಕುಳಿತುಕೊಳ್ಳಬೇಕು. ಇವರಿಂದ ನಂತರ ನಿತ್ಯವೇಷ, ಕೋಡಂಗಿ ಮುಂತಾಗಿ ಅಭ್ಯಾಸಿಗಳು ಇರುತ್ತಾರೆ.

ಮೇಳದ ಸಂಘಟನೆಯು ಸ್ವಲ್ಪ ಬದಲಾದ ನಂತರ, ಮೇಲಿನ ಕ್ರಮದಲ್ಲಿ ಸ್ವಲ್ಪ ಬದಲಾವಣೆಗಳಾಗಿ, ಎಡದ ಚೌಕಿಯಲ್ಲಿ ಎರಡನೆಯ ಬಣ್ಣ, ಎದುರುವೇಷ, ಮೂರನೆಯ ಬಣ್ಣ, ಎರಡನೆಯ ಪುಂಡುವೇಷ, ಎರಡನೆಯ ಸ್ತ್ರೀವೇಷ, ನಿತ್ಯವೇಷ, ಕೋಡಂಗಿ– ಈ ಅನುಕ್ರಮ ಬಂದಂತೆ ಕಾಣುತ್ತದೆ.

ಇನ್ನಷ್ಟು ಬದಲಾವಣೆಗಳು ಆದ ಬಳಿಕ ಇಲ್ಲಿ, ಅನುಕ್ರಮವಾಗಿ ಒಂದನೆಯ ಬಣ್ಣದ ವೇಷ, ಪೀಠಿಕೆ ವೇಷ, ಏಳನೆಯ ಕಟ್ಟುವೇಷ, ಎರಡನೆಯ ಪುಂಡುವೇಷ, ನಿತ್ಯವೇಷ, ಕೋಡಂಗಿ– ಈ ಅನುಕ್ರಮವು ಬಂದಿತು. ಒಂದನೆಯ ಬಣ್ಣದ ವೇಷವು ಬಲದ ಚೌಕಿಯಿಂದ ಎಡದ ಚೌಕಿಗೆ ಸ್ಥಾನಾಂತರ ಹೊಂದಿದ್ದನ್ನು ಇಲ್ಲಿ ಗಮನಿಸಬಹುದು.

ಈಗ ವೇಷಧಾರಿಗಳ ಸ್ಥಾನಮಾನ, ವರ್ಚಸ್ಸು, ಹಿರಿತನಗಳ ಮೇಲೆ, ಚೌಕಿಯಲ್ಲಿಯ ಅವರ ಸ್ಥಳಗಳು ನಿರ್ಧರಿಸಲ್ಪಡುತ್ತವೆ. ವೇಷಾನುಸಾರವಾಗಿ ಅಲ್ಲ.

ಬಡಗುತಿಟ್ಟಿನ ಕ್ರಮದಲ್ಲಿ ಸಾಮಾನ್ಯವಾಗಿ, ಎಡದ ಚೌಕಿಯಲ್ಲಿ ಬಣ್ಣದ ವೇಷ, ಮುಂಡಾಸು ವೇಷಗಳು ಎರಡು, ಸಖೀ ವೇಷಗಳು, ನಿತ್ಯವೇಷ, ಕೋಡಂಗಿ– ಈ ಕ್ರಮದಿಂದ ಕುಳಿತುಕೊಳ್ಳುವರು.

ಎರಡೂ ತಿಟ್ಟುಗಳಲ್ಲಿ, ಅಡ್ಡ ಚೌಕಿಯ ಅಗ್ರಭಾಗ (ದೇವರ ಹಿಂಬದಿ) ಮತ್ತು ಕೊನೆಯ ಭಾಗ (ಹಾಸ್ಯಗಾರನ ಚೌಕಿಯ ಆಚೆಗೆ) ಭಾಗವತರ ವಿಶ್ರಾಂತಿಗಾಗಿ ಮತ್ತು ಹಿಮ್ಮೇಳ ಸಾಮಗ್ರಿಗಾಗಿ ಬಳಸುವರು. ಉತ್ತರ ಕನ್ನಡ ತಿಟ್ಟಿನಲ್ಲಿ, ಹಿಂದಿನ ಕ್ರಮದಂತೆ ವೇಷಧಾರಿಗಳು, ಮಧ್ಯದಲ್ಲಿ ದೀಪಗಳನ್ನಿಟ್ಟು ಮಂಡಲಾಕಾರವಾಗಿ ಕುಳಿತುಕೊಳ್ಳುತ್ತಿದ್ದುದರಿಂದ ಎಡ, ಬಲ ಚೌಕಿಗಳೆಂಬ ವಿಭಾಗವಾಗಲಿ, ಸ್ಥಾನಾನುಕ್ರಮವಾಗಲಿ ಇರಲಿಲ್ಲವೆಂದು ಕಾಣುತ್ತದೆ. ಈಗ ಅಲ್ಲೂ ಬಡಗು ಪದ್ಧತಿಯೇ ರೂಢಿಯಲ್ಲಿದೆ. ನೋಡಿ : **ಚೌಕಿ, ಬಲದ ಚೌಕಿ.**

ಎಡಪುಂಡು = ನೋಡಿ : ಎಡೆಪುಂಡು.

ಎಡಬಣ್ಣ/ಎಡೆಬಣ್ಣ : ಎರಡನೆಯ ಬಣ್ಣದ ವೇಷಧಾರಿ ಮತ್ತು ವೇಷಗಳು. ದ್ವಿತೀಯ ಪ್ರಾಶಸ್ತ್ಯದ ಬಣ್ಣದ ವೇಷಗಳಿಗೆ ಈ ಸ್ಥಾನ. ಉದಾ : ಬಕಾಸುರ, ಕಿಮ್ಮೀರ, ಹಿಡಿಂಬ ಮುಂತಾದ ಪಾತ್ರಗಳು. ಹೆಣ್ಣು ಬಣ್ಣ (ರಾಕ್ಷಸಿ) ಪಾತ್ರಗಳೂ ಹೆಚ್ಚಾಗಿ ಎಡಬಣ್ಣದವನಿಗೆ ಸಲ್ಲುತ್ತವೆ. ಕಾಟುಬಣ್ಣಗಳು ಎರಡನೆಯ ಅಥವಾ ಮೂರನೆಯ ಬಣ್ಣದ ಸ್ಥಾನದವುಗಳು. ಅಲ್ಲದೆ ದುಶ್ಶಾಸನ ವಧೆಯ ದುಶ್ಶಾಸನ, ನರಸಿಂಹ, ಹನುಮಂತ, ವರಾಹ,

ಮತ್ಸ್ಯ ಮುಂತಾದ ಬಣ್ಣದ ವೇಷಗಳ ಸಾಲಿಗೆ ಸೇರುವ ವಿಶಿಷ್ಟ ಪಾತ್ರಗಳೂ ಎಡ ಬಣ್ಣಗಳಾಗಿವೆ.

ಹಳೆಯ ಕ್ರಮದಂತೆ (ತೆ) ಈ ವೇಷದ ಸ್ಥಾನವು ಚೌಕಿಯಲ್ಲಿ, ಎಡಭಾಗದಲ್ಲಿ ಮೊದಲಸ್ಥಾನ ದಲ್ಲಿರುತ್ತದೆ.

ಬಡಗುತಿಟ್ಟಿನಲ್ಲಿ, ಎಡಬಣ್ಣದ ವೇಷಧಾರಿ ಇಲ್ಲ. ಈ ಸ್ಥಾನದ ಪಾತ್ರಗಳನ್ನು ಮುಂಡಾಸು ವೇಷದವರು ಮಾಡುತ್ತಾರೆ.

ಎಡಮುಚ್ಚಿಗೆ: ಮದ್ದಲೆಯ ಎಡಭಾಗದ ಮುಚ್ಚಿಗೆ. ಇದರ ಸುತ್ತಳತೆ ಐದೂವರೆ ಇಂಚಿನಿಂದ ಏಳು ಇಂಚಿನತನಕ ಶ್ರುತಿಗನುಸರಿಸಿ ಇರುತ್ತದೆ. ಜೀವಕವಳದ ಹೊರಗಿನಿಂದ ಸುಮಾರು ಅರ್ಧಕ್ಕೆ ಬರುವ ಹಾಗೆ ಒಂದು ಒತ್ತುಕವಳ, ಒಳಗಿನಿಂದ ಎರಡು ಯಾ ಮೂರು ಒತ್ತುಕವಳದ ಚಕ್ರಗಳು ಇರುತ್ತವೆ. ಎಡಕ್ಕೆ ಹಿಂದೆ ಹಿಟ್ಟು ಯಾ ಅನ್ನದ ಬೋನ ಹಾಕುತ್ತಿದ್ದರು, ಈಗ ಕರ್ನ ಹಾಕುತ್ತಾರೆ.

ಎಡೆಪುಂಡು/ಎಡಪುಂಡು: ಉಪ ಪುಂಡುವೇಷ, ವೇಷಧಾರಿ. ನೋಡಿ: **ಒತ್ತುಪುಂಡು, ಎರಡನೆಯ ಪುಂಡುವೇಷ.**

ಎಡೆಪ್ಪೆಟ್ಟು ತೆ.: 1. ಚೆಂಡೆ, ಮದ್ದಲೆಗಳಲ್ಲಿ ಘಾತಗಳ ಮಧ್ಯೆ ಬರುವ ಚಿಕ್ಕಪೆಟ್ಟು. ಸಣ್ಣಪೆಟ್ಟು.

2. ಸ್ಥಾನತಪ್ಪಿಸಿ ಬಾರಿಸಿದ ಪೆಟ್ಟು. ವಿಷಮನುಡಿತ.

ಎಡೆಬಣ್ಣ = ನೋಡಿ: ಎಡಬಣ್ಣ.

ಎಣ್ಣೆಮಸಿ: 1. ಎಳ್ಳೆಣ್ಣೆ, ಹೊನ್ನೆಣ್ಣೆಗಳ ದೀಪದ ಹೊಗೆಯಿಂದ ಸಂಗ್ರಹಿಸಿದ ಮಸಿ. ಕರಿ.

2. ಎಣ್ಣೆಯಲ್ಲಿ ಕಲಸಿದ ಮಸಿ. (ನೀರಲ್ಲಿ ಕಲಸಿದ್ದು ನೀರು ಮಸಿ)

ಎತ್ತ/ಎತ್ತಾಸ್ (ಬ.): ವೇಷ ಸಾಮಗ್ರಿ, ಬೊಂಬೆಯಾಟದ ಬೊಂಬೆಗಳನ್ನು ನಿರ್ಮಿಸಲು ಬಳಸುವ ಒಂದು ಬಗೆಯ ಮರ. ಎತಗ. (Adiana Cordifolia)

ಎತ್ತಾಸ್: = ನೋಡಿ, ಎತ್ತ.

ಎತ್ತಿನ ಮುಖ: ನಂದಿಮುಖವಾಡ. ನಂದಿ, ಕಾಮಧೇನು ಮೊದಲಾದ ಪಾತ್ರಗಳಿಗೆ ಬಳಕೆ.

ಎತ್ತುಗಡೆ(ಡಿ): 1. ಪದ್ಯವನ್ನು, ತಾಳವನ್ನು ಆರಂಭಿಸುವ ಸ್ಥಾನ. ಎತ್ತು-ಗಡಿ. 'ಪದ್ಯ ತೆಗೆಯುವ' ಸ್ಥಾನ ಮತ್ತು ಕ್ರಮ. ಗ್ರಹ (ಸಮ, ಅತೀತ, ಅನಾಗತ). ಯಕ್ಷಗಾನದಲ್ಲಿ ಪದ್ಯದ ಆರಂಭದ ಅಕ್ಷರಕ್ಕೆ, ಅಥವಾ ಅನಂತರ, ಅಥವಾ ಮೊದಲು ತಾಳತೆಗೆಯುವ ಕ್ರಮಗಳಿವೆ. ತೆಂಕುತಿಟ್ಟಿನಲ್ಲಿ ಎಲ್ಲ ಪದ್ಯಗಳನ್ನು, ಒಂದಕ್ಷರ ಅನಾಗತ, (ಎಡುಪು)ನಲ್ಲಿ ಪದ್ಯತೆಗೆಯುವ ಸಂಪ್ರದಾಯವಿತ್ತು. ಜಾಗಟೆಯ ಗಟ್ಟಿ ಪೆಟ್ಟಿನಲ್ಲಿ ಪದ್ಯದ ಅಕ್ಷರ ಅಡಗಿಹೋಗಬಾರದೆಂಬುದು ಇದರ ಉದ್ದೇಶ. ಈಗ, ಕೆಲವೇ ವಿಶಿಷ್ಟ ಪದ್ಯಗಳನ್ನು ಬಿಟ್ಟರೆ, ಸಮದಲ್ಲೆ ತೆಗೆಯುವ ಕ್ರಮವಿದೆ.

2. ಪಾತ್ರಧಾರಿಯು, ತನ್ನ ಅಥವಾ ಇದಿರಾಳಿಯ ಅರ್ಥವು ಮುಗಿದೊಡನೆ, ಮುಂದಿನ ಪದ್ಯದ ಕೆಲವು ಶಬ್ದಗಳನ್ನು ಹಾಡುವುದು ಅಥವಾ ಗದ್ಯವಾಗಿ ಹೇಳುವುದು. ಮುಂದಿನ ಪದ್ಯಕ್ಕೆ ದಾರಿ ಮಾಡುವ ಕ್ರಮ.

3. ಪಾತ್ರಧಾರಿಯು ಇದಿರಾಳಿಗೂ, ಭಾಗವತನಿಗೂ ನೀಡುವ ಅನುವು, ಸೂಚನೆ. ಮುಂದಿನ ಪದ್ಯಕ್ಕೆ ಬರುವ ಕ್ರಮ. ಉದಾ: ಕೃಷ್ಣಸಂಧಾನದ ಕೃಷ್ಣ-ದುರ್ಯೋಧನ ಸಂವಾದ. ಕೃಷ್ಣನು ಸಂಧಿಯ ಪ್ರಸ್ತಾವವನ್ನು ಮುಂದಿಟ್ಟು ಮೊದಲ ಪದ್ಯಕ್ಕೆ (ಆದರಾ ಪಾಂಡುಸುತರು...) ಅರ್ಥಹೇಳಿ, ಅದಕ್ಕೆ ಸಂಬಂಧಿಸಿದ ಸಂವಾದವಿದ್ದರೆ ಮುಗಿದನಂತರ, ದುರ್ಯೋಧನನು 'ಹಾಗಾದರೆ ಮುಂದೇನು?' ಅಥವಾ 'ಅನಂತರ?' 'ಮುಂದೆ?' ಎಂದು ಕೇಳಬಹುದು. ಅಥವಾ 'ಆಗಲಿ ಪಾಂಡವರು ಪುನಃ ಕಾಡಿಗೆ ಹೋಗುತ್ತಾರಂತೆಯೆ?' – ಎನ್ನಬಹುದು. ಆಗ ''ಇನ್ನಾದರವರು ಬಂದು।...'' ಎಂಬ ಮುಂದಿನ ಪದ್ಯಕ್ಕೆ ಅದು ಸೂಚನೆ. ಇದನ್ನು ಕೃಷ್ಣನ ಪಾತ್ರಧಾರಿಯೇ ಇನ್ನೊಂದು ರೀತಿಯಿಂದ ಮಾಡಬಹುದು. ಇದರಲ್ಲಿ ಹಲವು ಸಾಧ್ಯತೆಗಳಿವೆ.

4. ಜೋಡಣೆ ಶಬ್ದ (Catch-word) ಕೆಲವೊಮ್ಮೆ, ಮಾತಿನ ಕೊನೆಯಲ್ಲಿ ಇಂತಿಂತಹ ಶಬ್ದವೇ ಬರಬೇಕೆಂಬ ನಿಮಯವಿರುತ್ತದೆ. ಪ್ರಸಂಗ ದಲ್ಲೆ ಅದು ನಿರ್ದಿಷ್ಟ, ನಿರೀಕ್ಷಿತವಾಗಿರುತ್ತದೆ.

ಉದಾ: ವಾಲಿವಧೆ.

ವಾಲಿ– ಮತ್ತು ಮತ್ತೆನ್ನೊಡನೆ। ನಿತ್ತು
ಕೊಂಡೀರಣದಿ। ಉತ್ತರವ
ಕೊಡುವೆಯಾ। ಧೂರ್ತ ಸುಗ್ರೀವ॥
ಸುಗ್ರಿವ– ಧೂರ್ತನಲ್ಲದಡೆನ್ನ। ಪತ್ನಿಯನು
ಸೆರೆವಿಡಿದು। ರಕ್ತ ಮದದಿಂದ
ಕೊಡ। ದಿರ್ಪೆಯಾ ವಾಲಿ॥

ಇಲ್ಲಿ, ವಾಲಿಯು ತನ್ನ ಪದ್ಯದ ಮಾತುಗಳನ್ನು ಬೇಕಾದ ಕ್ರಮದಂತೆ ಆಡಿದರೂ, ಕೊನೆಗೆ ಸುಗ್ರೀವ ನನ್ನು 'ಧೂರ್ತ' ಎನ್ನಲೇಬೇಕು. ಇಲ್ಲವಾದರೆ, ಮಾತಿಗೆ ಎತ್ತುಗಡೆಯಿಲ್ಲವೆಂದಾಗುತ್ತದೆ. ಕಾರಣ,

ಸುಗ್ರೀವನು, ''ಧೂರ್ತನು ನಾನೋ ನೀನೋ'' ಎಂದೇನಾದರೂ ಮಾತು ಆರಂಭಿಸಬೇಕು. ಅವನ ಪದ್ಯದ ಮೊದಲ ಪದವೇ 'ಧೂರ್ತ' ಎಂದಿದೆ.

ಉತ್ತರ ಕನ್ನಡ ಸಂಪ್ರದಾಯದಲ್ಲಿ ಮೇಲಿನ 2, 3, 4ಕ್ಕೆ **ಸಂದರ್ಭ ಕೊಡುವುದು/ಮಾಡುವುದು** ಎನ್ನುವರು. (ನೋಡಿ : **ಸಂದರ್ಭ**) ಈ ಎತ್ತುಗಡೆ ಅಥವಾ ಸಂದರ್ಭ ಕೊಡುವಿಕೆಯಲ್ಲಿ ಹಲವು ಕ್ರಮಗಳೂ, ಸಂಪ್ರದಾಯಗಳೂ ಉಂಟು. ಸ್ವಗತದ ಪದ್ಯಗಳಾದರೆ ಮಾತಿನ ಸಂದರ್ಭವನ್ನೂ ಭಾಗವತನೇ ಕಲಾವಿದನೊಂದಿಗೆ ಹೊಂದಿಸಿ ಮಾತಾಡಬಹುದು. ಉದಾ: 'ಹಾಗಾದರೆ ಈಗ ಏನು ಮಾಡುತ್ತೀರಿ ?'... 'ನೀವು ಯಾರನ್ನೆಲ್ಲಾ ಗೆದ್ದಿರಿ ?' – ಇತ್ಯಾದಿ.

ಮಾತಿನ ಎತ್ತುಗಡೆ, ಸಂದರ್ಭಗಳಲ್ಲಿ ಕಲಾವಿದ ನಿಂದ ಕಲಾವಿದನಿಗೆ ವ್ಯತ್ಯಾಸಗಳಿವೆ. ಹಲವು ಅಂದ ಗಳಿವೆ. ನೇರವಾಗಿ ವಿಷಯ ಪ್ರಸ್ತಾವಿಸದೆ, ಧ್ವನಿಯಿಂದ ಹೇಳುವುದು, ಇದಿರಾಳಿಯಿಂದಲೇ ಸಂದರ್ಭ ಕೊಡಿಸುವುದು ಮುಂತಾಗಿ ಕ್ರಮಗಳಿವೆ. ಈ ವಿಧಾನಗಳೆಲ್ಲ ಕರಗತವಾದರೆ, ಚರ್ಚೆ, ವಾದ, ಸಂವಾದಗಳನ್ನು ಸೊಗಸಾಗಿ ಹೊಂದಿಸಬಹುದು, ಬೆಳೆಸಬಹುದು.

ಇದರಲ್ಲಿ ಸರಳವಾದ ಹಳೆಯ ಕ್ರಮವೊಂದಿದೆ. ಇದಿರಾಳಿಯ ಮಾತು ಮುಗಿದೊಡನೆ, ''ಹಾಗೋ ?'' ''ಹಾಗಾದರೆ ಕೇಳು'' ಎನ್ನುವುದು. ಈ ಕ್ರಮದಲ್ಲಿ ಮುಂದಿನ ಪದ್ಯ ಯಾರದೆಂದು ತಿಳಿದಿದ್ದರೆ ಸಾಕು. ಶಬ್ದಗಳು ತಿಳಿದಿರಬೇಕೆಂದಿಲ್ಲ. ಇದನ್ನೆ ''ಟಚ್ಚು ಕೊಡುವುದು'' ಎನ್ನುತ್ತಾರೆ.

ಎದುರರ್ಥ = ನೋಡಿ : **ಇದಿರು ಅರ್ಥ.**

ಎದುರುಲಯ/ಎದ್ರುಲಯ : ನೋಡಿ : **ಇದಿರುಲಯ.**

ಎದುರುವಾದ : 1. ಒಂದು ಪಾತ್ರವು ಮತ್ತೊಂದರ ಎದುರು ಆಡುವ ಮಾತು, ಹೂಡುವ ವಾದ, ತರ್ಕ.

2. ಔಚಿತ್ಯ ಮೀರಿದ ತರ್ಕ. ಉದಾ: ''ಧರ್ಮರಾಜನು ಕೃಷ್ಣನೊಂದಿಗೆ ಸಂವಾದ ಮಾಡಬೇಕು. ಎದ್ರುವಾದ ಮಾಡಬಾರದು.''

ಎದುರುವೇಷ/ಎದ್ರುವೇಷ (ತೆ.) : ಪ್ರಸಂಗದ ಪ್ರಧಾನವಾದ, ಆದರೆ ಪ್ರತಿನಾಯಕ ಪಾತ್ರ.

1. ಪಾತ್ರ ಸಂಪ್ರದಾಯದಂತೆ, ಇದು ಮುಖ್ಯ ಪಾತ್ರ. ಪೀಠಿಕೆ ವೇಷವೆಂಬ ನಾಯಕ ಪಾತ್ರ (ದೇವೇಂದ್ರ, ರಾಮ, ಅರ್ಜುನ ಇ.)ಗಳಿಗೆ ಎದು ರಾಗಿ ಪ್ರತಿಯಾಗಿ ಇರುವುದರಿಂದ ಇದು ಎದುರು ವೇಷ. ಕರ್ಣಪರ್ವದ ಕರ್ಣ, ಗದಾಪರ್ವದ ಕೌರವ, ಕಾರ್ತವೀರ್ಯ, ಸುಲೋಚನ, ತಾಮ್ರ ಧ್ವಜ, ಅತಿಕಾಯ ಇವು ಎದುರುವೇಷಗಳು. ಬಡಗುತಿಟ್ಟಿನಲ್ಲಿ ಇದೇ 'ಎರಡನೆಯ ವೇಷ'.

ಈ ಹೆಸರುಗಳಿಗೆ ಕಾರಣವನ್ನು ಶ್ರೀ ಸೇಡಿಯಾಪು ಕೃಷ್ಣಭಟ್ಟರು ಹೀಗೆ ಊಹಿಸಿ ದ್ದಾರೆ. ಇದಿರು, ಎದುರು ಎಂಬುದಕ್ಕೂ, ಎರಡು ಎಂಬುದಕ್ಕೂ (ಉದಾ : ಎರಡು ಬಗೆಯುವುದು, ಎರಡಾಡುವುದು) ಪ್ರತಿ, ವಿರೋಧ ಎಂದು ಅರ್ಥವಿದೆ. ಹಾಗಾಗಿ ಪ್ರತಿನಾಯಕ ಎಂಬುದಕ್ಕೆ ಈ ಹೆಸರು ಬಂದಿವೆ.

ಈ ವೇಷಧಾರಿ ಚೌಕಿಯಲ್ಲಿ, 'ಒಂದನೆಯ ಬಣ್ಣ'ದ ಬಳಿಕ, ಪೀಠಿಕೆ ವೇಷಕ್ಕಿಂತ ಮೇಲೆ ಕುಳಿತುಕೊಳ್ಳಬೇಕು. ಈ ವೇಷದ ಮುಖವರ್ಣಿಕೆ ಗಳು ಪ್ರಖರವಾಗಿರುತ್ತವೆ. ನೃತ್ಯ, ಮಾತು ಚಲನೆ ಗಳಲ್ಲಿ ಗಾಂಭೀರ್ಯ, ರಭಸ ಎರಡೂ ಹದವಾಗಿ ಸೇರಿರಬೇಕೆಂದು ಈ ವೇಷದ ಕುರಿತ ನಿರೀಕ್ಷಿತ ಗುಣ. ನೋಡಿ: **ಚೌಕಿ, ಎರಡನೆಯ ವೇಷ.**

ಈ ಶಬ್ದದ ಆಧಾರದಲ್ಲೆ ತಾಳ ಮದ್ದಲೆಯ ಎದುರರ್ಥ/ಇದಿರರ್ಥ ಎಂಬುದು ಬಂದಿದೆ.

2. ಒಂದು ವೇಷಕ್ಕೆ ಸಂಬಂಧಿಸಿ ಹೇಳುವಾಗ, ಅದರ ಎದುರಾಗಿ ಬರುವ ಮುಖ್ಯಪಾತ್ರಗಳು, ಎದುರಾಳಿ ಎಂಬ ಅರ್ಥದಲ್ಲಿ.

ಎದುರೆದುರು ರಂಗಸ್ಥಳ : ಜೋಡಾಟದ ರಂಗಸ್ಥಳ ಹಾಕುವ ಒಂದು ಕ್ರಮ. ಒಂದಕ್ಕೊಂದು ಎದುರಾಗಿ ರಂಗಸ್ಥಳಗಳಿದ್ದು ಅವುಗಳ ಮಧ್ಯೆ ಮತ್ತು ಸುತ್ತ ಪ್ರೇಕ್ಷಕರಿರುತ್ತಾರೆ. ಸಾಮಾನ್ಯವಾಗಿ ಒಂದ ಕ್ಕೊಂದು ತಾಗಿ, **ಸಾಲುರಂಗಸ್ಥಳ** ಇರುವುದು ಹೆಚ್ಚು. ಇದು ವಿಶೇಷ ಕ್ರಮ.

ಎದುರ್ಲಯ = ನೋಡಿ : **ಇದಿರುಲಯ.**

ಎದೆಕಟ್ಟು = 1. ನೋಡಿ : **ಎದೆಪದಕ, ಎದೆಹಾರ, ಎದೆಕವಚ, ಕುರಲಾರ, ಕೊರಳ ಹಾರ, ಕೊರಳಾರ.**

2. ಸ್ತ್ರೀವೇಷಕ್ಕೆ ಸಂಬಂಧಿಸಿದ ಎದೆಕಟ್ಟು ಮೊಲೆಚೆಂಡು. ಇತ್ಯಾದಿ.


ಎದೆಕವಚ : ನೋಡಿ : **ಎದೆಪದಕ, ಕೊರಳಾರ, ಎದೆಹಾರ.**


ಎದೆಪದಕ = ನೋಡಿ, **ಎದೆಹಾರ.**


ಎದೆಹಾರ : 1. ಎದೆಕಟ್ಟು, ಎದೆಕವಚ, ಎದೆಪದಕ, ಕುರಲಾರ, ಕೊರಳಾರ, ಕೊರಳಹಾರ ಎಂಬ ಹೆಸರುಗಳುಳ್ಳ, ವೇಷದ ಎದೆಯ ಮೇಲೆ ಕಟ್ಟುವ ಪದಕಾಕೃತಿ ಕವಚ. ಕೊರಳಹಾರ, ಕುರಲಾರ ಎಂಬುವು ಪ್ರಾಯಃ ಪ್ರಾಚೀನ ನಾಮಧೇಯಗಳು.

ಎದೆ ಪದಕಗಳು











ಇದು ನಾಲ್ಕಾರು ಆಕಾರಗಳಲ್ಲಿ ಬಳಕೆಯಲ್ಲಿದೆ. ಉರುಟಾದ ದೊಡ್ಡ ಹಲ್ಲೆಯಂತಿದ್ದು, ಅದರ ಮೇಲ್ಭಾಗದಲ್ಲಿ ಎಡಬಲಗಳಿಗೆ ಅದೇ ಆಕೃತಿಯ ಚಿಕ್ಕ ಕಿವಿಗಳಿದ್ದುದು ಬಹುಶಃ ಹಳೆಯ ಮಾದರಿ. ಅಲ್ಲದೆ, ಸುಮಾರಾಗಿ ವಕ್ರ ತ್ರಿಕೋನಾಕೃತಿ, ಗೇರುಹಣ್ಣಿನ ಆಕೃತಿ, ಗೋಲ, ಆಯತ ಆಕೃತಿಗಳೂ ಇವೆ. ಬಡಗುತಿಟ್ಟಿನಲ್ಲಿ ಕತ್ತರಿ ಎದೆಹಾರ 'X' ಆಕೃತಿಯದು ಹೆಚ್ಚು ಬಳಕೆಯಿದೆ. ತೆಂಕುತಿಟ್ಟು, ಉತ್ತರ ಕನ್ನಡ ತಿಟ್ಟುಗಳಲ್ಲಿ ಎಲ್ಲ ವೇಷಗಳಿಗೂ ಹಿಂದೆ ಉರುಟು ಎದೆಹಾರವೇ ಇದ್ದುದು. ಬಡಗಿನಲ್ಲಿ ಸದ್ಯ ಬಣ್ಣದ ವೇಷಕ್ಕೆ ಉರುಟು ಎದೆಹಾರ ಇದೆ. ಮರದ ರಚನೆಗಳು ಹಳೆಯವು. ಈಗ ಮಣಿ, ಜರಿಗಳನ್ನು ಬಳಸಿಯೂ ತಯಾರಿಸುವರು. ವೇಷಕ್ಕನುಸರಿಸಿ ಗಾತ್ರ ವ್ಯತ್ಯಾಸಗಳಿವೆ.

ಎದೆಹಾರವನ್ನು ಕಟ್ಟಿ ಅದರ ಮೇಲ್ಗಡೆ ಅಡ್ಡಿಗೆ, ಗುಂಡಡ್ಡಿಗೆಗಳನ್ನು ಕಟ್ಟುವರು. ಎದೆ ಪದಕದ ಮೇಲಿಂದ ನಿಲ್ಲುವಂತೆ ಗುಂಡು ಮಣಿಸರ ಅಥವಾ ದೊಡ್ಡ ಮುತ್ತುಗಳ ಸರ ಧರಿಸುತ್ತಾರೆ.

2. ಗೌಣಾರ್ಥದಲ್ಲಿ, ಮಾಲೆ, ಹಾರ, ಸರ.

ಎದ್ರುವೇಷ = ನೋಡಿ : ಎದುರುವೇಷ.

ಎದ್ರುಲಯ = ನೋಡಿ : ಎದುರುಲಯ.

ಎರಟ್ಟೆ ಉರುಳಿಕೆ (ತೆ.) : ಚಂಡೆ ಮದ್ದಲೆಗಳ ಬಾರಿಸುವಿಕೆಯಲ್ಲಿನ ಉರುಳಿಕೆಯ ಒಂದು ಕ್ರಮ. **ಒತ್ತೆ ಉರುಳಿಕೆಯ ಮೇಲ್ಕಾಲ.**

ಎರಡನೆಯ ಕಾಲ : 1. ತಾಳ, ಹಾಡುವಿಕೆ, ವಾದನಗಳಲ್ಲಿ ಎರಡನೆಯ ಗತಿ ಪ್ರಮಾಣ. ಇದು **ಒಂದನೆಯ ಕಾಲ**ಕ್ಕಿಂತ ಹೆಚ್ಚಿನ ವೇಗದ್ದು. ಆದರೆ, ಅದರ ಇಮ್ಮಡಿ ವೇಗವಲ್ಲ. ಮಧ್ಯಮಕಾಲ.

2. ಆಟದ ಎರಡನೆಯ ಭಾಗ. ನಾಲ್ಕು ಕಾಲಗಳಲ್ಲಿ ಎರಡನೆಯದು. ರಾತ್ರಿ ಸುಮಾರು ಹನ್ನೆರಡು ಗಂಟೆಯಿಂದ ಎರಡೂವರೆ ಗಂಟೆಯ ವರೆಗಿನ ಅವಧಿ.

ಎರಡನೆಯ ಪುಂಡುವೇಷ : **ಪುಂಡುವೇಷ**ಗಳಲ್ಲೊಂದು. ಒಂದನೆಯ ಪುಂಡುವೇಷದ ಅನಂತರದ್ದು. ಲವಕುಶ ಪ್ರಸಂಗದಲ್ಲಿ ಕುಶ, ಸುಧನ್ವ ಕಾಳಗ, ಕುರುಕ್ಷೇತ್ರಗಳ ಕೃಷ್ಣ, ಕೃಷ್ಣಾರ್ಜುನದ ಸಾತ್ಯಕಿ, ಇತ್ಯಾದಿ. ನೋಡಿ: **ಒತ್ತುಪುಂಡು, ಎಡೆಪುಂಡು.**

ಎರಡನೆಯ ಬಣ್ಣ = ನೋಡಿ : ಎಡ ಬಣ್ಣ.

ಎರಡನೆಯ ವೇಷ (ಬ.) : ಪ್ರತಿನಾಯಕ ಸ್ವಭಾವದ, ಮುಖ್ಯವೇಷ. ತೆಂಕುತಿಟ್ಟಿನ ಎದುರುವೇಷಕ್ಕೆ ಸಮ. ಉದಾ: ಕರ್ಣ, ತಾಮ್ರಧ್ವಜ.

ಈ ಹೆಸರು ಏಕೆ ಬಂತೆಂಬುದಕ್ಕೆ ಹಲವು ವಿವರಣೆಗಳಿವೆ.

1. ಎರಡು ಎಂಬುದಕ್ಕೆ ಪ್ರತಿ, ವಿರುದ್ಧ ಎಂಬ ಅರ್ಥದಿಂದ, ಪ್ರತಿನಾಯಕ ಎಂಬ ಭಾವ (ಶ್ರೀ ಸೇಡಿಯಾಪು ಅವರ ವಿವೇಚನೆ.)

2. ಕಲಾವಿದರ ಸಂಬಳದ ಪಟ್ಟಿ ಮಾಡುವಾಗ, ಒಂದನೇ ಭಾಗವತ... ಇಂತಿಷ್ಟು, ಎರಡನೇ... ವೇಷಧಾರಿ... ಇಂತಿಷ್ಟು ಎಂಬುದರಿಂದ ಬಂದಿದೆ. ಮುಖ್ಯ ವೇಷಧಾರಿಯು ಪಟ್ಟಿಯಲ್ಲಿ ಎರಡನೆಯ ಸ್ಥಾನದಲ್ಲಿ ಉಲ್ಲೇಖಿತನಾಗಿ, ಈ ಹೆಸರು ಮಾಮೂಲಾಗಿರಬೇಕು. (ಶ್ರೀ ಮಲ್ಪೆ ಶಂಕರನಾರಾಯಣ ಸಾಮಗರು ನೀಡಿದ ಅಭಿಪ್ರಾಯ.)

3. ಒಂದನೆಯ ವೇಷವೆಂದರೆ, ನಾಯಕಪಾತ್ರ. (ತೆಂಕುತಿಟ್ಟು). ಬಡಗಿನಲ್ಲೂ ಈ ಹೆಸರು ಇದ್ದಂತೆ ಕಾಣುತ್ತದೆ. ಈ ವೇಷಕ್ಕೆ ಪ್ರತಿಯಾಗಿ ಎರಡನೆಯ ವೇಷ.

4. ಚೌಕಿಯ ಒಂದು ಸಾಲಿನಲ್ಲಿ, ಮೊದಲ ಸ್ಥಾನ ಮುಖ್ಯ ಬಣ್ಣದ ವೇಷದ್ದು. ಅದರ ನಂತರದವನಿಗೆ ಹಿಂದೆ ಎರಡನೆಯ 'ಬಣ್ಣ' (ವೇಷ ಎಂಬ ಅರ್ಥದಲ್ಲಿ) ಇದ್ದಿರಬೇಕು. ಇದೇ ಮುಂದೆ ಎರಡನೆಯ ವೇಷ ಎಂದಾಯಿತು. (ಶ್ರೀ ಮುಳಿಯ ಮಹಾಬಲ ಭಟ್ಟ: ಬಣ್ಣದ ವೇಷ ಮತ್ತು ಇತರ ಪ್ರಬಂಧಗಳು : 1988)

ಬಡಗುತಿಟ್ಟಿನಲ್ಲಿ ಬಣ್ಣದ ವೇಷವು ಮುಖ್ಯ ಪಾತ್ರವಾಗಿರುವ ಸಂದರ್ಭದಲ್ಲಿ, ಅದನ್ನು ಎರಡನೆಯ ವೇಷದವನು ವಹಿಸಿಕೊಳ್ಳುತ್ತಾನೆ. ಉದಾ: ಹಿರಣ್ಯಕಶಿಪು, ವಾಲಿ, ಮೈರಾವಣ. ಚೌಕಿಯಲ್ಲಿ ಇವನ ಸ್ಥಾನವು ಎಡಗಡೆ (ದೇವರ ಬಲಕ್ಕೆ) ಒಂದನೆಯದು, ತೆಂಕುತಿಟ್ಟಿನ ಒಂದನೆಯ ಬಣ್ಣದವನದು.

ಎರಡನೆಯ ಸ್ತ್ರೀವೇಷ : ದ್ವಿತೀಯ ಪ್ರಾಶಸ್ತ್ಯದ ಸ್ತ್ರೀಪಾತ್ರಗಳು ಮತ್ತು ಪಾತ್ರಧಾರಿ.

ಎರಡನೆಯ ಹೆಜ್ಜೆ (ತೆ.) : ತೆಂಕುತಿಟ್ಟಿನ ಕುಣಿತದ ನಾಲ್ಕು ಮೂಲ ಹೆಜ್ಜೆಗಳಲ್ಲೊಂದು. ಇದರಲ್ಲಿ ಮುಂದೆ ಚಲಿಸುವಾಗ, ಪಾದಗಳು ಒಂದಕ್ಕೊಂದು ಹತ್ತಿರ, ದೂರ ಹೋಗುತ್ತಿರುತ್ತವೆ. ಬಲಪಾದವನ್ನು ನೃತ್ಯ ಭಂಗಿಯಿಂದ, ತೆಗೆದು ಬಲಕ್ಕೆ ಬಾರಿಸಿ, ನಂತರ ಪಾದವನ್ನು ಬಾರಿಸಿ, ನಂತರ ಎಡ ಪಾದವನ್ನು ಅದರ ಹತ್ತಿರ ತಂದು ಬಾರಿಸಿ, ಪುನಃ ಬಲಪಾದದಿಂದ ಮುಂದುವರಿಸಬೇಕು. ಇದನ್ನು ಏಕತಾಳದಲ್ಲಿ ಕಲಿತು ನಂತರ ಉಳಿದ ತಾಳಗಳಿಗೆ ಅಳವಡಿಸವರು. ನೋಡಿ: **ಹೆಜ್ಜೆ, ಒಂದನೆ–, ಮೂರನೆ–, ನಾಲ್ಕನೆ–.**

ಎಲವಸ್ತ್ರ/ಎಲೆವಸ್ತ್ರ : 1. ಕರವಸ್ತ್ರ, ಗಾಂಭೀರ್ಯದ ಸಂಕೇತ. ಮುಖ್ಯವೇಷಗಳು ಕೆಲವು, ಕರ್ಣ, ಋತುಪರ್ಣ, ಬಭ್ರುವಾಹನ ಮುಂತಾದವು ಕರವಸ್ತ್ರವನ್ನು ಹಿಡಿದುಕೊಂಡಿರುವ ಕ್ರಮ ತೀರ ಇತ್ತೀಚಿನ ವರೆಗೆ ಬಳಕೆಯಲ್ಲಿತ್ತು.
2. (ಬ.) ಪಾಕಿನ ವಸ್ತ್ರದ ಬಳಕೆ ಇಲ್ಲದಾಗ ಬೆನ್ನಿಗೆ ಇಳಿಬಿಡುತ್ತಿದ್ದ ವಸ್ತ್ರ.

ಎಲೆವಸ್ತ್ರ : = ನೋಡಿ : ಎಲವಸ್ತ್ರ.

ಎಲ್ಲೂರ ಗೆಜ್ಜೆ = ನೋಡಿ : ಎಳ್ಳೂರ ಗೆಜ್ಜೆ.

ಎಳ್ಳೂರ ಗೆಜ್ಜೆ/ಎಲ್ಲೂರ ಗೆಜ್ಜೆ/ವೆಳ್ಳೂರು ಗೆಜ್ಜೆ : ಒಳ್ಳೆಯ ಜಾತಿಯ ಗೆಜ್ಜೆ. ತಮಿಳುನಾಡಿನ ಎಲ್ಲೂರು, ಕಂಚಿನ ಕೆಲಸಕ್ಕೆ, ಗೆಜ್ಜೆಗಳಿಗೆ ಸುಪ್ರಸಿದ್ಧ.

ಏ

ಏಕತಾಳ : ನಾಲ್ಕು ಮಾತ್ರಾಕಾಲದ ತಾಳ. ಎರಡೆರಡು ಮಾತ್ರೆಗಳ ವಿಭಜನೆಯೊಂದಿಗೂ ಬಳಕೆಯಲ್ಲಿದೆ. ಯಕ್ಕತಾಳವೆಂದೂ ಕೆಲವು ಪ್ರಸಂಗಗಳಲ್ಲಿದೆ. ಇದಕ್ಕೆ ಒಂದು ಘಾತ, ಮೂರು ಹುಸಿ ಪೆಟ್ಟುಗಳು. ತಾಳ-ಜಾಗಟೆಗಳಲ್ಲಿ ಮೂರು ಪೆಟ್ಟು ಬಾರಿಸಿ ತೋರಿಸುತ್ತಾರೆ.

ದಸ್ತುಸ್ತೆ : ತದ್ದೀಂ ಧಿಮಿತ ಧೀಂ
ಮುಕ್ತಾಯ : ಬಡಗು : ಧಿತ್ತೊಂತ। ಕಿಟ್ತಕತಾಂ।
ಧೀಂತಾಂ ತೋಂ ಕಿಡ್ತಕ ಧಿಂ
ಬಿಡ್ತಿಗೆ ತೆಂಕು : ಧಿನ್ನಕ ತರಿಕಿಟ। ಕಿಟತಕ ತತ್ತಾಂ-3 ಬಾರಿ
ಧಿನ್ನಕ ತರಿಕಿಟ। ಕಿಟತಕ ತರಿಕಿಟ
ಮುಕ್ತಾಯ : ದದ್ದಿಂ ದತ್ತಾ ಧಿಂದತ್ತಾ
ದದಿಗಿಣತೊ ದದಿಗಿಣತೊ
ದದಿಗಿಣತೊ

ತ್ವರಿತ ಏಕತಾಳ, ತ್ವರಿತ ಅಷ್ಟತಾಳ (ಭೈರವಿ ಅಷ್ಟ) ಮತ್ತು ಮಟ್ಟೆತಾಳದ ಪದ್ಯಗಳ ಕೊನೆಯ ತ್ವರಿತ ಗತಿಗಳಿಗೆ, ಏಕತಾಳದ ಈ ಗಿಡ್ಡ ಮುಕ್ತಾಯ ಬಳಸುವರು :

x x x x
ದಿಧೊಂ ತ ತಕತಾಂ। ತರಿಕಿಟ। ದದಿಗಿಣತೊ

ಏಕಪಾತ್ರ ಹಾಸ್ಯ : ಸಭಾಲಕ್ಷಣದ ಕಟ್ಟು ಹಾಸ್ಯಗಳಲ್ಲೊಂದು. ಸಾಂಸಾರಿಕ, ಸಾಮಾಜಿಕ ಸನ್ನಿವೇಶಗಳು, ಆಟದ ದೃಶ್ಯಗಳೂ ಇದಕ್ಕೆ ವಸ್ತುಗಳು.

ಏಣಿ (ತೆ.) : 1. ಏಣಿ ಬಣ್ಣದ ಮುಖವರ್ಣಿಕೆಯಲ್ಲಿ ಬರುವ ಒಂದು ಮುದ್ರೆ.
2. ರಂಗಸ್ಥಳದ ಮೇಲೆ ಅಟ್ಟಳಿಗೆ ಕಟ್ಟಿದರೆ, ಅಟ್ಟಳಿಗೆ ಏರಲು ಕಟ್ಟುವ ಏಣಿ.

ಏಣಿ ಬಣ್ಣ (ತೆ.) : ಬಣ್ಣದ ವೇಷದ ಒಂದು ಪ್ರಕಾರ. ಹಣೆಯಲ್ಲಿ ಏಣಿಯಾಕಾರದ ನಾಮವಿರುವ ಬಣ್ಣದ ವೇಷ.

ಏಣಿನಾಮ (ತೆ.) : ಏಣಿಯಾಕಾರದ ನಾಮ. ಕೆಲ ಕೆಲವು ಬಣ್ಣದ ವೇಷಗಳಿಗೂ, ಇತರ ವೇಷಗಳಿಗೂ (ಉದಾ : ವೀರವರ್ಮ) ಹಣೆಯಲ್ಲಿ ರೇಖಿಸುವ ಬರವಣಿಗೆ.

ಏರುಪದ (ದ್ಯ) : ವೀರ, ರೌದ್ರ ರಸಗಳ ಹಾಡು, ಮತ್ತು ಅದರ ಹಾಡುವಿಕೆ. ಯುದ್ಧಾದಿ ಸನ್ನಿವೇಶದ ಪದ್ಯಗಳು. ಇದರಲ್ಲಿ ಭಾವಾನುಗುಣ, ಏರು, ಹದಏರು, ಜೋರು ಏರು ಎಂಬ ಪ್ರಭೇದಗಳಿವೆ. ನೋಡಿ : **ಸೌಮ್ಯದ ಪದ.**

ಏರುಮದ್ದಲೆ (ಬ.) : ಏರುಶ್ರುತಿಗೆ ಹೊಂದುವ ಚಿಕ್ಕಗಾತ್ರದ ಮದ್ದಲೆ. ಹಾಡುಗಾರನ ಶ್ರುತಿಯ ಮೇಲಿನ ಸ್ಥಾಯಿಗೆ ಹೊಂದುವಂತೆ ಇದನ್ನು ಶ್ರುತಿ ಮಾಡುತ್ತಾರೆ. ಇದರ ಉದ್ದ ಹತ್ತರಿಂದ ಹದಿಮೂರಂಗುಲವಿದ್ದು, ಬಾಯಿಯ ಅಳತೆ ಮೂರುವರೆಯಿಂದ ನಾಲ್ಕುವರೆ ಅಂಗುಲ ಇರುತ್ತದೆ. ಇದು 1930ರ ಬಳಿಕ ಬಳಕೆಗೆ ಬಂದಿತು. ಇದರ ನಾದವು ತಬಲಾ ನಾದವನ್ನು ಹೋಲುತ್ತದೆ. ನೋಡಿ : **ಮದ್ದಲೆ, ಇಳಿಮದ್ದಲೆ.**

ಏರುಶ್ರುತಿ : ಸಾಮಾನ್ಯವಾಗಿ ಹಾರ್ಮೋನಿಯಂನ ಬಿಳಿ ಮೂರನೆ, ಮತ್ತು ಅದರ ಮೇಲಿನ ಶ್ರುತಿಗಳು.

ಏಹಾ = ನೋಡಿ : **ಕೀಹಾ.**

ಏಳನೇ ವೇಷ (ತೆ.) : ಏಳನೆಯ ಕಟ್ಟುವೇಷ. ಸಾಂಪ್ರದಾಯಿಕವಾದ ಏಳು ಕಟ್ಟುವೇಷಗಳಲ್ಲಿ ಕೊನೆಯದು. ಧರ್ಮರಾಯ, ಸುಗ್ರೀವ, ಜಯದ್ರಥ, ಶಕುನಿ, ಪ್ರದ್ಯುಮ್ನ ಮುಂತಾದ ವೇಷಗಳು. ಪ್ರಾಯಶಃ ಹಿಂದೆ, ಎಲ್ಲ ವೇಷಗಳನ್ನು ಸಂಖ್ಯೆಯಿಂದ ನಿರ್ದೇಶಿಸುತ್ತಿದ್ದುದರಿಂದ ಈ ಹೆಸರು ಬಂದಿರಬಹುದು.

ಐ

ಐದನೆಯ ಕಟ್ಟುವೇಷ/ಐದನೆಯ ವೇಷ (ತೆ.) : ಏಳು ಕಟ್ಟು ವೇಷಗಳಲ್ಲಿ ಒಂದು. ಹಿಂದೆ ಇದ್ದಿರ ಬಹುದಾದ ಒಂದು ಪಾತ್ರದ ಸ್ಥಾನ, ವೇಷಜಾತಿ. ಸದ್ಯ ಬಹುಕಾಲದಿಂದ ಈ ಹೆಸರು ಇಲ್ಲ. ಆದರೆ, ಎರಡನೆಯ, ಮೂರನೆಯ, ಆರನೆಯ ಕಟ್ಟು ವೇಷಗಳೆಂಬ ಹೆಸರುಗಳಿವೆ. ಹಾಗಾಗಿ ಇದೂ ಇದ್ದಿರಬೇಕು. ಪ್ರಾಯಶಃ ಇದು ಈಗಿನ ಎರಡನೆಯ ಬಣ್ಣದ ವೇಷ, ಎಡೆಬಣ್ಣ, ಒತ್ತು ಬಣ್ಣ ಎಂದು ಹೇಳುವ ವೇಷವೇ ಇರಬೇಕೆಂದು ಅಭಿಪ್ರಾಯ. (ಮುಳಿಯ ಮಹಾಬಲ ಭಟ್ಟ : ಬಣ್ಣದವೇಷ ಮತ್ತು ಇತರ ಪ್ರಬಂಧಗಳು : 1988.)

ಐದನೆಯ ವೇಷ = ನೋಡಿ : ಐದನೆಯ ಕಟ್ಟುವೇಷ.

ಒ

ಒಂಟಿ ಒಡ್ಡೋಲಗ (ಬ.) : 1. ಒಂದೇ ವೇಷದ ಪ್ರವೇಶ ನೃತ್ಯ. ಅದರ ತಾಳ ದಸ್ತೆಗಳು.

2. ತೆರೆಕುಣಿತವಿಲ್ಲದೆ ವೇಷದ ಪ್ರವೇಶ. ಧೀಗಿಣ.

ಒಂಟಿ ಬೈರಾಗಿ : ಸಭಾಲಕ್ಷಣ (ಪೂರ್ವರಂಗ)ದಲ್ಲಿ ಬರುವ ಒಂದು ಬಗೆಯ ಹಾಸ್ಯ. ಬೈರಾಗಿ ವೇಷ. ಹಿಂಡು ಬೈರಾಗಿ ವೇಷಗಳಿಗೆ ಭಿನ್ನವಾಗಿ ಸೂಚಿಸಲು ಈ ಪದ. ಈ ವೇಷವು ಹಿಂದಿ ಮಿಶ್ರಿತ ಕನ್ನಡದಲ್ಲಿ ಮಾತಾಡುವುದು ಪದ್ಧತಿ. ನಾಥಪಂಥದ ಪ್ರಭಾವದ ಸೃಷ್ಟಿ.

ಒಂದನೆಯ ಕಾಲ : 1. ಹಾಡು, ವಾದ್ಯ, ನೃತ್ಯಗಳ ಮೊದಲ ಕಾಲ, ನಿಧಾನಗತಿ.

2. ಆಟದ ಮೊದಲ ಭಾಗ. ಸುಮಾರು ಹನ್ನೆರಡೂವರೆ ಗಂಟೆಯ ವರೆಗಿನ ಆಟ.

ಒಂದನೆಯ ಪುಂಡುವೇಷ : ಪ್ರಧಾನ ಪುಂಡು (ತರುಣ) ವೇಷ. ಉದಾ : ಅಭಿಮನ್ಯು, ಬಭ್ರುವಾಹನ ಇತ್ಯಾದಿ. ನೋಡಿ : **ಪುಂಡು ವೇಷ.**

ಒಂದನೆಯ ಬಣ್ಣ : ಮೊದಲನೆಯ ಬಣ್ಣದ ವೇಷಧಾರಿ ಮತ್ತು ವೇಷ. ರಾಕ್ಷಸಾದಿ ವೇಷಗಳಲ್ಲಿ ಮುಖ್ಯವಾದ ರಾವಣ, ಮಾಗಧ, ಕಂಸ, ನರಕಾಸುರ, ಶೂರಪದ್ಮ, ವಾಲಿ, ಯಮ, ಬಲಿ, ತಾರಕಾಸುರ, ಶುಂಭ-ಮೊದಲಾದ ಪಾತ್ರಗಳು ಮತ್ತು ಅವುಗಳನ್ನು ಧರಿಸುವ ವ್ಯಕ್ತಿ. (ಒಂದನೆಯ ಬಣ್ಣದವನು.)

ಸಾಂಪ್ರದಾಯಿಕವಾಗಿ ಇದು ಪ್ರತಿಷ್ಠೆಯ ಸ್ಥಾನ. ಚೌಕಿಯಲ್ಲಿ ಈ ಪಾತ್ರವು ದೇವರ ಬಲಭಾಗದ ಮೊದಲ ಸ್ಥಾನದಲ್ಲಿ ಕುಳಿತು ಬಣ್ಣ ಬರೆಯಬೇಕು. ಹಳೆಯ ಕ್ರಮದಂತೆ, ಬಾಲಗೋಪಾಲ, ಪುಂಡುವೇಷ, ಕಟ್ಟುವೇಷ ಗಳನ್ನು ಮಾಡಿ ಅನುಕ್ರಮವಾಗಿ ಮುಂದುವರಿದು ಈ ಸ್ಥಾನಕ್ಕೆ ಬರಬೇಕು. ಈಗಲೀಗ ಈ ಸ್ಥಾನಕ್ಕೆ ಮೇಳದ ಮುಖ್ಯ ಮಾತುಗಾರ ವೇಷಧಾರಿಯು ಬಂದಿದ್ದಾನೆ. ನೋಡಿ : **ಚೌಕಿ, ಬಣ್ಣದವೇಷ, ಎರಡನೆಯ ಬಣ್ಣ.**

ಒಂದನೆಯ ವೇಷ : 1. ತೆಂಕುತಿಟ್ಟಿನ ಪೀಠಿಕೆ ವೇಷಕ್ಕೂ ಬಡಗುತಿಟ್ಟಿನ ಪುರುಷ ವೇಷಕ್ಕೂ (ರಾಮ, ಇಂದ್ರ, ಅರ್ಜುನ ಇತ್ಯಾದಿ) ಮೊದಲು ಈ ಹೆಸರು ಇದ್ದಿರಬೇಕು. ನಾಯಕ ಪಾತ್ರವೆಂದು ಅರ್ಥ. ಇದರ ಇದಿರಾಗಿ ಬರುವ ಪ್ರತಿನಾಯಕರು, ಎರಡನೇ ವೇಷ (ಬ.), ಎದುರು ವೇಷ (ತೆ.) ಎನಿಸುತ್ತವೆ.

2. ಮೇಳದಲ್ಲಿನ ಸ್ಥಾನದಲ್ಲೂ, ಸಂಬಳದಲ್ಲೂ ಭಾಗವತನು ಮುಖ್ಯನಾದುದರಿಂದ ಭಾಗವತ ನಿಗೆ ಒಂದನೇ ವೇಷವೆಂಬ ಹೆಸರೆಂದು ಒಂದು ಅಭಿಪ್ರಾಯ.

3. ಮುಖ್ಯ ಪಾತ್ರ ಎಂಬ ಸಾಮಾನ್ಯ ಅರ್ಥ.

ಒಂದನೆಯ ಹೆಜ್ಜೆ (ಬ.) : ನೃತ್ಯದ ಹೆಜ್ಜೆಗಾರಿಕೆ ಒಂದು ಪ್ರಕಾರ. ನೃತ್ಯಾಭ್ಯಾಸದಲ್ಲಿ ಮೊದಲ ಹೆಜ್ಜೆ. ಇದನ್ನು ಏಕತಾಳದಲ್ಲಿ ಅಭ್ಯಸಿಸಿ ಅನಂತರ ಉಳಿದ ತಾಳಗಳಿಗೆ ಅಳವಡಿಸುವುದು ಕ್ರಮ. ಬಲಗಾಲನ್ನೆತ್ತಿ ನೆಲಕ್ಕೆ ಹೊಡೆದು, ಅನಂತರ ಹಿಮ್ಮಡಿಯನ್ನು ಮಾತ್ರ ಎತ್ತಿ ಹೊಡೆದಾಗ ತರಿಕಿಟ। ತಕಧಿನ ಎಂಬ ಒಂದು ದಸ್ತೆ ಆಗಬೇಕು. ಅದೇ ರೀತಿ ಎಡದ ಕಾಲನ್ನು ಬಳಸಿ ಹೆಜ್ಜೆ ಹಾಕುವುದು. ಅದಕ್ಕೆ ಸರಿಯಾಗಿ, ಕೈಗಳನ್ನು ಮುಂದಕ್ಕೆ ಹಿಡಿದು ಹಸ್ತಚಲನೆ; ಎಡಬಲ ಕೈಗಳನ್ನು ಎದುರುಬದುರಾಗಿ ವಿರುದ್ಧ ಭಂಗಿಯಲ್ಲಿ ಬರುವಂತೆ ತಿರುಗಿಸುವುದು. ಇದೇ ಹೆಜ್ಜೆಯನ್ನು ಮುಂದಕ್ಕೆ ಚಲಿಸುವದಕ್ಕೂ ಬಳಸಬಹುದು.

ಒಂಬತ್ತು ಮುಕ್ತಾಯ (ಬ.): ಸಭಾಲಕ್ಷಣ (ಪೂರ್ವರಂಗ) ವಿಭಾಗದಲ್ಲಿ, 'ಪೀಠಿಕೆ' ಎಂಬ ಹೆಸರಿನ ಬಾರಿಸುವಿಕೆ ಇರುತ್ತದೆ. ಇದಕ್ಕೆ ಪದ್ಯ ಹಾಡುವುದಿಲ್ಲ. ತಾಳ, ಚೆಂಡೆ, ಮದ್ದಲೆಗಳ ವಾದನ ಮಾತ್ರ. ಇದಕ್ಕೆ ನಿಶ್ಚಿತವಾದ ನಡೆಗಳಿದ್ದು, ಪೀಠಿಕೆ ಮುಗಿಯುವುದರೊಳಗೆ ಒಂಬತ್ತು ಬಾರಿ ಮುಕ್ತಾಯಗಳು ಬರುತ್ತದೆ. ಈ ಮಧ್ಯೆ ಮುಕ್ತಾಯದ ಬಡಿತಗಳಿದ್ದರೂ ಅವು ಮುಕ್ತಾಯಗಳ ಲೆಕ್ಕದಲ್ಲಿ ಗಣನೆಗೆ ಸೇರುವುದಿಲ್ಲ.

(ತೆ.) ಸಭಾಲಕ್ಷಣದಲ್ಲಿ ಆದಿತಾಳದ ಸ್ತುತಿಪದ್ಯಗಳ ಹಾಡುವಿಕೆ, ವಾದನಗಳಲ್ಲಿ ಈ ವಿನ್ಯಾಸವು ಒಂದು ಸಂಪ್ರದಾಯ. ಪದ್ಯದ ನಿಶ್ಚಿತವಾದ ಒಂದು ಚರಣವನ್ನು ಬೇರೆ ಬೇರೆ ವೇಗಗಳಲ್ಲಿ ಹೇಳುವಾಗ, ಮದ್ದಲೆಯಲ್ಲಿ ಏಕತಾಳದ ಎಂಟು ಮುಕ್ತಾಯಗಳೂ ಒಂದು ಗಿಡ್ಡ ಮುಕ್ತಾಯವೂ ಬಾರಿಸಲ್ಪಡಬೇಕು.

ಮಾಯಗಾರನು ನೀನೆ। ಮಹಿಮನು ನೀನೆ... ಎಂಬ ಪದ್ಯದ ''ಶ್ರೀಯರಸ ಚೆನ್ನಿಗ। ರಾಯಮೂರುತಿಯೆ'' ಎಂಬ ಚರಣವು ಒಂಬತ್ತು ಮುಕ್ತಾಯ ಬಾರಿಸುವ ಒಂದು ಪ್ರಸಿದ್ಧ ಸಂದರ್ಭ.

ಒಕ್ಕಣ್ಣ ಹಾಸ್ಯ: ಪೂರ್ವರಂಗದಲ್ಲಿ ಬರುವ ಕಟ್ಟುಹಾಸ್ಯಗಳಲ್ಲೊಂದು.

ಒಡ್ಡೋಲಗ: ಪಾತ್ರ ಪ್ರವೇಶ ದೃಶ್ಯ– ಅದಕ್ಕೆ ಸಂಬಂಧಿಸಿದ ನೃತ್ಯ ಮತ್ತು ಮಾತುಗಳು ಸಹ ಇದರಲ್ಲಿ ಸೇರುತ್ತವೆ. ಕೆಲವೊಮ್ಮೆ ಪ್ರವೇಶ ನೃತ್ಯಭಾಗಕ್ಕೆ ಮಾತ್ರ ಒಡ್ಡೋಲಗವೆನ್ನುವುದುಂಟು. ಸೀಮಿತ ಅರ್ಥದಲ್ಲಿ ಕತೆಯ ಮೊದಲ ದೃಶ್ಯಕ್ಕೆ ಮಾತ್ರ ಈ ಪದ ಪ್ರಯೋಗ.

ಉದಾ: ''ಒಡ್ಡೋಲಗಕ್ಕೆ ಸರಿಯಾಗಿ ಭಾಗವತರು ಬಂದರು'', ''ಒಡ್ಡೋಲಗ ಆದರೆ ವೀಳ್ಯ ಕೊಡಬೇಕು''.

ಒಡ್ಡೋಲಗದಲ್ಲಿ ಹಲವು ವಿಧಗಳಿವೆ. ಪಾತ್ರಾನುಗುಣವಾಗಿ ಕಿರೀಟದ ವೇಷದ ಒಡ್ಡೋಲಗ, ಬಣ್ಣದ ವೇಷದ ಒಡ್ಡೋಲಗ, ಹೆಣ್ಣು ಬಣ್ಣದ ಒಡ್ಡೋಲಗ, ಪುಂಡು ಒಡ್ಡೋಲಗ, ಕಿರಾತನ ಒಡ್ಡೋಲಗ ಇತ್ಯಾದಿ. ರೀತಿಗನುಸರಿಸಿ ತೆರೆಕುಣಿತ ಮತ್ತು ರಹಿತವಾಗಿ. ದೇವೇಂದ್ರ, ಶ್ರೀರಾಮ, ಪಾಂಡವರು, ದಶರಥ ಪಾತ್ರಗಳಿಗೆ ಒಡ್ಡೋಲಗದಲ್ಲಿ ಸಭಾಕಲಾಸು ಎಂಬ ನೃತ್ಯವೂ ಇದೆ.

ಕೃಷ್ಣನ ಒಡ್ಡೋಲಗಕ್ಕೆ ವಿಸ್ತಾರವಾದ ನರ್ತನವೂ ಪ್ರತ್ಯೇಕ ಪದ್ಯಗಳೂ ಇವೆ.

ಒಡ್ಡೋಲಗದ ವೇಷ: 1. ಪ್ರಸಂಗದ ಮೊದಲ ದೃಶ್ಯದ ಮುಖ್ಯ ಪಾತ್ರ.

2. ಒಡ್ಡೋಲಗದ ರಾಜನ ಜೊತೆಯಲ್ಲಿ ಬರುವ ಮಂತ್ರಿ, ಸೇನಾಪತಿ ಮೊದಲಾದ ಪಾತ್ರಗಳು. ಕತೆಯಲ್ಲಿ ಈ ಪಾತ್ರಗಳಿಲ್ಲದಿದ್ದರೂ ದೃಶ್ಯದ ಅಬ್ಬರಕ್ಕಾಗಿ ಸಂಯೋಜಿಸುವರು. ಇವುಗಳಿಗೆ ಅನಂತರ ಕತೆಯಲ್ಲಿ ಕೆಲಸವಿರಬೇಕೆಂದಿಲ್ಲ.

(ಬ.) 3. ಈ ಸ್ಥಾನಕ್ಕೆಂದೇ ಮೂವರು ವೇಷಧಾರಿಗಳು ಇರುತ್ತಾರೆ. ಮೇಳ ಸಂಘಟನೆ ಬೆಳವಣಿಗೆಯ ಹಂತದಲ್ಲಾದ ಬೆಳವಣಿಗೆ.

ಒಡ್ಯಾಣ: ವೇಷದ ಸೊಂಟದ ಆಭರಣ. ನಡುಪಟ್ಟಿಯ ಒಂದು ವಿಧ. ಇದಕ್ಕೆ ಜಾಲರಿಗಳು ಇರುತ್ತವೆ.

ಒತ್ತು ಎಡ: 1. ಮದ್ದಲೆಯಲ್ಲಿ ಎಡಭಾಗವನ್ನು ಒತ್ತಿ ಬಾರಿಸುವ ಪೆಟ್ಟುಗಳು.

2. ಎಡ– ಎಂದರೆ ಉಪ ಎಡ ಮದ್ದಲೆಗಾರ, ಒತ್ತು ಎಂದರೂ ಉಪ ಎಂದೇ ಅರ್ಥ. ಒತ್ತು ಎಡವೆಂದರೆ, ಎರಡನೇ ಸಹಾಯಕ ಮದ್ದಲೆಗಾರ. ಮೇಳದ ಸಂಘಟನೆ ಬೆಳೆದಂತೆ ಬಂದ ಪದ ಪ್ರಯೋಗ.

ಒತ್ತು ಕವಳ: ಚೆಂಡೆ, ಮದ್ದಲೆಗಳ ಜೀವ ಕವಳಗಳಿಗೆ ಹಿಂದಿನಿಂದ ಬಲಕ್ಕಾಗಿ ಕೊಡುವ ಆಧಾರ ಚರ್ಮಗಳು. ಮದ್ದಲೆಗೆ, ಜೀವ ಕವಳದ ಒಳಗೆ ಒಂದು ಅಥವಾ ಎರಡು ಒತ್ತು ಕವಳದ ಚಕ್ರಾಕಾರಗಳು. ಇವು ಇದೇ ಜೀವ ಕವಳದಷ್ಟು ಇರುವುದಿಲ್ಲ. ಸುತ್ತ ಇರುತ್ತವೆ. ಚೆಂಡೆಯ ಅಡಿಭಾಗಕ್ಕೆ ಏಳರಿಂದ ಹತ್ತು ಒತ್ತು ಕವಳಗಳಿರುತ್ತವೆ. ಮೇಲ್ಭಾಗ (ಬಾರಿಸುವ ಚರ್ಮ) ಒಂದೇ ಚರ್ಮ. ಅದಕ್ಕೆ ಒತ್ತು ಕವಳವಿರುವುದಿಲ್ಲ.

ಒತ್ತು ಗುಂಪು (ಬ.): ಮದ್ದಲೆಯ 'ಗುಂಪು' ಎಂಬ ನಾದವನ್ನು ಒತ್ತಿ ಬಾರಿಸುವುದು. ತೋಂಕಾರ ಬಾರಿಸಿ, ಕರ್ಣಕ್ಕೆ ಕೈ ಒತ್ತುವುದು.

ಒತ್ತು ಪುಂಡು (ಬ.): ಸಹಾಯಕ ಪುಂಡುವೇಷ. ತೆಂಕುತಿಟ್ಟಿನಲ್ಲಿ ಇದೇ ಎರಡನೆಯ ಪುಂಡುವೇಷ. ದ್ವಿತೀಯ ಪ್ರಾಶಸ್ತ್ಯದ ಪುಂಡುವೇಷಗಳಾದ ಅಶ್ವಮೇಧದ ವೃಷಕೇತು, ಲವಕುಶರ ಪೈಕಿ ಒಂದು– ಇತ್ಯಾದಿ ಪಾತ್ರಗಳು, ಪಾತ್ರಧಾರಿ ಕೂಡ.

ಒತ್ತು ಬಣ್ಣ (ಬ.): ದ್ವಿತೀಯ ಬಣ್ಣದ ವೇಷ ಮತ್ತು ವೇಷಧಾರಿ. ತೆಂಕಿನ ಎರಡನೆಯ ಬಣ್ಣ. ಹೆಣ್ಣು ಬಣ್ಣ, ಕಾಟು ಬಣ್ಣ, ಅಮುಖ್ಯ ಪಾತ್ರವಾಗಿದ್ದರೆ ಕಿರಾತ– ಇತ್ಯಾದಿಗಳು. ಬಡಗಿ

ನಲ್ಲಿ ಹಿಂದೆ ಇದ್ದುದು ಒಬ್ಬನೇ ಬಣ್ಣದ ವೇಷಧಾರಿ. ಎರಡನೆಯವನು ಬಂದಾಗ ಈ ಹೆಸರು ಬಂತು.

ಒತ್ತು ಮದ್ದಲೆಗಾರ: ಎರಡನೆಯ ಮದ್ದಲೆಗಾರ. ಸಹಾಯಕ ಮದ್ದಲೆ ವಾದಕ. ಬಡಗುತಿಟ್ಟಿನಲ್ಲಿ ಈತನು ಮುಖ್ಯ ಮದ್ದಲೆಗಾರನಿಗೆ, ಎರಡನೆಯವನಾಗಿ, ಅವನಿಗೆ ವಿಶ್ರಾಂತಿ ನೀಡಲು ಮದ್ದಲೆ ಬಾರಿಸುವವನು.

ತೆಂಕುತಿಟ್ಟಿನಲ್ಲಿ, ಈತನು ಹೆಚ್ಚಾಗಿ, ಚೆಂಡೆ ಬಾರಿಸುವಿಕೆ ಇರುವಾಗ, ಮದ್ದಲೆಗಾರನಾಗಿರುತ್ತಾನೆ. ಕಾರಣ, ಇಲ್ಲಿ ಮದ್ದಲೆಗಾರನೆಂದರೆ, ಚೆಂಡೆವಾದನ ವಾದಕನೇ. ಚೆಂಡೆ ಇಲ್ಲದ ಪದ್ಯಗಳಿಗೆ, ಮದ್ದಲೆಗಾರನು ಮದ್ದಲೆ ಬಾರಿಸಬೇಕು. ಒತ್ತುಮದ್ದಲೆಗಾರನಿಗೆ, ಚೆಂಡೆ ರಹಿತ ಮದ್ದಲೆ ವಾದನದ ಅವಕಾಶ ಸಿಗುವುದು ಸೀಮಿತ.

ಒತ್ತು ಸ್ತ್ರೀವೇಷ: ಎರಡನೆಯ ಸ್ತ್ರೀವೇಷಧಾರಿ ಮತ್ತು ದ್ವಿತೀಯ ಪ್ರಾಶಸ್ತ್ಯದ ಸ್ತ್ರೀವೇಷಗಳು. ಉದಾ: 'ಕೃಷ್ಣಾರ್ಜುನ'ದ ರುಕ್ಮಿಣಿ, 'ಪಂಚವಟಿ'ಯ ಸೀತೆ.

ಒತ್ತೆ ಆಟ: ಒಂಟಿ ಆಟ. ಜೋಡಾಟವಲ್ಲ ಎಂದರ್ಥ.

ಒತ್ತೆ ಉರುಳಿಕೆ: ಮದ್ದಲೆ, ಚೆಂಡೆಗಳಲ್ಲಿ ಬಾರಿಸುವ ನಿಧಾನಗತಿಯ ಉರುಳಿಕೆ. ಒಂಟಿ ಉರುಳಿಕೆ. ಒಂದು ಮಾತ್ರೆಗೆ ಒಂದೇ ಪೆಟ್ಟು ಅಥವಾ ಎರಡು ಮಾತ್ರೆಗೊಂದು ಪೆಟ್ಟು ಬಾರಿಸುವುದು.

ಒತ್ತೆ ಕರ್ಣಪರ್ವ (ತೆ.): ಕರ್ಣಪರ್ವ ಪ್ರಸಂಗವೊಂದನ್ನೆ ಇಡಿ ರಾತ್ರಿಗೆ ಆಡುವುದು. ಸಾಮಾನ್ಯವಾಗಿ ಕರ್ಣಪರ್ವವನ್ನು ಕುರುಕ್ಷೇತ್ರ ಪ್ರಸಂಗದ ಭಾಗವಾಗಿ (ಅಭಿಮನ್ಯು ಕಾಳಗ-ಕರ್ಣಪರ್ವ-ಗದಾಪರ್ವ ಅಥವಾ ಭೀಷ್ಮಪರ್ವ-ಕರ್ಣಪರ್ವ-ಗದಾಪರ್ವ) ಆಡುವುದು ರೂಢಿ. ಕರ್ಣಪರ್ವವನ್ನು ಮಾತ್ರ ಸಾದ್ಯಂತ ಆಡಿದರೆ ಒತ್ತೆ ಕರ್ಣಪರ್ವ.

ಒತ್ತೆಕುತ್ತು (ತೆ.): 1. ಒಂಟಿಲಾಗ. ವೇಷಗಳು ತಿರುಗಿ ಲಾಗ ಹಾಕುವಾಗ, ಒಂದು ಆವರ್ತಕ್ಕೆ ಒಂದರಂತೆ ಹಾರಿದರೆ ಒತ್ತೆ ಕುತ್ತು ಆಗುತ್ತದೆ. ಇದೇ ಒಂಟಿ ಲಾಗ. ಒಂಟಿಗುತ್ತು.

2. ವೀರರಸದ ಬಿಡ್ತಿಗೆಯಲ್ಲಿ, ವೇಷವು ಕುತ್ತು (ಗುತ್ತು) ಹಾರಿ, ಪುನಃ ಗತ್ತಿನಲ್ಲಿ ನಡೆದು ಎರಡನೆ ತಿರುಗಬೇಕು. ಅದರ ಬದಲು ಒಂದೇ ಗುತ್ತು ಹಾರಿ ತಿರುಗಣೆ ಲಾಗವನ್ನು ಮುಂದುವರಿಸಿದರೆ, ಮೊದಲು ಹಾರಿದ (ಒಂದೇ) ಲಾಗಕ್ಕೆ, ಈ ಹೆಸರಿದೆ.

ಒತ್ತೆನಾಕ್ (ತೆ.): ಇದು ಪ್ರಾಯಃ ನಾಟ್ಯಶಾಸ್ತ್ರೋಕ್ತವಾದ ವರ್ತನಿಕಾ ಎಂಬುದರ ತದ್ಭವವಾಗಿರಬೇಕು. ಕಥಕಳಿಯಲ್ಲೂ ಇದೇ ಹೆಸರಿದೆ. ನೋಡಿ: ವೀರಕಸೆ, ಕಾಂಚೀಧಾಮ.

ಒತ್ತೆಬಣ್ಣ (ತೆ.): 1. ಎರಡು ಬಣ್ಣದ ವೇಷಗಳು, ವಿಶೇಷತಃ ಜತೆಯಾಗಿ ಇರಬೇಕಾದ ಸಂದರ್ಭದಲ್ಲಿ, ಹೊಂದಾಣಿಕೆಗಾಗಿ, ಒಂದೇ ಬಣ್ಣದ ವೇಷ ಇದ್ದರೆ, ಈ ಹೆಸರು. ಉದಾ: ಶುಂಭ ನಿಶುಂಭರಲ್ಲಿ ಶುಂಭ ಮಾತ್ರ, ಖರ, ದೂಷಣ, ತ್ರಿಶಿರದಲ್ಲಿ ಖರ ಮಾತ್ರ, ಇದ್ದರೆ.

2. ಒಂದು ಪ್ರಸಂಗದಲ್ಲಿ ಒಂದೇ ಬಣ್ಣದವೇಷ ಇರುವುದಾದರೆ ಈ ಹೆಸರು.

ಒತ್ತೆ ಬೈರಾಗಿ (ತೆ.): ಪೂರ್ವರಂಗದ ಕಟ್ಟುಹಾಸ್ಯಗಳಲ್ಲೊಂದು. ಒಂಟಿ ಬೈರಾಗಿ. ಬೈರಾಗಿ ಹಾಸ್ಯ. ಹಿಂಡು ಬೈರಾಗಿ ಎಂಬ ಇನ್ನೊಂದು ಹಾಸ್ಯವಿರುವುದರಿಂದ, ಈ ಹೆಸರು. ಹಿಂದೀ ಮಿಶ್ರಿತ ಭಾಷೆ ಮಾತಾಡುವ, ಬೈರಾಗಿ ಅಣಕವಿದು. ನಾಥ ಸಂಪ್ರದಾಯದ ಜೋಗಿಗಳ ಪ್ರಭಾವದ ಸೃಷ್ಟಿ.

ಒಲವು/ಒಳವು: 1. ವಾದ್ಯಗಳ ನಾದದ ಒಲೆತ. ಸ್ವರವು ಆಚೀಚೆ ಒಲವು ತೋರಿಸುವುದು. ವ್ಯೊಂವ್ಯೊಂ ಎಂದು ಕಟ್ಟಿದಂತೆ ನಾದ ಬರುವುದು.

2. ವಾದ್ಯಗಳನ್ನು ಶ್ರುತಿ ಮಾಡಿದಾಗ, ನಾದವು ಮತ್ತೊಂದು ಶ್ರುತಿಯತ್ತ ಸ್ವಲ್ಪ ವಾಲುವುದು. ವಾದ್ಯದಲ್ಲಿ ದೋಷವಿದ್ದರೆ ಹೀಗಾಗುವುದುಂಟು.

ಒಳದಗಲೆ: ವೇಷದ ಮುಖ್ಯವಾದ ಅಂಗಿ. ದಗಲೆ (ದೊಗಲೆ ಅಂಗಿ)ಯ ಒಳಗಿಂದ ಗಾತ್ರಕ್ಕಾಗಿ ಧರಿಸುವ ದಗಲೆ. ವೇಷದ ಅಪೇಕ್ಷಿತ ಗಾತ್ರ, ವೇಷಧಾರಿಯ ಆಳಂಗವನ್ನು ಹೊಂದಿಕೊಂಡು ಒಳದಗಲೆಗಳ ಸಂಖ್ಯೆ ಎರಡರಿಂದ ಇಪ್ಪತ್ತರ ತನಕವೂ ಇರಬಹುದು. ತೆಂಕುತಿಟ್ಟಿನಲ್ಲಿ ಒಳದಗಲೆಗಳ ಸಂಖ್ಯೆ ಹೆಚ್ಚು.

ಒಳವು: ನೋಡಿ. ಒಲವು.

ಓ

ಓಡಾರಿ ಹಾಸ್ಯ: ಪೂರ್ವರಂಗದ ಕಟ್ಟುಹಾಸ್ಯಗಳಲ್ಲಿ ಒಂದು. ಕುಂಬಾರನ ಹಾಸ್ಯ. ತುಳುವಿನಲ್ಲಿ 'ಓಡಾರಿ' ಎಂದರೆ ಕುಂಬಾರ. ಈ ಪಾತ್ರವು ಮಡಕೆಯನ್ನು ಹಿಡಿದುಕೊಂಡು ಬಂದು, ತನ್ನ ವೃತ್ತಿಯ ಬಗೆಗೆ ಹಾಸ್ಯಮಯವಾಗಿ ಮಾತಾಡುವುದು. ಕುಂಬಾರ ಜನಾಂಗದವರು ಮುಗ್ಗರೆಂಬುದು ಒಂದು ಜಾನಪದ ಪರಿಕಲ್ಪನೆ. ಇದನ್ನಾಧರಿಸಿ ಈ ದೃಶ್ಯವಿರುತ್ತದೆ.

ಓಡಿ ಝುಂಪೆ = ನೋಡಿ : ತ್ವರಿತ ಝುಂಪೆ.

ಓ ದೇವ ದೇವ : ಒಡ್ಡೋಲಗದ ವೇಷಗಳು ತೆರೆ ತಗ್ಗಿಸಿ ಕುಣಿಯುವ, ತೆರೆ ಕುಣಿತದ ಪದ್ಯಗಳ ಆರಂಭದ ಶಬ್ದಗಳು. ಓ ದೇವ ದೇವ! ದಯಾಸಾಂದ್ರ... ಎಂದು ಈ ಪದ್ಯ ಮೊದಲಾಗುತ್ತದೆ. ದೇವರ ದೇವ... ಎಂದೂ ಪಾಠಾಂತರವಿದೆ. ಇದಕ್ಕೆ ಮೊದಲು ಏಸಮಾತಾವೇ... ಎಂದು ಆರಂಭವಾಗುವ ಚರಣವಿದ್ದರೂ, ಈ ಪದ್ಯಗಳಿಗೆ ಓ ದೇವ ದೇವ ಪದ್ಯಗಳೆಂದೇ ಹೆಸರು.

ತೆಂಕುತಿಟ್ಟಿನ ಸಂಪ್ರದಾಯದಂತೆ, ಏಸಮಾತಾವೇ... ಈ ಚರಣ, ಕಾರ್ತವೀರ್ಯಾರ್ಜುನನ ಪ್ರವೇಶಕ್ಕೆ ಇರುವಂತಹದು.

ಓ ದೇವ ದೇವ... ಎಂಬ ಪದ್ಯಗಳ ಕುಣಿತ, ದಶರಥನ, ಪಾಂಡವರ ಮತ್ತು ದೇವೇಂದ್ರನ ಒಡ್ಡೋಲಗಗಳಿಗೆ ಮಾತ್ರ. ಬಡಗುತಿಟ್ಟಿನಲ್ಲಿ ಈಗ ಇತರ ಒಡ್ಡೋಲಗಗಳಲ್ಲೂ ಬಳಸುತ್ತಾರೆ.

ಈ ಪದ್ಯಗಳು ಮೂಲತಃ ಪಾರ್ತಿಸುಬ್ಬನ ಪುತ್ರಕಾಮೇಷ್ಟಿ ಪ್ರಸಂಗದಲ್ಲಿ ದಶರಥನ ಒಡ್ಡೋಲಗಕ್ಕಾಗಿ ಇದ್ದವುಗಳೆನ್ನುವರು.

ಓದಿಕೆ/ಓದ್ಕಿ/ಓದ್ಕೆ : ತಾಳಮದ್ದಲೆಯ ನಾಮಾಂತರ. ಪ್ರಸಂಗದ ಪದ್ಯಗಳನ್ನು ವಾಚನರೂಪವಾಗಿ ಓದುವ ಸಂಪ್ರದಾಯವೊಂದು ಇದ್ದಿರಬಹುದು. ಈಗಲೂ ಕೆಲವೆಡೆ, ಮನೆಗಳಲ್ಲಿ ನೆಂಟರಿಷ್ಟರು ಸೇರಿದಾಗ, ಪದ್ಯಗಳನ್ನು ಹಿಮ್ಮೇಳ ವಾದ್ಯಗಳಿಲ್ಲದೆ, ವಾಚನ ಮಾಡಿ, ಅರ್ಥ ಹೇಳುವ ರೂಢಿಯಿದೆ. ಇದು ವಿಶೇಷತಃ ವಿಶ್ವಕರ್ಮ ಬ್ರಾಹ್ಮಣರಲ್ಲಿ ಇರುವ ಕ್ರಮ. ಪ್ರಸಂಗ ಓದುವುದು (ಪ್ರಸಂಗ ಓದುನೆ– ತುಳು) ಎಂದು ಇದಕ್ಕೆ ಹೆಸರು.

ಓದ್ಕಿ=ನೋಡಿ : ಓದಿಕೆ.

ಓದ್ಕೆ = ನೋಡಿ : ಓದಿಕೆ.

ಓಯಮ್ಮ ಲಾಲಾ, ಓಯಕ್ಕ ಲಾಲಾ : ಆಟದಲ್ಲಿ ಮಗು ಹುಟ್ಟಿದ ಸನ್ನಿವೇಶದಲ್ಲಿ ಹಾಡುವ ಪದ್ಯ. ಹುಟ್ಟಿದ ಮಗುವಿಗೂ ಬಾಣಂತಿಗೂ ಬೇಕಾದ ಹಾಲು, ಮೊಸರು ಕೇಳಿ ತರುವುದೆಂದರ್ಥ. ಓಯಮ್ಮ ಲಾಲಾ। ಓಯಕ್ಕ ಲಾಲಾ। ಇಜೋಡಿಯಮ್ಮ ಲಾಲಾ॥ ಹಾಲು ಬೆಣ್ಣೆ ಕೊಡಿರವ್ವ। ಹಾಲು ಮೊಸರು ಕೊಡಿರವ್ವ। ಹಾಲು ಮೊಸರು ಇಲ್ಲಾದವರು। ದುಡ್ಡು ದುಗ್ಗಾಣಿ ಕೊಡಿರವ್ವ॥ ಎಂದು ಹೇಳುತ್ತ ಹಾಸ್ಯಗಾರನೂ ಸಖಿ ಸ್ತ್ರೀವೇಷವೂ ಸಭೆಯಲ್ಲಿ ಬೇಡಬೇಕು. ಭಾಗವತರೂ ಇದನ್ನು ಹಾಡುತ್ತಾರೆ. ಈ ಬೇಡುವಿಕೆ ಆಗುತ್ತಿದ್ದಂತೆ, ಆಟದ ದೃಶ್ಯ ಮುಂದೆ ಹೋಗಬಹುದು. ಸಂಗ್ರಹವಾದ ಹಣವು ಮೇಳದ ಯಜಮಾನನಿಗೆ ಸೇರಿದ್ದು. ಇದರಲ್ಲಿ ಹಾಸ್ಯಗಾರ, ಸ್ತ್ರೀವೇಷ, ಭಾಗವತರು– ಇವರಿಗೆ ಪಾಲು ಇದೆ. ಈ ದೃಶ್ಯವು 1960ರ ಅನಂತರ ಬಳಕೆಯಲ್ಲಿಲ್ಲ.

ಓರೆ ಪಕಡಿ/ಓರೆ ಪಗಡಿ (ತೆ.) : ಕಿರಾತನ ಪಗಡಿ. ಇದು ತಲೆಯ ಮೇಲೆ ನೇರವಾಗಿ ಧರಿಸುವುದಿಲ್ಲ. ಅದರ ಮುಂಬದಿಯು ಎಡ ಭಾಗಕ್ಕೆ ತೋರುವಂತೆ ಓರೆ ಮಾಡಿ ಧರಿಸುವುದಾಗಿದೆ. ಇದು ರಚನೆಯಲ್ಲಿ ಓರೆಯಾಗಿ ತಯಾರಿಸಿದ್ದೂ ಇರುವುದುಂಟು. ಕೂದಲಿನ ಕುಂಚವೊಂದು ಇದರಿಂದ ಹೊರಬಂದು ಕಿವಿಯ ಮೇಲೆ ನೇತಾಡುತ್ತಿರಬೇಕು. ನೋಡಿ : **ಕೋರೆ ಮುಂಡಾಸು.**

ಓರೆ ಮುಡಿ : ತಲೆಯ ಮೇಲೆ, ಮಧ್ಯಕ್ಕಿಂತ ಆಚೀಚೆ ಕಟ್ಟುವ ತುರುಬಿನ ವಿನ್ಯಾಸ. ಕೊರವಂಜಿ, ಕಿರಾತ ಸ್ತ್ರೀ, ಬಾಲಕೃಷ್ಣ ವೇಷಗಳಿಗೆ ಈ ಬಗೆಯ ಮುಡಿ.

ಓರೆ ಬೈತಲೆ : ಸ್ತ್ರೀ ಪಾತ್ರವು, ಬೈತಲೆಯನ್ನು ಸ್ವಲ್ಪ ಬದಿಗೆ ತೆಗೆಯುವುದು. ತಲೆಯ ಮಧ್ಯಕ್ಕೆ ತೆಗೆಯುವ ಬದಲು, ಅಸಮವಾಗಿ ವಿಭಾಗಿಸುವುದು. ಇದು 'ಸೂಳೆ ಸ್ತ್ರೀವೇಷ'ಗಳಿಗೆ ಪ್ರಯುಕ್ತ– ಮಾಯಾ ಶೂರ್ಪನಖಿ, ಮಾಯಾ ಪೂತನಿ ಇತ್ಯಾದಿ. 'ಗರತಿ ಸ್ತ್ರೀವೇಷ'ಕ್ಕೆ ನಿಷಿದ್ಧ. ಓರೆ ಬೈತಲೆ ಪ್ರಯೋಗವು ಅರ್ವಾಚೀನವೆಂದೇ ಕಾಣುತ್ತದೆ.

ಓಲೆ : 1. ಸ್ತ್ರೀ ವೇಷದ ಕಿವಿಯೋಲೆ, ಬೆಂಡೋಲೆ. ಹಿಂದೆ ಓಲೆಗರಿಗಳಿಂದಲೇ ತಯಾರಿಸುತ್ತಿದ್ದುದರಿಂದ ಈ ಹೆಸರು. ಓಲೆಗಳಲ್ಲಿ ಹಲವು ಪ್ರಕಾರಗಳಿವೆ. ಕುಚ್ಚಿನ ಓಲೆ, ಗಿಳಿಯೋಲೆ, ಸುಳಿಯ ಓಲೆ ಇತ್ಯಾದಿ.

2. ಬಣ್ಣದ ವೇಷದ ಉರುಟು ಕರ್ಣಾಭರಣ. 'ಪತ್ರ'ವೆಂದೂ ಹೆಸರಿದೆ.

3. ಒಂದು ಪಾತ್ರವು, ಇನ್ನೊಂದು ಪಾತ್ರಕ್ಕೆ ಬರೆದು ಕಳಿಸಿದ ಓಲೆ. ಇದಕ್ಕೆ ಹಿಂದೆ ಓಲೆ ಗರಿಯೊಂದನ್ನು ಬಳಸುತ್ತಿದ್ದರಂತೆ. ಬರಿಯ ಮುದ್ರೆ (Mime) ನಿಂದಲೂ ತೋರಿಸುತ್ತಾರೆ.

ಓಲೆಕುಚ್ಚು : 1. ಸ್ತ್ರೀವೇಷದ ಒಂದು ಆಭರಣ. ಇದು ಕಿವಿಯಾಕೃತಿಯಲ್ಲಿ ಇದ್ದು, ಕಿವಿಯನ್ನು ಆವರಿಸುತ್ತದೆ. ಕೆಳಗೆ ಕುಚ್ಚಿನಂತೆ ಮುತ್ತು, ಮಣಿ ಗಳಿರುತ್ತವೆ.

ಇದು ಕಿವಿಯೆಂದೇ ತಾತ್ಪರ್ಯ. ಕೊಪ್ಪು, ಬುಗುಡಿ, ಕುಚ್ಚು ಮೊದಲಾಗಿ ಇದರ ಭಾಗಗಳು. ಅರ್ಥಾತ್ ಈ ಆಭರಣವು ಅಲಂಕೃತವಾದ ಕಿವಿಯ ರೂಪ.



ಏಣಿ ಬಣ್ಣ



ಕತ್ತರಿ ಸರ

ಓಲೆ (ಪತ್ರ)



ರಾಕ್ಷಸರ ಕಿವಿಯೋಲೆ




ಕಡಗ



ಒರೆ ಮುಂಡಾಸು (ಕಿರಾತ)



ಕರ್ಣಪತ್ರ (ತೆಂಕು)



ಕರ್ಣಪತ್ರ (ಬಡಗು)

2. ಇನ್ನೊಂದು ಆಭರಣ. ಕಿವಿಯ ಕೆಳಭಾಗದಲ್ಲಿ ಧರಿಸುವ ಘನವಾದ ಆಭರಣ. ಅದಕ್ಕೆ ಕುಚ್ಚು ನೇತಾಡುತ್ತಿರುತ್ತದೆ.

3. ಓಲೆ ಎಂಬ ಆಭರಣದ ಕುಚ್ಚು.

ನೋಡಿ: **ವಾಲೆಕುಚ್ಚು.**

ಓಲೆ ದೂತ: ಪಾತ್ರವು ಪಾತ್ರಕ್ಕೆ ಬರೆದು ಕಳಿಸಿದ ಓಲೆಗಳನ್ನು ತಲುಪಿಸುವ ದೂತನ ಪಾತ್ರ. ಇದನ್ನು ಹಾಸ್ಯಗಾರನು ವಹಿಸುತ್ತಾನೆ. ಉದಾ: ಭೀಷ್ಮ ವಿಜಯದ ಸ್ವಯಂವರದ ಓಲೆಗಳನ್ನು ರಾಜರಿಗೆ ಕೊಂಡೊಯ್ದು ಕೊಡುವ ವೇಷ.

ಓಲೆ ಸರಪಣಿ: ಸ್ತ್ರೀ ವೇಷವು ಧರಿಸುವ ಓಲೆ, ಕೊಪ್ಪುಗಳಿಗೆ ಜೋಡಿಸಿದ ಸರಪಣಿ. ಇದನ್ನು ಕಿವಿಯ ಅಡಿಯಿಂದ ಕೊಂಡೊಯ್ದು ಕಿವಿಯ ಮೇಲ್ಗಡೆ ಅಥವಾ ಹಿಂಬದಿಯಲ್ಲಿ ಕೂದಲಿಗೆ ಸಿಕ್ಕಿಸುವರು. ಆಭರಣದ ಮೇಲ್ಗಡೆ ಇರುವಂತಹದು. **ತಾಂಗು ಸರಪಣಿ.**

ಕ

ಕಂಕಣ: ಸ್ತ್ರೀವೇಷದ ದೊಡ್ಡ ಕೈಬಳೆ. ಮರ ಅಥವಾ ಲೋಹದಿಂದ ತಯಾರಿಸುತ್ತಾರೆ. ಇದು ಒಂದೇ ಕೆತ್ತನೆ ಅಥವಾ ಎರಕವಾಗಿರಬಹುದು ಅಥವಾ ಹಲ್ಲೆಗಳನ್ನು ಜೋಡಿಸಿ ಪೋಣಿಸಿ ಮಾಡಿದ್ದಾಗಿರ ಬಹುದು.

ಕಂಟ್ರಾಕ್ಟ್ ಆಟ: ಮೇಳದ ಆಟವನ್ನು, ಒಪ್ಪಂದದ (Contract) ಮೇಲೆ ವಹಿಸಿಕೊಂಡು ಆಡಿಸು ವುದು. ಕಂಟ್ರಾಕ್ಟುದಾರನು ಮೇಳಕ್ಕೆ ನಿಶ್ಚಿತ ಮೊತ್ತವನ್ನು ನೀಡುತ್ತಾನೆ. ಟಿಕೇಟ್ ಹಣದ ಸಂಗ್ರಹ ಅವನಿಗೆ ಸೇರಿದ್ದು. ಆತನು, ಆಟದ ಟಿಕೇಟ್ ದರವನ್ನು ಏರಿಸಬಹುದು. ಮೇಳಕ್ಕೆ ನಿಶ್ಚಿತ ಮೊತ್ತ ವನ್ನು ನೀಡುವುದಲ್ಲದೆ, ಹೆಚ್ಚುವರಿ ಪ್ರಚಾರ, ಸ್ಥಳೀಯವಾದ ಲೈಸೆನ್ಸ್ ಮೊದಲಾದ ಏರ್ಪಾಡು ಗಳ ಹೊಣೆ ಅವನದೆ. ಈ ಕುರಿತು ಮೇಳಗಳು ವಿವರವಾದ ನಿಯಮಾವಳಿ ರೂಪಿಸಿವೆ.

ಕಂಧರನ ಒಡ್ಡೋಲಗ ಬ.: ಗುಹ, ದಾಶರಾಜ (ಭೀಷ್ಮ ಪ್ರತಿಜ್ಞೆ) ಪಾತ್ರಗಳ ಒಡ್ಡೋಲಗ. ಕಂಧರನು ಕೃತಕ ದೋಣಿಯೊಂದನ್ನು ಕಟ್ಟಿಕೊಂಡು, ಹುಟ್ಟು ಹಾಕುವುದನ್ನು ಅಭಿನಯಿಸುತ್ತ ಬರುವುದು. ಇದಕ್ಕೆ ಹೆಚ್ಚಾಗಿ ಬಳಸುವ ಪದ್ಯ:

ಸಾಗರ ಶಾಯಿ ರಾಮಯ್ಯ। ಭವ।
ಸಾಗರ ದಾಟಿಸು ರಾಮಯ್ಯ।
ಭೋಗಿ ಭೂಷಣ ಸಖ। ರಾಮಯ್ಯ। ನಿಗ।
ಮಾಗಮಸಾರನೆ ರಾಮಯ್ಯ॥

ಕಂಚಿನ ಕಂಠ: ಸಶಕ್ತವಾದ, ಏರುಶ್ರುತಿಗೆ ಚೆನ್ನಾಗಿ ನುಡಿಯುವ, ಹಾಡುಗಾರನ ಸ್ವರ. ಜಾನಪದ ಪ್ರಶಂಸೆ. ಉದಾ: ''ಇವರು ಕಂಚಿನ ಕಂಠದ ಭಾಗವತರು''.

ಕಕ್ಕೆ: ಕಕ್ಕೆ ಮರ; ಕೊಂದೆ ಮರ. (Cassia fistula) ಮದ್ದಲೆಯ ಕಳಸಿಗೆ ತಯಾರಿಸಲು ಬಳಕೆ.

ಕಕ್ಕೆತುಡಾರ್ (ತೆ.): ಕಾಗೆ ಸೊಡರು ಎಂಬರ್ಥದ ತುಳು ಶಬ್ದ. ಕೈ ಬೆಳಕು. ಮುಂಬದಿಗೆ ಆರತಿ ಆಕಾರದ ಮುಖ, ಹಿಂದೆ ಹಿಡಿ, ಮಧ್ಯದಲ್ಲಿ ಪಾತ್ರೆ ಅಥವಾ X ಆಕಾರದ ಕಾಲು ಇರುವ ದೀಪ. ದೇವರನ್ನು (ಕಿರೀಟವನ್ನು) ರಂಗಕ್ಕೊಯ್ಯುವಾಗ ಬಳಸುವರು.

ಕಚ್ಚೆಮನೆ: ಮದ್ದಲೆಯಲ್ಲಿ ಶ್ರುತಿ ವ್ಯತ್ಯಾಸ ಇರುವ ಕಣ್ಣು ಅಥವಾ ಸ್ಥಾನ. ಮದ್ದಲೆಯನ್ನು ಶ್ರುತಿಗೆ ಸರಿ ಪಡಿಸುವಾಗ, 'ಇಂಡಿಗೆ'ಗೆ ಕೊಟ್ಟ ಪೆಟ್ಟುಗಳು ಹೆಚ್ಚಾದರೆ ಮದ್ದಲೆ ''ಕಚ್ಚೆಮನೆಗೆ ಬೀಳುತ್ತದೆ'' ಎಂದರೆ ಒಂದೊಂದು ಸ್ಥಾನಕ್ಕೆ ಶ್ರುತಿ ಹೊಂದಿಸಿದಂತೆ, ಮುಂದಿನ ಸ್ಥಾನಕ್ಕೆ ಅಪಶ್ರುತಿ ದಾಟುತ್ತ ಇರುತ್ತದೆ. ಇದನ್ನು ಸರಿಪಡಿಸಬೇಕಾದರೆ, ಕಲ್ಲು ಅಥವಾ ಸುತ್ತಿಗೆ ಪೆಟ್ಟುಗಳಿಂದ ಆಗುವುದಿಲ್ಲ. 'ಸರಸ್ವತಿ ಗಂಟು' ಬಿಡಿಸಿ, ಬಾರಗಳನ್ನು ಎಳೆದು ಹದಕ್ಕೆ ತರಬೇಕು.

ಕಚ್ಚೆ: ಸ್ತ್ರೀ– ಪುರುಷ ವೇಷಗಳ ಸೊಂಟದ ಕೆಳಗಣ ಉಡುಗೆ. ವೀರ ಕಚ್ಚೆ, ಅರೆ ಕಚ್ಚೆ, ಕಸೆ, ಪಟ್ಟುಪಚ್ಚೆ ಕಚ್ಚೆ ಇತ್ಯಾದಿ ವಿಧಗಳು ಇದರಲ್ಲಿವೆ.

ಕಚ್ಚೆಮುನ್ನಿ (ತೆ.): 1. ನೋಡಿ. **ವೀರಕಸೆ, ಕಾಂಚೀಧಾಮ.**

2. ಕಚ್ಚೆ ಉಟ್ಟಾಗ ಉಳಿಯುವ ಬಟ್ಟೆಯ ತುದಿ ಗಳು, ಮುನ್ನಿಗಳು. ಇವನ್ನು ಮಡಚಿ ತೂರಿಸಿ ಅಥವಾ ಗಂಟು ಹಾಕಿ ಮರೆ ಮಾಡಬೇಕು.

ಕಟ್ ಮುಕ್ತಾಯ/ಕಟ್ಟು ಮುಕ್ತಾಯ: 1. ಕಿರು ಮುಕ್ತಾಯ. ನೋಡಿ: **ಗಿಡ್ಡ ಮುಕ್ತಾಯ.**

2. ತಾಳವನ್ನು ಬದಲಾಯಿಸುವಾಗ ಬಳಸುವ ಮುಕ್ತಾಯ.

ಕಟ್ಟ/ಕಟ್ಟು: 1. ಹೊರೆ, ಗಂಟು– ಜವುಳಿ ಗಂಟು, ರಥದ ಗಂಟು, ಚಾಪೆ ಕಟ್ಟು, ಇತ್ಯಾದಿ.

2. ವೇಷದ ಮೈಯಲ್ಲಿ ಜವುಳಿ, ಆಭರಣ ಧರಿಸುವಾಗ ಬಿಗಿಯುವ ಗಂಟು, ಬಿಗಿತ.

3. ಚೆಂಡೆ ಮದ್ದಲೆಗಳ ಬಾರಗಳ ಗಂಟುಗಳು.

ಕಟ್ವಾಣಿ ಗುಂಡುಸರ: ಗುಂಡುಸರದ ಒಂದು ಪ್ರಭೇದ. ಸ್ತ್ರೀವೇಷದ ಕಂಠಾಭರಣ. ಚಿಕ್ಕಗಾತ್ರದ ಗುಂಡುಗಳ ಮಾಲೆ.

ಕಟ್ಟು: ನೋಡಿ: **ಕಟ್ಟ.**

ಕಟ್ಟುಕವಳ: 1. ಮದ್ದಲೆಯ ಜೀವ ಕವಳಗಳಿಗೆ, ಅಂದರೆ ನಾದ ಹೊಮ್ಮಿಸುವ ಚರ್ಮಗಳಿಗೆ, ಮೇಲಿಂದ ಜೋಡಿಸುವ, ಅರ್ಧ ಕವಳಗಳು.

2. ಮದ್ದಲೆಯ ಎಡಬದಿಯ ಜೀವ ಕವಳಕ್ಕೂ (ಎಡ ಜೀವ) ಈ ಹೆಸರುಂಟು.

ಕಟ್ಟುಮುಕ್ತಾಯ: ನೋಡಿ. **ಕಟ್ ಮುಕ್ತಾಯ.**

ಕಟ್ಟು ವೇಷ: ತೀರ ಭಿನ್ನವಾದ ಅರ್ಥಗಳಲ್ಲಿ ಬಳಕೆಯಾಗುತ್ತಿರುವ ಪದ.

1. ಕಟ್ಟು ಪ್ರಕಾರ ಎಂದರೆ ಕಟ್ಟುಕಟ್ಟಳೆ ಪ್ರಕಾರ ರಂಗಕ್ಕೆ ಬರುವ ವೇಷ– ಸಭಾಲಕ್ಷಣವೆಂಬ ಪೂರ್ವರಂಗ ವಿಧಿಯಲ್ಲಿನ ವೇಷ ನೋಡಿ: **ಬಾಲಗೋಪಾಲರು, ನಿತ್ಯವೇಷ.**

2. ಸಾಮಗ್ರಿ ಕಟ್ಟುವಿಕೆ ಇರುವ ವೇಷ– ಸ್ತ್ರೀ ವೇಷ, ಹಾಸ್ಯ, ಕೋಡಂಗಿ– ಈ ಮೂರನ್ನು ಬಿಟ್ಟು ಉಳಿದೆಲ್ಲ ವೇಷಗಳು.

3. ರಾಜ ವೇಷ– ಅಂದರೆ, ಕೋಲು ಕಿರೀಟದ ವೇಷ– ಇಂದ್ರ, ಅರ್ಜುನ, ರಾಮ, ನಳ, ಕೌರವ ಇತ್ಯಾದಿ. ಅರ್ಥಾತ್ ಸ್ತ್ರೀ, ಹಾಸ್ಯ, ಬಣ್ಣ, ಪುಂಡು ವೇಷ ಬಿಟ್ಟು ಉಳಿದೆಲ್ಲ ವೇಷ.

4. ಎಲ್ಲ ಪುರುಷ ಪಾತ್ರಗಳು– ಹಾಸ್ಯ, ಕೋಡಂಗಿ, ಬಾಲಗೋಪಾಲ ಹೊರತು. ತೆಂಕುತಿಟ್ಟಿನ ಹಳೆಯ ಲೆಕ್ಕದಂತೆ ಚೌಕಿಯಲ್ಲಿ ಏಳು ವೇಷಗಳು (ಪುರುಷ) ಎಂದು ನಿರ್ಣಯ. ಇವೆಲ್ಲವೂ ಒಂದು ಪ್ರಸಂಗದಲ್ಲಿ ರಂಗಕ್ಕೆ ಬರಲೇಬೇಕೆಂದು ನಿಯಮ. ಇವೇ ಏಳು ಕಟ್ಟುವೇಷಗಳು. ಕಾರಣ, ಮೂರನೇ ಕಟ್ಟುವೇಷ, ಆರನೇ ಕಟ್ಟುವೇಷ, ಏಳನೇ ಕಟ್ಟುವೇಷ ಎಂಬ ಹೆಸರುಗಳು ಈಗಲೂ ಉಳಿದಿವೆ. ಈ ಸಂಖ್ಯಾವಾಚಕಗಳಿಗೆ ಬೇರೆ ಕಾರಣ ಕಾಣುವುದಿಲ್ಲ. ಹಿಂದೆ, ವೇಷಗಳನ್ನೆಲ್ಲ ಒಂದನೆಯ, ಎರಡನೆಯ ಎಂದು ಮುಂತಾಗಿ ಗುರುತಿಸುವ ಕ್ರಮವಿದ್ದಿರಬಹುದು. ಅದು ಈಗ ಬದಲಾಗಿ, ಕೆಲವು ಸಂಖ್ಯಾವಾಚಕ ನಾಮನಿರ್ದೇಶನಗಳೂ, ಇನ್ನು ಕೆಲವು ಬೇರೆ ರೀತಿಯಾಗಿಯೂ (ಬಣ್ಣದ ವೇಷ, ಪುಂಡು ವೇಷ, ಇದಿರು ವೇಷಗಳು– ಸೇರಿ ಕೊಂಡಿರಬೇಕು. (ಮುಳಿಯ ಮಹಾಬಲ ಭಟ್ಟ: ಬಣ್ಣದ ವೇಷ ಮತ್ತು ಇತರ ಉಪನ್ಯಾಸಗಳು: 1988.)

ಕಟ್ಟು ಸಂಬಳ: ಕಟ್ಟಿಟ್ಟ ಸಂಬಳ. ನಿಶ್ಚಿತ ವರಮಾನ. ಇಡಿಯ ತಿರುಗಾಟಕ್ಕೆ ಇಂತಿಷ್ಟು ಎಂದು ನಿರ್ಣಯಿಸಿ, ನೀಡುವ ಸಂಬಳ. (ಇದಕ್ಕೆ ಭಿನ್ನವಾದದ್ದು **ಹುಟ್ಟುಸಂಬಳ** ಮತ್ತು **ದಿನಸಂಬಳ**).

ಕಟ್ಟು ಸ್ವರ: ಚೆಂಡೆ, ಮದ್ದಲೆಗಳನ್ನು ಬಾರಿಸುವಾಗ, ಕಟ್ಟಿದಂತೆ ಒಡಿಯುವ ಸ್ವರಗಳು. ಟ, ಕ, ತ, ಟ– ಇತ್ಯಾದಿ.

ಇದಕ್ಕೆ ಭಿನ್ನವಾದವು– **ಬಿಡು ಸ್ವರ, ಮಣಿಸ್ವರ.**

ಕಟ್ಟು ಹಾಸ್ಯ: ಪೂರ್ವರಂಗದ ಒಂದು ಭಾಗ. ಸಭಾಲಕ್ಷಣ ಪ್ರಯೋಗದ ಮಧ್ಯೆ, ಅರ್ಧನಾರಿ ವೇಷದ ಅನಂತರ ಅಥವಾ ಸಭಾಲಕ್ಷಣದ ಕೊನೆಗೆ, ಪ್ರಸಂಗ ಆರಂಭಕ್ಕಿಂತ ಮೊದಲು ಪ್ರದರ್ಶಿಸುವ ಕೆಲವು 'ಕಟ್ಟು' ಹಾಸ್ಯ ಸಂದರ್ಭಗಳು. 'ಕಟ್ಟು' ಎಂದರೆ ಕೃತಕ ವಾದದ್ದೆಂದರ್ಥ. ಸಭಾಲಕ್ಷಣ ಪಾಠದಲ್ಲಿ ಈ ವೇಷಗಳ ಮಾತು, ಹಾಡುಗಳಾಗಲಿ, ಉಲ್ಲೇಖವಾಗಲಿ ಇಲ್ಲ. ಮುಖ್ಯವಾಗಿ, ರಂಜನೆಗಾಗಿ ಇರುವಂತಹ ಸನ್ನಿವೇಶಗಳಿವು.

ಇಂತಹ ಕಟ್ಟು ಹಾಸ್ಯಗಳ ಸಂಖ್ಯೆ ಹದಿನಾರು ಎಂದು ಒಂದು ಅಭಿಪ್ರಾಯ. ಇಂತಿಷ್ಟೆ ಎಂದು ನಿರ್ಣಯವಿಲ್ಲ ಎಂದು ಒಂದು ಮತ. ಸಮಯಾವ ಕಾಶವಿದ್ದಂತೆ, ಇವುಗಳ ಸಯೋಜನೆ. ಮುಖ್ಯವಾದ ಕಟ್ಟು ಹಾಸ್ಯಗಳು ಇವು– ಸಿಂಗಿ ಸಿಂಗ, ಬ್ರಾಹ್ಮಣ ಪುರೋಹಿತ, ಆಚಾರಿ ಭಟ್ಟ, ಒತ್ತೆ ಬೈರಾಗಿ, ಹಿಂಡು ಬೈರಾಗಿ, ರಾಂ ಬೈರಾಗಿ, ಮಡಿವಾಳ, ತೆಂಕ ಮಡಿವಾಳ, ಕೊರವಂಜಿ, ರಂಗಾರಂಗಿ, ಓಡಾರಿ (ಕುಂಬಾರ), ಅಂಡುಕುಟ್ಟಿ, ಚಪ್ಪರಮಂಚ, ಬೋಯಿಬ್ರಾಣ (ಬೋವಿ+ಬ್ರಾಹ್ಮಣ ಮಿಶ್ರ), ಏಕಪಾತ್ರ, ಒಕ್ಕಣ್ಣ, ಕಳ್ಳ-ಕಳ್ಳಿ, ಕೊಕ್ಕೆಚಿಕ್ಕ, ಉರ್ದುಸಾಯಿಬ (ಮುಸಲ್ಮಾನ್), ಮಾಪಿಳ್ಳೆ (ಕೇರಳ ಮುಸಲ್ಮಾನ), ಕಿರಿಸ್ತಾನ್ (ಕ್ರಿಶ್ಚನ್), ಹಾಲಕ್ಕಿ ನರ್ಸಣ್ಣ, ಗಾಣಿಗ.

ಈಗ ಕಟ್ಟುಹಾಸ್ಯಗಳು ರಂಗದಲ್ಲಿ ಬಳಕೆ ಯಲ್ಲಿಲ್ಲ.

ಈ ಕಟ್ಟುಹಾಸ್ಯ ವಿಭಾಗವು, ನಾಟ್ಯಶಾಸ್ತ್ರೋಕ್ತ ಪರಂಪರೆಯ ಮುಂದುವರಿಕೆಯಾಗಿದ್ದು, 'ಆಮುಖ' ಅಥವಾ 'ಪ್ರರೋಚನ'ವೆಂಬುದರಲ್ಲಿ ಬರುವ, ವೀಥೀ ಪ್ರಹಸನವಾಗಿದೆ. ನಾಟ್ಯಶಾಸ್ತ್ರದಲ್ಲಿ ಹೇಳಿದ ಅಸತ್ಪ್ರಲಾಪ, ವಾಕ್ಕೇಲಿ, ಸಿಂಗಕ, ಛಲ ಇತ್ಯಾದಿಗಳು ಕಟ್ಟುಹಾಸ್ಯಗಳೇ ಆಗಿವೆ.

...ಅಸತ್ಕೃಲಾಪಿತಂಚೈವ ವೀಥ್ಯಾಂ ಸಮ್ಯಕ್ಪ ಯೋಜಯೇತ್। ಭಗವತ್ತಾಪಸ, ಭಿಕ್ಷು, ಶ್ರೋತ್ರಿಯ, ವಿಪ್ರಾತಿಹಾಸ ಸಂಯುಕ್ತಂ॥...
(ನಾಟ್ಯಶಾಸ್ತ್ರ)
(ದಿ। ಕುಕ್ಕಿಲ ಕೃಷ್ಣ ಭಟ್ ಅಭಿಪ್ರಾಯದ ಸಂಗ್ರಹ: ಬಾಸಿಗ: 1971).

ಕಟ್ಟೆ: ಶ್ರುತಿಸ್ಥಾನ. ಉದಾ: ''ಎಷ್ಟನೇ ಕಟ್ಟೆಯ ಶ್ರುತಿ?'' ಪ್ರಾಯಃ ವೀಣೆಯ ಮೆಟ್ಟಿಲುಗಳ ಸಂಬಂಧವಾಗಿ ಬಂದ ಪದ. ಈಗ ಹಾರ್ಮೋನಿಯಂನ ರೀಡ್‌ಗಳಿಗೂ ಹೇಳುವರು. ನೋಡಿ: **ಪಟ್ಟಿ**.

ಕಠಾರಿ = ನೋಡಿ: **ಖಡ್ಗ**.

ಕಡಗ: 1. ದೊಡ್ಡ ಆಕಾರದ ಕೈಬಳೆ.
2. ನೋಡಿ: **ಕಾಲಕಡಗ**.

ಕಡ್ಡಿ: 1. ನೋಡಿ: **ಬಣ್ಣದ ಕಡ್ಡಿ**.
2. ಆಭರಣದಲ್ಲಿ ಬರುವ ಕಡ್ಡಿಯಾಕಾರಗಳು. ಆಭರಣಕ್ಕೆ ಕಡ್ಡಿ, ಹಲ್ಲೆ, ಮಣಿ, ಗುಂಡು, ಮುತ್ತು, ಕಾಯಿ, ಹವಳ, ಕಲ್ಲು – ಇವು ಅಂಗಗಳು, ಘಟಕಗಳು.

ಕಡ್ಪುವಾರ: ವಾರ (ದಿನ)ಗಳಲ್ಲಿ ಕಡುಪು ಮತ್ತು ಸೌಮ್ಯವೆಂಬ ನಂಬುಗೆಗನುಸರಿಸಿದ ವಿಭಾಗ. 'ಕಡಪು' (ತುಳು) ದಾಟುವಿಕೆ. ಆಯಾ ದಿನಗಳಲ್ಲಿ ರಾಹು ಆ ದಿಕ್ಕುಗಳಲ್ಲಿ ದಾಟುತ್ತಾನೆ ಅಥವಾ ಸಂಚರಿಸುತ್ತಾನೆ ಎಂಬ ನಂಬುಗೆ. ಅದನ್ನನುಸರಿಸಿ ಶುಭಾಶುಭ ವಿಶ್ವಾಸ. ನೋಡಿ: **ರಾಹುದಿಕ್ಕು**.

ಕಣ್ಣು: 1. ಬಣ್ಣದ ವೇಷಗಳಿಗೆ, ಹಾಸ್ಯಪಾತ್ರಗಳಿಗೆ, ಶಿವನ ವೇಷಕ್ಕೆ ಬಣ್ಣದಲ್ಲಿ ಬರೆಯುವ ಕೃತಕ ಕಣ್ಣು. ಕಣ್ಣು ಬಿಡಿಸುವುದು.
2. ಚೆಂಡೆ, ಮದ್ದಲೆಗಳ ಮುಚ್ಚಿಗೆ ಚರ್ಮಕ್ಕೆ ಕೊರೆದ ತೂತು.

ಕತ್ತ: ತೆಂಗಿನ ನಾರು, ಹಾಸ್ಯವೇಷದ ಮೀಸೆಗೆ ಬಳಕೆ. ಕತ್ತದ ಹುರಿ, ಅಂಡು ಕಟ್ಟಲು, ರಂಗಸ್ಥಳ, ಚೌಕಿ ತಯಾರಿಗಳಿಗೆ ಉಪಯೋಗ.

ಕತ್ತರಿ ವೀಳ್ಯ/ಕತ್ರಿ ವೀಳ್ಯ: ಎರಡು ಕೈಗಳಲ್ಲೂ ವೀಳ್ಯವನ್ನು ಹಿಡಿದು, ಕೈಮಡಚಿ ಕವುಚಿ, ಕೈಗಳನ್ನು ಆಚೀಚೆ ಕತ್ತರಿಯಂತೆ ಹಿಡಿಯುವುದು. ಬಲಗೈ ಮೇಲೆ, ಎಡಗೈ ಕೆಳಗೆ ನಿಲ್ಲಬೇಕು. ಇದು ಜೋಡಾಟದಲ್ಲಿ ಎರಡು ಮೇಳಗಳಿಗೆ, ಏಕಕಾಲದಲ್ಲಿ ವೀಳ್ಯ ಕೊಡುವ ಕ್ರಮ. ಎರಡೂ ಮೇಳಗಳಿಗೆ, ಒಂದೇ ಸಲ ಬಲಗೈಯಲ್ಲಿ ಕೊಟ್ಟಂತೆ ಆಗಬೇಕು. ಯಾವ ಮೇಳಕ್ಕೂ (ದೇವರಿಗೂ) ಅವಮಾನವಾಗಬಾರದು. ಕತ್ತರಿ ವೀಳ್ಯ ಕೊಟ್ಟರೆ, ಎರಡೂ ಮೇಳಕ್ಕೆ ಬಲಗೈಯಲ್ಲಿ ಕೊಟ್ಟಂತಾಗುತ್ತದೆ. ಎಡಕೈ ಬಲದ ಸ್ಥಾನದಲ್ಲಿ ಬಂದು ಬಲಗೈ ಆಗುತ್ತದೆ. ಬಲಗೈ ಹೇಗೂ ಬಲಗೈಯೇ. ಇಬ್ಬರಿಗೂ ಸಮಾನ ಮರ್ಯಾದೆ ಎಂದು ತಾತ್ಪರ್ಯ.

ಕತ್ತರಿ ವೀಳ್ಯ ಪಡೆಯುವಾಗ, ಮೇಳದ ಕಡೆಯಿಂದ ಹಾಸ್ಯಗಾರ, ಸ್ತ್ರೀ ವೇಷದವರು ಎರಡೂ ಕಡೆ ಬಂದು ತೆಗೆದುಕೊಳ್ಳಬೇಕು. ಆಟವು ಬೇಗ ಮುಗಿದು, ಮೊದಲು ವೀಳ್ಯ ಪಡೆಯುವುದೂ ಸ್ಪರ್ಧೆಯೇ, ಹಾಗಾಗಿ ಓಡೋಡಿ ಬಂದು ಪಡೆಯುತ್ತಾರೆ, ಅಥವಾ ಎಳೆದುಕೊಳ್ಳುತ್ತಾರೆ. ಇದರಲ್ಲೂ ಕೆಲವೊಮ್ಮೆ ಚಿಕ್ಕ ಜಗಳವಾಗುತ್ತಿದ್ದಿತು.

ಕತ್ತಾಳೆ/ಕತ್ತಾಳೆ ನಾರು: ಕಳ್ಳಿ ಜಾತಿಯ ಒಂದು ಗಿಡ. (Agave americana) ಇದರ ಹಗ್ಗವು ಮೀಸೆಗೆ, ಕಿರೀಟದ ಕೇಸರಿಗೆ ಬಳಕೆಯಾಗುತ್ತಿತ್ತು. ಇದರ ಹುರಿಯು ಆಭರಣಗಳ ಜೋಡಣೆ ಇತ್ಯಾದಿಗಳಿಗೆ ಬಳಕೆ.

ಕತ್ತಿ: ಮರದಿಂದ ತಯಾರಿಸಿದ, ಬಿಳಿ ಅಥವಾ ಹಳದಿ ಬಣ್ಣ ಹಚ್ಚಿದ ಖಡ್ಗ. ಈಗ ಲೋಹದ್ದನ್ನೂ ಬಳಸುತ್ತಾರೆ.

ಕತ್ತಿಪಡೆ (ಬ.): 1. ಯುದ್ಧದ ಕುಣಿತಗಳಲ್ಲೊಂದು. ವಿಶಿಷ್ಟ ಚಲನೆಗಳೊಂದಿಗೆ ನಡೆಯುವ ಕತ್ತಿ ಕಾಳಗ.
2. ಬಾಣ ಯುದ್ಧ, ಬಿಲ್ಲಿನ ಯುದ್ಧ, ಗದೆಯ ಯುದ್ಧ, ಕತ್ತಿ ಯುದ್ಧ, ಮಲ್ಲ ಯುದ್ಧ– ಇವೆಲ್ಲ ಸೇರಿ ಕತ್ತಿ ಪಡೆ. ವಿಶೇಷತಃ ಪುಂಡು ವೇಷಗಳಿಗೆ ಇರುವಂತಹದು.

ಕತ್ತಿ ಬಣ್ಣ (ತೆ.): ಬಣ್ಣದ ವೇಷಗಳಲ್ಲಿ, ಹಣೆಯ ಮೇಲಿನ ವರ್ಣಿಕೆಗಳಿಗನುಸರಿಸಿ, ಒಂದು ವಿಭಾಗ. ಈ ವೇಷಕ್ಕೆ ಹಣೆಯ ಮೇಲೆ ಎಡಬಲಗಳಲ್ಲಿ ಕತ್ತಿಯಾಕಾರದ ಗೆರೆಗಳಿರುತ್ತವೆ.

ಕತ್ರಿ ಎದೆಹಾರ (ಬ.): ಸುಮಾರಾಗಿ ನಾಲ್ಕು ಎಸಳಿನ ಹೂವನ್ನು ಹೋಲುವ, ಕತ್ತರಿ ಆಕಾರದ ಎದೆಹಾರ ಅಥವಾ ಎದೆಪದಕ. 'X' ಆಕಾರದ ಪದಕ. ಬಟ್ಟೆಯ ಮೆತ್ತೆ, ಕೆಂಪು ಅರಿವೆಯ ಮೇಲ್ಮೈಗೆ ಹಳದಿ ಬೇಗಡೆ ಹೊದಿಕೆಯ, ಮರದ ಹಲ್ಲೆ, ಕಡ್ಡಿ, ಮಣಿಗಳನ್ನು ಜೋಡಿಸಿ ಮಾಡಿದ ಕವಚ. ಇದು ಸುಮಾರು 1920ರ ಅನಂತರ ಬಳಕೆಗೆ ಬಂತೆಂದೂ, ಮೊದಲು ಎಲ್ಲ ತಿಟ್ಟುಗಳಲ್ಲೂ ಉರುಟು ಎದೆಹಾರ ಬಳಕೆಯಿತ್ತೆಂದೂ ಅಭಿಪ್ರಾಯವಿದೆ. ಉ. ಕನ್ನಡ

ತಿಟ್ಟಿನಲ್ಲಿ ಇತ್ತೀಚೆಗೆ ಕತ್ರಿ ಎದೆಹಾರವೂ ಬಳಕೆಯಿದೆ. ತೆಂಕುತಿಟ್ಟಿನಲ್ಲಿ ಹಿಂದೆ ಇದ್ದುದೂ ಈಗ ಇರುವುದೂ ಉರುಟು ಅಥವಾ ಉದ್ದ ಎದೆಹಾರಗಳೇ.

ಕತ್ರಿಕಾಲು : ಕುಣಿತದ ಒಂದು ಪ್ರಕಾರ ಮತ್ತು ಭಂಗಿ. ಕಾಲುಗಳನ್ನು ಆಚೀಚೆ ಇಡುತ್ತ ಹಾರುತ್ತ ಕತ್ತರಿ ಆಕಾರ ಬರುವಂತೆ ಕುಣಿಯುವುದು. ಇದನ್ನು ನಿಂತಲ್ಲೆ ಕುಣಿಯುವುದಕ್ಕೂ, ಕುಣಿಯುತ್ತ ಸುತ್ತು ಬರುವುದಕ್ಕೂ ಬಳಸುವರು. ಹಾಸ್ಯ, ಉಲ್ಲಾಸ, ಶೃಂಗಾರ, ಸಂತೋಷ ಭಾವಗಳಿಗೆ ಬಳಕೆ. ಉರುಟು ಕಿರೀಟದ ವೇಷ (ರಾಜವೇಷ), ಬಣ್ಣದ ವೇಷಗಳು ಕತ್ತರಿಕಾಲು ಕುಣಿಯುವುದು ಪ್ರಶಸ್ತವಲ್ಲ ಎಂದು ಸಂಪ್ರದಾಯ. ಮುಖ್ಯವಾಗಿ ಹಾಸ್ಯಪಾತ್ರಗಳೂ, ಪುಂಡುವೇಷಗಳೂ ಇದನ್ನು ಬಳಸುತ್ತವೆ.

ಕತ್ರಿ ಕುಣಿತ : 1. ಮೇಲೆ ಹೇಳಿದ ಕತ್ತರಿಕಾಲು ಕುಣಿತ.
2. ಯುದ್ಧದ ನರ್ತನದಲ್ಲಿ ವೇಷಗಳು ಎದುರು ಬದುರಾಗಿ ಕುಣಿಯುತ್ತ, ಒಂದು ಇನ್ನೊಂದರ ಕುಣಿತದ ರೇಖೆಗಳನ್ನು ಕತ್ತರಿಸುತ್ತ '8' ಆಕಾರ ಬರುವಂತೆ ಕುಣಿಯುವುದು.

ಕತ್ರಿ ಬಣ್ಣ (ತೆ.) : ಬಣ್ಣದ ವೇಷಗಳ ಪ್ರಕಾರಗಳಲ್ಲಿ ಒಂದು ಬಗೆಯ ವಿಭಾಗ. ಹಣೆಯಲ್ಲಿ ಕತ್ತರಿಯಾಕಾರದ ಗೆರೆಗಳಿರುತ್ತವೆ. ನೋಡಿ : **ಏಣಿ ಬಣ್ಣ, ಕತ್ತಿ ಬಣ್ಣ, ಸುಳಿ ಬಣ್ಣ, ಚೇಳು ಬಣ್ಣ.**

ಕತ್ರಿ ವೀಳ್ಯ = ನೋಡಿ : ಕತ್ತರಿ ವೀಳ್ಯ.

ಕತ್ರಿ ಹಜ್ಜೆ/ಕತ್ತರಿ ಹಜ್ಜೆ = ನೋಡಿ, ಕತ್ರಿ ಕಾಲು; ಕತ್ರಿ ಕುಣಿತ.

ಕತ್ರಿಸರ: ಎಡ ಹೆಗಲಿಂದ ಬಲಸೊಂಟಕ್ಕೆ, ಬಲ ಹೆಗಲಿಂದ ಎಡ ಸೊಂಟಕ್ಕೆ ಕಟ್ಟುವ ಗುಂಡು ಸರಗಳ ಅಥವಾ ಜರಿಪಟ್ಟಿಯ ವಿನ್ಯಾಸ. ವೀರಸ್ತ್ರೀ ಪಾತ್ರ– ಕಸೆ ಸ್ತ್ರೀವೇಷಗಳಿಗೆ (ಪ್ರಮೀಳೆಯಂತಹವು) ತೆಂಕುತಿಟ್ಟಿನ ಪೀಠಿಕೆ ಸ್ತ್ರೀವೇಷಗಳಿಗೆ ಈ ರೀತಿ ತೊಡುಗೆಯ ಕ್ರಮವಿದೆ. ಕಿರಾತನಿಗೆ ಮಾವಿನ ಸೊಪ್ಪಿನ ಕತ್ರಿಮಾಲೆ ಹಾಕುವುದುಂಟು. ನೋಡಿ: **ಕಸೆಸ್ತ್ರೀವೇಷ, ಸೊಪ್ಪಿನಮಾಲೆ.**

ಕತ್ರಿಸೋಗೋಲಿ/ಸೋಗೋಲಿ ಕತ್ರಿ : 1. ವೇಷವು ಹೆಗಲಿನ ಸೋಗೆವಲ್ಲಿ (ಹೆಗಲವಲ್ಲಿ)ಯನ್ನು ನೇರ ಇಳಿಬಿಡುವ ಬದಲು ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಇಳಿಸಿ ಕತ್ತರಿಯಾಕಾರ ನಿರ್ಮಿಸಿ, ಗಂಟು ಹಾಕುವುದು. ಆಗ ಆ ಗಂಟುಗಳು ಸೊಂಟದ ಬದಿಗೆ ನಿಲ್ಲುತ್ತವೆ. ಋಷಿ, ವೀರಸ್ತ್ರೀ ವೇಷಗಳಲ್ಲಿ ಬಳಕೆ. (ತೆ.) 2. ಕೆಲವೊಂದು ಸನ್ನಿವೇಶಗಳಲ್ಲಿ, ವಿಶೇಷತಃ ನಿರ್ಣಾಯಕ ಯುದ್ಧ ದೃಶ್ಯದಲ್ಲಿ, ವೇಷವು ಹೆಗಲ ವಲ್ಲಿಯ ತುದಿಗಳನ್ನು ಅದಲು ಬದಲು ಜೋಡಿಸಿ ಗಂಟು ಹಾಕುವುದು. ಉದಾ : ಗದಾಯುದ್ಧದ ದುರ್ಯೋಧನ, ಕರ್ಣ ಪರ್ವದ ಕರ್ಣ.

ಕಥಾನುಭವ : 1. ಪ್ರಸಂಗಗಳ ಕಥೆಗಳ, ಪುರಾಣಗಳ ಬಗೆಗಿನ ಮಾಹಿತಿ.
2. ಭಾಗವತನು ಅಥವಾ ಹಿರಿಯ ವೇಷಧಾರಿಯು ಇತರರಿಗೆ ನೀಡುವ ಕಥೆಯ ತಿಳಿವಳಿಕೆ, ನಡೆ.

ಕಥಾನುಭೋಗ = ನೋಡಿ : ಕಥಾನುಭವ.

ಕಥಾನುಸಾರ : 1. ಆಟದ ಪ್ರಸಂಗದ ಪ್ರದರ್ಶನ ಆರಂಭಕ್ಕೆ ಮೊದಲು, ಅಂದರೆ ಮೊದಲ ಒಡ್ಡೋಲಗಕ್ಕೆ ಮುಂಚೆ, ಭಾಗವತನು ಪ್ರಸಂಗದ ಹಿನ್ನೆಲೆಯನ್ನು, ಪೂರ್ವ ಕಥೆಯನ್ನು ವಚನವಾಗಿ ಹೇಳುವುದು. ಪೂರ್ವ ಕಥಾಸಾರ. ಇದನ್ನು ಸ್ವಲ್ಪ ರಾಗವಾಗಿ, ಪದ್ಯಗಂಧಿಯಲ್ಲಿ ಹೇಳಬೇಕಾದುದು.

ಆಟದ ಮಧ್ಯೆ, ಪ್ರದರ್ಶಿಸದೆ ಬಿಟ್ಟ ಕಥೆಯನ್ನು ಸಹ ಭಾಗವತರು ಹೇಳುವ ಕ್ರಮ ಕೆಲವು ಕಡೆ ಇದ್ದಿತು.

2. ಪ್ರಸಂಗದ ಕಥೆಗಿಂತ ಮೊದಲು, ಪ್ರಸಂಗದಲ್ಲೆ ಬರುವ ಕೆಲವು ಹಾಡುಗಳು. ಇವು ಪುರಾಣದ ಕಥನ ಪರಂಪರೆಗೂ, ಕಥೆಯ ಹಿನ್ನೆಲೆಗೂ ಸಂಬಂಧಿಸಿರುತ್ತವೆ. ಉದಾ :

ಜನಪ ಜನಮೇಜಯಗೆ ತೋಷದಿ।
ಮುನಿಪ ವೈಶಂಪಾಯ ಭಾರತ।
ಘನ ಕಥಾ ಸಾರವನು ಪೇಳ್ತಿರೆ।
ವಿನಯದಿಂದ ॥೧॥
ಋಷಿ ತಿಲಕಗೆಂದನು ಧರಾಧಿಪ।
ಅಸಮಬಲ ಪಾಂಡವರು ತಮ್ಮಯ।
ಪೆಸರನಡಗಿಸಿ ಗುಪಿತ ವಾಸದೊ। ಳೆಸೆದರೆಂತು ॥೨॥ ...

(ವಿರಾಟಪರ್ವ) ಇತ್ಯಾದಿ

ಹಿಂದೆ, ಈ ಬಗೆಯ ಪದ್ಯಗಳನ್ನು ಹೇಳಿ, ಅನಂತರ ವೇಷಗಳ ಪ್ರವೇಶವಾಗಬೇಕೆಂಬ ಕ್ರಮವಿತ್ತು. ಈಗ ಈ ಕ್ರಮವಿಲ್ಲ.

3. ಪ್ರಸಂಗದ ಮಧ್ಯೆ ಕಥೆಯನ್ನು ಬಿಟ್ಟು ಮುಂದೆ ಹೋಗುವುದಿದ್ದರೆ, (ಕಥೆ ಹಾರಿಸುವುದು ಎಂದು ಇದಕ್ಕೆ ಹೆಸರು) ಬಿಟ್ಟ ಕಥೆಯನ್ನು ಭಾಗವತನು ಪದ್ಯರೂಪದಲ್ಲಿ ಸಂಕ್ಷೇಪಿಸಿ ಹಾಡಿ, ಮುಂದುವರಿಯುವುದು. ಇದಕ್ಕೆ ಭಾಗವತನು ಸ್ವಂತ, ಅಲ್ಲೆ, ರಚಿಸಿದ ಪದ್ಯವನ್ನು ಹೇಳಬಹುದು. ಅಥವಾ ಅನ್ಯಮೂಲಗಳಿಂದ ತೆಗೆದುಕೊಂಡ ಪದ್ಯವನ್ನು ಹಾಡಬಹುದು.

ಈ ಪದ್ಧತಿಯೂ ಈಗ ಬಳಕೆಯಲ್ಲಿ ಇಲ್ಲ.

ಕಥಾರಂಭ : ಪೂರ್ವರಂಗ ವಿಧಿ, 'ಕಥಾನುಸಾರ'ಗಳು ಮುಗಿದು, ಪ್ರಸಂಗ ಅರ್ಥಾತ್ ಕಥಾ ಪ್ರದರ್ಶನದ ಪ್ರಾರಂಭ.

ಕನ್ನಡಿ : 1. ವೇಷಧಾರಿಗಳು ಬಣ್ಣ ಬಳಿಯುವಾಗ ನೋಡಲು ಬಳಸುವ ಕನ್ನಡಿ.
2. ಅಭಿನಯ ಮೂಲಕ (ಮೈಮ್) ತೋರಿಸುವ ಕನ್ನಡಿ. ಉದಾ: ಬಣ್ಣದ ವೇಷವು ಹಸ್ತವನ್ನೆ ಕನ್ನಡಿಯಾಗಿ ಹಿಡಿದುಕೊಂಡು, ಅದನ್ನು ಒರೆಸಿದಂತೆ ಮಾಡಿ, ಮುಖ ನೋಡುವುದು.

ಕನ್ನಡಿ ಸರ : ಕನ್ನಡಿ ಚೂರುಗಳನ್ನು ಮರದ ಹಲ್ಲೆಗಳಿಗೆ ಕೂರಿಸಿ, ಮಾಡಿದ ಅಡ್ಡಿಗೆ, ಅಥವಾ ಸರ.

ಕನ್ನಡಿ ಹರಳು : ಆಭರಣಗಳ ಅಲಂಕರಣಕ್ಕಾಗಿ, ಬಳಸುವ ವಿವಿಧ ಆಕಾರದ ಗಾಜಿನ ತುಂಡುಗಳು, ಹರಳುಗಳು. ಇವುಗಳನ್ನು ಆಭರಣಕ್ಕೆ ಬೇಕಾದಂತೆ ಅಳವಡಿಸುವುದಕ್ಕೆ ಕನ್ನಡಿ ಕೂರಿಸುವುದು ಎನ್ನುತ್ತಾರೆ. ಮರದಿಂದ ನಿರ್ಮಿತವಾಗುವ ಆಭರಣಗಳಿಗೆ ಕನ್ನಡಿ ಹರಳುಗಳು ಒಂದು ಮುಖ್ಯ ಸಾಮಗ್ರಿ.

ಕನ್ನಪಡಿ = ನೋಡಿ. ಕನ್ನಪ್ಪಟಿ ಮರ.

ಕನ್ನಪ್ಪಟಿ ಮರ/ಕನ್ನಪಡಿ : ಕಿರೀಟ, ಆಭರಣಾದಿಗಳನ್ನು ತಯಾರಿಸಲು ಬಳಸುವ, ಮೆತ್ತಗಿನ, ಹಗುರ ಜಾತಿಯ ಒಂದು ಮರ. (Sapium insigne)

ಕಪಾಲ (ಬ.) : ಮದ್ದಲೆಯ ಒಂದು ನುಡಿತ, ಪೆಟ್ಟು. ಅಂಗೈ ಅಂಚು, ಕಿರುಬೆರಳು, ಉಂಗುರ ಬೆರಳು (ಭಾಗಶಃ) ಬಳಸಿ ಹೊಡೆಯುವ ಓರೆಚಾಪು. ಕರ್ಣದ ಹೊರಬದಿಗೆ ಈ ಪೆಟ್ಟು ಬೀಳುತ್ತದೆ.

ಕಪಿ (ಬ.) : 1. ಚಂಡೆ, ಮದ್ದಲೆಗಳ ಬಾರಗಳನ್ನು ಬೇಕಾದಂತೆ ಬಿಗಿಯಲು ಬಳಸುವ ಚರ್ಮದ ಅಥವಾ ಲೋಹದ ಬಳೆ.
2. ಮದ್ದಲೆಯನ್ನು ಸೊಂಟಕ್ಕೆ ಬಟ್ಟೆಯ ಪಟ್ಟಿಯಿಂದ ಕಟ್ಟಿಕೊಳ್ಳಲು ಅನುಕೂಲವಾಗುವಂತೆ, ಮದ್ದಲೆಗೆ ಎರಡೂ ಬದಿಗಳಲ್ಲಿ ಕಟ್ಟಿರುವ ಚರ್ಮದ ಅಥವಾ ಲೋಹದ ಬಳೆ.

ಕಪ್ಪು : ಕಪ್ಪುಬಣ್ಣ, ಕರಿ, ಮಸಿ. ಹುಬ್ಬು, ತಿಲಕ, ನಾಮ, ಕೂದಲು, ರೆಪ್ಪೆ, ಗಡ್ಡ ಬರೆಯಲು ಮತ್ತು ಬಣ್ಣದ ವೇಷದ ಮೂಲ ರೇಖೆಗಳನ್ನೆಳೆಯಲು ಬಳಕೆಯಾಗುವ ಬಣ್ಣ.

ಕಪ್ಪುಮುಂಡಾಸು (ಬ./ಉ.) : ಕಪ್ಪು ಬಣ್ಣದ ಬಟ್ಟೆಯಿಂದ ಮುಚ್ಚಿದ ಮುಂಡಾಸು. ಮತ್ತು ಅದನ್ನು ಧರಿಸುವ ವೇಷ, ವೇಷಧಾರಿ ಕೂಡ. ಈ ಮುಂಡಾಸಿಗೆ ಕೇದಗೆ ಎಂಬ ಆಭರಣವನ್ನು ಧರಿಸುವ ಕ್ರಮವಿಲ್ಲ (ಬ.) ಕರ್ಣನ ಪಾತ್ರ ಕಪ್ಪುಮುಂಡಾಸಿನ ವೇಷದ ಪ್ರಸಿದ್ಧ ಉದಾಹರಣೆ.
ಕಪ್ಪುಮುಂಡಾಸು, ಕೆಂಪು ಮುಂಡಾಸು – ಇವು ಬಡಗುತಿಟ್ಟಿನ ಮೇಳಗಳಲ್ಲಿ ಎರಡು ಮಾಮೂಲು ವೇಷಗಳು, ಚೌಕಿಯಲ್ಲಿನ ಸ್ಥಾನಗಳು ಕೂಡ. ನೋಡಿ : ಕೆಂಪು ಮುಂಡಾಸು, ಸಾಲಿನ ವೇಷ.

ಕಬರು ಚುಟ್ಟಿ (ತೆ.) : ಬಣ್ಣದ ವೇಷದ ಮುಖದಲ್ಲಿ ಬರೆಯುವ ಚುಟ್ಟಿಗಳ ಒಂದು ಪ್ರಕಾರ. ಒಂದು ಮುಳ್ಳಿನ ಮೇಲೆ ಇನ್ನೊಂದನ್ನು ಇಟ್ಟು ಕಬರು (ಕವಲು ಕವಲಾಗಿ) ಕಾಣುವಂತೆ ಇಡುವ ಚುಟ್ಟಿ; ಕವಲು ಚುಟ್ಟಿ.

ಕಬೆ : ಕವೆ. ಮರದ ಕವಲುಗೂಟ 'Y' ಆಕಾರ.
1. ರಂಗಸ್ಥಳ, ಚಪ್ಪರಗಳಿಗೆ ಬಳಸುವ ಕವೆ.
2. ಯೋಗದಂಡ, ಋಷಿಯ ದಂಡ.

ಕಮಂಡಲ : ಹಿಡಿ ಮತ್ತು (ಸೊಂಡಿಲಿನಂತಹ) ಕೊಂಬು ಇರುವ, ತಾಮ್ರದ ಚಿಕ್ಕಪಾತ್ರೆ. ಋಷಿ ವೇಷಗಳಿಗೆ. ಪ್ರಾಯಃ ಇದು ಈಚೆಗೆ ಬಳಕೆಗೆ ಬಂದುದು.

ಕಮಲ : 1. (ಬ.) ಕಿರೀಟ, ಪಗಡಿ, ಮುಂಡಾಸುಗಳ ಮಧ್ಯಕ್ಕೆ ಬರುವ ಚಕ್ರಾಕಾರದ ಪದಕ, ಬಿಲ್ಲೆ. ಮರಕ್ಕೆ ಹಳದಿ ಬೇಗಡೆ, ಕನ್ನಡಿ ಹರಳುಗಳ ಜೋಡಣೆ, ಹೂವು, ಕುಚ್ಚು, ತಾವರೆ – ಎಂದರೂ ಇದೇ.
2. (ತೆ.) ಯಮನ ವೇಷದ ಹಣೆಯಲ್ಲಿ ಬರೆಯುವ ಕಮಲ ಚಿಹ್ನೆ, ಕಮಲನಾಮ.

ಕಮಾನು : 1. ಬಣ್ಣದ ವೇಷದ ಕಿರೀಟದ ಒಳಗಿರುವ, ಕಮಾನಿನಾಕಾರದ ಬೆತ್ತ, ಬಿದಿರು ಅಥವಾ ಓಟೆಯ ಬಳೆ.
2. ಕೋಲು ಕಿರೀಟ (ರಾಜಕಿರೀಟದ) ಹಿಂಗಡೆ ಕಟ್ಟುವ ಗೋಪುರಾಕೃತಿ ಕಮಾನು.
3. (ತೆ.) ಬಣ್ಣದ ವೇಷದ ಹಣೆಯಲ್ಲಿ ಬರೆಯುವ ಒಂದು ಬಗೆಯ ನಾಮಗಳು. ಕಮಾನು ಬಣ್ಣ.
4. ರಂಗಸ್ಥಳದ ಮುಂಭಾಗಕ್ಕೆ ಕಟ್ಟುವ ತೋರಣ ಕಮಾನು.

ಕಮಾನು ಚುಟ್ಟಿ (ತೆ.): ಬಣ್ಣದ ವೇಷಕ್ಕೆ ಮುಖದಲ್ಲಿ ಬರೆಯುವ ಚಿಟ್ಟಿಯ ಒಂದು ಪ್ರಕಾರ. ಚಿಟ್ಟಿಯ ಮುಳ್ಳುಗಳು ಒಂದಕ್ಕೊಂದು ಸೇರುವಂತೆ ಜೋಡಿಸುವುದು. ಕಮಾನು ಚುಟ್ಟಿ, ಚಿಟ್ಟಿಕಮಾನು.

ಕರದೊಳು : ಗಣಪತಿ ಸ್ತುತಿ ಪದ್ಯದ ಕೊನೆಯ ಚರಣದ ಮೊದಲ ಪದ. ಕರದೊಳು ಪರಶು

ಪಾಶಾಂಕುಶ ಧರನಿಗೆ। ಹರುಷದಿ ಭಕ್ತರ ಪೊರೆವವಗೆ।। ಉರಗ ಭೂಷಣನ ಕುಮಾರ ಗಜವದನನ। ಚರಣ ಕಮಲಕಾರತಿಯೆತ್ತಿರೆ।। – ಎಂದು ಈ ಚರಣ. ಇದನ್ನು ತ್ವರಿತ ಅಷ್ಟತಾಳದಲ್ಲಿ ಹೇಳುವುದು ವಾಡಿಕೆ. ಇದನ್ನು ಆರಂಭದಲ್ಲಿ ಚೌಕಿಯಲ್ಲೂ, ಕೊನೆಯಲ್ಲಿ ರಂಗದಲ್ಲೂ ಹಾಡುತ್ತಾರೆ. ''ಕರದೊಳು ಆಯಿತು'' ಎಂದರೆ ಆಟ ಮುಗಿಯಿತೆಂದು ಅರ್ಥ. ''ಮುದದಿಂದ... ಕರದೊಳುವರೆಗೆ'' ಎಂದರೆ ಸಾದ್ಯಂತ ಎಂದರ್ಥ. ಕಾರಣ ''ಮುದದಿಂದ ನಿನ್ನ ಕೊಂಡಾಡುವೆನು'' ಎಂಬುದು ರಂಗದಲ್ಲಿ ಹಾಡುವ ಮೊದಲ ಪದ್ಯ. ಇದೊಂದು ಸಾಮಾಜಿಕ ವಾಗ್ರೂಢಿ ಕೂಡ. ನೋಡಿ : **ಮುದದಿಂದ.**

ಕರವಸ್ತ್ರ : ಪುರುಷಪಾತ್ರಗಳು, ಮುಖ್ಯವಾಗಿ ಪ್ರಧಾನ ವೇಷಗಳು, ಕೈಯಲ್ಲಿ ಹಿಡಿದುಕೊಳ್ಳುವ ವಸ್ತ್ರ. ಇದಕ್ಕೆ 'ಟುವಾಲ್' (ಟವೆಲ್) ಎಂದೂ ಹೆಸರಿದೆ.

ಕರೆದು ಹೇಳುವುದು : 1. ಬಯಲಾಟದ ಸಭೆಯಲ್ಲಿ, ಮುಂದಿನ ಬಯಲಾಟವನ್ನು ತಿಳಿಸುವ ಘೋಷಣೆ; ಪ್ರಕಟನೆ.

2. ದೌಲತ್ ಜ್ಯಾದಾ ಮಾಡಿಸುವುದು. ನೋಡಿ : **ದೌಲತ್ ಜ್ಯಾದಾ.**

ಕರೆಪೆಟ್ಟು : ಚಂಡೆ, ಮದ್ದಲೆಗಳ ಕರೆಗೆ ಬಡಿಯುವ ಪೆಟ್ಟು. ಅಂಚಿನ, ಬದಿಯ ನಾದ. ನಂ, ಟಂ ಸ್ವರ. ಮೀಟುಸ್ವರ. ಇದಕ್ಕೆ ವ್ಯತಿರಿಕ್ತವಾದುದು **ನಡುಪೆಟ್ಟು.**

ಕರ್ಣ = ನೋಡಿ : **ಕರ್ನ.**

ಕರ್ಣಪಾತ್ರ : ಕರ್ಣಪತ್ರ. ವೇಷಗಳ ಕಿವಿಯ ಮುಂದಿನಿಂದ ಕಟ್ಟುವ ಆಭರಣ, ಅತಿಕರಿಸಿದ ಕಿವಿ. ಇದು ಸಾಮಾನ್ಯವಾಗಿ S, B ಮತ್ತು E ಆಕಾರಗಳಲ್ಲಿರುತ್ತದೆ. ಇದಕ್ಕೆ ಕಪ್ಪುಬಣ್ಣದ ದಾರ ಅಥವಾ ಉಣ್ಣೆಯ ಅಂಚು ಅಥವಾ ಗೊಂಡೆ ಇರುತ್ತದೆ. ಬಣ್ಣದ ವೇಷಗಳ ಕರ್ಣಪಾತ್ರ (ಇದಕ್ಕೆ **ಪತ್ರ** ಅಥವಾ **ಓಲೆ** ಎಂದು ಹೆಸರು) ಉರುಟಾಗಿದ್ದು ದೊಡ್ಡ ಗಾತ್ರದ್ದಾಗಿರುತ್ತದೆ. ಇದರ ಹಗ್ಗವು ಗದ್ದದ ಅಡಿಯಲ್ಲಿ, ಕುತ್ತಿಗೆಯ ಮೇಲ್ಭಾಗದಲ್ಲೂ, ಗಂಟು ನೆತ್ತಿಯ ಮೇಲೆಯೂ ನಿಲ್ಲುತ್ತವೆ. ತೆಂಕುತಿಟ್ಟಿನಲ್ಲಿ, ಕರ್ಣಪಾತ್ರದ ಮೇಲ್ಭಾಗಕ್ಕೆ, ಕಿವಿಯ ಮೇಲ್ಗಡೆ ಕಪಾಳಕ್ಕೆ ತಾಗಿ, ಕೆನ್ನೆಪ್ಪೂ, ಚೆನ್ನೆಪ್ಪೂ ಎಂಬ ಎರಡು ಆಭರಣಗಳನ್ನು (ಈಗ ಎರಡು ಸೇರಿ ಒಂದೇ) ತುರುಕಿಸಿ ನಿಲ್ಲಿಸುತ್ತಾರೆ. ಕಿರೀಟ ಧರಿಸುವುದಾದರೆ ಈ ಕ್ರಮವಿದ್ದು, ಪಗಡಿಗಳು ಈಗ ಸಿದ್ಧ ಸಾಮಗ್ರಿ (ಕಿರೀಟದಂತೆ) ಇರುವುದರಿಂದ ಕರ್ಣಪಾತ್ರಗಳು ಅದರಲ್ಲೆ ಇರುತ್ತವೆ.

ಕರ್ಣಶಿಖಿಪಾತ್ರ (ತೆ.) : ಬಣ್ಣದ ವೇಷದ ಕರ್ಣಪತ್ರದ (ಓಲೆಯ) ಹಿಂಭಾಗದಲ್ಲಿ, ಕಟ್ಟುವ ಉರುಟು ಚಾಮರ, ಆಲವಟ್ಟ.

ಕರ್ನ(ರ್ಣ) : ಮದ್ದಲೆಯ ಮುಚ್ಚಿಗೆಯ ಜೀವಕವಳದ ಮಧ್ಯೆ ಇರುವ ಕಪ್ಪಾದ, ಉರುಟು ಪದರ, ಕರಣೆ, ಮದ್ದಲೆ ಶಾಯಿ.

ಈ ಕರ್ನವೆಂಬುದು ಕಬ್ಬಿಣದ ಕಿಟ್ಟ, ಅನ್ನ ಮತ್ತು ಗುಲಗುಂಜಿ ಅಂಟಿನ ಮಿಶ್ರಣವಾಗಿದೆ. ಕಬ್ಬಿಣದ ಪುರಾಣ ಕಿಟ್ಟವನ್ನು ನುಣ್ಣಗೆ ಅರೆದು, ಅದಕ್ಕೆ ಗುಲಗುಂಜಿ ಅಂಟು (ಗುಲಗುಂಜಿಕಾಯಿ ಅರೆದು ಮಾಡಿದ ಹುಡಿ) ಸೇರಿಸಿ ಒಣಗಿಸಬೇಕು. ಈ ಮಿಶ್ರಣವನ್ನು ಅರೆಬೆಂದ ಅಕ್ಕಿ ಅಥವಾ ತುಸು ನೆನಸಿದ ಅವಲಕ್ಕಿಗೆ 1 : 4 ರ ಪ್ರಮಾಣದಲ್ಲಿ ಸೇರಿಸಬೇಕು. (ಕಿಟ್ಟ 1, ಅಂಟು 4) ಈ ಮಿಶ್ರಣವನ್ನು ಜೀವಕವಳದ ಮಧ್ಯಕ್ಕೆ ಅಂಟಿಸಿ ನಿಧಾನವಾಗಿ ಸವರಿ ಕಲ್ಲಿನಿಂದ ಸರಿ ಹೊಂದಿಸಿ ಆಕಾರ ನೀಡಬೇಕು. ಒಂದು ಕರ್ನ ಕೂರಿಸಲು ನಾಲ್ಕರಿಂದ ಐದು ಗಂಟೆ ಸಮಯ ಬೇಕಾಗುತ್ತದೆ.

(ತೆ.) ಹಿಂದೆ ಮದ್ದಲೆಯ ಬಲದ ಭಾಗಕ್ಕೆ ಮಾತ್ರ ಕರ್ನವಿದ್ದು, ಎಡದ ಕವಳಕ್ಕೆ ಹಿಟ್ಟಿನ ಬೋನ ಇದ್ದಿತ್ತು. ಈಗ ಎಡಕ್ಕೂ ಕರ್ನ ಹಾಕುವರು.

ಕಲಶ (ಉ.) : ರಾಜಕಿರೀಟ, ತಟ್ಟಿ ಕಿರೀಟಗಳ ಮಧ್ಯಭಾಗದ ಕಲಶ ಆಕೃತಿ. ಕಿರೀಟದ ಬುರುಡೆ. ಕಲಶ ಮತ್ತು ಪಕ್ಕೆ ಸೇರಿ ಕಿರೀಟ.

ಕಲಾವಿದ : ಹಿಮ್ಮೇಳ, ಮುಮ್ಮೇಳಗಳಲ್ಲಿ ಭಾಗವಹಿಸುವವರಿಗೆ ಈಗಿನ ಚಾಲ್ತಿ ಹೆಸರು. ಹಿಂದಿನ ಹೆಸರು **ಆಟದವ.**

ಕಲ್ಲು : 1. ಆಭರಣಗಳಲ್ಲಿ ಪೋಣಿಸುವ ವಿವಿಧ ಆಕೃತಿಯ ಕಲ್ಲುಹರಳುಗಳು.

2. ಮದ್ದಲೆಯನ್ನು ಸುಲ್ತಾನ್ (ಶ್ರುತಾನ) ಮಾಡಲು ಬಳಸುವ ಗುಂಡುಕಲ್ಲು.

3. ಬಣ್ಣಗಳನ್ನು ಅರೆದು ತಯಾರಿಸಿಡುವ ನಯವಾದ ಕಲ್ಲುಚಪ್ಪಟೆ. ಉದಾ : ಇಂಗಲೀಕದ ಕಲ್ಲು.

ಕಲ್ಲು ಕುಟ್ಟಿ : ಕಲ್ಲು ಮತ್ತು ಕುಟ್ಟಿ. ಮದ್ದಲೆ ಶ್ರುತಿ ಮಾಡಲು ಬಳಸುವ ಸಾಧನದ್ವಯ. ಉರುಟು ಅಥವಾ ಆಯತ. ಉರುಟಾದ ಗಟ್ಟಿ ಕಲ್ಲು ಮತ್ತು ಸುಮಾರು ಎರಡರಿಂದ ಐದು ಇಂಚು ಉದ್ದದ ಕಲ್ಲಿನ ಅಥವಾ ಮರದ ಕುಟ್ಟಿ.

ಕವಳ : ಚೆಂಡೆ, ಮದ್ದಲೆಗಳ ಮುಚ್ಚಿಗೆ ಚರ್ಮಗಳು. ಇದರಲ್ಲಿ ಜೀವಕವಳ, ಒತ್ತುಕವಳ, ಕಟ್ಟುಕವಳ ಎಂದು ಮೂರು ಬಗೆ. (ನೋಡಿ). ಮದ್ದಲೆಗೆ ಸಾಮಾನ್ಯವಾಗಿ ಆರರಿಂದ ಎಂಟು ಕವಳಗಳು. ಚೆಂಡೆಗೆ ಎಂಟರಿಂದ ಹನ್ನೊಂದು ಕವಳಗಳು. ನೋಡಿ : **ಚರ್ಮ, ಮುಚ್ಚಿಗೆ.**

ಕವಿ : 1. ಪ್ರಸಂಗಕರ್ತೃ, ಪ್ರಸಂಗಗಳ ಕವಿ.
2. ಕವಿತೆ. ರಂಗಸ್ಥಳದಲ್ಲಿ ಭಾಗವತನು ಸಾಂದರ್ಭಿಕವಾಗಿ ರಚಿಸುವ ಆಶುಕವಿತೆ. ''ಕವಿ ಮಾಡುವುದು'' ಎಂದರೆ ಪದ್ಯರಚನೆ. ರಂಗದಲ್ಲೆ ಪದ್ಯ ಮಾಡಿಕೊಡುವುದೆಂದು ವಿಶೇಷಾರ್ಥ. ಉದಾ : ''ಅಲ್ಲಿ ಪದ್ಯ ಇರಲಿಲ್ಲ. ಭಾಗವತರು ಕವಿ ಮಾಡಿದರು.''

ಕವುತಕ = ನೋಡಿ : **ಕೌತುಕ.**

ಕವೆ/ಕವೆಗೂಟ: ಮರದ ಕತ್ತರಿಗೂಟ 'Y' ಆಕೃತಿ. ಹಿಂದೆ, ಮದ್ದಲೆಯನ್ನು ಎರಡು ಕವೆಗಳ ಮೇಲೆ ಇಟ್ಟು ಬಾರಿಸುವ ಕ್ರಮವಿತ್ತು.

ಕವೆಗೂಟ = ನೋಡಿ : **ಕವೆ.**

ಕಸುಬು : 1. ಯಕ್ಷಗಾನ ವ್ಯವಸಾಯ, ಆಟದ ಕಸುಬು.
2. ಜಾಣ್ಮೆ, ಪರಿಣತಿಯ ಕೆಲಸ. ಉದಾ: '' ಈ ಪದ್ಯಕ್ಕೆ ಆತ ಒಳ್ಳೆಯ ಕಸುಬು ತೋರಿಸಿದ.''
3. ವಿಶಿಷ್ಟ ಸಂದರ್ಭಕ್ಕೆ, ಪದ್ಯಕ್ಕೆ ಸಂಬಂಧಿಸಿದ ಕೆಲಸ, ಅಭಿನಯ. ಉದಾ : ''ಈ ಪದ್ಯಕ್ಕೆ ಏನು ಕಸುಬು ?'' ನೋಡಿ: **ಕೆಲಸ.**

ಕಸುಬುದಾರಿ : ವೃತ್ತಿಪರ ಕಲಾವಿದ. ತಜ್ಞ ಕಲಾವಿದ.

ಕಸೆ: 1. ಎರಡೂ ಕಾಲುಗಳನ್ನು ಮುಚ್ಚುವ ಕಚ್ಚೆ, ವೀರಕಚ್ಚೆ.
2. ಅಂಗಿಗೆ ಇರುವ, ಕಟ್ಟುವ ದಾರ ಅಥವಾ ದಾರದ ಗುಂಡಿ.

ಕಸೆ ಅಂಗಿ : 1. ನೂಲಿನ ಗುಂಡಿ ಅಥವಾ ಕಟ್ಟುವ ದಾರ ಇರುವ ತೆರೆದ ಅಂಗಿ.
2. ತೆರೆದ ಅಂಗಿ, ಓಪನ್ ಶರ್ಟ್, ದಗಲೆ.

ಕಸೆಗೆ ಏಳುವುದು: ವೇಷಧಾರಿಯು ಮುಖವರ್ಣಿಕೆಯ ಕೆಲಸ ಮುಗಿಸಿ ಕಸೆ ಹಾಕಲು ಏಳುವುದು. ''ನಾನಿನ್ನು ಕಸೆಗೆ ಏಳುತ್ತೇನೆ'' ಎಂದರೆ ಬಣ್ಣಗಾರಿಕೆ ಮುಗಿಯಿತೆಂದರ್ಥ.

ಕಸೆಡಾಲು (ಬ.) : ವಸ್ತ್ರದ ಮೆತ್ತೆಗೆ ಮಣಿಗಳನ್ನು ಹೊಲಿದು ತಯಾರಿಸಿದ ಪಟ್ಟಿಯಂತಹ ಆಭರಣ. ಕುತ್ತಿಗೆಯ ಮೇಲಿಂದ, ಮುಂದೆ ಎರಡೂ ಬದಿಗೆ ಶಲ್ಲೆಯಂತೆ ಇಳಿಬಿಟ್ಟು, ಮೊಣಕಾಲ ಮೇಲಿನವರೆಗೆ ನಿಲ್ಲುತ್ತದೆ. ತುದಿಗಳನ್ನು ಜೋಡಿಸುತ್ತಾರೆ.

ಕಸೆ ಲಾಡಿ : 1. ಕಚ್ಚೆಯು ಬಿಗಿಯಾಗಿ ನಿಲ್ಲಲು, ಕಚ್ಚೆಯ ಮೇಲಿಂದ ಸೊಂಟಕ್ಕೆ ಬಿಗಿಯುವ ಹಗ್ಗ.
2. ದಗಲೆಯನ್ನು ಕಟ್ಟಿಕೊಳ್ಳಲು, ಇರುವ ಹಗ್ಗಗಳು. ಸೀಳು ಅಂಗಿಯ, ಸೀಳುಗಳ ಅಂಚುಗಳಿಗೆ ಜೋಡಿಸಿರುವಂತಹ ಲಾಡಿ ಗಳು.

ಕಸೆ ವೇಷ : ವೀರಕಚ್ಚೆ ಹಾಕಿದ ಸ್ತ್ರೀವೇಷ. ಉದಾ : ಪ್ರಮೀಳೆ, ಮೀನಾಕ್ಷಿ. ತೆಂಕುತಿಟ್ಟಿನ ಪೀಠಿಕೆ ಸ್ತ್ರೀವೇಷಗಳು ಕಸೆ ವೇಷಗಳು. ಗಂಡು ಪಾತ್ರಗಳಿಗೆಲ್ಲ ಸಾಂಪ್ರದಾಯಿಕವಾಗಿ ಕಚ್ಚೆ ಇರುವುದರಿಂದ, ವಿಶಿಷ್ಟ ಸ್ತ್ರೀವೇಷಗಳಿಗೆ ಮಾತ್ರ ಈ ಹೆಸರು.

ಕಸೆ ಸೀರೆ : ವೇಷಗಳು ಕಚ್ಚೆಹಾಕಲು ಬಳಸುವ ಸೀರೆ, ಬಟ್ಟೆ. ತೆಂಕುತಿಟ್ಟು, ಉ. ಕನ್ನಡಗಳಲ್ಲಿ ಸಾಂಪ್ರದಾಯಿಕವಾಗಿ, ಇದು ಕಪ್ಪು, ಕೆಂಪು, ಹಸಿರು ಬಣ್ಣದ, ಜರಿ ಅಂಚಿನ ಸೀರೆ. ಬಡಗುತಿಟ್ಟಿನಲ್ಲಿ ಕಪ್ಪು, ಕೆಂಪು, ಚೌಕುಳಿ ಇರುವ ಹಳದಿ ಸೀರೆ. ಈಗ ಬಡಗುತಿಟ್ಟಿನಲ್ಲಿ ಚೌಕುಳಿ ಸೀರೆಗೆಯೆ ವಿಶಿಷ್ಟವಾಗಿ ಈ ಹೆಸರು ಇದೆ.

ಕಸೆ ಸ್ತ್ರೀವೇಷ: ವೀರಕಚ್ಚೆ ಹಾಕಿದ ಸ್ತ್ರೀವೇಷ. ನೋಡಿ : **ಕಸೆವೇಷ.**

ಕಳಸ (ಬ.) : ಕಿರೀಟ, ಪಗಡಿಗಳ ಮಧ್ಯೆ ಇರುವ ತಾವರೆಯ ಒಂದು ಪ್ರಕಾರಕ್ಕೆ ಇರುವ ತೊಟ್ಟಿನಾಕಾರದ ರಚನೆ. ನೋಡಿ: **ಕಳಸತಾವರೆ, ತಾವರೆ.**

ಕಳಸತಾವರೆ (ಬ.): ಮೇಲೆ ಹೇಳಿದ ತಾವರೆ, (ಕಮಲ, ಕುಚ್ಚು) ಅದಕ್ಕೆ ಸೇರಿಕೊಂಡು ಪ್ರಶ್ನಾರ್ಥಕ ಚಿಹ್ನೆಯಾಕಾರದ ತೊಟ್ಟು ಸೇರಿ ಕಳಸತಾವರೆ. ಚಕ್ರಾಕೃತಿಗೆ, ಶಂಖಾಕೃತಿ ಸೇರಿಸಿದಂತಿರುತ್ತದೆ.

ಕಳಸಿಗೆ : ಚೆಂಡೆ, ಮದ್ದಲೆಗಾಗಿ ಇರುವ, ಮರವನ್ನು ಕೊರೆದು ತಯಾರಿಸಿದ ಟೊಳ್ಳು. ಇಬ್ಬದಿ ತೆರೆದಿರುವ ಮರದ ಪಾತ್ರೆ. ಚೆಂಡೆ, ಮದ್ದಲೆ ಕುತ್ತಿ. ಕಕ್ಕೆ (ಕೊಂದೆ), ಖದಿರ, ಉಂಡೆ ಹುಳಿ, ತೆಂಗು, ಹೊನ್ನೆ, ಹಲಸು, ಹೆಬ್ಬಲಸು, ತಾಳೆ ಮರಗಳ ಕಳಸಿಗೆಗಳು ಪ್ರಶಸ್ತ.

ಕಳಾವರ್ (ತೆ.) : 'ಕ್ಲೋವರ್' ಆಕೃತಿಯ ನಾಮ. ತ್ರಿದಳಾಕೃತಿ. ಇಂದ್ರಜಿತುವಿನ ಹಣೆಯಲ್ಲಿ ಬರೆಯುತ್ತಾರೆ.

ಕಳಾವರತಟ್ಟಿ (ತೆ.) : ಬಣ್ಣದ ವೇಷದ ತಡ್ಪೆಕಿರೀಟ ಅಥವಾ ಬಟ್ಟಲು ಕಿರೀಟದ ಒಂದು ಪ್ರಕಾರ. 'ಕ್ಲೋವರ್' ಆಕಾರ, ತ್ರಿದಳಾಕೃತಿಯಲ್ಲಿರುತ್ತದೆ. ಎಡೆ ಬಣ್ಣದ ವೇಷಗಳಿಗೆ (ಉದಾ: ತ್ರಿಶಿರ) ಬಳಸುತ್ತಾರೆ.

ಕಳ್ಪು : ಮೇಳದ ಯಜಮಾನನು ವಿಧಿಸುವ ಸಂಬಳ ಕಡಿತ. ಹೆಚ್ಚುವರಿ ರಜೆ ಮಾಡಿದರೆ, ಅಥವಾ ಗಂಭೀರವಾದ ತಪ್ಪುಗಳನ್ನೆಸಗಿದರೆ ಕಳ್ಪು ವಿಧಿಸಲಾಗುತ್ತದೆ. ಅರ್ಧರಜೆ ಮಾಡಿದರೆ, **ಅರ್ಧಕಳ್ಪು** (ನೋಡಿ.) ತುಷ್ಟಿ ಕಳೆಯುವುದು ಎಂದರೂ ಇದೇ. ನೋಡಿ: **ತುಷ್ಟಿ, ಉಳಿ.**

ಕಳ್ಳ : ಪೂರ್ವರಂಗದ ಕಟ್ಟುಹಾಸ್ಯಗಳಲ್ಲೊಂದು. ಕಳ್ಳನ ಹಾಸ್ಯ. ಕಪ್ಪು ಉಡುಗೆ, ಕಣ್ಣಿಗೆ ಬಟ್ಟೆ ಅಥವಾ ಕಪ್ಪು ಪಟ್ಟಿ ಇರುತ್ತದೆ. ಕಳ್ಳನೊಂದಿಗೆ ಕಳ್ಳಿಯೂ ಇರುವುದುಂಟು.

ಕಳ್ಳಸ್ವರ : ಹಾಡು ಅಥವಾ ಮಾತಿನಲ್ಲಿ ಕೃತಕ ಸ್ವರ.

ಕಾಂಚೀಧಾಮ : ಪುರುಷವೇಷಗಳಿಗೆ, ಹೊಟ್ಟೆಯ ಕೆಳಗೆ ತೊಡೆಗಳ ಮಧ್ಯೆ ಇಳಿಬಿಡುವ ಆಭರಣ. ಇಳಿಗುಂಜಿ. ನೋಡಿ : **ವೀರಕಸೆ.**

ಕಾಕು : ಬೊಬ್ಬೆ, ಆರ್ಭಟೆ. ವಿಶೇಷತಃ ಉ. ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಬಳಕೆಯಿರುವ ಪದ. ನೋಡಿ : **ಅಟ್ಟಹಾಸ, ಆರ್ಭಟೆ.**

ಕಾಗೆ ಬಂಗಾರ : ಕಾಗೆ ಚಿನ್ನ, ಬಿಂಗ, ಅಭ್ರಕ. ಇದರ ಹುಡಿಯನ್ನು ಹೊಳಪಿಗಾಗಿ, ಮುಖಕ್ಕೆ ಹರಡಿದಂತೆ ಬಿತ್ತುವರು. ನಾಮ, ರೇಖೆಗಳಿಗೂ ಬಳಕೆಯಿದೆ.

ಕಾಟುಬಣ್ಣ (ತೆ.) : ಕ್ಷುದ್ರರಾಕ್ಷಸ ವೇಷ. ಕಾಟು (ಕಾಡು) ರಕ್ಕಸ. ರಾಜಬಣ್ಣ ಅಲ್ಲದಿರುವುದು. ಉದಾ : ಬಕಾಸುರ, ಕಿಮ್ಮೀರ, ಹಿಡಿಂಬಾಸುರ. ಈ ವೇಷದ ಚುಟ್ಟಿಗಳಲ್ಲಿ ನಾಲ್ಕಾರು ವಿಧಗಳಿವೆ. ಚುಟ್ಟಿಗಳ ಸಾಲುಗಳು ಹಣೆಯ ಮಧ್ಯೆ ಅಥವಾ ಮೂಗಿನ ಮೇಲೆ ಒಟ್ಟುಗೂಡುವುದು ಈ ವೇಷದ ವರ್ಣಿಕೆಯ ವಿಶೇಷತೆ. ಕಣ್ಣಿನ ಮೇಲಿಂದಲೂ ಚುಟ್ಟಿಗಳ ಸಾಲು ಬರಬಹುದು. ಹಣೆಯ ಇಕ್ಕಡೆ ಕಣ್ಣು ಬರೆಯುವುದೂ ಉಂಟು. ರಾಜಬಣ್ಣಗಳಿಗೆ ಇವೆಲ್ಲ ನಿಷಿದ್ಧ. ಕಾಟುಬಣ್ಣದ ಚುಟ್ಟಿಗಳಲ್ಲಿ ವೈವಿಧ್ಯಕ್ಕೆ ಹೆಚ್ಚು ಅವಕಾಶಗಳಿವೆ.

ಕಾಡಿಗೆ : ಬಣ್ಣಗಾರಿಕೆಗೆ ಬಳಸುವ ಕಪ್ಪು. ಎಣ್ಣೆಮಸಿ, ಎಳ್ಳೆಣ್ಣೆ ಅಥವಾ ಹೊನ್ನೆಣ್ಣೆಯ ದೀಪದ ಹೊಗೆಯ ಮಸಿ. ಈಗ ಮಾರುಕಟ್ಟೆ ಕಾಡಿಗೆಯೂ ಬಳಕೆ ಇದೆ.

ಕಾಡುಕೋಳಿ ರೆಕ್ಕೆ : ಕಿರಾತನ ಮುಂಡಾಸಿನ ಸುತ್ತ ಸಿಕ್ಕಿಸುತ್ತಾರೆ. ಹಾಸ್ಯಪಾತ್ರಗಳಿಗೂ ಬಳಕೆಯಿದೆ.

ಕಾಣಿಕೆ : ಮೇಳದ ದೇವರಿಗೆ ಆಟ ನೋಡಲು ಬಂದ ಭಾವುಕರು ಅರ್ಪಿಸುವ ಕಾಣಿಕೆ.

ಕಾಮಟೆ ಮುಳ್ಳು : ಕಾವಟೆ/ಕಾವಂಟೆ/ಗಾಮಟೆ ಮರದ, ಜುಮ್ಮದ **(Zanthoxylon rhesta)** – ಮುಳ್ಳು. ಈ ಮರದ ಮೈಗೆ ದಪ್ಪದ ಶಂಖಾಕೃತಿ ಮುಳ್ಳುಗಳಿರುತ್ತವೆ. ಅವನ್ನಾಗಲಿ, ಅಥವಾ ಮರದಿಂದ ಕೆತ್ತಿ ಮಾಡಿದ ಮುಳ್ಳುಗಳನ್ನಾಗಲಿ **ಭುಜಕೀರ್ತಿ – ಭುಜಮುಳ್ಳು** ಎಂಬ ಆಭರಣಕ್ಕೆ ಬಳಸುವರು.

ಕಾಯಿ : 1. ಆಭರಣಗಳಲ್ಲಿ ಬಳಸುವ, ನೈಸರ್ಗಿಕ (ಉದಾ: ಹೊನ್ನೆಕಾಯಿ) ಕಾಯಿಗಳು ಅಥವಾ ಮರದಿಂದ ಕೊರೆದು ಮಾಡಿದ ಉರುಟು ಕಾಯಿಗಳು. ಇದಕ್ಕೆ ಬೇಗಡೆ ಹಚ್ಚಿ ಪೋಣಿಸುವರು. ಈಗ ಆಧುನಿಕ ಕೃತಕ ಮಣಿ, ಬುರುಡೆಗಳೂ ಬಳಕೆಯಲ್ಲಿವೆ.

2. ಮೇಳದ ದೇವರ ಪೂಜೆಗೆ ಇರುವ ತೆಂಗಿನಕಾಯಿ.


ಕಾಯಿಸರ : 1. ಮರಗಳಲ್ಲಿ ಬೆಳೆಯುವ ಅಥವಾ ಮರದಿಂದ ಕೊರೆದು ಮಾಡಿದ, ವಿವಿಧ ಆಕಾರಗಳ ಕಾಯಿಗಳ ಸರ.

2. ವಿಶೇಷತಃ ಕೈಸರ, ಕಾಯಿಸರ. ಕೈಕಟ್ಟಿನ ಮೇಲ್ಭಾಗಕ್ಕೆ ಸಿಕ್ಕಿಸುತ್ತಾರೆ. ಇದು ಸುಮಾರಾಗಿ ನೆಲ್ಲಿಕಾಯಿ ಆಕೃತಿಯ ಕಾಯಿಗಳದ್ದಾಗಿರುತ್ತದೆ. ಸರದ ತುದಿಗೆ ಉಣ್ಣೆಯ ಗೊಂಡೆ ಇರುತ್ತದೆ. ಕೊರಳಹಾರಗಳಿಗೂ, ಮಾರುಮಾಲೆಗೂ ಹೊಂದಿಕೆಯಾಗಿ, ಕೈಯ ಚಲನೆಯೊಂದಿಗೆ ಆಡುತ್ತಿರುತ್ತದೆ. ನೋಡಿ : **ಕೈಸರ.**


ಕಾಲ : ನೋಡಿ : **ಕಾಲಭೇದ.**

ಕಾಲಕಡಗ/ಕಾಲ್ಕಡಗ : ಪುರುಷವೇಷಗಳಿಗೆ ಕಟ್ಟುವ ಕಾಲಿನ ಕಡಗ. ತೆಂಕುತಿಟ್ಟಿನಲ್ಲಿ ಇದು ಉರುಟಾಗಿದ್ದು ಸರಳಿನ ಬಳೆಯಾಕೃತಿಯದು. ಮರ, ಬೇಗಡೆಗಳ ನಿರ್ಮಾಣ, ಬಡಗು, ಉ.ಕ. ತಿಟ್ಟುಗಳಲ್ಲಿ ಬೂದು ಬಣ್ಣದ ಲೋಹ ನಿರ್ಮಿತವಾಗಿದ್ದು, ಒಳಗೆ ಬಗ್ಗಿದ ಚಪ್ಪಟೆ ಆಕಾರದ್ದಾಗಿರುತ್ತದೆ.


ಕಾಲುಗಳು




ಬಡಗು



ತೆಂಕು





ಕೆನ್ನೆಪ್ಪು ಚೆನ್ನೆಪ್ಪು




ಕುಂಕುಮಗಳು

ಕೈಕಟ್ಟು



(ಸ್ತ್ರೀ)

ಕೈಕಟ್ಟು



ಪುರುಷ

ಕೈಸರ



ಕಾಲಪಟ್ಟಿ = ನೋಡಿ : ಕಾಲುಪಟ್ಟಿ.

ಕಾಲಭೇದ/ಕಾಲವ್ಯತ್ಯಾಸ : 1. ತಾಳಗತಿಯ ವೇಗದ ಪ್ರಮಾಣ; ನಾಲ್ಕು ಎಂದು ರೂಢಿ. ಒಂದನೆಯ, ಎರಡನೆಯ, ಮೂರನೆಯ, ನಾಲ್ಕನೆಯ ಕಾಲ ಗಳು. ಇವು ಒಂದಕ್ಕಿಂತ ಒಂದು ಉತ್ತರೋತ್ತರ ವಾಗಿ ವೇಗತರ. ಆದರೆ, ಒಂದು ಇನ್ನೊಂದರ ಇಮ್ಮಡಿಯಲ್ಲ. ಆಟವು ಮುಂದುವರಿಯುತ್ತ ಹೋದಂತೆ, ಹಾಡು, ವಾದ್ಯ, ನೃತ್ಯಗಳ ಗತಿವೇಗ ಹೆಚ್ಚುತ್ತ ಹೋಗಬೇಕೆಂದು ಸಂಪ್ರದಾಯ.

ಕೆಲವು ಪದ್ಯಗಳ ರಚನೆಯಲ್ಲೆ ಕಾಲ ಭೇದ ಅಂತರ್ಗತವಾಗಿರುತ್ತವೆ.

2. ಒಂದು ಆಟದ ಅವಧಿಯ ಅಂದರೆ ಇಡಿಯ ರಾತ್ರಿಯ – ನಾಲ್ಕು ವಿಭಾಗಗಳು. ಸುಮಾರು ಮಧ್ಯರಾತ್ರಿ ತನಕ ಒಂದನೆಯ ಕಾಲ. ಎರಡೂವರೆ ಗಂಟೆ ವರೆಗೆ, ಎರಡನೆಯ ಕಾಲ. ನಾಲ್ಕೂವರೆ, ಐದು ಗಂಟೆತನಕ ಮೂರನೆಯ ಕಾಲ. ಅನಂತರ ನಾಲ್ಕನೆಯ ಕಾಲ. ಆಟವು ಒಂದು ಕಾಲದಿಂದ ಇನ್ನೊಂದಕ್ಕೆ ವೇಗವಾಗಿ ಸಾಗಬೇಕೆಂದು ಪದ್ಧತಿ.

ಈ ಕಾಲಭೇದವು ಮೇಲಿನ ತಾಳಗಳ ಕಾಲ ಭೇದಕ್ಕೆ ಸಂಬಂಧಿಯಾದರೂ, ಪೂರ್ಣ ಸಂವಾದಿ ಯಲ್ಲ. ಆಟದ ಮೂರನೆಯ, ನಾಲ್ಕನೆಯ ಕಾಲ (ಅವಧಿ)ಯಲ್ಲೂ ಕೆಲವು ಪದ್ಯಗಳು ನಿಧಾನ ವಾಗಿರುವುದುಂಟು. ಒಟ್ಟು ಕತೆಯ ವೇಗಕ್ಕೆ 'ಕಾಲ'ದ ಪರಿಕಲ್ಪನೆ ಇಲ್ಲಿ ಸಂಬಂಧಿಯಾಗಿದೆ.

3. ರಾಗಗಳಿಗೂ, 'ಕಾಲ'ದ ನಿಯಮ, ಸ್ಥೂಲವಾಗಿ ಇದೆ. ನಾಟಿ, ಭೈರವಿ, ಶ್ರೀರಾಗ, ಮಧ್ಯಮಾವತಿ ಕಾಂಬೋಧಿ, ಹಂಸಧ್ವನಿ ಮೊದಲಾದುವು ಒಂದನೆಯ, ಎರಡನೆಯ ಕಾಲಗಳಲ್ಲೂ, ಆರಭಿ, ಸಾವೇರಿ, ಮೋಹನ, ಭೂಪ, ರೇಗುಪ್ತಿ, ಮಧ್ಯಮಾವತಿಗಳು ಮೂರನೆಯ, ನಾಲ್ಕನೆಯ ಕಾಲಗಳಲ್ಲೂ ಬಳಸಲ್ಪಡ ಬೇಕು. ಸುರುಟಿ, ನವರೋಜು, ಮಾರವಿ, ಕೇದಾರ ಗೌಳ ಮುಂತಾದ ರಾಗಗಳಿಗೆ ಈ ನಿರ್ಬಂಧವಿಲ್ಲ. ಬಡಗುತಿಟ್ಟಿನಲ್ಲಿ ಮೋಹನ ರಾಗವನ್ನು ಮೊದಲ ಕಾಲದಲ್ಲೂ ಹಾಡುವುದುಂಟು.

ಕಾಲವ್ಯತ್ಯಾಸ = ನೋಡಿ : ಕಾಲಭೇದ.

ಕಾಲಹಗ್ಗ (ಬ.) : ಮೊಣಕಾಲಿನ ಕೆಳಗೆ, ಉಡುಗೆ ಸರಿಯಾಗಿ ಹೊಂದಿ ನಿಲ್ಲಲು ಕಟ್ಟುವ ಹಗ್ಗ.

ಕಾಲುಂಗುರ : ಸ್ತ್ರೀವೇಷಗಳು ಹಿಂದೆ ಧರಿಸುತ್ತಿದ್ದ ಕಾಲ ಬೆರಳಿನ ಉಂಗುರ.

ಕಾಲು ಗಗ್ಗರ : ಬಣ್ಣದ ವೇಷಗಳು ಹಿಂದಿನ ಕಾಲದಲ್ಲಿ, (ಪ್ರಾಯಃ ಸುಮಾರು 1925ರ ತನಕ) ಕಟ್ಟುತ್ತಿದ್ದ, ಶಬ್ದ ಮಾಡುವ ಕಾಲ ಬಳೆ. ಇದು ಲೋಹನಿರ್ಮಿತ. ಒಳಗೆ ಪೊಳ್ಳಾಗಿದ್ದು. ಕಾಯಿ ಅಥವಾ ಲೋಹದ ಗುಂಡುಗಳಿರುತ್ತಿದ್ದುವು. ಎರಡು ತುಂಡುಗಳಲ್ಲಿರುತ್ತಿದ್ದು, ಅವುಗಳನ್ನು ಜೋಡಿಸಿ ಕಾಲಿಗೆ ಕಟ್ಟಿದಾಗ, ದೋಣಿಯಾಕಾರ ದಲ್ಲಿ ನಿಲ್ಲುತ್ತಿತ್ತು. ಭೂತಗಳು ಕಟ್ಟುವ ಗಗ್ಗರಕ್ಕಿಂತ ಚಿಕ್ಕದು. ಬಹುಶಃ ಹಿಂದೆ, ಬಣ್ಣದ ವೇಷಗಳು ಗೆಜ್ಜೆ ಕಟ್ಟಿಕೊಳ್ಳುತ್ತಿರಲಿಲ್ಲ. ಅನಂತರ ಗಗ್ಗರ, ಗೆಜ್ಜೆ ಎರಡನ್ನೂ ಕಟ್ಟುತ್ತಿದ್ದರು. ಆ ಬಳಿಕ ಗಗ್ಗರವು ಲುಪ್ತವಾಗಿ, ಗೆಜ್ಜೆಯನ್ನು ಮಾತ್ರ ಕಟ್ಟುತ್ತಿದ್ದಾರೆ.

ಇದಕ್ಕೆ ಕೋಲು ಗಗ್ಗರವೆಂದೂ ಹೆಸರಿದೆ.

ಕಾಲುದೀಪ : ಅಡಿಯಲ್ಲಿ ಅಗಲವಾದ, ಉರುಟು ತಳ, ಅದರ ಮೇಲೆ ಕುಸುರಿಯ ಕಾಲು, ಅದರ ಮೇಲೆ ಪಂಚದೀಪ ಪಾತ್ರ, ಅದರ ತುದಿಗೆ ಶಿಖರ ಇರುವ ಠಾಣದೀವಿಗೆ. ಚೌಕಿಯಲ್ಲಿ ದೇವರ ಮುಂದೆ, ಬಣ್ಣಗಾರಿಕೆಗೆ ಬೆಳಕಿಗಾಗಿ, ಯಾ ರಂಗದಲ್ಲಿ ರಂಗಸ್ಥಳದ ಮುಂಭಾಗದಲ್ಲಿ ಇಡಲು ಬಳಕೆ. ಈಗ ರಂಗಸ್ಥಳದಲ್ಲಿ ಇರಿಸುವುದಿಲ್ಲ.

ಕಾಲುಚೆಂಡು/ಕಾಲ್ಚೆಂಡು (ತೆ.) : ಪುಂಡುವೇಷ, ಕಟ್ಟು ವೇಷ (ಕಿರೀಟವೇಷಗಳ) ಕಾಲಿಗೆ ಕಟ್ಟುವ ಬಟ್ಟೆಯ ಮೆತ್ತೆಯ ಬಳೆ. ಗೆಜ್ಜೆಯ ಮೇಲಿನಿಂದ ಒಂದರ ಮೇಲೊಂದು ಮೂರು ಕಾಲ್ಚೆಂಡುಗಳನ್ನು ಕಟ್ಟುತ್ತಿದ್ದರು. ಗೆಜ್ಜೆಗೆ ತಾಗಿ ಕೆಂಪು ಬಣ್ಣದ್ದು, ಅದರ ಮೇಲೆ ಕಪ್ಪು, ಪುನಃ ಕೆಂಪು ಹೀಗೆ ಅನುಕ್ರಮ. ಇವುಗಳ ಮೇಲೆ ಕಾಲುಮುಳ್ಳು ಬರುತ್ತದೆ. ಅದರ ಮೇಲೆ ಕಡಗವಿರುತ್ತದೆ. ಇವೆಲ್ಲ ಸೇರಿ ಕಾಲಿಗೆ ಸಪ್ರಮಾಣ ಆಕಾರ ಬರುವುದಲ್ಲದೆ, ವೇಷ ಭೂಷಣಗಳ ಜತೆ ಹೊಂದಾಣಿಕೆ ಯುಂಟಾಗುವುದು.

ಕಾಲುಮುಳ್ಳು/ಕಾಲ್ಮುಳ್ಳು (ತೆ.) : ಹೊರಮೈಗೆ ಶಂಕುವಿನಾಕೃತಿಯ ಮುಳ್ಳುಗಳು ಅಥವಾ ಕಮಾನುಗಳಿರುವ ಮರದ ಕಾಲು ಬಳೆ. ಕಾಲ್ಚೆಂಡುಗಳ ಮೇಲ್ಗಡೆ ಕಟ್ಟುವರು. ಇದು ಕಿರೀಟ, ಭುಜ ಮುಳ್ಳುಗಳಿಗೆ ಸಂವಾದಿಯಾಗಿರುವ ಆಭರಣ.

ಈ ಶತಮಾನದ ಆರಂಭದ ತನಕ, ಮೂರು ಕಾಲುಮುಳ್ಳುಗಳಿರುತ್ತಿದ್ದುವು. ಅನಂತರ ಒಂದು. ಈಗ ಕ್ವಚಿತ್ತಾಗಿ ಬಳಕೆಯಿದೆ.

ಕಾಲುಪಟ್ಟಿ/ಕಾಲಪಟ್ಟಿ (ಬ.) : 1. ಕಾಲಕಡಗ.
2. ಇತ್ತೀಚೆಗೆ ಬಳಕೆಗೆ ಬಂದಿರುವ ಕಾಲಿನ ಆಭರಣ. ಕಾಲಿನ ಗಂಟಿನಿಂದ ಮೊಣಕಾಲ ಕೆಳಗಿನವರೆಗೆ,

ಕಾಲನ್ನು ಆವರಿಸಿನಿಲ್ಲುವ ಬಟ್ಟೆ, ಜರಿಮಣೆಗಳಿಂದ ಮಾಡಿದ ಪಟ್ಟಿಕೆ. ಕಂಪೆನಿ ನಾಟಕಗಳ ವೇಷ ಪದ್ಧತಿಯಿಂದ ಬಂದುದು.

ಕಾಲ್ಕಡಗ = ನೋಡಿ : ಕಾಲಕಡಗ.

ಕಾಲ್ಗೆಜ್ಜೆ = ನೋಡಿ : ಗೆಜ್ಜೆ.

ಕಾಲ್ಚೆಂಡು = ನೋಡಿ : ಕಾಲುಚೆಂಡು.

ಕಾಲ್ಮುಳ್ಳು = ನೋಡಿ : ಕಾಲುಮುಳ್ಳು.

ಕಿಟ್ಟ/ಗಿಟ್ಟ : ಕಬ್ಬಿಣದ ಹುಡಿ, ತುಕ್ಕು. ಮದ್ದಲೆಗಳಿಗೆ ಕರ್ನ ಹಾಕಲು ಇದನ್ನು ಬಳಸುವರು. ಹಳೆಯ ಕಿಟ್ಟದ ಗಟ್ಟಿಗಳಿಗೆ ಪುರಾಣಕಿಟ್ಟ ಎನ್ನುವರು.

ಕಿರಗಣೆ (ಉ. / ಬ.) : 1. ತೆಂಕುತಿಟ್ಟಿನ ಬಾಲಮುಂಡುವಿಗೆ ಉತ್ತರ ಕನ್ನಡದ, ಬಡಗುತಿಟ್ಟುಗಳಲ್ಲಿರುವ ಹೆಸರು. ಲಂಗ ಎಂದು ಸಾಮಾನ್ಯ ಅರ್ಥ.

2. (ಉ./ಬ.) ತಿಟ್ಟುಗಳಲ್ಲಿ ಕೆಲವು ವೇಷಗಳು ಇತ್ತೀಚೆಗೆ ಬಳಸುತ್ತಿರುವ ಚಿಕ್ಕ ಲಂಗ.

ಕಿರಣ : ಸ್ತ್ರೀವೇಷಗಳು ತೊಡುವ ಶಿರೋಭೂಷಣ ಎಲೆಯಾಕಾರದಲ್ಲಿದೆ. 'ಪಗಡಿ' ಗೆ ಸಂವಾದಿಯಾದ ರೂಪ. ಇದನ್ನು ಮುಡಿಯ ಭಾಗದಲ್ಲಿ ಸಿಕ್ಕಿಸುವರು. ಇದು ಸ್ತ್ರೀವೇಷಗಳನ್ನು ಪುರುಷ ಪಾತ್ರಗಳಿಗೆ ಸಂವಾದಿಯಾಗಿಸಲು, ಡಾ। ಶಿವರಾಮ ಕಾರಂತರು ಬಳಕೆಗೆ ತಂದ ರಚನೆ.

ಕಿರಾತ ಪಗಡಿ : ಕಿರಾತ ವೇಷವು ಧರಿಸುವ ಓರೆ ಪಗಡಿ. ನೋಡಿ: ಓರೆ ಪಗಡಿ, ಕೋರೆ ಪಗಡಿ.

ಕಿರಾತ ಪಡೆ : ಬೇಟೆಗಾಗಿ ಹೋಗುವ ಪಾತ್ರದೊಂದಿಗೆ ಬರುವ ಪಡೆ. ಇದಕ್ಕೆ ಮುದಿಯಪ್ಪಣ್ಣ ಎಂಬ ಪಾತ್ರವು (ಹಾಸ್ಯಗಾರ) ನೇತಾರ. ಮೇಳದ ಹುಡುಗರು ಇತರ ವೇಷಗಳು. ವೇಷಕ್ಕೆ ನಿಯಮವಿಲ್ಲ.

ಕಿರಾತನ ಒಡ್ಡೋಲಗ : ಕಿರಾತವೇಷವು ರಂಗಪ್ರವೇಶ ಮಾಡುವ ವಿಶಿಷ್ಟ ರೀತಿ. 'ಲ ಲ ಲ ಲ ಏ ಹಾ' ಎಂದು ಕಾಕು ಕೊಡುತ್ತ, ಹಿಂದೆ ಮುಂದೆ ಪಡೆಯವರು ಬೊಬ್ಬೆ ಹಾಕುತ್ತಿದ್ದಂತೆ ತೈತ। ತಕತ ಎಂಬ ಮಟ್ಟೆ ತಾಳದ ನಡೆಯಲ್ಲಿ ಕಿರಾತನ ಪ್ರವೇಶ. ರಂಗದಲ್ಲಿ ಅಥವಾ ರಂಗದ ಹಿಂದೆ ಹುಲ್ಲಿಗೆ ಬೆಂಕಿ ಹಾಕಿರುತ್ತಾರೆ. ಕಿರಾತನು ಒಬ್ಬನೆ ಪ್ರವೇಶಿಸಿ, ಪಡೆಯವರನ್ನು ಅನಂತರ ಕರೆಯುವ ಕ್ರಮವೂ ಇದೆ.

ಕಿರಿಸ್ತಾನ್/ಕಿರಿಸ್ತಾನ ಹಾಸ್ಯ : ಕ್ರಿಶ್ಚಿಯನ್ ಅಣಕ. ಪೂರ್ವರಂಗದ ಕಟ್ಟುಹಾಸ್ಯಗಳಲ್ಲೊಂದು. ಕೆಥೋಲಿಕ್ ಕೊಂಕಣಿ, ಕನ್ನಡ, ತುಳು ಬೆರೆಸಿ ಮಾತಾಡುವುದು.

ಕಿರೀಟ : 1. ಸಾಮಾನ್ಯಾರ್ಥದಲ್ಲಿ ಎಲ್ಲ ಶಿರೋಭೂಷಣಗಳು. ಪ್ರತ್ಯೇಕಿಸಿ ಹೇಳಲು ವಿಶೇಷಣ ಸಹಿತ ಹೇಳುವ ಕ್ರಮ. ಬಣ್ಣದ ವೇಷದ್ದು. ಬಟ್ಟಲು ಕಿರೀಟ ಅಥವಾ ತಡ್ಪೆಕಿರೀಟ, ರಾಜವೇಷದ್ದು ರಾಜಕಿರೀಟ ಅಥವಾ ಕೋಲು ಕಿರೀಟ ಅದೇ ರೀತಿ ಹೆಣ್ಣು ಬಣ್ಣದ ಕಿರೀಟ, ಭೀಮನ ಕಿರೀಟ, ಪಗಡಿ ಕಿರೀಟ ಇತ್ಯಾದಿ.

2. ಸ್ವಲ್ಪ ಸೀಮಿತ ಅರ್ಥದಲ್ಲಿ, ಪಗಡಿ, ಮುಂಡಾಸುಗಳನ್ನು ಬಿಟ್ಟು, ಉಳಿದ ಶಿರೋಭೂಷಣಗಳು ಮಾತ್ರ ಕಿರೀಟಗಳು. ಅಂದರೆ, ರಾಜಕಿರೀಟ ಮತ್ತು ಬಣ್ಣದ ವೇಷದ ಕಿರೀಟಗಳು.

3. ವಿಶಿಷ್ಟಾರ್ಥದಲ್ಲಿ ಕೋಲುಕಿರೀಟ, ರಾಜಕಿರೀಟ, ಉರುಟು ಕಿರೀಟ ಎಂದು ಕರೆಯಲ್ಪಡುವವು ಮಾತ್ರ ಕಿರೀಟ. ಇದು ತಂಬಿಗೆಯಾಕಾರದಲ್ಲಿದ್ದು ಅದಕ್ಕೆ ಬದಿಗಳಲ್ಲಿ 'S' ಆಕಾರದ ಪಕ್ಕೆಗಳಿವೆ.

ಕಿರೀಟಗಳನ್ನು ಮರದ ಕೆತ್ತನೆಗೆ ಹಳದಿ ಬೇಗಡೆ ಮಣಿ, ಕಲ್ಲುಗಳನ್ನು ಹಚ್ಚಿ ತಯಾರಿಸುತ್ತಿದ್ದರು. ಈಗ ಮಣಿಗಳ ಬಳಕೆ, ತೆಂಕುತಿಟ್ಟಿನಲ್ಲಿ ಹೆಚ್ಚಾಗಿದೆ. ಕಿರೀಟದ ಮೂಲ ಆಕಾರಗಳನ್ನು ಬೆತ್ತ, ಬಿದಿರು, ಓಟೆಗಳಿಂದಲೂ, ಥರ್ಮೋಕೋಲ್‌ನಿಂದಲೂ ತಯಾರಿಸುವರು.

ಯಕ್ಷಗಾನ ಕಿರೀಟಗಳ ಮಾತೃಕೆಗಳು ಸಾಕಷ್ಟು ಹಳೆಯವು. ನಮ್ಮ ಕಿರೀಟಗಳಿಗೂ ಆಂಧ್ರದ ಸಾಂಪ್ರದಾಯಿಕ ರಂಗಭೂಮಿಯ ಕಿರೀಟಗಳಿಗೂ ಸ್ಪಷ್ಟ ಸಾಮ್ಯವಿದೆ. ನಮ್ಮ ಬಟ್ಟಲು ಕಿರೀಟಗಳು, ಕೇರಳದ ಕಿರೀಟಗಳನ್ನು ತೀರ ಹೋಲುತ್ತವೆ.

ಕಿರೀಟ, ಆಭರಣಗಳ ಆಕೃತಿ ಈ ಶತಮಾನದ ಆರಂಭದವರೆಗೂ, ಮೂರೂ ತಿಟ್ಟುಗಳಲ್ಲಿ ಒಂದೇ ತೆರನಾಗಿತ್ತು ಎಂದು ಹಿರಿಯರ ಅನುಭವಗಳಿಂದಲೂ, ದೊರೆತಿರುವ ಕೆಲವು ಹಳೆಯ ಸಾಮಗ್ರಿಗಳಿಂದಲೂ ಕಂಡು ಬರುತ್ತದೆ.

– ಸದ್ಯ ಅರ್ವಾಚೀನ ಪೌರಾಣಿಕ ನಾಟಕಗಳ ಮತ್ತು 'ಜನಪ್ರಿಯ' ಕ್ಯಾಲೆಂಡರ್ ಚಿತ್ರಗಳ ಅನುಕರಣೆಯಿಂದ ಹಲವು ಬಗೆಯ 'ಟೊಪ್ಪಿ ಕಿರೀಟ' ಗಳೂ ರಂಗಕ್ಕೆ ಬಂದಿವೆ. 'ನಾಟಕ ಮಾದರಿ' ಮತ್ತು ಯಕ್ಷಗಾನ ಕಿರೀಟ ಮಾದರಿಗಳನ್ನು ಸೇರಿಸಿ ಮಾಡಿದ ಕೆಲವು ಕಿರೀಟದ ಬಗೆಗಳೂ ಉಪಯೋಗದಲ್ಲಿವೆ.

ಕಿರೀಟದ ಕರ್ಣಪಾತ್ರ: ಕಿರೀಟಗಳ ಎರಡು ಪಕ್ಕಗಳಲ್ಲಿರುವ S ಆಕಾರದ ರಚನೆಗಳು. ಕಲಶ, ಕರ್ಣಪಾತ್ರ ಸೇರಿ ಕಿರೀಟ. ನೋಡಿ: **ಪಕ್ಕೆ.**

ಕಿರೀಟದ ಕಿವಿ: ಕಿರೀಟದ ಕರ್ಣಪಾತ್ರ.

ಕಿರೀಟದ ಗೊಂಡೆ: ಕಿರೀಟದ ಕಿವಿ (ಪಕ್ಕೆ)ಗಳಿಗೆ ಜೋಡಿಸಿರುವ, ಉಣ್ಣೆ ಅಥವಾ ದಾರದ ಗೊಂಡೆಗಳು. ಮೂಲತಃ ಇವು ಕಪ್ಪು ಬಣ್ಣದವುಗಳಾಗಿದ್ದು, ಕಿರೀಟಕ್ಕೆ ಕಪ್ಪು ರೂಪರೇಖೆ ನೀಡುವ ಉದ್ದೇಶ ಹೊಂದಿವೆ. ಈಗ ಬೇರೆ ಬಣ್ಣದವುಗಳನ್ನೂ ಕಟ್ಟುತ್ತಾರೆ.

ಕಿರೀಟದ ವೇಷ: ರಾಜವೇಷ ಅರ್ಥಾತ್ ಉರುಟು ಕಿರೀಟ / ಕೋಲು ಕಿರೀಟದ ವೇಷ. ಇಲ್ಲಿ ಕಿರೀಟವೆಂದರೆ ಕೋಲು ಕಿರೀಟ. ಪೀಠಿಕೆ ವೇಷ (ಪುರುಷ ವೇಷ. ಬ.) ಇದಿರು ವೇಷ (ಎರಡನೆ ವೇಷ ಬ.)ಗಳೂ, ಇಂದ್ರಜಿತು, ವೀರವರ್ಮ, ರಕ್ಕಸಬಲ, ಸೇನಾಪತಿಗಳು ಕಿರೀಟದ ವೇಷಗಳು. ಕಿರೀಟದ ವೇಷಕ್ಕೆ ಮೀಸೆ ಇರಲೇಬೇಕು. ಇಡಿ ತೋಳಿನ ಅಂಗಿಯೂ ಕಡ್ಡಾಯ.

ಕಿರು ಪೆಟ್ಟು: ಚಂಡೆ, ಮದ್ದಲೆಗಳ ಬಾರಿಸುವಿಕೆಯ ಸಣ್ಣ ಪೆಟ್ಟು. ಉರುಳಿಕೆಯ ನಾದಗಳು ಮತ್ತು ಇತರ ಸಣ್ಣ ಪೆಟ್ಟುಗಳು.

ಕಿರು ಹೆಜ್ಜೆ: ಸಣ್ಣ, ನಯವಾದ ಹೆಜ್ಜೆ, ಹೆಜ್ಜೆಗಾರಿಕೆ. ನೋಡಿ: **ಹುಡಿನಾಟ್ಯ.**

ಕಿಸೆ ಪದ್ಯ: ಪ್ರಸಂಗದಲ್ಲಿ ಇಲ್ಲದ, ರಂಗದಲ್ಲಿ ಸಾಂದರ್ಭಿಕವಾಗಿ ಭಾಗವತನು ರಚಿಸಿ ಅಥವಾ ಬೇರೆಡೆಯಿಂದ ಆಯ್ದು ಹಾಡುವ ಪದ್ಯ. ಆರತಿ, ಒಡ್ಡೋಲಗ, ಯುದ್ಧ, ಸ್ತುತಿ ಮೊದಲಾದ ಸಂದರ್ಭಗಳಿಗೆ ಹೆಚ್ಚಾಗಿ ಬಳಕೆ.

ಕೀಲು: 1. ಆಭರಣಗಳು ಅಲ್ಲಲ್ಲಿ ಬೇಕಾದಂತೆ ಬಾಗಿ ಬಳುಕಿ ಅಳವಡುವಂತೆ ಜೋಡಿಸುವ ಕಡ್ಡಿ, ದಾರಗಳ ಕೀಲುಗಳು.

2. ಚೆಂಡೆ ಮದ್ದಲೆಗಳ ಶ್ರುತಿ ಏರುಪೇರು ಮಾಡಲು, ಅದರ ಬಾರಗಳಿಗೆ ಕೂಡಿಸಿ ಬಿಗಿಯುವ ಕೀಲು. ನೋಡಿ: **ಕುಟ್ಟಿ.**

3. ಬೊಂಬೆಯಾಟದ ಬೊಂಬೆಗಳಿಗೆ ಅಳವಡಿಸುವ ಕೀಲುಗಳು. ಆ ಸ್ಥಾನಗಳಲ್ಲಿ ಬೊಂಬೆಯ ಅಂಗಗಳು ಬಗ್ಗುತ್ತವೆ. ಉದಾ: ಕುತ್ತಿಗೆ, ಸೊಂಟ, ಭುಜ, ಮೊಣಕೈಯ ಕೀಲುಗಳು.

ಕೀಹಾ / ಕೇಹಾ / ಏಹಾ: ವಿಶೇಷತಃ ಕಿರಾತ ಪಾತ್ರಗಳ ಪ್ರವೇಶದಲ್ಲಿ ಹಾಕುವ ಬೊಬ್ಬೆ, ಕಾಕು. 'ಹ ಲ ಲ ಲ ಲ... ಕೀ... ಹಾ.' ಉತ್ತರ ಕನ್ನಡದಲ್ಲಿ, ಹಿಂದೆ ಎಲ್ಲ ಪಾತ್ರಗಳಿಗೂ, ಯುದ್ಧದ ಸಂವಾದದಲ್ಲಿ, ಮೊದಲ ಪ್ರವೇಶದಲ್ಲಿ ವೀರರಸವಿದ್ದರೆ, ಬೊಬ್ಬೆ ಇರುತ್ತಿತ್ತು.

ಕುಂಕುಮ: ಬಣ್ಣಗಾರಿಕೆಗೂ, ದೇವರ ಪೂಜೆಗೂ ಬಳಸುವ ಕೆಂಪು ವರ್ಣದ್ರವ್ಯ. ಕೆಂಪು ಕುಂಕುಮ. ಹಿಂದೆ ವೃಕ್ಷಮೂಲದ್ದಾಗಿತ್ತು. ಈಗ ರಾಸಾಯನಿಕ (Red Lead) ಇತ್ಯಾದಿ ಬಳಸುವರು.

ಬಣ್ಣಗಾರಿಕೆಯಲ್ಲಿ ಕುಂಕುಮವನ್ನು ಮೇಲು ಬಣ್ಣವಾಗಿ ಮಾತ್ರ ಬಳಸುತ್ತಾರೆ. ಇಂಗಲೀಕದ ಬೊಟ್ಟು, ತುಟಿಗಳ ಕೆಂಪು ಬಣ್ಣ-ಇವುಗಳ ಮೇಲೆ ಕುಂಕುಮ ಹಚ್ಚುವರು. ಇದರಿಂದ ಬಣ್ಣವು ಚದುರದಂತೆ ಆಗುವುದಲ್ಲದೆ ಒಣಗಲೂ ಅನುಕೂಲವಾಗುವುದು.

ಕುಂಡಲ: 1. ಕಿವಿಯಲ್ಲಿ ಧರಿಸುವ ಆಭರಣ. ಕರ್ಣಕುಂಡಲ.

2. ಬಣ್ಣದ ವೇಷದ ಉರುಟು ಕಿವಿಯೋಲೆ. ಪತ್ರ.

3. ಮದ್ದಲೆಯನ್ನು ಸೊಂಟಕ್ಕೆ ಬಿಗಿಯಲು ಬಟ್ಟೆಗೆ ಆಧಾರವಾಗಿ, ಮದ್ದಲೆಗೆ ಜೋಡಿಸುವ ಲೋಹದ ಟೊಳ್ಳು ಉಂಗುರಗಳು.

ಕುಂಬಳ ಕಡಿಯುವುದು: ರಾಕ್ಷಸ ಪಾತ್ರಗಳು ಸಾಯುವ ದೃಶ್ಯವಾದೊಡನೆ, ರಂಗದಲ್ಲಿ ಕುಂಬಳಕಾಯಿ ಕಡಿಯುವ ಬಲಿಯ ಕ್ರಮ. ಹಿಂದೆ, ಕೋಳಿ ಬಲಿಯೂ ಇದ್ದಿತ್ತು. ದೋಷ ನಿವೃತ್ತಿ ಎಂದು ತಾತ್ಪರ್ಯ. ಈ ಪ್ರಯೋಗವು ದೇವೀಮಹಾತ್ಮ್ಯೆ ಪ್ರಸಂಗದಲ್ಲಿ ಇತ್ತೀಚಿನ ವರೆಗೆ ಬಳಕೆಯಲ್ಲಿದ್ದಿತು.

ಕುಕ್ಕುತಪ್ಪು (ತೆ.): ಮಾವಿನ ಸೊಪ್ಪು ಎಂಬ ಅರ್ಥದ ತುಳು ಪದ. ಮಾವಿನ ಸೊಪ್ಪಿನ ವೇಷ. ಕೋಡಂಗಿ ವೇಷದ ನಾಮಾಂತರ.

ಕುಚ್ಚು (ಬ.): 1. ಕಿರೀಟ, ಪಗಡಿ, ಮುಂಡಾಸುಗಳ ಮಧ್ಯಕ್ಕೆ ನಿಲ್ಲುವ ಉರುಟು ಪದಕಾಕೃತಿ ಆಭರಣ. ನೋಡಿ: **ಕಮಲ, ತಾವರೆ, ಹೂವು.**

2. ಸ್ತ್ರೀವೇಷಗಳು ಧರಿಸುವ **ಓಲೆಕುಚ್ಚು** ಎಂಬ ಕರ್ಣಾಭರಣ.

3. ಓಲೆಯ ಕೆಳಗೆ ನೇತಾಡುವ ಮಣಿ, ಮುತ್ತುಗಳ ಕುಚ್ಚು. ಚಿಕ್ಕಜಾಲರಿ.

ಕುಟ್ಟಿ: 1. ಮದ್ದಲೆಯ ನಾದವನ್ನು ಶ್ರುತಿ ಕೂಡಿಸಲು ಬಳಸುವ ಸರಳಿನ ತುಂಡಿನಂತಿರುವ, ಎರಡರಿಂದ, ಆರು ಇಂಚಿನ ಮರದ ತುಂಡು. ಉರುಟು, ಉದ್ದ ಇರುವ ಕಲ್ಲನ್ನೂ ಬಳಸುವುದಿದೆ. ಇದನ್ನು

ಮದ್ದಲೆಯ ಇಂಡಿಗೆಯ ಮೇಲೆ ಇಟ್ಟು ಕಲ್ಲಿನಿಂದ ಅಥವಾ ಸುತ್ತಿಗೆಯಿಂದ ಬಡಿಯುವರು.

2. ಚೆಂಡೆ, ಮದ್ದಲೆಗಳ ನಾದ ವ್ಯತ್ಯಾಸ ಮಾಡಲು, ಬಾರಗಳಿಗೆ ಸಿಕ್ಕಿಸಿಡುವ ಮರದ ಉರುಟಾದ ಚಿಕ್ಕ ತುಂಡುಗಳು.

ಕುಟ್ಟಿ ಚಾಮರ (ತೆ.) : ಬಣ್ಣದ ವೇಷಗಳು ಧರಿಸುವ **ಕೇಶಭಾರ ಕಿರೀಟ** ಅಥವಾ **ತಡ್ಪೆ ಕಿರೀಟ**ದ ನಾಮಾಂತರ. ಮಲೆಯಾಳಿ ಶಬ್ದ. ಕಥಕಳಿಯಲ್ಲೂ ಇದೇ ಪದವಿದೆ.

ಕುಟ್ಟಿ ಸಬಳ : ಕಬ್ಬಿಣದ ಚಿಕ್ಕ ಸಬಳ. ಸಣ್ಣ ಸಬ್ಬಾಲು. ಡೇರೆಯ ಹಗ್ಗಗಳನ್ನು ಬಿಗಿದು ನಿಲ್ಲಿಸಲು, ಬಣ್ಣ ಹಾಕುವ ಕನ್ನಡಿ ನಿಲ್ಲಿಸುವಲ್ಲಿ ಬಳಕೆ.

ಕುಣಿಕೆ = ನೋಡಿ : **ಕುಣಿತ.**

ಕುಣಿತ/ಕುಣಿಕೆ : ನೃತ್ತ ಮತ್ತು ನೃತ್ಯ. ಮುಖ್ಯವಾಗಿ ನೃತ್ತವೇ. ಇದು ಪಾತ್ರಾನುಗುಣ, ತಾಳಾನುಗುಣ ಮತ್ತು ಭಾವಾನುಗುಣವಾಗಿ ವೈವಿಧ್ಯಮಯವಾಗಿದೆ.

ಕುತ್ತರಿ/ಕುತ್ತೇರಿ : ಹೆಣ್ಣು ಬಣ್ಣದ ವೇಷದ ಕಿರೀಟ. ಕೆಳಗೆ ಸಪುರವಾಗಿದ್ದು ಮೇಲೆ ಅಗಲವಾಗಿರುತ್ತದೆ. ನೋಡಿ : **ಹೆಣ್ಣು ಬಣ್ಣದ ಕಿರೀಟ.** ಕುತ್ತರಿ ಎಂದರೆ, ಮೂಲತಃ ಬೆತ್ತ ಅಥವಾ ಬಿದಿರಿನಿಂದ ತಯಾರಿಸಿದ ಪಾತ್ರೆಯಾಕಾರದ ಕುಕ್ಕೆ. ಮೀನು ಹಿಡಿಯಲು ಬಳಸುವಂತಹದು. ಅದರ ಹೋಲಿಕೆಯಾದ ಕಿರೀಟಕ್ಕೆ ಈ ಹೆಸರು.

ಕುತ್ತಿ : ಚೆಂಡೆ ಮದ್ದಲೆಗಳ **'ಕಳಸಿಗೆ'.**

ಕುತ್ತಿಕಾಲು : ಒಂದು ಬಗೆಯ ಹೆಜ್ಜೆಗಾರಿಕೆ. ಕುತ್ತಿಕಾಲು ಕುಣಿತ. ಹಿಮ್ಮಡಿಗಳನ್ನೆತ್ತಿ, ನಿಂತಲ್ಲೆ ಕೆಳಗಿಡುತ್ತ ನರ್ತಿಸುವುದು. ಅಥವಾ ಹಿಮ್ಮಡಿ ಎತ್ತಿ ಮುಮ್ಮಡಿಗಳನ್ನು ಮಾತ್ರ ಬಳಸಿ ಆಚೀಚೆ ಹಾರುತ್ತ ಅಥವಾ ವರ್ತುಲವಾಗಿ ಕುಣಿಯುವುದು. ಶೃಂಗಾರ, ಹಾಸ್ಯ, ಸಂತೋಷ ಭಾವಗಳಿಗೆ ಬಳಕೆ.

ಕುತ್ತು = ನೋಡಿ : **ಗುತ್ತು**

ಕುತ್ತೇರಿ = ನೋಡಿ : **ಕುತ್ತರಿ.**

ಕುದುರೆ : ಅಶ್ವಮೇಧ ಪ್ರಸಂಗದ ಕುದುರೆ ವೇಷ. ಒಬ್ಬನು ನೇರ, ಮತ್ತೊಬ್ಬನು ಅವನ ಬೆನ್ನಿಗೆ ತಲೆಕೊಟ್ಟು ನಿಂತು, ಅವರ ಮೇಲೆ ಬಟ್ಟೆ ಮುಚ್ಚುವರು. ನಿಂತವನಿಗೆ ಕುದುರೆ ಮುಖವಾಡ ತೊಡಿಸುತ್ತಾರೆ.

ಕುದುರೆ ದೂತ : ಉಸ್ತುವಾರಿಯ ಕುದುರೆಯ ಕಾಸ್ಗಾರನ ವೇಷ. ಹಾಸ್ಯವೇಷ. ಈತನು ಕುದುರೆಗೆ ಭಾಷೆ ಕಲಿಸುವುದು, ಬೇರೆ ಬೇರೆ ಭಾಷೆಗಳಲ್ಲಿ ಮಾತಾಡಿಸುವುದು ಇತ್ಯಾದಿ ಕೆಲಸಗಳಿವೆ.

ಕುದುರೆಮುಖ/ಕುದುರೆಮುಖವಾಡ : ಕುದುರೆ ವೇಷಕ್ಕೆ ಬಳಸುವ ಮರದ ಮುಖವಾಡ. ಬಣ್ಣದ ವೇಷದ ಪ್ರವೇಶದಲ್ಲಿ ದೀವಟಿಗೆಗೆ ಎರಚಲು ಬೇಕಾದ ರಾಳವನ್ನು ಹಿಡಿದುಕೊಳ್ಳಲು ಇದನ್ನೆ ಬಳಸುವರು.

ಕುಪ್ಪಾಯ (ತೆ.) : ಮಲೆಯಾಳ ಶಬ್ದ. ಸ್ತ್ರೀವೇಷವು ಹಿಂದೆ (ಪ್ರಾಯಃ ಈ ಶತಮಾನದ ಆದಿಯಲ್ಲಿ) ಧರಿಸುತ್ತಿದ್ದ ಇಡಿ ತೋಳಿನ ಅಂಗಿ, ದಗಲೆ. ಇದು ಕೇರಳೀಯ ಸಂಪ್ರದಾಯ. ಕಥಕ್ಕಳಿಯಲ್ಲಿ ಈಗಲೂ ಸ್ತ್ರೀವೇಷಕ್ಕೆ ಇಡಿ ತೋಳಿನ ಅಂಗಿ ಬಳಕೆಯಿದೆ.

ಕುಮಚಟ್ಟು (ಉ./ಬ./ಗ.) : ಒಂದು ಬಗೆಯ ಲಾಗ. ಉಡಿ. ಹಿಮ್ಮಡಿ ನಿತಂಬಕ್ಕೆ ತಾಗುವಂತೆ ಹಾರುವುದು. ಪ್ರವೇಶ ನೃತ್ಯ, ಯುದ್ಧ ನೃತ್ಯಗಳಲ್ಲಿ ಬಳಕೆ.

ಕುಮಾರವೇಷ (ಉ.) : ಪುಂಡು ವೇಷದ ನಾಮಾಂತರ. ವಿಶೇಷತಃ ಚಿಕ್ಕ ಪ್ರಾಯದ ಪುಂಡು ವೇಷ, ಬಾಲಕ ವೇಷ, ಉದಾ : ಲವ, ಕುಶ, ರೋಹಿತಾಶ್ವ.

ಕುರಲಾರ (ತೆ.) : ಪುರುಷ ವೇಷಗಳ ಎದೆಹಾರ, ನೋಡಿ. **ಕೊರಳಾರ, ಎದೆಪದಕ.** ಕಥಕಳಿಯಲ್ಲೂ ಇದೇ ಪದವಿದೆ.

ಕುರಿನೀರು : ಕೆಂಬಣ್ಣದ ನೀರು. ಬಲಿ ವಿಧಿಗೆ ಬಳಕೆ. **ಕುಂಬಳ ಕಡಿಯುವುದು, ಕೋಳಿ ಕಡಿಯುವುದು, ತಟ್ಟೇಬಳಿ**ಗಳಲ್ಲಿ ಉಪಯೋಗಿಸುವರು.

ಕುರುಜಾತುಮಾಲೆ : ಕುರುಜಾತು ಎಂಬ ನಾಣ್ಯಗಳ ಅಡ್ಡಿಗೆ. ಪವನುಸರ, ಮಿಸ್ರಿಮಾಲೆಗಳಂತೆ. ನಾಣ್ಯಗಳಿಗೆ ಕೊಂಡಿ ಸೇರಿಸಿ, ಸರಿಗೆಗೆ ಪೋಣಿಸಿ ತಯಾರಿಸುವಂತಹದು. ಸ್ತ್ರೀವೇಷದ ಆಭರಣ. ಕುರುಜಾತು ಹೋಲಿಕೆಯ ಪದಕಗಳ ಮಾಲೆ.

ಕೂಟ : 1. ಆಟಕ್ಕಿಂತ ಭಿನ್ನವಾಗಿ 'ಕೂಟ' ತಾಳಮದ್ದಲೆ.

2. ಆಟದ ಮೇಳದ ಎಲ್ಲರ ಗುಂಪು, ಒಡನಾಟ. ಉದಾ : "ಆಟ ಚೆನ್ನಾಗಿ ಆಗಬೇಕಾದರೆ ಕೂಟ ಚೆನ್ನಾಗಿರಬೇಕು".

ಕೂಟದ ಪ್ರಸಂಗ : ತಾಳಮದ್ದಲೆಗೆ ಹೊಂದುವ ಪ್ರಸಂಗ. ಉದಾ : ಕೃಷ್ಣ ಸಂಧಾನ.

ಕೂಡಾಟ : ಎರಡು ಅಥವಾ ಹೆಚ್ಚು ಮೇಳಗಳು ಸೇರಿ, ಕಥಾಭಾಗಗಳನ್ನು ಅಥವಾ ಪಾತ್ರಗಳನ್ನು ಹಂಚಿಕೊಂಡು, ಕೂಡಿ ಆಡುವ ಆಟ. ಅರ್ವಾಚೀನ ಪ್ರಯೋಗ.

ಕೂಡಿಕೆ(ಗೆ) (ಬ.) : ಹಬ್ಬದ ರಜೆ (ಆಡಿಕೆ) ಕಳೆದು, ಪುನಃ ಸೇರಿ ಆಡುವ ಮೊದಲ ಆಟ. ಕೂಡಿಕೆ ಆಟ.

ಕೂತುಮಂಡಿ (ಬ.) : ತುದಿಗಾಲಲ್ಲಿ ಕುಳಿತು ಮಂಡಿ ಕುಣಿತ. ಕುಕ್ಕುರುಗಾಲಲ್ಲಿ ಕುಳಿತು, ಹಾರುತ್ತ ಹಾರುತ್ತ, ಹಸ್ತಭಾವ ಸಹಿತ ಸುತ್ತು ಬರುವಂತೆ ಕುಣಿಯುವುದು. ಪುಂಡುವೇಷ, ಕಸೆಸ್ತ್ರೀವೇಷ ಗಳೂ ಇದನ್ನು ಕುಣಿಯುತ್ತವೆ.

ಕೃಷ್ಣನ ಒಡ್ಡೋಲಗ: ಕೃಷ್ಣನ ಪಾತ್ರಕ್ಕಿರುವ ವಿಶಿಷ್ಟ ಪ್ರವೇಶ ನೃತ್ಯ. ಇದು ಹಿಂದೆ ಬಡಗು, ತೆಂಕು ತಿಟ್ಟುಗಳೆರಡರಲ್ಲೂ ಒಂದೇ ಬಗೆಯಾಗಿದ್ದಂತೆ ಕಾಣುತ್ತದೆ. ಈಗ ಇರುವಂತೆ, ಎಂದರೆ, ಇತ್ತೀಚೆಗೆ ಇದು ರಂಗದಿಂದ ಲುಪ್ತವಾಗುವುದಕ್ಕೆ ಮೊದಲಿದ್ದ ಕ್ರಮದಂತೆ:

ತೆಂಕುತಿಟ್ಟಿನಲ್ಲಿ : ''ಕಸ್ತೂರೀ ತಿಲಕಂ ಲಲಾಟಫಲಕೇ''... ಎಂಬ ಶ್ಲೋಕಕ್ಕೆ ಕೃಷ್ಣನೂ, ಅಷ್ಟಾಂಗನೆಯರೂ ತೆರೆಯಲ್ಲಿ ಪ್ರವೇಶಿಸಿ ಕುಳಿತು ಕೊಳ್ಳುವುದು. ಶ್ಲೋಕವು ಮುಗಿದಾಗ ತೆರೆ ತೆಗೆದು, ''ಗೋವಿಂದಾ। ನಂದ ಮುಕುಂದ'' ಎಂಬ ಏಕ ತಾಳದ, ಮೂರು ಪದ್ಯಗಳಿಗೆ, ಕೃಷ್ಣನು ಅಷ್ಟಾಂಗನೆಯರಲ್ಲೊಬ್ಬಳ ತೊಡೆಯಲ್ಲಿ ತಲೆಯಿಟ್ಟು, ಎದ್ದು ನೇರ ಕುಳಿತು, ಪುನಃ ಇನ್ನೊಂದು ಬದಿಗೆ ತಲೆಯಿಟ್ಟು ಪರ್ಯಾಯ ಕ್ರಮದಿಂದ ಇರುವುದು. ಕುಣಿತವಿಲ್ಲ.

ಆ ಬಳಿಕ, ಒಂದೊಂದೇ ಸ್ತ್ರೀವೇಷವನ್ನು ಆಚೆಯಿಂದೀಚೆ ಹುಡುಕಿದಂತೆ ಮಾಡಿ, ರಂಗದ ಮಧ್ಯಕ್ಕೆ ತಂದು ಕುಣಿಸುವುದು. ಅಡಗುವುದಕ್ಕೂ, ಹುಡುಕುವುದಕ್ಕೂ ಅಂತರತೆರೆ ಚಪ್ಪರ (ವಸ್ತ್ರವನ್ನು ಕೋಲುಗಳಿಗೆ ಸಿಕ್ಕಿಸಿ ಹಿಡಿಯುವುದು). ಹೀಗೆ ಒಬ್ಬೊಬ್ಬರನ್ನೆ ಕುಣಿಸುವಾಗ, ಉಳಿದವರಲ್ಲಿ ಕೆಲವರು ಅಂತರ ಹಿಡಿದುಕೊಳ್ಳುತ್ತಾರೆ.

ಆ ಬಳಿಕ ಸ್ತ್ರೀಯರು ಕೃಷ್ಣನಿಗೆ ಕೋಟೆ ಕಟ್ಟುವುದು. ಕೃಷ್ಣನು ತಪ್ಪಿಸಿಕೊಂಡಾಗ, ಅಲ್ಲಿಗೆ ಜಜ್ಜರಿ ಮಾಧವ (ಗೊಲ್ಲ ಮಾಧವ)ನೆಂಬ ಹಾಸ್ಯದ ಪ್ರವೇಶ. ಸ್ತ್ರೀಯರಿಂದ ಅವನ ವಿಚಾರಣೆ. ಅನಂತರ ಕೃಷ್ಣ-ಮಾಧವ ಸಂವಾದ, ಕೃಷ್ಣನಿಗೆ ಮನೆ ಕಟ್ಟಿಕೊಡುವ ವಿಚಾರಗಳು ಇತ್ಯಾದಿ ಹಾಸ್ಯ.

ಬಡಗುತಿಟ್ಟಿನಲ್ಲಿ : ಕಸ್ತೂರೀ ತಿಲಕಂ ಲಲಾಟ ಫಲಕೇ... ಎಂಬ ಶ್ಲೋಕಕ್ಕೆ ಕೃಷ್ಣನು ತೆರೆಯ ಬಳಿಗೆ ಪ್ರವೇಶಿಸುವುದು ಅಥವಾ ಚೌಕಿಯಲ್ಲಿರುವುದು. ಅನಂತರ ''ದೇವ ಬಂದ। ದೇವರ ದೇವ ಬಂದ।'' – ಎಂಬ, ಏಕತಾಳದ ಮೂರು ಚರಣಗಳಿಗೆ ಕುಣಿತ, ಅನಂತರ ''ಬಂದನು ದೇವರ ದೇವ।''... ಎಂಬ ನವರೋಜು ರಾಗ, ಏಕತಾಳದ ಮೂರು ಪದ್ಯಗಳಿಗೆ ಕುಣಿತ ಆಗಿ, ಭಾಗವತ ರೊಂದಿಗೆ ಸಂಭಾಷಣೆ–

''ದೇವ ದೇವೋತ್ತಮ, ದೇವತಾಕುಲ ಸಾರ್ವಭೌಮ, ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ...'' (ಇದಕ್ಕೆ ಕೃಷ್ಣನು 'ಆಹಾ, ಹುಂ, ಅಲ್ಲವೆ'... ಎಂದು ಮುಂತಾಗಿ ಪ್ರತಿಕ್ರಿಯಿಸು ತ್ತಾನೆ)... ''ದೇವರು ಥಟ್ಟನೆ ಓಲಗಕ್ಕೆ ಸವಾರಿ ಯಾದ ವಿಚಾರ ಅಪ್ಪಣೆಯಾಗಲಿ–

– ಓಹೋ, ಆ ವಿಚಾರ ಕೇಳಿರಿ...'' ಇತ್ಯಾದಿ.

ಉತ್ತರ ಕನ್ನಡ ಸಂಪ್ರದಾಯದಲ್ಲಿ: ಬಡಗು ತಿಟ್ಟಿನಂತೆಯೇ. ಆದರೆ, ರುಕ್ಮಿಣೀ ಕಲ್ಯಾಣದ ವರೆಗಿನ ಪ್ರಸಂಗಗಳ ಕೃಷ್ಣನು 'ಕೊಳಲನೂದುತ ಬಂದ। ನಮ್ಮ। ಗೋಪಿಯ ಕಂದ' – ಎಂಬ ಪದ್ಯಕ್ಕೆ ಕುಣಿದು ಪ್ರವೇಶಿಸುತ್ತಿದ್ದನು.

ಅನಂತರದ ಕತೆಗಳಲ್ಲಿ 'ಬಂದನು ದೇವರ ದೇವ।...' ಮತ್ತು 'ದೇವ ಬಂದ...' ಎಂಬ ಪದ್ಯಗಳೊಂದಿಗೆ ಪ್ರವೇಶಿಸುತ್ತಿದ್ದನು.

ಕೆಂಕಣ್ಣು/ಕೆಂಗಣ್ಣು : ಉಗ್ರ ಸ್ವಭಾವದ ವೇಷಗಳಿಗೆ (ಉದಾ: ದುರ್ವಾಸ), ಕಣ್ಣಿನ ಕೆಳಗಡೆ, ಹುಬ್ಬಿನ ಮೇಲೆ ಕೆಂಪು ಬರೆದು ಮಾಡುವ ಉಗ್ರರೂಪ. ಕೆಂಪು ಛಾಯೆ.

ಕೆಂಗಣ್ಣು = ನೋಡಿ: ಕೆಂಕಣ್ಣು.

ಕೆಂಚಣೆಲ ಬಾಲ: ಕೆಂಚು ಅಳಿಲಿನ (ಕಾಡು ಅಳಿಲು) ಬಾಲ. ಇದನ್ನು ಕಿರಾತ ವೇಷ, ಗಂಧರ್ವ ವೇಷಗಳ ಪಗಡಿಯ ಹಿಂಬದಿಯಲ್ಲಿ, ಮುಡಿಕೇದಗೆಯಾಗಿ, ಸಿಕ್ಕಿಸುವರು.

– ಉ.ಕ.ದಲ್ಲಿ, ಹಿಂದೆ, ಎಲ್ಲಾ ವೇಷಗಳ ಮುಡಿ ಕೇದಗೆಗೆ ಇದೇ ಇದ್ದಿತು.

ಕೆಂಚು (ಬ.) : ಮುಂಡಾಸು, ಕೇದಗೆ ಮುಂದಲೆ, ಪಗಡಿಗಳ ಅಂಚುಗಳ ಮಧ್ಯಕ್ಕೆ, ತಾವರೆಯ ನೇರಕ್ಕೆ, ಸಿಕ್ಕಿಸುವ, ಹೂವು ಅಥವಾ ಬೆಂಡಿನ ಎರಡು ಉರುಟು ಆಕೃತಿಗಳು.

ಕೆಂಚು ಕೇಸರಿ: ಅನನಾಸು ಅಥವಾ ಕಳ್ಳಿಜಾತಿಯ ಎಲೆಗಳ ನಾರುಗಳು. ಸಹಜವಾಗಿ ಕೆಂಚಗಿರು ವಂತಹವು ಅಥವಾ ಬಣ್ಣ ಹಚ್ಚಿದ್ದು, ವರಾಹ, ನರಸಿಂಹ ವೇಷಗಳಿಗೆ ಶಿರೋಭೂಷಣದಿಂದ ಮುಖದ ಮೇಲೆ, ಅತ್ತಿತ್ತ, ಇಳಿಬಿಡುವರು. ವೃದ್ಧ

ಪಾತ್ರಗಳ ಮೀಸೆಗಳಿಗೂ, ಕೇಸರಿಗೂ ಬಳಸುವರು. ಹನುಮಂತನ ಕಿರೀಟದ ಹಿಂದೆ ಸಿಕ್ಕಿಸುವ ಕೇಸರಿ (ಇಳಿಗೂದಲು)ಗೂ ಕೆಂಚು ಅಥವಾ ಬಿಳಿ ಕೇಸರಿ ಬಳಸುವರು.

ಕೆಂಪು : ಕೆಂಪು ವರ್ಣ ದ್ರವ್ಯ. ಕಲ್ಲು ಅಥವಾ ಹಂಚಿನ ಹುಡಿ, ಕುಂಕುಮ, ಇಂಗಲೀಕ, ಇವನ್ನು ಕೆಂಪು ಬಣ್ಣಕ್ಕಾಗಿ ಬಳಸುವರು. ನಾಮ, ಮುದ್ರೆ, ಗೆರೆ, ಜೀವರೇಖೆಗಳನ್ನೆಳೆಯಲೂ, ಬಿಳಿ ಬಣ್ಣದೊಂದಿಗೆ ಮಿಶ್ರಮಾಡಿ ಮೂಲ ಲೇಪನಕ್ಕೂ ಕೆಂಪು ಬಣ್ಣಬೇಕು. ಅಲ್ಲಲ್ಲಿ ಕೆಂಪು ಛಾಯೆ (Shading) ಕೊಡುವುದಕ್ಕೂ ಅಗತ್ಯ.

ಕೆಂಪು ಕೆಂಚಣಿಲ ಬಾಲ = ನೋಡಿ : ಕೆಂಚಣಿಲ ಬಾಲ.

ಕೆಂಪು ಮುಂಡಾಸು (ಬ. / ಉ.) : ಕೆಂಪು ಬಣ್ಣದ ಬಟ್ಟೆಯನ್ನು ಮುಚ್ಚಿ ಕಟ್ಟುವ ಮುಂಡಾಸು, ಅದನ್ನು ಧರಿಸುವ ವೇಷ ಮತ್ತು ವೇಷಧಾರಿಗೆ ಸಹ ಈ ಪದ ಸಲ್ಲುತ್ತದೆ. ದೊಡ್ಡ ಆಕೃತಿಯ ಮುಂಡಾಸು. ಕಪ್ಪು ಮುಂಡಾಸು ಎಂಬುದು ಇನ್ನೊಂದು ಬಗೆ. ಗಂಧರ್ವ, ಮಾಗಧ, ಶಲ್ಯ– ಇವು ಕೆಂಪು ಮುಂಡಾಸಿನ ವೇಷಗಳಿಗೆ ಉದಾಹರಣೆ. ನೋಡಿ : **ಮುಂಡಾಸು, ಕಪ್ಪುಮುಂಡಾಸು, ಸಾಲಿನ ವೇಷ.**

ಕೆತ್ತನೆ : ಕಿರೀಟ, ಕೊರಲಾರ ಮೊದಲಾದ, ಮರದಿಂದ ಮಾಡಿದ ಆಭರಣಗಳ ಮೇಲೆ ಇರುವ ಕೆತ್ತನೆಗಳು, ಡಿಸೈನುಗಳು.

ಮರದಿಂದ ಆಭರಣಗಳನ್ನು ತಯಾರಿಸುವ ಕೆಲಸ, ಕೆತ್ತನೆ ಕೆಲಸ.

ಕೆನ್ನೆಪ್ಪೂ / ಕೆನ್ನೆಪ್ಪೂವು (ತೆ.) : ಒಂದು ಆಭರಣ. ದೀಪ ಶಿಖಾಕೃತಿಯಲ್ಲಿದ್ದು, ಅದನ್ನು ಸಿಕ್ಕಿಸಲು ಕಡ್ಡಿ ಇರುತ್ತದೆ. ಇದನ್ನು ಕಿವಿಯ ಮೇಲ್ಭಾಗದಲ್ಲಿ ನಿಲ್ಲುವಂತೆ, ಕರ್ಣಪಾತ್ರದ ಬದಿಗೆ ತುರುಕಿಸುವರು. ಇದರೊಂದಿಗೆ, ಇದೇ ರೀತಿಯ, ಉರುಟಾದ ಚೆನ್ನೆಪ್ಪೂ ಎಂಬ ಮತ್ತೊಂದು ಆಭರಣವಿರುತ್ತದೆ. ಈಗ ಇವೆರಡನ್ನೂ ಒಂದಾಗಿಸಿ ತಯಾರಿಸಿದ ಕೆನ್ನೆಪ್ಪೂವನ್ನು ಸಿಕ್ಕಿಸುವರು.

ಕೆನ್ನೆಪ್ಪೂವು = ನೋಡಿ : ಕೆನ್ನೆಪ್ಪೂ.

ಕೆನ್ನೆ ಸರಪಣಿ : ಸ್ತ್ರೀವೇಷದ ಆಭರಣ. ಕಿವಿಯಿಂದ ಕೆನ್ನೆಗೆ ಬರುವಂತೆ ಸಿಕ್ಕಿಸುವ ಚಿಕ್ಕ ಸರಪಳಿ.

ಕೆಪ್ಪು ಕಟ್ಟುವುದು = ನೋಡಿ : ಪೆಪ್ಪುಕಟ್ಟುವುದು.

ಕೆಲಸ : 1. ರಂಗಸ್ಥಳದಲ್ಲಿ ಕಲಾವಿದನು ಮಾಡುವ ಕಲಾವ್ಯವಹಾರ, ಕುಣಿತ, ಅಭಿನಯ, ವಾದನ ಇತ್ಯಾದಿಗಳು.

ಉದಾ : ರಂಗಸ್ಥಳದ ಕೆಲಸ, ಪದ್ಯದ ಕೆಲಸ, ಪದ್ಯಕ್ಕೆ ಕೆಲಸ ಮಾಡುವುದು. ''ಆ ಪದ್ಯಕ್ಕೆ ಅವನು ಕೆಲಸ ಮಾಡಲಿಲ್ಲ'' ಇತ್ಯಾದಿ.

ಕಸುಬು, ಕಸುಬುಗಾರಿಕೆ ಎಂದು ಅರ್ಥ.

2. ಮೇಳಕ್ಕೆ ಸಂಬಂಧಿಸಿದ ಸಿಬಂದಿಗಳ ಕೆಲಸಗಳು– ಪೆಟ್ಟಿಗೆ ಹೊರುವುದು, ಅಡುಗೆ, ರಂಗಸ್ಥಳದ ಸಹಾಯ, ಸಾಮಾಗ್ರಿ ಕಟ್ಟಲು ಸಹಾಯ– ಮುಂತಾಗಿ. ಈ ಕೆಲಸಗಳಿಗೆ, ಕೆಲಸಗಾರರು, ಅವರವರ ಕರ್ತವ್ಯಗಳೂ ಹಿಂದಿನ ಕ್ರಮದಲ್ಲಿ ನಿಶ್ಚಿತವಾಗಿರುತ್ತಿದ್ದುವು.

ಕೆಲಸದವನು (ರು) : ಆಟದ ಮೇಳದ ಕೆಲಸಗಾರ. ಸಿಬ್ಬಂದಿಯಾಳು. ಕಾಲುನಡಿಗೆಯ ತಿರುಗಾಟದ ಕಾಲದಲ್ಲಿ, ಎಂದರೆ ಸುಮಾರು 1940ರ ವರೆಗೆ, ಒಂದು ಮೇಳದಲ್ಲಿ ಹತ್ತರಿಂದ ಹನ್ನೆರಡು ಜನ ಕೆಲಸದವರೆಂದು ನಿರ್ಣಯವಿತ್ತು. ಇವರನ್ನು ಅವರ ಕೆಲಸಗಳಿಂದಲೇ ಗುರುತಿಸುವ ಕ್ರಮವಿತ್ತು– ದೇವರ ಪೆಟ್ಟಿಗೆಯವನು, ಜವುಳಿ ಪಿಂಡಿಯವನು, ಶ್ರುತಿ ಪೆಟ್ಟಿಗೆಯವನು ಹೀಗೆ. ಇವರಿಗೆ ರಾತ್ರಿ ಮತ್ತು ಹಗಲು ಇಂತಿಂತಹ ಕೆಲಸವೆಂದೂ ನಿರ್ಣಯವಿತ್ತು. ಉದಾ : ಶ್ರುತಿ ಪೆಟ್ಟಿಗೆಯವನು ರಾತ್ರಿ ಶ್ರುತಿ ಹಿಡಿಯಬೇಕು. ಹಗಲು ವಾದ್ಯಗಳನ್ನು ಮುಂದಿನ ತಾಣಕ್ಕೆ ಸಾಗಿಸಿ, ಅವುಗಳನ್ನು ವ್ಯವಸ್ಥೆಗೊಳಿಸಿ, ರಕ್ಷಣೆ ಮಾಡಬೇಕು. ದೊಡ್ಡ ಪೆಟ್ಟಿಗೆಯವನು ಕಿರೀಟಗಳ ಪೆಟ್ಟಿಗೆಯನ್ನು ಸಾಗಿಸಿ, ರಾತ್ರಿ ವೇಷಕಟ್ಟಲು ಸಹಕರಿಸಿ, ಬಣ್ಣದ ವೇಷಕ್ಕೆ ರಂಗದಲ್ಲಿ ದೊಂದಿ– ರಾಳಗಳನ್ನು ಒದಗಿಸಬೇಕು.


ನೋಡಿ : **ಪೆಟ್ಟಿಗೆ, ಪೆಟ್ಟಿಗೆ ಜನ.**

ಕೆಳಕೆಂಚು (ಬ.) : ದೊಡ್ಡ ಮುಂಡಾಸಿಗೆ, ವಿಶೇಷತಃ ಕರ್ಣನ ಮುಂಡಾಸಿಗೆ, ಮುಂಡಾಸಿನ ಅಂಚಿನ ಕೆಳಬದಿಗಳಲ್ಲಿ, ಕೇದಗೆಯ ಸ್ಥಾನದಲ್ಲಿ ನಿಲ್ಲುವಂತೆ ಕಟ್ಟುವ ಎರಡು ಹೆಚ್ಚುವರಿ ಕೆಂಚುಗಳು.

ಕೇದಗೆ (ಬ.) : 1. ಕಿರೀಟ, ಪಗಡಿ, ಮುಂಡಾಸುಗಳ ಮುಂಭಾಗದಲ್ಲಿ ಕಿವಿಯಿಂದ ಕಿವಿಯವರೆಗೆ ಕಟ್ಟುವ ಪಟ್ಟಿಕೆಯಂತಹ ಆಭರಣ. ಮರದ ಚಿಕ್ಕ ಪಟ್ಟಿಗಳಿಗೆ, ಕನ್ನಡಿ ಹರಳು ಕೂಡಿಸಿ, ಜೋಡಿಸಿ ತಯಾರಿಸುವರು. ಹಿಂದೆ, ಪ್ರಾಯಃ ಕೇದಗೆ ಸೀಳುಗಳಿಂದ ತಯಾರಿಸುತ್ತಿದ್ದುದರಿಂದ 'ಕೇದಗೆ' ಎಂಬ ಹೆಸರು ಬಂದಿರಬಹುದು.

ಇದರ ಮೇಲ್ಪದಿಯಲ್ಲಿ ಮಣಿ ಅಥವಾ ಮುತ್ತುಗಳನ್ನು ಜೋಡಿಸಿರುತ್ತಾರೆ. ಈ ಆಭರಣವು ಭೂತವೇಷಗಳ 'ತಲೆಪಟ್ಟಿ', 'ತಲೆ ಮಣಿ' ಎಂಬ ಆಭರಣಗಳನ್ನು ಹೋಲುತ್ತದೆ.


ಕಿರೀಟ


ತುರಾಯಿ
ಹೂವಿನ ಚೆಂಡು
ಜರಿಲಾಡಿ
ತಾವರೆ
ಕೆಂಚು
ಕೇದಗೆ
ಕರ್ಣಪತ್ರ
ಅಡ್ಡಿಗೆ
ಭುಜಕೀರ್ತಿ
ಎದೆಕಟ್ಟು
ಒಡ್ಯಾಣ
ವೀರಗಸೆ
ತೋಳುಕಟ್ಟು
ಕೈಕಟ್ಟು
ಮಾರುಮಾಲೆ
(ಸಂಪಿಗೆ ಸರ)
ಕಡಗ
ಗೆಜ್ಜೆ

ವೇಷಭೂಷಣ ವಿವರ

ಕಪ್ಪು ಮುಂಡಾಸಿನ ವೇಷವು ಕೇದಗೆ ಧರಿಸುವ ಕ್ರಮವಿಲ್ಲ. ಉತ್ತರ ಕನ್ನಡ ಪದ್ಧತಿಯಲ್ಲಿ ಸಾಂಪ್ರದಾಯಿಕವಾಗಿ, ಮುಂಡಾಸು ಪಗಡಿಗಳಿಗೆ ಕೇದಗೆ ಧರಿಸುವುದಿರಲಿಲ್ಲ. ಕಿರೀಟಕ್ಕೆ ಮಾತ್ರ ಧರಿಸುತ್ತಿದ್ದರು. ಈಗ ಪಗಡಿ, ಮುಂಡಾಸು ಗಳಿಗೂ ಧರಿಸುತ್ತಾರೆ.

ತೆಂಕುತಿಟ್ಟಿನಲ್ಲಿ ಹಿಂದೆ ಕೇದಗೆ ಇದ್ದಿತು. ಈಗ ಅದು ಲುಪ್ತವಾಗಿದೆ. ತೆಂಕುತಿಟ್ಟಿನ ಪಗಡಿಗಳು ಈಗ ಸಿದ್ಧ ತಯಾರಿ (ರೆಡಿಮೇಡ್) ಆಗಿರು ವುದರಿಂದ, ಕೇದಗೆಯನ್ನು ಹೋಲುವ ಅಲಂಕರಣ ಪಟ್ಟಿ, ಪಗಡಿಯಲ್ಲೆ ಇರುತ್ತದೆ. ಕಿರೀಟದ ಎದುರಿನ ಕೇದಗೆ ಇಲ್ಲದಿರುವುದರಿಂದ, ಕಿರೀಟದ ಆಕಾರ ದೊಡ್ಡದಾಗಿದೆ.

2. ಸ್ತ್ರೀವೇಷದ ಮುಡಿಯಲ್ಲಿ ಧರಿಸುವ ಒಂದು ಆಭರಣ.

ಕೇದಗೆ ಮುಂಡಾಸು (ಬ.) : ಪ್ರಾಯಃ ಕೇದಗೆ ಮುಂದಲೆ ಎಂಬ ಚಿಕ್ಕ ಪಗಡಿಯ ಹಿಂದಿನ ಹೆಸರು. ನೋಡಿ : **ಕೇದಗೆ ಮುಂದಲೆ.**

ಕೇದಗೆ ಮುಂದಲೆ (ಬ.) : ಪುಂಡು ವೇಷಗಳೂ, (ಕೃಷ್ಣ, ಅಭಿಮನ್ಯು) ಅರ್ಜುನನ ವೇಷವೂ ಧರಿಸುವ ಚಿಕ್ಕ ಪಗಡಿ ಅರ್ಥಾತ್ ಚಿಕ್ಕ ಮುಂಡಾಸು. ಇದರ ಮುಂಗಡೆ ಕೇದಗೆಯನ್ನೂ, ಮುಂದಲೆಯನ್ನೂ ಕಟ್ಟುತ್ತಾರೆ.

ಗೋಪುರಾಕೃತಿಯ, ಬಟ್ಟೆ ಮತ್ತು ಹುಲ್ಲಿನ ಅಟ್ಟೆಗಳನ್ನು ಜೋಡಿಸಿ, ಅದರ ಮೇಲೆ ವಸ್ತ್ರವನ್ನು ಮುಚ್ಚಿ, ಅದರ ಮೇಲೆ ಜರಿ ಮತ್ತು ವಸ್ತ್ರದ ಲಾಡಿಗಳನ್ನು ಸುತ್ತಿ ಕಟ್ಟುವ ಶಿರೋಭೂಷಣ ವಿದು. ಇದಕ್ಕೆ **ಸುತ್ತು, ಹೂವು, ತುರಾಯಿ,** **ಕೆಂಚು**ಗಳಿಂದ ಅಲಂಕರಿಸುತ್ತಾರೆ. ಹಿಂಗಡೆ **ಮುಡಿಕೇದಗೆ** ಇರುತ್ತದೆ.

ಈ ಶಿರೋಭೂಷಣಕ್ಕೆ ಈ ಹೆಸರು ಹೇಗೆ ಬಂತೆಂಬುದು ಪರಿಶೀಲನಾರ್ಹ. ಕೇದಗೆ, ಮುಂದಲೆ ಮಾತ್ರ ಸೇರಿದರೆ ಇದು ಸಿದ್ಧವಾಗುವು ದಿಲ್ಲ. ಬಹುಶಃ ಕೇದಗೆ, ಮುಂದಲೆಗಳನ್ನು ಕಟ್ಟುವುದು ಸಣ್ಣ ಪಗಡಿಗೆ ಮಾತ್ರ ಬಳಕೆಯಿದ್ದು, ದೊಡ್ಡ ಮುಂಡಾಸುಗಳಿಗೆ ಇರಲಿಲ್ಲವೆಂದು ತೋರುತ್ತದೆ. ಹಾಗಾಗಿ ಇದು ಕೇದಗೆ ಇರುವ ಮುಂಡಾಸು. ದೊಡ್ಡದು ಬರಿಯ ಮುಂಡಾಸು, ಅದಕ್ಕೆ ಕೇದಗೆ, ಮುಂದಲೆಯಿಲ್ಲ.

ಕೇದಗೆ ಎಂಬ ಹೂವಿಗೆ, ಕೇದಗೆ ಮುಂದಿಗೆ ಎಂಬ ಹೆಸರೂ ಇರುವುದು ಗಮನಾರ್ಹ.

ಕೇದಗೆ ಸರ (ಉ.) = ಕೇದಗೆ.

ಕೇದಿಗೆ = ನೋಡಿ : **ಕೇದಗೆ.**

ನೋಡಿ : **ಅಡ್ಡ ಕೇದಗೆ/ಕೇದಿಗೆ.**

ಕೇಶಭಾರ/ಕೇಶಾವರಿ/ಕೇಶವಾರಿ (ತೆ.) : 1. ಬಣ್ಣದ ವೇಷಗಳು ಧರಿಸುವ ತಡ್ಪೆ ಕಿರೀಟ ಅಥವಾ ಬಟ್ಟಲು ಕಿರೀಟದ ಹಿಂದೆ ಸಿಕ್ಕಿಸಿರುವ ಹಗ್ಗದ ಕೂದಲ ಗೊಂಚಲು.

2. ಬಟ್ಟಲು ಕಿರೀಟ. ಕೇಶಭಾರ ಕಿರೀಟ.

ಕೇಶಭಾರ ಕಿರೀಟ : 'ಕೇಶಭಾರ'ವನ್ನು ಅಳವಡಿಸಿರುವ ಕಿರೀಟ.

ಕೇಶವಾರಿ = ನೋಡಿ : **ಕೇಶಭಾರ.**

ಕೇಶವಾರಿ ತಟ್ಟಿ/ಕೇಶಾವರಿ ತಟ್ಟಿ/ಕೇಸರಿ ತಟ್ಟಿ/ ಕೇಶಾವರಿ ಕಿರೀಟ (ತೆ.) : ಬಣ್ಣದ ವೇಷಗಳು ಧರಿಸುವ ಬಟ್ಟಲು ಕಿರೀಟ. ತಡ್ಪೆ ಕಿರೀಟ. ವಿಶೇಷತಃ **ದೊಡ್ಡ ತಡ್ಪೆ. ಬಣ್ಣದ ತಟ್ಟಿ** (ಬ.) ಇದು ಬಟ್ಟಲಿನ ಆಕೃತಿಯಲ್ಲಿದ್ದು, ಹಿಂಬದಿಯಲ್ಲಿ ಒಳಗೆ ಬಗ್ಗಿ, ನತೋದರವಾಗಿರುತ್ತದೆ. ಇದರ ಮಧ್ಯದಲ್ಲಿ ಕಲಶ ಅಥವಾ ಬುರುಡೆಯೆಂಬ ತಂಬಿಗೆ ಆಕೃತಿಯ ರಚನೆಯಿರುತ್ತದೆ. ಅದರ ಹಿಂದೆ ಪ್ರಭಾವಳಿಯಂತಹ ಬಟ್ಟಲು. ಇವೆರಡನ್ನು ಪ್ರತ್ಯೇಕಿಸಲು ಬರುತ್ತದೆ. ಬಟ್ಟಲಿನ ಸುತ್ತಲೂ ಉಣ್ಣೆಯ ಅಟ್ಟೆ ಇದ್ದು, ಅದರಿಂದ ಕೆಳಗಡೆ ವೃತ್ತಾಕಾರವಾಗಿ ಮಣಿ, ಹವಳ, ಚಿಪ್ಪು, ಕಲ್ಲು, ಹುಳುಗಳ ಚಿಪ್ಪು (**ಬೆಂಡೋಲು**), ಹಲ್ಲೆಗಳನ್ನು ಜೋಡಿಸಿರುತ್ತಾರೆ. ಕಲಶದ ತುದಿಗೆ ಮುಗುಳಿ ಇದ್ದು, ಅದರ ಮೇಲೆ ಮೂರು ಅಂತರಗಳುಳ್ಳ, ಅರಳೆಲೆ ಜಾಲರಿಗಳ ಬೆಳ್ಳಿ **ಸತ್ತಿಗೆ** ಇರುತ್ತದೆ. ಸತ್ತಿಗೆಯು ಐಚ್ಛಿಕ.

ಇದರಲ್ಲೆ ಸಣ್ಣ ಆಕೃತಿಯದು ಸಣ್ಣ ಕೇಶಾವರಿ. ಇದರ ಸುತ್ತ ಉಣ್ಣೆಯ ಅಟ್ಟೆ ಇರುವುದಿಲ್ಲ. ಇದನ್ನು ಬಣ್ಣದ ವೇಷಗಳಲ್ಲದೆ, ಧರ್ಮರಾಯ, ಮಯೂರಧ್ವಜ ವೇಷಗಳೂ ಧರಿಸುತ್ತವೆ. ಪ್ರಾಯಃ ದಶರಥನಿಗೂ, ಬಹಳ ಹಿಂದೆ, ಇದೇ ಕಿರೀಟವಿತ್ತು.

ಕೇಶಭಾರ/ಕೇಶಾವರಿ ಕಿರೀಟವು ಕಥಕಳಿಯ ಕಿರೀಟಗಳನ್ನು ತದ್ವತ್ತಾಗಿ ಹೋಲುತ್ತಿದ್ದು, ಅಲ್ಲೂ ಇದೇ ಪದಗಳೂ ಬಳಕೆಯಲ್ಲಿವೆ. ಇದು ಕೇರಳದಿಂದಲೇ ಯಕ್ಷಗಾನಕ್ಕೆ ಬಂದಿರಬಹುದಾದ ಶಿರೋಭೂಷಣ.

ಕೇಶಾವರಿ = ನೋಡಿ : **ಕೇಶಭಾರ.**

ಕೇಶವಾರಿ ಕಿರೀಟ = ನೋಡಿ : **ಕೇಶವಾರಿ ತಟ್ಟಿ.**

ಕೇಶಾವರಿ ತಟ್ಟಿ = ನೋಡಿ : **ಕೇಶವಾರಿ ತಟ್ಟಿ.**

ಕೇಸರಿ : ಪುರುಷ ಪಾತ್ರಗಳ ಕಿರೀಟದ ಹಿಂಬದಿಯಲ್ಲಿ ನೇತುಬಿಡುವ ಕೇಶರ, ಕೇಶ. ಕಳ್ಳಿ

ಜಾತಿಯ ಗಿಡಗಳಿಂದ, ಇತರ ನಾರುಗಳಿಂದ, ಈಗ ಕೃತಕ ನೂಲುಗಳಿಂದ ತಯಾರಿಸಲ್ಪಡುತ್ತದೆ. ಮೀಸೆಗಳಿಗೂ ಇದರ ಬಳಕೆ ಇದೆ.

ದಡ್ಡಾಲ (ಕವಲು, ಗುಡ್ಡದ ಇಪ್ಪ) Careya arboreya, ದಡ್ಡಾಳೆ – Agave americana, ಕಳ್ಳಿ – Euphorbia tirucalli, ಅನನಾಸು, ಕತ್ತಾಳೆ – Agave americana, ಭೂತಾಳೆ – Scheffera Roxburghi, ಕೋಲುನಾರು - ಗಳಿಂದ ಕೇಸರಿಯನ್ನು ತಯಾರಿಸುತ್ತಾರೆ.

ಪ್ರಾಣಿಜನ್ಯ ಚವರಿಯೂ, ಸಾಂದರ್ಭಿಕವಾಗಿ ಕೇಸರಿಯೇ.

ಕೇಸರಿಯಲ್ಲಿ ಕಪ್ಪು, ಕೆಂಚು, ಬಿಳಿ ಎಂದು ಮೂರು ಬಗೆ. ವೇಷ, ಸಂದರ್ಭಾನುಸಾರ ಇವುಗಳ ಬಳಕೆ. ಉದಾ: ವೃದ್ಧ ಭೀಷ್ಮನಿಗೆ, ಹನುಮಂತನಿಗೆ ಬಿಳಿಕೇಸರಿ, ನರಸಿಂಹನಿಗೆ ಕೆಂಚುಕೇಸರಿ, ಅರ್ಜುನನಿಗೆ ಕಪ್ಪು ಕೇಸರಿ.

ಕೇಸರಿ ತಟ್ಟಿ = ನೋಡಿ : **ಕೇಶವಾರಿ ತಟ್ಟಿ.**

ಕೇಸರಿ ಮೀಸೆ : ಕೇಸರಿಯನ್ನು ಬಳಸಿ ಕಟ್ಟಿದ ಮೀಸೆ. ಉಲ್ಲನ್ ಅಥವಾ ಕ್ರೇಪ್ ಹೇರ್ ಮೀಸೆಗಿಂತ ಭಿನ್ನವಾಗಿ ಸೂಚಿಸಲು ಈ ಪದ.

ಕೇಹಾ = ನೋಡಿ : **ಕೀಹಾ.**

ಕೇಳಿ/ಕೇಳಿ ಬಡಿಯುವುದು : ಆಟ ನಡೆಯುವ ಸೂಚನೆಯನ್ನು ನೀಡಲು ಸಾಯಂಕಾಲ, ಆಟ ನಡೆಯುವ ಸ್ಥಳದಲ್ಲಿ, ಎತ್ತರದ ಗುಡ್ಡದಲ್ಲಿ, ಚೆಂಡೆ, ಮದ್ದಲೆಗಳನ್ನು ಬಾರಿಸುವುದು. ನೋಡಿ : **ಗುಡ್ಡದ ಅಬ್ಬರ.**

"**ಕೇಳಿ**" (= ಕೇಳುವುದಕ್ಕಾಗಿ) ಬಡಿಯುವುದ ರಿಂದ '**ಕೇಳಿ**'.

ಕಥಕಳಿಯಲ್ಲೂ ಇದಕ್ಕೆ **ಕೇಳಿ, ಕೇಳಿಕ್ಕೊಟ್ಟು** – ಎಂಬ ಹೆಸರುಗಳಿವೆ.

ಇದು ಏಕತಾಳದಲ್ಲಿ ನಡೆಯುವ ವಾದನ. ಇದರ ವಿನ್ಯಾಸವು, ಆಟದ ಕಥಾರಂಭಕ್ಕೆ ಮೊದಲು ಬಾರಿಸುವ 'ಪೀಠಿಕೆ' ಯಂತೆಯೇ ಇದ್ದು, ಅದಕ್ಕಿಂತ ತುಸು ಸಂಕ್ಷೇಪವಾಗಿರುತ್ತದೆ.

ಕೈಕಟ್ಟು : ಕೈಗೆ, ಮಣಿಗಂಟಿನ ಮೇಲಿಂದ ಕಟ್ಟುವ ಆಭರಣ ಪಟ್ಟಿಕೆ. ಹತ್ತಕಟ್ಟು, ಹಸ್ತಕಟಕ. ಇದು ಆಯತ ಅಥವಾ ಅರ್ಧವಜ್ರಾಕೃತಿಯಲ್ಲಿರುತ್ತದೆ. ಮರದ ಕಡ್ಡಿ, ಹಲ್ಲೆಗಳನ್ನು ಜೋಡಿಸಿ ಅಥವಾ ಬಟ್ಟೆಯ ಮೆತ್ತೆಗೆ ಮಣಿ, ಹವಳಾದಿಗಳನ್ನು ಕೂರಿಸಿ ತಯಾರಿಸುವರು. ಇದನ್ನು ಕೈಗೆ ಸಿಕ್ಕಿಸಿ, ಹಗ್ಗವನ್ನು ಎಳೆದಾಗ ಇದರ ಎರಡು ಬದಿಗಳು ಸೇರುವುವು.

ಹಿಂದೆ, ಸ್ತ್ರೀವೇಷಕ್ಕೂ ಚಿಕ್ಕ ಕೈಕಟ್ಟುಗಳನ್ನು ಕಟ್ಟುತ್ತಿದ್ದರು.

ಕೈ ಚಿನ್ನ (ಬ./ಉ.) : 1. ಕೈಕಟ್ಟು, ತೋಳ್ಕಟ್ಟು, ಭುಜಕೀರ್ತಿ ಎಲ್ಲವೂ ಸೇರಿ ಕೈಯ ಎಲ್ಲ ಆಭರಣಗಳು. 2. ಕೈಕಟ್ಟು.

ಕೈದೀಪ : ಹಿಡಿ ಅಥವಾ ಕೊಕ್ಕೆಯಿಂದ ಹಿಡಿದುಕೊಳ್ಳುವ ದೀಪ. ಕೈ ಬೆಳಕು. ಚೌಕಿಯಲ್ಲಿ ದೇವರ ಪೂಜೆಗೆ, ರಂಗದಲ್ಲಿ ಪೂಜೆಗೂ ಬಳಕೆ. ಹಿಮ್ಮೇಳವು ರಂಗಕ್ಕೆ ಬರುವಾಗಲೂ, ಅನಂತರ ದೇವರ ಕಿರೀಟ ಬರುವಾಗಲೂ ಕೈ ದೀಪವನ್ನು ಮುಂದಿಟ್ಟುಕೊಂಡು ಬರಬೇಕು.

ಕೈಪ್ರತಿ : 1. ಪ್ರಸಂಗದ ಹಸ್ತಪ್ರತಿ. ಮುದ್ರಿತವಲ್ಲದ್ದು ಎಂಬ ಅರ್ಥ.

2. ಬಳಕೆಯಲ್ಲಿರುವ ಪ್ರಸಂಗ ಪಾಠಕ್ಕಿಂತ ಪೂರ್ತಿಯಾಗಿ, ಅಥವಾ ಭಾಗಶಃ ಭಿನ್ನವಾಗಿರುವ, ಭಾಗವತನ ಸ್ವಂತ ಪ್ರತಿ.

ಕೈಸನ್ನೆ : 1. ಹಸ್ತಾಭಿನಯ, ಕೈಗಳಿಂದ ತೋರುವ ಮುದ್ರೆಗಳು.

2. ಮಾತಿನೊಂದಿಗೆ ಅಥವಾ ಮಾತಿಲ್ಲದೆ, ಮಾಡುವ ಕೈಸನ್ನೆ.

3. ಮಾತಿನ ಅಭಿಪ್ರಾಯಕ್ಕೆ ವಿರುದ್ಧವಾಗಿ ಮಾಡುವ ಕಪಟ ಸೂಚನೆಯ ಕೈಕರಣ.

4. ಭಾಗವತನು ರಂಗದಲ್ಲಿ ಸೂಚನೆ ನೀಡಲು ಬಳಸುವ ಸಂಜ್ಞೆ, ಕೈಭಾಷೆ.

ಕೈಸರ/ಕಾಯಿಸರ (ತೆ.) : ಕೈಗೆ, ಮಣಿಗಂಟಿನ ಮೇಲಿಂದ, ಕೈಕಟ್ಟಿಗೆ ಸಿಕ್ಕಿಸುವ ಕಾಯಿಸರ. ಮರದಿಂದ ತಯಾರಿಸಿ ಬೇಗಡೆ ಹಚ್ಚಿದ ಗುಂಡುಗಳನ್ನು ಪೋಣಿಸಿದ ಬಳೆ. ಇದರ ತುದಿಗೆ ಗೊಂಡೆ ಇರುತ್ತದೆ. ಕೈಯ ಚಲನೆಯೊಂದಿಗೆ ಅಲುಗಾಡುತ್ತಿರುತ್ತದೆ.

ಕೊಂದೆ/ಕೊಂದೆಮರ : ಕಕ್ಕೆಮರ (Cassia fistula) ಮದ್ದಲೆ ತಯಾರಿಗೆ ಬಳಕೆ.

ಕೊಂಬು : ಮಹಿಷಾಸುರ, ಮಹಿಷಿ, ನಂದಿನಿ ವೇಷಗಳ ತಲೆಗೆ ಕಟ್ಟುವ ಜೋಡಿ ಕೋಡು. ಮರ ಅಥವಾ ಬಟ್ಟೆಯ ಆಧಾರಕ್ಕೆ, ಜರಿ ಸುತ್ತಿ ತಯಾರಿಸುವುದು.

ಕೊಕ್ಕು : 1. ಹಾಳೆ, ಕಾಗದ ಅಥವಾ ಬಟ್ಟೆಯಿಂದ ತಯಾರಿಸಿದ ಕೃತಕ ಕೊಕ್ಕು.

2. ಮೂಗಿನ ಮೇಲೆ ಹಣೆಯ ತನಕ ಬಣ್ಣದಿಂದ ಬರೆಯುವ ಕೊಕ್ಕು.

– ಗರುಡ, ಜಟಾಯು, ಹಂಸ ಮುಂತಾದ ವೇಷಗಳಲ್ಲಿ ಪ್ರಯುಕ್ತ.

ಕೊಕ್ಕೆ : 1. ಮದ್ದಲೆ, ಚೆಂಡೆಗಳಿಗೆ ಬಾರ ಸಿಕ್ಕಿಸುವುದಕ್ಕೆ, ಬಾರಗಳನ್ನು ಎಳೆದು ಸ್ವರ ಸರಿಮಾಡುವುದಕ್ಕೆ ಬಳಸುವ ಕಬ್ಬಿಣದ ಕೊಕ್ಕೆ.

2. ಅರ್ಥಗಾರಿಕೆಯಲ್ಲಿ, ಔಚಿತ್ಯ ಮೀರಿದ, ಉಪದ್ರವಕಾರಿಯಾದ ಪ್ರಶ್ನೆ; ಕುಟಿಲ ಪ್ರಶ್ನೆ. ಕೊಕ್ಕೆ ಹಾಕುವುದು – ಜಾನಪದ ವಿಮರ್ಶಾ ಪರಿಭಾಷೆ.

ಕೊಕ್ಕೆ ಚಿಕ್ಕ : 1. ಕೀಚಕ ವಧೆಯಲ್ಲಿ ಕೀಚಕನ ಜತೆಗೆ ಬರುವ ಹಾಸ್ಯಪಾತ್ರ.

2. ಪೂರ್ವರಂಗದಲ್ಲಿ ಬರುವ ಹಾಸ್ಯಪಾತ್ರ. ಕೊಕ್ಕೆ ಚಿಕ್ಕನ ಹಾಸ್ಯ.

ಕೊಡಲಿ : ಪರಶು ಆಯುಧ. ಮರ ಅಥವಾ ಮೆದು ತಗಡಿನ ತಯಾರಿ. ಹಳದಿ ಅಥವಾ ಬಿಳಿ ಬೇಗಡೆ ಅಥವಾ ಬಣ್ಣ ಹಚ್ಚಿರುತ್ತಾರೆ. ಅಲಗನ್ನು ಕೆಂಪಾಗಿಸುವುದೂ ಉಂಟು.

ಕೊಡೆ : 1. ಹಾಸ್ಯಪಾತ್ರಗಳು ಹಿಡಿದುಕೊಳ್ಳುವ ಓಲೆಗರಿ ಕೊಡೆ.

ಕೀಚಕ ವಧೆ ಪ್ರಸಂಗದಲ್ಲಿ, **ಕೊಕ್ಕೆಚಿಕ್ಕನು**, ಕೀಚಕನ ಪ್ರವೇಶಕ್ಕೆ ಬೆಳಕು ಸಾಲದೆಂದು ಹೇಳಿ, ಕೊಡೆಗೆ ಬೆಂಕಿಕೊಟ್ಟು ಉರಿಸುವ ದೃಶ್ಯವಿರುತ್ತದೆ.

2. ನೋಡಿ : **ಸತ್ತಿಗೆ.**

ಕೊನ್ನಾರಪಟ್ಟಿ (ಉ.) : ವೇಷಭೂಷಣ ಜೋಡಣೆಗೂ, ಕೃತಕ ಕೂದಲು ತಯಾರಿಗೂ ಬಳಸುವ ಹಗ್ಗ, ಅದರ ಗಿಡ. ಕೋಲ್ನಾರು. ನಾರು ಕೋಲು.

ಕೊಪ್ಪು : ಸ್ತ್ರೀವೇಷದ ಕಿವಿಯ ಆಭರಣ. ಮುತ್ತಿನ ಕೊಪ್ಪು. ಕಿವಿಯ ಮೇಲ್ಭಾಗದಲ್ಲಿ ಧರಿಸುವ ಆಭರಣ. ಕೊಪ್ಪು ಕಿವಿಯ ಪಾತ್ರೆಯಲ್ಲೂ, ಅದರ ಕಡ್ಡಿ ಕಿವಿಯ ಮೇಲೆಯೂ ನಿಲ್ಲುತ್ತವೆ. ಇದು ಮುತ್ತುಗಳ ಜಾಲರಿಯಂತೆ ಅಥವಾ ಮುದ್ದೆ ಯಂತಿರುತ್ತದೆ. ಕೊಪ್ಪಿನ ಮೇಲ್ಭಾಗದ ಕಡ್ಡಿಯಿಂದ ಹೊರಟ **ತಾಂಗು ಸರಪಣಿಯನ್ನು** ಕೂದಲಿಗೆ ಸಿಕ್ಕಿಸುತ್ತಾರೆ. ಇನ್ನೊಂದು ಸರಪಣಿ, ಓಲೆ ಸರಪಣಿಯೂ ಇರುವುದುಂಟು. ಇದು ಕಿವಿಯ ಅಡಿಯಿಂದ ಬಂದು ಮೇಲೆ ಮುಡಿಯ ಪಕ್ಕಕ್ಕೆ ಸೇರುತ್ತದೆ. ಕೊಪ್ಪುಗಳಲ್ಲಿ ಹಲವಾರು ವಿನ್ಯಾಸದವು, ಆಕಾರದವು ಇವೆ.

ಕೊರಡು (ಬ.) : ಹಾಸ್ಯಗಾರನ ಕೈಯಲ್ಲಿರುವ ಮರದ ಕೋಲು.

(ಗ.) : ಗಟ್ಟದ ಕೋರೆ ಸಂಪ್ರದಾಯ ಪ್ರಕಾರ ಕೊಡಂಗಿಯ ಕೈಯಲ್ಲೂ ಇರುವ ಮರದ ಕೋಲು.

ಕೊರವಂಜಿ : ಕಣಿ ಹೇಳುವ ಕೊರವಂಜಿ ವೇಷ. ಕಪ್ಪು ಸೀರೆಯನ್ನು ಅಂತರಗಳಾಗಿ ಅಥವಾ ಕಚ್ಚೆ ಹಾಕಿ ಉಡುವುದು. ತಲೆಯ ಮೇಲ್ಬದಿಯಲ್ಲಿ ಓರೆ ಮುಡಿ. ಕುತ್ತಿಗೆಗೆ ಕಾಯಿ, ಹವಳ, ಮಣಿಗಳ ಸರಗಳಿರುತ್ತವೆ. ಈ ವೇಷವು ಹಾಡುತ್ತ ಪ್ರವೇಶಿಸುತ್ತದೆ. ತೆಲುಗು, ತಮಿಳು ಭಾಷೆಗಳನ್ನು ಮಿಶ್ರ ಮಾಡಿ ಮಾತಾಡುವ ಕ್ರಮವೂ ಇತ್ತು.

ಕೊರಳಡ್ಡಿಗೆ : ಅಡ್ಡಿಗೆ, ಅಡ್ಡಿಕೆ. ಕೊರಳಿಗೆ ತಾಗಿ ನಿಲ್ಲುವ ಪಟ್ಟಿಕೆಯಂತಹ ಆಭರಣ. ಇದು ಕಾಯಿ, ಹಲ್ಲೆ, ಮಣಿಗಳ ಜೋಡಣೆಯಾಗಿರ ಬಹುದು ಅಥವಾ ಏಕ ಘನ ಪಟ್ಟಿಯಾಗಿರ ಬಹುದು. ಕೊರಳಾರಕ್ಕಿಂತ ಮೇಲೆ ಕುತ್ತಿಗೆಯಲ್ಲಿ ನಿಲ್ಲುತ್ತದೆ.

ಕೊರಳ ಪಟ್ಟಿ (ಉ.) : 1. ಕೊರಳಿಗೆ ತಾಗಿ ನಿಲ್ಲು ವಂತೆ ಕಟ್ಟುವ ಪಟ್ಟಿಕೆ. ಬಟ್ಟೆ ಮತ್ತು ಜರಿಯಿಂದ ಅಥವಾ ಮರದ ಚಿಕ್ಕ ಹಲ್ಲೆಗಳಿಂದ ತಯಾರಿಸು ವಂತಹದು.

2. ನೋಡಿ : **ಅಡ್ಡಿಗೆ, ಕೊರಳಡ್ಡಿಗೆ.**

ಕೊರಳಹಾರ : ನೋಡಿ : 1. **ಕೊರಳಾರ, ಕುರಲಾರ, ಎದೆಪದಕ. ಎದೆಹಾರ.**

2. ಕೊರಳಿಗೆ ಹಾಕಿಕೊಳ್ಳುವ ಗುಂಡುಸರ.

ಕೊರಳಾರ : ನೋಡಿ. **ಕೊರಳಹಾರ, ಕುರಲಾರ. ಎದೆಹಾರ.**

ಕೊರ್ನಾಡು ಸೀರೆ (ಪಟ್ಟಿ) (ಬ.) : ಹಳದಿ, ಕಪ್ಪು ಬಣ್ಣಗಳ ಚೌಕುಳಿಗಳ ಸೀರೆ. ಕಸೆ ಸೀರೆ.

ಕೊರ್ನಾಡು ಎಂಬಲ್ಲಿಂದ ಬರುತ್ತಿದ್ದ ಸೀರೆ. (ಇಳಕಲ್ ಸೀರೆ ಎಂದ ಹಾಗೆ) – ಅನಂತರ ಬ್ರಹ್ಮಾವರ, ಉಡುಪಿ ಮಗ್ಗಗಳಲ್ಲೂ ಉತ್ಪಾದನೆ ಆಗತೊಡಗಿತು.

– ಈ ಕೊರ್ನಾಡು ಸೀರೆಯು ಉಡುಪಿ, ಕುಂದಾಪುರ ಪ್ರದೇಶದ ಕೆಲವು ಜನಾಂಗ ಗಳಲ್ಲಿ ಮದುವೆ ಸೀರೆಯಾಗಿ ಕಡ್ಡಾಯ ಬಳಕೆಯಿದೆ.

ಕೊಳಗ (ಉ.) : 1. ಕಿರೀಟದ ಮಧ್ಯಭಾಗದ ಕಲಶಾಕೃತಿ, ಕಿರೀಟದ ಬುರುಡೆ.

2. ಚೆಂಡೆ, ಮದ್ದಲೆಗಳ ಕಳಸಿಗೆ. ಮರದ ಟೊಳ್ಳುಕುತ್ತಿ.

ಕೋಟೆ : 1. ಅಭಿನಯ-ಮೈಮ್-ಮೂಲಕ ಕಟ್ಟುವ ದೃಶ್ಯ. ಉದಾ: ದ್ರೋಣನು ದುರ್ಯೋಧನನಿಗೆ ಬಾಣಗಳ ಕೋಟೆಕಟ್ಟಿ ತೋರಿಸುವುದು.

2. ಚಕ್ರವ್ಯೂಹ. ಕೌರವ ಪಕ್ಷದ ವೇಷಗಳು ಕೈ ಕೈ ಹಿಡಿದು ಅಥವಾ ಆಯುಧಗಳಿಗೆ ಕೈ ಹಿಡಿದು ವೃತ್ತಾಕಾರವಾಗಿ ನಿಲ್ಲುವ ದೃಶ್ಯ. ಇದರಲ್ಲಿ ಪಾಂಡವ ಪಕ್ಷದ ವೇಷಗಳೂ, ಹಂಗಾಮಿಯಾಗಿ, ಕೌರವಪಕ್ಷದ ವೀರರೆಂಬ ನೆಲೆಯಲ್ಲಿ (ತಾತ್ಕಾಲಿಕ ಪಾತ್ರ ಬದಲಾವಣೆ ಮಾಡಿಕೊಂಡು) ನಿಲ್ಲುತ್ತಾರೆ.

3. ಕೃಷ್ಣನ ಒಡ್ಡೋಲಗದಲ್ಲಿ ಸ್ತ್ರೀವೇಷಗಳು ಕೃಷ್ಣನನ್ನು ಬಂಧಿಸಿಡಲು ವೃತ್ತಾಕಾರವಾಗಿ ನಿಲ್ಲುವುದು. ಕೃಷ್ಣನು ತಪ್ಪಿಸಿಕೊಂಡು, ಆತನ ಮಿತ್ರ ಗೊಲ್ಲಮಾಧವ (ಮಕರಂದ)ನು ಸಿಕ್ಕಿಬೀಳುವನು. ನೋಡಿ: **ಕೃಷ್ಣನ ಒಡ್ಡೋಲಗ.**

ಕೋಟೆ ಕರ್ಣ (ತೆ.) : ಅಭಿಮನ್ಯು ಕಾಳಗದಲ್ಲಿ ಚಕ್ರವ್ಯೂಹ ದೃಶ್ಯಕ್ಕೆ ಬರುವ ಕರ್ಣನ ಪಾತ್ರ. ಮೊದಲು ಪಾಂಡವರ ಒಡ್ಡೋಲಗದಲ್ಲಿ ಬಂದ ಅರ್ಜುನ ವೇಷವೇ, ಕಿರೀಟ ಕಳಚಿ, ವಸ್ತ್ರದ ರುಮಾಲು ಸುತ್ತಿ ಬರುವುದು ಹಳೆ ಕ್ರಮ.

ಕೋಡಂಗಿ/ಕೋಡೆಂಗಿ : ಸಭಾಲಕ್ಷಣವೆಂಬ ಪೂರ್ವರಂಗದ ಮೊದಲ ವೇಷಗಳು. ಕುಕ್ಕುತಪ್ಪು, (ಮಾವಿನ ಸೊಪ್ಪು), ದವರು, ಡೌರು-ವೇಷಗಳೆಂದೂ ಹೆಸರಿದೆ. ಮಾವಿನ ಸೊಪ್ಪನ್ನು ಕಟ್ಟಿಕೊಳ್ಳುವುದರಿಂದ ಕುಕ್ಕುತಪ್ಪು (ತುಳು) ಮಾವಿನ ಸೊಪ್ಪು, ಸೊಪ್ಪಿನ ವೇಷವೆಂದೂ, ದವರು ನಿಲುವಂಗಿ ಹಾಕುವುದರಿಂದ ದವರು, ಡೌರು, ಡೌರಂಗಿ ವೇಷವೆಂದೂ ಹೆಸರು. ಕೋಡಂಗಿ ವೇಷಗಳು ಎರಡು.

ಈ ವೇಷಕ್ಕೆ ಹಿಂದೆ ಉದ್ದ ನಿಲುವಂಗಿ ಮಾತ್ರ ಇದ್ದುದು. ಈಗ ಚಲ್ಲಣ, ಸ್ವಲ್ಪ ಗಿಡ್ಡದ ನಿಲುವಂಗಿ ತೊಡುತ್ತಾರೆ. ಸೊಂಟಕ್ಕೆ ಜಟ್ಟಿ ಬಿಗಿದು, ತಲೆಗೆ ರುಮಾಲು ಸುತ್ತಿ ಮಾವಿನ ಸೊಪ್ಪು ಸಿಕ್ಕಿಸುವರು. ಮುಖಕ್ಕೆ ಬಿಳಿ ಬಣ್ಣ ಅಥವಾ ಬಿಳಿ ನಾಮಗಳು. ಸಭಾಲಕ್ಷಣ ಆರಂಭದಿಂದ, ಅರ್ಧನಾರಿ ವೇಷದವರೆಗೆ ಕೋಡಂಗಿಗಳು ರಂಗದಲ್ಲಿರುತ್ತಾರೆ. ಸ್ತುತಿಪದ್ಯಗಳಿಗೆ ಕುಣಿಯುವುದು, ಮಧ್ಯೆ ಆಹಾ, ಭಾಲಾ, ಶಾಭಾ ಎಂದು ಒತ್ತುಕೊಡುವುದು, ಷಣ್ಮುಖ ಸುಬ್ರಾಯ, ಶಿವ, ಅರ್ಧನಾರಿ ಮುಂತಾದ ವೇಷಗಳನ್ನು ಮಾತಾಡಿಸುವುದು ಇವರ ಕೆಲಸ. ಈ ಇಬ್ಬರು ಕೋಡಂಗಿಗಳಲ್ಲಿ ಬಲದ ಕೋಡಂಗಿ, ಎಡದ ಕೋಡಂಗಿ ಎಂದು ವಿಭಾಗವಿದೆ. ಅವರು ಆಯಾ ಪಾರ್ಶ್ವದಲ್ಲೇ ನಿಲ್ಲಬೇಕು.

ಕೋಡಂಗಿ ವೇಷಗಳನ್ನು, ಮೇಳದಲ್ಲಿ ಅಭ್ಯಾಸಕ್ಕಾಗಿ ಬಂದು ಸೇರಿರುವ ಹುಡುಗರು **(apprentices)** ವಹಿಸುವುದು. ರಂಗ ವ್ಯವಸಾಯದ ಆರಂಭದ ವೇಷವಿದು. ಇದರಲ್ಲಿ ಪಳಗಿದವರು ಅನಂತರ **ಬಾಲಗೋಪಾಲ** ವೇಷಗಳಿಗೆ ಭಡ್ತಿಹೊಂದುವರು.

ಗಟ್ಟದಕೋರೆ ಸಂಪ್ರದಾಯದಲ್ಲಿ ಕೋಡಂಗಿಯು ಒಬ್ಬನೇ ಇರುವನು. ಹಾಸ್ಯಗಾರನಿಗೂ ಕೋಡಂಗಿಯೆಂದು ಹೆಸರಿದೆ.

ಈ ಕೋಡಂಗಿಗಳೆಂಬವರು, ನಾಟ್ಯಶಾಸ್ತ್ರ ಸಂಪ್ರದಾಯದಲ್ಲಿ ಉಕ್ತರಾದ ಪಾರಿಪಾರ್ಶ್ವಕರೆಂದೂ, ಸ್ತುತಿ ಪಾಠಕರೆಂದೂ ಮೂಲ ಪರಿಕಲ್ಪನೆ ಎಂದು ದಿ। ಕುಕ್ಕಿಲ ಕೃಷ್ಣ ಭಟ್ಟರ ಮತ (ಮಂದಾರ: ಕುಕ್ಕಿಲರ ಲೇಖನ: 1986).

ಕೋಡಂಗಿ ಎಂಬ ಪದಕ್ಕೂ, ಕೋಡಗ ಎಂಬುದಕ್ಕೂ ಸಾಮ್ಯವಿದೆಯಷ್ಟೆ. ಹಾಸ್ಯಗಾರನಿಗೂ ಹನುಮ ನಾಯಕನೆನ್ನುವರು. ಸಂಸ್ಕೃತ ನಾಟಕಗಳಲ್ಲೂ ವಿದೂಷಕನಿಗೆ ಕಪಿ, ಹರಿರೂಪ, ವಾನರ, ಹರಿದೇಹಿತ, ಮುಂತಾದ ವಿಶೇಷಣಗಳಿವೆ. (ಕುಕ್ಕಿಲ: ಅದೇ ಲೇಖನ) ಹೀಗಾಗಿ, ಕೋಡಂಗಿಯೆಂಬುದು, ಹಾಸ್ಯಗಾರನ ಮೂಲ ರೂಪವಾಗಿದ್ದು, ರಂಗಭೂಮಿ ಬೆಳೆದಂತೆ, ಕೋಡಂಗಿಯೂ, ಹಾಸ್ಯಗಾರನೂ ಬೇರೆ ಬೇರೆ ವೇಷಗಳಾಗಿರಬಹುದು.

ಕೋಡೆಂಗಿ = ನೋಡಿ. ಕೋಡಂಗಿ.

ಕೋರು (ಉ./ಬ.) : ಪಗಡಿ, ಮುಂಡಾಸುಗಳಿಗೆ ಸುತ್ತುವ ಜರಿಲಾಡಿ. ಹಿಂದೆ ಕೋರುಬಟ್ಟೆಯನ್ನು ಅಥವಾ ಜರಿಪುಡಿ ಹಚ್ಚಿದ ಪಟ್ಟಿಯನ್ನು ಬಳಸುತ್ತಿದ್ದುದರಿಂದ ಈ ಹೆಸರು ಬಂದಿರಬೇಕು.

ಕೋರೆತಾಳ (ಉ.) : 'ತಿತ್ತಿತ್ತೈ' ಎಂಬ ನಡೆಯ ನಾಮಾಂತರ. ಇದು ಅಷ್ಟತಾಳದ ವಿಲೋಮದಂತಿದ್ದು 4 + 3 ಮಾತ್ರೆಗಳ ಗತಿ. ಇದು ಗತಿಭೇದವಾದರೂ, ತಾಳವೆಂದೇ ರೂಢಿ. ಇದನ್ನು ಆದಿ, ಏಕ, ಅಷ್ಟತಾಳಗಳ ಪದ್ಯಗಳಿಗೆ, ಉತ್ತರಾರ್ಧದಲ್ಲಿ ಬಳಸುವರು. ಕೋರೆತಾಳದಲ್ಲೆ ಇಡಿಯ ಪದ್ಯವನ್ನೂ ಹೇಳುವುದಿದೆ.
ನೋಡಿ: **ತಿತ್ತಿತ್ತೈ.**

ಕೋರೆ ಪಗಡಿ : ಕಿರಾತನು ಧರಿಸುವ ಓರೆ ಪಗಡಿ. ಇದು ತಲೆಯ ಮೇಲೆ ನೇರವಾಗಿರದೆ, ಒಂದು ಪಾರ್ಶ್ವಕ್ಕೆ ತಿರುಗಿದಂತಿರುವುದು. ಇದಕ್ಕೆ ಕೇದಗೆ

ಕಟ್ಟುವುದಿಲ್ಲ. ಮುಡಿ ಕೇದಗೆಯ ಬದಲು **ಕೆಂಚಣೆಲಬಾಲವನ್ನು** ಕಟ್ಟುವರು. ಕೂದಲಿನ ಒಂದು ಕುಚ್ಚು ಪಗಡಿಯ ಹೊರಗೆ ಬಂದು, ನೇತಾಡಬೇಕು. ಒಂದಕ್ಕೊಂದು ಇದಿರು ಬದುರಾಗಿ ಎರಡು ಕೋರೆ ಮುಂಡಾಸುಗಳನ್ನು ಕಟ್ಟಿದರೆ **ಜೋಡುಕೋರೆ.**

ಕೋರೆ ಮುಂಡಾಸು (ಬ.) = ನೋಡಿ : **ಕೋರೆ ಪಗಡಿ, ಓರೆ ಪಗಡಿ.**

ಕೋರೈಸುವುದು (ಬ.) : ಏರು ಸ್ವರದ ಆಲಾಪ ಅಥವಾ ಆರ್ಭಟ.

ಕೋಲು ಕಿರೀಟ : ರಾಜವೇಷಗಳ ಕಿರೀಟ. ಮಧ್ಯದಲ್ಲಿ ಕಲಶ, ಮೇಲೆ ನವಿಲು ಕುಂಚ, ಎಡಬಲಗಳಿಗೆ S ಆಕಾರದ ರಚನೆ ಇರುವ ಶಿರೋಭೂಷಣ. ಉದ್ದ ವಾಗಿ ಇರುವುದರಿಂದ ಕೋಲು ಕಿರೀಟ. 'ರಾಜವೇಷ'ಗಳು- ಎಂದರೆ 'ಪೀಠಿಕೆ ವೇಷ', (ತೆ.) ಇದಿರು ವೇಷ (ತೆ.) ಗಳು- ಈ ಕಿರೀಟ ಧರಿಸುತ್ತವೆ. 'ರಾಜ' ಅಲ್ಲದ, ಸೇನಾಪತಿ, ಅರೆಬಣ್ಣ ವೇಷಗಳಿಗೂ ಬಳಕೆಯುಂಟು.

ನೋಡಿ : **ಕಿರೀಟ, ಪೂಂಬೆ ಕಿರೀಟ.**

ಕೋಲುಗಗ್ಗರ (ತೆ.) : ಹಿಂದೆ, ಬಣ್ಣದವೇಷಗಳು ಕಾಲಿಗೆ ಕಟ್ಟಿಕೊಳ್ಳುತ್ತಿದ್ದ ಚಿಕ್ಕ ಗಗ್ಗರ. ಎರಡು ಟೊಳ್ಳು ಕೊಳವೆಗಳನ್ನು ಜೋಡಿಸಿದ ದೋಣಿಯಾಕಾರದ ಗಗ್ಗರ. ಕೊಳವೆಗಳ ಒಳಗೆ ಶಬ್ದಕ್ಕಾಗಿ ಕಾಯಿಗಳಿರುತ್ತವೆ. ಭೂತದ ವೇಷಗಳ ಗಗ್ಗರಕ್ಕಿಂತ ಚಿಕ್ಕದು. ಈಗ ಬಳಕೆಯಲ್ಲಿಲ್ಲ.

ಕೋಲ್ತಿರಿ (ತೆ.) : ಕೋಲಿಗೆ ಬಟ್ಟೆ ಸುತ್ತಿ ಎಣ್ಣೆ ಯಲ್ಲಿ ಮುಳುಗಿಸಿ ಉರಿಸಲು ಬಳಸುವ ಕೋಲು ಪಂಜು. ಕೋಲುಬತ್ತಿ.

ಇದನ್ನು **ಕೋಳಿ** ಅಥವಾ **ಕುಂಬಳ ಕಡಿಯುವ** ಬಲಿವಿಧಿಗೂ **ತಟ್ಟೀಬಳಿ** ಎಂಬ ಹಾಸ್ಯ ದೃಶ್ಯಕ್ಕೂ ಬಳಸುವರು.

ವೀರಭದ್ರನ ಕಿರೀಟದ ಹಿಂಬದಿಯ ಅಣೆ ಅಥವಾ ಅಟ್ಟೆಗೆ ಕೋಲ್ತಿರಿ ಸಿಕ್ಕಿಸಿ ಉರಿಸುವುದಿದೆ.

ಕೋಳದ ಕಡ್ಡಿ (ಬ.) : ಕೋಳದ, ಎಂದರೆ ಕೈಕಟ್ಟಿನ ಕಡ್ಡಿ. ಕೈಕಟ್ಟಿನ ಎರಡು ತುದಿಗಳಲ್ಲಿ ಬರುವ ಕಡ್ಡಿ ಯಾಕಾರದ, ಒಡವೆಯ ಭಾಗ. ಕೈಕಟ್ಟಿನ ಹಗ್ಗವನ್ನು ಎಳೆದಾಗ ಕೋಳದ ಕಡ್ಡಿಗಳು ಹತ್ತಿರ ಬರುತ್ತವೆ.

ಕೋಳಿ ಕಡಿಯುವುದು (ತೆ.) : ದೇವೀ ಮಹಾತ್ಮೆ ಪ್ರಸಂಗದಲ್ಲಿ ಜರಗುತ್ತಿದ್ದ ಒಂದು ವಿಧಿ. ಪ್ರತಿಯೊಬ್ಬ ರಾಕ್ಷಸನು ಸಾಯುವಾಗ ಒಂದು ಕೋಳಿಯನ್ನು, ಮಂತ್ರವಾದಿಯ ನೆರವಿನೊಂದಿಗೆ, ಅಶುಭ ಪರಿಹಾರಕ್ಕಾಗಿ ಕಡಿಯುತ್ತಿದ್ದರು. ಕೋಳಿಯ ಬದಲು, ಕುಂಬಳ ಕಾಯಿಯನ್ನು ಕಡಿಯುವ ಕ್ರಮವು ರೂಢಿಗೆ ಬಂದಿತು. ಈಗ ಇವೆರಡೂ ಇಲ್ಲ.

ನಾಟ್ಯಶಾಸ್ತ್ರ ಸಂಪ್ರದಾಯದಲ್ಲೂ ರಂಗದಲ್ಲಿ ಆರಂಭಕ್ಕೆ ವಿಘ್ನ ಶಾಂತಿಗಾಗಿ ಕೋಳಿ ಬಲಿ ಜರಗುವ ವಿಚಾರವಿದೆ. (ನಾಟ್ಯಶಾಸ್ತ್ರ : ಮೂರನೆಯ ಅಧ್ಯಾಯ.)

ನೋಡಿ : **ರಂಗಸ್ಥಳ.**

ಕೌತ = ನೋಡಿ : **ಕೌತುಕ.**

ಕೌತಕಿ = ನೋಡಿ : **ಕೌತುಕ.**

ಕೌತಕಿತ = ನೋಡಿ : **ಕೌತುಕ.**

ಕೌತ್ವ = ನೋಡಿ : **ಕೌತುಕ.**

ಕೌತುಕ/ಕವುತಕ/ಕೌತಕಿತ/ಕೌತಕಿ/ಕೌತ್ವ/ಕೌತ : ಗಣಪತಿ ಸ್ತುತಿ ಪರವಾದ ನರ್ತನ ವಿಧಿ. ಪೂರ್ವರಂಗದಲ್ಲಿ ಬರುತ್ತದೆ. ಭಾರತದ ಹಲವು ಸಾಂಪ್ರದಾಯಿಕ ರಂಗಭೂಮಿಗಳಲ್ಲಿದು ಬಳಕೆ ಯಲ್ಲಿದೆ. ನೋಡಿ : **ಗಣಪತಿ ಕೌತುಕ.**

ಕೌಸಲ್ಯೆ ಮುಡಿ (ಉ.) : ಸ್ತ್ರೀವೇಷದ ದೊಡ್ಡ ಚಕ್ರಮುಡಿ. ಅದರ ಸುತ್ತ ಜರಿ, ಹಿಂಬದಿಗೆ ತಿರುಪಿನ ಹೂಗಳಿರುತ್ತಿದ್ದುವು.

ಕ್ಯಾಂಪ್ : ಆಟದ ಮೇಳದ ತಿರುಗಾಟ ನಡೆಯುವ ವಿವಿಧ ಸ್ಥಳಗಳು, ಊರುಗಳು. ಉದಾ : ''ನಮ್ಮ ಮೇಳಕ್ಕೆ ನಾಡಿದ್ದು ಉಡುಪಿ ಕ್ಯಾಂಪ್''. ಸು. 1967ರ ಅನಂತರ ಒಂದೇ ದಿನದ ಕ್ಯಾಂಪುಗಳು ಬಳಕೆಗೆ ಬಂದಿವೆ. ಅದಕ್ಕಿಂತ ಮೊದಲು ಎರಡು, ಮೂರು, ಏಳು ದಿನಗಳ ವರೆಗೂ ಒಂದೇ ಕ್ಯಾಂಪ್ ಇರುತ್ತಿತ್ತು. ಒಂದು ಮೇಳವು ಇಡಿಯ ಅವಧಿಯನ್ನು ಒಂದೇ ಕ್ಯಾಂಪಿನಲ್ಲಿ, ಸಿದ್ಧ ರಂಗಮಂದಿರದಲ್ಲಿ ನಡೆಸಿದ್ದುಂಟು. (ಉದಾ : ಮಂಗಳೂರಲ್ಲಿ ಕರ್ನಾಟಕ ಮೇಳ 1966-70ರ ಅವಧಿಯಲ್ಲಿ ನಡೆಸಿದ ಕ್ಯಾಂಪ್).

ಕ್ಯಾಂಪ್ ಮ್ಯಾನೇಜರ್ : ಆಟದ ತಿರುಗಾಟದ ಸ್ಥಳಗಳಿಗೆ ಹೋಗಿ, ಕ್ಯಾಂಪುಗಳನ್ನು ನಿರ್ಣಯಿಸಿ, ಅಲ್ಲಿ ಸ್ಥಳೀಯ ಸಹಕಾರ, ಬಿಡಾರ, ಲೈಸೆನ್ಸ್, ಪ್ರಚಾರ ಮೊದಲಾದ ವ್ಯವಸ್ಥೆಗಳನ್ನು ಮಾಡುವ ವ್ಯಕ್ತಿ. ಮೇಳದ ಆಡಳಿತ ಸಿಬ್ಬಂದಿಗಳಲ್ಲೊಬ್ಬ.

ಕ್ರಮ : ರಂಗಸ್ಥಳ, ಚೌಕಿ, ತಿರುಗಾಟ, ಮುಂತಾಗಿ, ಯಕ್ಷಗಾನಕ್ಕೆ ಸಂಬಂಧಿಸಿ ಸಮಗ್ರವಾಗಿ

ಅನ್ವಯವಾಗುವ ನಿರ್ಣೀತ ಪದ್ಧತಿಗಳು, ಹಳೆಯ ಕ್ರಮಗಳು, ಪೂರ್ವ ಸಂಪ್ರದಾಯಗಳು. (Systems and Conventions)

ಮುಖ್ಯವಾಗಿ, ಕಲೆಗೆ, ರಂಗಸ್ಥಳಕ್ಕೆ ಸಂಬಂಧಿಸಿದ ಪದ್ಧತಿಗಳು. ಉದಾ: ಬಣ್ಣದ ವೇಷವು ಎರಡು ಬಾರಿ ತೆರೆತಗ್ಗಿಸಿ ಆರ್ಭಟಿಸಬೇಕು. ಕರ್ಣಾರ್ಜುನ ಯುದ್ಧದಲ್ಲಿ ಅರ್ಜುನನು ಮೊದಲು ರಥದಲ್ಲಿ ನಿಲ್ಲಬೇಕು ಇತ್ಯಾದಿ. ಇಂತಹ ಕ್ರಮಗಳು ನೂರಾರು ಇವೆ. ಹೊಸಕ್ರಮಗಳೂ ನಿರ್ಮಿತವಾಗಿವೆ. ನೋಡಿ: ನಿರ್ಣಯ, ನಿಶ್ಚಯ.

ಕ್ರಿಶ್ಚನ್: ಕ್ರಿಶ್ಚಿಯನ್ ಹಾಸ್ಯ. ಪುರ್ಬು ಹಾಸ್ಯವೆಂದೂ ಹೆಸರಿದೆ. ಪೂರ್ವರಂಗದ ಕಟ್ಟು ಹಾಸ್ಯಗಳಲ್ಲೊಂದು. ಕೆಥೋಲಿಕ್ ಕ್ರಿಶ್ಚಿಯನ್ ಅಣಕ. ಕೊಂಕಣಿ ಭಾಷೆಯನ್ನು ಮಿಶ್ರಮಾಡಿ ಮಾತಾಡುವುದು. ನೋಡಿ: ಕಿರಿಸ್ತಾನ.

ಕ್ರೇಪ್ ಹೇರ್: ಮಾರುಕಟ್ಟೆಯಲ್ಲಿ ದೊರಕುವ ಕೃತಕ ಕೂದಲು. ಇತ್ತೀಚೆಗೆ ಗಡ್ಡ, ಮೀಸೆಗಳಿಗೆ ಇದನ್ನು ಬಳಸುವರು.

ಖ

ಖಡ್ಗ: ಮರದ ಅಥವಾ ಲೋಹದ ಕೃತಕ ಆಯುಧ. ಕತ್ತಿ. ನೇರ ಅಥವಾ ಬಾಗಿದ ಆಕಾರಗಳಲ್ಲಿರುತ್ತದೆ. ರಾಕ್ಷಸ ವೇಷಗಳಿಗೆ ಖಡ್ಗವೇ ಆಯುಧ. ಬೇರೆ ಆಯುಧ ಧರಿಸುವ ಕ್ರಮವಿಲ್ಲ.

ಖದಿರ: ಖದಿರ ವೃಕ್ಷ. ಕಾಚಿನ ಮರ. (Acacia Catachu) ಮದ್ದಲೆ ತಯಾರಿಗೆ ಪ್ರಶಸ್ತವಾದ ಮರಗಳಲ್ಲೊಂದು.

ಖಳಪಾತ್ರ: ಬಣ್ಣದ ವೇಷ, ಇದಿರುವೇಷ, ಮೂರನೆಯ ಕಟ್ಟುವೇಷಗಳು ಸೇರಿದಂತೆ, ದುಷ್ಟಪಾತ್ರ. ನಾಟಕರಂಗದಿಂದ ಬಂದ ಪರಿಭಾಷೆ. ಗಟ್ಟದಕೋರೆ, ಮೂಡಲಪಾಯಗಳಲ್ಲಿ ಬಳಕೆಯಿದೆ.

ಖಾವಂದರು (ಬ.): ಮೇಳದ ಯಜಮಾನ ಎಂಬುದರ ಪರ್ಯಾಯಪದ. ಮೇಳಕ್ಕೆ ಸಂಬಂಧಿಸಿದ ದೇವಾಲಯದ ಮುಖ್ಯಸ್ಥನಿಗೂ ಬಳಕೆಯಿದೆ. ನೋಡಿ: ಯಜಮಾನ, ಧಣಿ.

ಗ

ಗಂಗೆ: ಶಿವನ ವೇಷದ ಮುಡಿಗೆ ಸಿಕ್ಕಿಸುವ ಜರಿಯ ಕುಂಚ. ಪ್ರಶ್ನಾರ್ಥಕ ಚಿಹ್ನೆಯಾಕಾರದ ಮರದ ಕೊಕ್ಕೆಗೆ (ಉದಾ: ಕೊಡೆಯ ಕೊಕ್ಕೆ), ಜರಿ ಸುತ್ತಿ ಮಾಡುವುದೂ ಉಂಟು. ಮುಡಿಗೆ, ಚಂದ್ರಕಲೆ, ಪದಕ, ಮುತ್ತಿನ ಹಾರ ಮತ್ತು ಗಂಗೆ-ಇವು ಅಲಂಕರಣಗಳು.

ಗಂಜಿಮೇಳ (ತೆ.): ಕಷ್ಟದಲ್ಲಿ ನಡೆಯುತ್ತಿರುವ, ಸಾಮಾನ್ಯಮಟ್ಟದ ಮೇಳ. ಜಾನಪದರ ವರ್ಣನಾತ್ಮಕ ಪದ. ಗಂಜಿಮೇಳಕ್ಕೆ ಪ್ರತಿಯಾಗಿ, ದೊಡ್ಡ ವೈಭವದ ಮೇಳ-ನೋಡಿ: ಗಜಮೇಳ

ಗಂಟಿನ ಹಗ್ಗ: ಮೇಳದ ಹೊರೆ ಅಥವಾ ಗಂಟುಗಳನ್ನು ಕಟ್ಟುವ ಹಗ್ಗಗಳು.

ಗಂಟು: 1. ವೇಷಭೂಷಣಗಳನ್ನು ಮೈಗೆ ಬಿಗಿಯುವಾಗ ಆಗುವ ಗಂಟುಗಳು, ಕಟ್ಟುಗಳು. ಉದಾ: ಭುಜಕೀರ್ತಿಯ ಗಂಟು, ಸೊಂಟಪಟ್ಟಿಯ ಗಂಟು. 2. ಚೆಂಡೆ, ಮದ್ದಲೆಗಳ ಬಾರಗಳ ಜೋಡಣೆಯ ಸರಸ್ವತಿ ಗಂಟು ಮತ್ತು ಬಾರಗಳ ಬಿಗಿತವನ್ನು ಹೊಂದಿಸಲು ಆಗುವಂತೆ ಬಿಗಿಯುವ ಕುಂಡಲಗಳು. 3. ಮೇಳದ ಸಾಮಗ್ರಿಗಳ ಮೂಟೆ. ಹೊರೆ ಅಥವಾ ಕಟ್ಟು. ಪೆಟ್ಟಿಗೆಗಳು ಸಹ ಇಂತಿಷ್ಟು 'ಗಂಟು'ಗಳೆಂದು ಸಾಮಾನ್ಯ ನಿಶ್ಚಿತವಿರುತ್ತದೆ. ಹೆಚ್ಚಾಗಿ 10 ರಿಂದ 12 ಮೂಟೆಗಳು. ನೋಡಿ: ಹೊರೆ, ಪೆಟ್ಟಿಗೆ.

ಗಂಟು ಉರುಳಿಕೆ (ಬ.): ಮದ್ದಲೆ ಬಡಿತದ ಒಂದು ಪ್ರಭೇದ. ಬೆರಳು ನುಡಿತವಿಲ್ಲದೆ ಕೈಯನ್ನು ಉರುಳಿಸಿ ಬಾರಿಸುವುದು. ಇಲ್ಲಿ ಗಂಟು ಎಂದರೆ ಹೆಬ್ಬೆರಳು ಸಹಿತ ಅರ್ಧ ಹಸ್ತ. ಮದ್ದಲೆ ಬಾಯಿ ಕಿರಿದಾಗುತ್ತ ಬಂದೊಡನೆ ಸೃಷ್ಟಿಯಾದ ವಾದನ ವಿಧಾನ, ಅರ್ವಾಚೀನ. ನೋಡಿ: ಹಸ್ತ ಉರುಳಿಕೆ.

ಗಂಡು ಪ್ರಸಂಗ: ವೀರ ರೌದ್ರ ರಸ ಪ್ರಧಾನವಾದ ಪ್ರಸಂಗ. ಉದಾ: ಕರ್ಣಪರ್ವ, ಗದಾಪರ್ವ, ಹಿರಣ್ಯಾಕ್ಷವಧೆ, ರಾಜಸೂಯ. ಈ ಗಂಡು ಪ್ರಸಂಗಗಳಲ್ಲಿ ಸ್ತ್ರೀವೇಷಕ್ಕೆ ಮಹತ್ವವಿಲ್ಲದಿರುವುದು ಗಮನಾರ್ಹ. ಹಾಗಾಗಿ, ಈ ಪದವು ಮೂಲತಃ ರಸಾಧಾರಿತವಾಗಿರದೆ, ಸ್ತ್ರೀವೇಷಕ್ಕೆ ಪ್ರಾಧಾನ್ಯ ಇಲ್ಲದುದು ಎಂಬ ಅರ್ಥದಲ್ಲಿ ಬಂದಿರಬಹುದೆ? ಅನಿಸುತ್ತದೆ.

ಗಂಧಚುಟ್ಟಿ : ಬಣ್ಣದ ವೇಷದ ಹಣೆಯಲ್ಲಿ ಗಂಧದಾಕೃತಿಯ ಚುಟ್ಟಿ. ನೋಡಿ. **ಗೀರುಗಂಧ ಚುಟ್ಟಿ.**

ಗಂಧನಾಮ : 1. ಚಿಕ್ಕ ತ್ರಿಪುಂಡ್ರ, ಅಡ್ಡನಾಮ. 2. ಉದ್ದನಾಮದ ಬದಿಯಲ್ಲಿ ಬರೆಯುವ ಅಡ್ಡಗೀರುಗಳು, ಗೀರುಗಂಧನಾಮಗಳು.

ಗಗ್ಗರ ತೆ. : ಭೂತದ ವೇಷಗಳು ಕಾಲಿಗೆ ಕಟ್ಟಿಕೊಳ್ಳುವ ದೋಣಿಯಾಕಾರದ ಕೊಳವೆ ಗೆಜ್ಜೆ. ಒಳಗೆ ಕಾಯಿಗಳಿರುತ್ತವೆ. ದೇವಿಮಹಾತ್ಮೆ ಪ್ರಸಂಗದ ರಕ್ತೇಶ್ವರಿ ವೇಷಕ್ಕೆ ಕಟ್ಟುವರು. ಈ ಗಗ್ಗರದ ಚಿಕ್ಕರೂಪವು ಹಿಂದೆ ಇತರ ವೇಷಗಳಿಗೂ ಬಳಕೆಯಿದ್ದಿರಬೇಕು. ನೋಡಿ: **ಕೋಲುಗಗ್ಗರ.**

ಗಜಕಂಬ : ಡೇರೆಗೆ ಆಧಾರವಾಗಿರುವ ಎರಡು ದೊಡ್ಡ ಕಂಬಗಳು. ಇದಕ್ಕೆ ರಾಟೆಯನ್ನು ಅಳವಡಿಸಿರುವುದೂ ಇದೆ.

ಗಜಮುಖ : ಗಜಮುಖದವಗೆ। ಗಣಪಗೆ... ಎಂಬ ಪ್ರಸಿದ್ಧ ಸ್ತುತಿ ಪದ್ಯದ ಮೊದಲ ಪದ. ಈ ಪದ್ಯವು ಚೌಕಿಯಲ್ಲಿ ದೇವರ ಪೂಜೆಗೂ, ರಂಗದಲ್ಲಿ ಪ್ರಾರ್ಥನೆಯಾಗಿಯೂ ಹಾಡಲ್ಪಡುತ್ತದೆ. ತಾಳಮದ್ದಲೆಗೂ ಇದು ಹೆಚ್ಚು ಬಳಕೆಯಿರುವ ಸ್ತುತಿಪದ್ಯ. 'ಗಜಮುಖವಾಯಿತು' ಎಂದರೆ, ದೇವರ ಪೂಜೆ ಆಯಿತು ಅಥವಾ ಪೂರ್ವರಂಗ ಆರಂಭವಾಯಿತೆಂದು ಅರ್ಥ.

ಗಜಮೇಳ : ಪ್ರಸಿದ್ಧ ಮೇಳ. ಒಳ್ಳೆಯ ಕಲಾವಿದರಿಂದಲೂ, ಉತ್ತಮ ವ್ಯವಸ್ಥೆಯಿಂದಲೂ ಕೂಡಿರುವ ಮೇಳ. (ಇದಕ್ಕೆ ವ್ಯತಿರಿಕ್ತವಾದುದು **ಗಂಜಿಮೇಳ**).

ಗಟ್ಟದ ಕೋರೆ/ಘಟ್ಟದ ಕೋರೆ : ಗಟ್ಟದ ತಿಟ್ಟು ಅಥವಾ ಪ್ರಭೇದ ಎಂದು ಅರ್ಥ. ಕೋರೆ ಎಂದರೆ ಸ್ವಲ್ಪ ವ್ಯತ್ಯಸ್ತ ವಿಧಾನ ಎಂದೂ ಅರ್ಥವಿದೆ. ಕೋರೆ– ಅಳತೆಯ ಒಂದು ಪಾಲು. ಪೂರ್ತಿ ಸೇರದ್ದು ಪ್ರತ್ಯೇಕ. ಇಲ್ಲಿ ಗಟ್ಟವೆಂದರೆ, 'ಗಟ್ಟದ ಕೆಳಗಿನಿಂದ ಬಂದ' ಎಂದೂ, ಗಟ್ಟದ ಬಳಿಯ ಎಂದೂ ಅರ್ಥವಾಗಬಹುದು.

ಮೈಸೂರು ಜಿಲ್ಲೆಯ ಹೆಗ್ಗಡೆ ದೇವನ ಕೋಟೆ ತಾಲೂಕಿನ ಕೋಳಗಾಲ ಎಂಬ ಊರಿನಲ್ಲಿರುವ ಒಂದು ಯಕ್ಷಗಾನ ತಿಟ್ಟು. ಇದು ಇರುವುದು ಅಲ್ಲಿ ಮಾತ್ರ. ಇರುವುದು ಒಂದೇ ಮೇಳ. ಇದಕ್ಕೆ ಭಾಗವತರಾದ ಅರಸು ಮನೆತನದವರ ನೇತೃತ್ವ. ಇದು ಹವ್ಯಾಸಿ ರೂಪದ ಮೇಳವಾಗಿದೆ.

ಈ ಯಕ್ಷಗಾನ ಪ್ರಭೇದವು, ಕರಾವಳಿಯ ಬಡಗುತಿಟ್ಟನ್ನು ಸ್ಪಷ್ಟವಾಗಿ ಹೋಲುತ್ತಿದ್ದು, ಬಡಗು ಯಕ್ಷಗಾನದ ಒಂದು ಶಾಖೆಯೆಂದೇ ಹೇಳಬಹುದು. ಪೂರ್ವರಂಗ, ಪ್ರಸಂಗ ಸಾಹಿತ್ಯ, ಹಿಮ್ಮೇಳ, ವೇಷಭೂಷಣ ಇವೆಲ್ಲದರಲ್ಲಿ ಹೋಲಿಕೆ ಇದೆ. (ಇದು ಗಟ್ಟದ ಕೋರೆ ಕಲಾವಿದರಿಗೆ ತಿಳಿದದ್ದು 1980ರಲ್ಲಿ) ಮೂಡಲಪಾಯದ ಪ್ರಭಾವವೂ ಸೇರಿದೆ.

ಈ ಅರಸುಮನೆತನದ, ಈಗ ತಿಳಿದಿರುವ ಮೂಲಪುರುಷ, ಭಾಗವತ ಬಸವರಾಜ ಅರಸು ಅವರು 1800ರ ಸುಮಾರಿಗೆ ಕೋಳಗಾಲಕ್ಕೆ ವಲಸೆ ಬಂದರಂತೆ. ಈ ಮನೆತನಕ್ಕೆ ಕಣಿವೆ ಕೆಳಗಿನ ಅರಸರು ಎನ್ನುವರು. ಇವರು ಪ್ರಾಯಃ ಆಗುಂಬೆ– ಸೋಮೇಶ್ವರ ಕಡೆಯಿಂದ ಹೋದವರಿರಬೇಕು. ಈಗ ಇರುವ ಅರಸು ಸೋದರರ ಶರೀರ ಲಕ್ಷಣ ಕರಾವಳಿಯ ಜನರದನ್ನು ಸ್ಪಷ್ಟವಾಗಿ ಹೋಲುತ್ತದೆ. ಈಗ ಈ ತಂಡದ ಮುಖ್ಯಸ್ಥರಾಗಿರುವ ಭಾಗವತ ಬಸವರಾಜ ಅರಸು ಅವರಿಗೆ 65 ವರ್ಷ ವಯಸ್ಸು. ಇವರಿಗಿಂತ ಮೂರು ತಲೆಮಾರು ಹಿಂದಿನವರು ವಲಸೆ ಬಂದವರು.

ವಲಸೆ ಬಂದಾಗ, ಒಂದು ಪ್ರಸಂಗಗಳ ಸಂಗ್ರಹ ಮತ್ತು ಮದ್ದಲೆ ತಂದರಂತೆ. ಇವೆರಡೂ ಈಗಲೂ ಅರಸು ಮನೆತನದಲ್ಲಿವೆ.

ಕಾಗದದ ಪ್ರಸಂಗ ಪ್ರತಿಯ ಕಾಗದಗಳಲ್ಲಿ 1838ರ ಬ್ರಾಂಡ್‌ಸೀಲ್ ಇರುವುದರಿಂದ, ಇದು ಮೂಲಪ್ರತಿಯ ನಕಲು ಆಗಿರಬೇಕು. ಈ ಪ್ರತಿಯಲ್ಲಿ ಪಾರ್ತಿಸುಬ್ಬನ ಪಟ್ಟಾಭಿಷೇಕ, ಪಂಚವಟಿ, ವಾಲಿವಧೆ, ಉಂಗುರ ಸಂಧಿಗಳೂ, ಅನ್ಯ ಕರ್ತೃಕವಾದ ಬಭ್ರುವಾಹನ, ಪ್ರಹ್ಲಾದ ಚರಿತ್ರೆ, ಬಂಡಿಗಾಲಿ ಕತೆಗಳೂ ಇವೆ. ಬಂಡಿಗಾಲಿ ಕತೆಯನ್ನು ಬಿಟ್ಟರೆ ಉಳಿದವುಗಳೆಲ್ಲ ಕರಾವಳಿಯಲ್ಲಿ ಬಳಕೆ ಇರುವ ಪ್ರಸಂಗಗಳೇ ಆಗಿವೆ.

ಪೂರ್ವರಂಗದಲ್ಲಿ, ಸಭಾಲಕ್ಷಣದ ಶ್ಲೋಕಗಳೂ ಹಾಡುಗಳೂ ಇದ್ದು, ಈ ಸಂಪ್ರದಾಯಕ್ಕೆ ವಿಶಿಷ್ಟವಾದ ಪದ್ಯಗಳೂ ಇವೆ. ಪೂರ್ವರಂಗ ಸಂಕ್ಷೇಪವಾಗಿದ್ದು, **ಕೋಡಂಗಿ**ಯ ಕುಣಿತ, ಮಾತುಗಳು ಇರುತ್ತವೆ. ಕೋಡಂಗಿ ವೇಷವು ಒಂದೇ, ಕರಾವಳಿಯಂತೆ ಎರಡಿಲ್ಲ.

ಹಿಂದೆ ರಾಕ್ಷಸ ಪಾತ್ರಗಳಿಗೆ ಬಟ್ಟಲು ಕಿರೀಟವಿತ್ತು. ರಾವಣನಿಗೆ ತೆರೆ ಕುಣಿತ, ಮುಖಮಾರ್ಜನ, ಸ್ನಾನ, ಲಿಂಗಪೂಜೆ, ಆರತಿ– ಅಭಿನಯಗಳುಳ್ಳ ಪ್ರವೇಶ (ಪೊರಪ್ಪಾಡಿನಂತೆ) ಈಗಲೂ ಇದೆ. ಸ್ತ್ರೀಪಾತ್ರಗಳ ಕುಣಿತ ಪೂರ್ತಿ ಲುಪ್ತವಾಗಿದೆ. ವಾಲಿಸುಗ್ರೀವರ ವೇಷ ರಾಜವೇಷವೇ ಕಪಿವೇಷವಲ್ಲ. ಹನುಮಂತನು ನಾಟಕದ ಹನುಮಂತನಂತಿರುವನು. ಗಂಡು ಪಾತ್ರಗಳಿಗೆ 'ಧೀಗಣ' ಪ್ರವೇಶ

ಇದೆ. ಒಡ್ಡೋಲಗಕ್ಕೆ 'ದೇವ ದೇವ' ಪದ್ಯಗಳೂ, ಆಟದ ಕೊನೆಗೆ 'ರಾಮಕೃಷ್ಣರು ಮನೆಗೆ ಬಂದರು ಬಾಗಿಲ ತೆರೆಯಿರೋ' ಎಂಬ ಪದ್ಯಗಳೂ, ಕರಾವಳಿಯ ತಿಟ್ಟುಗಳಂತೆ ಇಲ್ಲೂ ಇವೆ. ಕರಾವಳಿಯಲ್ಲಿ ಬಳಕೆ ಇರುವ ಪಗಡಿ, ಮುಂಡಾಸುಗಳೆಂಬ ಶಿರೋ ಭೂಷಣಗಳು ಇಲ್ಲಿಲ್ಲ. ಪೂರ್ವರಂಗದಲ್ಲಿ ಕಟ್ಟು ಹಾಸ್ಯಗಳಿಲ್ಲ, ಬದಲಾಗಿ ಅವು ಕತೆಯ ಮಧ್ಯೆ, ಅಲ್ಲಲ್ಲಿ ವಿರಾಮವಿತ್ತು, ಪ್ರದರ್ಶಿಸಲ್ಪಡುವು ದೊಂದು ವಿಶೇಷ. ನೋಡಿ: **ಅಡ್ಡಸೋಗು.**

ಹಿಮ್ಮೇಳದಲ್ಲಿ ಭಾಗವತ, ಮದ್ದಲೆ, ಶ್ರುತಿ, ಮುಖವೀಣೆ ಇದ್ದು, ಭಾಗವತನೊಂದಿಗೆ ನಾಲ್ಕ ರಿಂದ ಎಂಟು ಜನ ಮೇಳಗಾಯಕರಿದ್ದಾರೆ. ಚೆಂಡೆ ಬಳಕೆ ಇಲ್ಲ. ರಾಕ್ಷಸ ಪಾತ್ರಗಳ ಪ್ರವೇಶಕ್ಕೆ ತಮ್ಮಟೆ ಬಾರಿಸುವರು. ಈ ಗಟ್ಟದ ಕೋರೆ ಸಂಪ್ರದಾಯಕ್ಕೆ ಸುರಪುರದ ಗಣೇಶನೂ, ಚುಂಚನಕಟ್ಟೆ ಸೀತಾರಾಮ ದೇವರೂ ಆರಾಧ್ಯರೆಂದು ಕಂಡು ಬರುತ್ತದೆ.

ಒಂದೇ ಒಂದು ತಂಡದೊಂದಿಗೆ ಜೀವ ಹಿಡಿದಿರುವ ಈ ಸಂಪ್ರದಾಯವು ಇತ್ತೀಚೆಗೆ ನಷ್ಟ ಪ್ರಾಯವಾಗುತ್ತಿದ್ದು, ಇದರ ಪುನರುಜ್ಜೀವನದ ಪ್ರಯತ್ನಗಳು ನಡೆದಿವೆ.

ಗಟ್ಟಿಪೆಟ್ಟು : 1. ಚೆಂಡೆ ಮದ್ದಲೆಗಳ ಗಟ್ಟಿ ನುಡಿತ. ತಾಂ, ಧೀಂ, ತೋಂ, ಟಾಂ– ಇತ್ಯಾದಿ.
2. ಚೆಂಡೆ, ಮದ್ದಲೆ, ಜಾಗಟೆ, ತಾಳಗಳಲ್ಲಿ ತಾಳದ ಘಾತ ಸ್ಥಾನದಪೆಟ್ಟು. ಘಾತಪೆಟ್ಟು.

ಗಡಿಬಿಡಿದೂತ : ಯುದ್ಧದೂತ, ಆಪತ್ತು, ಯುದ್ಧವಾರ್ತೆ, ಆಕ್ರಮಣ ಮೊದಲಾದುವು ಗಳನ್ನು ರಾಜನಿಗೆ ತಿಳಿಸಲು ಬರುವ ದೂತ. ಈತನ ಮಾತು, ಕೆಲಸ ಸ್ವಲ್ಪ ಅವಸರವಾಗಿ ಗಡಿಬಿಡಿಯಾಗಿ ಇರಬೇಕು.

ಗಡ್ಡ : 1. ಗದ್ದದ ಕೆಳಗಿನ ರೇಖೆಯಿಂದ ಅಡ್ಡಲಾಗಿ, ಮುಖದ ಕೆಳಬದಿಯಲ್ಲಿ ಬರೆಯುವ ಕಪ್ಪುಗೆರೆ. ಇದಕ್ಕೆ ಕೆಂಪು ಜೀವ ರೇಖೆ ಕೊಡುವರು.
2. ಕುತ್ತಿಗೆಯ ಕೆಳಗೆ ಕಟ್ಟಿಕೊಳ್ಳುವ ಕಂಬಳಿ ನೂಲು ಅಥವಾ ಕೇಸರಿಯ ಗಡ್ಡ. ಇದು ಎದೆಯ ಮೇಲೆ ನಿಲ್ಲುತ್ತದೆ.
3. ಮುಖದ ಮೇಲೆ ನಿಲ್ಲುವಂತೆ, ಸಿಕ್ಕಿಸಿಕೊಳ್ಳುವ ಮೀಸೆಸಹಿತವಾದ ಗಡ್ಡ. ಈಗ ಬಳಕೆ ಇರುವ ಋಷಿ ಗಡ್ಡ, ಹಗ್ಗ ಅಥವಾ ಸರಿಗೆಯ ಆಧಾರದಲ್ಲಿರು ತ್ತದೆ. ಕಿವಿಗಳಿಗೆ ಸಿಕ್ಕಿಸಿ ಅಳವಡಿಸುತ್ತಾರೆ.
4. ಅಂಟಿನಿಂದ ಅಂಟಿಸಿಕೊಳ್ಳುವ ಗಡ್ಡ. ಕ್ರೇಪ್ ಹೇರ್ ಗಡ್ಡ. – ಈ ಪೈಕಿ 1 ಮತ್ತು 2ನೆಯವು ಸಾಂಪ್ರದಾಯಿಕ. 3, 4– ಅರ್ವಾಚೀನ.

ಗಣಪತಿ ಕಿರೀಟ : ಮೇಳದ ಚೌಕಿಯಲ್ಲೂ ಪೂರ್ವರಂಗದಲ್ಲಿ ರಂಗಸ್ಥಳದಲ್ಲೂ ಗಣಪತಿ ಯೆಂದು ಕಲ್ಪಿಸಿ ಪೂಜಿಸಲ್ಪಡುವ ಕಿರೀಟ. ಇದು ರಾಜಕಿರೀಟ, ಅರ್ಥಾತ್ ಕೋಲು ಕಿರೀಟ ವಾಗಿರುತ್ತದೆ. ರಾಮಲಕ್ಷ್ಮಣ ಕಿರೀಟಗಳಲ್ಲಿ ಒಂದನ್ನು ಗಣಪತಿ ಕಿರೀಟವೆಂದು ಬಳಸುವರು. ಹಿಂದೆ ಮೇಳದಲ್ಲಿ ದೇವರ ಮೂರ್ತಿ ಇರಲಿಲ್ಲ. ಕಿರೀಟಕ್ಕೆ ಪೂಜೆ ಇದ್ದುದು. ಇದೇ ಕಿರೀಟವನ್ನು ಅನಂತರ ವೇಷಧಾರಿಯು ಕಟ್ಟಿಕೊಳ್ಳಬಹುದು. ಈಗ, ಇದನ್ನು ಪೂಜೆಗಾಗಿಯೇ ಮೀಸಲಿಡುತ್ತಾರೆ.

ಬಡಗುತಿಟ್ಟಿನಲ್ಲಿ ಕಿರೀಟಕ್ಕೆ ವೀರಕಸೆಯನ್ನು ಕಟ್ಟಿ ತೆರೆಯ ಹೊರಗೆ, ಇಳಿ ಬಿಡುವರು. ವೀರಕಸೆ ಎಂಬುದು ಇಲ್ಲಿ ಸೊಂಡಿಲಿನ ಪ್ರತೀಕ.

ಗಣಪತಿ ಕೌತುಕ : ಕೌತ, ಕೌತುಕ, ಕವುತಕಿ, ಕೌತಕಿತ, ಕೌತ್ವ– ಎಂಬ ನಾಮಾಂತರಗಳುಳ್ಳ ಗಣಪತಿ ಪರವಾದ ಸ್ತುತಿ, ನೃತ್ಯ ಮತ್ತು ಅದರ ಸಾಹಿತ್ಯ, ನುಡಿತಗಳೆಲ್ಲ ಸೇರಿದ ಸಂಗತಿ. ಇದು ಹಲವು ಸಾಂಪ್ರದಾಯಿಕ ರಂಗಗಳಲ್ಲಿದೆ. ಇದಕ್ಕೆ ಬಾಲಗೋಪಾಲ ವೇಷಗಳು ಕುಣಿಯುತ್ತವೆ. ಇದು ಏಕತಾಳದಲ್ಲಿದೆ. ಹಿಂದೆ, 72 ಮಾತ್ರೆಗಳ ವಿನಾಯಕ ತಾಳದಲ್ಲಿತ್ತೆಂದು ಒಂದು ಮತವಿದೆ.

ಲಕ್ಷಣ : ಯತ್ಕಿಂಚಿತ್ ತಾಳಸಂಬದ್ಧಂ
ದೇವತಾ ವಿಷಯಾತ್ಮಕಂ।
ವಿಚಿತ್ರ ಪದ ಸಂಯುಕ್ತಂ
ಶಬ್ದಾರ್ಥೈರುಪಶೋಭಿತಂ।
ದೇಶೀಯ ಭಾಷಾ ಸಹಿತಂ
ಕಿತ್ತಾಂತಂ ಕೌತಮುಚ್ಯತೇ।
(ಭರತಾರ್ಣವ, ಭರತಕಲ್ಪಲತಾ ಮಂಜರಿ ಇತ್ಯಾದಿ. ದಿ। ಕುಕ್ಕಿಲ ಕೃಷ್ಣ ಭಟ್ಟರಿಂದ ಉದ್ಧೃತ: ಗಾನಕೋಗಿಲೆ.)

ಪಾಠಾಕ್ಷರೇಣ ಸಂಯುಕ್ತಂ
ದೇವತಾ ವಿಷಯಾತ್ಮಕಂ।
ನಾನಾರ್ಥ ಚಿತ್ರ ಸಂಯುಕ್ತಂ
ಕಿಂತಾಂತಂ ಕೌತಮುಚ್ಯತೇ.
(ಡಾ। ಜಿ. ಎಸ್. ಹೆಗಡೆ, ಸುಳ್ಯ ಇವರು ಒದಗಿಸಿದ ಪಾಠ: "ರಸಿಕ ಜನ ಮನೋಲ್ಲಾಸಿನೀ ಸಾರ ಸಂಗ್ರಹ ಭರತ ಶಾಸ್ತ್ರ" ದಿಂದ ಉದ್ಧೃತ)

ಗಣಪತಿ ಕೌತುಕದ ಪಾಠವು ಹೀಗಿದೆ:
ಕಿಡ್ತಕತ್ತೈ। ತಿತ್ತಿತ್ತೈ। ತಾಂಕಿಡ್ತಕ ತತ್ತರಿ। ತತ್ತತ್ತಾಂ ತತ್ತೊಂಕಿಟತಕ। ತರಿಕಿಟ ಕಿಟತಕ।।
ಅರದಿರು ಮರದಿರು ವಿಘ್ನ ವಿನಾಯಕ

(ಪಾಠಾಂತರ ಅರಿದಿರು ಮರುದಿರು ವಿಘ್ನ ವಿನಾಯಕ।
...ಮರುವಿನ ವಿಘ್ನ ವಿನಾಯಕ)
ತರಿಕಿಟ ಕಿಟತಕ ಗಣಪತಿ ಕೌತುಕ।
ಹುತ್ತಾಂ ಹುತಕಿಟ ತೋಂಗುತಕ।
ಯಿನಕುಡ (ಎನಕಿಟ) ಅರಳುವ। ದೇವರ ಗಣಪತಿ
ಝು ಝೋ ಜಕ್ಕಿಟ ಉದರಿ ಕಿಣಂ॥
ತದಿಕ್ಕು ದಿರುಕ್ಕು। ಆನೆ ಮುಖತ್ತವ।
ಎತ್ತೋರ್ವಿನಯಾ। ಅಗ್ರುಧಾಂ ಉಗ್ರುಧೀಂ।
ದೇವರ ತಿರುಮಗ। ತಾಕಿಟ ಕಿಟತಕ।
ಕತೆಯರ್ ವಿನೆಯರ್। ಉಗ್ರುದಾಂ ಉಗ್ರುದಿಂ।
ಧಿತ್ತಳಾಂಗು ದದಿಗಿಣತೋ। ದಿತ್ತಳಾಂಗು ದದಿಗಿಣತೋ। ದಿತ್ತಳಾಂಗು ದದಿಗಿಣತೋ॥

ಈ ಪಾಠವೇ, ಅಲ್ಪಸ್ವಲ್ಪ, ವ್ಯತ್ಯಾಸಗಳೊಂದಿಗೆ ಬಳಕೆಯಿದ್ದು, ಮುದ್ರಿತ ಸಭಾಲಕ್ಷಣಗಳಲ್ಲೂ, ಭಾಗವತರ ಕೈಪ್ರತಿಗಳಲ್ಲೂ ಬಾಯಿಪಾಠಗಳಲ್ಲೂ ಸಿಗುತ್ತದೆ. ಮತ್ತು ಎಲ್ಲ ತಿಟ್ಟುಗಳಲ್ಲೂ ಹಾಗೆಯೇ ಇದೆ. ಇತ್ತೀಚಿನ ವರೆಗೆ ರಂಗದಲ್ಲಿದ್ದು, ಈಚೆಗೆ ಲುಪ್ತವಾಗಿದ್ದು, ಈಗಲೂ ಕ್ವಚಿತ್ತಾಗಿ ಬಳಕೆಯಲ್ಲಿದೆ.

ಈ ಪಾಠವು ''ವಿಚಿತ್ರ ಪಾಠ ಸಂಯುಕ್ತಂ'' ''ನಾನಾರ್ಥ ಚಿತ್ರ ಸಂಯುಕ್ತಂ'' ''ಪಾಠಾಕ್ಷರೇಣ ಸಂಯುಕ್ತಂ'' ಎಂಬ ಲಕ್ಷಣಕ್ಕೆ ಸರಿಯಾಗಿಯೇ ಇದ್ದು ಪ್ರಾಯಃ ಇದರಲ್ಲಿ ಸಾಹಿತ್ಯದ ಅರ್ಥಕ್ಕೆ ಮಹತ್ತ್ವವಿಲ್ಲವೆಂದೇ ಸಂಪ್ರದಾಯ. ಇದರ ಭಾಷೆಯು ಮಲೆಯಾಳ, ತಮಿಳು ಪದಗಳನ್ನು ಹೋಲುವುದು.

ಗಣಪತಿ ಕಿರೀಟವನ್ನು ಪೀಠದ ಮೇಲಿಟ್ಟು ಈ ಕೌತುಕ ನೃತ್ಯವನ್ನು ಕುಣಿದ ಅನಂತರ, ಎರಡು ಪದ್ಯಗಳಿಗೆ ಕುಣಿದ ಬಳಿಕ ಬಾಲಗೋಪಾಲ ವೇಷಗಳು ನಿರ್ಗಮಿಸುತ್ತವೆ.

ಗಣಪತಿ ಚೌಕಿ (ಉ.) = ನೋಡಿ : ದೇವರ ಚೌಕಿ.

ಗಣಪತಿ ಪೂಜೆ : 1. ಚೌಕಿಯಲ್ಲಿ ನಡೆಯುವ ಗಣಪತಿ ಪೂಜೆ. ಹಿಮ್ಮೇಳದೊಂದಿಗೆ, ಭಾಗವತರು ಸ್ತುತಿಪದ್ಯ ಹಾಡುವಾಗ, ಕಿರೀಟಗಳಿಗೆ ಅಥವಾ ವಿಗ್ರಹಕ್ಕೆ ಆರತಿ ಬೆಳಗುವುದು.
2. ರಂಗಸ್ಥಳದಲ್ಲಿ ಜರುಗುವ ಗಣಪತಿ ಪೂಜೆ. ಕಿರೀಟಕ್ಕೆ ಆರತಿ ಬೆಳಗುವುದು.

ಗಣಪತಿ ಪೆಟ್ಟಿಗೆ (ಬ.) = ನೋಡಿ : ದೇವರ ಪೆಟ್ಟಿಗೆ.

ಗತ್ತು : 1. ವೇಷಧಾರಿಯ ನೃತ್ಯ, ಅಭಿನಯ, ಚಲನೆಗಳಲ್ಲಿ ಕಾಣುವ ಠೀವಿ; ಗತ್ತುಗಾರಿಕೆ.
2. ಪದ್ಯದೊಂದಿಗೂ, ಮಾತಿನೊಂದಿಗೂ, ಅಭಿನಯಕ್ಕೆ ಅನುಕೂಲವಾಗಿ, ಹಿಮ್ಮೇಳವು ಕೊಡುವ ಗತ್ತು ಬಡಿತ (sound effects) ('ಗತ್' – ಗತಿ ಎಂಬುದರಿಂದ ?)

ಗದೆ : ಆಯುಧಗಳಲ್ಲೊಂದು. ಸುಮಾರು ಒಂದು ಮೊಳ ಉದ್ದ, ಚಿಕ್ಕತಲೆ ಇರುವ, ಹೆಚ್ಚಾಗಿ ದೊಡ್ಡ ಕಡೆಗೋಲನ್ನು ಹೋಲುವ ಮರದ ಗದೆ. ಸಾಂಪ್ರದಾಯಿಕವಾಗಿ, ದೊಡ್ಡತಲೆಯ ಗದೆ ಬಳಕೆಯಿಲ್ಲ. ಸಾಂಕೇತಿಕ ಗದೆ, ನೃತ್ಯಕ್ಕೆ ಅನುಕೂಲವಾದುದು, ಇದ್ದುದು. ಇದನ್ನು ಕೋಲಿಗೆ ಬಟ್ಟೆ ಸುತ್ತಿ ತಯಾರಿಸುವುದುಂಟು. ಈಗ ಉಕ್ಕಿನ ಗದೆಗಳೂ ಬಳಕೆಯಲ್ಲಿವೆ.
ಮರದ ಗದೆಗೆ ಬಟ್ಟೆ ಸುತ್ತಿ ನಾರದನ ತಂಬೂರವನ್ನು ಕಲ್ಪಿಸುತ್ತಿದ್ದರು.

ಗರಳ : ಸ್ವರ. ವಿಶೇಷತಃ ತೀಕ್ಷ್ಣತೆ ಮತ್ತು ಭಾರ ಇರುವ ಕಂಠ, ಜನಪದರ ವರ್ಣನಾತ್ಮಕ ಶಬ್ದ.

ಗರಳ ಒಡೆಯುವುದು : ಹಾಡುಗಾರ, ವೇಷಧಾರಿಗಳ, ಸ್ವರವು ಪ್ರೌಢತೆಗೆ ಬರುವುದು. ಅಭ್ಯಾಸದಿಂದ, ಸ್ವರ ಒಡೆದು, ಸರಿಯಾದ ಮಟ್ಟಕ್ಕೆ ಬರುವುದು.

ಗರುಡನ ಮುಖವಾಡ : ಉದ್ದಕೊಕ್ಕು, ಕಣ್ಣು, ಪುಕ್ಕ ಬಿಡಿಸಿರುವ, ಬಿಳಿ-ಬೂದು ಬಣ್ಣದ ಹಕ್ಕಿಯ ಮುಖವಾಡ. ಗರುಡ, ಸಂಪಾತಿ ಪಾತ್ರಗಳಿಗೆ ಬಳಕೆ.

ಗರ್ಭಸುತ್ತಿ ರುಮಾಲು : ಕೆಂಪು ಬಣ್ಣಕ್ಕೆ ಕಪ್ಪುಛಾಯೆ ಕಾಣುವ ವಸ್ತ್ರ, ಮತ್ತು ಅದರಿಂದ ಕಟ್ಟುವ ಮುಂಡಾಸು. ಈ ಬಟ್ಟೆಯ ಉದ್ದನೂಲು ಕೆಂಪು, ಅಡ್ಡನೂಲು ಕಪ್ಪು ಇದ್ದು, ಅಂಚು ಜರಿಯ ದಾಗಿರುತ್ತದೆ. ಭಾಗವತರು ಈ ಮುಂಡಾಸು ಕಟ್ಟಿ, ಹಿಂಬದಿಗೆ ಮುನ್ನಿ ಬಿಡುವುದು ಹಳೆಯಕ್ರಮ. ಚೆಂಡೆ, ಮದ್ದಲೆಗಾರರಿಗೂ ಗರ್ಭಸುತ್ತಿ ಮುಂಡಾಸು ಇರುತ್ತಿತ್ತು.

ಗಲ್ಲ : ಗಲ್ಲದ ಬಣ್ಣಗಾರಿಕೆ. ಗಲ್ಲ ಬರೆಯುವುದು. ಛಾಯೆ ಮತ್ತು ಮುದ್ರೆಗಳು, ಚುಕ್ಕಿಗಳು.

ಗಿಟ್ಟ = ನೋಡಿ : ಕಿಟ್ಟ.

ಗಿಡ್ಡ = ನೋಡಿ : ತ್ವರಿತ.

ಗಿಡ್ಡಝಂಪೆ = ನೋಡಿ : ತ್ವರಿತ ಝಂಪೆ.

ಗಿಡ್ಡತ್ರಿವುಡೆ = ನೋಡಿ : ತ್ವರಿತ ತ್ರಿವುಡೆ.

ಗಿಡ್ಡ ಮುಕ್ತಾಯ : 1. ತಾಳದ ಮುಗಿತಾಯದ ನುಡಿತಗಳಲ್ಲಿ, ಉತ್ತರಾರ್ಧವನ್ನು ಅಥವಾ ಹೊಂದಾಣಿಕೆ ಮಾಡಿಕೊಂಡ ಅಂಶವನ್ನಾಗಲಿ ಮಾತ್ರ ಬಾರಿಸುವುದು.

1. 2.
ಝಂಪೆ ತಾಳ: ದಿದ್ಧಿ ತರಿಕಿಟತಕ। ಕಿಟ್ಟಕತರಿಕಿಟತಕ।
3. 4.
ಧಿನ್ನತಾ। ದದಿಗಿಣತೊ.

– ಇದರಲ್ಲಿ 3, 4,ನ್ನು ಅಥವಾ 4ನ್ನು ಮಾತ್ರ ಬಾರಿಸುವುದು. ಹೀಗೆಯೇ ಬೇರೆ ಬೇರೆ ತಾಳಗಳಲ್ಲಿ.

2. ತೆಂಕುತಿಟ್ಟಿನಲ್ಲಿ ಬಳಕೆ ಇರುವ, ಹಿಂದೆ ಉ. ಕನ್ನಡದಲ್ಲೂ ಇದ್ದ – ಮೊದಲ ಚರಣದ ಕೊನೆಯ ಬಿಡ್ತಿಗೆ ಅಥವಾ ಬಡಿತವನ್ನು ಉದ್ದ ಮುಕ್ತಾಯ ಎಂದಿಟ್ಟುಕೊಂಡರೆ, ತಾಳದ ಮುಕ್ತಾಯವೇ ಗಿಡ್ಡ ಮುಕ್ತಾಯವೆನಿಸುತ್ತದೆ.

ಗಿರಿಗಿಟ: (ಬ.) 1. ಮಂಡಿಕುಣಿತ, ಮಂಡಿ ಹಾಕುವುದು.
(ತೆ./ಬ.) ತಿರುಗಣೆ ಲಾಗ, (ಚೆಂಡೆ ಮದ್ದಲೆಗಳ) ಉರುಳಿಕೆ ಬಡಿತಕ್ಕನುಗುಣವಾಗಿ ತಿರುಗಿ ಹಾರುವ ಲಾಗ.

ಗಿರ್ಕಿ(ರ್ಕೆ) (ತೆ.): ತಿರುಗು ಲಾಗ. ವಿಶೇಷತಃ ಏರುಪದ್ಯಗಳ ಕುಣಿತದಲ್ಲಿ ಬರುವ ಒಂದು ಅಂಶ. ಒಂದು ಕಾಲನ್ನು ಅಥವಾ ಎರಡೂ ಕಾಲುಗಳನ್ನು ನೆಲದಿಂದೆತ್ತಿ ಹಾರುತ್ತ ಸುತ್ತು ತಿರುಗುವಿಕೆ. ನೋಡಿ: **ಗುತ್ತು**.

ಗಿಳಿಭುಜಕಿರೀಟ (ತೆ.): ಗಿಳಿ ಆಕಾರದ ಕೆತ್ತನೆ, ಗಿಳಿಗೊಂಬೆ, ಇರುವ ಭುಜ ಕಿರೀಟ. ಬಣ್ಣದ ವೇಷದ ದಂಬೆಗಳಲ್ಲಿ ಒಂದು ವಿಧ.

ಗಿಳಿಯೋಲೆ: ಸ್ತ್ರೀವೇಷದ ಒಂದು ಆಭರಣ. ಗಿಳಿ ಆಕಾರದ ಕೆತ್ತನೆಯುಳ್ಳ ಓಲೆ. ಮಧ್ಯೆ ಘನ ಉರುಟು, ಮೇಲೆ ಗಿಳಿಯ ಕುತ್ತಿಗೆ, ಕೆಳಗೆ ಬಾಲ.

ಗೀಟು(ರು): ಮುಖವರ್ಣಿಕೆಯಲ್ಲಿ ಬಳಸುವ ವಿವಿಧ ರೇಖೆಗಳು, ಗೆರೆಗಳು. ನಾಮ, ಮುದ್ರೆ, ಜೀವರೇಖೆ, ಮುಂತಾದವುಗಳಲ್ಲಿ ಬಳಕೆ. ಕಪ್ಪು, ಕೆಂಪು, ಹಳದಿ, ಬಿಳಿ ಬಣ್ಣದ ಗೆರೆಗಳು.

ಗೀಟುಬಣ್ಣ (ತೆ.): ಚುಟ್ಟಿಯಿಂದ ಬರೆಯುವ ಬದಲಾಗಿ, ಅದೇ ಆಕಾರದ ಚಿತ್ರವನ್ನು ಗೆರೆಗಳಿಂದ ಮಾತ್ರ ಚಿತ್ರಿಸುವ ಬಣ್ಣದ ವೇಷದ ಮುಖವರ್ಣಿಕೆ, ಮತ್ತು ಆ ತರದ ವೇಷ. ಚುಟ್ಟಿ ಇರಿಸುವ ಜಾಗದಲ್ಲಿ ಬಿಳಿಗೆರೆಗಳನ್ನು ಬರೆಯುವರು. ನೋಡಿ: **ಬಣ್ಣ**, **ಬೋಳು ಬಣ್ಣ**.

ಗೀರು = ನೋಡಿ: **ಗೀಟು**.

ಗೀರುಗಂದ (ಧ): ಪುರುಷ ವೇಷಗಳ ಹಣೆಯಲ್ಲಿ ಬರೆಯುವ, ಬಿಳಿಬಣ್ಣದ ಸಪೂರ ಅಡ್ಡಗೆರೆಗಳು. ಅಡ್ಡಗೀರುಗಳು. ಗೀಟು-ಗಂಧ-ನಾಮ. ಮಧ್ಯದಲ್ಲಿ ಉದ್ದನಾಮ, ಅಥವಾ ಚಕ್ರಾಕಾರದ ನಾಮ ಇದ್ದು ಪಕ್ಕಗಳಲ್ಲಿ ಗೀರು ಗಂಧಗಳಿರುತ್ತವೆ.

ಗೀರುಗಂಧ ಚುಟ್ಟಿ (ಚಿಟ್ಟಿ) (ತೆ.): ಬಣ್ಣದ ವೇಷದ ಹಣೆಯಲ್ಲಿ ಬರೆಯುವ ಚುಟ್ಟಿಯ ಒಂದು ವಿನ್ಯಾಸ. ಚುಟ್ಟಿ ಮುಳ್ಳುಗಳು ಅರ್ಧಚಂದ್ರಾಕೃತಿಯಲ್ಲಿ ನಿಲ್ಲುತ್ತವೆ. ವಿಶೇಷತಃ ಮೈರಾವಣನ ವೇಷಕ್ಕೆ ಬಳಕೆ.

ಗೀರುಚುಟ್ಟಿ (ಚಿಟ್ಟಿ) (ತೆ.): 1. ನೋಡಿ: **ಗೀರು ಗಂಧ ಚುಟ್ಟಿ**.
2. **ಬೋಳು** ಬಣ್ಣದ ಮುಖವರ್ಣಿಕೆಯ ಗೆರೆಗಳು. ಹಿಟ್ಟಿನ ಮುಳ್ಳುಗಳ ಬದಲು, ಅದೇ ಆಯಕ್ಕೆ ಗೆರೆಗಳನ್ನು ಎಳೆಯುವುದು. ಚುಟ್ಟಿಯಾಕಾರದ ಗೀರುಗಳು, ಅರ್ಥಾತ್ ಗೀರುಗಳಿಂದಲೇ **ಚುಟ್ಟಿ** ಬರವಣಿಗೆ.

ಗುಂಕಾರ/ಗುಂಕಿ/ಗುಮ್ಕಿ: ಮದ್ದಲೆಯ ಎಡದಲ್ಲಿ ಹೊರಡಿಸುವ ಒಂದು ನಾದ. ಹೆಬ್ಬೆರಳಿನ ಬದಿಯನ್ನು ಒತ್ತಿ ಜಾರಿಸಿ, ಬೆರಳಿನಿಂದ ಬಾರಿಸುವುದು. ಮೃದಂಗ, ತಬಲಾವಾದನಗಳಿಂದ ಬಂದಿರುವ ನಾದ ವಿಧಾನ.

ಗುಂಕಿ: = ನೋಡಿ: **ಗುಂಕಾರ**,

ಗುಂಡಡ್ಡಿಗೆ: ಗುಂಡುಮಣಿಗಳ ಕೊರಳಡ್ಡಿಗೆ. ಗೆಜ್ಜೆ ಅಡ್ಡಿಗೆಯೊಂದಿಗೆ ಇದನ್ನು ಕಟ್ಟುವರು.

ಗುಂಡು ಕಿರೀಟ: ಉರುಟು ಕಿರೀಟ ಅಥವಾ ರಾಜಕಿರೀಟ.

ಗುಂಡುತಾಳ: ಬಡಗುತಿಟ್ಟಿನಲ್ಲಿ ಬಳಕೆ ಇರುವ, ಭಾಗವತರ ಕೈಯ ಕಂಚಿನ ಚಿಕ್ಕತಾಳ.

ಗುಂಡುಮಣಿಸರ: ಗುಂಡುಸರ. ಹಳದಿ ಗುಂಡುಗಳ ಮಾಲೆ. ರಾಜವೇಷಕ್ಕೂ, ಸ್ತ್ರೀವೇಷಕ್ಕೂ ಬಳಕೆ. ಭಾಗವತರಿಗೂ ಮದ್ದಲೆಗಾರರಿಗೂ ಕೊರಳಲ್ಲಿ ಚಿನ್ನದ ಗುಂಡುಸರವಿರುತ್ತಿತ್ತು. ಮರದ ಮಣಿಗಳಿಗೆ ಬೇಗಡೆ ಹಚ್ಚಿ ಪೋಣಿಸಿ ತಯಾರಿಸುವ ಸರ.

ಗುಂಡುಸರ: 1. ನೋಡಿ. **ಗುಂಡು ಮಣಿಸರ**.
2. ವಿವಿಧ ಆಕಾರದ ಹಳದಿ ಗುಂಡುಗಳ ಸರ. ಸ್ತ್ರೀವೇಷದ ಗುಂಡುಸರದ ಗುಂಡುಗಳು ಚಿಕ್ಕವು.

ಗುಂಪು (ಬ.): ಮದ್ದಲೆಯ ನಾದದ ಒಂದು ಪ್ರಕಾರ. ಬೆರಳು, ಹಸ್ತದ ಭಾಗ ಸಹಿತ ಬಳಸಿ, ಕರ್ಣದ ಮೇಲೆ ಸ್ವಲ್ಪ ಭಾರ ಹಾಕಿ ಬಾರಿಸಿದರೆ ಬರುವ ನಾದ. 'ತೋಂ'ಕಾರ.

ಇದನ್ನೆ ಹಸ್ತವನ್ನು ಬಳಸದೆ, ಬೆರಳುಗಳನ್ನು ಒಟ್ಟಾಗಿ ಜೋಡಿಸಿ ಬಳಸಿ ಬಾರಿಸಿದರೆ ಅರ್ಧ

ಗುಂಪು ಅಥವಾ ಅರೆಗುಂಪು ಎನಿಸುವುದು. ನೋಡಿ: ಅರ್ಧಗುಂಪು, ಚಾಪು, ಕಪಾಲ.

ಗುಗ್ಗುಳ = ನೋಡಿ: ದುಗ್ಗುಳ.

ಗುಟ್ಟಿಗೆ: ಮದ್ದಲೆ, ಚೆಂಡೆಗಳ ಕುತ್ತಿ, ಕಳಸಿಗೆ. ಮರದ ಟೊಳ್ಳು ಪಾತ್ರೆ.

ಗುಡ್ಡದ ಅಬ್ಬರ (ಬ.) : ಆಟ ನಡೆಯುವ ಸ್ಥಳದಲ್ಲಿ, ಸಂಜೆಯ ಹೊತ್ತು ಎತ್ತರದ ಗುಡ್ಡದ ಮೇಲೆ ಬಾರಿಸುವ ಚೆಂಡೆ-ಮದ್ದಲೆಗಳ ವಾದನ. ಅಬ್ಬರ ತಾಳದ ಒಂದು ಬಗೆ. ನೋಡಿ: ಅಬ್ಬರ, ಕೇಳಿ.

ಗುಡಾಪಿ = ನೋಡಿ: ಉಡಾಪೆ.

ಗುಡಾರ: 1. ಚೌಕುಳಿ ಬಟ್ಟೆ , ಮಂದ್ರಿ.
2. ಡೇರೆ.

ಗುತ್ತು/ಕುತ್ತು (ತೆ.) : ಪ್ರವೇಶ ನೃತ್ಯ, ಏರು ಪದ್ಯಗಳ ನೃತ್ಯಗಳಲ್ಲಿ ಬರುವ ಹಾರುವಿಕೆ; ಲಾಗದ ಒಂದು ಕ್ರಮ. ಹಾರಿ ಸುತ್ತು ಬಂದು ಪುನಃ ಅಲ್ಲಿಗೆ ಬೀಳುವುದು. ಗುತ್ತು ಹಾರಾಟದ ವೇಗ, ಸಂಖ್ಯೆ, ಗಾಂಭೀರ್ಯ ಮುಂತಾದುವು ವೇಷವನ್ನು ಅನುಸರಿಸಿ ಇರಬೇಕು.

ಬಿಡ್ತಿಗೆಗೆ ಸುತ್ತು ಬಂದು, ಗುತ್ತು ಹಾರಿ, ಅನಂತರ ತಿರುಗುವುದಿದೆ– ಈ ಮೂರರ ಪ್ರಮಾಣದಲ್ಲಿ ಸಂಬಂಧವಿರಬೇಕೆಂದು ಹಳೆಯ ನಿರ್ಣಯ. 1-1-1 ಅಥವಾ 1-2-2 ಅಥವಾ 2-4-8 ಹೀಗೆ. ಸಮಾನವಾಗಿಯೆ 1-1-1 ಇರಬೇಕೆಂದು ಒಂದು ಅಭಿಪ್ರಾಯ.

ಗುಬ್ಬಿ: ದಗಲೆಯ ಗಂಟು ಅಥವಾ ಗುಂಡಿ.

ಗುಮ್ಮಿ = ನೋಡಿ: ಗುಂಕಾರ.

ಗುಬ್ಬಿತಾಳ: ಬಡಗುತಿಟ್ಟಿನಲ್ಲಿ ಭಾಗವತರು ಬಳಸುವ ತಾಳದ ಒಂದು ಹೆಸರು. ಹರಿದಾಸರ ತಾಳಕ್ಕೂ ಈ ಹೆಸರಿದೆ.

ಗುಲಗುಂಜಿ ಅಂಟು: ಗುಲಗುಂಜಿ ಕಾಯಿಯನ್ನು ಅರೆದು ತಯಾರಿಸಿದ ಅಂಟು. ಇದನ್ನು ಕಬ್ಬಿಣದ ಕಿಟ್ಟಕ್ಕೆ ಸೇರಿಸಿ, ಒಣಗಿಸಿ, ಅನಂತರ ಅಕ್ಕಿ ಅಥವಾ ಅವಲಕ್ಕಿಯ ಅಂಟಿಗೆ ಮಿಶ್ರ ಮಾಡಿ, ಕರ್ನ ತಯಾರಿಸುವರು. ನೋಡಿ: ಕರ್ನ, ಕಿಟ್ಟ, ಅಂಟು.

ಗುಲಾಮ್ಲಿ = ನೋಡಿ: ಗುಲ್ಲಾಮಲ್ಲಿ.

ಗುಲ್ಲಾಮಲ್ಲಿ/ಗುಲಾಮ್ಲಿ : ಪೂರ್ವರಂಗದ ಕಟ್ಟು ಹಾಸ್ಯಗಳಲ್ಲೊಂದು, ಗುಲಾಮ್ ಆಲಿ?

ಗುಲಾಮ್ಲಿ ಮುಖವಾಡ: ಗುಲಾಮ್ಲಿ/ಗುಲ್ಲಾಮಲ್ಲಿ ವೇಷಕ್ಕೆ ಬಳಸುತ್ತಿದ್ದರೆನ್ನಲಾದ ಮುಖವಾಡ.

ಇದರ ಉಲ್ಲೇಖ ಕೂಡ್ಲು ದಾಖಲೆಗಳಲ್ಲೂ, ಕರ್ಕಿಯಲ್ಲೂ ದೊರತಿರುವುದರಿಂದ, ಸರ್ವತ್ರ ಬಳಕೆಯಿದ್ದಿರಬೇಕು.

ಗುಳ್ಳೆಸರ (ತೆ.) : ಕೊರಳಿಗೆ ಹಾಕಿಕೊಳ್ಳುವ ಒಂದು ಬಗೆಯ ಕಾಯಿಸರ. ಗುಳ್ಳದ ಸರ?

ಗೂಟನಾಮ: ಪುರುಷ ಪಾತ್ರಗಳ ಉದ್ಧನಾಮ, ವೈಷ್ಣವನಾಮ. ಇದರಲ್ಲಿ ಹಲವು ಬಗೆಗಳಿವೆ. ಬಡಗು, ಉ.ಕ. ತಿಟ್ಟುಗಳಲ್ಲಿ ಕಪ್ಪುನಾಮ, ಮಧ್ಯೆ ಬೊಟ್ಟು, ನಾಮದ ಸುತ್ತ ಬಿಳಿ ಜೀವ ರೇಖೆ ಇದ್ದು, ಸುಮಾರಾಗಿ ಮಾಧ್ವರು ಹಾಕುವ ಅಂಗಾರಕನಾಮವನ್ನು ಹೋಲುತ್ತವೆ. ತೆಂಕುತಿಟ್ಟಿನಲ್ಲಿ ಇದು ಅಗಲವಾದ 'U' ಆಕಾರದಲ್ಲಿದ್ದು ಕಪ್ಪು, ಹಳದಿ, ಬಿಳಿ, ಕೆಂಪು ಗೆರೆಗಳಿಂದ ಕೂಡಿರುತ್ತದೆ. ಹೊರಗಿನ ರೇಖೆಯು ಚಿಕ್ಕ ಚುಟ್ಟಿ ಅಥವಾ ಮುತ್ತರಿಗಳದ್ದಾಗಿರುವುದೂ ಉಂಟು. ಪುಂಡು, ಪೀಠಿಕೆ ವೇಷಗಳ (ರಾಮ, ನಳ, ಅರ್ಜುನ) ನಾಮವು ಸೌಮ್ಯವೂ, ಇದಿರು ವೇಷಗಳದ್ದು (ದುರ್ಯೋಧನ, ಕಾರ್ತವೀರ್ಯ) ಪ್ರಖರವೂ ಆಗಿರಬೇಕು. ಕೋಡಂಗಿ, ಹಾಸ್ಯಗಾರ ಮೊದಲಾದವರ ಉದ್ಧನಾಮವು ಸರಳವಾದ, ಬಿಳಿಗೆರೆ ಮಾತ್ರ ಆಗಿರುತ್ತದೆ. ಕೆಲವು ವೇಷಗಳ ಉದ್ಧನಾಮದ ಆಚೀಚೆಗೆ ಗೀರು ಗಂಧಗಳನ್ನೆಳೆದು ಅಲಂಕರಿಸುವುದೂ ಉಂಟು. ಭೀಮನ ನಾಮವು ಮೂಗಿನ ತುದಿಯಿಂದ ಹಣೆಯವರೆಗೆ ಇದ್ದು, ಅಗಲವಾಗಿ, ಕಪ್ಪು-ಕೆಂಪು ಬಣ್ಣದ್ದಾಗಿರುತ್ತದೆ. ಗೂಟನಾಮಕ್ಕೆ ವ್ಯತಿರಿಕ್ತವಾದದ್ದು, ಗೋಟು ನಾಮ, ಎಂದರೆ ಅಡ್ಡನಾಮ.

ಗೂಟಿಗೆ: 1. ಮದ್ದಲೆ, ಚೆಂಡೆಗಳಿಗೆ ಮುಚ್ಚಿಗೆ ಹಾಕಲು, ಚರ್ಮ ಹದ ಮಾಡಲು ಬಳಸುವ ಸಾಧನ. ಈಟಿ ಅಥವಾ ಬರ್ಚಿ ಆಕೃತಿಯ ಬಿದಿರ ಅಥವಾ ಮರದ ತುಂಡು.

(ತೆ.) 2. ಕೆಂಪು, ಬಿಳಿ ಬಣ್ಣಗಳ ಮಿಶ್ರಣವನ್ನು ಚೆನ್ನಾಗಿ ಅರೆದು, ನುಣುಪಾದ ಕಲ್ಲಿನ ಮೈಗೆ ಹಚ್ಚಿ ಇಟ್ಟಿರುವ ಒಟ್ಟು ವ್ಯವಸ್ಥೆಯ ಹೆಸರು. ನಾಮ ಹಾಕಲು ಮತ್ತು ತುಟಿ ಬರೆಯಲು ಇದು ಅನುಕೂಲ.

ಗೆಜ್ಜಡ್ಡಿಗೆ = ನೋಡಿ: ಗೆಜ್ಜೆ ಅಡ್ಡಿಗೆ.

ಗೆಜ್ಜೆ: ವೇಷಗಳು ಕಾಲಿಗೆ ಕಟ್ಟಿಕೊಳ್ಳುವ ಗೆಜ್ಜೆ ಸರ. ಕಾಲ್ಗೆಜ್ಜೆ, ಕಂಚು, ಬೆಳ್ಳಿ ಮಿಶ್ರಣದ ತಯಾರಿಕೆ. ಗೆಜ್ಜೆಗಳನ್ನು ಹಗ್ಗಗಳಲ್ಲಿ ಕೋದು ಅಥವಾ ಬಟ್ಟೆ, ಚರ್ಮಗಳ ಮೆತ್ತೆಗಳಿಗೆ ಹೊಲಿದು ಬಳಸುವರು.

ಗೆಜ್ಜೆಅಡ್ಡಿಗೆ/ಗೆಜ್ಜಡ್ಡಿಗೆ/ಗೆಜ್ಜೆಟೀಕು : ಒಂದು ಬಗೆಯ ಅಡ್ಡಿಗೆ. ಗೆಜ್ಜೆಯಂತಹ (ಚಿನ್ನದ ಅಥವಾ ಮರದ) ಮಣಿಗಳನ್ನು ಕೂಡಿಸಿ ಮಾಡುವ ಸರ. ಕುತ್ತಿಗೆಗೆ ತಾಗಿ ನಿಲ್ಲುವಂತೆ ಕಟ್ಟುವರು. ಸ್ತ್ರೀ-ಪುರುಷ ವೇಷಗಳೆರಡಕ್ಕೂ ಬಳಕೆ.

ಗೆಜ್ಜೆಕಟ್ಟು : ಗೆಜ್ಜೆಗಳ ಕಟ್ಟು, ಗೆಜ್ಜೆಸರ.

ಗೆಜ್ಜೆ ಕಟ್ಟುವುದು : 1. ಮೇಳದ ಆರಂಭದ ದಿನ ನಡೆಯುವ ಸಾಂಕೇತಿಕ ವಿಧಿ. ಮೇಳಕ್ಕೆ ಸೇರಿದ ಕಲಾವಿದರು, ಮೊದಲ ದಿನದ ಆಟ – ಸೇವೆ ಆಟ – ದಂದು ಸಾಯಂಕಾಲ ಸಂಬಂಧಪಟ್ಟ ದೇವಾಲಯ ದಲ್ಲಿ ಸೇರಿ, ದೇವಾಲಯದ ಮುಖ್ಯಸ್ಥರು, ಊರ ಗಣ್ಯರ ಸಮಕ್ಷ, ದೇವಳದ ಅರ್ಚಕರಿಂದ ಗೆಜ್ಜೆ ಪಡೆದು, ಭಾಗವತರ ಕೈಗಿತ್ತು, ಮರಳಿ ಪಡೆದು ಕಟ್ಟುವುದು. ದೇವರ ಮುಂದೆ ಒಂದು ಚಿಕ್ಕ ಸೇವೆ – ರಾಧಾಕೃಷ್ಣ ವೇಷಗಳ ಕುಣಿತ – ಆದ ಬಳಿಕ ಪ್ರಸಾದವು ಚೌಕಿಗೆ ಬರುತ್ತದೆ. ಅಲ್ಲಿ ಭಾಗವತರು ಪ್ರಸಾದ ಪಡೆದು, ಎಲೆ ಅಡಿಕೆ ಸ್ವೀಕರಿಸಿ, ವೇಷಕ್ಕೆ ಸಿದ್ಧರಾಗುತ್ತಾರೆ. ಆಗಲೂ ಹಿರಿಯ ಕಲಾವಿದರ ಕಾಲು ಹಿಡಿಯಬೇಕು, ಸಮಾನರಲ್ಲಿ 'ಗೆಜ್ಜೆ ಕಟ್ಟುತ್ತೇನೆ' ಎಂದು ಹೇಳಬೇಕು.

2. ತಿರುಗಾಟದ ಆರಂಭದ ಆಟ.

ಗೆಜ್ಜೆಕೊಂಡು ಹೋಗುವುದು (ಬ.) : ಜೋಡಾಟ ದಲ್ಲಿ, ಗೆದ್ದ ಮೇಳ ಅಥವಾ ಗೆದ್ದ ಕಲಾವಿದನು ಗೆದ್ದನೆಂಬುದಕ್ಕೆ ''ಗೆಜ್ಜೆ ಕೊಂಡು ಹೋದ'' ಎನ್ನುವರು. ಗೆಜ್ಜೆ ಎಂದರೆ ಇಲ್ಲಿ ಗೆಲುವು, ಮರ್ಯಾದೆ ಎಂದು ಅರ್ಥ.

ಬಹುಶಃ ಹಿಂದೆ ಸೋತವರು, ಗೆದ್ದವರಿಗೆ ತಮ್ಮ ಗೆಜ್ಜೆಯನ್ನು ಕೊಡಬೇಕೆಂಬ ನಿಯಮವಿದ್ದಿರಬೇಕು.

ಗೆಜ್ಜೆ ಟೀಕು = ನೋಡಿ : ಗೆಜ್ಜೆ ಅಡ್ಡಿಗೆ.

ಗೆಜ್ಜೆ ಬಿಚ್ಚುವುದು = ನೋಡಿ : ಗೆಜ್ಜೆ ಬಿಡಿಸುವುದು.

ಗೆಜ್ಜೆ ಬಿಡಿಸುವುದು (-ಬಿಚ್ಚುವುದು): 1. ಮೇಳದ ತಿರುಗಾಟದ ಕೊನೆಯ ಆಟವನ್ನು, ಸಂಬಂಧಪಟ್ಟ ದೇವಾಲಯದ ಬಳಿ ಆಡಿದ ಅನಂತರ ನಡೆಯುವ ವಿಧಿ. ಮಂಗಲ ಪದ್ಯವಾದ ಬಳಿಕ, ರಾಧಾಕೃಷ್ಣ ವೇಷಗಳೊಂದಿಗೆ, ಎಲ್ಲ ಕಲಾವಿದರೂ ದೇವರ ಮುಂದೆ ಬರಬೇಕು. ಗೆಜ್ಜೆಗಳನ್ನು ದೇವರ ಮುಂದೆ ಹೊಸ್ತಿಲಲ್ಲಿ ಇರಿಸಿ ನಮಸ್ಕರಿಸುತ್ತಾರೆ. ಇದು ಆ ವರ್ಷದ ಮೇಳದ ಬೀಳ್ಕೊಡುಗೆ ಸಮಾರಂಭದಂತಿರುತ್ತದೆ.

2. ತಿರುಗಾಟದ ಕೊನೆಯ ಆಟ.

ಗೆರಸೆ (ಬ.) : ತಟ್ಟೀಬಳಿ ಹಾಸ್ಯಕ್ಕೆ ಬಳಸುವ ಮೊರದಂತಹ ಸಾಧನ. ಗೆರಸೆಯ ಬದಲಾಗಿ, ಬೆತ್ತದ ಪೆಟ್ಟಿಗೆಯ ಮುಚ್ಚಳವನ್ನು ಉಪಯೋಗಿಸುತ್ತಾರೆ. ನೋಡಿ : ತಟ್ಟೀಬಳಿ.

ಗೆರೆ = ನೋಡಿ : ಗೀಟು, ರೇಖೆ.

ಗೇಟು : ಆಟದ ಡೇರೆಯ ಪ್ರವೇಶ ದ್ವಾರ (Gate).

ಗೇಟು ಕಲೆಕ್ಶನ್ : ಡೇರೆ ಆಟದಲ್ಲಿ, ಆಯಾ ದಿನ ಸಂಗ್ರಹ ಆಗುವ ಟಿಕೇಟು ಮಾರಾಟದ ವರಮಾನ, ಬಾಕ್ಸ್ ಆಫೀಸ್ ಸಂಗ್ರಹ. (Gate collection).

ಗೇಟುಪಾಸು : 'ಡೇರೆ ಆಟ'ದಲ್ಲಿ ನಡನಡುವೆ ಪ್ರೇಕ್ಷಕನು ಹೊರಗೆ ಹೋಗುವಾಗ ನೀಡುವ ಗುರುತು ಚೀಟಿ (Gate pass).

ಗೊಂಡೆ : 1. ಕಿರೀಟ, ಕೊರಳಾರ, ಕರ್ಣಪಾತ್ರ ಮೊದಲಾದ ಆಭರಣಗಳಿಗೆ ಅಲಂಕರಣ ಮತ್ತು ಹೊರರೇಖೆಯಾಗಿ ಬಳಸುವ ಉಣ್ಣೆ ಅಥವಾ ಚವರಿಯ ಗೊಂಡೆ. ಸಾಂಪ್ರದಾಯಿಕವಾಗಿ ಇದು ಕಪ್ಪು ಬಣ್ಣದ್ದು ಮಾತ್ರ. ಈಗ ಬೇರೆ ಬಣ್ಣಗಳವೂ ಬಳಕೆಯಲ್ಲಿವೆ.

2. ಜಡೆಗೊಂಡೆ, ಜಡೆ ತುದಿಯ ಗೊಂಡೆ ಮತ್ತು ಆ ಹೆಸರಿನ ಆಭರಣ.

ಗೊಂಡೆ ಜರಿ : ಒಡವೆ ಅಲಂಕಾರದ ಗೊಂಡೆಯ ಜರಿ; ಜರಿಗೊಂಡೆ.

ಗೊಲ್ಲ ಮಾಧವ : 1. ಪೂರ್ವರಂಗದಲ್ಲಿ ಬರುವ ಒಂದು ಹಾಸ್ಯಪಾತ್ರ. ಶಿವ-ಪಾರ್ವತಿಯರ ಜತೆ ಸಂಭಾಷಿಸುವ ವೇಷ.

2. ಕೃಷ್ಣನ ಒಡ್ಡೋಲಗದಲ್ಲಿ ಬರುವ ಕೃಷ್ಣನ ಮಿತ್ರ. ಮಾಧವರಾಯ.

ಪ್ರಾಯಃ ಕೃಷ್ಣನದೇ ಇನ್ನೊಂದು ವ್ಯಕ್ತಿತ್ವದ ಸಾಂಕೇತಿಕ ಪಾತ್ರ.

ಗೋಟು (ಬ./ಉ.) : 1. ಪಗಡಿ, ಮುಂಡಾಸು ಗಳಿಗೆ ಬಳಸುವ ಬಟ್ಟೆ ಲಾಡಿ. ಕೆಂಪು, ಹಳದಿ, ಹಸಿರು ಬಣ್ಣದ ಲಾಡಿಗಳು.

(ತೆ.) 2. **ಬಾಲಮುಂಡು ಸೋಗೆವಲ್ಲಿಗಳ ಮೇಲೆ** ಇರುವ ಅಡ್ಡಗೆರೆಗಳು. ಅಗಲವಾದ ಕಂಬಿಗೆರೆಗಳು, ಬಣ್ಣದ ಪಟ್ಟಿಗಳು. ಇವು ಕಪ್ಪು, ಕೆಂಪು ಹಸಿರು-ಬಣ್ಣಗಳಲ್ಲಿರುತ್ತವೆ.

ಗೋಟುನಾಮ (ತೆ.) : ಅಡ್ಡನಾಮ, ಶೈವ ನಾಮ.

ಗೋಡೆಚಿಟ್ಟ (- ಚುಟ್ಟಿ) (ತೆ.) : ಕಥಕಳಿಯ ವೇಷ ಗಳ ಚುಟ್ಟಿಯ ಕ್ರಮವನ್ನು, ಯಕ್ಷಗಾನದವರು ನಿರ್ದೇಶಿಸುವ ಪದ. ಯಕ್ಷಗಾನದ ವೇಷಗಳದು ಮುಳ್ಳಿನ ಸಾಲುಗಳ ಚಿಟ್ಟಿ; ಇದಕ್ಕೆ ಭಿನ್ನವಾಗಿ, ಕಥಕಳಿಯದು ಗೋಡೆಯಂತೆ ಕಾಣುವ ಒಂದೇ ರಚನೆಯ ಚುಟ್ಟಿ.

ಘ

ಘಟ್ಟದ ಕೋರೆ = ನೋಡಿ : ಗಟ್ಟದ ಕೋರೆ.

ಘಾತ : ತಾಳದ ಘಾತ, ಘಾತ ಸ್ಥಾನ, ದೊಡ್ಡ ಪೆಟ್ಟು, ಪ್ರಾಣ ಪೆಟ್ಟು. ಉದಾ : ಏಕತಾಳಕ್ಕೆ ಒಂದು ಘಾತ. ರೂಪಕಕ್ಕೆ ಎರಡು ಘಾತ.

ಘಾತ ಪೆಟ್ಟು : ತಾಳದ ಘಾತ ಸ್ಥಾನದ ಪೆಟ್ಟು. ಘಾತ.

x

ಉದಾ: ತಾಂ। ಧಿನ್ನಕಥಿಂ। ಏಕತಾಳ. ತಾಂ ಎಂಬುದು ಘಾತ ಪೆಟ್ಟು. ಜಾಗಟೆಯಲ್ಲಿ, ಕಂಚಿನ ತಾಳದಲ್ಲಿ, ಮದ್ದಲೆ, ಚಂಡೆಗಳಲ್ಲಿ ಬರುವ ಆ ಸ್ಥಾನದ ಬಡಿತ. ಇದನ್ನು ಗಟ್ಟಿಯಾಗಿ ಬಡಿಯಬೇಕೆಂದು ಕ್ರಮ.

ಘೋರ: ಕೆಲವು ಹೆಣ್ಣುಬಣ್ಣ (ರಾಕ್ಷಸಿ)ಗಳಿಗೆ ಬಳಸುವ ವಿಶೇಷಣ. ಉದಾ : ಘೋರ ಪೂತನಿ, ಘೋರ ಶೂರ್ಪನಖಿ. (ಕಾರಣ ಇದೇ ವೇಷಗಳ ಮಾಯಾ ರೂಪವೂ ಬರುತ್ತದೆ. ಮಾಯಾ ಪೂತನಿ, ಮಾಯಾ ಶೂರ್ಪನಖಿ ಇತ್ಯಾದಿ.)

ಘೋರಪಾತ್ರ (ಗ./ಮೂ.) : ರಾಕ್ಷಸ ಮತ್ತಿತರ ಕೆಲವು ಪಾತ್ರಗಳು. 'ಬಣ್ಣದ ವೇಷ'ಕ್ಕೆ ಸಂವಾದಿಯಾದ ಪದ.

ಘೋರಬಣ್ಣ (ತೆ.) : 1. ಬಣ್ಣದ ವೇಷಗಳಲ್ಲೂ ವಿಶೇಷ ಉಗ್ರವಾಗಿರುವಂಥವು. ಭಯಂಕರ ವೇಷ ಎಂದರ್ಥ (ಪ್ರೇಕ್ಷಕರ ಪರಿಭಾಷೆ).

2. ನರಕಾಸುರ, ತಾರಕ, ಕಾಲನೇಮಿ, ತಮಾಸುರ ಮೊದಲಾದ ರಕ್ಕಸರ ವೇಷ. ಇದಕ್ಕೆ ಭಿನ್ನವಾದುದು. ನೋಡಿ : ಶೃಂಗಾರ ಬಣ್ಣ.

ಚ

ಚಂದಭಾಮಾ ಸ್ತ್ರೀವೇಷ : ಪೂರ್ವರಂಗದಲ್ಲಿ ಬರುವ ಎರಡು ಸ್ತ್ರೀವೇಷಗಳು. ಕಚ್ಚೆ ಉಡುಗೆಯ ವೇಷಗಳು. "।ಚಂದಭಾಮಾ। ಚಂದಭಾಮಾ। ಓ ಚಂದಭಾಮಾ।। ಚಂದಿರ ವದನೆ ಕೇಳೇ ಚಂದಭಾಮಾ।।" ಎಂದು ಪ್ರಾರಂಭವಾಗುವ ನಾಲ್ಕು ಪದ್ಯಗಳ ಕುಣಿತವಿದೆ. ಹಿಂದೆ, ಇನ್ನಷ್ಟು ಪದ್ಯಗಳೂ, ಹಾಸ್ಯಗಾರನ ಸಂಭಾಷಣೆಯೂ ಇದ್ದಿತೆಂದು ತಿಳಿದು ಬರುವುದು. ಚಂದಭಾಮಾ ಸ್ತ್ರೀವೇಷಗಳು ಮೂರು ಎಂದು ಒಂದು ಅಭಿಪ್ರಾಯವಿದೆ.

ಈ ವೇಷಗಳು, ಅರ್ಧನಾರಿ ವೇಷಕ್ಕಿಂತ ಮೊದಲು ಬರುತ್ತವೆ.

ಚಂದ್ರ / ಚಂದ್ರಕಲೆ : ಶಿವನ ವೇಷಕ್ಕೆ, ಜಡೆಯ ಮುಂಭಾಗದಲ್ಲಿ ಕಟ್ಟುವ ಅರ್ಧಚಂದ್ರಾಕೃತಿ ಬಿಲ್ಲೆ ಅಥವಾ ಜರಿ. ಇದರ ಮೇಲ್ಗಡೆ ಗಂಗೆ, ಹಿಂಗಡೆ ಸರವೂ ಇರುತ್ತವೆ.

ಚಂದ್ರಕಲೆ = ನೋಡಿ : ಚಂದ್ರ.

ಚಂದ್ರಬೊಟ್ಟು : ಚಂದ್ರಾಕೃತಿಯ ಬೊಟ್ಟು.

1. ಸ್ತ್ರೀವೇಷದ ಅಡ್ಡಕುಂಕುಮ.

2. ಅರ್ಧ ಚಂದ್ರಾಕೃತಿಯ ಬೊಟ್ಟು. ಇದಕ್ಕೆ ಬಿಂಗದ ಪುಡಿ ಹಚ್ಚುತ್ತಾರೆ. ಇದಕ್ಕೆ ಭಿನ್ನವಾಗಿ ಉರುಟಾದ ಬೊಟ್ಟು ಸೂರ್ಯ ಬೊಟ್ಟು.

ಚಕ್ರ : 1. ಚಕ್ರಾಯುಧ. ತೊಟ್ಟಿನಂತಹ ಹಿಡಿ ಇರುವ ಮರದಿಂದ ಮಾಡಿದ ಚಕ್ರಾಕಾರದ ರಚನೆ.

2. ಚಕ್ರ ಮುದ್ರೆ. ವೇಷಗಳ ಹಣೆಯಲ್ಲಿ ಕೆನ್ನೆಗಳ ಮೇಲೆ ಬರೆಯುವ ಚಕ್ರಾಕೃತಿ.

3. ಆಭರಣಗಳಲ್ಲಿ ಬರುವ ಚಕ್ರಾಕೃತಿಯ ಬಿಲ್ಲೆ, ಹಲ್ಲೆಗಳು.

ಚಕ್ರತಾಳ (ತೆ.) : ಕಂಚಿನ ದೊಡ್ಡತಾಳ. ಸು. 3-4 ಇಂಚು ವ್ಯಾಸದ ಎರಡು ಚಕ್ರಗಳಂತಿರುವ ವಾದ್ಯ. ಇದನ್ನು, ಚಂಡೆಗೆ ಹಿಮ್ಮೇಳವಾಗಿ ಬಳಸುವರು. ಮದ್ದಲೆ ಮಾತ್ರ ಬಾರಿಸುವಾಗ ಚಕ್ರತಾಳವನ್ನು ಬಾರಿಸುವುದಿಲ್ಲ.

ಚಕ್ರದೂತ (ತೆ.) : ಅಭಿಮನ್ಯು ಕಾಳಗದಲ್ಲಿ, ದ್ರೋಣನು, ಚಕ್ರವ್ಯೂಹವನ್ನು ಬಲಿದು, ಅರ್ಜುನನಿಗೆ ಆಹ್ವಾನ ನೀಡಲು ಕಳುಹಿಸುವ ದೂತ.

ಚಕ್ರಸುತ್ತು : (ಬ.) ಯುದ್ಧದೃಶ್ಯ, ಪ್ರಯಾಣ ಕುಣಿತಗಳಲ್ಲಿ ಬಳಸುವ ಸುತ್ತು ಕುಣಿತ.

(ತೆ.) ಹಲವು ವೇಷಗಳು ಒಟ್ಟಾಗಿ ವೃತ್ತಾಕಾರವಾಗಿ ಕುಣಿಯುವ ಯುದ್ಧನೃತ್ಯ.

ಚಡ್ಡಿ : 1. ಕಸೆ ಅಥವಾ ಮೇಲಿನ ಚಲ್ಲಣದ ಒಳಗೆ ಧರಿಸುವ ಒಳ ಚಲ್ಲಣ.

2. ಹನುಮಂತ, ಜಾಂಬವ ಪಾತ್ರಗಳು ಇತ್ತೀಚೆಗಿನ ವೇಷಕ್ರಮದಲ್ಲಿ ಧರಿಸುವ ಕೆಂಪು ಚಡ್ಡಿ. (ಆಧುನಿಕ; ಸಾಂಪ್ರದಾಯಿಕವಲ್ಲ.)

ಚಪ್ಪರ: ಆಟಕ್ಕೆ ಸಂಬಂಧಿಸಿದ ಚಪ್ಪರ. ಬಿದಿರು, ಕಟ್ಟಿಗೆ, ಅಡಿಕೆ ಮರ, ಸೋಗೆ, ಮಡಲು, ತಡಿಕೆ ಇತ್ಯಾದಿಗಳಿಂದ ಮಾಡಿದ ರಚನೆ.

1. ರಂಗಸ್ಥಳಕ್ಕೆ ಹಾಕುವ ಚಪ್ಪರ.
2. ರಂಗಸ್ಥಳ, ಸಭೆ ಎರಡಕ್ಕೂ ಹಾಕುವ ಚಪ್ಪರ.
3. ರಂಗಕ್ಕೆ ಮತ್ತು ಬ್ರಹ್ಮ ಸಭೆಗೆ ಹಾಕುವಂತಹದು.
4. ಗಟ್ಟದಕೋರೆ ಆಟಗಳಲ್ಲಿ ಭಾಗವತ. ಹಿಮ್ಮೇಳಕ್ಕೆ ಮಾತ್ರ ಚಪ್ಪರ.

ಚಪ್ಪರಮಂಚ: ಪೂರ್ವರಂಗದ ಒಂದು ಕುಣಿತ. ಕಟ್ಟು ಹಾಸ್ಯಗಳ ಕೊನೆಗೆ ಬರುವ ದೃಶ್ಯ. ನೋಡಿ: **ಅಟ್ಟಳಿಗೆ ಆಟ, ಅರೆಪ್ಪಾವಿನಾಟ.**

ಬಟ್ಟೆಯ ಜಾಲರಿ, ಹೊದಿಕೆ ಇರುವ ತಡಿಕೆಯ ಮಂಚದಾಕೃತಿಯನ್ನು, ಸ್ತ್ರೀವೇಷವು ಸೊಂಟದ ಸುತ್ತ ಕಟ್ಟಿಕೊಂಡು ಕುಣಿಯುವುದು. ಮಂಚಕ್ಕೂ, ಕುಣಿತಕ್ಕೂ ಈ ಹೆಸರು.

ಈ ಚಪ್ಪರ ಮಂಚದಾಟದಲ್ಲಿ ಎರಡು ಪ್ರಕಾರ ಗಳಿವೆ: 1) ಒಂದೇ ವೇಷವು ಕುಣಿಯುವುದು. 2) ಒಂದು ವೇಷವು ಕುಣಿಯುವಾಗ ಇನ್ನೊಂದು ಮಲಗಿದಂತೆ ಇರುತ್ತದೆ. ಒಬ್ಬಳು, ಮತ್ತೊಬ್ಬಳನ್ನು ಎತ್ತಿಕೊಂಡು ಕುಣಿದಂತೆ ಕಾಣುವುದು.

ಇದಕ್ಕೆ, ಹಳೆ ಮಲೆಯಾಳ ಭಾಷೆಯ "ಚೂರಿಯಾ ಕುಲತ್ತಿಲೆಂದೀ..." ಎಂಬ ವೃತ್ತವನ್ನೂ, ಏಕತಾಳದ ಕೆಲವು ಪದಗಳನ್ನೂ ಹಾಡುವುದಿತ್ತು.

ಚರ್ಮ: ಚೆಂಡೆ, ಮದ್ದಲೆಗಳ ಚರ್ಮ. ಮುಚ್ಚಿಗೆ ಚರ್ಮ. ಮದ್ದಲೆಗೆ– ದನದ, ಒಂದು ವರ್ಷದೊಳಗಿನ ಪ್ರಾಯದ ಕರುವಿನ ಚರ್ಮವೂ, ಚೆಂಡೆಗೆ ಮೂರುವರ್ಷ ಪ್ರಾಯವಾಗಿರುವ, ಕರುಹಾಕಿರುವ, ದನದ ಚರ್ಮವೂ ಪ್ರಶಸ್ತ. ಚೆಂಡೆಗೆ ಆಡಿನ ಚರ್ಮವೂ ಆಗುತ್ತದೆ.

ಪ್ರಾಣಿಯು ಸತ್ತು ಒಂದು ಗಂಟೆಯ ಒಳಗೆ ಚರ್ಮ ತೆಗೆದು ಒಣಗ ಹಾಕಬೇಕು. ಚೆನ್ನಾಗಿ ಬಿಡಿಸಿ, ಅರುವತ್ತು ಗೂಟಗಳಿಗೆ ಸಿಕ್ಕಿಸಿ ಹರಡಿ ಒಣಗಿಸಬೇಕು. ಒಂದೇ ಬಿಸಿಲಿಗೆ ಒಣಗಿ ಆಗಬೇಕು. ಅನಂತರ ಚರ್ಮಕ್ಕೆ ಬೂದಿ ಹಚ್ಚಿ, ಬಿದಿರಿನ ಗೂಟಗೆಯಿಂದ ಕೆರೆಸಿ ರೋಮ ತೆಗೆದು, ಮಡಚಿ, ಗುದ್ದಿ ಹದಮಾಡಬೇಕು. ಒಂದು ಪ್ರಾಣಿಯಿಂದ ಎರಡು ಕವಳ (ಮುಚ್ಚಿಗೆ ಅಳತೆ ಚರ್ಮ) ಸಿಗುತ್ತವೆ. ಒತ್ತುಕವಳಕ್ಕೆ ದನದ ಚರ್ಮ ಒಳ್ಳೆಯದು. ಮದ್ದಲೆಯ ಬಾರಗಳಿಗೆ ಎರಡು ವರ್ಷ ಪ್ರಾಯವಾದ, ಪೆಟ್ಟು ತಿನ್ನದ, ಕೋಣ ಅಥವಾ ಎಮ್ಮೆಯ ಚರ್ಮ ಪ್ರಶಸ್ತ. ನೋಡಿ: **ಕವಳ, ಜೀವಕವಳ, ಪಾತಿ, ಮುಚ್ಚಿಗೆ.**

ಚಲ್ಲಣ: 1. ವೇಷಧಾರಿಯು ಕಚ್ಚೆಯ ಒಳಗೆ ಧರಿಸುವ ಒಳ ಚಲ್ಲಣ. ಹೆಚ್ಚಾಗಿ ಕಪ್ಪು ಬಣ್ಣದ್ದು.
(ತೆ.) 2. ಕಸೆಯ ಬದಲಾಗಿ ಧರಿಸುವ ಬಣ್ಣದ ಚಲ್ಲಣ. ಕಪ್ಪು, ಕೆಂಪು, ಹಸಿರು ಬಣ್ಣ ಗಳಲ್ಲಿರುತ್ತದೆ.

ಚವರಿ = ನೋಡಿ: ಚೌರಿ.

ಚಳಕಿ (ತೆ.): 1. ಚಳಕಿಗೆ. ಹಲ್ಲೆ, ಮಣಿಗಳನ್ನು ಜೋಡಿಸಿರುವ ಕೈಕಟ್ಟು, ಮುಖ್ಯವಾಗಿ ಸ್ತ್ರೀವೇಷದ ಕೈಕಟ್ಟು, ತೋಳ್ಬಂದಿ, ತೋಳುಬಳೆ.
2. ಕಂಕಣ, ದೊಡ್ಡಬಳೆ.

ಚಾಪು/ಛಾಪು: ಮದ್ದಲೆಯ ನಾದದ ಒಂದು ಪ್ರಕಾರ. ಕಿರುಬೆರಳು ಕರ್ಣದ ಅಂಚಿಗೆ ತಾಗುವಂತೆ, ಮತ್ತು ಕೈಯ ಕೆಳ ಅಂಚು ಚರ್ಮದ ಮೇಲೆ ಒತ್ತುವಂತೆ ಬಡಿಯುವ ಪೆಟ್ಟು. ತಾಂ, ಥಾಂ ಎಂಬ ನಾದ ಬರುವಂತಹ ಪೆಟ್ಟು.

ಚಾಪೆ: ಹುಲ್ಲುಕಡ್ಡಿ ಚಾಪೆ ಅಥವಾ ಗರಿಚಾಪೆ. ವೇಷಧಾರಿಗಳು ಚೌಕಿಯಲ್ಲಿ ಕುಳಿತುಕೊಳ್ಳಲು, ಬಳಕೆ. ರಂಗದಲ್ಲಿ ಕುಳಿತುಕೊಳ್ಳುವ, ಮಲಗುವ, ದೃಶ್ಯಗಳಿದ್ದರೆ, ಚಾಪೆ ಹಾಕಿರಬೇಕು.

ಚಾಪೆಕಟ್ಟು: ತಿರುಗಾಟದ ಮೇಳದ ಹೊರೆಗಳಲ್ಲಿ ಒಂದು; ಚಾಪೆಗಳ ಹೊರೆ.

ಚಾಯ (ತೆ.): ಮೈಬಣ್ಣ, ಮೈಕಾಂತಿ, ಗೌರವರ್ಣ ಎಂದು ಸಾಮಾನ್ಯ ಅರ್ಥ. ಬಣ್ಣಗಾರಿಕೆಯಲ್ಲಿ ಸಾಮಾನ್ಯ ಮೂಲಲೇಪನ.

ಹಿಂದೆ ಇದು ಅರದಾಳ, ಅಥವಾ ಅರದಾಳ ಇಂಗಲೀಕ ಮಿಶ್ರಣದ್ದಾಗಿರುತ್ತಿತ್ತು. ಈಗ ಸಪೇತ, ಹಳದಿ, ಕೆಂಪು ಬಣ್ಣಗಳ ಮಿಶ್ರಣದ್ದಾಗಿದೆ.

ಚಾಯದ ಕಲ್ಲು (ತೆ.): 'ಚಾಯ' ವರ್ಣವನ್ನು ತಯಾರಿಸಿಡುವ ಕಲ್ಲು.

ಚಾಲು ಕುಣಿತ/ಚಾಲೂ ಕುಣಿತ (ಬ./ಉ.): ಹಿಂದಿ 'ಚಾಲ್' (ತಾಳದ ನಡೆ, ಬಡಿತ) ಎಂಬುದರಿಂದ ನಿಷ್ಪನ್ನ ಪದ.

ವೇಷವು ಪದ್ಯದೊಂದಿಗೆ ಕುಣಿಯುವ ಮಾಮೂಲು ಕುಣಿತಕ್ಕಿಂತ ಹೆಚ್ಚುವರಿಯಾಗಿ, ಮಧ್ಯೆ ಪದ್ಯ ನಿಲ್ಲಿಸಿ ಹಿಮ್ಮೇಳವನ್ನು ಮಾತ್ರ ನುಡಿಸಿದಾಗ ಕುಣಿಯುವ ಕುಣಿತ. ಇದಕ್ಕೆ ಸಂಬಂಧಿಸಿದ ಬಾರಿಸುವಿಕೆಗಳು 'ಚಾಲು'ಗಳು. ಶೃಂಗಾರ, ವೀರ, ಹಾಸ್ಯ, ರೌದ್ರ ಸಂದರ್ಭಗಳಿಗೆ, ಹರ್ಷ, ಉಲ್ಲಾಸ ಭಾವಗಳಿಗೆ ಈ ಕುಣಿತದ ಬಳಕೆ. ಚಾಲು ಕುಣಿತಗಳನ್ನು ತಾಳದಸ್ತೆಯಿಂದ ಗುರುತಿಸುವುದು

ರೂಢಿ. ಉದಾ: ಧೇಂತಧಿನ್ನಾಂ। ತೈತದಿನ್ನಾಂ, ಧೇಧಿತ್ತಾಧೀಂ... ಇತ್ಯಾದಿ ಸಾಂಪ್ರದಾಯಿಕ ಚಾಲು ಕುಣಿತಗಳು ಸುಮಾರು ಮೂವತ್ತು ಇದ್ದು, ಇತ್ತೀಚೆಗೆ ಹಲವು ಹೊಸ ಆವಿಷ್ಕಾರಗಳಾಗಿವೆ.

ಚಾಲು ಕುಣಿತ ಕ್ರಮವು ತೆಂಕುತಿಟ್ಟಿನಲ್ಲೂ ಬಳಕೆಗೆ ಬರುತ್ತಿದೆ.

ಚಾಲೂ ಕುಣಿತ = ನೋಡಿ: **ಚಾಲು ಕುಣಿತ.**

ಚಿಂತಾಕು: ಸ್ತ್ರೀವೇಷದ ಒಂದು ಕಂಠಾಭರಣ. ಕೊರಳ ಗಂಟನ್ನು ಮುಚ್ಚಿ ನಿಲ್ಲುವಂತೆ ಕಟ್ಟುವ, ಚಿಕ್ಕಮಣಿಗಳನ್ನು ಪೋಣಿಸಿ ಮಾಡಿದ ಅಗಲ ಪಟ್ಟಿ; ಮಣಿಗಳ ಪಟ್ಟಿ; ಮಣಿ ಅಡ್ಡಿಗೆ.

ಚಿಂದು ಭಾಗವತ/ಚಿಂದು ಯಕ್ಷಗಾನ: ಆಂಧ್ರ ಪ್ರದೇಶದ ಒಂದು ಸಾಂಪ್ರದಾಯಿಕ ರಂಗಭೂಮಿ. ನಮ್ಮ ಬಡಗುತಿಟ್ಟನ್ನು, ವೇಷ, ಹಿಮ್ಮೇಳಗಳೆರಡರಲ್ಲೂ ಸ್ಪಷ್ಟವಾಗಿ ಹೋಲುತ್ತದೆ.

ಚಿಂದು ಯಕ್ಷಗಾನ = ನೋಡಿ: **ಚಿಂದು ಭಾಗವತ.**

ಚಿಕ್ಕ = ನೋಡಿ: **ಕೊಕ್ಕೆಚಿಕ್ಕ.**

ಚಿಕ್ಕಪ್ರಾಯದ ಬಾಲೆ... (ತೆ.): ಪೂರ್ವರಂಗದಲ್ಲಿಯ ಮುಖ್ಯ ಸ್ತ್ರೀವೇಷವು ಹೊರಡುವ ಮೊದಲು ಹಾಡುವ ಪದ್ಯಗಳ ಮೊದಲ ಸಾಲು. ಈ ಪದ್ಯಗಳಿಗೆ ಮೇಳದ ಮುಖ್ಯ ಭಾಗವತನೂ, ಮದ್ದಲೆಗಾರನೂ ಬರಬೇಕು. ತೆರೆಯ ಹಿಂದೆ ಸ್ತ್ರೀವೇಷ ನಿಂತಿರುತ್ತದೆ.

ಚಿಕ್ಕಮೇಳ (ಬ.): ಮಳೆಗಾಲದಲ್ಲಿ ವಿಶೇಷತಃ ನವರಾತ್ರಿಯ ಕಾಲದಲ್ಲಿ ತಿರುಗಾಟ ನಡೆಸುವ ಚಿಕ್ಕದಾದ ಮೇಳ. ಓರ್ವ ಭಾಗವತ, ಮದ್ದಲೆಗಾರ, ಶ್ರುತಿವಾದಕ, ಎರಡು ವೇಷಗಳು– ಇಷ್ಟು ಜನರ ತಂಡವಿದು. ಒಂದು ಸ್ತ್ರೀವೇಷ, ಒಂದು ಪುಂಡುವೇಷ ಇರುವುದು ರೂಢಿ. ಈ ವೇಷಗಳಿಗೆ 'ರಾಧಾಕೃಷ್ಣ ವೇಷಗಳೆಂ'ದೂ ಹೆಸರು. ಇವರಿಗೆ ಧಾನ್ಯ, ವಸ್ತು, ಧನ ರೂಪದಲ್ಲಿ ಸಂಭಾವನೆ ಸಲ್ಲುತ್ತದೆ. ನೋಡಿ: **ದಾಸಾವರ್ತ, ರಾಧಾಕೃಷ್ಣವೇಷ.**

ಚಿಟಿಕೆ/ಚಿಪ್ಳೆ/ಚಿಟ್ಕೆ: ತೂತು ಹಿಡಿಗಳುಳ್ಳ ಮರದ ತುಂಡುಗಳಿಗೆ, ಗೆಜ್ಜೆ ಅಥವಾ ಲೋಹದ ಚಕ್ರಗಳನ್ನು ಸಿಕ್ಕಿಸಿ ತಯಾರಿಸಿದ ಚಿಪ್ಳಿ. ಹರಿದಾಸರ ಚಿಪ್ಳಿ. ನಾರದನ ಪಾತ್ರಕ್ಕೆ ಬಳಕೆಯಿತ್ತು.

ಚಿಟ್ಟಿ: ನೋಡಿ: **ಚುಟ್ಟಿ.**

ಚಿಟ್ಟಿಗೊಂಡೆ / ಚುಟ್ಟಿಗೊಂಡೆ: ಬಣ್ಣದ ವೇಷಗಳ ಮುಖಕ್ಕೆ ಅಂಟಿಸುವ ಹತ್ತಿಯ ಗೊಂಡೆಗಳು. ಚಿಟ್ಟಿಗಳಿಗೆ ಪೂರಕ. ಮೂಗಿನ ತುದಿಗೂ, ಹಣೆಗೂ ಅಂಟಿಸುವರು. ಒಂದರಿಂದ ಆರರ ತನಕ ಇರುತ್ತವೆ.

ಚಿಟ್ಟೆ (ಬ.): = ನೋಡಿ: **ಚುಟ್ಟಿ.**

ಚಿಟ್ಟೆಪಟ್ಟಿ (ತೆ.): ವೇಷಧಾರಿಯು ತಲೆಗೆ ಬಿಗಿಯುವ, ಕಪ್ಪುಬಣ್ಣದ ಬಟ್ಟೆಯ ಪಟ್ಟಿಗಳು.

1. ಬಣ್ಣಹಚ್ಚುವ ಮೊದಲು ಒಂದು ಕಪ್ಪು ಪಟ್ಟಿಯನ್ನು ಹಣೆಯ ಮೇಲ್ಗಡೆಯಿಂದ ಮುಡಿಯ ಹಿಂಬದಿಗೆ ಬಿಗಿಯುವರು. ಇದು ಬಣ್ಣದ ಸೀಮೆ ನಿರ್ಧರಿಸಲಿಕ್ಕಾಗಿ ಮತ್ತು ಕೂದಲು ಮುಖದ ಮೇಲೆ ಬಾರದಂತೆ ತಡೆಯಲಿಕ್ಕಾಗಿ ಇರುತ್ತದೆ.

2. ಬಣ್ಣ ಹಚ್ಚುವ ಮೊದಲು ಅಥವಾ ಅನಂತರ, ಕಿರೀಟಕ್ಕೆ ಆಧಾರವಾಗಿ ಬಿಗಿಯುವ ಬಟ್ಟೆಯ ಪಟ್ಟಿಗಳು. ಹಣೆಯ ಮೇಲಂಚಿನಲ್ಲಿ ಅಡ್ಡಕ್ಕೆ ಮತ್ತು ಮುಡಿಯಿಂದ ಹಣೆಯವರೆಗೆ ಉದ್ದಕ್ಕೆ ಪಟ್ಟಿಗಳನ್ನಿಟ್ಟು ಅವುಗಳನ್ನು ಸ್ವಲ್ಪ ಕೂದಲುಗಳ ಜತೆ ಕೂಡಿಸಿ ತಿರುಚಿ ಗಂಟು ಹಾಕಿ, ಉಂಡೆಯಂತೆ ಮಾಡುವುದು. ಇದರ ಮೇಲೆ ಪುನಃ ಪಟ್ಟಿ ಹಾಕಿ, ಮುಡಿಯ ಕೆಳಗೆ ಬಿಗಿಯುವುದು. ಹೀಗೆ ಚಿಟ್ಟಿಪಟ್ಟಿ ಕಟ್ಟಿ ಮುಗಿದಾಗ ಹಣೆಯ ಮೇಲಂಚಿನಲ್ಲಿ ಒಂದು, ಮುಡಿಯಲ್ಲಿ ಒಂದು ಹೀಗೆ ಎರಡು ಗಂಟುಗಳಾಗುತ್ತವೆ. ಇವು ಕಿರೀಟ ನಿಲ್ಲಲು ಆಧಾರವಾಗುತ್ತವೆ.

ಪ್ರಾಯಃ ಮಲೆಯಾಳಿ ಪದ. ಮಲೆಯಾಳದಲ್ಲಿ 'ಚಿಟ್ಟ' ಎಂದರೆ ವ್ಯವಸ್ಥೆ ಎಂದು ಅರ್ಥ.

ಚಿಟ್ಕೆ = ನೋಡಿ: **ಚಿಟಿಕೆ.**

ಚಿತ್ತಾರ (ತೆ.): ಮುಖವರ್ಣಿಕೆಯ ನಾಮ, ಮುದ್ರೆ, ಚಕ್ರ, ಮುತ್ತರಿಗಳು ಅಥವಾ ಇವೆಲ್ಲ ಸೇರಿ ಆಗುವ ವಿನ್ಯಾಸ.

ಚಿತ್ರ: ಒಟ್ಟು ವೇಷ. ವೇಷದ ಅಂದ, ಓರಣ. ಉದಾ: "ನಿನ್ನೆಯ ಕೃಷ್ಣನ ಚಿತ್ರ ಚೆನ್ನಾಗಿತ್ತು". "ಈ ವೇಷಧಾರಿಯ ಕೆಲಸ ಚೆಂದ, ಚಿತ್ರ ಸಾಲದು" ಇತ್ಯಾದಿ.

ಚಿನ್ನ (ಬ./ಉ.): ಆಭರಣ, ಒಡವೆ, ಕಿರೀಟ ಇತ್ಯಾದಿ. ಸೇರಿ ಚಿನ್ನ; ತೊಡುಗೆ. ನೋಡಿ: **ಸಾಮಾನು.** ಪ್ರಯೋಗಶಃ– ಆಟದ ಚಿನ್ನ, ಕೈಚಿನ್ನ, ಇತ್ಯಾದಿ. ಆಭರಣಗಳ ಸಾಂಪ್ರದಾಯಿಕ ವರ್ಣ ಹೊಳೆಯುವ ಹಳದಿ, ಸ್ವರ್ಣವರ್ಣವಾದುದರಿಂದ ಈ ಹೆಸರುಗಳು.

ಚಿನ್ನದ ಗುಬ್ಬಿ/ಬೆಳ್ಳಿಗುಬ್ಬಿ (ಬ.): ಉತ್ತರಕುಮಾರನ ಜತೆಯಲ್ಲಿ ಬರುವ ಎರಡು ಸ್ತ್ರೀವೇಷಗಳು. ವ್ಯಯ್ಯಾರಿ ಹೆಣ್ಣುಗಳು.

ಚಿನ್ನದ ಪೆಟ್ಟಿಗೆ (ಬ./ಉ.) : ಮೇಳದ ಆಭರಣಗಳನ್ನಿಡುವ ಪೆಟ್ಟಿಗೆ. ಸರಕಿನ ಪೆಟ್ಟಿಗೆ.

ಚಿನ್ನದ ರೇಕು (ಖೆ) (ತೆ.) : ಕಣ್ಣಿನ ಕೆಳಗಡೆ, ಮತ್ತು ಅಂಚಿನ ಕೊನೆಯ ವರೆಗೆ, ಬರೆಯುವ ಚಿನ್ನದ ಬಣ್ಣದ ರೇಖೆ. ಹಿರಣ್ಯಾಕ್ಷ, ಇಂದ್ರಜಿತು, ಸುಲೋಚನ– ವೇಷಗಳಲ್ಲಿ ಪ್ರಯುಕ್ತ.

ಚಿಪ್ಲಿ = ನೋಡಿ : **ಚಿಟಿಕೆ.**

ಚಿಪ್ಳಿ = ನೋಡಿ : **ಚಿಟಿಕೆ.**

ಚುಟ್ಟಿ/ಚಿಟ್ಟಿ/ಚಿಟ್ಟೆ : ಅಕ್ಕಿಹಿಟ್ಟು ಮತ್ತು ಸುಣ್ಣದ ಹಸಿ ಮಿಶ್ರಣ ಮತ್ತು ಅದನ್ನುಪಯೋಗಿಸಿ ಮುಖದ ಮೇಲೆ ಇರಿಸುವ ಚುಕ್ಕಿ ಅಥವಾ ಮುಳ್ಳುಗಳಂತಹ ಆಕೃತಿ.

ಚುಟ್ಟಿಯು ಮುಖ್ಯವಾಗಿ ಬಣ್ಣದ ವೇಷಗಳ ಬಣ್ಣಗಾರಿಕೆಯ ಮುಖ್ಯ ಅಂಶ. ನಯವಾಗಿ ಅರೆದ ಬೆಳ್ತಿಗೆ ಅಕ್ಕಿ ಮತ್ತು ಸುಣ್ಣಗಳನ್ನು 2:1ರ ಅನುಪಾತದಲ್ಲಿ ಮಿಶ್ರಮಾಡಿ, ಚುಟ್ಟಿಯನ್ನು ತಯಾರಿಸುವರು.

ಚುಟ್ಟಿಯ (ಚುಟ್ಟಿ ಮುಳ್ಳುಗಳ) ವಿನ್ಯಾಸವು ಆಕಾರದಲ್ಲಿ ಮುಖ್ಯವಾಗಿ **ಕಾಟು ಬಣ್ಣ**, ರಾಜ ಬಣ್ಣ, ಹೆಣ್ಣು ಬಣ್ಣ (ಆಯಾ ಪದ ನೋಡಿ) ಮತ್ತು ಹನುಮಂತ, ನರಸಿಂಹ ಇತ್ಯಾದಿ ವಿಶಿಷ್ಟ ವೇಷಗಳು ಇಟ್ಟುಕೊಳ್ಳುವ ಬೇರೆ ಬೇರೆ ಪ್ರಕಾರಗಳು ಇವೆ.

ರಾಜ ಬಣ್ಣಕ್ಕೂ ಕಾಟು ಬಣ್ಣಕ್ಕೂ ಮೀಸೆ–ಕಿವಿಯ ಕೆಳಗಿನ ಚುಟ್ಟಿಯ ಕ್ರಮದಲ್ಲಿ ವ್ಯತ್ಯಾಸವಿಲ್ಲ. ಕಿವಿಯಿಂದ, ಗದ್ದಕ್ಕಾಗಿ ಇನ್ನೊಂದು ಕಿವಿಯ ವರೆಗೆ ಚುಟ್ಟಿಗಳ ಸಾಲು ಒಂದೇ ರೀತಿ; ಮೇಲ್ಭಾಗದಲ್ಲಿ, ಎಂದರೆ ಹಣೆ, ಮುಖಗಳಲ್ಲಿ ವ್ಯತ್ಯಾಸವಿದೆ. ಚುಟ್ಟಿಯ ಸಾಲುಗಳು ಸೇರಿ ಆಗುವ ಸುಳಿಗಳು ರಾಜ ಬಣ್ಣದ ವೈಶಿಷ್ಟ್ಯ. ಹನುಮಂತ, ವಾಲಿ, ಅಂಗದ ಪಾತ್ರಗಳಿಗೂ ಸುಳಿಗಳಿವೆ. ಕಾಟುಬಣ್ಣದ ಚುಟ್ಟಿ ಸಾಲುಗಳು ಸುಳಿ ಇಲ್ಲದೆ ನೇರವಾಗಿ ಸಂಧಿಸಬಹುದು ಅಥವಾ ಆಯತಾದಿ ಆಕೃತಿಯಾಗಿ ವಿನ್ಯಾಸಗೊಳ್ಳಬಹುದು. ರಾಜ ಬಣ್ಣಗಳ ಚುಟ್ಟಿಗಳಿಗೆ ನಿಯಮಗಳು ಹೆಚ್ಚು ನಿಶ್ಚಿತ.

ಚುಟ್ಟಿಯ ಮುಳ್ಳುಗಳಲ್ಲಿ **ಕಬುರು ಚುಟ್ಟಿ, ಕಮಾನು ಚುಟ್ಟಿ, ಪಂಚವರ್ಣ ಚುಟ್ಟಿ** ಇತ್ಯಾದಿ ಪ್ರಭೇದಗಳಿವೆ.

ಚುಟ್ಟಿ ಇಡುವ ಕ್ರಮ : ಮೊದಲಾಗಿ ಚುಟ್ಟಿಯ ಹಿಟ್ಟನ್ನು ಗೆರಟೆಯಲ್ಲಿ ಕಲಸುವುದು. ತಲೆಗೆ ಚಿಟ್ಟಿಪಟ್ಟಿ ಕಟ್ಟುವುದು. ಆ ಬಳಿಕ ಚಿಟ್ಟಿಯ ಅಪೇಕ್ಷಿತ ವಿನ್ಯಾಸಕ್ಕೆ ಬೇಕಾದ ಮೂಲವಿನ್ಯಾಸ ಅಥವಾ ಚೌಕಟ್ಟನ್ನು **(basic design, framework)** ತಯಾರಿಸಿ, ಅದಕ್ಕನುಸರಿಸಿ 'ಚಾಯ' (ಬಿಳಿ-ಹಳದಿ ಮಿಶ್ರಣ)ದ ಗೀಟು ಎಳೆದುಕೊಂಡ ಮೇಲೆ, ಚುಟ್ಟಿ ಇಡಲು ಆರಂಭಿಸುವುದು. ಫಲ ಬಿಟ್ಟ ತೆಂಗಿನ ಮರದ ಗರಿಯ ಕಡ್ಡಿಯಿಂದ ಹಿಟ್ಟನ್ನು ಬೊಟ್ಟುಗಳಾಗಿ ಇಡುತ್ತ ಹೋಗಬೇಕು. ಇದು ಒಣಗುತ್ತಿದ್ದಂತೆ, ಮೂಲ ಚೌಕಟ್ಟಿನ ಹೊರಗೆ, ಸಪೇತಿನ ಗೆರೆ ಎಳೆಯಬೇಕು. ಪುನಃ ಚುಟ್ಟಿ ಇಡುವುದು– ಹೀಗೆ ಪರ್ಯಾಯ ಕ್ರಮದಿಂದ ಚುಟ್ಟಿ ಇಡುವುದು, ಮಸಿಗೀಟು ಎಳೆಯುವುದು, ಹಣೆಗೆ ಇಂಗಲೀಕ ತುಂಬಿಸುವುದು, ಗಡ್ಡಕ್ಕೆ ಗೀಟು ಎಳೆಯುವುದು– ಹೀಗೆ ಮಾಡುತ್ತಹೋದಂತೆ ಚುಟ್ಟಿಯ ಮುಳ್ಳುಗಳು ಒಣಗುತ್ತವೆ.

ಈಗ ಚಿಟ್ಟಿಯ ಆಕಾರದಲ್ಲಿ ತಯಾರಿಸಿಟ್ಟ ಸಿದ್ಧವಸ್ತುಗಳನ್ನೂ ಬಳಸುತ್ತಾರೆ. ಹಾಳೆ, ತಗಡು, ಕಾಗದ, ನವಿಲು ಹೀಲಿ, ಥರ್ಮಾಕೋಲ್ ಮೊದಲಾದುವುಗಳನ್ನು ಇದಕ್ಕೆ ಉಪಯೋಗಿಸುತ್ತಾರೆ. ಹಿಟ್ಟಿನ ಚುಟ್ಟಿಯೂ ಬಳಕೆಯಲ್ಲಿದೆ.

ತೆಂಕುತಿಟ್ಟಿನ ಹಳೆಯ ಕ್ರಮದಂತೆ, ಚುಟ್ಟಿಯು ಬಣ್ಣದ ವೇಷಕ್ಕೆ ಮಾತ್ರ ಸೀಮಿತವಲ್ಲ. 'ಚುಟ್ಟಿ ಇಲ್ಲದ ವೇಷವಿಲ್ಲ' ಎಂದು ನಿಯಮವಂತೆ. ಪುಂಡು ವೇಷ, ರಾಜ ವೇಷಗಳಿಗೂ ನಾಮವನ್ನು ಚುಟ್ಟಿಯಲ್ಲೆ ಇಡುವುದು. ಸ್ತ್ರೀವೇಷದ ಮುಖದ ಮೇಲಿನ ಮುತ್ತರಿ (ಚುಕ್ಕಿ)ಗಳು ಚುಟ್ಟಿಗಳೆಂದು ಅರ್ಥ. ಒಂದು ವೇಳೆ ಚುಟ್ಟಿ ಇಟ್ಟು ವೇಷ ಮಾಡಲಾಗದಿದ್ದರೆ, ಹಣೆಗೆ ಒಂದು ಬಿಳಿ ಚುಕ್ಕಿ ಇಟ್ಟು ಬಣ್ಣಗಾರಿಕೆ ಆರಂಭಿಸಬೇಕೆಂದು ನಿಯಮ.

ಈಗ ಚುಟ್ಟಿಯೆಂಬುದು ಬಣ್ಣದ ವೇಷದ್ದೇ ವಿಶಿಷ್ಟ ಸೊತ್ತು ಎಂದಾಗಿದೆ.

ಈ ಬಗೆಯ ಬಣ್ಣಗಾರಿಕೆಗೂ ತದ್ರೂಪ್ಯಕ್ಕೂ ಕಥಳಿಯಲ್ಲೂ ಚುಟ್ಟಿ ಎಂದೇ ಹೆಸರು.

ಚುಟ್ಟಿಗೊಂಡೆ = ನೋಡಿ : **ಚಿಟ್ಟಗೊಂಡೆ.**

ಚೂಡಕ : 1. ಸ್ತ್ರೀವೇಷದ ಸೂಡಿಗೆ ಸಿಕ್ಕಿಸುವ ಆಭರಣ– ಹೂ ಮತ್ತು ಜಾಲರಿಯ ಆಕೃತಿಯುಳ್ಳ ಅಲಂಕಾರ ವಸ್ತು.

2. ಸೂಡಗ– ತೋರವಾದ ಬಳೆ; ಕಡಗ.

ಚೂಡಾಮಣಿ : ಸ್ತ್ರೀವೇಷದ ಮುಡಿಯಲ್ಲಿ ಧರಿಸುವ ಆಭರಣ; ದೇವಾಲಯದ ಮೇಲೆ ಇಡುವ ಕಳಶವನ್ನು ಹೋಲುವ, ಚಿಕ್ಕ ಗುಮ್ಮಟದ ಆಕೃತಿಯಿದ್ದು ಮೇಲೆ ಶಿಖರದ ರಚನೆಯಿರುವ, ಅಲಂಕಾರ ವಸ್ತು.

ಚೂರು ಹಾರಿಸುವುದು (ಉ.) : ರಂಗಸ್ಥಳದಲ್ಲಿ ಚೆನ್ನಾಗಿ ಮೆರೆಯುವುದು ಎಂಬರ್ಥದಲ್ಲಿ ಪ್ರೇಕ್ಷಕರು ಬಳಸುವ ಪರಿಭಾಷೆ.

ಇದು 'ಮೆರೆಯುವುದು', 'ಸಮರ್ಥವಾಗಿ ಹಾಗೂ ಜನರ ಮೆಚ್ಚುಗೆ ಗಳಿಸುವಂತೆ ನಿರ್ವಹಿಸುವುದು' ಎಂಬರ್ಥದಲ್ಲಿ ಸಾಮಾಜಿಕ ವಾಗ್ರೂಢಿ ಕೂಡ ಆಗಿದೆ.

ನೋಡಿ : ಹುಡಿ ಹಾರಿಸುವುದು, ಧುಪ್ಪದೂಳು.

ಚೂರ್ಣಿಕೆ : 1. ಯಕ್ಷಗಾನ ಪ್ರಸಂಗದಲ್ಲಿ ಬರುವ ಸಂಸ್ಕೃತ ಶ್ಲೋಕಗಳು.

2. ಪದ್ಯಗಂಧಿ ಗದ್ಯದ ಸಂಸ್ಕೃತ ಅಥವಾ ಸಂಸ್ಕೃತ ಭೂಯಿಷ್ಠ ಸ್ತುತಿಪರವಾದ ರಚನೆ.

ಉದಾ: ಸುಧನ್ವ ಕಾಳಗದಲ್ಲಿ ತೈಲಕಟಾಹ ಸನ್ನಿವೇಶದಲ್ಲಿ ಸುಧನ್ವನ ಹರಿಸ್ತುತಿ:

ಹೇದೇವ। ಚರಾಚರ ಪ್ರಾಣಿಜೀವ। ಸುರಾಸುರ ಸಿದ್ಧ ಸಾಧ್ಯ ಯಕ್ಷಗಂಧರ್ವಾದಿ ಸೇವ।... ಭೂಭಾರ ಪರಿಹಾರ। ದುರಿತಹರ। ತೇಜೋಮಯ ಸಹೃದಯ॥... ಇತ್ಯಾದಿ. ಇದಕ್ಕೆ ಛಂದೋ ನಿಯಮ, ಗೀತ ನಿಯಮಗಳೆರಡೂ ಇಲ್ಲ.

ಚೆಂಗು = ನೋಡಿ : ಜಂಗು.

ಚೆಂಡು (ಬ./ಉ.) : ಪಗಡಿ, ಮುಂಡಾಸುಗಳಿಗೆ ಕಟ್ಟುವ ಒಂದು ಅಲಂಕರಣ ಸಾಮಗ್ರಿ; ಹೂ ಚೆಂಡು. ತುರಾಯಿಗಿಂತ ಕೆಳಗೆ, ತಾವರೆಗಿಂತ ಮೇಲೆ ಬರುವ ಬಿಳಿ, ಕೆಂಪು ಬಣ್ಣದ ಸುತ್ತು. ಈಗ ಬಟ್ಟೆಯಿಂದ ಮಾಡಿದ ಅಥವಾ ಚೆಂಡಿನ ರಚನೆ ಯನ್ನು ಬಳಸುತ್ತಾರೆ. ಹಿಂದೆ ಇದಕ್ಕೆ ಮಲ್ಲಿಗೆ ಹೂವಿನ ಚೆಂಡನ್ನು (ಮಾಲೆಯನ್ನು) ಕಟ್ಟುತ್ತಿದ್ದಿರ ಬೇಕು.

ಚೆಂಡೆ : ಹಿಮ್ಮೇಳ ವಾದ್ಯಗಳಲ್ಲೊಂದು; ಚೆಂಡೆ. ನೇರವಾಗಿ ಇರಿಸಿ, ಕೋಲುಗಳಿಂದ ಬಾರಿಸುವುದು. ಬಡಗು, ಉ.ಕ.ಗಳಲ್ಲಿ ಹಿಂದೆ, ತಾಸೆ ಅಥವಾ ತಾಸುಮಾರು ಎಂಬ ವಾದ್ಯವೇ ಇತ್ತು. ಕಾರಣ ಅಲ್ಲಿನ ದೇವಸ್ಥಾನಗಳಲ್ಲೂ ಅದೇ ಇದ್ದುದು. ಈಗ ಅಲ್ಲಿಯ ಚೆಂಡೆಯು ತಾಸೆ ಮತ್ತು ತೆಂಕುತಿಟ್ಟಿನ ಚೆಂಡೆಯ ಮಿಶ್ರರೂಪ. ತೆಂಕುತಿಟ್ಟಿನ ಚೆಂಡೆ ಈ ಪ್ರದೇಶದ ಮತ್ತು ಕೇರಳದ ದೇವಾಲಯಗಳ ಚೆಂಡೆಯ ಪರಿಷ್ಕೃತ ರೂಪವಾಗಿದೆ. ಬಡಗುತಿಟ್ಟಿನ ಚೆಂಡೆಯನ್ನು ಬೆತ್ತದ ನೇರಕೋಲುಗಳಿಂದಲೂ ತೆಂಕುತಿಟ್ಟಿನ ಚೆಂಡೆಯನ್ನು ಮರದ, ತುದಿ ಬಾಗಿದ ಕೋಲುಗಳಿಂದಲೂ ಬಡಿಯುವರು. ತೆಂಕಣ ಚೆಂಡೆಯನ್ನು ಬಾರಿಸುವವರು ನಿಂತುಕೊಂಡು, ಚೆಂಡೆಯನ್ನು ಹೆಗಲಿಗೆ ತೂಗು ಹಾಕಿ ಮೊಣಕಾಲಿನ ಬಳಿ ಚೆಂಡೆಯ ಬಾರಿಸುವಿಕೆಯ ಬದಿ ಬರುವಂತೆ ಮಾಡಿ ಬಾರಿಸುತ್ತಾರೆ. ಬಡಗಿನ ಚೆಂಡೆಯನ್ನು ನೆಲದಲ್ಲಿ ಅಥವಾ ಪೀಠದಲ್ಲಿ ಇಟ್ಟು ಬಾರಿಸು ವರು. ಬಡಗಿನ ಚೆಂಡೆ ಭಾಗವತನ ಬಲಕ್ಕೆ, ಮದ್ದಲೆಯಿಂದಲೂ ಬಲಕ್ಕೆ ಇರುತ್ತದೆ. ತೆಂಕಿನ ಚೆಂಡೆ ಭಾಗವತನ ಎಡಕ್ಕೆ ಇರುತ್ತದೆ. ತೆಂಕುತಿಟ್ಟಿ ನಲ್ಲಿ ಹಿಂದೆ ಚೆಂಡೆ ಬಾರಿಸಲು ಒಂದು ಕೈ ಮತ್ತು ಒಂದು ಕೋಲನ್ನು ಬಳಸುತ್ತಿದ್ದರಂತೆ. ಈ ಶತಮಾನದ ಆರಂಭಕಾಲಕ್ಕೆ ಎರಡು ಕೋಲು ಗಳಿಂದ ಬಡಿಯುವ ಕ್ರಮವು ಬಂದಿತೆನ್ನುವರು.

ಚೆಂಡೆಯು ಮುಖ್ಯವಾಗಿ ಒಂದು ವೀರ ವಾದ್ಯ. 'ಸೌಮ್ಯಪದ'ಗಳಿಗೆ ಇದನ್ನು ಬಾರಿಸುವುದು ವಿರಳ. ಸು. 1920ರ ವರೆಗೂ ಚೆಂಡೆಯನ್ನು ಶ್ರುತಿ ಮಾಡುವ ಕ್ರಮವಿರಲಿಲ್ಲವೆನ್ನವರು.

ಚೆಂಡೆಯ ಉದ್ದವು 15ರಿಂದ 17 ಇಂಚು ಇದ್ದು, ಬಾಯಿಯ ಅಳತೆ 8ರಿಂದ 10 ಇಂಚು ವ್ಯಾಸ ಇರಬೇಕು. ಇದಕ್ಕೆ ಅಡಿಭಾಗದಲ್ಲಿ ಏಳರಿಂದ ಹತ್ತು ಕವಳ (ಚರ್ಮ)ಗಳನ್ನೂ ಮೇಲ್ಬದಿಗೆ ಒಂದು ಚರ್ಮವನ್ನೂ ಮುಚ್ಚುವರು. ದನದ ಕರುವಿನ ಅಥವಾ ಆಡಿನ ಚರ್ಮ ಇದಕ್ಕೆ ಬಳಕೆಯಿದೆ. ಚೆಂಡೆಯ ಮುಚ್ಚಿಗೆಯ ಅಂಚಿಗೆ ಹನ್ನೆರಡು ಕಣ್ಣು (ತೂತು)ಗಳಿರುತ್ತವೆ. ಚೆಂಡೆಯ ಚರ್ಮಗಳನ್ನು ಬಿಗಿಯುವ ಬಾರ (ಹಗ್ಗಗಳು) ಊರ ಸೆಣಬು ಅಥವಾ ಕೋಲುನಾರಿನವು. ಈಗ ಫೈಬರ್ ಹಗ್ಗಗಳನ್ನು ಬಳಸುವರು.

ಚೆಂಡೆ ಅಟ್ಟೆ : ಚೆಂಡೆಯ ಮುಚ್ಚಿಗೆಗಳಿಗೆ ಆಧಾರ ವಾಗಿರುವ ಬಿದಿರಿನ ಬಳೆ. ಅದಕ್ಕೆ ಬಿದಿರಿನ ಕೋಲುಗಳನ್ನು ಬಿಗಿದು ಕಟ್ಟುವರು.

ಚೆಂಡೆ ಕೋಲು : ಚೆಂಡೆಯನ್ನು ಬಾರಿಸಲು ಬಳಸುವ ಕೋಲುಗಳು. ಬಡಗು, ಉ.ಕ. ತಿಟ್ಟುಗಳಲ್ಲಿ ಬೆತ್ತದ ನೆಟ್ಟಗಿನ ಕೋಲುಗಳನ್ನೂ ತೆಂಕುತಿಟ್ಟಿನಲ್ಲಿ ಮರದ, ತುದಿ ಬಾಗಿದ ಕೋಲುಗಳನ್ನೂ ಬಳಸು ವರು. ತೆಂಕಿನಲ್ಲಿ ಬಲಗೈಯ ಕೋಲು ಎಡಗೈಯದ ಕ್ಕಿಂತ ತುಸು ಉದ್ದ. ಮರದ ಕೋಲುಗಳಲ್ಲಿ ಅಬ್ರಂಗಾಯಿ **(Grewia Microcose)** ಮರದವು ಅತ್ಯಂತ ಪ್ರಶಸ್ತ. ಓಟೆಹುಳಿ **(Artocarpus lakoocha)** ಮರದ ಬೇರು, ಚೆಂಕೊಟ್ಟಿ ಮರದ ತುಂಡು, ಹೊಳೆನೆಕ್ಕಿಯ **(Homonia piperia)** ಗೆಲ್ಲು, ಕೊರಜ್ಜಿ ಮರದ ಗೆಲ್ಲು, ಊರ ಕಿತ್ತಳೆ ಮರದ ಗೆಲ್ಲುಗಳನ್ನೂ ಬಳಸುತ್ತಾರೆ. ಚೆಂಡೆಕೋಲುಗಳು ನಾರು ಮರದವುಗಳಾಗಿದ್ದು, ಹದ ಮೆದುವಾಗಿರಬೇಕು. ಹೀಗಿದ್ದರೆ ನಾದ ಹಿತವಾಗಿ ಬರುತ್ತದೆ.

ಚೆಂಡೆ ಪೆಟ್ಟು : (ತೆ.) ಚೆಂಡೆಯ ಮೇಲೆ ಕೋಲುಗಳಿಂದ ಬಾರಿಸುವ ಪೆಟ್ಟು. ಇದರಲ್ಲಿ ಉರುಳಿಕೆ ಪೆಟ್ಟು ಎಂದೂ ಕಟ್ಟು ಸ್ವರ, ಮಣಿ ಸ್ವರ, ಎಂದೂ ಕರೆಪೆಟ್ಟು,

ನಡುಪೆಟ್ಟು ಎಂದೂ ದೊಡ್ಡ ಪೆಟ್ಟು, ಸಣ್ಣ ಪೆಟ್ಟು ಎಂದೂ ವಿಭಾಗಗಳು ಇವೆ. ಉರುಳಿಕೆಯಲ್ಲಿ ಒತ್ತೆ (ಒಂಟಿ) ಉರುಳಿಕೆ, ಎರಟ್ಟೆ (ಜೋಡಿ) ಉರುಳಿಕೆ ಎಂದೂ ಎರಡು ಬಗೆ.

ಚೆಂಡೆ ಬಳ್ಳಿ/ಚೆಂಡೆ ಬಾರ/ಚೆಂಡೆ ಹಗ್ಗ : ಚೆಂಡೆಯ ಮುಚ್ಚಿಗೆಯನ್ನು ಬಿಗಿಯುವ ಹಗ್ಗಗಳು. ಇವು ನಾರು, ಊರ ಸೆಣಬು ಅಥವಾ ಫೈಬರ್‌ನ ಹುರಿಗಳಾಗಿರುತ್ತವೆ.

ಚೆಂಡೆಯ ಪದ್ಯ : ಚೆಂಡೆ ಬಾರಿಸಬೇಕಾದ ಹಾಡು, ಹಾಡುಗಾರಿಕೆ, ಹಾಡಿನ ಸಂದರ್ಭ.

ಚೆಂಡೆ ಬಾರ = ನೋಡಿ : **ಚೆಂಡೆಬಳ್ಳಿ.**

ಚೆಂಡೆ ಮುಚ್ಚಿಗೆ : ಚೆಂಡೆ ಎಂಬ ವಾದ್ಯದ ಮುಚ್ಚಿಗೆ ಮತ್ತು ಅದರ ವಿಧಾನ. ನೋಡಿ : **ಮುಚ್ಚಿಗೆ, ಕವಳ.**

ಚೆಂಡೆಹಗ್ಗ = ನೋಡಿ : **ಚೆಂಡೆಬಳ್ಳಿ.**

ಚೆನ್ನೆಪ್ಪೂ/ಚೆನ್ನೆಪ್ಪೂವು (ತೆ.) : ಪುರುಷ ವೇಷಗಳ ಒಂದು ಆಭರಣ. ಕಿವಿಯ ಮೇಲ್ಗಡೆ, ಕರ್ಣ ಪಾತ್ರದ ಒಳಗಿಂದ ಸಿಕ್ಕಿಸುವ ಚಿಕ್ಕಚಕ್ರದಂತಹ ಒಡವೆ. ಇದಕ್ಕೆ ಹಿಂದೆ ಕಡ್ಡಿ ಇರುತ್ತದೆ. ಈಗ **ಕನ್ನೆಪ್ಪೂ ಚೆನ್ನೆಪ್ಪೂ**ಗಳು ಸೇರಿ ಒಂದೇ ಆಭರಣವಾಗಿದ್ದು, ಅದರಲ್ಲಿ ಮೇಲೆ ದೀಪಶಿಖೆ ಯಂತೆ, ಕೆಳಗಡೆ ಚಕ್ರವೂ ಇದ್ದು, ಅದನ್ನು ಚುಚ್ಚಿಡುವುದಕ್ಕೆ ಒಂದೇ ಕಡ್ಡಿ ಇರುತ್ತದೆ.

ಚೆನ್ನಪ್ಪೂವು = ನೋಡಿ : **ಚೆನ್ನೆಪ್ಪೂ.**

ಚೆರಿಗೆ : ಮೇಳದ ತಿರುಗಾಟದಲ್ಲಿ ಅನ್ನ ಬೇಯಿಸಲು ಹಾಗೂ ಬಿಸಿ ನೀರು ತಯಾರಿಸಲು ಬಳಸುವ ಚೆರಿಗೆ ಇದನ್ನು **ಅಡ್ಡಹೊರೆ**ಯವನು ಹೊರುತ್ತಾನೆ.

ಚೆರಿಗೆ ಅನ್ನ : 1. ಆಟದ ಬಿಡಾರದ ಊಟ. ಕೆಲವೊಮ್ಮೆ ಹೀನಾರ್ಥದಲ್ಲಿ ಪ್ರಯೋಗ.
2. ಒಗ್ಗಟ್ಟಿನ ಬದುಕು.

ಚೇಳುಕೊಂಡಿ (ಬ.) : ಬಣ್ಣದ ವೇಷದ ಮುಖದ ಮೇಲೆ ಬರುವ ಚುಟ್ಟಿಯ ವಿನ್ಯಾಸ. ಚೇಳಿನ ಕೊಂಡಿಯ ಆಕೃತಿ. ತೆಂಕುತಿಟ್ಟಿನ ಸುಳಿ, **ಚೇಳುಬಣ್ಣ**ಗಳ ಸಮಾನಾರ್ಥಕ.

ಚೇಳು ಬಣ್ಣ (ತೆ.) : ಬಣ್ಣದ ವೇಷಗಳ ವರ್ಗೀಕರಣದಲ್ಲಿ ಒಂದು ವಿಧ. (**ಚೇಳು ಬಣ್ಣ, ಕತ್ತಿ ಬಣ್ಣ, ಏಣಿ ಬಣ್ಣ, ಕತ್ರಿ ಬಣ್ಣ** ಇತ್ಯಾದಿ). ಚೇಳಿನಂತಹ ಸುಳಿ ಇರುವ ಮುಖವರ್ಣಿಕೆ. ಇದು ಕಾಟು ಬಣ್ಣ (ಕಾಡುರಕ್ಕಸ). ಬಕಾಸುರ, ಕಿಮ್ಮೀರ ಇತ್ಯಾದಿಗಳಲ್ಲಿ ಬಳಕೆ.

ಚೊಳ್ಕೆ (ಬ.) : ಕೈ ಕಟ್ಟು, ತೋಳ್ಕಟ್ಟುಗಳ ಕೊನೆಯ ಸಾಲಿನಲ್ಲಿ ಹಾಕುವ ಒಂದು ಬಗೆಯ ಹಲ್ಲೆ. ಸುಮಾರಾಗಿ ಅಗಲ ತಾಯಿತದಂತಿರುತ್ತದೆ.

ಚೋಲೆ/ಚೋಳೆ (ಳ) : 1. ದಗಲೆ, ರವಕೆ. ಮುಖ್ಯವಾಗಿ ಪುಂಡು ವೇಷಕ್ಕೆ ಬಳಸುವ ಅರೆಕೈ ಅಂಗಿ.
2. ರೋಮದ ಅಂಗಿ. ಹನುಮಂತನ **ಚೋಳೆ,** ಜಾಂಬವನ **ಚೋಳೆ.**

ಚೋಳಿ = ನೋಡಿ : **ಚೋಲೆ.**

ಚೋಳೆ = ನೋಡಿ : **ಚೋಲೆ.**


ಚೌಕದ ಮನೆ (ಬ./ಉ./ಗ.) :ನೋಡಿ : **ಚೌಕಿ.**

ಚೌಕರುಮಾಲು : ಕರವಸ್ತ್ರ. ಚೌಕುಳಿ ಇರುವ **ಟುವಾಲ್.** ಗಂಡು ವೇಷಗಳೂ ವೀರ ಸ್ತ್ರೀ ವೇಷಗಳೂ ಕೈಯಲ್ಲಿ ಹಿಡಿದುಕೊಳ್ಳುತ್ತವೆ.

ಚೌಕಿ : ಬಣ್ಣ ಹಾಕಿಕೊಳ್ಳುವ ಸ್ಥಳ. ಚೌಕದ ಮನೆ, ಬಣ್ಣದ ಮನೆ, ವೇಷ ಹಾಕಿಕೊಳ್ಳುವ ಸ್ಥಳ, ನೇಪಥ್ಯ, **Green Room.** ಚೌಕಿಯು ರಂಗಸ್ಥಳದ ಹಿಂಬದಿಯಲ್ಲಿ, ರಂಗಸ್ಥಳದಿಂದ ತುಸು ದೂರದಲ್ಲಿ ಇರುವುದು. ಡೇರೆಯ ಮೇಳಗಳಲ್ಲಿ ಅದರ ಸ್ಥಳ ಮತ್ತು ಗಾತ್ರ ನಿಶ್ಚಿತವಾಗಿರುತ್ತದೆ.
(ತೆ./ಬ.) **ಚೌಕಿ**ಯ ಅಗ್ರ ಭಾಗದಲ್ಲಿ (ಶಿರೋಭಾಗದಲ್ಲಿ) 'ದೇವರು' ಇರುತ್ತಾರೆ. ಅಂದರೆ, ದೇವರ ಕಿರೀಟಗಳು, ಈಗ ಮೂರ್ತಿ ಗಳೂ ಇರತ್ತವೆ. ಚೌಕಿಯ ಕೊನೆಯಲ್ಲಿ (ಬುಡ) ದೇವರಿಗೆ ಎದುರಾಗಿ ಹಾಸ್ಯಗಾರ ಚೌಕಿ (**ಅಡ್ಡ ಚೌಕಿ**) ಇರುತ್ತದೆ. ಎಡ– ಬಲಗಳಲ್ಲಿ ವೇಷಧಾರಿ ಗಳು ಸಾಲಾಗಿ ಬಣ್ಣಕ್ಕೆ ಕುಳಿತುಕೊಳ್ಳುತ್ತಾರೆ. ಅವರ ಮುಂದೆ ದೀಪ, ಕನ್ನಡಿ, ಬಣ್ಣ ಸಾಮಾಗ್ರಿ ಗಳು, ಹಿಂದೆ ಸಾಮಾನಿನ ಪೆಟ್ಟಿಗೆಗಳೂ ಪಿಂಡಿ ಗಳೂ ಇರುತ್ತವೆ. ದೇವರ ಚೌಕಿಯ ಎಡ ಬಲಗಳಲ್ಲಿ ವಾದ್ಯಗಳೂ ಕಲಾವಿದರ ಖಾಸಗಿ ಸಾಮಗ್ರಿಗಳೂ, ವಿಶ್ರಾಂತಿ ಸ್ಥಳವೂ ಇರುತ್ತವೆ.

ಚೌಕಿಯಲ್ಲಿ ವೇಷಧಾರಿಗಳು ಕುಳಿತುಕೊಳ್ಳುವ ಮತ್ತು ಇತರ ಸ್ಥಾನಗಳಲ್ಲಿ ನಿಶ್ಚಿತ ಸ್ಥಾನಾನುಗುಣ ಕ್ರಮ ಹಿರಿತನ **(Seniority)** ಇದ್ದು, ಇದರಲ್ಲಿ ಸದ್ಯ ತಿಳಿದಿರುವಂತೆ, ನಾಲ್ಕಾರು ಕ್ರಮಗಳಿವೆ. ಅಲ್ಲದೆ, ಇದು ಕಳೆದ ಕೆಲವು ವರ್ಷಗಳಲ್ಲಿ ಹಲವು ಬದಲಾವಣೆಗಳನ್ನೂ ಕಂಡಿದೆ.

ಚೌಕಿ : ಸಾಮಾನ್ಯ ವಿನ್ಯಾಸ



– ಬಡಗುತಿಟ್ಟನಲ್ಲಿ, 'ಅಡ್ಡಚೌಕಿ' ಎಂಬುದಕ್ಕೆ, 'ರಂಗಸ್ಥಳದ ಹಿಂದಿನ ವೇಷಧಾರಿಗಳ ವಿಶ್ರಾಂತಿ ಸ್ಥಳ' ಎಂಬ ಅರ್ಥವನ್ನೂ ಕಲ್ಪಿಸಲಾಗುತ್ತದೆ.

ವೇಷಧಾರಿಗಳು ಕುಳಿತುಕೊಳ್ಳುವ ಅನುಕ್ರಮ :

ಬಡಗುತಿಟ್ಟು : ಒಂದು ಕ್ರಮ

ದೇವರು

ಎರಡನೆಯವೇಷ	ಬಣ್ಣದವೇಷ
ಪುರುಷವೇಷ	ಮುಂಡಾಸುವೇಷ
ಸ್ತ್ರೀವೇಷ	ಮುಂಡಾಸುವೇಷ
ಮೂರನೇವೇಷ	ಸಖೀವೇಷ
(ಪುಂಡುವೇಷ)	(ಎರಡನೆ ಸ್ತ್ರೀವೇಷ)
	ಸಖೀವೇಷ
ಬಾಲಗೋಪಾಲ	ಬಾಲಗೋಪಾಲ
ಹುಡುಗರು	ಹುಡುಗರು

ಹಾಸ್ಯಗಾರ

ಬಡಗುತಿಟ್ಟು : ಇನ್ನೊಂದು ಕ್ರಮ :

ದೇವರು

ಎರಡನೆಯವೇಷ	ಬಣ್ಣದವೇಷ
ಪುರುಷವೇಷ	ಮುಂಡಾಸಿನವೇಷ
ಪುಂಡುವೇಷ	ಮುಂಡಾಸಿನವೇಷ
ಸ್ತ್ರೀವೇಷ	ಒತ್ತು ಪುಂಡುವೇಷ
ಸಖೀವೇಷ	ಸಖೀವೇಷ
ಬಾಲಗೋಪಾಲ	ಬಾಲಗೋಪಾಲ
ಕೋಡಂಗಿ ಇತ್ಯಾದಿ	ಕೋಡಂಗಿ ಇತ್ಯಾದಿ

ಹಾಸ್ಯಗಾರ

ಚೌಕಿಯ ಅನುಕ್ರಮ : ತೆಂಕುತಿಟ್ಟು :

ದೇವರು

ಒಂದನೆಯ ಬಣ್ಣ	ಎರಡನೆಯ ಬಣ್ಣ
ಎದುರುವೇಷ	ಪುಂಡುವೇಷ
ಮೂರನೆಯ ಕಟ್ಟುವೇಷ	ಏಳನೆಯ ಕಟ್ಟುವೇಷ
ಪೀಠಿಕೆವೇಷ	ಎರಡನೆಯ ಸ್ತ್ರೀವೇಷ
ಮುಖ್ಯ ಸ್ತ್ರೀವೇಷ	ಎರಡನೆಯ ಪುಂಡುವೇಷ
ಬಾಲಗೋಪಾಲ	ಬಾಲಗೋಪಾಲ
ಕೋಡಂಗಿ	ಕೋಡಂಗಿ
ಇತ್ಯಾದಿ	ಇತ್ಯಾದಿ

ಅಡ್ಡ ಚೌಕಿ
ಹಾಸ್ಯಗಾರ

ಇದರಲ್ಲಿ ಸ್ವಲ್ಪ ವ್ಯತ್ಯಾಸಗಳಿಂದ ಕೂಡಿದ ಕ್ರಮಗಳಿದ್ದು, ಅವುಗಳಲ್ಲಿ ಎರಡನ್ನು ಪರಿಶೀಲಿಸಬಹುದು:

ಚೌಕಿ : ತೆಂಕುತಿಟ್ಟು – ಇನ್ನೊಂದು ಕ್ರಮ

ದೇವರು

ಒಂದನೇ ಬಣ್ಣ	ಎರಡನೇ ಬಣ್ಣ
ಪೀಠಿಕೆವೇಷ	ಎರಡನೇವೇಷ (ಎದುರುವೇಷ)
ಮೂರನೇ ಕಟ್ಟುವೇಷ	ಮೂರನೇ ಬಣ್ಣ (ಎಡೆ ಒತ್ತು)
ಒಂದನೇ ಪುಂಡುವೇಷ	ಎರಡನೇ ಪುಂಡುವೇಷ
ಮುಖ್ಯ ಸ್ತ್ರೀವೇಷ	ಎರಡನೇ ಸ್ತ್ರೀವೇಷ
ಬಾಲಗೋಪಾಲ	ಬಾಲಗೋಪಾಲ
ಕೋಡಂಗಿ ವಗೈರೆ	ಕೋಡಂಗಿ ವಗೈರೆ
ಹುಡುಗರು	ಹುಡುಗರು


ಅಡ್ಡ ಚೌಕಿ
ಹಾಸ್ಯಗಾರ

ಚೌಕಿ : ತೆಂಕುತಿಟ್ಟು : ಮತ್ತೊಂದು ಕ್ರಮ

	ದೇವರು	
ಎದುರುವೇಷ		ಬಣ್ಣದವೇಷ
ಪೀಠಿಕೆವೇಷ		ಎರಡನೆಯ ಬಣ್ಣದವೇಷ
ಮೂರನೆಯ ಕಟ್ಟುವೇಷ		ಐದು, ಏಳನೆಯ
ಮುಖ್ಯ ಸ್ತ್ರೀವೇಷ		ಕಟ್ಟುವೇಷಗಳು
ಪುಂಡುವೇಷ		ಒತ್ತು ಪುಂಡುವೇಷ
ಸ್ತ್ರೀವೇಷ		ಸ್ತ್ರೀವೇಷ
ಬಾಲಗೋಪಾಲ		ಬಾಲಗೋಪಾಲ
ಕೋಡಂಗಿ		ಕೋಡಂಗಿ
ಹುಡುಗರು		ಹುಡುಗರು
	ಅಡ್ಡಚೌಕಿ ಹಾಸ್ಯಗಾರ	

ಚೌಕಿಯ ಭಾಷೆಯಲ್ಲಿ ಹುಡುಗರೆಂದರೆ, ಅಭ್ಯಾಸಿಗಳು. ಮುಖ್ಯ ವೇಷಧಾರಿಗಳಲ್ಲಿ ಅವರು ಗಣನೆಗೆ ಬರುವುದಿಲ್ಲ. ಅವರು extras ಅಥವಾ apprentices ಆಗಿರುವರು.

ಚೌಕಿ : ಉತ್ತರ ಕನ್ನಡದ ಹಳೆಯ ಕ್ರಮ :



ಮಧ್ಯದಲ್ಲಿ ಅಥವಾ ಒಂದು ಬದಿಗೆ, ವೃತ್ತದ ಹೊರಗೆ ದೇವರನ್ನಿಡುತ್ತಿದ್ದರು. ಇದರಲ್ಲಿ ಎಡ, ಬಲ, ಮೇಲೆ ಕೆಳಗೆ ಹಿರಿತನ ಮೊದಲಾದ ಯಾವ ಪ್ರಶ್ನೆಗಳೂ ಇಲ್ಲ. ಈಗ, ಉತ್ತರ ಕನ್ನಡ ದಲ್ಲೂ, ಬಡಗುತಿಟ್ಟಿನ ಕ್ರಮವೇ ಬಳಯಲ್ಲಿದೆ.

ಸದ್ಯ ಚೌಕಿಯಲ್ಲಿಯ ಸ್ಥಾನಗಳು, ವೇಷಾನು ಗುಣವಾಗಿರದೆ, ವ್ಯಕ್ತಿಯ ಸ್ಥಾನ ಮತ್ತು ಸೇವಾ ಹಿರಿತನವನ್ನು ಅವಲಂಬಿಸಿವೆ. ದೇವರ ಚೌಕಿ, ಹಾಸ್ಯಗಾರನ ಚೌಕಿ – ಈ ಸ್ಥಾನಗಳು ಮೊದಲಿನಂತೆಯೆ ಇವೆ.

ಚೌಕಿಪೂಜೆ: ಚೌಕಿಯಲ್ಲಿ ನಡೆಯುವ ಗಣಪತಿ ಪೂಜೆ. ಸಂಜೆ, ಪೂರ್ವರಂಗ ಪ್ರದರ್ಶನಕ್ಕೆ ಮೊದಲು, ಭಾಗವತರು, ಹಿಮ್ಮೇಳ ಸಹಿತ, ಹಾಸ್ಯಗಾರನ ಅಡ್ಡ ಚೌಕಿಯ ಹಿಂದೆ ನಿಂತುಕೊಂಡು ಸ್ತುತಿ ಹಾಡಬೇಕು. ಇದಕ್ಕೆ ಹೆಚ್ಚಾಗಿ 'ಗಜಮುಖದವಗೆ। ಗಣಪಗೆ..' ಎಂಬ ಹಾಡನ್ನು ಬಳಸುವುದು ರೂಢಿ. ದೇವರಿಗೆ ಆರತಿ ಆಗಿ, ಅದನ್ನು ಹಿಮ್ಮೇಳಕ್ಕೆ ತೋರಿಸಿ, ಜಾಗಟೆಗೆ, ವಾದ್ಯಗಳಿಗೆ ಪ್ರಸಾದ ಹಚ್ಚಿ, ಅಕ್ಷತೆ ಎರಚಿ ''ರಂಗಸ್ಥಳಕ್ಕೆ ಅಪ್ಪಣೆ''... ''ದೇವರ ಅಪ್ಪಣೆ'' – ಎಂದು ಸಂವಾದ ರೂಪವಾಗಿ ಹೇಳಿ, ''ಗೋವಿಂದಾ'' ಎಂದು ಬೊಬ್ಬೆ ಹಾಕುವಲ್ಲಿಗೆ, ಚೌಕಿ ಪೂಜೆ ಮುಕ್ತಾಯ.

ಚೌಕಿಯಬ್ಬರ: ಸಾಯಂಕಾಲ, ಸುಮಾರು ಏಳೂವರೆ ಗಂಟೆಗೆ, ಚೌಕಿಯಲ್ಲಿ ಬಡಿಯುವ **ಅಬ್ಬರ, ಅಬ್ಬರತಾಳ, ಸಣ್ಣ ಕೇಳಿ.**

ಚೌಕಿಯವ(ರು): ಚೌಕಿಯ ಕೆಲಸಕ್ಕೆ ನೇಮಿತರಾದ ಕೆಲಸದವರು. ಸಾಮಗ್ರಿ ಒದಗಿಸುವುದು, ಕಟ್ಟಲು ಸಹಕರಿಸುವುದು, ವೇಷಧಾರಿಗಳ ವಸ್ತುಗಳ ಹೊಣೆಗಾರಿಕೆ ಇವು ಚೌಕಿಯವರ ಕೆಲಸಗಳು. ಸಾಮಾನ್ಯವಾಗಿ ಮೂರುಜನ ಚೌಕಿ ಕೆಲಸ ಗಾರರಿರುತ್ತಾರೆ.

ಚೌಝುಂಪೆ/ಚೌತಾಳ ಝುಂಪೆ: ಹಿಂದೆ ಬಳಕೆಯಿದ್ದ, ಈಗ ಲುಪ್ತವಾಗಿರುವ, ಬಡಗು ತಿಟ್ಟಿನಲ್ಲಿ ಕ್ವಚಿತ್ತಾಗಿ ಬಳಕೆಯಿರುವ, ಒಂದು ತಾಳ. ಇಪ್ಪತ್ತೆರಡು ಮಾತ್ರಾಕಾಲದ ತಾಳ, ಹನ್ನೊಂದು ಮಾತ್ರೆಗಳ ರೂಪದಲ್ಲೂ ಇದ್ದಿತು. ಇದಕ್ಕೆ ಹತ್ತು ಅಕ್ಷರ ಕಾಲದ ಝುಂಪೆ ಮುಕ್ತಾಯವಿದೆ. ದುಃಖಭಾವಕ್ಕೆ ಬಳಕೆ.

ಚೌತಾಳ (ಬ./ಉ.): ತಿಶ್ರಿತ್ರ್ಯ (ಕೋರೆ) ತಾಳದ ತ್ವರಿತ ರೂಪ. ನಾಲ್ಕನೆ ಕಾಲದ ನಡೆ. ಈ ನಡೆಯನ್ನು ಎತ್ತಿಕೊಳ್ಳುವುದಿದ್ದರೆ, ಮೊದಲಿನ ನಡೆಯ ಕೊನೆಗೆ ಜೋಡು ಮುಕ್ತಾಯ ಬಾರಿಸಬೇಕು. ಇದು ಸೂಚನೆ.

ಚೌತಾಳ (ತೆ.): 3 + 2 + 3 = 8 ಮಾತ್ರಾಕಾಲದ ತಾಳ. 6 + 4 + 6 = 16 ಮಾತ್ರೆಗಳ ಮದ್ದಲೆಯ ಆವರ್ತನವಿರುವುದರಿಂದ ಆ ರೂಪದಲ್ಲೂ ಗಣಿಸಲ್ಪಡುತ್ತದೆ. ಇದು ಆದಿತಾಳದಂತೆಯೇ ಇರುವುದರಿಂದಲೂ, ಬಡಿತ ಮುಕ್ತಾಯಗಳಲ್ಲಿ ಆದಿತಾಳದ ನಿಯಮಗಳೇ ಇರುವುದರಿಂದಲೂ ಸದ್ಯ ಬಳಕೆಯಲ್ಲಿಲ್ಲ.

ಚೌತಾಳ ಝುಂಪೆ = ನೋಡಿ: **ಚೌಝುಂಪೆ.**

ಚೌರಿ/ಚವರಿ: 1. ಕೃತಕ ಕೂದಲು. ಪ್ರಾಣಿಜನ್ಯ ಕೇಶ (ಚಮರಿ ಎಂಬುದರಿಂದ ಚವರಿ) ಸ್ತ್ರೀವೇಷಕ್ಕೆ ಬಳಕೆ.

2. ಕಳ್ಳಿಜಾತಿಯ ನಾರುಗಳ ಚೌರಿ. ಪುರುಷ ವೇಷಗಳ ಕಿರೀಟದ ಹಿಂಗಡೆಯ ಕೇಸರಿಗೂ, ಮೀಸೆಗೂ ಬಳಕೆ.

ಛ

ಛಲತಾಳ: ಯಕ್ಷಗಾನದಲ್ಲಿ ಹಿಂದೆ ಇತ್ತೆನ್ನಲಾದ ಒಂದು ತಾಳ.

ಛಾಪು: ನೋಡಿ: **ಚಾಪು.**

2. = ಜಾಪು. ವೇಷದ, ನರ್ತನದ, ರಂಗದ ಕೆಲಸದ ಗತ್ತು ಗಾಂಭೀರ್ಯ ನೋಡಿ: **ಝಾಪು.**


ಛಾಯೆ: ಮುಖವರ್ಣಿಕೆಯಲ್ಲಿ ಬರುವ ಬಣ್ಣದ ಸ್ಪರ್ಶ, ಛಾಯೆ. Touch, Shade.

ಜ

ಜಂಕಿಜಾಲರಿ (ಉ.): ಕರ್ಣಾಭರಣಗಳಲ್ಲೊಂದು. ಕಿವಿಯ ಮೇಲ್ಭಾಗದಲ್ಲಿ ತೊಡುವ ಚಿಕ್ಕ ಅರ್ಧಗೋಲಾಕೃತಿಯ ಜಂಕಿ ಅರ್ಥಾತ್ ಜುಂಕಿ ಮತ್ತು ಅದರ ಮೇಲ್ತುದಿಯ ಕಡ್ಡಿ (ಬುಗುಡಿ ಕಡ್ಡಿ)ಯಿಂದ ತುರುಬಿನ ಬಳಿಗೆ ಸಿಕ್ಕಿಸಿಕೊಳ್ಳುವ ಸರಪಣಿ. ಜಂಕಿ ಮತ್ತು ಚೈನು.


ಜಂಗಮರ ಹಾಸ್ಯ: ಪೂರ್ವರಂಗದ ಕಟ್ಟುಹಾಸ್ಯ ಗಳಲ್ಲೊಂದು. ಲಿಂಗಾಯತ ಯತಿಯ ಅಣಕ.

ಜಂಗಲ್/ಜಂಗಾಲ್: ಪಚ್ಚೆ ವರ್ಣದ್ರವ್ಯ. ಜಂಗಾಲ್ ಪಚ್ಚೆ. ಹಿಂದೆ ಜಂಗಮ (ಜಂಗಮಿ) ಮರದ (ತುಳು: ಪಚ್ಚೆಪಂರ್ದ್, Alglaia litoralis, Algaia odorata) ಎಲೆಗಳನ್ನು ಒಣಗಿಸಿ ಹುಡಿ ಮಾಡಿ ತಯಾರಿಸುವಂತಹದಿತ್ತು. ಮಾಟಮಂತ್ರ ಗಳಿಗೂ, ರಂಗೋಲಿಗೂ, ಇದೇ ಬಳಕೆಯಿದ್ದುದು. – ನೆಲ್ಲಿಗಿಡದ ಎಲೆಗಳ ಹುಡಿಗೂ ಈ ಹೆಸರುಂಟು. ಈಗ ಮಾರುಕಟ್ಟೆಯ ರಾಸಾಯನಿಕ ಹಸಿರು ಬಳಕೆಯಿದೆ. ನೋಡಿ: **ಪಚ್ಚೆ.**




ಜಡೆ ಬಂಗಾರ






ಗೀರುಗಂಧನಾಮ



ಜಡೆಗೊಂಡೆ

ಚೆಂಡೆ





ಜಮಖಾನೆ ಬಣ್ಣ

ಜಂಗಾಲ್ : = ನೋಡಿ : ಜಂಗಲ್.

ಜಂಗು/ಜೆಂಗು/ಚೆಂಗು (ತೆ.) : ಗಂಡುವೇಷಗಳು ಮೊಣಕಾಲ ಕೆಳಗೆ ಕಟ್ಟುತ್ತಿದ್ದ ಗೆಜ್ಜೆ. ಬಟ್ಟೆಯ ಮೆತ್ತೆಗೆ ಗೆಜ್ಜೆಗಳನ್ನು ಹೊಲಿದು ತಯಾರಿಸಿದ, ಹಲ್ಲೆಗೆಜ್ಜೆ. ಈಗ ಬಳಕೆಯಿಲ್ಲ.

ಜಂಬುಖಾನೆ ಬಣ್ಣ / ಜಮಖಾನೆ ಬಣ್ಣ : ವಿಶಿಷ್ಟ ರೀತಿಯ ಹಾಸ್ಯಪ್ರಧಾನವಾದ ಒಂದು ಮುಖವರ್ಣಿಕೆ ಜಮಖಾನೆ ಬಣ್ಣ. ಜಮಖಾನೆಯ ಪಟ್ಟೆಗಳಂತೆ, ಮುಖದ ಮೇಲೆ ಓರೆ ಪಟ್ಟೆಗಳನ್ನು ಎಳೆಯುವುದು. ವಿದ್ಯುಜ್ಜಿಹ್ವನ ಪಾತ್ರಕ್ಕೆ ವಿಶಿಷ್ಟ.

ಜಕ್ಕು ಬೀಳುವುದು : ಆಟವು ಕಳೆಗುಂದುವುದು. ಮುಖ್ಯವಾಗಿ, ನಿಧಾನಗತಿಯಿಂದಾಗಿ, ತೇಜಸ್ಸಿಲ್ಲದೆ, ಕಾಂತಿ ಹೀನವಾಗುವುದು. 'ಬೋರು' ಹೊಡೆಯುವುದು – ಜಾನಪದ ವಿಮರ್ಶಾ ಪರಿಭಾಷೆ.

ಜಜ್ಜರಿ ಮಾಧವ (ತೆ.) : ಕೃಷ್ಣನ ಒಡ್ಡೋಲಗದಲ್ಲಿ ಬರುವ ಒಂದು ಹಾಸ್ಯಪಾತ್ರ. ಮಾಧವರಾಯ, ಗೊಲ್ಲಮಾಧವ ಎಂಬ ಹೆಸರುಗಳೂ ಇವೆ.

ಜಟ್ಟಿ : ಸೊಂಟಕ್ಕೆ ಬಿಗಿಯುವ ಬಟ್ಟೆಯ ಪಟ್ಟಿ ನೋಡಿ: ದಟ್ಟಿ.

ಜಡೆಗೊಂಡೆ : 1. ಜಡೆಯ ತುದಿಯಲ್ಲಿರುವ ಕುಚ್ಚು. ಅಲಂಕೃತವಾದ ಗೊಂಡೆ.
2. ಜಡೆಯ ತುದಿಗೆ ಕಟ್ಟುವ (ಚಿಕ್ಕಲೋಟವನ್ನು ಕವುಚಿ ಹಾಕಿದಂತಿರುವ) ಒಂದು ಬಗೆಯ ಆಭರಣ.

ಜಡೆ ಬಂಗಾರ : ಜಡೆಗೆ ಸಿಕ್ಕಿಸುವ ಚಕ್ರ, ಹೂವಿನಾಕೃತಿಗಳ ಒಡವೆಗಳು. ಈ ಆಭರಣಗಳು ಮೇಲಿಂದ ಕೆಳಕ್ಕೆ ಕ್ರಮವಾಗಿ ಸಣ್ಣವು.
– ಉ.ಕ.ದಲ್ಲಿ ವಿಶೇಷವಾಗಿ ಬಳಕೆಯಿತ್ತು.

ಜಡೆ ಬಿಲ್ಲೆ = ನೋಡಿ : ಜೆಡೆಬಿಲ್ಲೆ.

ಜಡೆ ಹೆಣೆಯುವುದು = ನೋಡಿ: ಜೆಡೆ ಹೆಣೆಯುವುದು.

ಜತೆಪುಂಡು/ಜೊತೆಪುಂಡು (ತೆ.) : ಜೋಡಿ ಪುಂಡು ವೇಷಗಳು. ಉದಾ: ಲವಕುಶರು, ಚಿತ್ರಕೇತ ಚಿತ್ರವಾಹನರು.

ಜತೆವೇಷ = ನೋಡಿ : ಜೊತೆವೇಷ.

ಜತೆ ಸ್ತ್ರೀವೇಷ = ನೋಡಿ : ಜೊತೆಸ್ತ್ರೀವೇಷ.

ಜಮಖಾನೆ ಬಣ್ಣ = ನೋಡಿ : ಜಂಬುಖಾನೆ ಬಣ್ಣ.

ಜರತಾರಿ ಸೀರೆ : ಜರಿ ಅಂಚಿನ ಅಥವಾ ಜರಿ ನೇಯ್ಗೆಯುಳ್ಳ ಸೀರೆ. ಸಾದಾ ಕಸೆ ಸೀರೆಗಿಂತ ಭಿನ್ನ. ವಿಶೇಷತಃ ರಾಣಿಯರಿಗೆ ಬಳಕೆ.

ಜರಿ : 1. ಮುಖವರ್ಣಿಕೆ, ಅಲಂಕರಣಕ್ಕೆ ಬಳಸುವ ಜರಿ. ''ಚಿನ್ನದ ಹುಡಿ''. ಜರಿಪುಡಿ.
2. ಪಗಡಿ, ಮುಂಡಾಸು ಸುತ್ತುವುದಕ್ಕೆ ಬಳಸುವ ಜರಿಯಲಾಡಿ. ಜರಿಕೋರು.
3. ಬಟ್ಟೆಗಳಿಗೆ ನೇಯ್ಗೆ ಮಾಡಿ ಅಲಂಕರಿಸಲು ಬಳಸುವ ಜರಿನೂಲುಗಳು ಮತ್ತು ಜರಿಪಟ್ಟಿಗಳು.

ಜರಿಲಾಡಿ : ಜರಿಯ ಲಾಡಿ. ನೋಡಿ. ಜರಿ, ಪಗಡಿ, ಮುಂಡಾಸು. ಹಿಂದೆ ಜರಿಯಲಾಡಿ ಸಿದ್ಧವಾದುದು ಬಳಕೆಯಿರಲಿಲ್ಲ. ಬಾಳೆಯ ಹಗ್ಗದ ಲಾಡಿಗಳಿಗೆ ಜರಿಪುಡಿ ಅಂಟಿಸಿ ತಯಾರಿಸುತ್ತಿದ್ದರು. ಒಣ ಬಾಳೆ ಸೀಳಿಗೆ ಎಣ್ಣೆ ಸವರಿ ಸುತ್ತುವುದೂ ಇತ್ತು.

ಜಲಕೇಳಿ/ಜಲಕ್ರೀಡೆ : ಜಲಕ್ರೀಡೆಯ ದೃಶ್ಯ ಮತ್ತು ಅದಕ್ಕೆ ಸಂಬಂಧಿಸಿದ ನೃತ್ಯ. ಮುಖ್ಯ ಸ್ತ್ರೀವೇಷವೂ ಸಖಿಯರೂ, ಕೆಲವೊಮ್ಮೆ ಸ್ತ್ರೀ– ಪುರುಷ ವೇಷಗಳೂ ಸಖಿಯರೂ ಕುಣಿಯುವರು. ಆದಿತಾಳ, ಏಕತಾಳಗಳಲ್ಲಿ ಹಿಮ್ಮೇಳದಲ್ಲಿ ಇದಕ್ಕೆ ಸಂಬಂಧಿಸಿ ವಿಶಿಷ್ಟವಾದ ಬಡಿತಗಳಿರುತ್ತವೆ. ಮುಖ್ಯ ಸ್ತ್ರೀವೇಷವು, ನೀರಾಟದಲ್ಲಿ ಸೋತು ನೀರು ಕುಡಿದ ಅಭಿನಯ ಮಾಡಿ, ಮುಖ ತಿರುಗಿಸುವಲ್ಲಿಗೆ ಈ ಕುಣಿತ ಮುಕ್ತಾಯವಾಗುವುದು ಸಂಪ್ರದಾಯ.
– **ತೆಂಕುತಿಟ್ಟಿ**ನಲ್ಲಿ ಜಲಕೇಳಿಗೆ ಎರಡೇ ಪದ್ಯಗಳನ್ನು ಹಾಡಬೇಕೆಂದು ಹಳೆಯ ನಿಯಮ.

ಜಲಕ್ರೀಡೆ = ನೋಡಿ : ಜಲಕೇಳಿ.

ಜಲ್ಲು : ರಭಸ, ಜಾಜ್ವಲ್ಯ, ಮೆರೆಯುವಿಕೆ, ಲವಲವಿಕೆ. ಆಟದ ಅಥವಾ ವಿಶಿಷ್ಟ ಕಲಾವಿದನ ಕೆಲಸದ ಬಗೆಗೆ ಜನರ ಪ್ರಶಂಸೆಯ ಪದ.

ಜವುರಂಗಿ : ನೋಡಿ : ಡವರಂಗಿ.

ಜವುಳಿ : ವೇಷಗಳಿಗೆ ಸಂಬಂಧಿಸಿದ ಬಟ್ಟೆಬರೆ; ಜವಳಿ.

ಜವುಳಿ ಪಿಂಡಿ : ಜವಳಿ ತುಂಬಿಸಿ ಬಾಯಿ ಕಟ್ಟಿದ ಚೀಲ. ಹಗ್ಗ ಎಳೆದೊಡನೆ ಬಾಯಿ ಮುಚ್ಚಿಕೊಳ್ಳುವ ಚೀಲ, ಪಿಂಡಿ, (ಒಂದೊಂದು ವೇಷದ ಬಟ್ಟೆಗಳಿಗೆ ಒಂದೊಂದು ಪಿಂಡಿ.)

ಜವುಳಿ ಪಿಂಡಿಯವನು : ಮೇಳದ ಕೆಲಸಗಾರರಲ್ಲೊಬ್ಬ (ಅಥವಾ ಇಬ್ಬರು). ವೇಷದ ವಸ್ತ್ರಗಳನ್ನು ಹೊರುವುದು, ವಸ್ತ್ರಗಳ ಸ್ವಚ್ಛತೆ ಇವರ ಕೆಲಸ. ರಾತ್ರಿ ವೇಷಕಟ್ಟಲು ಸಹಾಯ ಮಾಡುವರು.

ಜಾಂಬವನ ಕಿರೀಟ (ತೆ./ಬ.) : ಜಾಂಬವನ ವೇಷದ ಕಿರೀಟ, ಹನುಮಂತನ ಕಿರೀಟದಂತೆಯೇ ಇದ್ದ 'ದೊರೆ ಕಿರೀಟ'. ಒಂದರ ಮೇಲೊಂದರಂತೆ ಸ್ತರಗಳಲ್ಲಿರಿಸಿದ ಬುರುಡೆ, ಅದರ ಮೇಲೆ ಛತ್ರದ ರಚನೆ, ಅದರ ಮೇಲೆ ಕಲಶದಂತಹ ಶಿಖರ ಇರುವ ಕಿರೀಟ. (ಈಗ ಬಳಕೆಯಲ್ಲಿಲ್ಲ.)

ಜಾಂಬವನ ಚೋಲೆ(ಳೆ) : ಜಾಂಬವನ ವೇಷಕ್ಕೆ ಬಳಸುವ ರೋಮ ಇರುವ ಅಥವಾ ಇಲ್ಲದಿರುವ ಕಪ್ಪು ದಗಲೆ.

ಜಾಗಟೆ (ತೆ.) : ಭಾಗವತರು ಹಾಡುಗಾರಿಕೆಗೆ ಬಳಸುವ ತಾಳವಾದ್ಯ; ಕಂಚಿನ ಗಂಟೆ; ಕಂಚು, ಬೆಳ್ಳಿ ಮಿಶ್ರಣದ ಜಾಗಟೆಗಳೂ, ಕಬ್ಬಿಣದ ಜಾಗಟೆಯೂ ಬಳಕೆಯಲ್ಲುಂಟು. ಇದು ವೃತ್ತಾಕಾರದ ಸಪಾಟಾದ ಜಾಗಟೆ. ಇದರ ಬದಿಗೆ ತೂತುಗಳಿದ್ದು, ಅದಕ್ಕೆ ಹಗ್ಗ ಸಿಕ್ಕಿಸಿ ಇರುತ್ತದೆ. ಇದನ್ನು ಬಾರಿಸಲು ಜಿಂಕೆಯ ಕೊಂಬನ್ನು ಅಥವಾ ಮರದ ಕೋಲನ್ನು ಬಳಸುವರು.

ಜಾಗಟೆ ಕೋಲು (ತೆ.): ಜಾಗಟೆಯನ್ನು ಬಡಿಯಲು ಬಳಸುವ ಕೋಲು; ಜಿಂಕೆಯ ಕೊಂಬು ಅಥವಾ ಮರದ ತುಂಡು.

ಜಾಗಟೆ ಪೆಟ್ಟು (ತೆ.) : 1. ಹಾಡುವಾಗ ಜಾಗಟೆಯ ಮೇಲೆ ಬಡಿಯುವ ಪೆಟ್ಟು.

2. ಮಾತುಗಳಿಗೆ ಪೋಷಕವಾಗಿ ಕೊಡುವ ಜಾಗಟೆ ಬಡಿತ.

3. ಭಾಗವತನು ರಂಗದಲ್ಲಿ ಸೂಚನೆ ಕೊಡಲು ಬಳಸುವ ಚಿಕ್ಕ, ದೊಡ್ಡ ಪೆಟ್ಟುಗಳು. ಚಿಕ್ಕಪೆಟ್ಟು ಬಾರಿಸಿದರೆ 'ಇನ್ನು ಮುಗಿಸಿ' ಎಂದೂ, ಎರಡು, ಮೂರು ಚಿಕ್ಕಪೆಟ್ಟು ಬಾರಿಸಿದರೆ ಆಟ ವೇಗವಾಗಿ ಹೋಗಬೇಕಾಗಿದೆಯೆಂದೂ, ದೊಡ್ಡಪೆಟ್ಟು ಕೊಟ್ಟರೆ, ''ಮುಂದಿನ ಪದ್ಯ ಆರಂಭಿಸುತ್ತೇನೆ'' ಎಂದು ಮುಂತಾಗಿ ಅರ್ಥಗಳಿವೆ.

ಜಾಗರ : 1. ತಾಳಮದ್ದಲೆಯ ನಾಮಾಂತರ. 2. ಜಾಗರಣೆ.

ಜಾಪು/ಝಾಪು (ಬ.) : ಪರಿಣಾಮಕಾರಿತ್ವ, ಗತ್ತು, ಗಾಂಭೀರ್ಯ; ಯಕ್ಷಗಾನದ್ದೇ ಆದ ವಿಶಿಷ್ಟ ಅಂದ.

ಜಾರುಗುಪ್ಪೆ (ತೆ.) : ಕಾಲುಗಳನ್ನು ಜಾರಿಸುತ್ತ ಪಕ್ಕಕ್ಕೆ ಹಾರುವುದು. (Side jump) ಕುಮುಚಟ್ಟು ಕುಣಿತದ ಒಂದು ಬಗೆ. ಶೃಂಗಾರ, ಹಾಸ್ಯಗಳಿಗೆ ಬಳಕೆ.

ಜಾಲರಿ : 1. ಆಭರಣ, ಕಿರೀಟ, ಸತ್ತಿಗೆ ಮೊದಲಾದವುಗಳ ಅಂಚಿನ ಜಾಲರಿ.

2. ರಂಗಸ್ಥಳದ ಮೇಲೆ ಕಟ್ಟುವ ಬಟ್ಟೆ,
3. ಅಂತರತೆರೆಯ ಮೇಲ್ಭಾಗದ ಬಟ್ಟೆಗಳ ಅಂಚಿನ ಜಾಲರಿ.

3. = ನೋಡಿ : ಜಾಲರಿ ಡಾಬು.

ಜಾಲರಿ ಡಾಬು (ತೆ.) : ವೇಷದ ಸೊಂಟಕ್ಕೆ, ಹಿಂಗಡೆ, ನಿತಂಬಗಳ ಮೇಲೆ ಬರುವಂತೆ, ಕಟ್ಟುವ ಪಟ್ಟಿಗಳ ಒಡ್ಯಾಣ. ಜಾಲರಿಗಳ ಡಾಬು. ಇದು ಮರದ ಹಲ್ಲೆಗಳ ಸರಗಳ ಜೋಡಣೆಯಾಗಿದ್ದಿತು. ಈಗ ಬಟ್ಟೆಯ ಪಟ್ಟಿಗಳ ಮಾಲೆಯಾಗಿದೆ.

ಜೀಂಟಿಗೆ = ನೋಡಿ : ಜೀಟಿಗೆ.

ಜೀಟಿಗೆ/ಜೀಂಟಿಗೆ = ನೋಡಿ : ದೀವಟಿಗೆ.

ಜೀವಕವಳ : ಚೆಂಡೆ, ಮದ್ದಲೆಗಳ ಮುಚ್ಚಿಗೆಗಳ ಮುಖ್ಯ ಚರ್ಮ. ನಾದ ಹೊರಡುವ ಚರ್ಮ. (ಮದ್ದಲೆಯ ಜೀವಕವಳಕ್ಕೆ ಹಿಂದಿನಿಂದ ಒತ್ತು ಕವಳ, ಮುಂದಿನಿಂದ ಕಟ್ಟು ಕವಳಗಳಿರುತ್ತವೆ.) ಚೆಂಡೆಗೆ ಮೇಲ್ಬದಿಗೆ ಜೀವಕವಳ ಮಾತ್ರ ಇರುವುದು.

ಜೀವರೇಖೆ : 1. ಬಣ್ಣಗಾರಿಕೆಯಲ್ಲಿ ವಿನ್ಯಾಸವನ್ನು ಗುರುತಿಸಿಕೊಳ್ಳಲು ಬರೆಯುವ ಮೂಲ ರೇಖೆ– ಉದಾ: ಬಣ್ಣದ ವೇಷದ ಚುಟ್ಟಿಯ ಸಾಲು ಇಡುವ ಮೊದಲು ಬರೆಯುವ ಅದೇ ವಿನ್ಯಾಸದ ಗೆರೆ.

2. ಚುಕ್ಕಿ, ನಾಮ, ಮುದ್ರೆಗಳು ಎದ್ದುಕಾಣಲು ಬರೆಯುವ ಜೀವರೇಖೆ. ಹಳದಿ, ಕೆಂಪು, ಕಪ್ಪು ಬಣ್ಣಗಳ ಗೆರೆ. (Reference line, Contrast line.)

ಜೀವಾಳ : 1. ಶ್ರುತಿ ವಾದ್ಯದಲ್ಲಿಯ ಸ್ವರ ಹೊರಡುವ ಭಾಗ. ಹಿಂದೆ ಸೋರೆ ಬುರುಡೆ, ತೆಂಗಿನ ಚಿಪ್ಪಿನ ಬುರುಡೆ ಮೊದಲಾದುವುಗಳ ಶ್ರುತಿ ವಾದ್ಯ ವಿದ್ದಾಗ, ಈ ಜೀವಾಳವನ್ನು ವಾದ್ಯದ ಓಟೆಯೊಳಗೆ ಅಳವಡಿಸುತ್ತಿದ್ದರು.

2. ಹಾರ್ಮೋನಿಯಂನ ಜೀವಾಳ, ಧ್ವನಿನಾಲಗೆ. (Reed).

ಜುಂಕಿ/ಜುಮ್ಕಿ : ಸ್ತ್ರೀವೇಷವು ಧರಿಸುವ ಒಂದು ಬಗೆಯ ಅರ್ಧ ಗೋಲಾಕಾರದ ಕಿವಿಯೋಲೆ. ಚಿಕ್ಕ ದುಂಡಗಿನ ಪಾತ್ರೆಯನ್ನು ಕವುಚಿ ಹಾಕಿದಂತಿದ್ದು, ಅದಕ್ಕೆ ಮುತ್ತು ಅಥವಾ ಮಣಿಗಳ ಜಾಲರಿ ಕುಚ್ಚು ಇರುತ್ತದೆ. ಕಿವಿಯ ಕೆಳಗೂ, ಮೇಲ್ಭಾಗಕ್ಕೂ ಧರಿಸುತ್ತಾರೆ.

ಜುಟ್ಟು : 1. ಬ್ರಾಹ್ಮಣ ವೇಷದ ಜುಟ್ಟು, ಶಿಖೆ.

2. ಋಷಿಯ ಮುಡಿ, ಚವರಿ ಕೂದಲಿನಿಂದ

ಕಟ್ಟುವ ಅಥವಾ ಸಿದ್ಧವಾಗಿರುವುದನ್ನು ಸಿಕ್ಕಿಸಿಕೊಳ್ಳುವ ಋಷಿ ಜುಟ್ಟು.

ಜುಮ್ಕಿ = ನೋಡಿ : ಜುಂಕಿ.

ಜುಮ್ಮ (ಉ.) = ಕಾವಟಿಮರ, ಕಾಮಟಿಮರ **(Zanthaxylon rhesta).** ಆಭರಣ, ಗೊಂಬೆ ಇತ್ಯಾದಿಗಳ ತಯಾರಿಕೆಗೆ ಬಳಕೆಯಾಗುವ ವೃಕ್ಷ ವಿಶೇಷ.

ಜುಮ್ಮನ ಮುಳ್ಳು (ಉ.) : 1. ಜುಮ್ಮನ ಮರದ ಮೈ(ತೊಗಟೆ)ಯಲ್ಲಿ ಮೂಡುವ ಕೋನಾಕೃತಿಯ ಮುಳ್ಳು. ಇದನ್ನು ಭುಜ ಮುಳ್ಳು ತಯಾರಿಗೆ ಬಳಸುವರು.

2. ಜುಮ್ಮನ ಮರವನ್ನು ಕೊರೆದು ತಯಾರಿಸುವ ಮುಳ್ಳಿನ ಆಕೃತಿ.

ಜೂಲಾ (ಉ.) : ರಾಜವೇಷದ ಬೆನ್ನುವಸ್ತ್ರ. ಬೆನ್ನುಶಾಲು.

ಜೆಂಗು = ನೋಡಿ : ಜಂಗು.

ಜೆಡೆ ಬಿಲ್ಲೆ/ಜಡೆ ಬಿಲ್ಲೆ : ಜಡೆಯ ಅಲಂಕರಣಕ್ಕೆ ಬಳಸುವ ಉರುಟು ಬಿಲ್ಲೆಯಾಕಾರಗಳು. ಜಡೆ ಬಂಗಾರದ ಒಂದು ಭಾಗ.

ಜೆಡೆ (ಜಡೆ) ಹೆಣೆಯುವುದು (ಬ.) : 'ಕಲ್ಯಾಣ' ಪ್ರಸಂಗಗಳಲ್ಲಿ, ವಿವಾಹ ದೃಶ್ಯದ ಅನಂತರ ತೋರಿಸುವ ಒಂದ ವಿಶಿಷ್ಟ ಕುಣಿತ. ರಂಗಸ್ಥಳದ ಚಪ್ಪರಕ್ಕೆ ಮೊದಲೇ ಕಟ್ಟಿ ಮಡಚಿ ಇರಿಸಿದ್ದ, ಆರು ಅಥವಾ ಒಂಬತ್ತು ಹುರಿಹಗ್ಗಗಳನ್ನು (ಮೂರರ ಗುಂಪುಗಳು) ಇಳಿಸಿ, ರಂಗಸ್ಥಳದಲ್ಲಿದ್ದ ವೇಷಗಳು ಅವುಗಳನ್ನು ಪಾಲು ಮಾಡಿ ಹಿಡಿದುಕೊಳ್ಳುವುದು. ನಂತರ 8 ಅಂಕೆಯ ಆಕಾರದಲ್ಲಿ ನರ್ತಿಸುತ್ತ ಜಡೆ ಹೆಣೆದು, ಪುನಃ ಹಾಗೆಯೇ ಮರಳಿ ಕುಣಿದು, ಜಡೆ ಬಿಡಿಸುತ್ತಾರೆ. ಈ ದೃಶ್ಯದ ಕುಣಿತಕ್ಕೆ ಪಾರಿಜಾತ ಪ್ರಸಂಗದ ಕೃಷ್ಣ ಸತ್ಯಭಾಮಾ ಸಂವಾದದ ''ವಾರಿಜಗಂಧಿನಿ। ಕೀರಭಾಷಿಣಿ ಮುದ್ದು। ನೀರೆ ನೀ ಬಾಗಿಲ ತೆರೆಯೆ...'' ಎಂಬ ಪದ್ಯಗಳನ್ನು ಹಾಡುತ್ತಾರೆ.

ಜೇಂಕಾರ/ಝೇಂಕಾರ : 1. ಚೆಂಡೆ, ಮದ್ದಲೆಗಳ ನಾದದ ಗಾಂಭೀರ್ಯ. ಉದಾ– ''ಇವರ ಬಡಿತದಲ್ಲಿ ಒಳ್ಳೆಯ ಜೇಂಕಾರ ಇದೆ'' ''ಈ ಮದ್ದಲೆಯ ಸ್ವರದಲ್ಲಿ ಝೇಂಕಾರ ಇಲ್ಲ''.

2. ನೃತ್ಯ, ಅಭಿನಯಗಳ ಗಾಂಭೀರ್ಯ, ಗತ್ತು.

3. ಪಾತ್ರಧಾರಿಯ ಸ್ವರ ಗಾಂಭೀರ್ಯ.

ಜೇಡಿಮಣ್ಣು : ಹಿಂದೆ, ಮುಖಕ್ಕೆ ಬಿಳಿ ಬಣ್ಣಕ್ಕಾಗಿ ಹಚ್ಚುತ್ತಿದ್ದ ಬಿಳಿಮಣ್ಣು. ಕೋಡಂಗಿ ವೇಷಕ್ಕೆ ಜೇಡಿಮಣ್ಣಿನ ನಾಮವೇ ಆಗಬೇಕೆಂದಿತ್ತು. ಈಗ ಸಪೇತ ಬಳಸುವರು.

ಜೊತೆಪುಂಡು = ನೋಡಿ : ಜತೆಪುಂಡು.

ಜೊತೆ ಬಣ್ಣ : ಜೊತೆಯಾಗಿ ಬರುವ ಬಣ್ಣದ ವೇಷಗಳು. ಉದಾ– ಶುಂಭ-ನಿಶುಂಭ, ತ್ರಿಪುರಾಸುರರು.

ಜೊತೆವೇಷ/ಜತೆವೇಷ : 1. ಒಟ್ಟೊಟ್ಟಾಗಿ ರಂಗದಲ್ಲಿ ಬರುವ ವೇಷಗಳು. ರಾಮ-ಲಕ್ಷ್ಮಣ, ಶುಂಭ-ನಿಶುಂಭ, ಚಂಡ-ಮುಂಡ.

2. ಜತೆಗಾರ– ಉದಾ– ''ಇವರು ನನ್ನ ಜತೆ ವೇಷ'' (ವೇಷಧಾರಿ).

3. ಇದಿರಾಳಿ ವೇಷಗಳು– ರಾಮ-ರಾವಣ, ಕರ್ಣ-ಅರ್ಜುನ.

ಜೊತೆ ಸ್ತ್ರೀವೇಷ/ಜತೆ ಸ್ತ್ರೀವೇಷ : 1. ಒಟ್ಟಾಗಿ ಬರುವ ಸ್ತ್ರೀಪಾತ್ರಗಳು. ಪೀಠಿಕೆ ಸ್ತ್ರೀವೇಷಗಳು. ಚಂದಭಾಮಾ ಸ್ತ್ರೀವೇಷಗಳು.

2. ಸಹಪಾತ್ರ, ಸಖಿ ಇತ್ಯಾದಿ.

ಜೋಡಾಟ/ಜೋಡಿ ಆಟ : ಎರಡು ಮೇಳಗಳು ಅಕ್ಕಪಕ್ಕದಲ್ಲಿ ರಂಗಸ್ಥಳಗಳನ್ನು ಹಾಕಿ, ಒಂದೇ ಕಥೆಯನ್ನು ಸ್ಪರ್ಧಾತ್ಮಕವಾಗಿ ಆಡುವುದು. ಏಕಕಾಲದಲ್ಲಿ ಜರಗುವ ಎರಡು ಪ್ರದರ್ಶನಗಳು. ಮೂರು, ನಾಲ್ಕು ಮೇಳಗಳ ಜೋಡಾಟಗಳಾದುದೂ ಉಂಟು.

ಜೋಡಾಟಗಳಲ್ಲಿ, ಸ್ಪರ್ಧೆ ಮತ್ತು ಸೋಲು ಗೆಲುವುಗಳಿಗೆ ಸಂಬಂಧಿಸಿ ವಿಸ್ತಾರವಾದ ನಿಯಮ ಸಂಪ್ರದಾಯಗಳಿವೆ. ಜೋಡಾಟವೆಂದರೆ ಮೇಳಗಳೊಳಗೆ ಸಾದ್ಯಂತ ಪ್ರದರ್ಶನ ಸ್ಪರ್ಧೆ. ನಾದ, ಬೊಬ್ಬೆ, ಶಬ್ದ, ವೇಷ ವಿಧಾನ, ಹಾಡು, ವಾದ್ಯ, ಕುಣಿತ– ಎಲ್ಲದರಲ್ಲಿ ಒಂದು ಮೇಳ ಇನ್ನೊಂದನ್ನು ಗೆಲ್ಲಲು ಯತ್ನಿಸುತ್ತದೆ. ಜೋಡಾಟದ ಸಂಪ್ರದಾಯಗಳೂ, ನಿಯಮಗಳೂ ಬದಲಾಗುತ್ತ ಬಂದಿವೆ. ಮೂಲತಃ ಅವು ಸುಮಾರಾಗಿ ಹೀಗೆ ಇದ್ದುವು :

1. ಎರಡು ಮೇಳಗಳೂ ಒಂದೇ ಕಥೆಯನ್ನು ಆಡಬೇಕು.

2. ಆ ಕಥೆಗೆ ಸಂಬಂಧಿಸಿದ ಯಾವುದೇ ಪ್ರಸಂಗ ಪ್ರತಿಗಳನ್ನು ಹಾಡಬಹುದು. ಸ್ವಂತ ಪದ್ಯಗಳನ್ನೂ ರಚಿಸಿ ಸೇರಿಸಿಕೊಳ್ಳಬಹುದು.

3. ಕಥೆಗೆ ವ್ಯತಿರಿಕ್ತವಲ್ಲದ ಯಾವುದೇ ಸನ್ನಿವೇಶ, ಪಾತ್ರಗಳನ್ನು ರಂಗಕ್ಕೆ ತರಬಹುದು.

4. ಎಷ್ಟು ವೇಷಗಳನ್ನೂ ರಂಗಕ್ಕೆ ತರಬಹುದು.

5. ಮೇಳಕ್ಕೆ ಸಂಬಂಧಿಸಿದ ಯಾರೂ, ಒಂದು

ಮೇಳದ ಚೌಕಿಯಿಂದ ಇನ್ನೊಂದಕ್ಕೆ ಹೋಗಬಾರದು. (ಇದು ತಂತ್ರ ಯೋಜನೆಗಳ ಗುಟ್ಟು ಕಾಪಾಡುವುದಕ್ಕಾಗಿ.)

6. ಮೇಳದ ಅಧಿಕೃತ ಕಲಾವಿದರಲ್ಲದವರು ಭಾಗವಹಿಸಬಾರದು. ಹಾಗೆ ಭಾಗವಹಿಸುವುದಿದ್ದರೆ ಇನ್ನೊಂದು ಮೇಳದ ಒಪ್ಪಿಗೆ ಇರಬೇಕು.

7. ಆಟದ ಸನ್ನಿವೇಶದ ಕುಣಿತ, ಪದ್ಯ-ದೀರ್ಘವಾಗಬೇಕು. ಸ್ಪರ್ಧೆಯ ಮುಖ್ಯ ಅಂಶ ಇದೇ. ಆದರೆ, ಕೊನೆಯಲ್ಲಿ ಆಟವನ್ನು ಬೇಗನೆ ಮುಗಿಸಿದವರು ಗೆದ್ದಂತೆ.

ಈ ಪರಸ್ಪರ ವಿರುದ್ಧ ನಿಯಮವನ್ನು ಹೊಂದಿಸಲು, ಮೇಳಗಳು ತಮಗೆ ಬೇಕಾದ ಸನ್ನಿವೇಶಗಳನ್ನು ಲಂಬಿಸಿ, ಕುಗ್ಗಿಸಿ ಸಮಯ ಸರಿಪಡಿಸಿಕೊಳ್ಳುವ ಯೋಜನೆ ಹೊಂದಿರುತ್ತವೆ.

8. ಎರಡು ರಂಗಸ್ಥಳಗಳಲ್ಲಿ, ತಮಗೆ ಬೇಕಾದುದನ್ನು ಆರಿಸಲು, ಮೇಳವು ರಥದ ಹೊರೆಯನ್ನು ಮೊದಲಾಗಿ ಆ ಸ್ಥಳಕ್ಕೆ ತಲಪಿಸಬೇಕು. ಇದಕ್ಕಾಗಿ ಮೇಳಗಳೊಳಗೆ ಜಿದ್ದು ನಡೆಯುತ್ತಿತ್ತು. ಯಾರ ರಥ ಆ ಸ್ಥಳಕ್ಕೆ ಮೊದಲು ಬಂತೊ, ಅವರು ತಮಗೆ ಬೇಕಾದ ರಂಗಸ್ಥಳದಲ್ಲಿ ಅದನ್ನಿರಿಸಿ, ರಂಗಸ್ಥಳವನ್ನು ಸ್ವಾಧೀನ ಮಾಡಿಕೊಳ್ಳಬಹುದು.

9. ಸೋಲು-ಗೆಲುವುಗಳನ್ನು ಯಾರೂ ನಿರ್ಣಯಿಸಿ ಹೇಳುವ ಕ್ರಮವಿಲ್ಲ. ಜನರು ಅವರಷ್ಟಕ್ಕೆ ಅಭಿಪ್ರಾಯ ಪಡುತ್ತಾರೆ.

ಜೋಡಾಟಗಳ ಭರ ಇದ್ದ ಕಾಲದಲ್ಲಿ, ಮೇಳಗಳೊಳಗೂ, ಅಭಿಮಾನಿಗಳೊಳಗೂ ಜಗಳಗಳು, ವಿವಾದಗಳು ಬರುತ್ತಿದ್ದುವು. ಚಿಕ್ಕಪುಟ್ಟ ವಿಷಯಗಳಿಗೂ ವಿವಾದವಾಗಿ, ಆಟಗಳು ಸ್ಥಗಿತವಾಗುವುದು, ವೈಷಮ್ಯ ಬೆಳೆಯುವುದು ಮೊದಲಾಯಿತು. ಇದನ್ನು ನಿವಾರಿಸಿ, ಸ್ಪರ್ಧೆಯನ್ನು ಸಕ್ರಮಗೊಳಿಸಲು, ಕೆಲವು ಏರ್ಪಾಡುಗಳಾದುವು. ಇದರಂತೆ, ಮಧ್ಯಸ್ಥರ ಮಂಡಳಿಯೊಂದು, ಸಮಯ ನಿಯಂತ್ರಣ, ವಿವಾದ ತೀರ್ಮಾನಗಳಿಗಾಗಿ ನೇಮಕಗೊಳ್ಳುತ್ತಿತ್ತು. ಅವರ ತೀರ್ಮಾನ ಅಂತಿಮ. ಯಾವುದೇ ಒಂದು ಸನ್ನಿವೇಶ, ಮಿತಿಮೀರಿ ಬೆಳೆಯುತ್ತಿದೆ ಅನಿಸಿದರೆ ಅವರು ಗಂಟೆ ಹೊಡೆದು ನಿಲ್ಲಿಸಿ, ಮುಂದುವರಿಸಲು ಸೂಚಿಸಬಹುದು. ಕೆಲವೊಮ್ಮೆ ಸೋಲು-ಗೆಲುವಿನ ನಿರ್ಧಾರದ ಅಧಿಕಾರವೂ ಈ ನಿರ್ಣಾಯಕರಿಗಿತ್ತು.

ಈ ವ್ಯವಸ್ಥೆಯಂತೆ, ಆರಿಸುವ ಪ್ರಸಂಗ ಭಾಗ, ಹೊರಡಿಸಬೇಕಾದ ವೇಷಗಳು ಮೊದಲಾದ ವಿಷಯಗಳಲ್ಲಿ ಒಪ್ಪಂದವಾಗಿ, ಅದರ ಲಿಖಿತ ಯಾದಿಗಳನ್ನು ತಯಾರಿಸಿ, ಮೇಳಗಳೊಳಗೆ ವಿನಿಮಯ ಮಾಡಲಾಗುತ್ತಿತ್ತು. ಈ ಒಪ್ಪಂದದ ವ್ಯಾಪ್ತಿಯೊಳಗೆ, ಸ್ಪರ್ಧೆ ನಡೆಯುತ್ತಿತ್ತು. ಆದರೆ, ವೇಷಗಳು ಹೇಗಿರಬೇಕು, ಪರಿಕರಗಳ ಆಯ್ಕೆ, ವಿಶಿಷ್ಟ, ವಿಚಿತ್ರ ತಂತ್ರ ಯೋಜನೆಗಳ ಬಗೆಗೆ ಮೇಳಗಳಿಗೆ ಸ್ವಾತಂತ್ರ್ಯವಿತ್ತು. ಜೋಡಾಟದಲ್ಲಿ, ಭಾಗವತನ ಪ್ರಾವೀಣ್ಯವೇ ಪ್ರಧಾನ. ತನ್ನ ಮೇಳದ ದೌರ್ಬಲ್ಯಗಳನ್ನು ಮರೆಪಡಿಸಿ, ತನ್ನ ಮೇಳದ ಆಟ ಎದ್ದುಕಾಣುವಂತೆ, ಏರ್ಪಡಿಸುವ ಹೊಣೆ ಆತನದು. ಪ್ರೇಕ್ಷಕರ ಗಮನವನ್ನು ತಮ್ಮ ರಂಗಸ್ಥಳದ ಕಡೆಗೆ ಸೆಳೆಯಲು, ಇನ್ನೊಂದು ಮೇಳದ ಆಟದಲ್ಲಿ ಮಾತು ಸಾಗುವಾಗ, ತಾವು ಜೋರಾಗಿ ಹಾಡುವುದು, ಅವರು ಹಾಡುವಾಗ ಇಲ್ಲಿ ಜೋರಾಗಿ ಚೆಂಡೆ ಬಾರಿಸುವುದು, ಅಲ್ಲಿ ಒಳ್ಳೆಯ ಕುಣಿತಗಾರರಿದ್ದಾಗ ಬೇಕೆಂದೇ ಒಮ್ಮೆ ಆಟವನ್ನು ನಿಧಾನಗೊಳಿಸಿ, ಅನುಕೂಲವೊದಗಿದಾಗ ಮತ್ತೆ ರಭಸ ತರುವುದು-ಇಂತಹ ಹಲವು ಉಪಾಯಗಳಿವೆ.

ಜೋಡಾಟಗಳ ಬಗೆಗೆ ಹಲವು ಕತೆಗಳೂ, ದಂತಕತೆಗಳೂ ಪ್ರಚಲಿತವಾಗಿವೆ. ಕಲಾವಿದರ ಆಯ್ಕೆಗೆ, ಹಿಂದೆ, ಜೋಡಾಟದ ಪ್ರಖ್ಯಾತಿಯು ಒಂದು ಮಾನದಂಡವಾಗಿರುತ್ತಿತ್ತು.

ಒಂದೇ ತಿಟ್ಟಿನ ಮೇಳಗಳೊಳಗೆ ಜೋಡಾಟಗಳಾಗುವುದು ಪದ್ಧತಿಯಾದರೂ, ತೆಂಕು-ಬಡಗು ತಿಟ್ಟುಗಳ ಮೇಳಗಳೊಳಗೂ ಜೋಡಾಟಗಳಾಗಿವೆ.

ಜೋಡಾಟವು ಗಲಭೆಯ ಸ್ಪರ್ಧೆ. ಇದನ್ನು ಕಲೆಯೆಂದು ಅಂಗೀಕರಿಸಲು ಸಾಧ್ಯವಿಲ್ಲ. ಆದರೆ, ಜೋಡಾಟಗಳು ಕಲಾವಿದರಿಗೆ ಹಬ್ಬಗಳಂತಿದ್ದು, ಜನರಲ್ಲಿ ಒಂದು ಬಗೆಯ ಸುದ್ದಿಯಾಗಿ, ಚರ್ಚೆಯಾಗಿ ಪರಿಣಾಮಗೊಂಡು, ಒಂದು ಬಗೆಯ ಪ್ರಸಾರ ಮೌಲ್ಯ ಈ ಪ್ರಕಾರಕ್ಕಿದೆ.

1960ರ ಅನಂತರ ಜೋಡಾಟಗಳಿಗೆ ಇಳಿಗಾಲ. ಈಗಲೂ ವಿರಳವಾಗಿ ಎಂಬಂತೆ ಜರಗುತ್ತಿವೆಯಾದರೂ, ಅಭಿರುಚಿಯ ಪರಿಷ್ಕಾರದಿಂದಾಗಿ ಜೋಡಾಟಗಳನ್ನು ಮೆಚ್ಚುವವರ ಸಂಖ್ಯೆ ಕಡಮೆ. ಬಹುಶಃ ಜೋಡಾಟಗಳ ಯುಗ ಮುಗಿದಿದೆಯೆನ್ನಬಹುದು.

ಉತ್ತರ ಕನ್ನಡದಲ್ಲಿ ಜೋಡಾಟಗಳಿಗೆ ಹಿಂದೆಯೂ ಪ್ರಾಶಸ್ತ್ಯವಿರಲಿಲ್ಲ.

ಜೋಡಿ/ಜೋಡಿವೇಷ : ಜೊತೆವೇಷಗಳು ಅಥವಾ ಇದಿರು ಪಾತ್ರಗಳು. ಉ.ಕ.ದಲ್ಲಿ ಇಂತಿಂತಹ ಕಲಾವಿದರ ಜೋಡಿ, ಜೊತೆಗಾರಿಕೆ ಎಂಬುದಕ್ಕೆ ವಿಶೇಷ ಮಹತ್ತ್ವವಿದೆ.

ಜೋಡಿ ಆಟ = ನೋಡಿ : **ಜೋಡಾಟ.**

ಜೋಡಿವೇಷ = ನೋಡಿ : **ಜೋಡಿ.**

ಜೋಡುಕರ್ನ (ರ್ಣ) : ಮದ್ದಲೆಯ ಎರಡೂ ಬದಿಗಳಿಗೆ ಕರ್ನ (ಕರಣೆ) ಹಾಕಿರುವುದು. ಒಂದು ಬದಿಗೆ ಬೋನವನ್ನು ಹಾಕುವ ಕ್ರಮವೂ ಇರುವುದರಿಂದ, ಈ ಪದದ ಬಳಕೆ ಇದೆ.

ಜೋಡುಕುಣಿತ (ಬ.) : 1. ಯುದ್ಧ, ಶೃಂಗಾರ ಮುಂತಾದ ಸನ್ನಿವೇಶಗಳಲ್ಲಿ ಕುಣಿಯುವ, ಎರಡು ಅಥವಾ ಹೆಚ್ಚು ವೇಷಗಳ ಕುಣಿತ. ಇದಕ್ಕೆ ವಿಶಿಷ್ಟ ಹಜ್ಜೆಗಳೂ, ಬಡಿತಗಳೂ ಇವೆ.
2. ಒಡ್ಡೋಲಗದ ಪದ್ಯಗಳಿಗೆ, ವೇಷಗಳು ಎರಡು ಗುಂಪಾಗಿ, ರಂಗದ ಮೂಲೆಗಳಿಗೆ ಹಾರಿ, ಮಧ್ಯಕ್ಕೆ ಬಂದು, ಅನಂತರ ಸುತ್ತು ಬರುತ್ತ ಕುಣಿಯುವುದು. ಹಿಮ್ಮೇಳದ ಬಿಡ್ತಿಗೆಗಳನ್ನು ಹಂಚಿಕೊಂಡು, ಪರ್ಯಾಯಕ್ರಮದಿಂದ ಒಂಟಿಯಾಗಿ ಕುಣಿದು, ಅನಂತರ ಒಟ್ಟಿಗೆ ಕುಣಿಯುವ ವಿಧಾನವೂ ಇದೆ.

ಜೋಡುಕೋರೆ (ಬ.) : ಕಿರಾತವೇಷದ ತಲೆಯಲ್ಲಿ ಕಟ್ಟುವ ಎರಡು **ಕೋರೆಮುಂಡಾಸು**ಗಳು; ಡಬ್ಬಲ್ ಕೋರೆ. ತಲೆಯ ಎರಡು ಬದಿಗಳ ಮೇಲೆ, ಒಂದಕ್ಕೊಂದು ಎದುರಾಗಿ ಕಟ್ಟುವ ಮುಂಡಾಸುಗಳು. ಇದು ವಿಶೇಷ ಮತ್ತು ಐಚ್ಛಿಕ.

ಜೋಡುಮಂಡಿ (ಬ.) : ಮಂಡಿಕುಣಿತದ ಒಂದು ವಿಶಿಷ್ಟಕ್ರಮ. ಪ್ರವೇಶ ಮತ್ತು ವಿಶೇಷತಃ ಯುದ್ಧ ದೃಶ್ಯದಲ್ಲಿ ಎರಡು ವೇಷಗಳು, ಒಂದಕ್ಕೊಂದು ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತ ನಡೆಸುವ ಮಂಡಿ ಕುಣಿತ.

ಜೋಡು ಮುಕ್ತಾಯ (ಬ.) : ಪದ್ಯದ ಮಧ್ಯೆ ಅಥವಾ ಕೊನೆಗೆ **ಮುಕ್ತಾಯ** ಬಾರಿಸುವಾಗ ಒಂದು ಮುಕ್ತಾಯದ ಬದಲು, ಎರಡು ಮುಕ್ತಾಯಗಳನ್ನು ಬಾರಿಸುವುದು. ಕುಣಿತದಲ್ಲಿ ವೈವಿಧ್ಯ ಮತ್ತು ಆಕರ್ಷಣೆ ತರಲು ಈ ಕ್ರಮವಿದೆ. **ಕೋರೆತಾಳ**(ತಿತ್ತಿತ್ತೈ)ದಲ್ಲಿ ಮಾತ್ರ ಈ ಪ್ರಯೋಗ.

ಜೋಡು ರಂಗಸ್ಥಳ : 1. **ಜೋಡಾಟ**ಕ್ಕೆ ಸಂಬಂಧಿಸಿದ ಎರಡು ರಂಗಸ್ಥಳಗಳು.
2. ಎರಡು ರಂಗಸ್ಥಳಗಳನ್ನು ಒಂದಕ್ಕೊಂದು ತಾಗಿರುವಂತೆ ಹಾಕಿ ನಿರ್ಮಿಸುವ ರಂಗಸ್ಥಳ. ಇತ್ತೀಚೆಗೆ ಪ್ರಯೋಗಕ್ಕೆ ಬಂದಿರುವ ಎರಡು ಮೇಳಗಳ ಆಟ (ಪಾಂಡವ ಪಕ್ಷ-ಕೌರವ ಪಕ್ಷ, ದೇವ-ದಾನವ. ಅಥವಾ ಭಾಗಶಃ ಒಂದು ಮೇಳಕ್ಕೆ ಒಂದು ಕಥೆ ಇನ್ನೊಂದಕ್ಕೆ ಇನ್ನೊಂದು ಕಥೆ) – **ಕೂಡಾಟ**ದ ರಂಗಸ್ಥಳ. ಎರಡು ಸಿಂಹಾಸನಗಳೂ, ಎರಡು ಹಿಮ್ಮೇಳದ ಏರ್ಪಾಡುಗಳೂ ಇರುತ್ತವೆ.

ಜೋಡು ಸ್ತ್ರೀವೇಷ = ನೋಡಿ : **ಜೊತೆ ಸ್ತ್ರೀವೇಷ.**

ಜೌರಂಗಿ = ನೋಡಿ : **ಡವರಂಗಿ.**

ಝ

ಝಂಪೆತಾಳ : ತಾಳಗಳಲ್ಲೊಂದು. ಹತ್ತು ಮಾತ್ರಾಕಾಲದ ನಿಧಾನ ಝಂಪೆ ಮತ್ತು ಐದು ಮಾತ್ರಾಕಾಲದ ತ್ವರಿತ ಝಂಪೆ ಎಂಬ ಎರಡು ರೂಪಗಳಲ್ಲಿದೆ ನೋಡಿ : ಆಯಾ ಪದ.

ಝಾಪು (ಬ.) = ನೋಡಿ : **ಜಾಪು.**

ಝೇಂಕಾರ = ನೋಡಿ : **ಜೇಂಕಾರ.**

ಟ

ಟಚ್ಚು ಕೊಡುವುದು : Touch ಎಂಬುದರಿಂದ ಬಂದುದು. Catch word, Cue. ಮಾತಿಗೆ, ಮುಂದಿನ ಪದ್ಯಕ್ಕೆ, ಸಂಭಾಷಣೆಗೆ ಅನುಕೂಲಿಸುವಂತೆ ಮಾತಾಡುವ ಕೊಂಡಿ ಮಾತು. ನೋಡಿ : **ಎತ್ತುಗಡೆ, ಸಂದರ್ಭ.**

ಟಾಂಕಿ : ಮದ್ದಲೆ, ಚೆಂಡೆಗಳ ಮುಚ್ಚಿಗೆಯ ಬದಿ, ಅಂಚು.

ಟಾಂಕಿಪೆಟ್ಟು : ಕರೆಪೆಟ್ಟು. ಟಾಂಕಿಗೆ ಬಾರಿಸಿದ ಬಡಿತ. ನಂ, ತ, ಟಾಂ– ನಾದಗಳು.

ಟಿಕೇಟು : ಡೇರೆ ಆಟದ ಪ್ರವೇಶ ಚೀಟಿ ಮತ್ತು ಪ್ರವೇಶ ದರ.

ಟಿಕೇಟು ಆಫೀಸು : ಬಾಕ್ಸ್ ಆಫೀಸ್. ಗಲ್ಲಾ ಕೋಣೆ. ಮರದ ಹಲಗೆಗಳಿಂದ ತಯಾರಿಸಿದ ಚಿಕ್ಕಕೋಣೆ.

ಟೀಕೀಸರ (ಉ.) = ನೋಡಿ : **ಗೆಜ್ಜೆ ಅಡ್ಡಿಗೆ.**

ಟುವಾಲ್ : ಟವೆಲ್. ವೇಷವು ಕೈಯಲ್ಲಿ ಹಿಡಿದುಕೊಳ್ಳುವ ಕರವಸ್ತ್ರ, ಚಿಕ್ಕ ಟವಲ್. ನೋಡಿ : **ಕರವಸ್ತ್ರ.**

ಟೆಂಟು : ಆಟದ ಡೇರೆ; ಗುಡಾರ; ಟೆಂಟ್. 1940-50ರ ಅವಧಿಯಲ್ಲಿ ಚಾಪೆ, ಸೋಗೆ, ತಡಿಕೆ, ತಟ್ಟಿಗಳ ಡೇರೆಯಿತ್ತು. ಈಗ ಬಟ್ಟೆಯ ಟೆಂಟ್ ಬಳಕೆ ಯಲ್ಲಿದೆ. ನೋಡಿ : **ತಂಬು.**

ಟೆಂಟು ಆಟ = ನೋಡಿ : ತಂಬು. ಪ್ರವೇಶದರವಿಟ್ಟು ಆಡುವ ಆಟ. ನೋಡಿ : **ಡೇರೆ ಆಟ,**

ಟೇಕೆ : ಟೇಕೆಪೆಟ್ಟು – ಟೀಕಾ (ಹಿಂದಿ) ಮದ್ದಲೆಯ ಕಟ್ಟುಕವಳದ ಮೇಲೆ ಬಾರಿಸುವ ಪೆಟ್ಟು. ನಂ, ನ, ಟಂ-ನಾದ.

ಟೇಪು : ಜರಿ, ಬಟ್ಟೆಗಳ ಲಾಡಿ.

ಟೋಕಿನ್ಸ್ (ತೆ.) : ಸ್ಟಾಕಿಂಗ್ಸ್. ಕಾಲುಚೀಲ. ಇತ್ತೀಚೆಗೆ ಬಳಕೆಗೆ ಬಂದದ್ದು. ನೋಡಿ : **ಸಾಕ್ಸ್.**

ಟೋಪನ್ : ಕೃತಕ ಕೇಶದ ಸಿದ್ಧ ಕೇಶವಿನ್ಯಾಸದ ಟೊಪ್ಪಿಗೆ. ತಲೆಗೆ ಸಿಕ್ಕಿಸಿಕೊಳ್ಳುವ ಕೂದಲ ಮುಡಿ. ಅರ್ವಾಚೀನ ಪ್ರಯೋಗ.

ಠ

ಠೀವಿ : ಗತ್ತು, ಅಂದ, ಗಾಂಭೀರ್ಯ.

ಠೇಂಕಾರ : ಗತ್ತು, ರಭಸ, ದೌಷ್ಟ್ಯದ ಅಭಿನಯ.

ಡ

ಡಂಗುರ : ಡಂಗುರ ಸಾರುವ ದೃಶ್ಯ. ಹಾಸ್ಯಗಾರನು ಜಾಗಟೆ ಹಿಡಿದು ಬಾರಿಸಿ ಡಂಗುರ ಸಾರುವುದು. ಉದಾ-ಸ್ವರ್ಗವನ್ನು ರಾಕ್ಷಸರು ಜಯಿಸಿದ ಬಳಿಕ ಸಾರುವ ಡಂಗುರ.

ಡಂಗುರ ದೂತ : ಡಂಗುರ ಸಾರುವ ದೃಶ್ಯದಲ್ಲಿ ಬರುವ ದೂತ. ಹಾಸ್ಯಗಾರನ ಪಾತ್ರ.

ಡಬ್ಬಲ್ ಉರುಳಿಕೆ = ನೋಡಿ : **ಎರಟ್ಟಿ ಉರುಳಿಕೆ.**

ಡಬ್ಬಲ್ ಲಾಗ (ತೆ.) : ಇಮ್ಮಡಿ ವೇಗದ **ಗುತ್ತು** ಹಾರಾಟ. ತಾಳದ ಒಂದು ಆವರ್ತಕ್ಕೆ ಎರಡರಂತೆ ಹಾರುವಿಕೆ.

ಡಮರು : ಶಿವನ ಶೂಲಕ್ಕೆ ಸಿಕ್ಕಿಸುವ ಡಮರು ಆಕೃತಿ. ಅರ್ವಾಚೀನ ಪ್ರಯೋಗ.

ಡವರಂಗಿ/ಜವುರಂಗಿ/ಜೌರಂಗಿ/ಡವರು/ಡೌರು/ ದವರು: ದವರು, ಜವುರಂಗಿ.

1. ನಿಲುವಂಗಿ.
2. ಕೋಡಂಗಿ ವೇಷ, ಡವರಂಗಿ ವೇಷ.

ಡವರು = ನೋಡಿ : **ಡವರಂಗಿ.**

ಡಾಬು : ವಿವಿಧ ಆಕೃತಿ, ವಿನ್ಯಾಸಗಳ **ಸೊಂಟಪಟ್ಟಿ** ಗಳು. ಮರದ ಬಿಲ್ಲೆಗಳ ಜೋಡಣೆ, ಅಥವಾ ಬಟ್ಟೆಯ ಮೆತ್ತೆಗೆ ಮಣಿ, ಜರಿ ಇತ್ಯಾದಿ ಕೂರಿಸಿ ಮಾಡಿದ ಪಟ್ಟಿಗಳು. ಮುಂದೆ ಹೊಟ್ಟೆಯ ಮೇಲಿಂದ ತಂದು ಹಿಂಬದಿಯಲ್ಲಿ ಕಟ್ಟುವರು.

ಡಾಲು (ಬ.): ವೇಷಕ್ಕೆ ಬಳಸುವ ಹೆಚ್ಚುವರಿ ಅಲಂಕಾರ ಪಟ್ಟಿಕೆ. ಹಸಿರು ಅಥವಾ ನೀಲಿ ಪಟ್ಟಿಗೆ, ಮಣಿಗಳ ಜೋಡಣೆ. ಹೆಗಲ ಮೇಲಿಂದ ಶಲ್ಲೆಯಂತೆ ಹಾಕಿ, ಸೊಂಟದ ಮುಂಗಡೆ ಜೋಡಿಸಿ ಬಿಡುವುದು. ಅಥವಾ ಬಲಬದಿಗೆ ಗಂಟು ಹಾಕುವುದು.

– ಹಿಂದೆ, ಎರಡು ಬಣ್ಣಗಳ ಅಂಚಿನ ಶಾಲನ್ನು ಮಡಚಿ ಬಳಸುತ್ತಿದ್ದರು.

ಡೇರೆ = ನೋಡಿ : **ಟೆಂಟು.**

ಡೇರೆ ಆಟ : ಡೇರೆ ಹಾಕಿ, ಪ್ರವೇಶದರವಿಟ್ಟು ಆಡುವ ಆಟ. ನೋಡಿ. **ಟೆಂಟು ಆಟ;**

ಡೊಳ್ಳು : 1. ಬಟ್ಟೆ ಸುತ್ತಿ ತಯಾರಿಸುವ ಕೃತಕ ಡೊಳ್ಳು ಹೊಟ್ಟೆಯ ರಚನೆ.

2. ಮದ್ದಲೆಯ ಕಳಸಿಗೆಯ ನಡುವಿನಲ್ಲಿರುವ ಉಬ್ಬಿದ ಭಾಗ; ಮದ್ದಲೆಯ ಡೊಳ್ಳು.

ಡೌರು = ನೋಡಿ : **ಡವರಂಗಿ.**

ಢ

ಢವಳಾರ: 1. ಸ್ತುತಿ ಪದ್ಯ. ಆರತಿ ಪದ್ಯದ ಒಂದು ಬಗೆ. ಧವಳಾರ: 'ಧವಳಾಗಾರ' (ದೇವಾಲಯ) ಪ್ರಬಂಧ ಎಂಬುದರಿಂದ ನಿಷ್ಪನ್ನ ಪದ. ಏಕತಾಳ, ತ್ರಿವುಡೆತಾಳಗಳಲ್ಲಿರುವ ರಚನೆ. ಆಟದ ಕೊನೆಯಲ್ಲಿ ಆರತಿ ದೃಶ್ಯಕ್ಕೆ ಬಳಕೆ. ನೋಡಿ– **ಆರತಿ ಪದ್ಯ**.
2. ಒಂದು ರಾಗದ ಹೆಸರು.

ತ

ತಂಬು (ಉ.) = ನೋಡಿ: **ಟೆಂಟು**, ಯಕ್ಷಗಾನ ಪ್ರದರ್ಶನದ ತಾತ್ಕಾಲಿಕ ಸಭಾಗೃಹ. ಚಾಪೆ, ತಡಿಕೆ, ಬಟ್ಟೆ ಮುಂತಾದುವುಗಳಿಂದ ನಿರ್ಮಿತ.

ತಕತಕಿಟ: ತ್ವರಿತ ಝಂಪೆ ತಾಳದ ಮೂಲ ಪೆಟ್ಟುಗಳಲ್ಲಿ ಒಂದು ಬಗೆ.

ತಟ್ಟಿ: 1. ಬಟ್ಟಲು ಕಿರೀಟದ ಉರುಟು ಆಧಾರ; ಬಣ್ಣದ ವೇಷದ ಕಿರೀಟ.
2. ವೀರಭದ್ರ ಮೊದಲಾದ ವೇಷಗಳಿಗೆ ಬೆನ್ನು-ತಲೆಗಳ ಹಿಂದೆ ಕಟ್ಟುವ ಅಣಿಯಂತಹ ಆಕೃತಿ. ನೋಡಿ: **ತಟ್ಟಿ ವೀರಭದ್ರ**.
3. ಚೌಕಿ, ರಂಗಸ್ಥಳಗಳ ನಿರ್ಮಾಣಕ್ಕೆ ಬಳಸುವ ಬೆತ್ತ, ಬೀಳಲು, ಬಿದಿರು, ಹಗುರ ಮರದ ಕಡ್ಡಿ ಇತ್ಯಾದಿಗಳನ್ನು ಹೆಣೆದು ಮಾಡಿದ ರಚನೆ; ತಡಿಕೆ.

ತಟ್ಟಿಕಿರೀಟ = ನೋಡಿ: **ತಡ್ಪೆಕಿರೀಟ**.

ತಟ್ಟಿ ವೀರಭದ್ರ (ಉ.): ಬೆನ್ನ ಹಿಂದೆ ತಡಿಕೆಯ ಪ್ರಭಾವಳಿಯನ್ನು ಕಟ್ಟಿದ ವೀರಭದ್ರನ ವೇಷ; ವಿಶೇಷ ಪಾತ್ರ. ಈ ತಟ್ಟಿ ವೀರಭದ್ರನ ತಡಿಕೆಗೆ ನವಿಲುಗರಿಯ ಹೀಲಿ ಕಟ್ಟುತ್ತಾರೆ. ಕೋಲು ಬತ್ತಿಗಳನ್ನು ಸಿಕ್ಕಿಸಿ ಉರಿಸುವುದುಂಟು.

ತಟ್ಟೀಬಳಿ (ತಟ್ಟೀಬಲಿ?) (ಬ.): ಹಾಸ್ಯ ಸನ್ನಿವೇಶ; ಅಪಶಕುನ ಹಾಸ್ಯಗಳಲ್ಲೊಂದು; ಬಲಿವಿಧಿಯೊಂದರ ಅಣಕ.

ಮೂಲತಃ ತಟ್ಟೀಬಳಿಯೆಂದರೆ, ಮನೆಯಲ್ಲಿರುವ ಭೂತಾದಿಗಳ ಪೀಡೆಗೆ ನಿವಾಳಿಸಿ ತೆಗೆದು, ಮೂರುರಸ್ತೆ ಕೂಡುವಲ್ಲಿ, ಕೋಲು ಬತ್ತಿ, ಓಕುಳಿ ನೀರು ಇರಿಸಿ, ಚರು ಹಾಕಿ ನಿವಾರಿಸುವ ಆಚರಣೆ. ಇದು ಜನರಿಲ್ಲದಾಗ ಮಾಡಬೇಕು, ನೋಡಿದರೆ ನೋಡಿದವರಿಗೆ ಅಪಶಕುನವೆಂದು ನಂಬುಗೆ.

ಆಟದಲ್ಲಿ, ಹಾಸ್ಯಗಾರನು ಪೆಟ್ಟಿಗೆಯ ಮುಚ್ಚಳ (ಗೆರಸೆಯ ಬದಲಿ), ಕೋಲುಬತ್ತಿ, ಮುಂಡಕ್ಕಿ (ಚರುವಿನ ಬದಲಿ), ಓಕುಳಿ ನೀರು ತಂದು ಅಭಿನಯಸುವಾಗ, ರಾಜನ ಪ್ರವೇಶ. ಅನಂತರ ಸಂಭಾಷಣೆ ಜರಗುತ್ತದೆ.

ತಡ್ಪೆಕಿರೀಟ/ತಟ್ಟಿಕಿರೀಟ (ತೆ.): ತಡಿಕೆಯ ಆಕೃತಿಯ ಅಥವಾ ಗೆರಸೆಯ ಆಕಾರದ (ತಡ್ಪೆ (ತುಳು) = ಗೆರಸೆ) ಕಿರೀಟ. ಬಣ್ಣದವೇಷಗಳು ಇಡುವ **ಬಟ್ಟಲು ಕಿರೀಟ, ಕೇಶಭಾರ ಕಿರೀಟ, ಕುಟ್ಟಿಚಾಮರ**.

ಇದು ಮರದಿಂದ ಅಥವಾ ಉರುಟಾದ ಬೆತ್ತದ ತಡಿಕೆಯನ್ನು ಅಲಂಕರಿಸಿ ತಯಾರಿಸಲ್ಪಡುವಂತಹದು. ಹಿಂಭಾಗವು ನತೋದರವಾಗಿರುತ್ತದೆ. ಉರುಟಾಗಿ ಮಣಿ, ಹುಳುಚೆಪ್ಪುಗಳನ್ನು ಜೋಡಿಸಿ ಅಲಂಕರಿಸುವರು. ಮಧ್ಯದಲ್ಲಿ ಕಲಶ ಅಥವಾ ಬುರುಡೆ, ಇದ್ದು ಅದರ ತುದಿಗೆ ಚಿಕ್ಕ ಸತ್ತಿಗೆ ಇರುತ್ತದೆ (ಐಚ್ಛಿಕ). ಈ ಕಿರೀಟಕ್ಕೆ ಕರ್ಣಪಾತ್ರದ ಬದಲು ಉರುಟಾದ ಓಲೆಗಳನ್ನು ಕಟ್ಟುವರು.

ಕಥಕಳಿಯಲ್ಲಿ ಸಹ ಇದೇ ಕಿರೀಟಗಳಿವೆ.

ತಪ್ಪು: ಮೇಳದ ಸಿಬ್ಬಂದಿ ಅಥವಾ ಕಲಾವಿದರಿಂದ ಆಗುವ ಕರ್ತವ್ಯ ಲೋಪ, ತಪ್ಪು ನಡತೆ, ದುರ್ವರ್ತನೆ, ಅಶಿಸ್ತು ಇತ್ಯಾದಿ ಮತ್ತು ಅದಕ್ಕೆ ವಿಧಿಸಲಾಗುವ ದಂಡ; ಜುಲ್ಮಾನೆ. 'ತಪ್ಪು ಕಟ್ಟುವಿಕೆ' – ಈ ಹಣ ಮೇಳದ ದೇವರಿಗೆ ಸೇರುತ್ತದೆ.

ತಮಟೆ (ಗ.): ತಮ್ಮಟೆ. ರಾಕ್ಷಸ ಪಾತ್ರಗಳಿಗೂ ಬೀದಿಕುಣಿತಕ್ಕೂ ಬಳಕೆ.

ತರಿಕಿಟ: 1. ಮದ್ದಲೆಯ ಮೂಲಪಾಠದ ಮೊದಲ ಪೆಟ್ಟುಗಳು.
2. ಆರಂಭಿಕ ವಾದನ ಪರಿಜ್ಞಾನ. ವಾಗ್ರೂಢಿಯಲ್ಲೂ ಇದೆ. ಉದಾ: ''ಅವನಿಗೆ 'ತರಿಕಿಟ'ವೇ ಗೊತ್ತಿಲ್ಲ''.

ತಲೆತಿರುಕನಮಣಿ (ಉ.): ಕಾಡಿನ, ಒಂದು ಬಗೆಯ ಕಾಯಿ. ಹಿಂದೆ ಕೇದಗೆಯಲ್ಲಿಯ ಮಣಿಗಳಿಗೆ ಇದನ್ನೆ ಬಳಸುತ್ತಿದ್ದರು.

ತಲೆಸಾಮಾನು : ತಲೆಗೆ ಕಟ್ಟಿಕೊಳ್ಳುವ ಬಟ್ಟೆ, ಕೇಸರಿ, ಮುಂಡಾಸು, ಮುಡಿ, ಮುಂದಲೆ– ಇತ್ಯಾದಿ ಆಭರಣಗಳು– ಮುಖ್ಯವಾಗಿ ಸ್ತ್ರೀವೇಷದ ತಲೆಗೆ ಸಂಬಂಧಿಸಿದ ಸಾಮಗ್ರಿ; ಶಿರೋಭೂಷಣ.

ತಲೆಸೂಡಿ: ಸ್ತ್ರೀವೇಷದ ಮುಡಿ. ಕೃತಕ ಅಥವಾ ಸಹಜವಾದ ಕೂದಲಿನ ಸೂಡಿ. ಇದರಲ್ಲಿ **ಅಂಬಟೆಸೂಡಿ, ಜೋಲುಸೂಡಿ, ಉರುಟು** (**ಚಕ್ರ**) **ಮುಡಿ** ಮೊದಲಾದ ವಿಧಗಳಿವೆ. ಮುಖ್ಯ ಪಾತ್ರಗಳಿಗೆ **ಚಕ್ರ**ಮುಡಿ ಅಥವಾ **ಜಡೆ** ಇರುತ್ತದೆ.

ತಾಂಗಿನ ಹಗ್ಗ : ತಾಂಗು ಎಂದರೆ ಆಧಾರ.

(ಬ.) 1. ಮುಂದಲೆ ಪಟ್ಟಿಯ ಮಧ್ಯದಿಂದ, ಕರ್ಣಪಾತ್ರದ ಮೇಲಿನ ಹಗ್ಗಕ್ಕೆ ನೆತ್ತಿಯ ಮೇಲೆ ಬಿಗಿಯುವ ಹಗ್ಗ.

2. ಚೌಕಿಯಲ್ಲಿ ಆಭರಣಗಳನ್ನು ಹರಡಿ ನೇತು ಹಾಕಲು ಕಟ್ಟುವ ಹಗ್ಗ.

ತಾಂಗುಸರಪಣಿ : ಸ್ತ್ರೀವೇಷದ, ಕೊಪ್ಪು, ಗಿಳಿಯೋಲೆ ಮೊದಲಾದ ಆಭರಣಗಳಿಗೆ ಇರುವ ಒಂದು ಸರಪಣಿ. ತಾಂಗು ಎಂದರೆ ಆಧರಿಸು ಎಂದು ಅರ್ಥವಿದೆ. ಈ ಸರಪಣಿಯನ್ನು ಆಭರಣದಿಂದ ಮೇಲಕ್ಕೆ ಕಿವಿಯ ಮೇಲ್ಗಡೆ ಸಿಕ್ಕಿಸುವರು.

ತಾಂಬೂಲ ಪ್ರತಿ : 'ಕೃಷ್ಣಾರ್ಜುನ ಕಾಳಗ' ಪ್ರಸಂಗದ ಪ್ರಭೇದವೊಂದನ್ನು ಗುರುತಿಸುವ ಪದ. ಶ್ರೀಕೃಷ್ಣನ ಅರ್ಘ್ಯಜಲಕ್ಕೆ ಗಯನೆಂಬ ಗಂಧರ್ವನ ತಾಂಬೂಲದ ಉಗುಳು ಬಿದ್ದುದರಿಂದ ಕೃಷ್ಣನು ಆತನನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡುವನು. ಶ್ರೀಕೃಷ್ಣನ ಅರ್ಘ್ಯಜಲಕ್ಕೆ 'ತಾಂಬೂಲ' ಬಿದ್ದುದೆನ್ನುವ ಪಾಠಾಂತರವಿರುವ ಈ ಕಥೆಯನ್ನು ಅನುಸರಿಸುವ ಪ್ರತಿಯು ತಾಂಬೂಲ ಪ್ರತಿ. ಮೂಲ್ಕಿ ರಾಮಕೃಷ್ಣ ಕವಿಯ 'ಕೃಷ್ಣಾರ್ಜುನ ಕಾಳಗ' ಈ ಬಗೆಯದು.

ಇನ್ನೊಂದು ಪ್ರಭೇದ ನೋಡಿ: ''**ಬೆವರು ಪ್ರತಿ.**''

ತಾನಪೆಟ್ಟು (ತೆ.) = ನೋಡಿ : **ಟಾಂಕಿಪೆಟ್ಟು.**

ತಾವರೆ (ಬ.) = ನೋಡಿ : **ಕಮಲ, ಹೂವು, ಕುಚ್ಚು.**

ತಾವರೆ (ತೆ.) : ಮುಖ್ಯವಾಗಿ (ಯಮನ ವೇಷದ) ಹಣೆಯ ಮೇಲೆ ಬರೆಯುವ ತಾವರೆ ಚಿಹ್ನೆ.

ತಾಯಿತ್ತಿಮುಳ್ಳು (ತೆ.) : ತೋಳಕಟ್ಟುಗಳ ಒಂದು ಭಾಗ. ಮಧ್ಯದಲ್ಲಿ ಒಂದು ಬಿಲ್ಲೆ, ಆಚೆ ಈಚೆ ಹೂವಿನ ಎಸಳಿನ ಆಕಾರ, ಅಥವಾ ಹಲ್ಲೆ ಮತ್ತು ಕಡ್ಡಿಗಳ ಜೋಡಣೆ. ಅಥವಾ ಬರಿ ಕಡ್ಡಿಯಾಕಾರದ ಜೋಡಣೆ.

ತಾಸುಮಾರು/ತಾಸೆ (ಬ./ಉ.) : ಈಗಿನ ಚೆಂಡೆಯ ಬದಲಾಗಿ ಹಿಂದೆ ಬಳಕೆಯಿದ್ದ ವಾದ್ಯ; ಟಂಕಿ ಎಂದೂ ಹೆಸರಿದೆ; ದೇವಾಲಯಗಳ ತಾಸೆ; ಕರಡೆವಾದ್ಯ. ಈಗ ಬ./ಉ. ಗಳಲ್ಲಿ ಬಳಕೆಯಿರುವ ಚೆಂಡೆಯು ತಾಸುಮಾರಿನ ಪರಿವರ್ತಿತ ರೂಪ.

ತಾಸೆ = ನೋಡಿ : **ತಾಸುಮಾರು.**

ತಾಳ : ಹಾಡುವಿಕೆಯ ಕಾಲವನ್ನು, ವಿಶಿಷ್ಟವಾದ ಅವಧಿ, ಅಳತೆ ಮತ್ತು ಅದರ ಒಳ ವಿಭಜನೆಯೊಂದಿಗೆ, ಮಾತ್ರಾಕಾಲದ ನೆಲೆಯಲ್ಲಿ, ಅಳೆಯುವ ಕ್ರಿಯಾಮಾನ. ''ಕಾಲಃ ಕ್ರಿಯಾಮಾನಂ ಲಯಃ ಸಾಮ್ಯಂ''. ವಾದ್ಯಗಳ ಬಡಿತದ ಸ್ವರೂಪಕ್ಕೆ ಇದು ಆಧಾರ. ಆವರ್ತನವೊಂದರ ಒಟ್ಟು ಮಾತ್ರಾಕಾಲ ಮತ್ತು ಅದರ ವಿಭಜನೆಯ ಖಂಡಗಳು– ಇವು ತಾಳವೆಂಬುದರ ಮೂಲ ಪರಿಕಲ್ಪನೆ.


ಯಕ್ಷಗಾನದಲ್ಲಿ, ದಕ್ಷಿಣಾದಿ (ಕರ್ನಾಟಕಿ) ಸಂಗೀತದ ಸಪ್ತತಾಳಗಳೆ, ತುಸು ವ್ಯತ್ಯಾಸದೊಂದಿಗೆ, ಬಳಕೆಯಲ್ಲಿವೆ. ಆದಿತಾಳ, ಚೌತಾಳ, ಏಕತಾಳ, ಅಷ್ಟತಾಳ (ಎರಡು ಬಗೆ), ಝಂಪೆತಾಳ (ಎರಡು ಬಗೆ) ತ್ರಿವುಡೆತಾಳ (ಎರಡು ಬಗೆ) ರೂಪಕತಾಳ, ಮಟ್ಟೆತಾಳ, ಧ್ರುವತಾಳ, ಚೌಝಂಪೆ ಮತ್ತು 'ತಿತ್ತಿತ್ತೈ' ಎಂಬ ನಡೆ (ಕೋರೆತಾಳ) ಸೇರಿ ಒಟ್ಟು ಹದಿನಾಲ್ಕು ತಾಳಗಳೆಂದು ಲೆಕ್ಕ. ಈ ಪೈಕಿ ಚೌತಾಳವು ತೆಂಕುತಿಟ್ಟಿನಲ್ಲೂ, ಚೌಝಂಪೆ, ಧ್ರುವತಾಳಗಳು ಬಡಗುತಿಟ್ಟಿನಲ್ಲೂ ಬಳಕೆಯಲ್ಲಿದ್ದವುಗಳು. ಈಗ ಲುಪ್ತವಾಗುತ್ತಿವೆ. ಚೌತಾಳವು ಆದಿತಾಳದಂತೆ, ಧ್ರುವವು ತ್ರಿವುಡೆಯಂತೆ ಇರುವುದೂ, ಚೌಝಂಪೆಯು ತೀರ ದೀರ್ಘ (22 ಮಾತ್ರೆ) ವಾಗಿರುವುದೂ ಈ ಸ್ಥಿತಿಗೆ ಕಾರಣವಿರಬಹುದು.

ಅಷ್ಟತಾಳದಲ್ಲಿ ನಿಧಾನ, ತ್ವರಿತ ಎಂದು ಎರಡೆರಡು ವಿಧ. ಝಂಪೆಯಲ್ಲಿ ನಿಧಾನ ಝಂಪೆ, ತ್ವರಿತ ಝಂಪೆ ಎಂದು ಎರಡು. ತ್ರಿವುಡೆಯಲ್ಲೂ ಹಾಗೆಯೇ. ತ್ವರಿತಕ್ಕೆ ತುರ್ತ, ದುರಿತ, ತುರಿತ, ದುಡುಕು ಎಂದೂ ಪದ ಪ್ರಯೋಗವಿದೆ.


ಉ. ಕನ್ನಡದಲ್ಲಿ ನಿಧಾನ ಝಂಪೆಗೆ ಆದಿಝಂಪೆಯೆಂದೂ, ನಿಧಾನ ತ್ರಿವುಡೆಗೆ ಆದಿತ್ರಿವುಡೆಯೆಂದೂ ಹಳೆಯ ಹೆಸರುಗಳು.

ತೆಂಕುತಿಟ್ಟಿನಲ್ಲಿ ಮದ್ದಳೆಯನ್ನು, ಹಾಡುಗಾರಿಕೆಯನ್ನು ಅಭ್ಯಾಸ ಮಾಡಿಸುವ ಅನುಕೂಲಕ್ಕಾಗಿ ತಾಳಗಳನ್ನು ಇನ್ನೊಂದು ಬಗೆಯಾಗಿ ವಿಭಜಿಸುವರು– ಇದರ ಪ್ರಕಾರ ಮೇಲೆ ಹೇಳಿದ ಹದಿನಾಲ್ಕರಲ್ಲಿ, ಏಕತಾಳಕ್ಕೆ

ವಾದ್ಯಗಳು – ತೆಂಕು



ವಾದ್ಯಗಳು-ಬಡಗು



ಸಾಮಾನ್ಯ ಏಕತಾಳ, ಮಾರವಿ ಏಕ, ಭೈರವಿ ಏಕ ಎಂಬ ಮೂರು ಗತಿಗಳನ್ನು ಕಲ್ಪಿಸುವರು. ಬಡಗುತಿಟ್ಟಿನಲ್ಲಿ ಏಕತಾಳಕ್ಕೆ ಎರಡು ಬಗೆ (ನಾಲ್ಕು ಮಾತ್ರೆ, ಅಥವಾ ಎರಡು + ಎರಡು ಮಾತ್ರೆ)ಯೆಂದೂ, ಮಟ್ಟೆತಾಳಕ್ಕೆ ಎರಡು ಬಗೆ (ಐದು ಘಾತ, ನಾಲ್ಕು ಘಾತ)ಯೆಂದೂ ಕಲ್ಪಿಸಿ ಕಲಿಸುವ ಕ್ರಮವಿದೆ. **ತಿತ್ತಿತ್ತೈ** ಎಂಬುದಕ್ಕೆ ಕೋರೆತಾಳವೆಂದೂ ಹೆಸರಿದೆ.

ತಾಳವನ್ನು ಜಾಗಟೆ ಅಥವಾ ಗುಬ್ಬಿತಾಳದ ಮೇಲೆ ಬಡಿದು ತೋರಿಸುವುದರಿಂದ ಘಾತ ಮತ್ತು ಹುಸಿಗಳೆಂಬ ಎರಡು ಅಂಗಗಳು ಮಾತ್ರ ಇವೆ.

ಚೆಂಡೆ, ಮದ್ದಲೆಗಳ ಮೂಲ ಪೆಟ್ಟುಗಳು (ಅಭ್ಯಾಸ ಪಾಠಾಕ್ಷರಗಳು, **ದಸ್ತೆಗಳು**) ಸಾಮಾನ್ಯವಾಗಿ ತಾಳದ ಎರಡು ಆವರ್ತಕ್ಕೆ ಹೊಂದುವಂತೆ ಇರುತ್ತವೆ. ನೋಡಿ : **ಬತ್ತೀಸತಾಳ**, **ಎತ್ತುಗಡೆ** ಮತ್ತು ಆಯಾತಾಳಗಳು.

ತಾಳಗತಿ : 1. ತಾಳದ ನಡೆ, ವೇಗ ಮತ್ತು ಗತಿ ಪ್ರಭೇದ. 2. ಲಯ.

ತಾಳದಸ್ತೆ (ಬ.) : ತಾಳಕ್ಕೆ ಸಂಬಂಧಿಸಿದ ಪೆಟ್ಟುಗಳ ಬಾಯಿತಾಳ. ತತ್ತಕ್ಕಾರಗಳು, ಬೋಲ್‌ಗಳು. ವಿಶೇಷತಃ ಅಭ್ಯಾಸದ ಮೂಲಪೆಟ್ಟುಗಳು.

ತಾಳಮದ್ದಳೆ(ಲೆ) : 1. ಪ್ರದರ್ಶನದ ಒಂದು ಪ್ರಭೇದ. **ಪ್ರಸಂಗ**, **ಓದಿಕೆ**, **ಮಜಾಯಿಸಿಕೆ**, **ಯಕ್ಷಗಾನ**, **ಜಾಗರ**– ಎಂಬವು ಇದರ ನಾಮಾಂತರಗಳು.

ವೇಷ, ನೃತ್ಯಗಳಿಲ್ಲದೆ, ಹಿಮ್ಮೇಳ ಮತ್ತು ಮಾತು (ಅರ್ಥಗಾರಿಕೆ) ಮಾತ್ರ ಇರುವ ಈ ಪ್ರಭೇದವು ಸಾಕಷ್ಟು ಪ್ರಾಚೀನವಾಗಿದ್ದು, ವೇಷ, ನೃತ್ಯ ಸಹಿತವಾದ ಆಟಕ್ಕಿಂತಲೂ ಪ್ರಾಚೀನವೆಂದು ಒಂದು ಅಭಿಪ್ರಾಯ. ಸಹಜ, ಸಾದಾ ಉಡುಪಿನಲ್ಲಿ ಪಾತ್ರಧಾರಿಗಳು ಕುಳಿತಿರುತ್ತಾರೆ, ಹಿಮ್ಮೇಳದ ಭಾಗವತಿಕೆ, ಚೆಂಡೆ, ಮದ್ದಲೆಗಳು ಇದ್ದು, ಪದ್ಯ ಮತ್ತು ಅರ್ಥಗಾರಿಕೆಗಳ ಮೂಲಕ ಪ್ರದರ್ಶನ ಸಾಗುತ್ತದೆ. ಪ್ರಾಯಃ ಮೊದಲು, ದೇವಾಲಯದ ಸೇವಾ ರೂಪವಾಗಿ ಪ್ರಸಂಗಗಳ ಹಾಡುವಿಕೆ ಮತ್ತು ಹಿಮ್ಮೇಳದವರೇ ಕಥೆಯ ಅರ್ಥ ವಿವರಣೆ ನೀಡುವ ಕ್ರಮ ಇದ್ದಿರಬೇಕು. 'ಅರ್ಥ ಹೇಳುವುದು' ಎಂಬ ಪದವೇ ಇದನ್ನು ಸೂಚಿಸುತ್ತಿದೆ. ಪಾತ್ರ ವಿಂಗಡನೆ ಮಾಡಿ, ಅರ್ಥಧಾರಿಗಳು ಪಾತ್ರಧಾರಿಗಳಾಗಿ ನಿರ್ವಹಿಸುವ ಕ್ರಮ ಅನಂತರದಿಂದ ಬೆಳವಣಿಗೆ ಆಗಿರಬಹುದು.

ತಾಳಮದ್ದಲೆಯಲ್ಲಿ ತೆಂಕು, ಬಡಗು ಎಂಬ ತಿಟ್ಟುಗಳಿಲ್ಲವಾದರೂ, ಆಯಾಪ್ರದೇಶದ ಆಟಗಳ ಛಾಯೆ ತಾಳಮದ್ದಲೆಗಳ ಮೇಲೂ ಇದೆ. ಉತ್ತರ ಕನ್ನಡದಲ್ಲಿ ತಾಳಮದ್ದಲೆಯಲ್ಲಿ ಪಾತ್ರಧಾರಿಗಳು ವಿವರವಾದ ಪದಾಭಿನಯ, ಪದ್ಯಾಭಿನಯಗಳನ್ನೂ ಮಾಡುವ ಕ್ರಮ ಇತ್ತೀಚಿನವರೆಗೂ ಇತ್ತು, ಈಗಲೂ ಅಲ್ಪ ಪ್ರಮಾಣದಲ್ಲಿ ಇದೆ. ದಕ್ಷಿಣ ಕನ್ನಡದಲ್ಲಿ, ತಾಳಮದ್ದಲೆಯಲ್ಲಿ ಆಟದಂತೆ ಪೊರಪ್ಪಾಡಿನ ಆರ್ಭಟೆ, ಬಣ್ಣದ ವೇಷಗಳ ಬಾರಣೆ ಮುಂತಾದವುಗಳೂ ಇದ್ದುವು. 1930ರ ಅನಂತರ ತಾಳಮದ್ದಲೆ ಹೊಸ ರೂಪವನ್ನು ಪಡೆಯಲಾರಂಭಿಸಿ, ಈಗ ಅದು ಕಲಾತ್ಮಕವಾಗಿ, ಸಾಹಿತ್ಯಕವಾಗಿ ಅತ್ಯಂತ ಪ್ರೌಢವೂ, ಸೂಕ್ಷ್ಮವೂ ಆಗಿದ್ದು, ಆಶುಭಾಷಣ ಮತ್ತು ಪುರಾಣ ವಸ್ತುವಿನ ಪುನಃ ಸೃಷ್ಟಿಯ ಉತ್ಕೃಷ್ಟ ಮಾದರಿಯಾಗಿ ಬೆಳೆದಿದೆ. ಪ್ರಸಂಗ ಕಾವ್ಯವು ಒಂದು ತುಂಬ ಸಡಿಲಾದ, ಸ್ಥೂಲವಾದ ಆಧಾರವಾಗಿ ಮಾತ್ರ ಇದ್ದು, ಮಾತುಗಾರಿಕೆ ಹಲವು ಮುಖಗಳಲ್ಲಿ ಬೆಳೆಯುತ್ತಿದೆ. ತರ್ಕ, ರಸಾವಿಷ್ಕಾರ, ಮಾತಿನ ವರಸೆ, ಪಾತ್ರಚಿತ್ರಣದ ಬೆಳವಣಿಗೆ, ಸೃಷ್ಟಿಶೀಲ ವಸ್ತುದರ್ಶನ, ಭಾಷಾಸೌಂದರ್ಯ, ಕಾವ್ಯಾತ್ಮಕತೆ, ರಂಜಕತೆಗಳಲ್ಲಿ ತಾಳಮದ್ದಲೆಯು ಉತ್ಕೃಷ್ಟ ಮಟ್ಟದ ಮೌಖಿಕ ಕಲೆಯಾಗಿದೆ.

ಪ್ರಸಂಗ ಕಾವ್ಯವನ್ನು ಹಾಡಿ ಅದಕ್ಕೆ ಅರ್ಥ ಹೇಳುವ ಈ ಕಲಾರೂಪವು ತೆಲುಗಿನಲ್ಲೂ ಇದ್ದಿತೆಂದು ತಿಳಿಯುತ್ತದೆ. (ದಿ। ಕುಕ್ಕಿಲ ಕೃಷ್ಣ ಭಟ್ಟ: ರಂಗವೈಖರಿ.)

ತಾಳಮದ್ದಲೆ ಹಾಕುವುದು : ಬಯಲಾಟದಂದು ಬೆಳಗ್ಗೆ ನಡೆಯುವ ಕಟ್ಟುಕಟ್ಟಲೆ. ತಿರುಗಾಟದ ಮೇಳವು ಊರ ಗಣ್ಯರೊಬ್ಬರ ಮನೆಗೆ ಬಂದು ಪೆಟ್ಟಿಗೆ ಇಳಿಸಿದೊಡನೆ, 'ತಾಳಮದ್ದಲೆ ಹಾಕುವುದು' ಜರಗುತ್ತದೆ. ಮೇಳದ ಭಾಗವತನು ಮದ್ದಲೆಯ ಹಿಮ್ಮೇಳದೊಂದಿಗೆ, ವಿಶಿಷ್ಟ ತಾಳ ದಸ್ತೆಗಳನ್ನು ಹೇಳಿ, ಕೆಲವು ಸ್ತುತಿ ಪರವಾದ **ತುಂಡು** ಪದಗಳನ್ನು ಹೇಳಬೇಕು. ಇದು ಆ ಮನೆಯವರಿಗೆ 'ನಿಮ್ಮ ಹರಕೆ ಆಟ ಇದೆ. ಅದನ್ನಾಡಲು ಬಂದಿದ್ದೇವೆ' ಎಂಬ ಸೂಚನೆ ಅಥವಾ ''ಈ ದಿನ ಮೇಳಕ್ಕೆ ಬಿಡುವು ಇದೆ. ನೀವು ಆಟ ಆಡಿಸಬೇಕು'' ಎಂಬ ಮನವಿ. ಆಗ ಮನೆಯ ಮುಖ್ಯಸ್ಥನು ಆಟ ಆಡಿಸಲು ಒಪ್ಪಿಕೊಳ್ಳುತ್ತಾನೆ. ಅಥವಾ ಊಟದ ಸಾಮಗ್ರಿ, ನೀಡಿ, ''ಈ ಬಾರಿ ಪಡಿ ಮಾತ್ರ ಕೊಡುತ್ತೇವೆ. ಬರುವ ವರ್ಷ ನೋಡೋಣ'' ಎನ್ನುತ್ತಾನೆ. ಅಂದು ಪಡಿ ಸ್ವೀಕರಿಸಿ ಮೇಳವು ಅಡುಗೆ ಮಾಡಿ ಉಂಡು ವಿಶ್ರಾಂತಿ ಪಡೆಯುತ್ತದೆ.

ಆಟವಿರುವುದಿಲ್ಲ. ಇದನ್ನು ತಿಳಿದ ಊರವರು ಸೇರಿ, ವೀಳ್ಯದ ಹಣ ಕೂಡಿಸಿ, ಆಟ ಆಡಿಸ ಬಹುದು.

ಈಗ ಈ ಕ್ರಮ ಬಳಕೆಯಿಲ್ಲ.

ತಾಳ ಲಯ : 1. ತಾಳದ ಲಯ. 2. ಲಯ ಶುದ್ಧಿ. 3. ತಾಳ ಮತ್ತು ಲಯ.

ತಾಳ ಹಾಕುವುದು : 1. ತಾಳವನ್ನು ಕೈಯಲ್ಲಿ, ಜಾಗಟೆ ಅಥವಾಗುಬ್ಬಿತಾಳದಲ್ಲಿ ಬಡಿದು ತೋರಿಸುವುದು. 2. ನೃತ್ಯಾಭ್ಯಾಸದಲ್ಲಿ, ಕಾಲುಗಳಿಂದ ತಾಳವನ್ನು ಮಾತ್ರ ಬಡಿದು ಅಭ್ಯಸಿಸುವುದು.

ತಾಳೆ : ತಾಳೆ ಜಾತಿಯ ಮರಗಳು. **(Palm trees.)** ಚೆಂಡೆಯ ಗುಟ್ಟಿಗೆಗೆ ಬಳಕೆ.

ತಾಳೆಗರಿ (-ಪ್ರತಿ) : ತಾಡವಾಲೆ ಅರ್ಥಾತ್ ಓಲೆಗರಿಯಲ್ಲಿ ಬರೆದ ಪ್ರಸಂಗ ಪ್ರತಿ.

ತಾಳೆಪ್ರತಿ = ನೋಡಿ : ತಾಳೆಗರಿ.

ತಿಟ್ಟ (ಬ.) : ತಿಟ್ಟು ಎಂಬುದರ ಸೀಮಿತ ಅರ್ಥದ ಪದ. ಸಾಂಪ್ರದಾಯಿಕ ಕ್ರಮ, ಅದರಲ್ಲಿನ ಪ್ರಾವೀಣ್ಯ ಎಂದು ಅರ್ಥ. ಉದಾ: ''ಈ ವೇಷಧಾರಿಯ ತಿಟ್ಟ ಚೆನ್ನಾಗಿದೆ''.

ತಿಟ್ಟು : ಪ್ರಾದೇಶಿಕ ಪ್ರಭೇದ; ಶೈಲಿ ಪ್ರಭೇದ. ಕರಾವಳಿಯಲ್ಲಿ ತೆಂಕು, ಬಡಗು, ಉತ್ತರ ಕನ್ನಡವೆಂದು ಮೂರು ತಿಟ್ಟುಗಳು. ಉತ್ತರಕನ್ನಡ ತಿಟ್ಟು ಎಂಬುದು ಬಡಗುತಿಟ್ಟಿನಿಂದ ಮೂಡಿದ ಉಪಭೇದವಾದರೂ, ಅಭಿವ್ಯಕ್ತಿ ವಿಧಾನದ ದೃಷ್ಟಿಯಿಂದ ಪ್ರತ್ಯೇಕವೆಂದೇ ಗಣನೆಗೆ ಅರ್ಹ. ಬಯಲು ಸೀಮೆಯ ಪ್ರಭೇದಗಳಾದ ಮೂಡಲ ಪಾಯ (ಮೂಡ್ಲುಪಾಯ), ಗಟ್ಟದ ಕೋರೆಗಳನ್ನು ಸೇರಿಸಿದರೆ ತಿಟ್ಟುಗಳು ಒಟ್ಟು ಐದಾಗುತ್ತವೆ.

ಈ ತಿಟ್ಟುಗಳಲ್ಲಿ ನೃತ್ಯ, ವೇಷ, ವಾದ್ಯ, ಸಂಗೀತ, ರಂಗ ಸಂಪ್ರದಾಯಗಳಲ್ಲಿ ಪ್ರತ್ಯೇಕತೆಗಳಿದ್ದರೂ, ತುಂಬಾ ಸಮಾನ ಅಂಶಗಳೂ ಇವೆ. ವಿಶೇಷತಃ ಕರಾವಳಿಯ ತಿಟ್ಟುಗಳು ಒಂದೇ ಮೂಲದಿಂದ ವಿಕಸಿತ ವಾದುವೆಂಬುದು ಇಂದಿಗೂ ಸ್ಪಷ್ಟವಾಗು ತ್ತದೆ. ಗಟ್ಟದ ಕೋರೆಯೆಂಬುದು ಬಡಗು ಯಕ್ಷಗಾನದ ಒಂದು ಶಾಖೆ. ಮೂಡಲ ಪಾಯಕ್ಕೂ, ಕರಾವಳಿಯ ಪ್ರಭೇದಗಳಿಗೂ ಏಕಮೂಲ ಸಂಬಂಧ ಇರಬೇಕು.

ತಿಟ್ಟುಗಳನ್ನು ಸ್ಥಳದ ಹೆಸರಿನಿಂದ ಗುರುತಿಸುವುದಾದರೆ, ಕುಂಬಳೆತಿಟ್ಟು (ತೆಂಕು) ಬ್ರಹ್ಮಾವರತಿಟ್ಟು (ಬಡಗು) ಹೊನ್ನಾವರ ತಿಟ್ಟು (ಉತ್ತರ ಕನ್ನಡ) ಮೈಸೂರುತಿಟ್ಟು (ಮೂಡ್ಲುಪಾಯ), ಕೋಳಗಾಲ ತಿಟ್ಟು (ಗಟ್ಟದ ಕೋರೆ) ಎನ್ನಬಹುದು. ಉತ್ತರ ಕರ್ನಾಟಕದ ದೊಡ್ಡಾಟ, ಸಣ್ಣಾಟ, ದಾಸರಾಟ, ಅರಬರ ಆಟ, ಮೊದಲಾದುವುಗಳು ಮೂಡಲಪಾಯದ ಪ್ರಭೇದ ಗಳು. ಪ್ರಭೇದಕ್ಕೆ ತಿಟ್ಟು ಎಂಬ ಪದ ಬಳಕೆ ಯಿರುವುದು ಕರಾವಳಿಯಲ್ಲಿ. ತಿಟ್ಟು ಎಂಬುದಕ್ಕೆ ಕ್ರಮ, ವ್ಯವಸ್ಥೆ, ರೀತಿ ಎಂದು ಶಬ್ದಾರ್ಥವಿದೆ. ಸಂಪ್ರದಾಯವೆಂದು ಇನ್ನೊಂದು ಅರ್ಥ (ಮಲೆಯಾಳ ಚಿಟ್ಟ).

ಕರಾವಳಿಯಲ್ಲಿಯ ಮೇಳಗಳ ತಿರುಗಾಟದ ಕ್ರಮ, ಪರಿಭಾಷೆ, ಸಿಬ್ಬಂದಿ ವಿಭಾಗ ಮುಂತಾದುವು ತೆಂಕು ಬಡಗುಗಳಲ್ಲಿ ಒಂದೇ ತೆರನಾಗಿವೆ. ಹೀಗಾಗಿ, ಮೇಳಗಳ ಹುಟ್ಟು ಮೊದಲು, ತಿಟ್ಟುಗಳ ಹುಟ್ಟು ಆಮೇಲೆ ಎಂದಾಗುತ್ತದೆ.

ತೆಂಕು–ಬಡಗು (ಉ.ಕ. ಸಹಿತ) ತಿಟ್ಟುಗಳ ಪೈಕಿ ಯಾವುದು ಪ್ರಾಚೀನ? ಅಥವಾ ಇಂದಿನ ಯಾವ ತಿಟ್ಟು, ಹಿಂದಿನ ಸಾಮಾನ್ಯ (Common) ಆಟಗಳಿಗೆ ಹತ್ತಿರ? ಎಂಬ ಪ್ರಶ್ನೆ ಪರಿಶೀಲನಾರ್ಹ. ಎಲ್ಲ ಕಡೆ ದೊರಕಿರುವ ಹಳೆಯ ವೇಷ ಸಾಮಗ್ರಿಗಳ ಆಧಾರದ ಮೇಲೆ, ಮತ್ತು ಯಕ್ಷಗಾನವು ಕನ್ನಡದಲ್ಲೇ ಪ್ರಚಾರದಲ್ಲಿರುವ (ಇದ್ದ) (ತುಳುವಿನಲ್ಲಿ ಅಥವಾ ಮಲೆಯಾಳದಲ್ಲಿ ಇಲ್ಲದಿರುವ) ಆಧಾರದಲ್ಲಿ ಇಂದಿನ ಬಡಗುತಿಟ್ಟು ಹಳತೆನ್ನಬಹುದು. ಪಾರ್ತಿಸುಬ್ಬನ (ಸು. ಕ್ರಿ.ಶ. 1600) ರಾಮಾಯಣ ಪ್ರಸಂಗಗಳು ಪ್ರಾಚೀನತಮ ಪ್ರಸಂಗಗಳು, ಸಭಾಲಕ್ಷಣದ ಮೂಲವು ಕಾಸರಗೋಡು ಪ್ರದೇಶ–ಎಂಬ ಆಧಾರದ ಮೇಲೆ ತೆಂಕುತಿಟ್ಟು ಹಳತು. ಸದ್ಯ ಇರುವ ಆಧಾರ ಮತ್ತು ಹೋಲಿಕೆಗಳ ಮೇಲಿಂದ, ಪ್ರಾಯಃ ಹಳೆಯ ಬಯಲಾಟಗಳು, (ಸುಮಾರು 1930ರ ಅವಧಿಯಲ್ಲಿ ಕಾಣುತ್ತಿದ್ದ–)ಬಡಗುತಿಟ್ಟಿನ ಪೂರ್ವರೂಪಗಳಾಗಿದ್ದು, ತೆಂಕುತಿಟ್ಟು ಎಂಬುದು ಪ್ರಾಯ 1600-1700ರ ಅವಧಿಯಲ್ಲಿ ವಿಕಾಸ ಗೊಂಡಿದ್ದಿರಬಹುದು –ಎಂದು ಹೇಳಲು ಆಸ್ಪದವಿದೆ. ಕಾರಣ, ತೆಂಕುತಿಟ್ಟಿನ ಮೂಲ ಪುರುಷನೆನ್ನಲಾಗುವ, ಮತ್ತು ಸಭಾಲಕ್ಷಣದ ಕವಿ (ಸಂಕಲನಕಾರ) ಎನ್ನಲಾಗುವ ಪಾರ್ತಿಸುಬ್ಬನು (ಸು. ಕ್ರಿ.ಶ.) 1600, ಆಗಲೇ ಇದ್ದಿರಬೇಕಾದ ಒಂದು ರಂಗಭೂಮಿಗಾಗಿ ತಾನೆ ಅವುಗಳನ್ನು ಬರೆದದ್ದು? ಹಾಗಾಗಿ ಈಗ ಇರುವ ಸಭಾಲಕ್ಷಣ ಪೂರ್ವಕವಾದ ಆಟಗಳ ಕ್ರಮ ತೆಂಕುತಿಟ್ಟು

ಎಂಬುದು ರಚನೆಗೊಂಡಾಗ, ರೂಢಿಗೊಂಡಿರಬಹುದು. ತೆಂಕುತಿಟ್ಟಿನ ಮೇಲೆ ಕೇರಳೀಯ ಪ್ರಭಾವವು ಸ್ಪಷ್ಟವಾಗಿ ಕಾಣುತ್ತದೆ.

ನೋಡಿ: **ತೆಂಕುತಿಟ್ಟು, ಬಡಗುತಿಟ್ಟು, ಗಟ್ಟದ ಕೋರೆ, ಆಂಧ್ರ ಯಕ್ಷಗಾನ, ದಶಾವತಾರ.**

ತಿತ್ತಿತ್ತೈ: ಒಂದು ನಡೆ ಮತ್ತು ತಾಳ. **ಕೋರೆತಾಳ.** ಇದು ತಾಳವಾಗಿಯೂ, ಬೇರೆ ತಾಳಗಳ ನಡೆಯಾಗಿಯೂ ಬಳಕೆಯಲ್ಲಿದೆ. ಇದು ತಕಿಟ। ತಕದಿಮಿ ಎಂಬ ತ್ವರಿತ ಅಷ್ಟತಾಳದ ವಿಲೋಮದಂತಿದ್ದು ತಕದಿಮಿ।ತಕಿಟ ಎಂದು ಇದೆ. 4 + 3 = 7 ಏಳು ಅಕ್ಷರಕಾಲ.

ಬಡಗುತಿಟ್ಟಿನಲ್ಲಿ ಇದು ಹಿಂದೆ ಆದಿತಾಳದ ಮೇಲ್ಕಾಲವೆಂದು ರೂಢಿಯಿತ್ತು. ಈಗ ಕೋರೆ ತಾಳವೆಂದೇ ಹೆಸರಿದೆ. ಆದಿತಾಳ, ಏಕತಾಳ, ಅಷ್ಟತಾಳ, ತ್ರಿವುಡೆ ತಾಳಗಳಿಗೆ ಇದನ್ನು ನಡೆಯಾಗಿ ಬಳಸುತ್ತಾರೆ. ಉತ್ತರ ಕನ್ನಡದಲ್ಲಿ ಇದಕ್ಕೆ **ಕೋರೆತಾಳವೆಂದೇ** ಹೆಸರು.

ತೆಂಕುತಿಟ್ಟಿನಲ್ಲಿ ಇದು ತಿತ್ತಿ।ತ್ತೈ 4 + 3 = 7 ಅಕ್ಷರಕಾಲ, ತ್ತೈ/ತಿತ್ತಿ 3 + 4 = 7 ಅಕ್ಷರಕಾಲ – ಹೀಗೆ ಎರಡು ರೂಪಗಳಲ್ಲೂ ಬಳಕೆಯಲ್ಲಿದೆ. ಪ್ರಾಚೀನವಾದ **ಬತ್ತೀಸ ತಾಳ** ಪದ್ಧತಿಯಂತೆ ಇದು ನರ್ತನ ತಾಲ ಅಥವಾ ಅಂತರ ಕ್ರೀಡ ಎನಿಸುತ್ತದೆ. **ಹುಡಿನಾಟ್ಯಗಳಿಗೆ** ಅನುಕೂಲವಾದ ತಾಳ.

ತಿರುಗಣೆ ಲಾಗ (ತೆ.): ಕುಣಿತದ ಒಂದು ಭಾಗ. ತಿರುಗುತ್ತ ಲಾಗ ಹಾಕುವುದು. ಕುತ್ತು ಹಾರಾಟ. ನಿಂತಲ್ಲೇ ತಿರುಗುತ್ತ ಕುಣಿಯುವುದು.

ತಿರುಗಾಟ: 1. ಮೇಳದ ಸಂಚಾರ. ಸಂಚಾರದ ಅವಧಿ. ಸಾಮಾನ್ಯವಾಗಿ ನವಂಬರ ತಿಂಗಳಿನಿಂದ, ಮೇ ತಿಂಗಳ ವರೆಗಿನ ಅವಧಿ. ತೆಂಕುತಿಟ್ಟಿನಲ್ಲಿ ಮೇಳದ ಆರಂಭದ ದಿನವು ಸಂಬಂಧಪಟ್ಟ ದೇವಸ್ಥಾನದ ಜಾತ್ರೆ ಅಥವಾ ವಿಶಿಷ್ಟ ದಿನವಾಗಿರುತ್ತದೆ. (ಉದಾ: ಧರ್ಮಸ್ಥಳ ಮೇಳಕ್ಕೆ ಧರ್ಮಸ್ಥಳ ಲಕ್ಷದೀಪೋತ್ಸವ.) ಹಾಗಾಗಿ ಆರಂಭ ದಿನ ಬೇರೆ ಬೇರೆ ಇದ್ದು, ಕೊನೆಯ ದಿನ (ಗೆಜ್ಜೆ ಬಿಚ್ಚುವ ದಿನ, ಮೇಳ ಒಳಗಾಗುವ ದಿನ) ಎಲ್ಲ ಮೇಳಗಳಿಗೂ ಸಾಮಾನ್ಯವಾಗಿ, **'ಪತ್ತನಾಜೆ ದಿನ'** ಅರ್ಥಾತ್ ವೃಷಭಮಾಸದ ಹತ್ತನೆಯ ದಿನವಾಗಿರುತ್ತದೆ.

ಬಡಗುತಿಟ್ಟಿನಲ್ಲಿ ತಿರುಗಾಟದ ಅವಧಿಯು ಧನುಸಂಕ್ರಮಣದಿಂದ ವೃಷಭ ಸಂಕ್ರಮಣಕ್ಕೆ ಅಂತ್ಯವಾಗುತ್ತಿತ್ತು – ಎಂದರೆ ದಶಂಬರ ಮಧ್ಯಭಾಗದಿಂದ, ಮೇ ಮಧ್ಯಭಾಗಕ್ಕೆ. ಉತ್ತರ ಕನ್ನಡದಲ್ಲಿ ಕೆಲವು ಮೇಳಗಳಿಗೆ ಆರಂಭ, ಕೊನೆ ಎರಡೂ ಐಚ್ಛಿಕ, ಕೆಲವೆಡೆ ಜಾತ್ರೆ, ದಿನದಂದು ಆರಂಭ – ಹೀಗಿತ್ತು.

ಈಗ ಹರಕೆ ಬಯಲಾಟದ ಮೇಳಗಳು ಹಿಂದಿನ ಕ್ರಮದ ಅವಧಿಯನ್ನು ಅನುಸರಿಸುತ್ತಿವೆ. ಡೇರೆ ಮೇಳಗಳು ತಮಗೆ ಅನುಕೂಲದ ದಿನಗಳನ್ನು ನಿರ್ಣಯಿಸಿಕೊಳ್ಳುತ್ತವೆ.

2. ಸೇವಾವಧಿ. ಉದಾ: ''ನನಗೆ ಮೂವತ್ತು ತಿರುಗಾಟ ಆಯಿತು.''

3. ತಿರುಗಾಟದ ಸಹವಾಸ. ಮೇಳದಲ್ಲಿ ಸಹವ್ಯವಸಾಯ. ಉದಾ: ''ನನಗೂ ಅವರಿಗೂ ತಿರುಗಾಟ ಉಂಟು.'' ಇಲ್ಲಿ 'ಉಂಟು' ಎಂದರೆ, 'ಇತ್ತು' ಎಂದೂ ಆಗಬಹುದು.

ತಿರುಪಿನ ಹೂವು: ಸ್ತ್ರೀವೇಷದ **ತಲೆಸಾಮಾನುಗಳಲ್ಲಿ** ಒಂದು. ಜಡೆ ಬಂಗಾರದ ಒಂದು ಭಾಗ. ಚಕ್ರ, ಹೂವು, ಬಿಲ್ಲೆ ಮೊದಲಾದ ಹಲವು ಆಕಾರಗಳಲ್ಲಿರುತ್ತದೆ. ಇದರ ಹಿಂಬದಿಗೆ ಸ್ಪ್ರಿಂಗ್‌ನಂತಹ ತಿರುಪು ಇರುವುದರಿಂದ, ಈ ಹೆಸರು ಬಂದಿರಬೇಕು. ಚಕ್ರಾಕಾರದ ಎರಕ, ಗುಲಾಬಿ ಹೂವಿನಂತಹ ಆಕೃತಿ, ಒಳಗಿನಿಂದ ಹೊರಗೆ ಪಕಳೆ ಸಾಲುಗಳ ಜೋಡಣೆ ಇರುವ ಪಾತ್ರೆಯ ಆಕಾರ – ಹೀಗೆ ಹಲವು ರೀತಿಗಳಲ್ಲಿ ಇದೆ. ಮೂರು ತಿರುಪಿನ ಹೂಗಳನ್ನು ಅಡ್ಡಸಾಲಾಗಿ ಮುಡಿಗೆ ಸಿಕ್ಕಿಸುವ ಕ್ರಮವೂ ಇರುತ್ತದೆ.

ತಿರ್ಗಾಸ್ ನಡೆ: 1. ಓರೆನಡೆ. ರಂಗಸ್ಥಳದಲ್ಲಿ ನೇರವಾಗಿ ಹಿಂದೆ ಮುಂದೆ ನರ್ತಿಸದೆ, ಬದಿಗೆ ಸರಿದಂತೆ ಕುಣಿಯುವುದು ಅಥವಾ ಕುಣಿಯುತ್ತ, ಮಧ್ಯದಲ್ಲಿ ದಿಕ್ಕು ಬದಲಿಸಿ ತಿರುಗುವುದು.

2. ಹಾಸ್ಯಗಾರನ ಓರೆ ಹೆಜ್ಜೆಗಳು.

ತಿಲಕ: ಹಣೆಗಿಡುವ ಬೊಟ್ಟು. ಅಥವಾ ಚಿಕ್ಕ ಉದ್ಧನಾಮ. ಇದಕ್ಕೆ ಹೊಳಪಿನ ಹುಡಿ ಅಥವಾ ಬಣ್ಣ ಹಚ್ಚುವುದುಂಟು. ಅಥವಾ ಬೇಗಡೆಯ ತಿಲಕವನ್ನು ಅಂಟಿಸುತ್ತಾರೆ.

ತಿಸರ = ನೋಡಿ: **ತ್ರಿಸರ.**

ತುಂಡುಗುಪ್ಪೆ (ಬ./ಉ.): ಸಭೆಗೆ ಮುಖಮಾಡಿ ಮೇಲೆ ಹಾರುವುದು. **ಉಡಿ.**

ತುಂಡುಪದ: ಪ್ರಸಂಗಪಾಠದಲ್ಲಿಲ್ಲದಿರುವ, ಸ್ತುತಿಪದ್ಯಗಳು. ಇವು, ದಾಸರ ಹಾಡುಗಳು ಮೊದಲಾಗಿ ಅನ್ಯಮೂಲಗಳಿಂದ ಸಂಗ್ರಹಿಸಿದವು ಅಥವಾ ಭಾಗವತನ ಸ್ವಂತ ರಚನೆಗಳಾಗಿರಬಹುದು. ಹರಕೆ ಬಯಲಾಟದಂದು ಬೆಳಗ್ಗೆ

ಜರಗುವ 'ತಾಳಮದ್ದಲೆ ಹಾಕುವ' ವಿಧಿಗೆ, ಮತ್ತು ಆಟದ ಮಧ್ಯೆ ಸ್ತುತಿ ಸಂದರ್ಭಗಳಲ್ಲಿ ಬಳಕೆ.

ತುಂಡುಪ್ರಸಂಗ: 1. ಇಡಿಯ ಪ್ರಸಂಗದ ಒಂದು ತುಂಡು. ಉದಾ: ಸುಭದ್ರಾ ಕಲ್ಯಾಣದಲ್ಲಿ 'ಶರಸೇತು ಬಂಧನ' ಭಾಗ, ಕರ್ಣಪರ್ವದ ಉತ್ತರಾರ್ಧ– ಇತ್ಯಾದಿ.
2. ಚಿಕ್ಕಪ್ರಸಂಗ. ಇಡಿಯರಾತ್ರಿಗೆ ಸಾಲದಷ್ಟು ಇರುವ ಪ್ರಸಂಗ. ಉದಾ: ಭೀಷ್ಮಪರ್ವ.

ತುಟಿ: ತುಟಿಯ ಬಣ್ಣಗಾರಿಕೆ. ತುಟಿ ಬರೆಯುವುದು.

ತುರಾಯಿ: 1. ಪಗಡಿ, ಮುಂಡಾಸುಗಳ ತುದಿಯಲ್ಲಿ ಸಿಕ್ಕಿಸುವ ದೀಪಶಿಖಾಕೃತಿಯ ರಚನೆ.
2. ಮಣಿಗಳಿಂದ ರಚಿಸಿದ, ಶಿಖರಕ್ಕೆ ನವಿಲುಗರಿ ಇರುವ ತುರಾಯಿ ಕಿರೀಟ.

ತುರಿತ: ತಾಳದ ತ್ವರಿತಗತಿ 'ಗಿಡ್ಡ' ತಾಳ. ಉದಾ: ತುರಿತ ಝಂಪೆ.

ತುರುಬು: ಸ್ತ್ರೀವೇಷದ ಮುಡಿ. ಕೃತಕ ಅಥವಾ ನಿಜ ಕೂದಲಿನ ಮುಡಿ.

ತುರ್ತ = ನೋಡಿ: ತುರಿತ, ತ್ವರಿತ, ದುಡುಕು.

ತುಷ್ಟಿ ಕಳೆಯುವುದು (-ತೆಗೆಯುವುದು): ಕಳ್ಪು, ಸಂಬಳಕಡಿತ. ಕಲಾವಿದ, ಸಿಬ್ಬಂದಿಗಳು ಹೆಚ್ಚುವರಿ ರಜೆ ಮಾಡಿದರೆ, ಅಥವಾ ನಿಶ್ಚಿತ ಅಪರಾಧ ವೆಸಗಿದರೆ ವೇತನದಲ್ಲಿ ಮಾಡುವ ಕಡಿತ. ನೋಡಿ: **ಕಳ್ಪು, ತಪ್ಪು.**

ತುಷ್ಟಿತೆಗೆಯುವುದು = ನೋಡಿ: **ತುಷ್ಟಿ ಕಳೆಯುವುದು.**

ತೆಂಕತಿಟ್ಟು = ನೋಡಿ: **ತೆಂಕುತಿಟ್ಟು.**

ತೆಂಕಮಟ್ಟು = ನೋಡಿ: **ತೆಂಕುತಿಟ್ಟು.**

ತೆಂಕಮಡಿವಾಳ (ತೆ.): ಪೂರ್ವರಂಗ ಸಭಾಲಕ್ಷಣ ಪ್ರಯೋಗದ ಕಟ್ಟು ಹಾಸ್ಯಗಳಲ್ಲೊಂದು. ತೆಂಕಮಡಿವಾಳನದು ಮೂಕ ಹಾಸ್ಯ. ಮಡಿವಾಳನು ಮೂಕ. ಅವನ ಹೆಂಡತಿ ಮಕ್ಕಳು ಮಾತಾಡುತ್ತಾರೆ.

ತೆಂಕುತಿಟ್ಟು (- ಮಟ್ಟು) / ತೆಂಕತಿಟ್ಟು (- ಮಟ್ಟು): ಕರಾವಳಿ ಯಕ್ಷಗಾನದ ದಾಕ್ಷಿಣಾತ್ಯ ಪ್ರಭೇದ. ದಕ್ಷಿಣದಲ್ಲಿ ಬೇಕಲದಿಂದ ಉತ್ತರದಲ್ಲಿ ಪಡುಬಿದ್ರಿ, ಕಾರ್ಕಳ, ನಾರಾವಿ ರಸ್ತೆಯವರೆಗೆ, ದಕ್ಷಿಣ ಪೂರ್ವದಲ್ಲಿ ಕೊಡಗಿನವರೆಗೆ, ಕಾಸರಗೋಡು, ದಕ್ಷಿಣ ಕನ್ನಡ, ಕೊಡಗಿನ ಸ್ವಲ್ಪ ಭಾಗವನ್ನೊಳಗೊಂಡ ಪ್ರದೇಶ ಈ ತಿಟ್ಟಿನ ಪ್ರದೇಶ. ಹಿಂದೆ ತೆಂಕತಿಟ್ಟು, ತೆಂಕಮಟ್ಟು ಎಂಬ ಹೆಸರಿದ್ದುದು, ಈಗ 'ತೆಂಕುತಿಟ್ಟು' ಎಂದು ರೂಢಿಯಲ್ಲಿದೆ. ಇದಕ್ಕೆ ವಿಭಿನ್ನವಾಗಿ, ಪಡುಬಿದ್ರಿಯ ಉತ್ತರಕ್ಕೆ ಉಡುಪಿ ತಾಲೂಕಿನ ಭಾಗ ಕುಂದಾಪುರ ತಾಲೂಕು, ಗಟ್ಟದ ಮೇಲೆ ಸಾಗರ, ತೀರ್ಥಳ್ಳಿ, ಶೃಂಗೇರಿ ಪ್ರದೇಶದವರೆಗೆ ಇರುವ ಪ್ರಭೇದವು ಬಡಗು ತಿಟ್ಟು. ಇದರ ಒಳಪ್ರಭೇದದ ವಿಕಾಸವು ಉತ್ತರ ಕನ್ನಡ ತಿಟ್ಟು.

ಈ ತೆಂಕುತಿಟ್ಟು, ಬಡಗುತಿಟ್ಟುಗಳೆಂಬ ಹೆಸರುಗಳು ಹೇಗೆ ಉಂಟಾದುವು ಎಂಬ ಕುರಿತು ಎರಡು ಅಭಿಪ್ರಾಯಗಳು ಇವೆ. ಒಂದನೆಯದು, ಪ್ರಚಲಿತವಿರುವ ಜನಪ್ರಿಯ ಅಭಿಪ್ರಾಯ– ಎಂದರೆ, ಕರಾವಳಿಯ ತೆಂಕುಪ್ರದೇಶದ್ದು ತೆಂಕುತಿಟ್ಟು, ಬಡಗಿನದು ಬಡಗುತಿಟ್ಟು ಎಂಬುದು. ಆದರೆ, ಅದು ಹಾಗಲ್ಲವೆಂದೂ, 'ತೆಂಕ' ಎಂಬುದಕ್ಕೆ ಕೇರಳ, ಕೇರಳೀಯ ಎಂಬ ಅರ್ಥದಿಂದ ಬಂದಿದೆ, ಕೇರಳ ಪ್ರಭಾವದ ತಿಟ್ಟು ತೆಂಕುತಿಟ್ಟು, 'ಬಡಗ' ಎಂದರೆ ಆಂಧ್ರ, ತೆಲುಗ, ಎಂಬ ಅರ್ಥವಿದೆ. ಆಂಧ್ರದ ಯಕ್ಷಗಾನ ರಂಗದ ಹೋಲಿಕೆಯಿಂದ ಬಡಗುತಿಟ್ಟು– ಇದು ದಿ। ಕುಕ್ಕಿಲರ ಅಭಿಮತ. (ಕುಕ್ಕಿಲ ಕೃಷ್ಣಭಟ್ಟ: ರಂಗವೈಖರಿ.) ಇದು ಸಯುಕ್ತಿಕವಾದ ವಿಚಾರವಾಗಿದೆ.

ಬಣ್ಣದ ವೇಷಗಳ ಮುಖವರ್ಣಿಕೆಗಳ ಮತ್ತು ಕಿರೀಟಗಳ ಸ್ವರೂಪ, ಹಿಮ್ಮೇಳದ ಚೆಂಡೆ, ಜಾಗಟೆಗಳು, ವೇಷಗಳ ಸೊಂಟದ ಸುತ್ತ ತೊಡುವ ಬಾಲಮುಂಡು– ಇವುಗಳಲ್ಲಿ ತೆಂಕುತಿಟ್ಟಿಗೂ, ಕೇರಳೀಯ ರಂಗ ಪ್ರಕಾರಗಳಿಗೂ ಹೋಲಿಕೆ ಸ್ಪಷ್ಟವಾಗಿ ಇದೆ. ವೇಷಗಳ ಮುಖವರ್ಣಿಕೆಗಳ ವೈವಿಧ್ಯ ಈ ತಿಟ್ಟಿನ ಇನ್ನೊಂದು ವೈಶಿಷ್ಟ್ಯ. ಕುಣಿತದ ಹಜ್ಜೆಗಳು ದೊಡ್ಡವು. ವೇಷಗಳೂ ದೊಡ್ಡ ಆಕಾರದವು. ಒಟ್ಟಿನಲ್ಲಿ ತೆಂಕಿನದು ತಾಂಡವ ಪ್ರಕೃತಿ, ಬಡಗಿನದು ಲಾಸ್ಯ ಸ್ವಭಾವ.

ತೆಂಕುತಿಟ್ಟಿನ ಮೂಲ ಸ್ಥಳ ಕುಂಬಳೆಯೆಂದೂ, ಕುಂಬಳೆ ಪಾರ್ತಿಸುಬ್ಬ (ಸು. ಕ್ರಿ.ಶ. 1600) ಕೇರಳದ ಅಂದಿನ ರಾಮನಾಟ್ಟಂನಲ್ಲಿ ಪಳಗಿದವನಾಗಿ ಬಂದು, ಈ ತಿಟ್ಟನ್ನು ರೂಪಿಸಿದನೆಂದೂ ಪ್ರಸಿದ್ಧ ಜನಪ್ರತೀತಿಯಿದೆ. ಪೂರ್ವರಂಗದ ಸಭಾಲಕ್ಷಣವನ್ನೂ ಅವನೇ ರಚಿಸಿದ (ಸಂಕಲಿಸಿದ)ನೆಂದು, ಹೇಳುವರು. ಇದರಲ್ಲಿ ಬರುವ ''ಮುದದಿಂದ ನಿನ್ನ ಕೊಂಡಾಡುವೆನು ಅನವರತ। ಮದವೂರ ವಿಘ್ನೇಶ ದೇವ ಜಗದೀಶ''– ಎಂಬ ಪದ್ಯವೂ, ''ಶರಣು

ತಿರುವಗ್ರ ಶಾಲಿವಾಹಿನಿ'' ಎಂಬ ಹಾಡೂ, ಎಲ್ಲೆಡೆ ಪ್ರಚಲಿತವಿರುವುದರಿಂದ, ಸಭಾಲಕ್ಷಣವು ತೆಂಕುತಿಟ್ಟಿನಿಂದಲೇ ಮೊದಲಾಯಿತೆಂದೂ ಒಂದು ಊಹೆಗೆ ಎಡೆಯುಂಟು.

ಕುಂಬಳೆ, ಕೂಡ್ಲು, ಧರ್ಮಸ್ಥಳ, ಕಟೀಲು, ಇಚಲಂಪಾಡಿ, ಕದ್ರಿ, ಕೊರಕ್ಕೋಡು– ಇವು ಈ ತಿಟ್ಟಿನ ಪ್ರಾಚೀನ ಮೇಳಗಳು. ಈ ಪೈಕಿ ಕಟೀಲು, ಧರ್ಮಸ್ಥಳ ಮೇಳಗಳು ಇಂದಿಗೂ ಇವೆ. ತೆಂಕುತಿಟ್ಟಿನಲ್ಲಿ ಒಟ್ಟು ಎಪ್ಪತ್ತಕ್ಕೂ ಮಿಕ್ಕ ಮೇಳಗಳು ಆಗಿಹೋದ ಬಗೆಗೆ ಉಲ್ಲೇಖಗಳು ಸಿಕ್ಕುತ್ತವೆ. ಸದ್ಯ ಹನ್ನೆರಡು ಮೇಳಗಳು ಸಕ್ರಿಯವಾಗಿದ್ದು ನೂರಕ್ಕೂ ಮಿಕ್ಕಿ ಹವ್ಯಾಸಿ ತಂಡಗಳಿವೆ.

ತೆಂಕುತಿಟ್ಟಿನ ಮೂಲಸ್ಥಾನವಾದ ಕುಂಬಳೆ ಪ್ರದೇಶವೇ ಹಿಂದೆ ಮೇಳಗಳಿಗೆ ಹೆಚ್ಚಿನ ಕಲಾವಿದರನ್ನು ನೀಡುತ್ತಿತ್ತು. ಈಗ ಈ ಪ್ರದೇಶದಲ್ಲಿ ಯಕ್ಷಗಾನ ಪರಂಪರೆ ಕ್ಷೀಣಿಸುತ್ತ ಬಂದಿದೆ.

ಕಲಾಸ್ವರೂಪದಲ್ಲಿ, ಮುಖ್ಯವಾಗಿ ವೇಷ ಭೂಷಣಗಳಲ್ಲಿ, ತೆಂಕುತಿಟ್ಟು 1930ರಿಂದ ತೀವ್ರ ಬದಲಾವಣೆಗಳನ್ನು ಕಂಡಿತು. 1950ರಿಂದ ಇನ್ನೊಂದು ಬದಲಾವಣೆ ಪ್ರಾರಂಭವಾಯಿತು. ತುಳು ಭಾಷೆಯ ಯಕ್ಷಗಾನ ಪ್ರಯೋಗಗಳು ಕಲೆಯನ್ನು ಜನರ ಹತ್ತಿರಕ್ಕೆ ತಂದು, ಒಂದು ಹೊಸ ಚೈತನ್ಯವನ್ನು ನೀಡಿದರೂ, ವೇಷ ಮತ್ತು ಕಲಾ ಸೌಂದರ್ಯದ ದೃಷ್ಟಿಯಿಂದ ಈ ತಿಟ್ಟಿಗೆ ದೊಡ್ಡ ಹೊಡೆತ ನೀಡಿದುವು. ತೆಂಕುತಿಟ್ಟು ರೂಪ ವಿಘಟನೆಯ ಅಪಾಯದಲ್ಲಿದೆ ಎನ್ನಬಹುದು.

ನೋಡಿ : ತಿಟ್ಟು, ಬಡಗುತಿಟ್ಟು.

ತೆರೆ : ವೇಷಗಳ ಪ್ರವೇಶ ಸಂದರ್ಭದಲ್ಲೂ, ಸತ್ತು ಬಿದ್ದ ವೇಷ ಎದ್ದು ಹೋಗಲು, ಒಳಗೆ– ಹೊರಗೆ ಎಂಬ ವಿಭಾಗವುಳ್ಳ ದೃಶ್ಯಗಳಲ್ಲಿ, (ಉದಾ: ಕೃಷ್ಣ– ಸತ್ಯಭಾಮಾ ಸಂವಾದ: ಪಾರಿಜಾತ) ಪ್ರಸವ ಸಂದರ್ಭಗಳಲ್ಲೂ, – ಬಟ್ಟೆಯನ್ನು ಅಡ್ಡವಾಗಿ ಹಿಡಿಯುವಿಕೆ – ತೆರೆ. ತೆರೆ ಹಿಡಿಯುವುದು ಈ ತೆರೆಯೆಂಬುದು ಮರೆ, ಮನೆ, ದೇವಲೋಕ, ಅರಮನೆ– ಹೀಗೆ ಹಲವು ಸಂಗತಿಗಳಾಗಿ ಬರುತ್ತದೆ. ಇದನ್ನು ಹಿಡಿಯಲು ಎರಡು ಜನರು ಬೇಕು.

ತೆರೆಕಲಾಸು(ಶ)/ತೆರೆನಾಟ್ಯ (ತೆ.) : ತೆರೆಯನ್ನು ಹಿಡಿದು, ಅದನ್ನು ಅರ್ಧತಗ್ಗಿಸಿ ಕುಣಿಯುವ ಕುಣಿತ. ಪ್ರವೇಶ ನೃತ್ಯದ ಒಂದು ಭಾಗ. ಇದು ಬಣ್ಣದ ವೇಷಗಳಿಗೂ, ಪಾಂಡವರು, ರಾಮ ಲಕ್ಷ್ಮಣ ಮುಂತಾದ ಕೆಲವು ವೇಷಗಳಿಗೂ ಎರಡು ಕಡೆ ಇರುತ್ತದೆ. ಒಮ್ಮೆ ರಂಗದ ಪ್ರವೇಶದ್ವಾರದ ಬಳಿ, ಮತ್ತೊಮ್ಮೆ ರಂಗಸ್ಥಳದಲ್ಲಿ. ಉಳಿದ ವೇಷಗಳಿಗೆ ಒಂದೇ ಬಾರಿ, ರಂಗದ ಬಾಗಿಲಲ್ಲಿ ಮಾತ್ರ. ಇಲ್ಲಿ ವೇಷಗಳು ಸಭೆಗೆ ಬೆನ್ನು ಹಾಕಿ, ದೇವರಿಗೆ ಮುಖ ಮಾಡಿ ಕುಣಿಯುತ್ತವೆ.

ತೆರೆಕುಣಿತ (ಬ.) = ನೋಡಿ : **ತೆರೆಕಲಾಸು.**

ತೆರೆನಾಟ್ಯ = ನೋಡಿ : **ತೆರಕಲಾಸು.**

ತೆರೆನೋಟ (ತೆ.) : ಬಣ್ಣದ ವೇಷವು ರಂಗಸ್ಥಳದ ಮಧ್ಯಕ್ಕೆ ಬಂದು ತೆರೆಯನ್ನು ಅರ್ಧತಗ್ಗಿಸಿ ಸಭೆಯನ್ನು ನೋಡುವುದು. ಸಭಾವೀಕ್ಷಣೆ.

ತೆರೆಪೆಟ್ಟಿಗೆ (ತೆ.) : ವೇಷ ಸಾಮಗ್ರಿ ಇರುವ ಪೆಟ್ಟಿಗೆ. (ಬಡಗಿನಲ್ಲಿ ಸರಕಿನ ಪೆಟ್ಟಿಗೆ) ತೆರೆಬಟ್ಟೆ ಇದರಲ್ಲೆ ಇರುತ್ತದೆ.

ತೆರೆಪೆಟ್ಟಿಗೆಯವ(ನು) : ತೆರೆಪೆಟ್ಟಿಗೆಯನ್ನು ಹೊರುವ ಆಳು. ರಂಗಸ್ಥಳದಲ್ಲಿ ತೆರೆಹಿಡಿಯುವುದು, ಆಯುಧ ಒದಗಿಸುವುದು ಇವನ ಕೆಲಸಗಳು.

ತೆರೆಪೊರಪ್ಪಾಟು = ನೋಡಿ : **ತೆರೆ ಪೊರಪ್ಪಾಡು.**

ತೆರೆಪೊರಪ್ಪಾಡು (-ಪೊರಪ್ಪಾಟು) (ತೆ.): ಪೊರಪ್ಪಾಡ್ ಎಂದರೆ ಮಲೆಯಾಳದಲ್ಲಿ ಹೊರಡುವಿಕೆ ಎಂದರ್ಥ. ಬಣ್ಣದ ವೇಷಗಳು, ತೆರೆಕುಣಿತಗಳೊಂದಿಗೆ ಮಾಡುವ ಪ್ರವೇಶ ಕ್ರಮ ಮತ್ತು ಪ್ರವೇಶ ನೃತ್ಯ. ಇದರಲ್ಲಿ ಮೂರು ಹಂತಗಳು. ಮೊದಲಾಗಿ ಆರ್ಭಟೆಗಳು ಮತ್ತು ರಂಗದ ದ್ವಾರದಲ್ಲಿ ಕುಣಿತ. ಅನಂತರ ರಂಗಸ್ಥಳದಲ್ಲಿ ತೆರೆತಗ್ಗಿಸಿ ಸಭಾವೀಕ್ಷಣೆ, ಆರ್ಭಟೆಗಳು. ಆ ಬಳಿಕ ನಿತ್ಯವಿಧಿ, ಪೂಜೆ ಇತ್ಯಾದಿ.

ಈ ಪೈಕಿ ಶಿವಪೂಜೆಯ ಅಭಿನಯ ರಾವಣ, ಮಾಗಧರಿಬ್ಬರಿಗೆ ಮಾತ್ರ ಇದ್ದುದು, ಈಗ ಹಲವು ರಕ್ಕಸರಿಗೆ ಬಳಕೆಯಾಗುತ್ತಿದೆ.

ಹೆಣ್ಣುಬಣ್ಣದ ತೆರೆಪೊರಪ್ಪಾಡು ಇದೇ ಹಂತಗಳಲ್ಲಿದ್ದರೂ, ನಿತ್ಯವಿಧಿಗಳಲ್ಲಿ ಅಂಗ ಶೃಂಗಾರವು ಸೇರುತ್ತದೆ. ಹನುಮಂತನ ತೆರೆಪೊರಪ್ಪಾಡಿನಲ್ಲಿ ದಶಾವತಾರ ಮುದ್ರೆಗಳು ಬರುತ್ತವೆ.

ತೆರೆವಲ್ಲಿ : ತೆರೆ ಹಿಡಿಯಲು ಬಳಸುವ ಬಟ್ಟೆ. ತೆರೆಸೀರೆ, ವಲ್ಲಿ. ಹಿಂದೆ ಇದು ನೀಲಿ ಅಥವಾ ಕಪ್ಪುಬಣ್ಣದ ಸೀರೆ ಅಥವಾ ಇತರ ಬಟ್ಟೆಯಾಗಿತ್ತು. ಈಗ ಅದರಲ್ಲಿ ಮೇಳದ ಹೆಸರು ಇರುವುದುಂಟು.

ತೆರೆಸೀರೆ = ನೋಡಿ : **ತೆರೆವಲ್ಲಿ.**

ತೈಕು ತೈಕು: ತೆರೆಕುಣಿತದ ಬಡಿತ. ರಂಗಸ್ಥಳದ ಬಾಗಿಲಲ್ಲಿ ರಂಗಕ್ಕೆ ಬೆನ್ನು ಹಾಕಿ, ದೇವರಿಗೆ ಮುಖ ಮಾಡಿ, ಅರ್ಧತೆರೆಯಲ್ಲಿ ಕುಣಿಯುವುದಕ್ಕೆ ಬಳಕೆಯಾಗುವ, ಏಕತಾಳದ ಬಡಿತ.

ತೈಕು। ತೈಕು।.. ಧಿತ್ತಾ ಕಿಡ್ತಕಧಿನ್ನ.. ಎಂದು ಆರಂಭವಾಗುತ್ತದೆ.
ಬಡಗುತಿಟ್ಟಿನಲ್ಲಿ ಇದೇ– ತೈತ। ತೈತ। ಧಿತ್ತಾ ಕಡ್ತಕದಿನ್ನ.. ಎಂದು ಆರಂಭ.

ತೈತ ತಕತ (ತೆ.): ಪ್ರಯಾಣ, ಬೇಟೆ ಯುದ್ಧ, ನಿರ್ಗಮನ, ಮೊದಲಾದ ಕುಣಿತಗಳಿಗೆ ಬಳಸುವ ಏಕತಾಳದ, ಮಿಶ್ರನಡೆಯ ಬಡಿತ. ಅದರ ಕುಣಿತಕ್ಕೂ ಈ ಹೆಸರು. ಗುಂಪುಯುದ್ಧಗಳಿಗೆ ಉದಾ: ದೇವಬಲ, ರಾಕ್ಷಸ ಬಲಗಳ ಯುದ್ಧಗಳಿಗೆ– ಈ ಬಡಿತ.

– ಮರಣಹೊಂದುವ ಪಾತ್ರವು, ಮೋಕ್ಷರೂಪದ ಮರಣ ಪಡೆಯುವುದಾದರೆ. ಉದಾ: ಸುಧನ್ವ, ಕರ್ಣ, ಅತಿಕಾಯ, ವಾಲಿ– 'ತೈತ ತಕತ'ದಲ್ಲೆ ಕಳಿಸಬೇಕು, ಧಿಗಿಣದಲ್ಲಲ್ಲ.

ಕಿರಾತನ ಪ್ರವೇಶಕ್ಕೂ ಇದರ ಬಳಕೆ. ಮೊದಲಾಗಿ 'ತೈತ ತಕತ'ವನ್ನು ಬಾರಿಸಿ ಅನಂತರ 'ಧಿಗಣ'ವನ್ನು ಬಾರಿಸಬೇಕು.

ತೈತತ್ತಾ... (ತೆ.): ಏಕತಾಳ, ಕೋರೆತಾಳಗಳ ಕುಣಿತದಲ್ಲಿ 'ಬಾಯಿತಾಳ' ಕೊಟ್ಟರೆ, ಮತ್ತು ಮುಕ್ತಾಯದ ಎತ್ತುಗಡೆಗೂ, ಮಂಗಲಾರತಿ ಪದ್ಯಗಳ ಬಿಡ್ತಿಗೆಯ ಎತ್ತುಗಡೆಗೂ ಬಡಿಯುವ ಬಡಿತ. ಬೇರೆ ಸಂದರ್ಭಗಳಲ್ಲಿ ಬಳಕೆಯಿಲ್ಲ.

ತೈತತೈತ (ಬ.) = ನೋಡಿ: **ತೈಕು ತೈಕು.**

ತೈಯ ತಾತಾ (ಬ.) = ನೋಡಿ: **ತೈತ ತಕತ.**
ಒಂದು ಬಗೆಯ ಬಡಿತ **ಚಾಲೂಕುಣಿತ**ಗಳಿಗೂ ಬಳಕೆಯಿದೆ.

ತೋಂಗತೋ: "ತೋಂಗತೋ। ತಕಿಟತಕದಿನ। ದದಿಂನ್ನಾತಾ। ತೈತ ದದಿಗಿಣ..." ಎಂಬ ಮುಕ್ತಾಯ ಬಡಿತ. ಪೂರ್ವರಂಗದ ವೇಷಗಳ ನಿರ್ಗಮನಕ್ಕೆ ಬಳಕೆ.

ವಾಗ್ರೂಢಿಯಲ್ಲಿ 'ತೋಂಗತೋ' ಎಂದರೆ, ನಿರ್ಗಮನವೆಂದು ಇದೆ.– ಉದಾ: "ನಾನಿನ್ನು ತೋಂಗತೋ". "ತೋಂಗತೋ ಆಯಿತು".

ತೋರಣ: ರಂಗಸ್ಥಳದ ಅಲಂಕಾರ. ಸೊಪ್ಪು, ಹೂಗಳ ತೋರಣ.

ತೋಳ್ಪಂದಿ: ಸ್ತ್ರೀವೇಷದ ತೋಳ್ಕಟ್ಟು. ಹಲ್ಲೆ, ಮಣಿಗಳನ್ನು ಜೋಡಿಸಿ ಮಾಡಿದ ಪಟ್ಟಿಕೆ.

ತೋಳಕಟ್ಟು/ತೋಳ್ಕಟ್ಟು: ತೋಳಿಗೆ ಕಟ್ಟುವ ಆಭರಣ. ತೋಳಿನಕಟ್ಟು. ಮೊಣ ಗಂಟಿನಿಂದ ಮೇಲೆ, ಭುಜ ಕೀರ್ತಿಗಿಂತ ಕೆಳಗೆ ಕಟ್ಟುವ ಅಲಂಕೃತ ಪಟ್ಟಿ. ಇದರ ಆಕಾರಗಳು ಪಾತ್ರ ಜಾತಿಗನು ಗುಣವಾಗಿ ವ್ಯತ್ಯಾಸ ಹೊಂದಿವೆ.
ನೋಡಿ: **ಬಾಪುರಿ, ತೋಳಬಾಪುರಿ** (ಬ.).

ತೋಳಚಿನ್ನ/ತೋಳ್ಚಿನ್ನ (ಬ.) = ತೋಳಕಟ್ಟು, ತೋಳಬಾಪುರಿ.

ತೋಳಬಾಪುರಿ (ಬ.): ತೋಳಿಗೆ ಕಟ್ಟುವ ಒಂದು ಆಭರಣ; ತೋಳಿನ ಬಾಪುರಿ– ದ್ವಿರುಕ್ತಿಪದ. (ಬಾಪುರಿ = ಬಾಹುಪೂರ) = ನೋಡಿ: **ತೋಳಕಟ್ಟು.**

ತೋಳ್ಕಟ್ಟು = ನೋಡಿ: **ತೋಳಕಟ್ಟು.**

ತೋಳ್ಚಿನ್ನ = ನೋಡಿ: ತೋಳ ಚಿನ್ನ.

ತ್ರಿರಸ = ನೋಡಿ: **ತ್ರಿಸರ.**

ತ್ರಿವುಡೆ: ತಾಳಗಳಲ್ಲೊಂದು. ತ್ರಿಪುಟ. ತ್ರಿವುಡೆ ಎಂಬುದು ಕನ್ನಡದ ಛಂದೋಬಂಧವೊಂದಕ್ಕೂ ಇರುವ ಹೆಸರು.

ಎರಡು ರೂಪಗಳಲ್ಲಿದೆ. **ನಿಧಾನ ತ್ರಿವುಡೆ** ಮತ್ತು **ತ್ವರಿತ ತ್ರಿವುಡೆ.** ತಕಿಟ। ತಕಧಿಮಿ– ಎಂಬುದು ಇದರ ಗತಿಸ್ವರೂಪ.

ನಿಧಾನ ತ್ರಿವುಡೆ, ಉದ್ದ ತ್ರಿವುಡೆ ಅಥವಾ ಆದಿ ತ್ರಿವುಡೆ (ಉ.) – ಎಂಬುದಕ್ಕೆ ಹದಿನಾಲ್ಕು ಅಕ್ಷರ ಕಾಲ ಪ್ರಮಾಣ.

ನಿಧಾನ ತ್ರಿವುಡೆಯ ದಸ್ತೆ, ಮುಕ್ತಾಯಗಳು ಹೀಗಿವೆ.

ತೆಂಕುತಿಟ್ಟು: ದಸ್ತು: ತಾಂ ಕಿಟತಕ। ಧಿಂತಕ ತರಿಕಿಟ।

ಬಿಡ್ತಿಗೆ:

1) ಧೀಂತಕ ತರಿಕಿಟತಾಂ। ಧಿಂತಕ ತರಿಕಿಟತತ್ತಾಂ (2 ಸಲ)

2) ಧೀಂತರಿಕಿಟ। ಧಿಂತರಿಕಿಟ। ಕಿಟತಕ ತರಿಕಿಟ। ಧಿಂದತ್ತಾಂ। ಧಿಂತಕತರಿಕಿಟ। ದದಿಗಿಣ। ತೊ
ಮೇಲೆ ಹೇಳಿದ ಭಾಗ 2 ಮಾತ್ರ ಬಾರಿಸಿದರೆ ಅದು ಮುಕ್ತಾಯ.

– ಉತ್ತರ ಕನ್ನಡದ ಬಡಿತಗಳೂ, ಸುಮಾರಾಗಿ ಹೀಗೇ ಇದ್ದುವು. ಆದರೆ ಬಿಡ್ತಿಗೆಯ ಮೊದಲಭಾಗ ಇನ್ನೂ ದೀರ್ಘವಾಗಿತ್ತು.

ಬಡಗುತಿಟ್ಟು (ಈಗ ಉ. ಸಹ):

ದಸ್ತೆ: ತಾ ದಿಕುತಕ। ದಿಕುತಕ। ದಿಕುತಕ

ಮುಕ್ತಾಯ: ತಾಕಿಟತಕ। ತರಿಕಿಟ। ಕಿಟತಕ

ತಾತ್ಯೆತಾ। ಧಿನ್ನಕ। ತರಿಕಿಟ। ಧೀಂ

ತ್ವರಿತ ತ್ರಿವುಡೆ ಅಥವಾ ಗಿಡ್ಡ ತ್ರಿವುಡೆಯ ದಸ್ತು, ಮುಕ್ತಾಯಗಳು ಹೀಗಿವೆ: ಪ್ರಮಾಣ ಏಳು ಮಾತ್ರಾಕಾಲ. ದುಡುಕು ಲಯ–

ತೆಂಕು: ತೋಂ ಕಿಟಾಂ। ಧಿನ್ನ। ತೋಂಕಿಟಾಂ

ಬಿಡ್ತಿಗೆ, ಮುಕ್ತಾಯಗಳು: ಅಷ್ಟತಾಳದಂತೆಯೆ ಇರುತ್ತವೆ. ಏರು ಪದ್ಯಗಳಾದರೆ ಬಿಡ್ತಿಗೆಯ ಉದ್ದವು, ಕುಣಿತವನ್ನು ಹೊಂದಿಕೊಂಡಿದೆ.

ಕೊನೆಯ ಮುಕ್ತಾಯ:

ಧೀಂತರಿಕಿಟ। ಕಿಟ್ತಕ ತರಿಕಿಟ

ಧೀಂದತ್ತಾ। ದಿದ್ದಾ। ದೆದಿಗಿಣ॥

ಬಡುಗತಿಟ್ಟು:

ದಸ್ತು: ತಾಂತ। ಧಿನ್ನತೈ।ಧೊಂತ ಧಿನ್ನತೈ।

ಮುಕ್ತಾಯ: ದಸ್ತೆಯ 'ಧಿನ್ನತೈ' ಎತ್ತುಗಡೆಗೆ ಬರಬೇಕು.

ತಾ ಕಡ್ತಕ। ತರಿಕಿಟ ಕಿಡ್ತಕ।

ತಾಕಡ್ತಕ। ಧಿತ್ತಾ। ತರಿಕಿಟ॥ ಧೀಂ।

– ಗಟ್ಟದಕೋರೆಯಲ್ಲಿ ತ್ವರಿತ ತ್ರಿವುಡೆಯು ಮಾತ್ರ ಬಳಕೆಯಿದ್ದು ನಿಧಾನ ತ್ರಿವುಡೆಯು ಲುಪ್ತವಾಗಿದೆ.

– ಎಲ್ಲ ತಿಟ್ಟುಗಳಲ್ಲೂ ತ್ರಿವುಡೆಯು (ಹಾಗೆಯೇ ಝಂಪೆಯು) ಮೊದಲ ಒಡ್ಡೋಲಗಕ್ಕೆ ಪ್ರಶಸ್ತ ತಾಳವೆನಿಸಿದೆ.

ತ್ರಿಶೂಲ: ಮೂರು ಮೊನೆಯ ಶೂಲ. ಮರದ ಅಥವಾ ಲೋಹದ ರಚನೆ. ಶಿವನ ವೇಷಕ್ಕೆ ಕೈಯಲ್ಲಿ ಧಾರಣೆ.

ತ್ರಿಸರ/ತಿಸರ/ತ್ರಿರಸ: ಮೂರೆಳೆ ಸರ; ತ್ರಿಸರ.

ತ್ವರಿತ: 1. ತಾಳವೊಂದರ ತ್ವರಿತ ಅಥವಾ ಹ್ರಸ್ವ ಸ್ವರೂಪ. ಉದಾ: ತ್ವರಿತ ತ್ರಿವುಡೆತಾಳ. ತ್ವರಿತವನ್ನೆ ದುಡುಕು, ತುರಿತ, ತುರ್ತ, ದುರಿತ, ಗಿಡ್ಡ – ಎಂದೂ ಹೇಳುವರು.

2. ತ್ವರಿತಗತಿ. ಇದು ಯಾವುದೇ ತಾಳದ್ದೂ ಆಗಿರಬಹುದು.

ತ್ವರಿತ ಝಂಪೆ: ಝಂಪೆತಾಳದ ತ್ವರಿತಗತಿ ರೂಪ. ಐದು ಅಕ್ಷರ ಕಾಲ. ನೋಡಿ: **ಗಿಡ್ಡ ಝಂಪೆ, ಝಂಪೆ ತಾಳ.**

ತ್ವರಿತ ತ್ರಿವುಡೆ: ತ್ರಿವುಡೆ ತಾಳದ ತ್ವರಿತ ಗತಿರೂಪ. ಏಳು ಅಕ್ಷರ ಕಾಲ ಪ್ರಮಾಣ. ನೋಡಿ: **ಗಿಡ್ಡ ತ್ರಿವುಡೆ, ತ್ರಿವುಡೆ.**

ದ

ದಂಡ: ಋಷಿಯ ಕೈಯ ದಂಡ. ಕವೆಯಂತಿರುವುದು. Y ಆಕಾರ. ಋಷಿದಂಡ.

ದಂಬೆ: ಬಣ್ಣದ ವೇಷದ ಭುಜಕೀರ್ತಿ. ಭುಜದಂಬೆ ಎಂದೂ ಹೆಸರಿದೆ. ಇದಕ್ಕೆ ಮುಳ್ಳುಗಳಿಲ್ಲ. ಒಳಗೆ 'ದಂಬೆ' ಎಂದರೆ ತೋಡಿನಂತಿದ್ದು, ಹೊರಭಾಗ ನಯವಾಗಿದ್ದು, ಮಧ್ಯದಲ್ಲಿ ಹೊರ ಚಾಚಿದ ಕೆತ್ತನೆಗಳಿರುತ್ತವೆ. ಮಧ್ಯಕ್ಕಿಂತ ಮೇಲ್ಗಡೆ ಕೊಕ್ಕು, ಗಿಳಿ ಅಥವಾ ಗರುಡ ಮುಖಗಳ ಆಕಾರ ಗಳಿರುತ್ತವೆ.

ದಂಷ್ಟ್ರ: ಕೃತಕ ಹಲ್ಲು, ದಾಡೆ.

1. ಬಾಯೊಳಗೆ ಸಿಕ್ಕಿಸಿಕೊಳ್ಳುವ ಲೋಹದ ಅಥವಾ ಇತರ ವಸ್ತುವಿನಿಂದ ಮಾಡಿದ ಕೃತಕ ದಾಡೆ.

2. ಕೆಳತುಟಿಗಳ ಕೆಳಗೆ ಬಾಯಿಯ ಇಕ್ಕಡೆಗಳಲ್ಲೂ ಬಣ್ಣದಿಂದ ಬರೆಯುವ ಹಲ್ಲುಗಳ ಆಕೃತಿ.

ದಕ್ಕಿತೋ ದಕ್ಕಿತು: ದೇವರ ಮತ್ತು ಆಟ ಆಡಿಸಿದವರ 'ಹೊಗಳಿಕೆ'ಯ ಸಂದರ್ಭದಲ್ಲಿ ಬರುವ ಮಾತು. ಹಾಸ್ಯಗಾರ– ಭಾಗವತ ಸಂವಾದದಲ್ಲಿ ಬರು ವಂತಹದು.

ಉದಾ:

ಹಾಸ್ಯಗಾರ: ಆಹೋಹೋ

ಭಾಗವತ: ಆಹೋಹೊ.

ಹಾ: ಕುಂಬಳೆ ಕಣಿಪುರ ಗೋಪಾಲಕೃಷ್ಣ ದೇವರಯ್ಯ

ಭಾ: ''

ಹಾ: ಭಾಲಾ,/ ಶಾಭಾಸ್

ಭಾ: ಮತ್ತೂ ಶ್ರೀ ಗೋಪಾಲಕೃಷ್ಣದೇವರು

ಹಾ: ಭಾಲಾ.

ಭಾ: (ಶ್ಲೋಕ ಹೇಳಬೇಕು) ನಂಬಿರುವಂತಹ ಭಕ್ತರ ಮೇಲೆ ವಾತ್ಸಲ್ಯವಿಟ್ಟು ಕೊಟ್ಟಿರು ವಂಥ ಸಿರಿಮುಡಿ ಗಂಧಪ್ರಸಾದ ದಕ್ಕಿತೋ ದಕ್ಕಿತು.

ಹಾ: ದಕ್ಕಿತೋ ದಕ್ಕಿತು.

ನೋಡಿ: **ಆಹೋಹೊ.**

ದಗಲೆ: ಸಡಿಲವಾದ ಅಂಗಿ. ದೊಗಲೆ. ಗಂಡು ವೇಷಗಳ ದಗಲೆಗಳು ನಾಲ್ಕು ಬಣ್ಣದವು. ಕೆಂಪು, ಕಪ್ಪು, ಹಸುರು, ಬಿಳಿ. ಈ ಪೈಕಿ ಬಿಳಿ ದಗಲೆ ಎಂಬುದು ಕಪ್ಪು ದಗಲೆಯ ಒಳಮೈ. ಕಪ್ಪು ದಗಲೆಯನ್ನೇ ತಿರುಗಿಸಿ ತೊಡುವುದು. ತೆಂಕುತಿಟ್ಟಿನಲ್ಲಿ ಮುಖ್ಯ ದಗಲೆಯ ಒಳಗಿಂದ ನಾಲ್ಕರಿಂದ ಇಪ್ಪತ್ತರ ವರೆಗೆ ಒಳದಗಲೆ ತೊಡುತ್ತಾರೆ. ಪುಂಡುವೇಷಗಳಿಗೆ ಅರ್ಧಕ್ಕೈ ದಗಲೆ. ಇದಕ್ಕೆ **ಚೋಲೆ**ಯೆಂದೂ ಹೇಳುವರು. ಉತ್ತರ ಕನ್ನಡದಲ್ಲಿ ಅರ್ಧ ತೋಳಿನ ದಗಲೆಗಳು ಹಿಂದೆ ಇರಲಿಲ್ಲ.

– ತೆಂಕುತಿಟ್ಟಿನಲ್ಲಿ ಸ್ತ್ರೀವೇಷಕ್ಕೂ **'ಕುಪ್ಪಾಯ'** ವೆಂಬ ಇಡಿಕ್ಕೈ ದಗಲೆ ಇದ್ದಿತು.

– ದಗಲೆಗೆ ಕಸೆಲಾಡಿಗಳಿರುತ್ತವೆ. ಆದುದ ರಿಂದ **ಕಸೆಅಂಗಿ** ಎಂದೂ ಹೆಸರು.

ದಟ್ಟಿ (ತೆ.): ಜಟ್ಟಿ. ಸೊಂಟಕ್ಕೆ ಸುತ್ತುವ ಬಿಳಿಬಟ್ಟೆಯ ಪಟ್ಟಿ. ಇದು ವೇಷಭೂಷಣಗಳಿಗೂ, ಕುಣಿತಕ್ಕೂ ಆಧಾರವಾಗಿರುತ್ತದೆ. ಕಚ್ಚೆ ಅಥವಾ ಚಲ್ಲಣ ಧರಿಸಿ, ಅದರ ಮೇಲೆ ಈ ದಟ್ಟಿ ಕಟ್ಟುವರು. ಅದರ ಮೇಲೆ ಡಾಬುಗಳೂ, ವೀರಗಸೆ, ಮಾರುಮಾಲೆ ಗಳನ್ನೂ ಕಟ್ಟಬೇಕು.

ದಟ್ಟಿಕುಪ್ಪಸ: ಸ್ತ್ರೀವೇಷದ ಒಂದು ಬಗೆಯ ವಸ್ತ್ರವಿನ್ಯಾಸ. ಕೊಡಗಿನ ಹೆಂಗಸರಲ್ಲಿ ಬಳಕೆಯಿರುವ ಒಂದು ಕ್ರಮ.

ದಡ್ಡಾಲ್(ಲ): ಒಂದು ಜಾತಿಯ ನಾರು ಮರ. ಕವಲು ಮರ, ಗುಡ್ಡದ ಇಪ್ಪೆ. **(Careya arboseya)** ಇದರ ತೊಗಟೆಯ ನಾರನ್ನು ವೇಷಭೂಷಣ ಜೋಡಣೆಗೂ, ವೇಷದ ಕೇಸರಿಗೂ ಬಳಸುವರು.

ದಡ್ಡಾಳೆ: ಕಳ್ಳಿಜಾತಿಯ ಗಿಡ. ದಡ್ಡಿ. **(Agave americana).** ಇದರ ಎಲೆಯ ನಾರು ಕೇಸರಿಗೆ, ಮೀಸೆಗೆ ಹಾಗೂ ಹಗ್ಗವಾಗಿ ಬಳಕೆ.

ದಧ್ಧೀಂಗಿಣ/ಧಧ್ಧೀಂಗಿಣ (ತೆ.): ಒಂದು ಬಗೆಯ ಪ್ರವೇಶ ನೃತ್ಯದ, ಮೊದಲ ಭಾಗ. ವಿಚಿತ್ರ ಉದ್ಭವಗಳಿಗೆ. ಉದಾ: ನರಸಿಂಹ, ವೀರಭದ್ರ, ಭಸ್ಮಾಸುರ, ಜಲಸ್ತಂಭದಿಂದ ಬರುವ ಕೌರವನ ಪ್ರವೇಶ– ಮೊದಲಾದ ಸಂದರ್ಭಗಳಿಗೆ ಇದನ್ನು ಬಾರಿಸಿ, ವೇಷವನ್ನು ರಂಗ ಪ್ರವೇಶ ಮಾಡಿಸಿ, ಅನಂತರ 'ಧೀಗಿಣ' ಬಾರಿಸುವರು.

ದಧಿಮುಖ = ನೋಡಿ: ಸೂಜಿಮುಖ.

ದನಿ/ಧನಿ: ಮೇಳದ ಧನಿ– 1. ಮೇಳದ ದೇವಾಲಯದ ಮುಖ್ಯಸ್ಥ.

2. ಮೇಳ ವಹಿಸಿಕೊಂಡ ವ್ಯವಸ್ಥಾಪಕ. ಕಂಟ್ರಾಕ್ಟುದಾರ.

ದರು/ದರುಪದ/ದರುವು: ಯಕ್ಷಗಾನ ಪ್ರಸಂಗ ಗಳಲ್ಲಿ ಬರುವ ಒಂದು ಬಗೆಯ ಪದ್ಯಜಾತಿ. ತೆಲುಗು ಮೂಲದ ಬಂಧ. ತೆಲುಗು ಸಾಂಪ್ರದಾಯಿಕ ರಂಗವಾದ ಕೂಚಿಪುಡಿ, ಭಾಮಾಕಲಾಪಗಳಲ್ಲಿ ದರುವುಗಳಿದ್ದು, ಪ್ರವೇಶದ ದರು, ಸಂವಾದದ ದರು ಮುಂತಾಗಿ ಬೇರೆ ಬೇರೆ ಜಾತಿಗಳಿವೆ.

ಈ 'ದರುವು' ಎಂಬುದಕ್ಕೂ, ಭರತನ ನಾಟ್ಯಶಾಸ್ತ್ರದ 'ಧ್ರುವ' (ಧ್ರುವಪದ, ನಾಟ್ಯಧ್ರುವ) ಎಂಬುದಕ್ಕೂ ಇರುವ ಸಾಮ್ಯವು ಗಮನಾರ್ಹ.

ದರುಪದ = ನೋಡಿ: ದರು.

ದರುವು = ನೋಡಿ: ದರು.

ದವರು = ನೋಡಿ:ಡವರಂಗಿ.

ದಶನಾಮ ಖಂಡನ (ತೆ.): 'ಕರ್ಣಪರ್ವ' ಪ್ರಸಂಗದ ಒಂದು ಪದ್ಯ ಮತ್ತು ಅದರ ಅರ್ಥಗಾರಿಕೆಯ ಸಂದರ್ಭ. ಪ್ರಸಂಗದಲ್ಲಿ ಕರ್ಣನು ಯುದ್ಧಕ್ಕೆ ಹೊರಡುವಾಗ ಆಡುವ ವೀರಭಾಷಣ ಸಂದರ್ಭ ದಲ್ಲಿ ಬರುವ ಪದ್ಯವೊಂದರಲ್ಲಿ ಅರ್ಜುನನ ಹತ್ತು ಹೆಸರುಗಳಿದ್ದು, ಅಂತಹ ದಶನಾಮಧೇಯಗಳುಳ್ಳ ಅರ್ಜುನನನ್ನು ಸೋಲಿಸಿ ಕಾದುವ ತಾನು ಧನ್ಯ ಎಂಬ ಮಾತು ಬರುತ್ತದೆ.

ವಾರ್ಧಕ॥ ವಿಜಯನೊಡನಾಹವದೊಳಿದಿರಾಗಿ **ಪಾರ್ಥನೊಳ್।** ಭುಜಪ್ರತಾಪದಿ ಸೆಣಸುತಾ **ಕಿರೀಟಿಯ** ಕೂಡೆ। ನಿಜ ಶೌರ್ಯಮಂ ತೋರುತರ್ಜುನನ ಕೆಣಕಿದು ಧನಂಜಯನ ಚಚ್ಚರದೊಳು॥ ಭಜಿಸುತ ಬಿಭತ್ಸುವಿನ ನುಗ್ಗೊತ್ತಿ ನರನೊಳಜಿ। ಗಿಜಿಯಾಗಿ ಸವ್ಯಸಾಚಿಯ ಸದೆದು ಜಿಷ್ಣುವಂ। ಗಜರಿಸುತ ಫಲುಗುಣ ನೊಳೆಚ್ಚಾಡಿ ಸರಸದಿಂ ಕಾದಲಾಂ ಧನ್ಯನೆಂದ॥

– ಇದರ ಅರ್ಥಗಾರಿಕೆಯಲ್ಲಿ, ಅರ್ಜುನನ ಒಂದೊಂದು ಹೆಸರನ್ನು ತಾನು ಮೀರಿಸುವು ದಾಗಿಯೂ, ಅವನ ಆಯಾ ಹೆಸರಿನ ಕೀರ್ತಿಗಳನ್ನು ನಾಶಪಡಿಸುವುದಾಗಿಯೂ ಹೇಳುವ ಕ್ರಮವಿದೆ. ಈ ಪ್ರಸಂಗ ಭಾಗದ ಮಾತುಗಾರಿಕೆಯು ಪಾತ್ರಧಾರಿಯ ಸಾಮರ್ಥ್ಯದ ಒಂದು ನಿಕಷ ಸಂದರ್ಭವೆಂದು ಪರಿಗಣಿತವಾಗಿದೆ.

ದಶಾವತಾರ (-ಆಟ) : ಈಗ ನಾವು ಕರೆಯುವ 'ಯಕ್ಷಗಾನ'ವೆಂಬುದಕ್ಕೆ ಹಳೆಯ ಹೆಸರುಗಳಲ್ಲೊಂದು. (ಆಟ, ಬಯಲಾಟ, ಭಾಗವತರಾಟ, ದಶಾವತಾರ ಆಟ.) ಇದರಲ್ಲಿ ವ್ಯವಸಾಯ ಮಾಡುವವನು ದಶಾವತಾರಿ.

ದಶಾವತಾರ ಎಂಬ ಹೆಸರು ಹೇಗೆ ಬಂದಿರಬಹುದು? ನಮ್ಮ ಆಟಗಳಲ್ಲಿ, ಒಂದೇ ಪ್ರಸಂಗದಲ್ಲಿ ವಿಷ್ಣುವಿನ ಹತ್ತು ಅವತಾರಗಳನ್ನು ತೋರಿಸುವ ಕ್ರಮವಿಲ್ಲ. (ದಶಾವತಾರ ಎಂಬ ಪ್ರಸಂಗ ತೀರ ಈಚೆಗಿನ ಸಂಕಲನ) ಸಾಂಪ್ರದಾಯಿಕ ಪ್ರಸಂಗಗಳಲ್ಲಿ ಹತ್ತು ಅವತಾರದ ಕತೆಗಳಿಗೆ ಮಹತ್ತ್ವವಿಲ್ಲ. ಹಾಗಾಗಿ ದಶಾವತಾರಗಳನ್ನು ತೋರಿಸುವುದರಿಂದ ಆ ಹೆಸರು ಬಂದಿತೆಂಬ ನಂಬುಗೆ ಸರಿಯಲ್ಲ.

ಪ್ರಾಯಶಃ ಇಲ್ಲಿ ದಶಾವತಾರವೆಂದರೆ ವಿಷ್ಣುವಿಗೆ ಸಂಬಂಧಿಸಿದ ಎಂದು ಮಾತ್ರ ಅರ್ಥೈಸಬೇಕು.

ಇನ್ನೊಂದು ಊಹನೆಯ ಪ್ರಕಾರ, ಸಭಾಲಕ್ಷಣದಲ್ಲಿ ಬರುವ ದಶಾವತಾರಗಳ ಉಲ್ಲೇಖವೇ, ಈ ಹೆಸರಿಗೆ ಕಾರಣ. ಸಭಾಲಕ್ಷಣದಲ್ಲಿ, ಕ್ಷೇಮೇಂದ್ರನ ದಶಾವತಾರ ಮಂಜರಿಯ ''ಮತ್ಸ್ಯಃ ಕೂರ್ಮಃ ವರಾಹಶ್ಚ...'' ಎಂಬ ಶ್ಲೋಕವಿದೆ. ಹತ್ತವತಾರಾ ಗೋವಿಂದಾ ಎಂಬ ಪದ್ಯವಿದೆ. ದಶಾವತಾರ ಕೋಲಾಟ ಮತ್ತು ದಶಾವತಾರ ಸಂವಾದ ಎಂಬ ಪದ್ಯಗಳಿವೆ. ಅವುಗಳಿಂದಾಗಿ ಈ ಹೆಸರು ಬಂದಿದೆ. (ದಿ। ಕುಕ್ಕಿಲ ಕೃಷ್ಣ ಭಟ್ಟರು ನೀಡಿದ ಮಾಹಿತಿ : 1985)

– ಒಂದು ಹಂತದಲ್ಲಿ ದಶಾವತಾರಗಳನ್ನು ತೋರಿಸುವುದೇ ಪ್ರಧಾನವಾಗಿದ್ದ ಆಟವು (ಬಹುರೂಪಿ ಆಟದಂತೆ) ಚಿಕ್ಕರಂಗಭೂಮಿಯಾಗಿದ್ದು, ಅದರಿಂದ ಅನಂತರದ ಬಯಲಾಟಗಳು ವಿಕಾಸಗೊಂಡು, ಹೆಸರು ದಶಾವತಾರವೆಂದೇ ಉಳಿದಿರಲೂಬಹುದು.

ದಶಾವತಾರ ಕೋಲಾಟ : ಸಭಾಲಕ್ಷಣದಲ್ಲಿ ಬರುವ ಒಂದು ದೃಶ್ಯ ಮತ್ತು ಅದಕ್ಕೆ ಸಂಬಂಧಿಸಿದ ಪದ್ಯಗಳು. ಕೋಲು। ಕೋಲನ್ನಿರೇ... ಎಂದು ಆರಂಭವಾಗುವ ತುಂಡು ಪದಗಳನ್ನು ಬಳಸುತ್ತಿದ್ದರು.

ದಶಾವತಾರ ಮುದ್ರೆ/ದಶಾವತಾರ ತೋರಿಸುವುದು : ದಶಾವತಾರಗಳನ್ನು ವ್ಯಂಜಿಸುವ ಹಸ್ತಮುದ್ರೆಗಳು ಮತ್ತು ಆಂಗಿಕ ಅಭಿನಯ. ಹನುಮಂತನ ಪ್ರವೇಶ ನೃತ್ಯದಲ್ಲಿ ಬಳಕೆಯಿದೆ.

ದಶಾವತಾರ ಮೇಳ = ನೋಡಿ : ಮೇಳ, ಆಟದ ಮೇಳ, ಯಕ್ಷಗಾನದ ಮೇಳ.

ದಶಾವತಾರ ಸಂವಾದ : ಪೂರ್ವರಂಗ (ಸಭಾಲಕ್ಷಣ)ದ ಒಂದು ಭಾಗ. ಪ್ರಶ್ನೋತ್ತರ ರೂಪದ ಪದ್ಯಗಳು ಮತ್ತು ಅದರ ನೃತ್ಯ, ಒಟ್ಟು ಇಪ್ಪತ್ತಮೂರು ಪದ್ಯಗಳಿವೆ..

''ಗಳಿಗೆಗೊಂದು ರೂಪಧರಿಸಿ। ಬಂದು। ಪರಿಹರಿಸುವ, ತಾಪ।... ಅಕ್ಕ ನೋಡಿವನ್ಯಾವನೆ.'' ಎಂದು ಮುಂತಾಗಿ ಪ್ರಶ್ನೆ. ಅದಕ್ಕೆ ಉತ್ತರ. ಪುನಃ ಪ್ರಶ್ನೆ – ಹೀಗಿವೆ. ಇದಕ್ಕೆ ಸ್ತ್ರೀವೇಷಗಳ ನರ್ತನ ಜರಗುತ್ತದೆ. ಇದು ಲುಪ್ತವಾಗಿ ಐವತ್ತು ವರ್ಷಗಳಾಗಿರಬಹುದು.

ದಶಾವತಾರಿ[1] : ಆಟದವನು, ಯಕ್ಷಗಾನ ಕಲಾವಿದ. ಭಾಗವತ, ಮದ್ದಲೆಗಾರ, ವೇಷಧಾರಿ. 2. ಯಕ್ಷಗಾನದ ಎಲ್ಲ ಅಂಗಗಳನ್ನು ಬಲ್ಲವನು. ಹಿಮ್ಮೇಳ, ಮುಮ್ಮೇಳಗಳೆರಡರ ಯಾವುದೇ ವಿಭಾಗವನ್ನು ಅಗತ್ಯವಿದ್ದರೆ, ವಹಿಸಿಕೊಳ್ಳಬಲ್ಲ ಸಮರ್ಥ.

ದಶಾವತಾರಿ[2] (-ಖೇಳ/-ಕಲಾ) : ಗೋವಾ ಪ್ರದೇಶದಲ್ಲಿರುವ ಒಂದು ಬಯಲಾಟ ಪ್ರಭೇದ. ಕಾರವಾರದಿಂದ ಉತ್ತರಕ್ಕೆ, ಗೋವಾದಲ್ಲೂ, ಅದಕ್ಕಿಂತ ಉತ್ತರದ ಸಾವಂತವಾಡಿ ಪ್ರದೇಶದಲ್ಲೂ ಪ್ರಚಲಿತವಿದೆ. ಮರಾಠಿ ಮತ್ತು ಕೊಂಕಣಿ ಭಾಷೆಗಳಲ್ಲಿ ಇದೆ. ಇದನ್ನು, ನಮ್ಮ ಯಕ್ಷಗಾನದ ಬಡಗುತಿಟ್ಟಿನ (ಉ. ಕನ್ನಡ ತಿಟ್ಟು ಸಹಿತ) ರೂಪಾಂತರವೆನ್ನಬಹುದು. ಇದರ ಹಿಮ್ಮೇಳ, ಮಾತು, ರಂಗತಂತ್ರಗಳು ಯಕ್ಷಗಾನದಂತೆಯೇ ಇದ್ದು, ಸು. 1940ರ ವರೆಗೆ, ವೇಷಗಳು ಯಕ್ಷಗಾನ ವೇಷಗಳನ್ನು ತದ್ವತ್ತಾಗಿ ಹೋಲುತ್ತಿದ್ದುವು. ಈಗ ಇದರ ವೇಷಗಳು ಮರಾಠಿಯ ಅರ್ವಾಚೀನ ಪೌರಾಣಿಕ ನಾಟಕದ ವೇಷಗಳಾಗಿದ್ದು, ನೃತ್ಯವು ಬಹು ಅಂಶ ಲುಪ್ತವಾಗಿ ಹೋಗಿದೆ. ಸಂಗೀತವೂ ಮರಾಠಿ 'ನಾಟ್ಯ ಸಂಗೀತ'ದಂತಿದೆ. ಹಿಂದೆ ವೇಷ, ಸಂಗೀತ ಶೈಲಿಗಳು ಕನ್ನಡ ಯಕ್ಷಗಾನ ರಂಗದ ಪಡಿಯಚ್ಚಿನಂತಿದ್ದುವು. (ಕಾರವಾರದ ಬಾಬಾ ಕರ್ವೆ ಹರಿದಾಸ ಇವರು ನೀಡಿದ ಮಾಹಿತಿ)

ದಸ್ತು : 1. ತಾಳದ ತತ್ಕಾರ, ಮೂಲ ರೂಪ. ತಾಳಗಳ ಅಭ್ಯಾಸದ ಮೂಲ ಪೆಟ್ಟುಗಳು.

2. ತಾಳದ ಆವರ್ತನ.

3. ತಾಳದ ಆರಂಭದ ಪೆಟ್ಟು, ವಿಶೇಷತಃ ಪ್ರವೇಶ ನೃತ್ಯದಲ್ಲಿ ಸಭೆಯ ಮುಂದೆ ಬಂದು ಕಾಲು ಇಡುವ, ಪೆಟ್ಟು. ದಸ್ತುಪೆಟ್ಟು.

ದಸ್ತುಪೆಟ್ಟು : ನೋಡಿ : ದಸ್ತು, ದಸ್ತುಕೊಡುವುದು.

ದಸ್ತು ಕೊಡುವುದು (-ಮೆಟ್ಟುವುದು) (ತೆ.) : ಪ್ರವೇಶ ನೃತ್ಯವಾದ 'ಧಿಗಣ'ದಲ್ಲಿ ವೇಷವು, ರಂಗದ ಬಾಗಿಲಿನಿಂದ ಕುಣಿಯುತ್ತ ಮುಂಬದಿಗೆ ಬಂದು, ಒಂದು ಹೆಜ್ಜೆ ಮೆಟ್ಟಬೇಕು. ಇದೇ ದಸ್ತು ಮೆಟ್ಟುವಿಕೆ. ಇದಕ್ಕೂ, ಇದಕ್ಕೆ ಸರಿಯಾಗಿ ಹಿಮ್ಮೇಳದಲ್ಲಿ ಬಾರಿಸುವ ಪೆಟ್ಟಿಗೂ ದಸ್ತು ಕೊಡುವುದು ಎಂದು ಹೆಸರಿದೆ.

ಈ ದಸ್ತು ಮೆಟ್ಟಿ ಆದ ಕೂಡಲೇ, ಅಂದರೆ ಮುಂದಿನ ಪೆಟ್ಟಿಗೆ ವೇಷವು ಎಡಕ್ಕೆ ಸ್ವಲ್ಪ ತಿರುಗಿ ರಂಗದ ಇನ್ನೊಂದು ಭಾಗದಿಂದ ಕುಣಿಯುತ್ತ ಸುತ್ತು ಬರಲು ಆರಂಭಿಸಬೇಕು.

ದಸ್ತು ಮೆಟ್ಟುವುದು = ನೋಡಿ : ದಸ್ತು ಕೊಡುವುದು.

ದಸ್ತೆ (ಬ.) : ತಾಳದಸ್ತೆ. ತಾಳಗಳಿಗೆ ಸಂಬಂಧಿಸಿ ಇರುವ ತತ್ಕಾರಗಳು. ಬಾಯಿತಾಳ ವಿಶೇಷತಃ ಅಭ್ಯಾಸದ ಮೂಲ ಬಾಯಿತಾಳಗಳು.

ದಾನಾವರ್ತ (ತೆ.) : ದಾನ + ಆವರ್ತ. ಸಂಭಾವನೆ ತಿರುಗಾಟ. ಬಡಗಿನಲ್ಲಿ ಚಿಕ್ಕಮೇಳ.

ಮಳೆಗಾಲದಲ್ಲಿ, ಒಬ್ಬ ಭಾಗವತ, ಮದ್ದಲೆಗಾರ, ಶ್ರುತಿವಾದಕ, ಒಂದು ಪುರುಷವೇಷ ಒಂದು ಸ್ತ್ರೀವೇಷ ಇವರ ಚಿಕ್ಕ ತಂಡವು ಮನೆ ಮನೆಗೆ ಹೋಗಿ, ಕುಣಿಯುತ್ತಾರೆ (ಈ ವೇಷಗಳಿಗೆ ರಾಧಾಕೃಷ್ಣ ವೇಷವೆಂದು ಹೆಸರು). ಯಾವುದಾದರೊಂದು ಸಂವಾದದ (ಉದಾ: ಕೃಷ್ಣ – ಸತ್ಯಭಾಮೆ, ಕೃಷ್ಣ – ರುಕ್ಮಿಣಿ ಇತ್ಯಾದಿ) ಸಂದರ್ಭವನ್ನು ಹಾಡಿ ಕುಣಿಸುವುದು ಸಂಪ್ರದಾಯ.

ದಾರಿ : 1. ಪ್ರದರ್ಶನದ ಸಾಂಪ್ರದಾಯಿಕ ನಡೆ, ಸಿದ್ಧವಾದ ಪ್ರದರ್ಶನ ರೀತಿ. ಒಂದು ಪ್ರಸಂಗ ಅಥವಾ ಸನ್ನಿವೇಶವು ರಂಗದಲ್ಲಿ ಪ್ರದರ್ಶಿತವಾಗುವ, ಸ್ಥೂಲವಾದ ಕ್ರಮ. ಇದರಲ್ಲಿ, ಹಿಮ್ಮೇಳದ ತಾಳ, ಭಾವಗಳು, ನೃತ್ಯ, ನಿಲುಗಡೆಗಳೂ, ಮಾತುಗಾರಿಕೆಯ ರೂಪರೇಖೆ ಸೇರಿರುತ್ತವೆ. Performance convention and usual choreography.

2. ಮೇಳವು, ತಿರುಗಾಟದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವ ದಾರಿ. ನೋಡಿ: ದಾರಿಸೊಪ್ಪು.

ದಾರಿ ಸೊಪ್ಪು : ದಾರಿಗುರುತಿಗೆ ಸೊಪ್ಪು ಹಾಕುವುದು. ಗುರುತುಸೊಪ್ಪು. ಕಾಲು ನಡಿಗೆ ಕಾಲದಲ್ಲಿ ಮೇಳವು ಒಂದು ಕ್ಯಾಂಪಿನಿಂದ ಇನ್ನೊಂದಕ್ಕೆ ಹೋಗುವಾಗ, ಮೊದಲಾಗಿ ಹೊರಟು ಹೋಗುವ ಅಡುಗೆಯವರು ಮತ್ತು ಅಡ್ಡಹೊರೆಯವರು ಅಲ್ಲಲ್ಲಿ, ಕವಲು ದಾರಿಗಳಲ್ಲಿ ಹಸಿ ಸೊಪ್ಪು ಹಾಕುತ್ತ ಹೋಗಬೇಕು. ಮೇಳದವರಿಗೆ ಇದು ದಾರಿಗುರುತು. ಈಗ ಈ ಕ್ರಮವಿಲ್ಲ.

ದಾರಿ ಹೇಳುವುದು : ಭಾಗವತನು ಅಥವಾ ಅನುಭವಿಯಾದ ಹಿರಿಯ ವೇಷಧಾರಿಯು, ಪಾತ್ರದ, ಪ್ರಸಂಗದ, ಸನ್ನಿವೇಶದ ನಡೆ, ರಂಗ ಸಂಪ್ರದಾಯಗಳನ್ನು ತಿಳಿಸಿಕೊಡುವುದು. ಸಾಂಪ್ರದಾಯಿಕ ರಂಗಶಿಕ್ಷಣದ ಒಂದು ಅಂಶ.

ದಾಸಯ್ಯ ಹಾಸ್ಯ (ತೆ.) : ಪೂರ್ವರಂಗದ ಕಟ್ಟು ಹಾಸ್ಯಗಳಲ್ಲೊಂದು. ಮುಂಡಾಸು, ಬಿಳಿನಾಮ, ಕಚ್ಚೆ, ದಗಲೆ ತೊಟ್ಟು, ಶಂಖ ಜಾಗಟೆ ಹಿಡಿದ ದಾಸರ ವೇಷ. ದಾಸರ, ಪ್ರಾಯಃ 'ತಿರುಪತಿ ದಾಸರ' ಅಣಕ.

ದಾಸ್ತಾನು ಪೆಟ್ಟಿಗೆ : ಹಣ ಮತ್ತು ಅಡುಗೆ ಸಾಮಗ್ರಿ ಇಡುವ ಪೆಟ್ಟಿಗೆ ಅಥವಾ ಗಂಟು. ಮೇಳದಲ್ಲಿ ಉಳಿದಿರುವ ಅಡುಗೆ ಸಾಮಾನು ಮತ್ತು ಯಜಮಾನನ ಹಣ, ಕಾಣಿಕೆ ಡಬ್ಬಿ – ಇವು ಇದರಲ್ಲಿರುತ್ತವೆ. ಇದನ್ನು ದೇವರ ಪೆಟ್ಟಿಗೆಯ ಒಳಗೆ ಇಡುವರು.

ದಿಗಿಣ[1] : ಈ ಬಡಿತವನ್ನು ಯುದ್ಧ ನೃತ್ಯಕ್ಕೂ, ನಿರ್ಗಮನ ನೃತ್ಯಕ್ಕೂ ಬಳಸುತ್ತಾರೆ. ಮೊದಲು 'ಧಿತ್ತ' ಎಂಬ ಚಿಕ್ಕ ಬಡಿತವನ್ನು ಬಾರಿಸಿ, ಅನಂತರ ದಿಗಿಣವನ್ನು ಬಾರಿಸುವ ಕ್ರಮವೂ ಇದೆ. ನೇರವಾಗಿ ಇದನ್ನು ಮಾತ್ರ ಬಾರಿಸುವುದೂ ಇದೆ.

ದಿಗಿಣ[2] /ದೀಂಗಿಣ/ಧೀಂಗಣ : ವೇಷಗಳ ಪ್ರವೇಶ ನೃತ್ಯ ಮತ್ತು ಅದರ ಬಡಿತ. ದೀಂಗಿಣ ಕುಣಿತ, ಬಡಿತ.

ದಿಗಿಣದಲ್ಲಿ (ಧೀಂಗಿಣದಲ್ಲಿ) ಬರುವುದು : ಧೀಂಗಣ ಪ್ರವೇಶ. ಬೇರೆ ತರಹದ ಪ್ರವೇಶ ಇದ್ದರೂ, ಈ ಸಂದರ್ಭಕ್ಕೆ ಇಲ್ಲ ಎಂದೂ ಅರ್ಥ. ಉದಾ: ''ಅರ್ಜುನ ಇವತ್ತು ಧೀಂಗಿಣದಲ್ಲೆ ಬರುವುದು'' (ಸಭಾಕಲಾಸು ಇಲ್ಲ ಎಂದು ಅರ್ಥ). ಏಕತಾಳ ನಡೆ:

(ಬ) : ತೈ ತೈ। ತದ್ಧಿನ। ಧೇಂ...
ತೈತೈತೈತೈ। ತೈ। ತೈತತಾಂ...
– ಎಂದು ಆರಂಭ

(ತೆ) : ತಾಂ। ತಾಂತಧಿನ್ನ। ತಾಂ...
ದಿದ್ಧಿನ। ಧಿದ್ಧಿನ। ದಿದ್ಧಿನ।ತಾಂ...
– ಎಂದು ಆರಂಭ

ದಿತ್ತ = ನೋಡಿ : ಧಿತ್ತ.

ದಿನ ಸಂಬಳ : ಕಲಾವಿದನ ಸಂಬಳದ ಒಂದು ಕ್ರಮ. ತಿರುಗಾಟವೊಂದಕ್ಕೆ ಒಟ್ಟಾಗಿ ಸಂಬಳ ನಿರ್ಧರಿಸುವ ಬದಲು, ದಿನವೊಂದಕ್ಕೆ ಇಂತಿಷ್ಟೆಂದು ನಿರ್ಣಯಿಸಿ ಪ್ರತಿದಿನವೂ ಸಂಬಳ ಕೊಡುವುದು. ಇದು ಕೆಲವು ಕಲಾವಿದರು ಮಾಡಿಕೊಳ್ಳುವ ಒಪ್ಪಂದ.

ದಿಬ್ಬಣ : ದಿಬ್ಬಣ ಬರುವ ಮತ್ತು ಮದುವೆ ಮಂಟಪದಲ್ಲಿ ಉಪಚಾರಗೊಳ್ಳುವ ದೃಶ್ಯ. ಹಾಸ್ಯಪ್ರಧಾನವಾಗಿದ್ದು ದಿಬ್ಬಣ ಹಾಸ್ಯ ಇರುತ್ತದೆ.

ದಿಬ್ಬಣ ಹಾಸ್ಯ : ದಿಬ್ಬಣ ದೃಶ್ಯದಲ್ಲಿ, ದಿಬ್ಬಣವನ್ನು ಬರಮಾಡಿಕೊಂಡು, ಆತಿಥ್ಯ ಮಾಡುವ ರಾಜನ ಪರವಾಗಿ ದೂತನ ಹಾಸ್ಯ. **ಸುದರಿಕೆ ಹಾಸ್ಯ.**

ದೀಂಗಿಣ = ನೋಡಿ : ದಿಗಿಣ.

ದೀಪ : 1. ಚೌಕಿಯಲ್ಲಿ ಇಡುವ ದೊಡ್ಡ ಕಾಲುದೀಪ.
2. ದೇವರ ಮುಂದೆ ಇಡುವ ಕಾಲುದೀಪ.
3. ರಂಗಸ್ಥಳಕ್ಕೆ ಹಿಮ್ಮೇಳದ ಜತೆ, ದೇವರೊಂದಿಗೆ ಕೊಂಡೊಯ್ಯುವ ಕೈದೀಪ.

ದೀವಟಿಗೆ : ಪಂಜು. ಲೋಹದ ದಂಡ ಮತ್ತು ಹಿಡಿಗೆ ಬಟ್ಟೆ ಸುತ್ತಿ, ಎಣ್ಣೆಹೊಯ್ದು ಉರಿಸುವ ಪಂಜು. ಮರದಿಂದಲೂ ತಯಾರಿಸುವುದುಂಟು. ದೀವಟಿಗೆ ಧರಿಸುವವನಿಗೆ ಬಿಸಿ ತಾಗದಂತೆ, ಹಸಿ ಬಾಳೆ ಹಂಬೆ (ಬಾಳೆದಿಂಡಿನ ಹೊರಸಿಪ್ಪೆ)ಯನ್ನು ಸುತ್ತುವರು.

ಗ್ಯಾಸ್ ಲೈಟುಗಳು, ವಿದ್ಯುತ್ತು ಬರುವ ಮೊದಲು ರಂಗಕ್ಕೆ ದೀವಟಿಗೆಯದೆ ಬೆಳಕು. ಈಗ ದೀವಟಿಗೆಯನ್ನು, ಬಣ್ಣದ ವೇಷದ ಪ್ರವೇಶದ ಹೊತ್ತಿಗೆ, ರಾಳ ಚೆಲ್ಲಲು ಮಾತ್ರ ಹಿಡಿಯುವರು.

ದೀವಟಿಗೆಯವ(ರು) : ರಂಗದಲ್ಲಿ ದೀವಟಿಗೆ ಹಿಡಿಯುವ ಸಿಬ್ಬಂದಿಗಳಿಬ್ಬರು. ದೀವಟಿಗೆ ಸಾಗಾಟ, ಅದರ ತಯಾರಿ, ಎಣ್ಣೆ ವ್ಯವಸ್ಥೆ ಇವರ ಜವಾಬ್ದಾರಿ. (ಅನಂತರ, ಗ್ಯಾಸ್ ದೀಪಗಳು ಬಂದಾಗ ಈತ 'ಲೈಟಿನವ'ನಾದ) ದೀವಟಿಗೆಯವನೆಂಬ ಸಿಬ್ಬಂದಿಯು ಮೂಲತಃ ಹೆಚ್ಚುವರಿ ಸಿಬ್ಬಂದಿ. ಮೇಳದ ಜನವಲ್ಲ. ಆಯಾ ಸ್ಥಳಗಳಲ್ಲಿ ನೇಮಿಸಿಕೊಳ್ಳುವ ಕ್ರಮವಿದ್ದಿತು. ಕ್ರಮೇಣ ಮೇಳದ ಜನವೇ ಆದಾಗಲೂ ಆತನಿಗೆ ಆಟ ಆಡಿಸುವವರು ಹೆಚ್ಚುವರಿ ಸಂಬಳ ಕೊಡಬೇಕಿತ್ತು.

ದುಗ್ಗುಳ/ಗುಗ್ಗುಳ (ಗ.) : ಗುಗ್ಗುಳ. ರಾಳದ ಹುಡಿ. ರಾಕ್ಷಸರ ಪ್ರವೇಶದಲ್ಲಿ ಪಂಜಿಗೆ ಗುಗ್ಗುಳ ಹಾರಿಸುವರು. 'ದುಗ್ಗುಳ ಹಾಕುವುದು' ಎಂದು ಇದಕ್ಕೆ ಹೆಸರು.

ದುಡುಕು (ಬ./ಉ.) = ನೋಡಿ : ತ್ವರಿತ, ತುರಿತ, ಉದಾ: ದುಡುಕು ಅಷ್ಟತಾಳ.

ದೂತ : ಹಾಸ್ಯಗಾರನ ಹಲವು ಪಾತ್ರಗಳು. ಚಾರಕ ವೇಷ. ಯುದ್ಧ ದೂತ, ಹೊಗಳಿಕೆ ದೂತ. ಡಂಗುರ ದೂತ, ಸುದರಿಕೆ ದೂತ, ಗೂಢಚಾರಕ, (ಬೇಹಿನ ಚರರು), ಸಂದೇಶ ವಾಹಕ, ಓಲೆದೂತ, ಬಾಗಿಲ ದೂತ ಇತ್ಯಾದಿ.

ದೂತಿ : ದೂತಿ ಅಥವಾ ದೂತನ ಹೆಂಡತಿ. ಎರಡನೆಯ ಸ್ತ್ರೀ ವೇಷಧಾರಿ (ಸಖಿ)ಯ ಪಾತ್ರ.

ದೇವದೂತ : ಸ್ವರ್ಗದ ದೂತ. ಸ್ವರ್ಗಲೋಕದ ಬಾಗಿಲು ಕಾಯುವ ದೂತ. ಹಾಸ್ಯ ಪಾತ್ರವಾದರೂ ಈತನ ಮುಖವರ್ಣಿಕೆ, ವೇಷಗಳು ವಿಕಾರ ವಾಗಿರದೆ, ಅಚ್ಚುಕಟ್ಟಾಗಿ ಇರಬೇಕೆಂಬುದು ನಿಯಮ.

ದೇವರ ಅಪ್ಪಣೆ : ಚೌಕಿಯಲ್ಲಿ ಪೂಜೆ ಮುಗಿಸಿ, ವಾದ್ಯಗಳಿಗೆ ಕುಂಕುಮ, ಅಕ್ಷತೆ ಹಾಕಿ ಆರತಿ ಬೆಳಗಿದ ಮೇಲೆ, ಭಾಗವತ "ರಂಗಸ್ಥಳಕ್ಕೆ **ಅಪ್ಪಣೆಯೆ ?**" ಎಂದು ಕೇಳಬೇಕು. ಆಗ ಆರತಿ ಹಿಡಿದವನು "ದೇವರ **ಅಪ್ಪಣೆ**" ಎನ್ನುತ್ತಾನೆ. ಹಾಗೆಯೇ ಆಟ ಮುಗಿದು ಚೌಕಿಗೂ, ಬಿಡಾರಕ್ಕೂ ಹೋಗಲು ಅಪ್ಪಣೆ ಕೇಳಿದಾಗಲೂ "ದೇವರ **ಅಪ್ಪಣೆ**" ಆಗಬೇಕು.

ದೇವರ ಕಿರೀಟ : ಚೌಕಿಯಲ್ಲಿ ದೇವರ ಪೂಜೆಗೆ ಇರಿಸುವ ಕಿರೀಟಗಳು. ಕಿರೀಟಗಳೇ ದೇವರು ಎಂದು ಭಾವ. (ಹಿಂದೆ, ಪ್ರತ್ಯೇಕ ಮೂರ್ತಿ, ಚಿತ್ರ ಇರಿಸುತ್ತಿರಲಿಲ್ಲ. ಈಗ ಇಡುತ್ತಾರೆ).

ಗಣಪತಿ ಕಿರೀಟ, ರಾಮಲಕ್ಷ್ಮಣ ಕಿರೀಟ— ಇವುಗಳನ್ನು ಪೂಜಾನಂತರ ವೇಷಕ್ಕೆ ಧರಿಸುತ್ತಿದ್ದರು. ಈಗ ಹೆಚ್ಚಾಗಿ ಅವುಗಳನ್ನು ಧರಿಸುವ ಕ್ರಮವಿಲ್ಲ.

ದೇವರ ಚೌಕಿ : ಬಣ್ಣದ ಮನೆಯ, ಅಗ್ರಭಾಗ; ಶಿರೋಭಾಗ. ಇಲ್ಲಿ ಪೆಟ್ಟಿಗೆಯ ಮುಚ್ಚಳವನ್ನು ಬೋರಲಾಗಿಟ್ಟು (ಈಗ ಮಂಟಪ ಇದೆ) ದೇವರ ಕಿರೀಟ, ಹೂ, ಹಣ್ಣುಕಾಯಿ ಇಡುವರು. ದೇವರ ಚೌಕಿಯ ಎಡಬಲಗಳಲ್ಲಿ ವೇಷಧಾರಿಗಳು ಸಾಲಾಗಿ ಕುಳಿತುಕೊಳ್ಳುವರು. ದೇವರ ಚೌಕಿಗೆ ಇದಿರಾಗಿ ಹಾಸ್ಯಗಾರನ ಅಡ್ಡಚೌಕಿ ಇರುವುದು.

ದೇವರ ಪೂಜೆ : 1. ಚೌಕಿಯಲ್ಲಿ ರಾತ್ರಿ, ಪೂರ್ವರಂಗದ ಆರಂಭಕ್ಕೆ ಮೊದಲು ಜರಗುವ **ಗಣಪತಿ ಪೂಜೆ ಅರ್ಥಾತ್ ಚೌಕಿಪೂಜೆ.**

ಹಿಮ್ಮೇಳದವರು ಹಾಸ್ಯಗಾರನ ಚೌಕಿಯ ಹಿಂದೆ ನಿಂತು ಗಣಪತಿ ಸ್ತುತಿ ಹಾಡುವರು. ಈ ಸಂದರ್ಭಕ್ಕೆ ಹೆಚ್ಚಾಗಿ– "ಗಜಮುಖದವಗೆ। ಗಣಪಗೆ..." ಎಂಬ ಸೌರಾಷ್ಟ್ರ ರಾಗ, ತ್ರಿವುಡೆ ತಾಳದ ಪದ್ಯವನ್ನು ಅಥವಾ "ಮುದದಿಂದ ನಿನ್ನ ಕೊಂಡಾಡುವೆನು। ಅನವರತ। ಮದವೂರ ವಿಘ್ನೇಶ" ಎಂಬ ನಾಟಿರಾಗ, ಝಂಪೆ ತಾಳದ ಪದ್ಯವನ್ನು ಹಾಡುವುದು ಸಂಪ್ರದಾಯ. ಆಗ ವೇಷಧಾರಿಗಳಲ್ಲೊಬ್ಬನು ದೇವರಿಗೆ (ಅಂದರೆ ಕಿರೀಟಗಳಿಗೆ) ಕಾಯಿ ಒಡೆದು, ಆರತಿ ಬೆಳಗಿ ಹಿಮ್ಮೇಳದವರಿಗೆ ತೋರಿಸಿ, ವಾದ್ಯಗಳಿಗೆ ಪ್ರಸಾದಹಚ್ಚಿ 'ರಂಗಸ್ಥಳಕ್ಕೆ ಅಪ್ಪಣೆ' ಕೊಡುವನು. ಹಿಂದೆ ಎಲ್ಲ ಮೇಳಗಳಲ್ಲೂ ಹೀಗಿತ್ತು. ಈಗ ಕೆಲವು ಮೇಳಗಳಲ್ಲಿ ಅರ್ಚಕರಿರುವುದರಿಂದ ಅವರೇ ಆರತಿ ಮಾಡುತ್ತಾರೆ.

2. ರಂಗಸ್ಥಳದಲ್ಲಿ ಜರಗುವ ಗಣಪತಿ ಪೂಜೆ. ಸಭಾಲಕ್ಷಣದಲ್ಲಿ ಬರುವ ದೃಶ್ಯ. ಬಾಲಗೋಪಾಲರು (ಈಗ ಕೆಲವು ಮೇಳಗಳಲ್ಲಿ ಅರ್ಚಕರು ಸಹ) ಗಣಪತಿ ಕಿರೀಟವನ್ನು ತಂದು ಪೀಠದಲ್ಲಿ ಇರಿಸುವರು. "ನೆನೆಯಿರೊ। ಜನರೆಲ್ಲ। ಗುಣಯುತನ। ಘನಮೂರ್ತಿ। ಮದವೂರ। ಗಣನಾಥನ।" ಎಂದು ಆರಂಭವಾಗುವ ಮೂರು ಪದ್ಯಗಳಿಗೂ, "ಗಜಮುಖ। ನಾನಿನ್ನ। ಪಾದವ ನೆನೆವೆ॥" ಎಂದು ಆರಂಭವಾಗುವ ಐದು ಪದ್ಯಗಳಿಗೂ ಬಾಲಗೋಪಾಲರೂ, ಕೋಡಂಗಿಗಳೂ ಕುಣಿದು, ಭಾಗವತ–ಕೋಡಂಗಿಯರ ಹಾಸ್ಯ ಸಂವಾದ ವಾಗುವುದು. ಈ ಸಂವಾದದಲ್ಲಿ ಗಣಪತಿಯ ಪೂಜೆಯ ವಿಚಾರವಿರುವುದು. ಅನಂತರ **ಗಣಪತಿ ಕೌತುಕ** ಕುಣಿತವಾಗಿ– " ಗಣಪತಿ ಸಭೆಗೇಳ್ತಂದಂ। ವೇದ ನಾಯಕಂಗಾಣೆ" – ಎಂಬ ಹಾಡು ಹಾಡಿ, ಪೂಜೆ ಕೊನೆಗೊಳ್ಳುವುದು.

3. ವಿಶೇಷ ಪೂಜೆ. ಮೇಳ ಆರಂಭದ ದಿನ ದೇವಾಲಯದಲ್ಲೂ, ತಿರುಗಾಟದಲ್ಲಿ ಮೇಳದ ಬಿಡಾರದಲ್ಲಿ ಅಮಾವಾಸ್ಯೆ, ಸಂಕ್ರಾಂತಿಗಳಂದೂ ಮಧ್ಯಾಹ್ನ ಪೂಜೆ ಜರಗಬೇಕು. ಕೆಲವು ಮೇಳಗಳಲ್ಲಿ ಮಧ್ಯಾಹ್ನ ನಿತ್ಯಪೂಜೆ ಇದೆ. ಇದು ಪ್ರಾಯಃ ಇತ್ತೀಚೆಗೆ ಬಳಕೆಗೆ ಬಂದ ಕ್ರಮ.

ದೇವರ ಪೆಟ್ಟಿಗೆ / ಗಣಪತಿ ಪೆಟ್ಟಿಗೆ (ಬ) : ಮೇಳದ ಪೆಟ್ಟಿಗೆಗಳಲ್ಲಿ ಒಂದು. ಮೊದಲ ಪೆಟ್ಟಿಗೆ. ಇದರಲ್ಲಿ ದೇವರ ಕಿರೀಟಗಳು (ಅಂದರೆ ದೇವರು) ಮುಖವಾಡಗಳು, ಕಾಣಿಕೆ ಡಬ್ಬಿ, ಚಕ್ರ, ತ್ರಿಶೂಲ, ಪರಶು ಖಡ್ಗ, (ಬಿಲ್ಲು, ಗದೆ ಬಿಟ್ಟು ಉಳಿದ ಆಯುಧಗಳು) ಇರುತ್ತವೆ. ದಾಸ್ತಾನು ಪೆಟ್ಟಿಗೆ (ಉಳಿದ ಸಾಮಗ್ರಿ ಮತ್ತು ಹಣ, ಲೆಕ್ಕದ ಪುಸ್ತಕ) ಇದರೊಳಗೆ ಇರುತ್ತದೆ.

ದೇವರ ಪೆಟ್ಟಿಗೆಯವನು : ದೇವರ ಪೆಟ್ಟಿಗೆ ಹೊರುವವನು. ಬಿಡಾರದಲ್ಲೂ, ಚೌಕಿಯಲ್ಲೂ, ದೇವರ ಪೆಟ್ಟಿಗೆಯನ್ನು ಚೊಕ್ಕವಾದ ಸ್ಥಳದಲ್ಲಿ ಇಡುವುದು, ಸಾಮಗ್ರಿ, ಹಣಗಳ ರಕ್ಷಣೆ, ಕಲಾವಿದರ ಬಟ್ಟೆ ಬರೆ, ಹಣಗಳ ಹೊಣೆ, ಚೌಕಿಯಲ್ಲಿ ದೀಪಗಳನ್ನು ಹಚ್ಚುವುದು, ವೇಷ ಕಟ್ಟಲು ಸಹಕರಿಸುವುದು, ಬಣ್ಣಗಳ ಪೂರೈಕೆಗಳೂ ಇವನ ಕೆಲಸದಲ್ಲಿ ಬರುತ್ತವೆ. ಕೆಲಸಗಾರರ ಪೈಕಿ ಇವನಿಗೆ ಸಂಬಳ ಹೆಚ್ಚು. ಅನುಭವಿ ಕೆಲಸಗಾರನ ಸ್ಥಾನವಿದು.

ದೇವರ ಸಾಮಾನು : 1. ದೇವರ ಪೆಟ್ಟಿಗೆಗೆ ಸಂಬಂಧಿಸಿದ ಸಾಮಗ್ರಿ, ಪೂಜಾ ಸಾಹಿತ್ಯ ಇತ್ಯಾದಿ.

2. ಬಯಲಾಟ ಆಡಿಸುವವನು ಮೇಳಕ್ಕೆ ಕೊಡಬೇಕಾದ ದೇವರ ಸಾಮಗ್ರಿ– ಸ್ವಸ್ತಿಕದ ಅಕ್ಕಿ, ತೆಂಗಿನಕಾಯಿ, ಹೂವು, ಕುಂಕುಮ, ಊದುಬತ್ತಿ, ಎಣ್ಣೆ ಮೊದಲಾದುವುಗಳು.

ದೇವರ ಸೇವೆ : 1. ಮೇಳ ಆರಂಭವಾಗುವ ದಿನದ ಆಟ. ಮೇಳದ ದೇವರ ಸೇವೆ ಆಟ. ಈ ಆಟಕ್ಕೆ ವೀಳ್ಯವಿಲ್ಲ.

2. ಕೆಲವು ವಿಶಿಷ್ಟ ಸ್ಥಳಗಳಲ್ಲಿ, ಅಲ್ಲಿಗೆ ಬರುವ ಎಲ್ಲ ಮೇಳಗಳೂ ಸೇವೆ ಆಡಬೇಕು (ಉದಾ: ಕಟೀಲು, ಧರ್ಮಸ್ಥಳ, ಮಧೂರು, ಕುಂಬಳೆ, ಇಡಗುಂಜಿ, ಕೋಟ ಅಮೃತೇಶ್ವರಿ, ಮಂದಾರ್ತಿ– ಇತ್ಯಾದಿ ಕ್ಷೇತ್ರಗಳು) ಹಿಂದೆ ಇಡಿ ಆಟವನ್ನೆ ಆಡುತ್ತಿದ್ದರು. ಈಗ, ಆ ಊರುಗಳ ಹತ್ತಿರ ಮೇಳ ಬಂದಾಗ, ಸಾಯಂಕಾಲ ಎರಡು ವೇಷ (ರಾಧಾಕೃಷ್ಣ ವೇಷಗಳು), ಹಿಮ್ಮೇಳದವರು ಹೋಗಿ, ದೇವರ ಮುಂದೆ ಸೇವೆ ಪೂರೈಸಿ ಬರುವರು. ಈ ಸೇವೆಗೆ ವೀಳ್ಯವಿದೆ.

3. ಸೇವೆ ಆಟದ ದಿವಸ, ಇತರ ಮೇಳದ ಕಲಾವಿದರು ಸಹ, ತಮ್ಮ ಕಸುಬಿನ ಪ್ರದರ್ಶನದ ಮೂಲಕ ದೇವರ ಸೇವೆ ಮಾಡುವುದು.

ದೇವಿ ಮುಖವಾಡ = ನೋಡಿ : ದೇವೀಮುಖ.

ದೇವೀ ಕಿರೀಟ : ದೇವಿ ಪಾತ್ರವು ಧರಿಸುವ ಕಿರೀಟ. ಉರುಟಾಗಿ, ಟೊಪ್ಪಿಯಂತಿದ್ದು, ಅದಕ್ಕೆ ಶಿಖರವಿರುತ್ತದೆ. ಬಡುಗುತಿಟ್ಟಿನಲ್ಲಿ ಮೀನಾಕ್ಷಿ ಕಿರೀಟವೆಂದರೂ ಇದೇ. ಇದು ಇತ್ತೀಚೆಗೆ ಬಂದ ಬಳಕೆ.

ದೇವೀಮುಖ / ದೇವಿಮುಖವಾಡ : ದೇವೀ ಪಾತ್ರದ ಮುಖವಾಡ. ದೇವಿಯ ವೇಷಕ್ಕೆ, ಹೆಚ್ಚು ಕೆಲಸವಿಲ್ಲದೆ, ಪ್ರತ್ಯಕ್ಷಳಾಗಿ ವರ ಕೊಡುವುದು ಮಾತ್ರ ಇದ್ದಾಗ ಈ ಮುಖವಾಡ ಧರಿಸುತ್ತಿದ್ದರು.

ದೊಂದಿ = ನೋಡಿ : ದೀವಟಿಗೆ.



ದೊಡ್ಡಾಟ



ಮೂಡಲಪಾಯ



ಗಟ್ಟದಕೋರೆ

ದೊಂದಿಯುವ = ನೋಡಿ : **ದೀವಟಿಗೆಯುವ.**

ದೊಡ್ಡ ಎಡ : ಮದ್ದಲೆಯಎಡಭಾಗಕ್ಕೆ ಬಡಿಯುವ ದೊಡ್ಡಪೆಟ್ಟು. ದೊಡ್ಡ 'ಧೀ', ದೊಡ್ಡ 'ಧೀಂ'.

ದೊಡ್ಡತಟ್ಟೆ = ನೋಡಿ : **ದೊಡ್ಡತಡ್ಪೆ.**

ದೊಡ್ಡತಡ್ಪೆ/ದೊಡ್ಡತಟ್ಟೆ : ಬಣ್ಣದ ವೇಷದ ಬಟ್ಟಲು ಕಿರೀಟಗಳಲ್ಲಿ ದೊಡ್ಡ ಆಕಾರದ್ದು. ದೊಡ್ಡ ಕೇಶಾವರಿ.

ದೊಡ್ಡಪಗಡಿ (-ಪೊಗಡೆ) (ತೆ./ಉ.) : ದೊಡ್ಡ ಆಕಾರದ ಪಗಡಿ. ಬಡಗುತಿಟ್ಟಿನ ಮುಂಡಾಸು. ತೆಂಕುತಿಟ್ಟಿನಲ್ಲಿ, ಪಗಡಿಗಳಲ್ಲಿ ಸಣ್ಣಪಗಡಿ, (ಕೇದಗೆ ಮುಂದಲೆ– ಬ.) ದೊಡ್ಡ ಪಗಡಿ ಎಂದು ಎರಡು ವಿಧ. ಉ.ಕ.ದಲ್ಲೂ ಹಾಗೆಯೇ. ದೊಡ್ಡ ಪಗಡಿಯು, ಶಲ್ಯ, ಕೀಚಕ, ಅಕ್ರೂರ, ವಿದುರ ಮೊದಲಾದ ವೇಷಗಳಿಗೆ ಕಟ್ಟುವ ಶಿರೋಭೂಷಣ. ತೆಂಕುತಿಟ್ಟಿನಲ್ಲಿ ಹಿಂದೆ ಇದು ಬಡಗುತಿಟ್ಟಿನಂತೆ, ಆಯಾ ದಿನ ಕಟ್ಟಿ ತಯಾರಿಸುತ್ತಿದ್ದುದು. ಈಗ ಕಿರೀಟದಂತೆ, ಸಿದ್ಧ ರಚನೆ. ಪುಂಡುವೇಷಗಳಿಗೆ ಸಣ್ಣಪಗಡಿ ಬಳಕೆ.

ಈಗ ಪಗಡಿಗಳ ಆಕಾರ, ಒಂದೇ ಆಗುತ್ತಿದ್ದು ದೊಡ್ಡ ಪಗಡಿ ಮಾಯವಾಗುತ್ತ ಬಂದಿದೆ.

ದೊಡ್ಡ ಪೆಟ್ಟಿಗೆ = ನೋಡಿ : **ದೇವರ ಪೆಟ್ಟಿಗೆ.**

ದೊಡ್ಡಪೆಟ್ಟು : 1. ಜಾಗಟೆ, ತಾಳಗಳಿಗೂ, ಚೆಂಡೆಗೂ ಬಡಿಯುವ ದೊಡ್ಡಪೆಟ್ಟು, **ಗಟ್ಟಿಪೆಟ್ಟು.** ''ತೊಂ, ಧೀಂ, ತಾಂ.'' – ಇತ್ಯಾದಿ.

2. ತಾಳದ ಘಾತ ಸ್ಥಾನದ ಪೆಟ್ಟು. ಉದಾ :

ಏಕತಾಳ. $\overset{x}{1}$, 2, 3 – ಇಲ್ಲಿ 1 ಎಂಬುದು ದೊಡ್ಡಪೆಟ್ಟು.

ದೊಡ್ಡಪೊಗಡೆ = ನೋಡಿ : **ದೊಡ್ಡಪಗಡಿ.**

ದೊಡ್ಡಮುಂಡಾಸು = ನೋಡಿ : **ಮುಂಡಾಸು** (ಬ.)
ಪೊಗಡೆ (ಉ.)
ದೊಡ್ಡಪಗಡಿ (ತೆ.)

ದೊಡ್ಡಾಟ : ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಒಂದು ಬಯಲಾಟ ಪ್ರಭೇದ. ಮೂಡಲಪಾಯ ಆಟಗಳೊಂದಿಗೆ ನಿಕಟ ಸಾಮ್ಯ ಹೊಂದಿದ್ದು, ಅದರ ಒಂದು ನಾಮಾಂತರವೆನ್ನಬಹುದು.

ಸರಳವೇಷ, ಮಿತವಾದ ಸಂಖ್ಯೆಯ **ಸಣ್ಣಾಟಕ್ಕಿಂತ,** ದೊಡ್ಡದು, ದೊಡ್ಡ ವೇಷಗಳು. ಆಟದ ದೊಡ್ಡರೂಪ ಎಂಬುದರಿಂದ ಈ ಹೆಸರು ಬಂದಿರಬಹುದು.

ಈ ಆಟಗಳ ಪ್ರಸಂಗ, ಹಿಮ್ಮೇಳ, ರಂಗತಂತ್ರಗಳಿಗೂ, ಯಕ್ಷಗಾನ ಆಟಗಳಿಗೂ ಸ್ಥೂಲವಾದ ಸಾಮ್ಯವಿದೆ. ಈ ಪ್ರಕಾರವು ಅಪರಿಷ್ಕೃತವಾಗಿದ್ದು, ಮುಖ್ಯವಾಗಿ ಹವ್ಯಾಸಿ ಸ್ವರೂಪದಲ್ಲಿದೆ.

ದೊರೆ ಕಿರೀಟ : ಹನುಮಂತ, ಜಾಂಬವ ಪಾತ್ರಗಳ ಕಿರೀಟ. ಇಲ್ಲಿ 'ದೊರೆ' ಎಂದರೆ ಪ್ರಾಯಶಃ 'ಬ್ರಿಟಿಷ್ ದೊರೆ'. ಯುರೋಪಿಯನ್ ಸಾಮಾನ್ಯರಿಗೂ ಸಾಹೇಬರು, ದೊರೆಗಳು ಎಂಬ ಪದ ಪ್ರಯೋಗವಿತ್ತು.

ಈ ಕಿರೀಟವು ವಿಶಿಷ್ಟ ರಚನೆಯದಾಗಿದ್ದು, ಸುತ್ತ ಚಾಚಿಕೊಂಡ ಮುಚ್ಚಳದಂತಹ ರಚನೆಗೆ, ಮೇಲೆ ಮೂರು ಸ್ತರಗಳೂ, ತುದಿಗೆ ಶಿಖರವೂ, ಅದರ ಸುತ್ತ ಮತ್ತು ಕೆಳಗಿನ 'ಕ್ಯಾಪ್'ನ ಸುತ್ತ ಅರಳೆಲೆ ಜಾಲರಿಯೂ ಇರುತ್ತವೆ. ಇದರ ರಚನೆ ಯುರೋಪಿನ, ಹಿಂದಣ 'ಹ್ಯಾಟ್' (hat)ಗಳನ್ನು ಹೋಲುತ್ತಿರುವುದರಿಂದ 'ದೊರೆ ಕಿರೀಟ' ಎಂಬ ಹೆಸರಾಗಿರಬೇಕು. ನೋಡಿ: **ಹನುಮಂತನ ಕಿರೀಟ.**

ದೌಲತ್ ಜ್ಯಾದಾ (-ತಾಜಾ / -ತ್ಯಾಗಾ) : ಸಭಾ ಲಕ್ಷಣ ಪ್ರದರ್ಶನ ಸಂದರ್ಭದಲ್ಲಿ ಬಳಕೆಯಿದ್ದ ಒಂದು ರೂಢಿ. ಮುಖ್ಯ ಸ್ತ್ರೀವೇಷ– ಹಾಸ್ಯಗಾರ (ತೆ.) ಅಥವಾ ಸ್ತ್ರೀವೇಷಗಳು ಮಾತ್ರ (ಬ. ಉ.) ಸಭಾಲಕ್ಷಣದ ಸಂಬಂಧಿತ ಕೆಲಸವನ್ನು ಮುಗಿಸಿದ ಬಳಿಕ, ಹಣ ಕೊಟ್ಟವರ ಬಗ್ಗೆ, ಒಂದು ಪದ್ಯಕ್ಕೆ ಕುಣಿದು ''ಶ್ರೀ... ಇಂಥವರಿಗೆ ದೌಲತ್ ಜ್ಯಾದಾ... ಸಬ್‌ಮಾರ್ ದೌಲತ್ ಜ್ಯಾದಾ'' ಎನ್ನಬೇಕು. ಬೇರೊಬ್ಬರ ಹೆಸರಲ್ಲಿ ಹಣ ಕೊಟ್ಟು ದೌಲತ್ ಜ್ಯಾದಾ ಮಾಡಿಸಬಹುದು. ಆಗ, ಅವರು, ಇವರ ಹೆಸರಲ್ಲೂ ಮಾಡಿಸಬೇಕಾಗುತ್ತದೆ. ಹೀಗೆ ಇದು ಬಲು ಹೊತ್ತು ಮುಂದುವರಿಯುತ್ತಿತ್ತು. ಇದಕ್ಕೆ ಸ್ತುತಿಪರ ಅಥವಾ ಶೃಂಗಾರ ಪರವಾದ **ತುಂಡುಪದಗಳನ್ನು** ಹಾಡುತ್ತಿದ್ದರು.

ಉತ್ತರ ಕನ್ನಡದಲ್ಲಿ, ಕಥೆ ಪ್ರಾರಂಭವಾಗಿ, ಮೊದಲ ಒಡ್ಡೋಲಗದಲ್ಲಿ ನೃತ್ಯವನ್ನು ಸೇರಿಸಿ, 'ದೌಲತ್ ಜ್ಯಾದಾ' ಮಾಡಿಸುತ್ತಿದ್ದರು.

– ಈ ಕ್ರಮವು, ಇಲ್ಲಿನ ದೇವದಾಸಿಯರ ಮೇಳದಲ್ಲೂ ಇದ್ದು, ಹಿಂದೆ ಮದುವೆ ಮನೆಗಳಲ್ಲಿ ದೇವದಾಸಿ ನೃತ್ಯ ಏರ್ಪಡಿಸಿದಾಗ 'ದೌಲತ್ ಜ್ಯಾದಾ' ಕ್ರಮವು ಇದ್ದಿತು. ಅಲ್ಲಿಂದಲೇ ಇದು ಬಯಲಾಟಕ್ಕೆ ಬಂದುದಾಗಿದೆ.

ಈ 'ದೌಲತ್ ಜ್ಯಾದಾ'ದಲ್ಲಿ ಸಂಗ್ರಹವಾದ ಹಣವು ಮೇಳದ ಸಂಚಾಲಕನಿಗೆ ಸೇರುತ್ತಿತ್ತು. ಹಿಂದೆ, ವೀಳ್ಯದ ಮೊತ್ತವು ತೀರ ಕಡಿಮೆ ಇದ್ದಾಗ, ಇದು, ಮೇಳದ ಕಸುಬಿಗೆ ದೊಡ್ಡ ಆಧಾರವೂ ಆಗಿತ್ತು. ಇದು ಲುಪ್ತವಾಗಿ ದಶಕಗಳು ಸಂದುವು.

ದ್ರೌಪದಿಯ ಮುಂದಲೆ ಬೊಟ್ಟು: ಹಿಂದೆ ಇದ್ದಿರಬೇಕೆನ್ನಲಾಗುವ ಒಂದು ಆಭರಣ. ದ್ರೌಪದಿಯು, ಸಭಾಪರ್ವದ ಅನಂತರ, ದುಶ್ಶಾಸನ ವಧೆಯ ವರೆಗೆ, ಬಿಡು ಮುಡಿಯ ವೇಷವಾದುದರಿಂದ, ಮುಂದಲೆ ಬೊಟ್ಟನ್ನು ಮಾತ್ರ, ಮುಂದಲೆ ಪಟ್ಟಿ ಮತ್ತು ಬೈತಲೆ ಬಂಗಾರವಿಲ್ಲದೆ, ಕಟ್ಟುವ ಕ್ರಮವಿದ್ದಿರಬೇಕು.

– ಉರುಟಾದ ಹಲ್ಲೆ ಮತ್ತು ಚಿಕ್ಕ ಸರಪಣಿ ಮಾತ್ರ ಇದ್ದ ಆಭರಣ.

ದ್ವಂದ್ವ: 1. ಇಬ್ಬರು ಭಾಗವತರು ಕುಳಿತುಕೊಂಡು, ಪದ್ಯಗಳನ್ನು ಹಂಚಿಕೊಂಡು ಹಾಡುವುದು. ದ್ವಂದ್ವ ಭಾಗವತಿಕೆ. ಪದ್ಯಗಳ ಹಾಡುವಿಕೆ ಪಾತ್ರಾನುಗುಣವಾಗಿ ಅಥವಾ ಪಕ್ಷವಾರು (ಕೌರವ ಪಕ್ಷ ಪಾಂಡವ ಪಕ್ಷ ಇತ್ಯಾದಿ) ಇರಬಹುದು.

2. ಇಬ್ಬರು ಮದ್ದಲೆಗಾರರು ಅಥವಾ ಇಬ್ಬರು ಚೆಂಡೆವಾದಕರು, ಹಿಮ್ಮೇಳದಲ್ಲಿ ಕುಳಿತು ಪರ್ಯಾಯ ಕ್ರಮದಿಂದ, ಒಬ್ಬರ ಬಳಿಕ ಒಬ್ಬರು ಬಾರಿಸುವುದು.

3. ಚೆಂಡೆ, ಮದ್ದಲೆಗಳನ್ನು ಪರ್ಯಾಯ ಕ್ರಮದಿಂದ ಬಾರಿಸುವುದು. ಉದಾ: ಸ್ತ್ರೀವೇಷದ ಕುಣಿತಕ್ಕೆ ಮದ್ದಲೆ, ಪುರುಷ ವೇಷದ ಕುಣಿತಕ್ಕೆ ಚೆಂಡೆ.

4. ದ್ವಂದ್ವ ಕುಣಿತ. ಬಾಯಿತಾಳಗಳಿಗೆ ಒಬ್ಬರು ಒಮ್ಮೆ, ಮತ್ತೊಬ್ಬರು ಒಮ್ಮೆ ಕುಣಿದು (ಉದಾ: ರತಿಮನ್ಮಥ, ಕೃಷ್ಣ-ಭಾಮೆ), ಕೊನೆಗೆ ಒಟ್ಟಿಗೆ ಕುಣಿಯುವುದು.

– ಇವೆಲ್ಲವೂ ಸು. 1970ರ ಅನಂತರ ಬಂದ ಪ್ರಯೋಗಗಳು.

ದ್ವಂದ್ವದಸ್ತು (ಬ.): ಮೇಲೆ ಹೇಳಿದ ದ್ವಂದ್ವ ಕುಣಿತಗಳಿಗೆ ತಯಾರಿಸಿದ ತಾಳ ದಸ್ತುಗಳು. ತತ್ಕಾರಗಳು.

ಧ

ಧನಿ = ನೋಡಿ: ದನಿ.

ಧರ್ಮರಾಯನ ಕಿರೀಟ (ತೆ.): ಸಣ್ಣ ತಡ್ಪೆ ಕಿರೀಟ, ಸಣ್ಣ ಬಟ್ಟಲು ಕಿರೀಟ. ಇದರ ರಚನೆ ದೊಡ್ಡ ಬಟ್ಟಲು ಕಿರೀಟದಂತೆಯೇ ಇದ್ದು ಹಿಂಭಾಗದಲ್ಲಿ 'ಕೇಸರಿ' ಇಳಿಗೂದಲು ಇರುತ್ತದೆ; ಕಿರೀಟದ ಸುತ್ತ ಉಣ್ಣೆಯ ಅಟ್ಟೆ ಇರುವುದಿಲ್ಲ.

ಧರ್ಮರಾಯ, ಸುಗ್ರೀವ, ಮಯೂರಧ್ವಜ ವೇಷಗಳಿಗೆ ಬಳಕೆ.

ಧರ್ಮಾರ್ಥ ಆಟ: ಪ್ರವೇಶಧನವಿಲ್ಲದ ಪ್ರದರ್ಶನ. ಪುಕ್ಕಟೆ ಅಥವಾ ಉಚಿತ ಪ್ರದರ್ಶನ. ಹರಕೆ ಅಥವಾ ವಂತಿಗೆಯ ಬಯಲಾಟ.

ಧಿತ್ತ/ದಿತ್ತ: ಯುದ್ಧ, ಮತ್ತಿತರ ಕೆಲವು ಸಂದರ್ಭಗಳಿಗೆ ಬಾರಿಸುವ ಒಂದು ಚಿಕ್ಕಬಡಿತ. ಏಕತಾಳದ ನಡೆ.

ಧಿತ್ತ। ಧೀಗಡ। ಧೀಗಿಡ। ಧೀಗಿಡ। ಧೀಗಿಡ। ರಗ। ರಗ। ರಗ। ರಗ। – ಎಂಬ ಕೆಲವು ಉರುಳಿಕೆ ಬಾರಿಸಿ, ಮುಕ್ತಾಯ ಬಾರಿಸಬೇಕು. ಅನಂತರ 'ದಿಗಿಣ'ವನ್ನು ಸೇರಿಸಿಕೊಳ್ಳಬಹುದು.

ಛಕ್ಕನೆ ಜರಗುವ ಕ್ರಿಯೆಗಳಿಗೆ (swift action) – ಕೊಲ್ಲುವುದು, ಮಾಯವಾಗುವುದು, ಕ್ಷಿಪ್ರ ನಿರ್ಗಮನ ಮೊದಲಾದುವುಗಳಿಗೆ ಇದನ್ನು ಮಾತ್ರ ಬಾರಿಸಬೇಕು.

ಧಿತ್ತ (ದಿತ್ತ) ಕೊಡುವುದು: 1. ಯುದ್ಧಾರಂಭಕ್ಕೆ ಬೇಕಾದ ಬಡಿತವನ್ನು ಹಿಮ್ಮೇಳದಲ್ಲಿ ಆರಂಭಿಸುವುದು.

2. ಮಾತು ಲಂಬಿಸಿದರೆ, ತಡೆಯಲು ಭಾಗವತರು ಯುದ್ಧ ಕುಣಿತವನ್ನು ಆರಂಭಿಸುವುದು.

ಧಿತ್ತತ್ತ (ಬ.): ಯುದ್ಧ ನೃತ್ಯದ ಒಂದು ಬಗೆ ಹಾಗೂ ಅದಕ್ಕನುಗುಣವಾದ ಬಡಿತ.

ಧೀಂಗಿಣ = 1. ನೋಡಿ: **ದಿಗಿಣ.** 2. ಯುದ್ಧ, ನಿರ್ಗಮನ, ಪ್ರವೇಶ ನೃತ್ಯಗಳ ಬಡಿತದ ಒಂದು ಭಾಗ.

ಧುಪ್ಪಧೂಳು (ಬ.): ಜಾನಪದ ಪ್ರಶಂಸೆ. "ರಂಗಸ್ಥಳ ಧುಪ್ಪಧೂಳು ಮಾಡಿದ". **ಹುಡಿಹಾರಿಸುವುದು** ಎಂದರ್ಥ.

ಧೋಂಕಾರ: ಮದ್ದಲೆಯ ಬಲ ಬದಿಗೆ, ಕರ್ನ ಮತ್ತು ಕಟ್ಟು ಕವಳಗಳ ಎಡೆಗೆ ಬಾರಿಸುವ ದೊಡ್ಡಪೆಟ್ಟು. ಇದಕ್ಕೆ ಪೂರಕವಾಗಿ ಎಡದಲ್ಲೂ ಆಗಲೇ 'ಧೀ' ಬಾರಿಸುವುದಿದೆ.

ನ

ನಂದಿಮುಖ: ಎತ್ತಿನ ಮುಖವಾಡ. ನಂದಿ, ಕಾಮಧೇನು ಮುಂತಾದ ವೇಷಗಳಿಗೆ ಬಳಕೆ.

ನಟನೆ: 1. ಕಥಾಸಂದರ್ಭದಲ್ಲೆ, ನಿಜವಲ್ಲದ್ದು. 'ವಂಚಕ ಅಭಿನಯ'.
2. 'ನಟನೆ ಕೊಡುವುದು'. ಮಾತಿಲ್ಲದ ಚಲನೆ, ಆಂಗಿಕ ಅಭಿನಯ.
3. ನಟನೆ, ಅಭಿನಯಿಸುವಿಕೆ.
4. ವಯ್ಯಾರದ ಅಭಿನಯ.

ನಟನೆ ಕೊಡುವುದು: 1. ಆಂಗಿಕ ಅಭಿನಯ.
2. ಹುಸಿ ನಟನೆ.

ನಡೆ: 1. ತಾಳದ ಗತಿ, ತಾಳನಡೆ.
2. ಕಥೆಯ ನಡೆ, ಅನುಕ್ರಮ.
3. ಪ್ರದರ್ಶನದ ವಿಶಿಷ್ಟ, ಸಾಂಪ್ರದಾಯಿಕ ವಿಧಾನ. ಹಾಡು, ನೃತ್ಯ, ಕ್ರಮಗಳು, ಸೇರಿದ ಒಟ್ಟು ವಿಧಾನ, ಸ್ಥೂಲವಾದ, ಚೌಕಟ್ಟು, ದಾರಿ.

ನಡುಪೆಟ್ಟು: ಮದ್ದಲೆ, ಚೆಂಡೆಗಳಿಗೆ, ನಡುವೆ ಬಾರಿಸುವ ಪೆಟ್ಟು. ಕಟ್ಟುಸ್ವರದ ಪೆಟ್ಟು. ಇದಕ್ಕೆ ವ್ಯತಿರಿಕ್ತವಾದುದು ಕರೆ ಪೆಟ್ಟು.

ನತ್ತು: ಸ್ತ್ರೀಪಾತ್ರದ ಮೂಗಿನ ಆಭರಣ. ಮುತ್ತು, ಮಣಿಗಳ ಗೊಂಚಲು. ಮಿಡಿಯಂತಹ ರಚನೆ. ಬೇಗಡೆಯಿಂದ ತಯಾರಿಸಿದ ನತ್ತೂ ಇರುತ್ತದೆ.

ನಮಸ್ಕಾರ ಹಜ್ಜೆ: ನೋಡಿ: **ಸಲಾಂ ಹಜ್ಜೆ.** ಸಲಾಂ ಕುಣಿತ. ಕುಣಿಯುವಾಗ, ಎಡಕ್ಕೂ, ಬಲಕ್ಕೂ ಬಗ್ಗಿ ಕೈಯನ್ನು ಕೆಳಗಿಂದ, ಮೇಲೆ ಸಲಾಮಿನಂತೆ ತಿರುಗಿಸುತ್ತ ಹಜ್ಜೆ ಹಾಕುವುದು.
ತೆ. ನಾಲ್ಕನೆಯ ಹಜ್ಜೆಯ ಕುಣಿತಗಳಲ್ಲೊಂದು.

ನಮೂನೆವಾರು ಕುಣಿತ: 1. ಒಂದೇ ಪದ್ಯಕ್ಕೆ ಬೇರೆ ಬೇರೆ ರೀತಿಯಲ್ಲಿ ನರ್ತಿಸುವುದು. ಇದು ಪುಂಡುವೇಷ, ಸ್ತ್ರೀವೇಷ, ಹಾಸ್ಯವೇಷಗಳಿಗೆ ಪ್ರಶಸ್ತ.
(ಬ.) 2. **ಚಾಲು ಕುಣಿತ.**

ನಯಾಪೈಸೆ: ಮೇಳದಲ್ಲಿರುವ ಚಿಕ್ಕ ಹುಡುಗರು. ಮೇಳದೊಳಗಿನ ವಿನೋದಪರ ಪದ.

ನವರು (ತೆ.) = ನೋಡಿ: **ಡವರಂಗಿ.**

ನವಿಲುಕಿರೀಟ (ತೆ.): ಇಡಿಯ ನವಿಲುಗರಿಗಳನ್ನು ಸಿಕ್ಕಿಸಿರುವ ಕಿರೀಟ. ಹೆಣ್ಣುಬಣ್ಣದ **ಕುತ್ತರಿ ಕಿರೀಟ.**

ನವಿಲು ಕುಂಚ: (ತೆ.) 1. ಶಿವ, ನಾರದ, ಋಷಿ, ಪಾತ್ರಗಳು ಕೈಯಲ್ಲಿ ಹಿಡಿದುಕೊಳ್ಳುತ್ತಿದ್ದ ನವಿಲು ಗರಿಗಳ ಕಟ್ಟು. – ಜೈನ ಆಚಾರದ ಪ್ರಭಾವ?
(ಉ.) 2. ಕಿರೀಟಗಳಿಗೆ ಸಿಕ್ಕಿಸುವ ನವಿಲುಗರಿ.

ನವಿಲುಗರಿ: ನವಿಲಿನ ಗರಿ. ಕಿರೀಟಗಳ, ಮೇಲ್ಭಾಗದಲ್ಲಿ ಸುತ್ತಲೂ ನಿಲ್ಲುವಂತೆ ಸಿಕ್ಕಿಸಲು, ಬಳಕೆ.
ತೆ. ಋಷಿ, ಶಿವ ವೇಷಗಳ ಕೈಯಲ್ಲಿ ನವಿಲುಗರಿಗಳ ಕಂತೆ ಇರುತ್ತದೆ.

ನವಿಲುಗೊಂಡೆ: ನವಿಲುಗರಿಗಳ ಕುಂಚ ಅಥವಾ ಕಂತೆ.

ನಾಗನೆಳೆ ಸರ: ಸ್ತ್ರೀವೇಷದ ಆಭರಣಗಳಲ್ಲೊಂದು.

ನಾಗರವಂಕಿ: ಸ್ತ್ರೀವೇಷದ ತೋಳಿಗೆ ಕಟ್ಟುವ ವಂಕಿ. ಹೊರಭಾಗದಲ್ಲಿ ನಾಗನ ಹೆಡೆಯ ವಿನ್ಯಾಸ ಇರುತ್ತದೆ.

ನಾಗ್ರಹೆಡೆಸರ: ಸ್ತ್ರೀವೇಷವು ಧರಿಸುವ ಒಂದು ಬಗೆಯ ಸರ. ಇದಕ್ಕೆ ಪದಕಗಳ ಸಾಲಿನಂತೆ, ನಾಗನ ಹೆಡೆಗಳಂತಿರುವ ಬಿಲ್ಲೆಗಳಿರುತ್ತವೆ.

ನಾಟಕವೇಷ = ನೋಡಿ: **ನಾಟಕದ ವೇಷ.**

ನಾಟಕದವೇಷ/ನಾಟಕೀಯವೇಷ/ನಾಟಕವೇಷ: ಯಕ್ಷಗಾನದ ವೇಷ ಶೈಲಿಗಿಂತ ಭಿನ್ನವಾದ, ಸಮಕಾಲೀನ ಪೌರಾಣಿಕ ನಾಟಕಗಳಿಂದ, ಕ್ಯಾಲೆಂಡರ್ ಚಿತ್ರಗಳಿಂದ ಬಂದಿರುವ 'ಜನಪ್ರಿಯ' ವೇಷವಿಧಾನ. ಟೊಪ್ಪಿ ಕಿರೀಟಗಳು, ಸೊಂಟದ ಗಿಡ್ಡನೆರಿ, ಕೋಟುಗಳಂತಿರುವ ಅಂಗಿಗಳು, ತುದಿಗಳಲ್ಲಿ ಮೇಲ್ಮುಖವಾದ ಸುಳಿಗಳಿರುವ ಮೀಸೆಗಳು (ಗಲ್ಲಮೀಸೆ) ವಿವಿಧ ಕಾಲುಪಟ್ಟಿಗಳು, ರುಮಾಲುಗಳು, ಟೋಪನ್ ಕೂದಲುಗಳು, ಕಿರೀಟವಿಲ್ಲದೆ ತಲೆಬಿಡುವಿಕೆ– ಮೊದಲಾದುವು ಈ ವೇಷಕ್ರಮದ ಕೆಲವು ಅಂಶಗಳು. ಯಕ್ಷಗಾನದ ವೇಷ ಶೈಲಿಯ ಮೂಲ ಸ್ವರೂಪ, ಸೌಂದರ್ಯಗಳನ್ನು ಈ ಪದ್ಧತಿಯು ಕಡೆಗಣಿಸಿದೆ.

ಈ ರೀತಿಯ ವೇಷದ ಉದಾಹರಣೆಗಳು– ಕಾಲಿಗೂ ಮೈಗೂ ಪಚ್ಚೆ ಬಣ್ಣದ ಪೈಜಾಮ– ಅಂಗಿ ಹಾಕಿದ ಹನುಮಂತ, ನಾರುಮಡಿಯುಟ್ಟು ಮೆಯ್‌ಬಿಟ್ಟ ರಾಮಲಕ್ಷ್ಮಣರು, ನೀಲಿ ಬಣ್ಣಹಚ್ಚಿ, ಮಣಿ ತುರಾಯಿ ಕಟ್ಟಿ, ಬಿಡುಕಚ್ಚೆ ಉಟ್ಟ ಕೃಷ್ಣ – ಇತ್ಯಾದಿ.

ವಿಶೇಷತಃ ತೆಂಕುತಿಟ್ಟಿನಲ್ಲಿ ಈ ವೇಷಗಳು ವ್ಯಾಪಕವಾಗಿ ಹಬ್ಬಿವೆ. ಬಡಗಿನಲ್ಲಿ ಇದಕ್ಕೆ

ಪಾರ್ಟಿನ ವೇಷ ಎಂದು ಹೆಸರು. ನಾಟಕದ ಪಾರ್ಟ್ (ಪಾತ್ರ)ನಿಂದ ಬಂದದ್ದು.

ನಾಟಕೀಯ ವೇಷ = ನೋಡಿ : **ನಾಟಕದ ವೇಷ.**

ನಾಟ್ಯ : ಕುಣಿತ, ನೃತ್ಯ. ಇದು ತಾಳಾನುಗುಣವಾಗಿ ಆಯಾ ತಾಳದ ಹೆಸರಲ್ಲಿರುತ್ತದೆ. ವೇಷಕ್ಕನುಸರಿಸಿ ಬಣ್ಣದ ವೇಷದ ನಾಟ್ಯ, ಸ್ತ್ರೀವೇಷದ ನಾಟ್ಯ ಮುಂತಾಗಿ ಹೇಳಲ್ಪಡುತ್ತದೆ. ಸಂದರ್ಭಕ್ಕನುಸರಿಸಿ **ಪ್ರದೇಶ ನಾಟ್ಯ, ಯುದ್ಧ ನಾಟ್ಯ** ಎಂದೂ, ಸೌಮ್ಯ, ಜೋರು ಎಂದೂ ಇದೆ. ನೋಡಿ: **ಕುಣಿತ, ನೃತ್ಯ.**

ನಾಮ : ವೇಷಗಳ ಹಣೆಯ ಮೇಲೆ ಬರೆಯುವ ನಾಮಗಳು. ಇದರಲ್ಲಿ **ಅಡ್ಡನಾಮ (ಗೋಟುನಾಮ), ಉದ್ದನಾಮ (ಗೂಟನಾಮ)** ಎಂದು ಮುಖ್ಯವಾಗಿ ಎರಡು ವಿಧ. **ಶೈವನಾಮ, ವೈಷ್ಣವನಾಮ, ಭಾಗವತ ನಾಮ** ಎಂದೂ ಹೇಳುವರು. **ಭಾಗವತನಾಮ**ವೆಂದರೆ, ಉದ್ದನಾಮದ ಆಚೀಚೆ ಬದಿಗಳಿಗೆ ಅಡ್ಡ ಗೀರುಗಂಧಗಳನ್ನು ಎಳೆಯುವುದು.

ಅಡ್ಡನಾಮವೆಂದರೆ, ಹಣೆಗೆ ಬಿಳಿ ಬಣ್ಣ ಹಚ್ಚಿ, ಅದನ್ನು ವಿಭಾಗಿಸುವುದು, ಅಥವಾ ಕೆಂಪು ಅಡ್ಡನಾಮ ಹಾಕಿ, ಅದಕ್ಕೆ ಬಿಳಿ ರೇಖೆ ಕೊಡುವುದು.

ಉದ್ದನಾಮವೆಂದರೆ, ಮಧ್ಯದಲ್ಲಿ ಕಪ್ಪುಗೆರೆ, ಅದರ ನಡುವೆ ಉರುಟು ಬೊಟ್ಟು ಇಟ್ಟು, ಅದರ ಆಚೀಚೆ ಬಿಳಿ ಕೆಂಪು, ಹಳದಿ ನಾಮಗಳನ್ನೆಳೆದು ದೊಡ್ಡ ನಾಮವನ್ನಾಗಿ ಮಾಡುವುದು. ಉದ್ದನಾಮಗಳಲ್ಲಿ, ಬಡಗು, ಉ.ಕ. ಶೈಲಿಗಳ ನಾಮಗಳು ಚಿಕ್ಕದಾಗಿದ್ದು, ಮಾಧ್ವಸಂಪ್ರದಾಯ ವನ್ನು ಹೋಲುತ್ತವೆ. ತೆಂಕುತಿಟ್ಟಿನ ವೇಷಗಳ ಉದ್ದನಾಮಗಳು ದೊಡ್ಡವು. ಇವು ಶ್ರೀವೈಷ್ಣವ (ರಾಮಾನುಜೀಯ) ಸಂಪ್ರದಾಯವನ್ನು ಹೋಲುತ್ತವೆ. ಇಲ್ಲಿ, ನಾಮದ ಕೊನೆಯ ಅಂದರೆ ಹೊರಗಿನ ಸಾಲು, ಚಿಕ್ಕ ಚುಟ್ಟಿಗಳನ್ನಿಡುವ ಕ್ರಮವಿದೆ.

ಪೀಠಿಕೆ ವೇಷ (ರಾಮ, ನಳ, ಇಂದ್ರ)ಗಳ ನಾಮಗಳು ಸೌಮ್ಯವಾಗಿಯೂ, ಇದಿರುವೇಷ, (ಕರ್ಣ, ಕಾರ್ತವೀರ್ಯ), ಮೂರನೆ ವೇಷ (ಇಂದ್ರಜಿತು, ಭಗದತ್ತ)ಗಳ ನಾಮಗಳು ಉಗ್ರವಾಗಿಯೂ ಇರಬೇಕೆಂಬುದು ತೆಂಕುತಿಟ್ಟಿನ ಇನ್ನೊಂದು ವಿಶೇಷ.

ನಾರದನನ್ನು ಹೊರತುಪಡಿಸಿ, ಋಷಿಗಳಿಗೆಲ್ಲ ಅಡ್ಡನಾಮ. ಉಳಿದಂತೆ, ಹೆಚ್ಚಾಗಿ ಗೆಲ್ಲುವ ಪಾತ್ರಗಳು, ನಾಯಕ ಸ್ಥಾನದ ವೇಷಗಳಿಗೆ ಉದ್ದನಾಮ. ರಕ್ಕಸರಿಗೆ ಅಡ್ಡನಾಮದಂತಿರುವ ಚಿಟ್ಟಿ. – ಇವೆಲ್ಲ ವೈಷ್ಣವ ಸಂಪ್ರದಾಯದ ಪ್ರಭಾವದ ಕಲ್ಪನೆಗಳು. ಭೀಮನ ನಾಮವು ಮೂಗಿನಿಂದ ಹಣೆಯವರೆಗಿದ್ದು, ಸಾವಿರ ಆನೆಗಳ ಬಲದವನೆಂಬ ನೆಲೆಯಲ್ಲಿ ಸೊಂಡಿಲಿನ ಸಂಕೇತವಾಗಿದೆ. ಕಿರಾತನ ನಾಮ ಓರೆ.

ಸ್ತ್ರೀವೇಷಗಳಿಗೆ ಹಿಂದೆ ಉದ್ದನಾಮವೂ, ಅಡ್ಡ ಕುಂಕುಮವೂ ಇದ್ದುವು. ಉರುಟು ಬೊಟ್ಟು ಇರಲಿಲ್ಲ. **ಕಾಟುಬಣ್ಣ** (ಕಾಡುರಕ್ಕಸ)ಗಳಿಗೆ ನಾಮವಿಲ್ಲದೆಯೂ ಇರಬಹುದು. ಹಾಸ್ಯಗಾರ, ಕೋಡಂಗಿಗಳಿಗೆ ಬಿಳಿ ಪಟ್ಟಿಯಂತಹ ನಾಮ, ಅದಕ್ಕೆ ಅಲಂಕರಣವಿಲ್ಲ.

ವೇಷಧಾರಿಯು ಬಣ್ಣ ಹಚ್ಚಲು ಆರಂಭಿಸುವಾಗ ಮೊದಲು ಹಣೆಗೆ ನಾಮ ದಂತೆ ಹಚ್ಚಿ, ಅನಂತರ ಮುಖಕ್ಕೆ ಬಣ್ಣ ಹಾಕ ಬೇಕು.


ನಾರಿನ ಮೀಸೆ : ಉಣ್ಣೆಯ ಉಪಯೋಗಕ್ಕೂ ಹಿಂದೆ ಬಳಸುತ್ತಿದ್ದ ಮೀಸೆ. ಕಳ್ಳಿಜಾತಿಯ **ಕತ್ತಾಳೆ, ಭೂತಾಳೆ, ಆನೆಕತ್ತಾಳೆ, ದಡ್ಪಾಳೆ, ಅನನಾಸು,** ಗಿಡಗಳ ಎಲೆಗಳಿಂದ, ದಡ್ಡಾಲದ ತೊಗಟೆಯಿಂದ ತೆಗೆದ ನಾರನ್ನು ಬಳಸುತ್ತಿದ್ದರು. ಅನಂತರ ಉಲ್ಲನ್ ಮೀಸೆ ಬಂದಿತು. ಈಗ ಕ್ರೇಪ್‌ಹೇರ್ ಮೀಸೆಯೂ ಬಳಕೆಯಿದೆ.

ನಾರು : ವೇಷಭೂಷಣ ತಯಾರಿಗೆ, ಕಟ್ಟುವಿಕೆಗೆ, ಮೀಸೆ, ಕೂದಲುಗಳಿಗೆ, ಕೇಸರಿಗೆ – ಬಳಸುವ ನಾರುಗಳು. ಹತ್ತಿ, ಕೋಲು ನಾರು, ಊರ ಸೆಣಬು, ಅನನಾಸು, ಕತ್ತಾಳೆ, ಭೂತಾಳೆ, ದಡ್ಪಾಳೆ, ದಡ್ಡಾಲ್ (ಕವಲು ಮರ) ಮೊದಲಾದ ಗಿಡಗಳ ನಾರುಗಳನ್ನು ಬಳಸುತ್ತಿದ್ದರು. ಉಣ್ಣೆನಾರು ಕೂಡ ಬಹುಕಾಲದಿಂದ ಬಳಕೆಯಿದೆ. ಈಗ ಉಣ್ಣೆ, ಪ್ಲಾಸ್ಟಿಕ್, ಫೈಬರ್, ಹತ್ತಿನಾರುಗಳು ಬಳಕೆಯಿವೆ.


ನಾರು ಭೂತಾಳೆ : Geronneria reticulata. ಒಂದು ಜಾತಿಯ ಕಳ್ಳಿ. ನಾರಿಗಾಗಿ ಬಳಕೆ.

ನಾರುಮಡಿ : ಹಳದಿ ಅಥವಾ ಕಾವಿ ಬಣ್ಣದ ಬಟ್ಟೆ. ಬ್ರಾಹ್ಮಣ, ಋಷಿ ವೇಷಗಳಿಗೆ ಬಳಕೆ.

ನಾಲ್ಕನೇ ಕಾಲ : 1. ತಾಳದ ವೇಗದಲ್ಲಿ ಅತಿವೇಗ ಪ್ರಮಾಣ. ಇದು ಒಂದನೇಯ ಕಾಲದ ಸರಿ ನಾಲ್ಕರಷ್ಟು ಅಲ್ಲ. ತೀರ ಮೇಲ್ಕಾಲ ಎಂದರ್ಥ. 2. ಆಟದ ನಾಲ್ಕನೆಯ ಅವಧಿ. ಬೆಳಗಿನ ಜಾವ, ಸುಮಾರು ನಾಲ್ಕೂವರೆ ಗಂಟೆಯ ಅನಂತರದ ಕಾಲ.




ಆಲವಟ್ಟ




ಉದ್ಧನಾಮಗಳು – ತೆಂಕು



ಉದ್ಧನಾಮಗಳು – ಬಡಗು



ಈಶ್ವರ (ಶಿವ)



ಕತ್ತರಿ ಸೋಗೋಲೆ ಕತ್ತರಿ ಸೋಗೋಲೆ

ನಾಲ್ಕನೆ ಹೆಜ್ಜೆ (ತೆ.) : ಮೂಲ ಅಭ್ಯಾಸದ ನಾಲ್ಕು ಹಜ್ಜೆಗಳಲ್ಲಿ ಕೊನೆಯದು: ಮೂರನೆಯ ಹಜ್ಜೆಯ ಮುಂದಿನ ಹಂತ. ಇದರಲ್ಲಿ ಕಾಲುಗಳು ಒಂದರ ಬಳಿಗೊಂದು ಬರುತ್ತ, ಆಚೀಚೆ ಚಲಿಸುತ್ತ, ಹಿಂದೆ ಮುಂದೆ ಚಲನೆ ಸೇರಿ ಬರುತ್ತವೆ.

ಇದನ್ನು ಏಕತಾಳದ ಎರಡು ಆವರ್ತಗಳಿಗೆ ಸರಿಯಾಗಿ ಕಲಿತು, ಬೇರೆ ತಾಳಗಳಿಗೆ ಹೊಂದಿಸಬೇಕು.

ನಿಘಂಟು : ಹಳೆಯ ಪದ್ಧತಿ ಮತ್ತು ನಿಶ್ಚಿತವಾದ ಸಂಪ್ರದಾಯ. ಒಂದು ಬಗೆಯ ಅಲಿಖಿತ ಶಾಸ್ತ್ರ. ನೋಡಿ: ಕ್ರಮ, ನಿರ್ಣಯ.

ನಿಜಪೆಟ್ಟು (ಉ.) : ಮದ್ದಲೆ ಅಭ್ಯಾಸದ ಮೂಲ ಪೆಟ್ಟುಗಳು. ಅಭ್ಯಾಸ ದಸ್ತುಗಳು.

ನಿತ್ಯವೇಷ : ಪ್ರತಿನಿತ್ಯವೂ ರಂಗಕ್ಕೆ ಬರಬೇಕಾದ, ಕಟ್ಟುಕಟ್ಟಲೆ ವೇಷ. ಮುಖ್ಯವಾಗಿ ಬಾಲಗೋಪಾಲ, ಕೋಡಂಗಿ, ಮತ್ತು ಸಭಾಲಕ್ಷಣದ ಸ್ತ್ರೀವೇಷ.

ನಿತ್ಯ ಸ್ತ್ರೀವೇಷ : ಸಭಾಲಕ್ಷಣದ ಸ್ತ್ರೀವೇಷಗಳು. ಪೀಠಿಕೆ ಸ್ತ್ರೀವೇಷ, ಚಂದಭಾಮಾ ವೇಷಗಳು.

ನಿಧಾನಗತಿ : 1. ತಾಳದ, ಅಥವಾ ಆಟದ ನಿಧಾನವಾದ ನಡೆ. ಒಂದನೇ ಎರಡನೇ ಕಾಲಗಳು.

2. ತಾಳಗಳ ನಿಧಾನ ಸ್ವರೂಪ– ಉದಾ. ನಿಧಾನ ತ್ರಿವುಡೆ, ನಿಧಾನ ಝಂಪೆ.

ನಿಧಾನಝಂಪೆ : ತಾಳಗಳಲ್ಲೊಂದು. ಹತ್ತು ಮಾತ್ರಾಕಾಲ. 4 + 2 + 4 – ವಿಭಜನೆಯಲ್ಲಿದೆ.

ಇದರ ಮೂಲ ದಸ್ತುಗಳು ಮತ್ತು ಮುಕ್ತಾಯಗಳು ಹೀಗಿವೆ.

ಬಡಗುತಿಟ್ಟು, ಉ.ಕ. :

x x x
ದಸ್ತು : ಧೀಂಕಿಟ। ಧೀಂ। ಧೀಂಕಿಟ್ತಕ

x x x
ಮುಕ್ತಾಯ : ತಾ ತಾ ಕಿಟ್ತಕ। ತಾಕಿಟ ತಧ್ಧಿನ್ನಕ।

x x x
ತೈ... । ತದಿನ್ನ ।ತಾಂ।

ಈ ಮುಕ್ತಾಯವನ್ನು ಹಾಡಿನ ಅರ್ಧಭಾಗದಲ್ಲಿ ತೆಗೆದುಕೊಂಡು, ಮುಂದಿನ ಅರ್ಧವನ್ನು ತ್ವರಿತ ಝಂಪೆಯಲ್ಲಿ ಹೇಳುವ ಕ್ರಮವಿದೆ.

ತೆಂಕುತಿಟ್ಟು :

x x x
ದಸ್ತು : ತಾಂ ತತ್ತ । ತಾಂ। ತಾಂ ತತ್ತ

ಬಿಡ್ತಿಗೆ: 1. ಧೀಂತಕ ತರಿಕಿಟ। ಧಿಂತಕ ತರಿಕಿಟತತ್ತ । (ಎರಡು ಬಾರಿ)

2. ಧಿನ್ನಕ ತರಿಕಿಟ। ದಿಧ್ಧಿದ್ಧೊಂ ತತ್ತಾ। ದದಿಗಿಣ। ತೊ।

ಬಿಡ್ತಿಗೆಯ 2ನೇ ಭಾಗವೇ ಮುಕ್ತಾಯ.

– ಅರ್ಧ ಪದ್ಯವಾದ ಬಳಿಕ ತ್ವರಿತ ಝಂಪೆಗೆ ಹೋಗುವ ಕ್ರಮವಿದೆ.

– ಒಡ್ಡೋಲಗದ ಪದ್ಯಗಳು ಹೆಚ್ಚಾಗಿ ಝಂಪೆ ಮತ್ತು ತ್ರಿವುಡೆ ತಾಳಗಳಲ್ಲಿರುತ್ತವೆ.

ನಿಧಾನ ತ್ರಿವುಡೆ : ನೋಡಿ : ತ್ರಿವುಡೆ.

ನಿಧಾನ ಪದ = ನೋಡಿ : ಸೌಮ್ಯದ ಪದ, ನೋಡಿ : ಏರುಪದ.

ನಿರ್ಣಯ : 1. ನೋಡಿ : ನಿಶ್ಚಯ.

2. ನಿರ್ಣಯವಾಗಿರುವ ವಿಷಯಗಳು. ಪುನಃ ಹೇಳುವ ಅಗತ್ಯವಿಲ್ಲದ್ದು ಎಂದರ್ಥ. ಉದಾ: ಬಣ್ಣದ ವೇಷವು ಪ್ರವೇಶಕ್ಕೆ ಮೊದಲು ಮೂರು ಆರ್ಭಟೆ ಕೊಡಬೇಕು.

ನಿಶ್ಚಯ : 1. ಆಟ ಆಗಬೇಕಾದ ದಿನ, ಪ್ರಸಂಗ ಇತ್ಯಾದಿಗಳ ನಿಷ್ಕರ್ಷೆ.

2. ಕಲಾವಿದನಿಗೆ ಮೇಳವೂ, ಮೇಳಕ್ಕೆ ಕಲಾವಿದರೂ ನಿರ್ಣಯಿಸಲ್ಪಡುವುದು.

3. ಪ್ರದರ್ಶನ ಮತ್ತು ಸಂಘಟನೆಗೆ ಸಂಬಂಧಿಸಿದ ಹಳೆಯ ಸಂಪ್ರದಾಯ ಪ್ರಸಿದ್ಧ ಕ್ರಮಗಳು.

ನೀರುಮಸಿ : ನೀರಿನಲ್ಲಿ ಕಲಸಿದ ಮಸಿ. ಹುಡಿ ಕಾಡಿಗೆ ಅಥವಾ ಕಟ್ಟಿಗೆ ಇದ್ದಿಲನ್ನು ನೀರಲ್ಲಿ ಅರೆದು ತಯಾರಿಸುವುದು. (ಎಣ್ಣೆಯಲ್ಲಿ ಕಲಸಿದ ಮಸಿ: ಎಣ್ಣೆಮಸಿ)

ನೂಲು : 1. ಕಟ್ಟುವ ನೂಲು, ಹಗ್ಗ.

2. ವೇಷ ಸಾಮಗ್ರಿ, ಬಟ್ಟೆ, ಆಭರಣಗಳನ್ನು ಹೊಲಿಯುವ ಬಣ್ಣದ ನೂಲುಗಳು.

ನೆಣೆ ಬತ್ತಿ : 1. ದೇವರ ಪೂಜೆ, ಆರತಿ, ಚೌಕಿಯ ದೀಪ, ರಂಗಸ್ಥಳದ ದೀಪ ಮೊದಲಾದವುಗಳಿಗೆ ಬಳಸುವ ಹತ್ತಿಯ ಅಥವಾ ಬಟ್ಟೆಯ ಬತ್ತಿಗಳು.

2. ಕೋಲಿಗೆ ಬಟ್ಟೆ ಸುತ್ತಿ ತಯಾರಿಸಿದ ಬತ್ತಿ; ಕೋಲು ಬತ್ತಿ.

ನೆರಿ : ನಿರಿಗೆ ಮಾಡಿದ ವಸ್ತ್ರ.

1. = ನೋಡಿ. ಬಾಲಮುಂಡು.

2. ಸೀರೆಯ ಕಚ್ಚೆ, ಕಸೆಗಳನ್ನು ಉಡುವಾಗ ಹಿಡಿಯುವ ನಿರಿಗೆ; ತೆರೆನಿರಿ.

3. ಹೆಣ್ಣು ಬಣ್ಣ, ಕೊರವಂಜಿ– ವೇಷಗಳ ಸೊಂಟದ ಕೆಳಗೆ ನಿಲ್ಲುವ ಅಂತರ ನೆರಿ.

4. ಕೆಲವು ವೇಷಗಳು ಸೊಂಟದ ಸುತ್ತ ಧರಿಸುವ ಅರ್ಧ ಡವರು. ಚಿಕ್ಕ ನಿರಿಗೆ ಲಂಗ.

ನೆರಿಗೆ ಅಂಗಿ : 1. ಹಾಸ್ಯಗಾರನ ದಗಲೆ.

2. 'ನಾಟಕ ವೇಷ'ಗಳು ಧರಿಸುವ, ಸೊಂಟದ ಕೆಳಗೆ ನಿರಿಗೆ ಇರುವ ಅಂಗಿ ಅಥವಾ ಡವರಂಗಿ.

ಪ

ಪಂಚಮಾಲೆಸರ : ಐದು ಎಳೆಯ ಸರ.

ಪಂಚವರ್ಣ ಚುಟ್ಟಿ : ಬಣ್ಣದ ವೇಷದ ಚುಟ್ಟಿಯ ಒಂದು ವಿಧ. ಚುಟ್ಟಿ ಮುಳ್ಳುಗಳಿಗೆ ನಾಲ್ಕು ಬಣ್ಣಗಳನ್ನು – ಕಪ್ಪು, ಕೆಂಪು, ಹಳದಿ, ಹಸುರು– ಹಚ್ಚುವುದು. ಇನ್ನೊಂದು ಬಣ್ಣ ಚುಟ್ಟಿಯದೇ ಆದ ಬಿಳಿ ಬಣ್ಣ.

ಪಂಜು : ದೀವಟಿಗೆ, ದೊಂದಿ.

1. ಲೋಹದ ದಂಡಕ್ಕೆ ಬಟ್ಟೆಸುತ್ತಿ ಎಣ್ಣೆ ಹಾಕಿ ಉರಿಸುವ ಪಂಜು.
2. ಕಟ್ಟಿಗೆ, ಸಲಿಕೆಗಳ ಕಟ್ಟು ಮಾಡಿ, ಬಟ್ಟೆಸುತ್ತಿ ಎಣ್ಣೆ ಹಾಕಿ ಉರಿಸುವ ಪಂಜು.
3. ಸೋಗೆಯ ಕಂತೆ.

ಪಕಡಿ = ನೋಡಿ : **ಪಗಡಿ.**

ಪಕ್ಕೆ (ಉ.) : ಕಿರೀಟದ ರೆಕ್ಕೆಗಳು. ಕಿರೀಟದ ಕಲಶ (ಬುರುಡೆ, ಕೊಳಗ)ದ ಆಚೀಚೆಯಲ್ಲಿರುವ 'S' ಆಕಾರದ ರಚನೆಗಳು. **ಕಿರೀಟದ ಕರ್ಣಪಾತ್ರ; ಕಿರೀಟದ ಕಿವಿ.**

ಪಗಡಿ/ಪಕಡಿ : ಶಿರೋಭೂಷಣಗಳಲ್ಲೊಂದು ವಿಧ. ಅಶ್ವತ್ಥ ಎಲೆಯ ಆಕಾರದ ರಚನೆ.

ತೆಂಕುತಿಟ್ಟಿನಲ್ಲಿ ಈಗ ಇದು ಸಿದ್ಧ ರಚನೆ. ಸು. 1925ರ ವರೆಗೆ ಬಡಗಿನ **ಮುಂಡಾಸು, ಕೇದಗೆ ಮುಂದಲೆಗಳಂತೆ,** ಅಟ್ಟೆ ಇಟ್ಟು, ಬಟ್ಟೆ ಮುಚ್ಚಿ, ಜರಿ ಸುತ್ತಿ ತಯಾರಿಸುತ್ತಿದ್ದರು.

ಬಡಗುತಿಟ್ಟಿನ ಮುಂಡಾಸು ಮುಂದಲೆಗಳಿಗೂ ತೆಂಕುತಿಟ್ಟಿನಲ್ಲಿ ಪಗಡಿಯೆಂದೇ ಹೆಸರು.

ಉತ್ತರಕನ್ನಡದಲ್ಲೂ ಸಣ್ಣ, ದೊಡ್ಡವು ಸೇರಿ ಪಗಡಿ ಅಥವಾ ಪೊಗಡೆ ಎಂದು ಹೆಸರು. ಹಿಂದೆ ಬಹುಶಃ ಅಲ್ಲಿನ ಪಗಡಿಗಳು, ಎಲೆಯಾಕಾರ ದಲ್ಲಿರದೆ ವೃತ್ತಾಕಾರವಾಗಿರುತ್ತಿದ್ದುವು. ಕೇದಗೆ ಇದ್ದಿರಲಿಲ್ಲ. ಮೇಲ್ತುದಿಗೆ ನವಿಲುಗರಿ ಕುಂಚವಿರುತ್ತಿತ್ತು. ಅನಂತರ, ಬಡಗುತಿಟ್ಟಿನ ಆದರ್ಶದಿಂದ ಇಂದಿನ ರೂಪಕ್ಕೆ ಬಂದಿದೆ.

ಪಗಡಿಗಳಲ್ಲಿ ಮೂರು ವಿಧ: **'ಸಣ್ಣಪಗಡಿ'** (ಪುಂಡುವೇಷಗಳದ್ದು), **'ದೊಡ್ಡಪಗಡಿ'** (ಮೀಸೆ ವೇಷದ್ದು. ಉದಾ: ಕೀಚಕ, ಶಲ್ಯರ ಪಗಡಿ) **'ಓರೆ ಪಗಡಿ'** (ಕಿರಾತನ ಪಗಡಿ).

ಸಿದ್ಧಪಗಡಿಯು ಆರಂಭದಲ್ಲಿ, ಜರಿ ಸುತ್ತಿದ ಪಗಡಿಯಂತೆಯೆ ಇತ್ತು. ಅದಕ್ಕೆ ಕೆಳಗಡೆ ಕೇದಗೆಯೂ ಮೇಲೆ ಹಳದಿ ಪಟ್ಟಿಗಳೂ ಇದ್ದುವು. 'ಜಪಾನ್ ಮಣಿ'ಗಳ ಸಾಮಗ್ರಿಗಳ ತಯಾರಿ ಆರಂಭವಾದ ಬಳಿಕ, ತೆಂಕುತಿಟ್ಟಿನ ಪಗಡಿ, ಬಡಗು ತಿಟ್ಟುಗಳ ಪಗಡಿಗಿಂತ ಭಿನ್ನರೂಪ ಪಡೆಯಿತು.

ಪಗಡಿ ಕಿರೀಟ : ಪಗಡಿ ಎಂಬುದರ ನಾಮಾಂತರ. ನೋಡಿ : **ಪಗಡಿ.**

ಪಚ್ಚೆ : 1. ಹಸುರು ಬಣ್ಣ. ಜಂಗಲ್. ಹಿಂದೆ, ಜಂಗಮಿಗಿಡದ ಎಲೆಗಳ ಅಥವಾ ನೆಲ್ಲಿ ಎಲೆಗಳ ಹುಡಿಯಿಂದ ತಯಾರಿಸುತ್ತಿದ್ದ ವರ್ಣದ್ರವ್ಯ. ಈಗ ರಾಸಾಯನಿಕ ಬಣ್ಣ ಬಳಕೆಯಿದೆ.

(ತೆ.) 2. ಪಚ್ಚೆ ಬಣ್ಣವು ಪ್ರಧಾನವಾಗಿರುವ ಮುಖವರ್ಣಿಕೆ ಮತ್ತು ಪಾತ್ರ. ಉದಾ: ಅತಿಕಾಯ, ಕೌಂಡ್ಲಿಕ, ವೀರವರ್ಮ. ಪಚ್ಚೆವೇಷಗಳು.

ಪಟ = ನೋಡಿ : ತೆರೆ.

ಪಟ್ಟಿ : 1. ವೀಳ್ಯದೆಲೆ, ಅಡಕೆ. ವೀಳ್ಯದ ಪಟ್ಟಿ. ಹರಕೆ ಬಯಲಾಟದ ಸ್ಥಳದಲ್ಲಿ ಬೆಳಗ್ಗೆ ತಾಳಮದ್ದಲೆ ಆದೊಡನೆ ಮತ್ತು ಸಂಜೆ ಚೌಕಿಯಲ್ಲಿ ಕಲಾವಿದರಿಗೆ ಪಟ್ಟಿ ಕೊಡುವುದಿತ್ತು.

2. ಆಟ, ತಾಳ ಮದ್ದಲೆಗಳ ಪಾತ್ರ ವಿತರಣೆಯ ಯಾದಿ. ಪಾತ್ರಪಟ್ಟಿ. List.
3. ಆಟ ಆಡಿಸುವವರು, ಮೇಳಕ್ಕೆ ನೀಡಬೇಕಾದ ಹಣ, ವಸ್ತುಗಳ ವಿವರವುಳ್ಳ ಪಟ್ಟಿ. ಸಾಮಾನುಪಟ್ಟಿ.
4. ತಿರುಗಾಟದ ಮೇಳವು ದೇವಸ್ಥಾನದಿಂದ ಪಡೆದ ವಸ್ತು ವಿವರದ ಪಟ್ಟಿ.
5. ಸಂಬಳದ ಪಟ್ಟಿ.
6. ವೇಷಕ್ಕೆ, ಅಲ್ಲಲ್ಲಿ ಸುತ್ತುವುದಕ್ಕೆ ಬಿಗಿಯುವು ದಕ್ಕೆ ಬೇಕಾದ ಜರಿ, ಬಟ್ಟೆಗಳ ಪಟ್ಟಿ. ಲಾಡಿ.
7. ಹಾರ್ಮೋನಿಯಂನ ಶ್ರುತಿಸ್ಥಾನ. ಉದಾ: ಬಿಳಿ 2, ಕಪ್ಪು 3.

ಪಟ್ಟೆ : 1. ವಸ್ತ್ರಗಳ ಮೇಲೆ ಇರುವ ಪಟ್ಟೆಗಳು, ಅಗಲವಾದ ಗೆರೆ. **ಗೋಟು.**

2. **ಜಮಖಾನೆ** ಬಣ್ಣದ ವೇಷದ (ಉದಾ: ವಿದ್ಯುಜ್ಜಿಹ್ವ) ಮುಖದಲ್ಲಿ ಬರೆಯುವ ಪಟ್ಟೆಗಳು.
3. ಪಟ್ಟೆಸೀರೆ.
4. ಪಟ್ಟೆಮಡಿ, ಬ್ರಾಹ್ಮಣ ಪಟ್ಟೆ.

ಪಟ್ಟೆಸೀರೆ : ರೇಷ್ಮೆಯ ಅಥವಾ ನಾರಿನ ಸೀರೆ. ಮುಖ್ಯ ಸ್ತ್ರೀಪಾತ್ರಗಳಿಗೆ ಬಳಸುವ ಸೀರೆ. ಹಿಂದೆ, ಸ್ತ್ರೀವೇಷಗಳಿಗೆ ಕಪ್ಪು ಸೀರೆಯೆ ಇದ್ದುದು.

ಪಡಿ : ಹರಕೆ ಆಟ ಆಡಿಸುವವರು, ಮೇಳಕ್ಕೆ ನೀಡಬೇಕಾದ ಅಕ್ಕಿ ಮತ್ತಿತರ ಅಡುಗೆ ಸಾಮಾನು. ಪಡಿಸಾಹಿತ್ಯ, ಪಡಿಸಾಮಾನು.

ಪಡಿ ಬಿಡಾರ : 1. ಪಡಿ, ಮತ್ತು ಬಿಡಾರ. ಮೇಳವು ಬಂದೊಡನೆ ಪಡಿ ಕೊಟ್ಟು, ನಿಶ್ಚಿತವಾದ ಬಿಡಾರದ ಸ್ಥಳ ತೋರಿಸುವುದು.

2. ತಿರುಗಾಟದ ಮೇಳವು, ಯಾವುದೇ ಮನೆಗೆ ಬಂದು ತಾಳಮದ್ದಲೆ ಹಾಕಿದರೆ, ಆಟ ಆಡಿಸಬೇಕು ಎಂದು ವಿನಂತಿ, ಎಂಬ ಅರ್ಥ. ಆಗ, ಆಟ ಆಡಿಸದಿದ್ದರೂ, 'ಪಡಿ ಬಿಡಾರ' ನೀಡಬೇಕೆಂದು ಸಂಪ್ರದಾಯ. ಆಗ ಮನೆಯ ಯಜಮಾನನು ''ಈ ಸಾರಿ ಪಡಿ ಬಿಡಾರ ಮಾತ್ರ,'' ಎಂದು ಹೇಳುತ್ತಾನೆ.

ಪಡಿ ಮಂಚ : ಭತ್ತದ ಪೈರಿನ ಕಂತೆಯನ್ನು ಬಡಿದು ಬತ್ತ ಬೇರ್ಪಡಿಸಲು, ಬಳಸುವ ಮಂಚ. ತೆನೆ ಬಡಿಯುವ, ಸಾಮಾನ್ಯವಾಗಿ ಬೀಳಲಿನಿಂದ ಅಥವಾ ಮರದ ಪಟ್ಟಿಕೆಗಳಿಂದ ಮಾಡಿದ ಮಂಚ. ಇದು ಹಿಂದೆ ಆಟದ ರಂಗಸ್ಥಳದಲ್ಲಿ ಭಾಗವತ, ಮದ್ದಲೆಗಾರರಿಗೆ ಕುಳಿತುಕೊಳ್ಳುವ ಆಸನ.

ಸು. 1920ರ ವರೆಗೆ ಹಿಮ್ಮೇಳದವರು ನಿಂತುಕೊಂಡೇ ಇರುತ್ತಿದ್ದರು. ಅನಂತರ ಪಡಿ ಮಂಚ ಬಳಕೆಗೆ ಬಂತು. ಈಗ ಮೇಜು ಇಡುತ್ತಾರೆ. ಆ ಮೇಜಿಗೂ, ರೂಢಿಯ ಮಾತಿನಲ್ಲಿ ಪಡಿ ಮಂಚವೆಂದೇ ಹೇಳುವುದುಂಟು.

ಪಡಿ ಸಾಮಾನು = ನೋಡಿ : **ಪಡಿ.**

ಪಡಿಸಾಹಿತ್ಯ = ನೋಡಿ : **ಪಡಿ.**

ಪಡುವಲ ಪಾಯ : ಕರಾವಳಿಯ ಯಕ್ಷಗಾನವನ್ನು ಒಟ್ಟಾಗಿ ಹೇಳಲು, ವಿದ್ವಾಂಸರು ಸೃಷ್ಟಿಸಿದ, ಅರ್ವಾಚೀನ ಪದ. ಗಟ್ಟದ ಮೇಲಣ 'ಮೂಡಲಪಾಯ'ಕ್ಕೆ ಭಿನ್ನವಾಗಿ, ಇದು 'ಪಡುವಲ ಪಾಯ'.

ಪತ್ತನಾಜೆ (ತೆ.) : ವೃಷಭ ಮಾಸದ ಹತ್ತನೆಯ ದಿನ. (ತುಳು ಭಾಷಾ ಶಬ್ದ) ಮೇ ತಿಂಗಳ ಇಪ್ಪತ್ತನಾಲ್ಕನೆ ತಾರೀಕು. **ಮೇಳಗಳು ಒಳಗಾಗುವ ದಿನ.**

ಪತ್ರ (ತೆ.) : ಬಣ್ಣದ ವೇಷಗಳು ಧರಿಸುವ ಉರುಟು ಕರ್ಣಪತ್ರ, ಓಲೆಪತ್ರ, ಓಲೆ.

ಪದ : 1. ಹಾಡು, ಪದ್ಯ.

2. ಭಾಗವತಿಕೆ. ಉದಾ– ''ಈ ದಿನ ಯಾರ ಪದ ?'' ''ಪದಕ್ಕೆ ಯಾರು ?''

ಪದಕ : 1. ನೋಡಿ. **ಎದೆಪದಕ, ಎದೆಹಾರ, ಕೊರಳಾರ,** ಈ ಪದಕಗಳು ಮುಖ್ಯವಾಗಿ ನಾಲ್ಕು ಆಕೃತಿಗಳಲ್ಲಿವೆ. ವೃತ್ತಾಕಾರ, ನಾಲ್ಕು ಮೂಲೆಯ ಕತ್ತರಿ ಆಕಾರ, ಉದ್ದ – ವೃತ್ತಾಕಾರ, ಮತ್ತು ಮೇಲೆ ಅಗಲವಾಗಿ ಕೆಳಗೆ ಸಪುರವಾಗುವ ಯುರೋಪಿಯನ್ ಶೈಲಿಯ ಯುದ್ಧದ ಢಾಲಿನ ಆಕಾರ. ಅರ್ಥಾತ್ ಸೋರೆಕಾಯಿ ಆಕಾರದವು. ಈ ಪೈಕಿ ಬಹುಶಃ ವೃತ್ತಾಕಾರದ ಎದೆಹಾರವೇ ಪ್ರಾಚೀನತಮ.

2. ಕಿರೀಟ, ವೀರಗಸೆ, ಪಗಡಿಗಳ ಮೇಲೆ ಸಿಕ್ಕಿಸುವ, ಹೊಲಿಯುವ ಹಲ್ಲೆ, ಬಿಲ್ಲೆಗಳು.

ಪದ್ಯ : 1. ಹಾಡು, ಪದ, ಗೀತ.

2. ಭಾಗವತಿಕೆ.

ಪದ್ಯ ಗುರ್ತಮಾಡುವುದು : ಪ್ರಸಂಗದ ಪದ್ಯಗಳ ಆಯ್ಕೆ. ಪ್ರದರ್ಶನಕ್ಕೆ ಬೇಕಾದ ಪದ್ಯಗಳನ್ನು ಆಯ್ದು ಗುರುತು ಹಾಕುವುದು. Script Editing.

ಪದ್ಯ ತೆಗೆಯುವುದು : 1. ಪ್ರದರ್ಶನದ ಸನ್ನಿವೇಶವನ್ನು ನಿಯಂತ್ರಿಸಲು, ಭಾಗವತನು, ಪದ್ಯವನ್ನು ಹಾಡಲು ಆರಂಭಿಸುವುದು.

2. ನೋಡಿ : **ಎತ್ತುಗಡೆ.**

ಪದ್ಯ ಮಾಡಿಕೊಡುವುದು : ಭಾಗವತನು ರಂಗದ ಸನ್ನಿವೇಶಕ್ಕೆ ತಕ್ಕಂತೆ, ಹೆಚ್ಚುವರಿ ಪದ್ಯಗಳನ್ನು ರಂಗದಲ್ಲೆ ರಚಿಸಿ ಹಾಡುವುದು.

ಪದ್ಯ ಹಾರಿಸುವುದು : ಅನಾವಶ್ಯಕವೆಂದು ಕಾಣುವ ಅಥವಾ ಸಮಯಮಿತಿಗೆ ಅನುಕೂಲವಾಗುವಂತೆ, ಕೆಲವು ಪದ್ಯಗಳನ್ನು ಬಿಟ್ಟು ಮುಂದುವರಿಸುವುದು.

ಪರಂಪರೆ : ಕಲೆಯ ಸಾಂಪ್ರದಾಯಿಕ ಸ್ವರೂಪ. ಅದು ತೋರ್ಪಡಿಸುವ ಸ್ಥೂಲವಾದ 'ಮಾರ್ಗ'. ಅದರ ಅಂಗೋಪಾಂಗಗಳ ಮತ್ತು ಒಟ್ಟು ಅಭಿವ್ಯಕ್ತಿಯ ವಿಶಿಷ್ಟ ಸ್ವರೂಪ, ಶೈಲಿ.

ಪರಂಪರೆ ವೇಷ : ಸಾಂಪ್ರದಾಯಿಕ ವೇಷರೂಪ, ವೇಷಶೈಲಿ. **'ನಾಟಕ ವೇಷ'** ಎಂಬ ಜಾತಿಯ ಆಧುನಿಕ ವೇಷಗಳಿಂದ ಪ್ರತ್ಯೇಕಿಸಿ ಹೇಳಲು ಬಳಸುವ ಪದ.

ಪರದೆ : 1. ತೆರೆ. ಇಬ್ಬರು ಹಿಡಿದು ಕೊಳ್ಳುವ ರಂಗದ ಅಡ್ಡಬಟ್ಟೆ.

2. ಮುಖ್ಯಾರ್ಥದಲ್ಲಿ, ರಾಟೆ ಕಟ್ಟಿ ಮಡಚಿಟ್ಟು, ಇಳಿಬಿಡುವ 'ನಾಟಕ ಪರದೆ'.

ಪರಶು : ಕೊಡಲಿ.

ಪಸ್ಕೆ : ಬಯಲಾಟದ ಸುತ್ತ ಸೇರುವ ಅಂಗಡಿ, ವ್ಯಾಪಾರಿಗಳು, ಆಟದ ವ್ಯವಸ್ಥಾಪಕನಿಗೆ ನೀಡಬೇಕಾದ ಒಂದು ನಿಗದಿತ ಮೊತ್ತ.

ತೆರಿಗೆಯಂತಹ ಒಂದು ವ್ಯವಸ್ಥೆ. ಈಗ ಈ ಕ್ರಮವಿಲ್ಲ.

ಪಾಕಿನ ವಸ್ತ್ರ/ಪಾಕು(ಗು) (ಬ.): 1. ಕಪ್ಪು ಮುಂಡಾಸಿನ ಹಿಂಬದಿಯಲ್ಲಿ ಇಳಿ ಬಿಡುವ ಚಿಕ್ಕ ವಸ್ತ್ರ. ಇದು ಮುಂಡಾಸಿನ ಹಿಂಬದಿಯ ಸುತ್ತ, ಅಂಚಿಗೆ ಸಿಕ್ಕಿಸಲ್ಪಟ್ಟು ಬೆನ್ನಿನ ಅರ್ಧದವರೆಗೆ ಇಳಿಯುತ್ತದೆ.

2. ಮುಂಡಾಸು, ಕೇದಗೆ ಮುಂದಲೆ, ಕಿರೀಟಗಳಿಗೆ ಹಿಂಬದಿಗೆ ಸಿಕ್ಕಿಸಿ, ಇಳಿ ಬಿಡುವ ಬಣ್ಣದ ಶಲ್ಲೆ. (ಹಿಂದೆ ಇದು ಬಿಳಿಧೋತ್ರವಾಗಿತ್ತು) ಇದರ ಕೆಳ ಬದಿ ಮಡಚಿ ಸೊಂಟಕ್ಕೆ ಸಿಕ್ಕಿಸುವರು.

ಪಾಕು = ನೋಡಿ: **ಪಾಕಿನ ವಸ್ತ್ರ.**

ಪಾಗು = ನೋಡಿ: **ಪಾಕಿನ ವಸ್ತ್ರ.**

ಪಾಡಗ: ಸ್ತ್ರೀವೇಷದ ಕಾಲ ಕಡಗ. ಈಗ ಲುಪ್ತವಾಗಿದೆ.

ಪಾತಿ: ವಾದ್ಯಗಳಿಗೆ ಬಳಸುವ ಚರ್ಮದ ಮೇಲೆ ಇರುವ ತೆಳುವಾದ ಮೆಯ್. ಪೊರೆ. ಹೊಳೆಯುವ, ಸಿಪ್ಪೆಯಂತಹ ಭಾಗ.

ಪಾತ್ರ: ಕಥಾಪಾತ್ರ, ವೇಷ.

ಪಾತ್ರೆ(ತ್ರ)/ಪಾತ್ರೆ ಸಾಮಾನು: ತಿರುಗಾಟದ ಮೇಳಕ್ಕೆ ಸಂಬಂಧಿಸಿದ ಚೆರಿಗೆ, ಚೆಂಬು, ತಟ್ಟೆ ಮೊದಲಾದ ಪಾತ್ರೆಗಳು.

ಪಾರುಪತ್ಯ: 1. ಮೇಳದ ವ್ಯವಸ್ಥಾಪಕತ್ವ, ವ್ಯವಸ್ಥಾಪನ. ಮೆನೇಜ್‌ಮೆಂಟು.

2. ಮದುವೆ ದೃಶ್ಯಗಳಲ್ಲಿ ಬರುವ ಪಾರುಪತ್ಯ ಹಾಸ್ಯ.

ಪಾಲ್ಘಾಟು ಬೇಗಡೆ: ಹಿಂದೆ, ವೇಷಭೂಷಣ ತಯಾರಿಗೆ ಬಳಸುತ್ತಿದ್ದ ಬೇಗಡೆ. ಕೇರಳದ ಪಾಲ್ಘಾಟಿನಿಂದ ಬರುತ್ತಿತ್ತು.

– ಈಗ ಬೊಂಬಾಯಿ ಬೇಗಡೆ ಬಳಸುತ್ತಾರೆ.

ಪಾರ್ಟಿನವೇಷ/ಪಾರ್ಟುವೇಷ/ಪಾರ್ಟು (ಬ.): ಸಾಂಪ್ರದಾಯಿಕವಲ್ಲದ ವೇಷ ವಿಧಾನ; **'ನಾಟಕದ ವೇಷ'**; ನಾಟಕದ 'ಪಾರ್ಟು' ಎಂಬುದರಿಂದ ಬಂದದ್ದು.

ಪಾರ್ಟು = ನೋಡಿ: **ಪಾರ್ಟಿನ ವೇಷ.**

ಪಾರ್ಟುವೇಷ = ನೋಡಿ: **ಪಾರ್ಟಿನವೇಷ.**

ಪಾಸು: 1. **ಡೇರೆ ಆಟಕ್ಕೆ** ಪ್ರವೇಶ ನೀಡುವ ಉಚಿತ ಪ್ರವೇಶ ಪತ್ರ; Free Pass.

2. ಡೇರೆಯ ಹೊರಗೆ ಬರುವಾಗ ನೀಡುವ 'ಗೇಟ್ ಪಾಸ್'.

ಪಿಂಡಿ: ಜವುಳಿ ಪಿಂಡಿ; ವೇಷದ ಜವುಳಿಯನ್ನು ತುಂಬಿಸಿ, ಇಡುವ, ಬಾಯಿಗೆ ಎಳೆದು ಕಟ್ಟುವ ಹಗ್ಗ ಇರುವ ಉದ್ದದ, ಮದ್ದಲೆಯಾಕಾರದ ಚೀಲ.

ಪಿಂಡಿಯವ(ನು): ಮೇಳದ ಜವುಳಿ ಪಿಂಡಿ ಹೊರುವ ಕೆಲಸಗಾರ. **ಜವುಳಿ ಗಂಟು ಹೊರೆಯವನು** (ಬ). ಪಿಂಡಿ ಹೊರುವುದು, ಬಟ್ಟೆಗಳನ್ನು ಒಣಗಿಸಿ ಸಿದ್ಧಪಡಿಸುವುದು, ನಿಯತವಾಗಿ ಒಗೆದು ಸ್ವಚ್ಛ ಮಾಡುವುದು, ಮತ್ತು ರಾತ್ರ ಚೌಕಿಯಲ್ಲಿ ವೇಷ ಕಟ್ಟಲು ಸಹಾಯ ಮಾಡುವುದು– ಇವನ ಕೆಲಸಗಳು.

ಪಿಟಾರಿ: ಬೆತ್ತದ ಪೆಟ್ಟಿಗೆಗಳು. ಹಿಂದೆ ಮೇಳಗಳು ಸಾಮಗ್ರಿ ತುಂಬಿಸಲು ಇವನ್ನು ಬಳಸುತ್ತಿದ್ದವು. ಈಗ ತಗಡಿನ ಪೆಟ್ಟಿಗೆಗಳು ಬಳಕೆಯಾಗುತ್ತವೆ.

ಪೀಠ: ರಂಗಸ್ಥಳದಲ್ಲಿರುವ ಚಿಕ್ಕ ಮೇಜಿನಂತಹ ಪೀಠ. ರಥ. ಇದೇ ಸಿಂಹಾಸನ, ರಥ, ಬೆಟ್ಟ, ಮೊದಲಾಗಿ ಕಲ್ಪಿಸಲ್ಪಡುತ್ತದೆ. ಇದಕ್ಕೆ ಚಕ್ರಗಳನ್ನು ಜೋಡಿಸಿರುತ್ತಾರೆ.

ಪೀಠಿಕೆ: 1. ಪಾತ್ರ ಪ್ರವೇಶದ ಸ್ವಗತ. ಪೀಠಿಕೆ ಮಾತು.

2. ಸಭಾಲಕ್ಷಣದ ಪ್ರದರ್ಶನದ ಕೊನೆಗೆ ಚಂಡೆ, ಮದ್ದಲೆಗಳ ಬಾರಿಸುವಿಕೆ. **ಪೀಠಿಕೆ ಅಬ್ಬರ** (ಬ).

3. ಪ್ರಸಂಗದ ಮೊದಲ ಒಡ್ಡೋಲಗ.

ಪೀಠಿಕೆ ಅಬ್ಬರ (ಬ.): ಅಬ್ಬರ ಬಡಿತದ ಒಂದು ಪ್ರಭೇದ. ನೋಡಿ: **ಪೀಠಿಕೆ.**

ಪೀಠಿಕೆ ವೇಷ (ತೆ.): ಸುಮಾರಾಗಿ, ಪ್ರಸಂಗದ ನಾಯಕ ಪಾತ್ರ. ರಾಜವೇಷ. ಕಿರೀಟ ಇಟ್ಟು, ಮೀಸೆ ಕಟ್ಟುವ ಕಟ್ಟುವೇಷ. ಇಂದ್ರ, ಅರ್ಜುನ, ರಾಮ, ನಳ– ಇವು ಪೀಠಿಕೆ ವೇಷಗಳು. ಇದೇ **ಪುರುಷ ವೇಷ ಅಥವಾ ಒಂದನೆಯ ವೇಷ** (ಬ.)

ಇದಕ್ಕೆ ವಿರುದ್ಧವಾಗಿರುವುದು, **ಇದಿರುವೇಷ** (ತೆ.), ಅಥವಾ **ಎರಡನೆಯ ವೇಷ** (ಬ.)

ಪೀಠಿಕೆ ವೇಷದ ಮುಖವರ್ಣಿಕೆಯೂ, ಕುಣಿತವೂ ಸೌಮ್ಯವಾಗಿರಬೇಕೆಂದು ಸಂಪ್ರದಾಯ.

ಹೆಚ್ಚಾಗಿ ಈ ವೇಷವೇ ಆಟದ ಮೊದಲ ಒಡ್ಡೋಲಗದಲ್ಲಿ (ಪೀಠಿಕೆ)ಯಲ್ಲಿ ರಂಗಕ್ಕೆ ಬರುತ್ತದೆ.

ಪೀಠಿಕೆ ಸ್ತ್ರೀವೇಷ: ಬ. 1. ಸಭಾಲಕ್ಷಣದ ಕೊನೆಯ ಭಾಗದಲ್ಲಿ ಬರುವ ಸ್ತ್ರೀವೇಷಗಳು. ಇದೇ **ಮುಖ್ಯ ಸ್ತ್ರೀವೇಷ** (ತೆ.).

(ತೆ.) 2. ಪ್ರಸಂಗ ಆರಂಭಕ್ಕೆ ಮೊದಲು ಬರುವ ಎರಡು ವೀರಕಚ್ಚೆಯ ಸ್ತ್ರೀವೇಷಗಳು. ಇವುಗಳಿಗೆ ಇರುವ ಪದ್ಯಗಳನ್ನು ಏರು ಪದ್ಯಗಳಾಗಿ, ಚಂಡೆಯೊಂದಿಗೆ, ಹಾಡುವುದು ವಾಡಿಕೆ.

ಪೀಲಿ : 1. ಹೀಲಿ. ನವಿಲುಗರಿ. ಕಿರೀಟಗಳ ಅಲಂಕರಣ ಸಾಮಾಗ್ರಿ.
2. ನವಿಲುಗರಿಯ ಕಡ್ಡಿ.

ಪೀಲಿಕಿರೀಟ/ಹೀಲಿಕಿರೀಟ : ನವಿಲಿನ ಗರಿ ಸಿಕ್ಕಿಸಿದ (ರಾಜ ವೇಷದ) ಕಿರೀಟ. ಬಡಗು, ಉ.ಕ.ಗಳ ಹೆಣ್ಣು ಬಣ್ಣದ ವೇಷದ ಕಿರೀಟ. ರಾಕ್ಷಸಿ ಕಿರೀಟ ಮತ್ತು ಹಿರಣ್ಯಾಕ್ಷ ಮೊದಲಾದ 'ಅರೆಬಣ್ಣ'ಗಳ ಕಿರೀಟ.

ಪುಂಗಿ : ಹಿಂದೆ ಬಳಸುತ್ತಿದ್ದ ಶ್ರುತಿವಾದ್ಯ. ಮಧ್ಯದಲ್ಲಿ ಕಾಡು ಸೋರೆ ಚಿಪ್ಪು, ಸೋರೆಕಾಯಿ ಚಿಪ್ಪು ಅಥವಾ ತೆಂಗಿನ ಚಿಪ್ಪಿನ ಬುರುಡೆ. ಕೆಳಗೂ ಮೇಲೂ ಸೀಮೆ ಕೋಲಿನ ಓಟೆ ಇರುತ್ತವೆ. ಓಟೆಗೆ ಮೇಲ್ಭಾಗದಲ್ಲಿ ಸ್ವರ ಬರುವ ಜೀವಾಳ (ರೀಡ್) ಸಿಕ್ಕಿಸಿರುತ್ತಾರೆ. ಓಟೆಗೆ ತೂತುಗಳಿದ್ದು, ಸ್ವರ ವ್ಯತ್ಯಾಸ ಮಾಡಿಕೊಳ್ಳಲು, ಆ ತೂತುಗಳಿಗೆ ಕರಿ ಜೇನು ಮೇಣದ ಉಂಡೆಗಳನ್ನು ಬೇಕಾದಂತೆ ಇಡುವರು.

ಪುಂಗಿ ಬುರುಡೆ : 1. = ಪುಂಗಿ.
2. ಪುಂಗಿಯ ಮಧ್ಯ ಭಾಗದ ಬುರುಡೆ, ಕಾಡು ಸೋರೆ, ಸೋರೆ ಅಥವಾ ತೆಂಗಿನ ಕಾಯಿಯ ಕವಚ (ಚಿಪ್ಪು) ಹೆಚ್ಚಾಗಿ ಬಳಕೆ.

ಪುಂಡಿನಾರು : ನೋಡಿ : **ಪುಂಡಿ.**

ಪುಂಡಿ/ಪುಂಡಿನಾರು (ಉ.) : ಒಂದು ಬಗೆಯ ನಾರುಗಿಡ. **(Deckanee Hemp. Hibiscus cannabinus ಮತ್ತು Hibiscus sabdariffa)** ಇದರ ಕೋಲಿನ ತೊಗಟೆಯ ನಾರು ಗಡ್ಡ, ಮೀಸೆ, ಕೂದಲುಗಳಿಗೆ ಬಳಕೆಯಿತ್ತು.

ಪುಂಡು ಒಡ್ಡೋಲಗ (ಬ.) : ಪುಂಡು ವೇಷದ ಪ್ರವೇಶದ ನೃತ್ಯ ಮತ್ತು ಅದರ ಬಡಿತ. ಧೀಗಿಣ. ಇದು ರಾಜ ವೇಷಗಳ ಪ್ರವೇಶಕ್ಕಿಂತ ಚುರುಕಾಗಿ ಇರಬೇಕು. ಬಡಿತಗಳು ಅವೇ.

ಪುಂಡು ವೇಷ : ತರುಣ ವೀರನ ವೇಷ. ಸಣ್ಣ ಪಗಡಿ. ಕೇದಗೆ ಮುಂದಲೆ (ಬ.) ಇಟ್ಟ, ಮೀಸೆ ಇಲ್ಲದ ವೇಷ. ಮೂರನೇ ವೇಷ (ಬ.) ಎಂದು ಇನ್ನೊಂದು ಹೆಸರು. ಕೃಷ್ಣ, ಅಭಿಮನ್ಯು, ಬಭ್ರುವಾಹನ, ಲವಕುಶ ಇತ್ಯಾದಿಗಳು ಪುಂಡುವೇಷಗಳು.

ಪುಂಡು ವೇಷದ ಕುಣಿತ ರಭಸದಿಂದ, ಮುರಿತ, ಮಣಿತಗಳು ಹೆಚ್ಚಾಗಿದ್ದು, ತಾರುಣ್ಯದ ಅಬ್ಬರವನ್ನು ಸೂಚಿಸುವಂತಿರಬೇಕು. ಕುಣಿತದ ಗಾಂಭೀರ್ಯದ ಹದ ಇಲ್ಲಿ ನಿರೀಕ್ಷಿತವಲ್ಲ.

ಪುಂಡುವೇಷಧಾರಿ : ಪುಂಡುವೇಷಗಳನ್ನು ಧರಿಸುವ ವೇಷಧಾರಿ. ಅಭಿಮನ್ಯು, ಬಭ್ರುವಾಹನ, ಲವ-ಕುಶ, ಕೆಲವು ಪ್ರಸಂಗಗಳ ಕೃಷ್ಣ – ಇವು ಈ ಪಾತ್ರಧಾರಿಯ ವೇಷಗಳು. ನೋಡಿ : **ಪುಂಡುವೇಷ.**

ಪುತ್ತಳಿ ಸರ : ಪುತ್ತಳಿ ನಾಣ್ಯಗಳ ಅಥವಾ ಚಕ್ರ ಬಿಲ್ಲೆಗಳ ಸರ. ಪವನು ಸರ. ಮಿಸ್ರಿಮಾಲೆ.

ಪುರಾಣ ಕಿಟ್ಟ : ಹಳೆಯ ಕಬ್ಬಿಣ ಕಿಟ್ಟ. ಮಂಡೂರ. ನೂರಾರು ವರ್ಷ ಹಳೆಯ, ಆಯುಧ ತಯಾರಿ ಕೇಂದ್ರಗಳಲ್ಲಿ, ಕಬ್ಬಿಣದ ಹುಡಿ, ಕಬ್ಬಿಣದ ನೀರು, ಮುರ ಕಲ್ಲುಗಳ ಮೇಲೆ ಹರಿದ ಕಡೆ, ಕಲ್ಲು – ಕಿಟ್ಟಗಳು ಸೇರಿ ಗಟ್ಟಿಯಾಗಿರುತ್ತದೆ. (ಕಾಸರಗೋಡಿನ ಪುತ್ರಕಳ ಇಂತಹ ಪುರಾಣ ಕಿಟ್ಟ ಸಿಗುವ ಒಂದು ಊರು.)

ಇದನ್ನು ಅರೆದು ನುಣುಪು ಹುಡಿ ಮಾಡಿ, ಅರೆಬೆಂದ ಅನ್ನ ಅಥವಾ ಅರೆನನೆದ ಅವಲಕ್ಕಿಯ ಜತೆ ಪುನಃ ಅರೆದು, ಗುಲಗುಂಜಿ ಅಂಟಿನಲ್ಲಿ, ಮದ್ದಲೆಗೆ ಕರ್ನ, ಹಾಕಲು ಬಳಸುವರು. ನೋಡಿ: **ಕರ್ನ.**

ಪುರಾಣ ಪ್ರಸಂಗ : ಹಳೆಯ ಪೌರಾಣಿಕ ಪ್ರಸಂಗ. ಕಲ್ಪಿತ ಅಥವಾ ಆಧುನಿಕವಲ್ಲದ ಪ್ರಸಂಗ.

ಪುರುಷ ವೇಷ : (ಬ.) 1. ನಾಯಕ ಪಾತ್ರವೆಂಬ ಸ್ಥೂಲ ಅರ್ಥ. (ತೆಂಕುತಿಟ್ಟಿನ ಪೀಠಿಕೆ ವೇಷಕ್ಕೆ ಸಮಾನಾರ್ಥಕ) ಉದಾ : 'ಕರ್ಣಾರ್ಜುನ'ದ ಅರ್ಜುನ, 'ಸುಧನ್ವಾರ್ಜುನ'ದ ಸುಧನ್ವ. ನಾಯಿಕೆಯಾದ ಸ್ತ್ರೀವೇಷದ ಹೋಲಿಕೆಯಿಂದ, ನಾಯಕ ಪಾತ್ರಕ್ಕೆ 'ಪುರುಷ ವೇಷ' ಎಂಬ ಹೆಸರು ಬಂದಿರಬೇಕು.
2. ಗಂಡು ವೇಷ. ಪುರುಷ ಪಾತ್ರ. ಸ್ತ್ರೀ, ಪುರುಷ ವಿಭಾಗದ ಸಾಮಾನ್ಯ ಅರ್ಥದಲ್ಲಿ.

ಪುರೋಹಿತ ಹಾಸ್ಯ : 1. ಪೂರ್ವರಂಗದ ಕಟ್ಟು ಹಾಸ್ಯಗಳಲ್ಲೊಂದು. ಭಟ್ಟನ ಹಾಸ್ಯ.
2. ಮದುವೆ ದೃಶ್ಯದಲ್ಲಿ ಹಾಸ್ಯಗಾರನು ವಹಿಸುವ ಪಾತ್ರ.

ಪುರ್ಬು = ನೋಡಿ : **ಕ್ರಿಶ್ಚನ್, ಕಿರಿಸ್ತಾನ್.**

ಪೂಂಬೆ ಕಿರೀಟ : 'ಪೂಂಬೆ' (ತುಳು) ಎಂದರೆ ಬಾಳೆ ಕುಂಡಿಗೆ. ಅದರಂತಿರುವ ಕಿರೀಟ. ಇದೇ **ಕೋಲು ಕಿರೀಟ, ಕಿರೀಟ** ಅಥವಾ **ರಾಜ ಕಿರೀಟ.**

ಆಚೀಚೆ ಮಡಚಿಕೊಂಡಿರುವ ಹಾಳೆ ಇರುವ ಬಾಳೆ ಕುಂಡಿಗೆಯನ್ನು ತಲೆಕೆಳಗೆ ಮಾಡಿ ಹಿಡಿದರೆ ಕಂಡು ಬರುವುದೇ ಕಿರೀಟದ ಆಕಾರವಾಗುತ್ತದೆ. ಹಾಗಾಗಿ ಈ ಹೆಸರು.

ಪೂಗೋಲು (ಉ.) : ಅಂಚಿನಲ್ಲಿ ಕೆತ್ತನೆ ಇರುವ, ಬಾಣದ ಕಡ್ಡಿ. ಮನ್ಮಥನ ವೇಷಕ್ಕೆ ವಿಶೇಷವಾಗಿ ಬಳಕೆ.

ಪೂಜೆ = ನೋಡಿ : **ದೇವರ ಪೂಜೆ.**

ಪೂಜೆ ಸಾಮಾನು: ಪೂಜಾ ಸಾಹಿತ್ಯ. ಆಟ ಆಡಿಸುವವರು, ಮೇಳಕ್ಕೆ ಕೊಡಬೇಕಾದ ಪೂಜಾ ಸಾಮಗ್ರಿ (ಈ ನಿಯಮ ಕೆಲವು ಮೇಳಗಳಲ್ಲಿ ಮಾತ್ರ ಇದೆ.) ನೋಡಿ : **ದೇವರ ಸಾಮಾನು.**

ಪೂರ್ವಕಥೆ: 1. ಭಾಗವತನು ಹೇಳುವ ಪೂರ್ವ ಕಥಾಸಾರ. ನೋಡಿ : **ಕಥಾನುಸಾರ.**

2. ಪಾತ್ರ ಪ್ರವೇಶ ಸ್ವಗತ. ನೋಡಿ : **ಪೀಠಿಕೆ.**

ಪೂರ್ವರಂಗ: ಕಥಾರಂಭಕ್ಕೆ ಮೊದಲು ಜರಗುವ ದೇವತಾಸ್ತುತ್ಯಾತ್ಮಕವಾದ, ಮತ್ತು ಹಾಸ್ಯ ಪ್ರಕರಣಗಳ ಪ್ರದರ್ಶನ. ನೋಡಿ : **ಸಭಾಲಕ್ಷಣ.**

ಪೆಟ್ಟಿಗೆ: ಮೇಳದ ಸಾಮಗ್ರಿ ಪೆಟ್ಟಿಗೆಗಳು. ಹಿಂದೆ ಬೆತ್ತದ ಪಿಟಾರಿಗಳು. ಈಗ ಮರದ ಮತ್ತು ತಗಡಿನ ಪೆಟ್ಟಿಗೆಗಳು.

(ಬ.) ಗಣಪತಿ ಪೆಟ್ಟಿಗೆ, ಶ್ರುತಿ ಪೆಟ್ಟಿಗೆ, ಅಡ್ಡ ಪೆಟ್ಟಿಗೆ (ಅಡ್ಡ ಹೊರೆ), ಸರಕಿನ ಪೆಟ್ಟಿಗೆ (ಮೂರು) ಇವು ಪೆಟ್ಟಿಗೆಗಳು. ಇದಲ್ಲದೆ ಜವುಳಿ ಹೊರೆ (ಎರಡು) ರಥದ ಹೊರೆ, ಹಚ್ಚಿಗೆ ಗಂಟು ಎಂಬ ಮೂಟೆಗಳು.

ಗಣಪತಿ ಪೆಟ್ಟಿಗೆಯೊಳಗೆ ಲೆಕ್ಕಪತ್ರ, ಹಣ, ದಾಸ್ತಾನು ಇರುವ **ದಾಸ್ತಾನು ಪೆಟ್ಟಿಗೆ** ಇಡುತ್ತಾರೆ.

(ತೆ.) ದೇವರ ಪೆಟ್ಟಿಗೆ, ದೊಡ್ಡ ಪೆಟ್ಟಿಗೆ, ತೆರೆಪೆಟ್ಟಿಗೆ (ಎರಡು. ಈ ಎರಡರಲ್ಲಿ ವೇಷಗಳ ಸಾಮಾನುಗಳು ಇರುವ ಸಣ್ಣಪೆಟ್ಟಿಗೆಗಳು. ಒಂದರಲ್ಲಿ ಏಳರಂತೆ), ಹಾಸ್ಯದ ಪೆಟ್ಟಿಗೆ, ಲೈಟಿನ ಪೆಟ್ಟಿಗೆ, ಶ್ರುತಿ ಪೆಟ್ಟಿಗೆ– ಎಂದು ಪೆಟ್ಟಿಗೆಗಳು. ದೇವರ ಪೆಟ್ಟಿಗೆಯ ಒಳಗೆ ದಾಸ್ತಾನು ಪೆಟ್ಟಿಗೆ ಇರುತ್ತದೆ.

ಈ ಪೆಟ್ಟಿಗೆಗಳಲ್ಲದೆ ಜವುಳಿ ಪಿಂಡಿ, ರಥದ ಹೊರೆ, ಅಡ್ಡೋರೆ, ಚಾಪೆ ಕಟ್ಟು, ಇವು ಮೂಟೆಗಳು.

(ಉ) : ಸುಮಾರಾಗಿ ಬಡಗು ತಿಟ್ಟಿನಂತೆ. ದೇವರ ಪೆಟ್ಟಿಗೆಗೆ **ಮುಖವಾಡದ ಪೆಟ್ಟಿಗೆ** ಎನ್ನುವರು.

ಪೆಟ್ಟಿಗೆ ಇಡುವುದು: 1. ಪೆಟ್ಟಿಗೆ ಒಳಗೆ ಇಡುವುದು. ಮೇಳದ ತಿರುಗಾಟ ಮುಗಿದು, ಸಾಮಗ್ರಿಗಳು ಸಂಬಂಧಪಟ್ಟ ದೇವಾಲಯದ ಸ್ವಾಧೀನಕ್ಕೆ ಬರುವುದು.

2. ತಿರುಗಾಟ ಮುಕ್ತಾಯವಾಗುವುದು.

ಪೆಟ್ಟಿಗೆ ಇಳಿಸುವುದು, (- ಇಡುವುದು) : ಮೇಳವು ಊರ ಗಣ್ಯರ ಅಥವಾ ಮೊದಲೇ ಆಟ ಆಡಿಸಲು ಒಪ್ಪಿದ ಹರಕೆಯವರ ಮನೆ ಬಾಗಿಲಿಗೆ ಬಂದು, ಪೆಟ್ಟಿಗೆಗಳನ್ನು ಅಂಗಳದಲ್ಲಿ ಇರಿಸುವುದು.

ಪೆಟ್ಟಿಗೆ ಒಳಗಾಗುವುದು: ಮೇಳದ ತಿರುಗಾಟ ಮುಗಿಯುವುದು.

ಪೆಟ್ಟಿಗೆ ಜನ: ಮೇಳದ ಪೆಟ್ಟಿಗೆಗಳಿಗೆ ಸಂಬಂಧಿಸಿದ ನಿಶ್ಚಿತ ಜನ. ಉದಾ: ದೇವರ ಪೆಟ್ಟಿಗೆಯವನು, ಅಡ್ಡೋರೆಯವನು, ಶ್ರುತಿ ಪೆಟ್ಟಿಗೆಯವನು, ಇತ್ಯಾದಿ. ಇವರಿಗೆ ಆಯಾ ಪೆಟ್ಟಿಗೆ ಹೊರುವ ಕೆಲಸ ಮತ್ತು ಹಗಲು, ರಾತ್ರಿಗಳಲ್ಲಿ ನಿಶ್ಚಿತ ಪಾಳಿಗಳು ಇರುತ್ತವೆ.

ಪೆಟ್ಟಿಗೆ ತೆಗೆಯುವುದು (ಹೊರಗೆ ತೆಗೆಯುವುದು) :

1. ತಿರುಗಾಟ ಮುಗಿದು ಒಳಗಿಟ್ಟ ಪೆಟ್ಟಿಗೆಗಳನ್ನು ಸಾಮಗ್ರಿಗಳ ದುರಸ್ತಿಗಾಗಿ ಹೊರಗೆ ತೆಗೆಯುವುದು. ಹಳೆ ಸಂಪ್ರದಾಯದಂತೆ, ಇದು ಸಿಂಹ ಸಂಕ್ರಮಣಕ್ಕೆ (ಆಗೋಸ್ತು ತಿಂಗಳ ಮಧ್ಯಭಾಗ) ಆಗಬೇಕು. ಆ ಮೊದಲು ಪೆಟ್ಟಿಗೆ ತೆಗೆಯಬಾರದೆಂಬುದು ನಿಯಮ.

2. ತಿರುಗಾಟಕ್ಕೆ ಹೊರಡಲನುವಾಗಿ ಪೆಟ್ಟಿಗೆಗಳನ್ನು ತೆಗೆದು ಸಿದ್ಧ ಪಡಿಸುವುದು.

ಪೆಟ್ಟಿಗೆ ಹೊರಡುವುದು: 1. ಮೇಳದ ತಿರುಗಾಟ ಪ್ರಾರಂಭವಾಗುವುದು.

2. ಆಟ ಮುಗಿದು, ಮೇಳದ ಸಾಮಗ್ರಿಯು, ಮುಂದಿನ ಸ್ಥಳಕ್ಕೆ ಹೊರಡುವುದು.

ಪೆಟ್ಟು: ಚಾಗಟೆಗೆ, ಮದ್ದಲೆಗೆ, ಚಂಡೆಗೆ ಬಡಿಯುವ ತಾಳದ ಪೆಟ್ಟುಗಳು; ಹೊಡೆತಗಳು.

ಇದರಲ್ಲಿ **ದೊಡ್ಡಪೆಟ್ಟು, ಸಣ್ಣಪೆಟ್ಟು, ಹುಸಿಪೆಟ್ಟು,** ಮುಂತಾದುವುಗಳಿವೆ.

ಪೆಪ್ಪು ಕಟ್ಟುವುದು/ಕೆಪ್ಪು ಕಟ್ಟುವುದು: ಚಂಡೆ, ಮದ್ದಲೆಗಳು ಕಿವುಡಾಗುವುದು; ನಾದ ಹೀನವಾಗುವುದು. ನಾದ ಶುಷ್ಕವಾಗುವುದು. ನಾದದ ದೀರ್ಘತೆ, ಕಂಪನ, ಓಂಕಾರ ಇಲ್ಲದಾಗುವುದು. ಕೆಪ್ಪಾಗುವುದು. ವಾದ್ಯಗಳನ್ನು ಬಹುಕಾಲ ಬಾರಿಸದೆ ಇಟ್ಟರೆ ಅಥವಾ ಶ್ರುತಿ

ಮಾಡುವಾಗ ಅಳತೆ ಮೀರಿ ಪೆಟ್ಟು ಹಾಕಿದರೆ ಹೀಗಾಗುತ್ತದೆ.

ಪೇಚಕ: ಮುಖಾಲಂಕಾರದ ಮಿನುಗು ಹುಡಿ. ಜಿಗ್‌ಜಿಗ್‌ಪುಡಿ. ಹಿಂದೆ ಕಾಗೆಬಂಗಾರದ (ಬಿಂಗ) ಹುಡಿ ಬಳಸುತ್ತಿದ್ದರು. ಈಗ ಜರಿಹುಡಿ ಬಳಸುತ್ತಾರೆ. ಇದನ್ನು ಎಣ್ಣೆ ಅಥವಾ ಅಂಟು ಬೆರೆಸಿ ಹೊಳಪಿನ ನಾಮ, ರೇಖೆ, ಮುದ್ರೆ, ಇಡಲೂ ಬಳಸುವರು.

ಪೇಟಾ: 1. ತಲೆಗೆ ಸುತ್ತುವ ಅಥವಾ ಸಿದ್ಧವಾಗಿರುವ ಉರುಟು ಮುಂಡಾಸು. ಮಂತ್ರಿ, ಚಾರಕ ಮೊದಲಾದ ಪಾತ್ರಗಳ ಮುಂಡಾಸುಗಳು. ಈಗ 'ನಾಟಕವೇಷ'ವೆಂಬ ವೇಷವಿಧಾನದಲ್ಲಿ ಹಲವು ಬಗೆಯ ಪೇಟಗಳು ಬಳಕೆಯಲ್ಲಿವೆ.

(ಬ.) 2. ಕೇದಗೆ ಮುಂದಲೆ, ಮುಂಡಾಸುಗಳ ಬಟ್ಟೆ. ಇದನ್ನು ತಲೆಗೆ ಕಟ್ಟಿ, ಅದರ ಮೇಲೆ ಮುಂದಲೆ ಬಿಗಿಯುವರು. ಅನಂತರ ಆ ಬಟ್ಟೆಯೇ ಮುಂಡಾಸು, ಕೇದಗೆ ಮುಂದಲೆಗಳ ಮುಚ್ಚುವ ಬಟ್ಟೆ, ಪೇಟದ ವಸ್ತ್ರ. ಅಂದರೆ ಅಟ್ಟೆಗಳನ್ನು ಇದರಿಂದ ಮುಚ್ಚಿ, ಅದರ ಮೇಲೆ ಜರಿ ಲಾಡಿಗಳನ್ನು ಸುತ್ತಿ ಕಟ್ಟುವರು.

3. ಭಾಗವತರ ಮುಂಡಾಸು.

ಪೊಗಡೆ (ಉ.): ಪಗಡಿ. ಕೇದಗೆ ಮುಂದಲೆ ಪಗಡಿ (ಸಣ್ಣ ಪೊಗಡೆ), ದೊಡ್ಡ ಮುಂಡಾಸು (ದೊಡ್ಡ ಪಗಡೆ, ಮುಂಡಾಸು) ಸೇರಿ ಈ ಪದ. ಹಿಂದೆ ಪೊಗಡೆಗಳಿಗೆ ಕೇದಗೆ ಸರ ಇರಲಿಲ್ಲ.

ಪೊರಪ್ಪಾಡ್(ಟ್)/ಪೊರ್ಪಾಡ್ (ತೆ.): ಹೊರಡುವಿಕೆ ಎಂಬ ಅರ್ಥದ ಮಲೆಯಾಳ ಶಬ್ದ.

ಬಣ್ಣದ ವೇಷಗಳ ಪ್ರವೇಶ ನೃತ್ಯ. ಇದರಲ್ಲಿ ವೇಷವು ಚೌಕಿಯಿಂದ ಮೂರು ಆರ್ಭಟೆಗಳನ್ನು ಕೊಟ್ಟು ಅನಂತರ ರಂಗಸ್ಥಳದ ಬಾಗಿಲಲ್ಲಿ ತೆರೆ ಕಲಾಶ ಕುಣಿದು ಆ ಬಳಿಕ ರಂಗಸ್ಥಳದಲ್ಲಿ ತೆರೆಹಿಡಿದು ತಗ್ಗಿಸಿದಲ್ಲಿಗೆ ದೀವಟಿಗೆಗೆ ರಾಳ ಎರಚಿ ಸಭಾ ವೀಕ್ಷಣೆ ಮಾಡುವುದು. ಅನಂತರ ನಿತ್ಯವಿಧಿಗಳಾದ ಕನ್ನಡಿ ನೋಡುವುದು, ಹಲ್ಲುಜ್ಜುವುದು, ಸ್ನಾನ, ಭಸ್ಮಲೇಪನ, ಶಿವಲಿಂಗ ಅರ್ಚನೆ– ಇತ್ಯಾದಿಗಳ ಅಭಿನಯ.

ಈ ಪೈಕಿ ಭಸ್ಮಧಾರಣೆ, ಶಿವಲಿಂಗ ಪೂಜೆ ಇವು ಹಿಂದೆ ರಾವಣ, ಮಾಗಧರಿಗೆ ಮಾತ್ರ ಇದ್ದುವೆಂದೂ ಉಳಿದ ರಾಕ್ಷಸರಿಗೆ ಸ್ನಾನ, ಆಗಿ ಒಂದು ನಮಸ್ಕಾರ ಮಾತ್ರ ಇದ್ದುದೆಂದೂ ಹೇಳುತ್ತಾರೆ. ಕಾಡುರಕ್ಕಸರಿಗೆ, ಮೂರು ಆರ್ಭಟೆ ಆಗಿ, ದೀಗಿಣದಲ್ಲಿ ಪ್ರವೇಶವನ್ನೇ ಕೊಡುವ ಕ್ರಮವಿದ್ದಿತು.

ಹೆಣ್ಣು ಬಣ್ಣದ (ರಾಕ್ಷಸಿ) ಪೊರಪ್ಪಾಡಿನಲ್ಲಿ ಆರ್ಭಟೆ, ತೆರೆಕುಣಿತಗಳಾದ ಅನಂತರ, ಸ್ನಾನ, ತಲೆ ಬಾಚುವಿಕೆ, ಶೃಂಗಾರ ಮಾಡುವುದು ಇತ್ಯಾದಿ ಅಭಿನಯಗಳಿರುತ್ತವೆ.

ಹನುಮಂತನ ಪೊರಪ್ಪಾಡಿನಲ್ಲಿ ಕಪಿಚೇಷ್ಟೆಗಳೂ, ಅನಂತರ ದಶಾವತಾರ ತೋರಿಸುವಿಕೆಯೂ ಇವೆ.

ಬಣ್ಣದ ವೇಷವು, ತೆರೆಯಲ್ಲಿನ ಕುಣಿತಗಳಾದ ಬಳಿಕ ನೇರ ಪೀಠಕ್ಕೆ ಹೋಗಿ ಕುಳಿತುಕೊಳ್ಳಬಹುದು. ಅಥವಾ ಚೌಕಿಗೆ ಹೋಗಿ ಪುನಃ ಧಿಗಿಣದಲ್ಲಿ ಪ್ರವೇಶಿಸಬಹುದು.

ಪೊರ್ಪಾಡ್ = ನೋಡಿ: **ಪೊರಪ್ಪಾಡ್.**

ಪೋಸ್ಟರು: ಆಟದ ಪ್ರಚಾರದ ಭಿತ್ತಿಪತ್ರಗಳು. (Wall posters) ಇದರಲ್ಲಿ ಕೈಬರಹದವು, ಮುದ್ರಿತ, ವರ್ಣಚಿತ್ರ ಸಹಿತ ಎಂಬ ಮೂರು ಬಗೆ.

ಪೌಡರ್: ಮುಖವರ್ಣಿಕೆಯನ್ನು ಒಣಗಿಸಲು ಬಳಸುವ ಪಫಿಂಗ್ ಪೌಡರ್. Face Powder ಎಣ್ಣೆಯಲ್ಲಿ ಮತ್ತು ವ್ಯಾಸಲೀನ್‌ನಲ್ಲಿ ಕಲಸಿ ಬಣ್ಣಹಚ್ಚುವ ಕ್ರಮ ಬಂದ ಅನಂತರ ಬಳಕೆಗೆ ಬಂದಿತು. ಹಿಂದೆ, ಹಸಿಬಣ್ಣಗಳಿರುತ್ತಿದ್ದುವು.

ಪ್ರತ್ಯಕ್ಷ: ದೇವಿ, ಬ್ರಹ್ಮ, ಶಿವ ಮೊದಲಾದವರು ಪ್ರತ್ಯಕ್ಷರಾಗುವುದು. ಕಥೆಯಲ್ಲಿ ಈ ವೇಷಗಳಿಗೆ ಪ್ರತ್ಯಕ್ಷರಾಗುವುದು ಮಾತ್ರ ಕೆಲಸವಾಗಿದ್ದರೆ, ಆ ವೇಷ ಸರಳವಾಗಿದ್ದರೆ ಸಾಕೆಂದು ಹೊಂದಾಣಿಕೆಯಿದೆ. ಇಂತಹ ವೇಷಗಳಿಗೆ ಪ್ರತ್ಯಕ್ಷ ವೇಷ ಎಂದೂ ಹೆಸರಿದೆ. ಉದಾ: ಪ್ರತ್ಯಕ್ಷಬ್ರಹ್ಮ, ಪ್ರತ್ಯಕ್ಷದ ಬ್ರಹ್ಮ.

ಪ್ರದ್ಯುಮ್ನ ವೇಷಧಾರಿ: ಪಾಂಡವಾಶ್ವಮೇಧ ಪ್ರಸಂಗವನ್ನಾಧರಿಸಿ ಮೇಳವನ್ನು ಸಂಘಟಿಸುವಾಗ, ಬಂದ ಒಂದು ಪರಿಭಾಷೆ. ವೇಷಧಾರಿಯೊಬ್ಬನ ಸ್ಥಾನ. 'ಪ್ರದ್ಯುಮ್ನ ಕಟ್ಟುವವ'ನೆಂದೂ ಹೇಳುವರು.

ಪ್ರಭಾವಳಿ: 1. ಬಣ್ಣದ ವೇಷದ ಕಿರೀಟದ (ಬಣ್ಣದ ತಟ್ಟೆಯ) ಹಿಂಭಾಗದ ವೃತ್ತಾಕಾರದ ಭಾಗ. ಬಟ್ಟಲಿನಾಕೃತಿ.

2. ವೀರಭದ್ರನ ವೇಷಕ್ಕೆ ಹಿಂಬದಿಯಲ್ಲಿ ಕಟ್ಟುವ ಕಮಾನು, **ಅಣಿ.**

3. ಇತ್ತೀಚೆಗೆ ಉ.ಕ., ಬಡಗುತಿಟ್ಟುಗಳಲ್ಲಿ, ರಾಕ್ಷಸ ಪಾತ್ರಗಳಿಗೆ ರಾಜಕಿರೀಟ ಕಟ್ಟಿ ಅದರ ಹಿಂದೆ, ಉರುಟು ಪ್ರಭಾವಳಿ ಕಟ್ಟುವರು.

ಪ್ರಯಾಣ ಕುಣಿತ (-ಹಜ್ಜೆ): ಸವಾರಿ ಹಜ್ಜೆ. ಪ್ರಯಾಣವನ್ನು ಅಭಿನಯಿಸುವ ಕುಣಿತ. ಬ.

ಉ.ಗಳಲ್ಲಿ ಸುಮಾರು ಹನ್ನೆರಡು ಬಗೆಯ ಪ್ರಯಾಣ ಹಜ್ಜೆಗಳಿವೆ. ತೆಂಕುತಿಟ್ಟಿನಲ್ಲಿ ಒಂದೆರಡು ಬಗೆಗಳು ಮಾತ್ರ ಉಳಿದಿವೆ.

– ಇದು ಏಕತಾಳದಲ್ಲಿ ನಡೆಯುವ ಕುಣಿತ.

ಪ್ರಯಾಣ ಹಜ್ಜೆ = ನೋಡಿ: **ಪ್ರಯಾಣ ಕುಣಿತ.**

ಪ್ರವೇಶ/ಪ್ರವೇಶ ಕುಣಿತ: 1. ವೇಷದ ಪ್ರವೇಶ, ಪ್ರವೇಶ ಕ್ರಮ, ಪ್ರವೇಶ ನೃತ್ಯ, ಒಡ್ಡೋಲಗ. ಎಂದರೆ ಆಯಾ ಪಾತ್ರದ ಮೊದಲ ಪ್ರವೇಶ. ಪ್ರವೇಶದಲ್ಲಿ ವಿಧಗಳು:

ಅ) ಬಣ್ಣದ ವೇಷದ ಪ್ರವೇಶ = ನೋಡಿ: **ಪೊರಪ್ಪಾಡ್.**

ಇದರಲ್ಲಿ ರಾಜ ಬಣ್ಣ, ಕಾಟು ಬಣ್ಣ, ಹೆಣ್ಣು ಬಣ್ಣಗಳ ಪ್ರವೇಶಗಳೆಂದು ಒಳ ವಿಭಾಗಗಳು.

ಆ) ಇತರ ಪುರುಷ ಪಾತ್ರಗಳು: ಕಥೆಯ ಮೊದಲ ಪ್ರವೇಶ **ಒಡ್ಡೋಲಗ**ವಾದರೆ ತೆರೆಕುಣಿತ, ರಂಗಸ್ಥಳದಲ್ಲಿ ತೆರೆ ನಾಟ್ಯ ಅನಂತರ 'ಧಿಗಿಣ' ಪ್ರವೇಶಗಳೆಂಬ ಮೂರು ಹಂತಗಳಿವೆ. ರಾಮ ಲಕ್ಷ್ಮಣರು, ಪಾಂಡವರು, ದೇವೇಂದ್ರ, ಕಾರ್ತವೀರ್ಯ – ಈ ಪಾತ್ರಗಳಿಗೆ ಸಭಾಕಲಾಸು ಎಂಬ ಹೆಚ್ಚುವರಿ ನೃತ್ಯವಿರುತ್ತದೆ.

ಇ) ಕಥಾಮಧ್ಯದಲ್ಲಿ ಪುರುಷ ಪಾತ್ರಗಳಿಗೆಲ್ಲ ಕೊಡುವ ಪ್ರವೇಶ 'ಧಿಗಿಣ/ಧೀಂಗಿಣ'ವೆಂಬ ಬಡಿತಕ್ಕೆ ಕುಣಿಯುತ್ತ ಬರುವುದು. ಇದರಲ್ಲಿ ಪುಂಡುವೇಷಗಳಾದರೆ ಪ್ರವೇಶ ಚುರುಕಾಗಿ ಕುಣಿಯಬೇಕು. ರಾಜವೇಷವಾದರೆ ಗಂಭೀರ ವಾಗಿ ಬರಬೇಕು.

ಕೆಲವೊಮ್ಮೆ **ಕಾಟುಬಣ್ಣ** (ಕಾಡುರಕ್ಕಸ) ಗಳಿಗೂ, **ಜೊತೆ** ಬಣ್ಣ (ಶುಂಭನ ಜತೆಯ ನಿಶುಂಭ ಇತ್ಯಾದಿ)ಗಳಿಗೆ ಸಹ ನೇರ 'ಧಿಗಿಣ' ಅಥವಾ 'ರಡ್ಡೀಂಗಿಣ'ವೆಂಬ ಪ್ರವೇಶವನ್ನು, ತೆರೆಕುಣಿತವಿಲ್ಲದೆ, ಮಾಡುವುದುಂಟು.

ಈ) ಕಿರಾತನ ಪ್ರವೇಶ: ಕಿರಾತನು, ಹಿಂದಿನಿಂದ ಅವನ ಪಡೆ ಬೊಬ್ಬೆ ಹಾಕುತ್ತ, ಹುಲ್ಲಿಗೆ ಬೆಂಕಿ ಹಾಕುತ್ತ ಬರುತ್ತಿರುವಂತೆ 'ತೃತ ತಕತ' ವೆಂಬ ನಡೆಯಲ್ಲಿ ಬಂದು, ಅನಂತರ 'ಧಿಗಿಣ'ದಲ್ಲಿ ಕುಣಿಯುವನು.

ಉ) ಸ್ತ್ರೀವೇಷಗಳ ಪ್ರವೇಶದಲ್ಲಿ ನಾಲ್ಕು ಬಗೆ:

i) ಹಿರಿಯ ಪಾತ್ರ, ತಾಯಿಯ ಸ್ಥಾನದ ಪಾತ್ರವಾದರೆ ತೆರೆಯ ಮರೆಯಲ್ಲಿ ಬಂದು ಕುಳಿತಾಗ, ತೆರೆ ಸರಿಸುವುದು.

ii) ನಾಯಕಿ ಸ್ಥಾನದ ಪಾತ್ರವಾದರೆ, ಆದರ ಮೊದಲ ಪದ್ಯದ, ಮೊದಲ ಮುಕ್ತಾಯ–ಬಿಡ್ತಿಗೆಗೆ ಪ್ರವೇಶ.

iii) ಪುರುಷ ಪಾತ್ರದ ಜತೆಗೆ ಬರುವುದಾದರೆ, ಅಥವಾ ಕರೆದಲ್ಲಿಗೆ ಬರುವ ಪಾತ್ರವಾದರೆ, ಸಾದಾ ರೀತಿಯಲ್ಲಿ ನಡೆದುಕೊಂಡು ಪ್ರವೇಶ.

iv) ವೀರಸ್ತ್ರೀ (ಪ್ರಮೀಳೆ, ಶಶಿಪ್ರಭೆ) – ಕಸೆ ವೇಷದ ಸ್ತ್ರೀಪಾತ್ರ – ಆದರೆ, ಗಂಡು ಪಾತ್ರಗಳಂತೆ 'ಧಿಗಿಣ'ದಲ್ಲಿ ಪ್ರವೇಶ.

– ಕೆಲವೊಮ್ಮೆ ಹಾಸ್ಯಗಾರನು ಪದ್ಯಹಾಡಿಕೊಂಡು ಪ್ರವೇಶಿಸುವುದಿದೆ. ಕೊರವಂಜಿಗೂ ಹಾಡುತ್ತ ಪ್ರವೇಶವಿದೆ.

2. ಪ್ರವೇಶದ ಮಾತು. ಪೀಠಿಕೆ.

ಪ್ರವೇಶ ಕುಣಿತ (–ನಾಟ್ಯ): ಪಾತ್ರ ಪ್ರವೇಶದ ಕುಣಿತ. ಇದಕ್ಕೆ ಚೆಂಡೆ, ಮದ್ದಲೆಗಳೆರಡೂ ಬಾರಿಸಲ್ಪಡಬೇಕು. ಪ್ರವೇಶ ಕುಣಿತವು ಇಡಿಯ ರಂಗವನ್ನು ಆವರಿಸಿ ನರ್ತಿಸಲ್ಪಡಬೇಕು. ನೋಡಿ: **ಪ್ರವೇಶ.**

ಪ್ರವೇಶ ನಾಟ್ಯ = ನೋಡಿ: **ಪ್ರವೇಶ ಕುಣಿತ.**

ಪ್ರಸಂಗ: 1. ಯಕ್ಷಗಾನ ಕಾವ್ಯ. ಹಾಡುಹಬ್ಬ. ಹಿಂದೆ 'ಯಕ್ಷಗಾನ'ವೆಂಬ ಹೆಸರಿದ್ದುದು ಈ ಪ್ರಬಂಧ ವಿಶೇಷಕ್ಕೆ. ಅದರಿಂದಲೇ ಇಡಿಯ ರಂಗಭೂಮಿಗೆ ಯಕ್ಷಗಾನವೆಂಬ ಹೆಸರಾಯಿತು. ತೆಲುಗು ಲಕ್ಷಣ ಗ್ರಂಥಗಳಲ್ಲಿ 'ಯಕ್ಷಗಾನ'ವೆಂದರೆ, ವಿವಿಧ ಜಾತಿಯ ಪದ, ಪದ್ಯಗಳಿರುವ ಗೇಯ ಕಾವ್ಯವೆಂದು ಹೇಳಿದೆ.

ಪ್ರಸಂಗವೆಂಬ ರಚನೆಯಲ್ಲಿ ವಿವಿಧ ವೃತ್ತಗಳು, ಹಾಡುಗಳು, ಕಂದ, ಷಟ್ಪದಿ, ದ್ವಿಪದಿ, ಸಾಂಗತ್ಯ, ಶ್ಲೋಕಗಳೂ, ಚೂರ್ಣಿಕೆಗಳೂ, ಸೇರಿರುತ್ತವೆ. ಏಲೆ, ಸೀಸ ಪದ್ಯಗಳೂ ಇವೆ.

ವಿವಿಧ ತಾಳ, ರಾಗಗಳಲ್ಲಿರುವ ಹಾಡು ಗಳಲ್ಲದೆ, ಸ್ವಲ್ಪಾಂಶ ವಚನವೆಂಬ ಪದ್ಯಗಂಧಿ ಗದ್ಯವೂ ಇರುತ್ತದೆ. ಆರಂಭದಲ್ಲಿ ಸ್ತುತಿ ಪದ್ಯ ಗಳು, ಕಥನ ಸಂದರ್ಭಗಳೂ, ಕೊನೆಗೆ ಮಂಗಲ ಪದ್ಯಗಳೂ ಇರುತ್ತವೆ. ಈ ಪ್ರಸಂಗವೆಂಬುದು, ಮೂಲತಃ ಪುರಾಣ ಕಥೆಯನ್ನು ಹಾಡುಗಳ ರೂಪದಲ್ಲಿ ತಿಳಿಸಲು ಬರೆದ ಪ್ರಬಂಧ ಜಾತಿ ಯೆಂದೂ, ಅನಂತರ ಇದು ಪ್ರದರ್ಶನ ಕಲೆಯ ಆಧಾರವಾಗಿ ನಿಂತಿತೆಂದೂ, ಹಿಂದಿನ ಪ್ರಸಂಗ ಗಳನ್ನು ನೋಡಿದರೆ ತಿಳಿಯುತ್ತದೆ. ಸು. 1,500ರಿಂದಲೂ ಕನ್ನಡದಲ್ಲಿ ಯಕ್ಷಗಾನ ಪ್ರಸಂಗಗಳಿದ್ದಿರಬೇಕು. ಯಕ್ಷಗಾನ ವಾಲ್ಮೀಕಿ ಯೆನಿಸಿದ ಪಾರ್ತಿಸುಬ್ಬನ ಕಾಲ ಸು. ಕ್ರಿ. 1,600.

ಪ್ರಸಂಗದ ಪದ್ಯಗಳಲ್ಲಿ, ಷಟ್ಪದಿ, ದ್ವಿಪದಿ, ಕಂದ, ಶ್ಲೋಕ, ವೃತ್ತ, ವಚನಗಳನ್ನು ವಿತಾಲವಾಗಿ, ಉಳಿದವುಗಳನ್ನು ವಿವಿಧ

ತಾಳಗಳಲ್ಲಿ ಹಾಡುವುದು ಸಂಪ್ರದಾಯ. ಕೆಲವು ಪ್ರದೇಶಗಳಲ್ಲಿ, ಪದ್ಯಗಳಿಗೆ ಸಂಬಂಧಿಸಿದ ಮಾತುಗಳು (ಅರ್ಥ) ಲಿಖಿತವಾಗಿ, ಪ್ರಸಂಗ ಪ್ರತಿಗಳಲ್ಲೆ ಇರುತ್ತವೆ.

ಪ್ರಸಂಗವೆಂಬುದು, ಪ್ರದರ್ಶನದ ಸ್ಥೂಲ ಆಧಾರ. ಕತೆಯ ನಡೆಗೂ, ಪಾತ್ರಗಳ ಮಾತುಗಳಿಗೂ ಅದು ಚೌಕಟ್ಟು. ಪ್ರಸಂಗ ಸಾಹಿತ್ಯವು ವಿಸ್ತಾರವಾಗಿ ಬೆಳೆದಿದ್ದು, ಸಾವಿರಕ್ಕೂ ಮಿಕ್ಕಿ ಪ್ರಸಂಗಗಳಿವೆ. ಈ ಶತಮಾನದ ಉತ್ತರಾರ್ಧದಲ್ಲೆ ಸು. ಐನೂರು ಕೃತಿಗಳು ರಚಿಸಲ್ಪಟ್ಟಿವೆ.

2. **ತಾಳಮದ್ದಲೆಗೂ ಪ್ರಸಂಗ, ತಾಳಮದ್ದಲೆ ಪ್ರಸಂಗವೆನ್ನುವರು.** ಉ. ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಈ ಅರ್ಥವು ರೂಢಿಯಲ್ಲಿದೆ.

ಪ್ರಸಂಗ ಓದುವುದು : ತಾಳಮದ್ದಲೆಯ ನಾಮಾಂತರ. ಓದಿಕೆ. ವಿಶೇಷತಃ, ಹಿಮ್ಮೇಳ ವಾದ್ಯಗಳಿಲ್ಲದೆ, ಪದ್ಯಗಳನ್ನು ಓದಿ, ಅದಕ್ಕೆ ಅರ್ಥಹೇಳುವ ಕ್ರಮದ ತಾಳಮದ್ದಲೆಗೆ ಈ ಹೆಸರು.

ಪ್ರಸಂಗ ಪೀಠಿಕೆ: 1. ಸಭಾಲಕ್ಷಣ ಮುಗಿದು, ಕಥಾರಂಭಕ್ಕೆ ಮೊದಲು ಚೆಂಡೆ, ಮದ್ದಲೆಗಳಲ್ಲಿ ಬಾರಿಸುವ ವಾದನ. ಪೀಠಿಕೆಯೆಂದೂ ಹೆಸರಿದೆ.

2. ಪ್ರಸಂಗದ ಆರಂಭದಲ್ಲಿರುವ ಕೆಲವು ಪದ್ಯಗಳು. ಕತೆಯ ಹಿನ್ನೆಲೆ, ಯಾರು ಯಾರಿಗೆ ಹೇಳಿದ ಕಥೆ ಮುಂತಾದ ವಿವರವುಳ್ಳ ಪದ್ಯಗಳು– ಉದಾ: ಮುನಿಪ ವೈಶಂಪಾಯ ಜನಮೇ। ಜಯಗೆ ಪೇಳ್ದಿರೆ ಭಾರತವನುರೆ।.... ಇತ್ಯಾದಿ.

ಪ್ರಸಂಗ ಮಾಹಿತಿ: ಪ್ರಸಂಗ ಕಾವ್ಯ, ಅದರ ಕಥೆ, ಮತ್ತು ಅದರ ರಂಗದ ನಡೆ. ಇವುಗಳ ಮಾಹಿತಿ, ಅನುಭವ.

ಪ್ರಾಣಪೆಟ್ಟು: ತಾಳದ **ಘಾತ ಪೆಟ್ಟು** ಮುಖ್ಯವಾಗಿ ಮೊದಲ ಘಾತ.

ಪ್ರಾಣಾಕ್ಷರ: 1. ಪ್ರಾಣಪೆಟ್ಟಿಗೆ ಸಿಗುವ ಅಕ್ಷರ. ಪದ್ಯ ಚರಣದ ಮೊದಲ ಅಕ್ಷರ.

2. ಪ್ರಾಸದ ಅಕ್ಷರ. ಪ್ರತಿ ಚರಣದ ದ್ವಿತೀಯ ಅಕ್ಷರ.

ಪ್ರಾರ್ಥನೆ ಪದ: ಚೌಕಿಯಲ್ಲಿ ಪೂಜೆಗೂ, ಪ್ರಸಂಗದ ಆರಂಭಕ್ಕೂ ಹೇಳುವ ಸುತ್ತಿಪದ.

ಪ್ರಾಸು: 1. ಪದ್ಯದಲ್ಲಿ ಬರುವ ಪ್ರಾಸ, ಮುಖ್ಯವಾಗಿ ದ್ವಿತೀಯಾಕ್ಷರ ಪ್ರಾಸ, ಅಂತ್ಯಾಕ್ಷರ ಪ್ರಾಸ.

2. ಪದ್ಯದ ಚರಣ.

ಪ್ಲೋಟ್: ಇಂಗ್ಲಿಷಿನ **Plot** ಎಂಬುದರಿಂದ ಬಂದ ಪದ, ಆದರೆ ಅರ್ಥ ತುಸು ಭಿನ್ನ.

– ಕಲಾವಿದರು ತಮ್ಮೊಳಗೆ ಮಾಡಿಕೊಂಡ ನಿಶ್ಚಿತ ನಡೆ, ಮುಖ್ಯವಾಗಿ ಮಾತುಗಾರಿಕೆಯ ಸ್ಥೂಲ ಪಾಠ.

– ತುಸು ನಿಂದಾರ್ಥಕವಾಗಿಯೂ ಬಳಕೆ ಯಿದೆ. ಸೃಷ್ಟಿಶೀಲವಲ್ಲದ, ಸಿದ್ಧ ಮಾತುಗಾರಿಕೆ ಎಂಬ ಅರ್ಥ. ಉದಾ: ''ಅವರಿಬ್ಬರ ಸಂವಾದ ವೆಂದರೆ ಪ್ಲೋಟು''.

– ಮೇಳದ 'ಪ್ಲೋಟ್' ಎಂದರೆ, ಒಂದು ಪ್ರಸಂಗಕ್ಕೆ ಒಂದು ಮೇಳವು ಸಿದ್ಧಪಡಿಸಿದ ಪ್ರದರ್ಶನ ರೂಪ. **Production text and frame.**

ಬ

ಬಜಿಲು ಸಜ್ಜಿಗೆ ಪ್ರಸಂಗ (ತೆ.): 1. ('ಬಜಿಲು' ಎಂದರೆ ಅವಲಕ್ಕಿ) ಅವಲಕ್ಕಿ ಸಜ್ಜಿಗೆಯಂತೆ ಮಿಶ್ರಣದ ರೂಪದ ಕತೆಯುಳ್ಳ ಪ್ರಸಂಗ, ವ್ಯವಸ್ಥಿತವಲ್ಲದ್ದು ಎಂದರ್ಥ.

2. ಎರಡು, ಮೂರು ಪ್ರಸಂಗಗಳನ್ನು ಜೋಡಿಸಿ ರೂಪಿಸಿದ ಪ್ರಸಂಗ.

ಬಟವಾಡೆ: (ಬಟಾವಟ್, ಬಟ್‌ವಾರಾ (ಹಿಂದಿ)) ಸಂಬಳದ ಒಂದು ಅಂಶವನ್ನು, ಮೇಳದ ಕಲಾವಿದರಿಗೆ, ಸಿಬಂದಿಗಳಿಗೆ, ಮೂರು ದಿನಗಳಿಗೊಮ್ಮೆ ಕೊಡುವುದು; ಹಂಚುವುದು; ಸಾಮಾನ್ಯವಾಗಿ, ಸಂಬಳದ ಮೂರನೇ ಒಂದು ಪಾಲನ್ನು ಹಂಚಿ ಕೊಡುವ ಕ್ರಮವಿದೆ. ಈ ಮೊತ್ತ ಹೆಚ್ಚು ಕಡಮೆ ಆಗಬಹುದು. ಇದನ್ನು ಕಲಾವಿದ-ಯಜಮಾನರು ಒಪ್ಪಂದದಿಂದ ನಿರ್ಣಯಿಸುತ್ತಾರೆ. ಈ ಬಟವಾಡೆ ಎಂಬುದು ತಿರುಗಾಟದಲ್ಲಿ ಖರ್ಚಿಗಾಗಿ ಪಡೆಯುವ ಹಣ.

ಬಟ್ಟಲು ಕಿರೀಟ: ಹಿಂಬದಿಯಲ್ಲಿ ವೃತ್ತಾಕಾರವಾದ, ಬಟ್ಟಲಿನಂತಹ ಪ್ರಭಾವಳಿಯಿರುವ ಕಿರೀಟ; ಬಣ್ಣದ ವೇಷವು ಧರಿಸುವ ಕಿರೀಟ. ನೋಡಿ : **ತಡ್ಪೆ ಕಿರೀಟ, ಕೇಶಭಾರ ಕಿರೀಟ.**

ಬಡಗುತಿಟ್ಟು: ಬಡಗತಿಟ್ಟು, ಬಡಗುಮಟ್ಟು ಯಕ್ಷಗಾನದ ಬಡಗಣ ಶೈಲಿ.

ಕರಾವಳಿಯ ಪಡುಬಿದ್ರಿಯಿಂದ-ಕಾರ್ಕಳ-ನಾರಾವಿ ರಸ್ತೆಯ ಉತ್ತರಕ್ಕೆ, ಕುಂದಾಪುರ ತಾಲೂಕಿನ ತುದಿ, ಗಟ್ಟದ ಮೇಲೆ ಸಾಗರ, ತೀರ್ಥಹಳ್ಳಿವರೆಗೆ ಪ್ರಚಲಿತವಿರುವ ಯಕ್ಷಗಾನ ಪ್ರಭೇದ. ವ್ಯಾಪಕಾರ್ಥದಲ್ಲಿ ಉತ್ತರಕನ್ನಡತಿಟ್ಟೂ ಬಡಗುತಿಟ್ಟಿನಲ್ಲೆ ಬರುತ್ತದೆ.

ಕರಾವಳಿಯ ಬಡಗು ಭಾಗದಲ್ಲಿರುವ ಕಲಾ ಸಂಪ್ರದಾಯವಾದುದರಿಂದ 'ಬಡಗುತಿಟ್ಟು' ಎಂದು ಜನಪ್ರಿಯವಾದ ಅಭಿಪ್ರಾಯ. ಆದರೆ, ಅದು ಹಾಗಲ್ಲ, 'ಬಡಗ' ಎಂದರೆ ಆಂಧ್ರದ, ತೆಲುಗ ಎಂಬ ಅರ್ಥವೆಂದೂ, ನಮ್ಮ ಬಡಗು ತಿಟ್ಟಿಗೂ, ಆಂಧ್ರದ ಸಾಂಪ್ರದಾಯಿಕ ರಂಗ ಭೂಮಿಗೂ, ಈಗಲೂ ಸ್ಪಷ್ಟ ಸಾಮ್ಯವಿದೆ, ಅದರ ರೂಪಾಂತರವೇ ಇದೆಂದೂ, ಹಾಗಾಗಿ ಆಂಧ್ರ ದಿಂದ ಬಂದದ್ದೆಂಬ ಅರ್ಥದಲ್ಲಿ ಈ ಹೆಸರೆಂದೂ ಒಂದು ಮತ (ಕುಕ್ಕಿಲ ಕೃಷ್ಣಭಟ್ಟ: ರಂಗ ವೈಖರಿ) – ಇದಕ್ಕೆ ಭಿನ್ನವಾಗಿರುವ ತೆಂಕುತಿಟ್ಟು ಎಂದರೆ 'ತೆಂಕಿನ' ಅಂದರೆ ಕೇರಳದ ಪ್ರಭಾವದ ರೂಪ ಎಂದು ಅರ್ಥವೆಂಬ ಈ ಮತದವರ ವಾದ.

ಹಿಮ್ಮೇಳ, ಮುಮ್ಮೇಳಗಳಲ್ಲಿ ಈ ತಿಟ್ಟಿಗೆ ಖಚಿತವಾದ ಪ್ರತ್ಯೇಕ ಸ್ವರೂಪವಿದೆ. ಈ ತಿಟ್ಟಿನ ಭಾಗವತರು ಕಂಚಿನ ತಾಳವನ್ನು ತಾಳವಾದ್ಯವಾಗಿ ಬಳಸುವರು. ಚೌಕುಳಿ ಸೀರೆಯ ಕಸೆ, ಅಟ್ಟೆಗಳ ಮೇಲೆ ಜರಿ ಸುತ್ತಿದ ಮುಂಡಾಸುಗಳು, ಲಾಸ್ಯ ಪ್ರಧಾನವಾದ ನೃತ್ಯ ಈ ತಿಟ್ಟಿನ ವೈಶಿಷ್ಟ್ಯ. ಇಲ್ಲಿಯ ಚೆಂಡೆಯೆಂಬುದು ತಾಸೆಯೆಂಬ ವಾದ್ಯದ ಪರಿವರ್ತಿತ ರೂಪ. ಹಿಂದೆ ತಾಸೆ (ತಾಸುಮಾರು) ಯನ್ನೆ ಬಾರಿಸುತ್ತಿದ್ದರು. ಹಸ್ತಾಭಿನಯ, ಮುದ್ರೆಗಳ ಬಳಕೆ ಈ ತಿಟ್ಟಿನಲ್ಲಿ ಕಡಮೆ.

ಮಾರಣಕಟ್ಟೆ ಮೇಳ, ಸೌಕೂರು ಮೇಳ, ಮಂದಾರ್ತಿ ಮೇಳ, ಪೆರ್ಡೂರು ಮೇಳ, ಕೋಟದ ಅಮೃತೇಶ್ವರಿ ಮೇಳ– ಇವು ಈ ತಿಟ್ಟಿನ ಪ್ರಾಚೀನ ಮೇಳಗಳು. ಇವು ಈಗಲೂ ಇವೆ. ಅಲ್ಲದೆ, ಬೇರೆ ನಾಲ್ಕಾರು ಮೇಳಗಳೂ ಇವೆ.

ಉ.ಕನ್ನಡ ತಿಟ್ಟು, ಬಡಗುತಿಟ್ಟಿನದೆ ವಿಸ್ತರಣವಾಗಿದ್ದು, ಸದ್ಯ ಇವೆರಡೂ ತಿಟ್ಟುಗಳು, ಒಂದೇ ಆಗಿ ವಿಲೀನವಾಗುತ್ತ ಬಂದಿವೆ. ಈ ಪ್ರಕ್ರಿಯೆ 1970ರಿಂದ ಮೊದಲಾಯಿತೆನ್ನಬಹುದು. **ನೋಡಿ: ತಿಟ್ಟು, ತೆಂಕುತಿಟ್ಟು, ಉತ್ತರಕನ್ನಡತಿಟ್ಟು.**

ಬಡ್ತಿಗೆ: ಚೆಂಡೆ ಮದ್ದಲೆಗಳ ಬಡಿತದ ನಿಶ್ಚಿತ ಖಂಡಗಳು **ಬಡಿತ, ಬಡ್ತಿಗೆ.**

ಬಣ್ಣ: 1. **ನೋಡಿ: = ಬಣ್ಣದವೇಷ.**

2. ಬಣ್ಣಗಾರಿಕೆಗೆ ಬಳಸುವ ಬಣ್ಣಗಳು. ಹಿಂದೆ ಅರದಾಳ, ಜಂಗಲ್‌ಪಚ್ಚೆ, ಅಕ್ಕಿಹಿಟ್ಟು, ಅರಸಿನ, ಕುಂಕುಮ, ಕಲ್ಲುಹುಡಿ, ಜೇಡಿಮಣ್ಣು, ಎಣ್ಣೆ ಕಾಡಿಗೆ, ಮಸಿತುಂಡುಗಳನ್ನು ಬಳಸುತ್ತಿದ್ದರು. ಈಗ ಅರಸಿನ, ಕುಂಕುಮ, ಕಾಡಿಗೆ, ಅಕ್ಕಿಹಿಟ್ಟುಗಳು ಬಳಕೆಯಲ್ಲಿವೆ. ಉಳಿದಂತೆ ಮಾರುಕಟ್ಟೆಯ ರಾಸಾಯನಿಕ ಬಣ್ಣಗಳನ್ನು ಬಳಸುವರು.

ಬಣ್ಣವನ್ನು ನೀರಿನಲ್ಲೆ ಕಲಸಿ ಹಚ್ಚುತ್ತಿದ್ದರು. ಅನಂತರ ವ್ಯಾಸಲೀನ್ ಮಿಶ್ರಿತ ಬಣ್ಣಗಳೂ, ಎಣ್ಣೆಯಲ್ಲಿ ಕಲಸಿದ ಬಣ್ಣಗಳೂ ಬಳಕೆಯಾದುವು. ಈಗ ಎಣ್ಣೆಯಲ್ಲಿ ಕಲಸಿದ ಬಣ್ಣಗಳೇ ಬಳಕೆಯಲ್ಲಿವೆ.

ಬಣ್ಣದವನು(ರು): ಬಣ್ಣದವೇಷ ಧರಿಸುವ ವೇಷಧಾರಿ. ರಾಕ್ಷಸ ಪಾತ್ರಧಾರಿ. ಮೇಳದಲ್ಲಿ ಇಬ್ಬರು ಈ ಸ್ಥಾನದವರಿರುತ್ತಾರೆ. ಒಂದನೆಯ ಬಣ್ಣದವನು, ಮತ್ತು ಒತ್ತು ಬಣ್ಣ ಅಥವಾ ಎಡೆ ಬಣ್ಣದವನು.

ಬಣ್ಣದ ಒಡ್ಡೋಲಗ: ಬಣ್ಣದ ವೇಷದ ಪ್ರವೇಶ. **ನೋಡಿ: ಪೊರಪ್ಪಾಡ್.**

ಬಣ್ಣದ ಕರಡಿಗೆ: ಬಣ್ಣದ ಹುಡಿಗಳನ್ನು ತುಂಬಿಸಿ ಇಟ್ಟ ಕರಡಿಗೆಗಳು.

ಬಣ್ಣದಕಲ್ಲು: 1. ಬಣ್ಣವನ್ನು ಅರೆದು, ಕಲಸಿ ಇಡುವ ನಯವಾದ ಕಲ್ಲು.

2. ಕಲ್ಲು ಬಣ್ಣ. ಅರದಾಳದ ಕಲ್ಲು, ಕೆಂಪು ಕಲ್ಲು ಇತ್ಯಾದಿ.

ಬಣ್ಣದ ಕಿರೀಟ: ಬಣ್ಣದ ವೇಷವು ಧರಿಸುವ ಕಿರೀಟ. **ನೋಡಿ: ಬಟ್ಟಲು ಕಿರೀಟ.**

ಬಣ್ಣಕ್ಕೆ ಕುಳಿತುಕೊಳ್ಳುವುದು: ಬಣ್ಣಗಾರಿಕೆ-Make-up -ಆರಂಭಿಸುವುದು.

ಬಣ್ಣಗಾರಿಕೆ: ಬಣ್ಣಹಾಕುವಿಕೆ, ಬಣ್ಣಬರೆಯುವಿಕೆ; Make-up.

ಬಣ್ಣದ ತಟ್ಟೆ (ಬ.): ಬಣ್ಣದ ಕಿರೀಟ. ಬೆತ್ತ, ಬೀಳಲುಗಳ 'ತಟ್ಟೆ'ಯ ಆಕಾರದಲ್ಲಿ ತಯಾರಿಸುವುದರಿಂದ ಈ ಹೆಸರು.

ಬಣ್ಣ ತೆಗೆಯುವುದು: ಬಣ್ಣವನ್ನು ಒರೆಸಿ ತೆಗೆಯುವುದು. ಮುಖಕ್ಕೆ ಎಣ್ಣೆ ಉಜ್ಜಿ, ಬಟ್ಟೆಯಿಂದ ಬಣ್ಣವನ್ನು ಒರಸಿ ತೆಗೆಯುವರು.

ಬಣ್ಣದ ಪ್ರವೇಶ = **ನೋಡಿ: ಪೊರಪ್ಪಾಡ್.**


ಬಣ್ಣದ ಪೆಟ್ಟಿಗೆ: ಬಣ್ಣದ ಕರಡಿಗೆಗಳನ್ನು ಇಡುವ ಪೆಟ್ಟಿಗೆ.

ಬಣ್ಣದ ಬಟ್ಟೆ: ಬಣ್ಣವನ್ನು ಉಜ್ಜಿ ತೆಗೆಯಲು ಬಳಸುವ ಹರಕು ಬಟ್ಟೆಗಳು.



ಬಣ್ಣದವೇಷ

ಕಿರೀಟ ಹಿಂಭಾಗ



ಬಣ್ಣಬರೆಯುವುದು : ಮೂಲಲೇಪನವಾದ ಬಳಿಕ, ಬಣ್ಣದಿಂದ ನಾಮ, ಮುದ್ರೆ, ಹುಬ್ಬು ಇತ್ಯಾದಿಗಳನ್ನು ಬರೆಯುವುದು.

ಬಣ್ಣದ ಬೊಬ್ಬೆ = ನೋಡಿ : **ಅಟ್ಟಹಾಸ, ಆರ್ಭಟ.**

ಬಣ್ಣ ಹಾಕುವುದು : ಬಣ್ಣ ಹಚ್ಚುವುದು. ಬಣ್ಣಗಾರಿಕೆಯ ಕೆಲಸ ಮಾಡುವುದು.

ಬಣ್ಣದ ಕಡ್ಡಿ : ವೇಷಧಾರಿಯು ಬಣ್ಣವನ್ನು ಬರೆಯಲು ಬಳಸುವ ಕಡ್ಡಿ. ಇದು ಸಿದ್ಧವಾದುದಾಗಿರ ಬಹುದು ಅಥವಾ ಪ್ರತಿಸಲವೂ ತಯಾರಿಸಿ ಕೊಳ್ಳುವುದಾಗಬಹುದು. ನೋಡಿ : ಕಡ್ಡಿ.

ಬಣ್ಣದವೇಷ / ಬಣ್ಣ : ಯಕ್ಷಗಾನದ ಮುಖ್ಯ ವಾದೊಂದು ಪಾತ್ರಪ್ರಕಾರ, ವೇಷಜಾತಿ. ರಾಕ್ಷಸ ಪಾತ್ರಗಳೂ, ಉಗ್ರ ಪ್ರಕೃತಿಯ ಕೆಲವು ಇತರ ಪಾತ್ರಗಳೂ, ಕೆಲವು ವಿಶಿಷ್ಟ ಪಾತ್ರಗಳೂ ಈ ಸಾಲಿಗೆ ಬರುತ್ತವೆ. ಉದಾ : ರಾವಣ, ಮಾಗಧ, ನರಕಾಸುರ, ವಾಲಿ ಇಂತಹ ಪಾತ್ರಗಳೂ, ಯಮ, ಭೀಮ, ಮತ್ಸ್ಯಾವತಾರ ವೇಷಗಳೂ, ವರಾಹ, ನರಸಿಂಹ, ಸುಗ್ರೀವ, ಹನುಮಂತ, – ಈ ವಿಶಿಷ್ಟ ವೇಷಗಳೂ ಬಣ್ಣದ ವೇಷಗಳೆನಿಸುತ್ತವೆ.

ಈ ಹೆಸರಿನ ನಿಷ್ಪತ್ತಿ ಹೇಗೆ? ತುಂಬ ಬಣ್ಣ ಹಾಕುವುದರಿಂದ, ಬಣ್ಣ ಬಣ್ಣಗಳಿಂದ ಕೂಡಿಡು ವುದರಿಂದ ಬಣ್ಣದವೇಷ ಎಂಬ ಒಂದು ಸಾಮಾನ್ಯ ಅಭಿಪ್ರಾಯ. 'ಬಣ್ಣ' ಎಂದರೆ ವಿಸ್ತಾರ, ದೊಡ್ಡದು ಎಂದು ಅರ್ಥ. ಹಾಗಾಗಿ ಈ ಹೆಸರೆಂದು ಮತ್ತೊಂದು ತರ್ಕ. (ಅಮೃತ ಸೋಮೇಶ್ವರ: ಮೌಖಿಕ ಚರ್ಚೆಯಲ್ಲಿ : 1992)

'ಬಣ್ಣ' ಎಂಬುದಕ್ಕೆ ವೇಷವೆಂದೇ ಅರ್ಥ ಮಾಡಬೇಕು. ಬಣ್ಣದ ಬದುಕು, ಬಣ್ಣ ಹಾಕು– ಎಂಬಲ್ಲೆಲ್ಲ ಇದೇ ಅರ್ಥ. ಹಾಗಾಗಿ, ಮೂಲತಃ ಯಕ್ಷಗಾನದಲ್ಲಿ ಎಲ್ಲ ವೇಷಗಳಿಗೂ ಈ ಹೆಸರಿದ್ದಿರಬೇಕು. ಅನಂತರ ಪ್ರಧಾನವಾದ ಎರಡು ವೇಷಗಳಿಗೆ ಮಾತ್ರ ಅದು ಉಳಿದು, ಉಳಿದ ವೇಷಗಳಿಗೆ ಬೇರೆ ಪದಗಳು ಬೆಳೆದು ಬಂದುವು– ಇದು ಇನ್ನೊಂದು ಊಹೆ. (ಮುಳಿಯ ಮಹಾಬಲಭಟ್ಟ : ಬಣ್ಣದ ವೇಷ : 1988)

ಈ ವೇಷವು, ಹಿಂದಿನ ಸಂಪ್ರದಾಯದಂತೆ, ಮೇಳದ ಹಿರಿಯ ಕಲಾವಿದನಿಗೆ ಸೇರಿದ್ದು. ಕೋಡಂಗಿ, ಬಾಲಗೋಪಾಲ ವೇಷಗಳಿಂದ ತೊಡಗಿ, ದೊಡ್ಡ ವೇಷಗಳಿಗೆ ಬಂದು, ಕೊನೆಯ ಹಂತವೆಂದರೆ ಬಣ್ಣದ ವೇಷದ ಸ್ಥಾನ. ಬಣ್ಣದ ಮನೆಯಲ್ಲಿ ಎರಡೂ ಸಾಲುಗಳಲ್ಲಿ ಮೊದಲ ಸ್ಥಾನ ಬಣ್ಣದ ವೇಷಗಳಿಗೆ.

ಮುಖವರ್ಣಿಕೆ ಮತ್ತು ಕಿರೀಟಗಳ ರಚನೆ ಯಲ್ಲಿ ಈ ವೇಷಗಳ ವೈಶಿಷ್ಟ್ಯ. ಈ ವೇಷಗಳಿಗೆ ಮೂಲಲೇಪನ **(Base make-up)** ಇಲ್ಲ. ಕಪ್ಪು ಬಣ್ಣದಿಂದ ಗೆರೆಗಳ ವಿನ್ಯಾಸಗಳನ್ನು ಎಳೆದು, ಅದರ ಮೇಲೆ ಚುಟ್ಟಿ ಮುಳ್ಳುಗಳನ್ನು ಎಂದರೆ ಬೆಳ್ತಿಗೆ ಅಕ್ಕಿಯ ಹಿಟ್ಟು ಮತ್ತು ಸುಣ್ಣಗಳ 2 : 1ರ ಮಿಶ್ರಣವನ್ನು ಉಪಯೋಗಿಸಿ ಮುಳ್ಳುಗಳ ಸಾಲನ್ನು ನಿರ್ಮಿಸುತ್ತಾರೆ. (ನೋಡಿ : **ಚುಟ್ಟಿ**).

ಈ 'ಚುಟ್ಟಿ' ಇಡುವಿಕೆಯೆಂಬುದು ನಿಧಾನ ವಾಗಿ ನಡೆಸುವ ಬಣ್ಣಗಾರಿಕೆ. 'ಚುಟ್ಟಿ' ಇಡುತ್ತ, ಅದು ಒಣಗಿದಂತೆ, ಮುಖಕ್ಕೆ ಅಲ್ಲಲ್ಲಿ ಬಣ್ಣವನ್ನು ತುಂಬಿಸುತ್ತ ಮುಖವರ್ಣಿಕೆ ಪೂರ್ತಿಗೊಳಿಸ ಬೇಕು. ಈ ಚುಟ್ಟಿಗಳ ವಿನ್ಯಾಸವು ಬಣ್ಣದ ವೇಷದ ವರ್ಗವನ್ನು ಹೊಂದಿಕೊಂಡಿದೆ.

ರಾಜ ಬಣ್ಣಗಳಿಗೆ 'ಸುಳಿ' ಇರುವ ಚುಟ್ಟಿ. **ಕಾಟು**ಬಣ್ಣಗಳಿಗೆ ಸುಳಿಗಳಿಲ್ಲ. ವಾಲಿ, ಸುಗ್ರೀವರಿಗೆ ಹಿಟ್ಟಿನ ಬದಲು ಹತ್ತಿಯ ಬತ್ತಿಗಳನ್ನು ಚುಟ್ಟಿಯಾಕಾರದಲ್ಲಿ ಅಂಟಿಸುವರು. ಹನುಮಂತನಿಗೆ ಮುಖಕ್ಕೆ ಹಸಿರು ಬಣ್ಣ ಹಚ್ಚಿ, ಮಂಗನ ಮುಖದ ಆಕಾರ ಬರೆದು ಅದರ ಸುತ್ತ ಐದು ಅಥವಾ ಏಳು ಚೇಳುಕೊಂಡಿ ಸುಳಿ ಬರೆಯುವರು.

ಸಾಮಾನ್ಯವಾಗಿ ಬಣ್ಣದವೇಷಗಳ ಚುಟ್ಟಿ, ಸುಳಿಗಳ ಪ್ರಭೇದ ಮೀಸೆಗಿಂತ ಮೇಲಿನ ಭಾಗದಲ್ಲಿ ಮಾತ್ರ. ಕೆಳಗಿನ, ಕಿವಿಯಿಂದ ಕಿವಿಯವರೆಗೆ ಇರುವ ಚುಟ್ಟಿಗಳ ಸಾಲು ಒಂದೇತೆರನಾಗಿರುತ್ತದೆ. ರಾಕ್ಷಸಿ ವೇಷಗಳಿಗೆ ಹೆಣ್ಣು ಬಣ್ಣದವೇಷಗಳೆನ್ನುವರು. ಇದರ ಮುಖಕ್ಕೆ ಕಪ್ಪು ಬಣ್ಣ ಹಾಕಿ, ಕೋರೆ ಹಲ್ಲಿನ ಆಕೃತಿ ಬರೆದು ಮೂಗುತಿ ಬರೆಯುವರು. ಬಣ್ಣದ ವೇಷ (ಗಂಡು)ಗಳಿಗೆ **ಭುಜಮುಳ್ಳಿನ** ಬದಲು, **ಭುಜದಂಬೆ** ಎಂಬ ದೊಡ್ಡ ಭುಜ ಕಿರೀಟವನ್ನು ಬಳಸುವರು. ಬಣ್ಣದ ವೇಷಗಳ ಕಿರೀಟಗಳು ನಾಲ್ಕು ಬಗೆ– **ಬಟ್ಟಲು ಕಿರೀಟ, ಭೀಮನ ಮುಡಿ, ಹೆಣ್ಣು ಬಣ್ಣದ ಕಿರೀಟ (ಹೀಲಿ ಕಿರೀಟ, ಕುತ್ತರಿ)** ಮತ್ತು ಹನುಮಂತನ ವಿಶಿಷ್ಟ ಕಿರೀಟ.

ಬಣ್ಣದ ವೇಷಗಳ ನೃತ್ಯ, ಚಲನೆ, ಮಾತು, ಅಭಿವ್ಯಕ್ತಿ ವಿಧಾನ– ಇವು ಘೋರವೂ, ನಿಧಾನವೂ ಆಗಿ ಇರಬೇಕು. ಪ್ರವೇಶದಲ್ಲೂ, ಮಾತಿನ ಮಧ್ಯವೂ ಬಣ್ಣದವೇಷವು ಆರ್ಭಟೆ ಕೊಡುತ್ತಿರಬೇಕು. ಕಪಿ ವೇಷಗಳಾದರೆ, 'ಬುಯ್ಯೋ' ಎಂದೂ, 'ಹ್ಯಕ್ ಟುರ್ರ್' ಎಂದೂ ಹೇಳಬೇಕು.

ಬಡಗುತಿಟ್ಟಿನ ಬಣ್ಣದವೇಷದ ಕ್ರಮಗಳೂ, ವೇಷವಿಧಾನವೂ ತೆಂಕುತಿಟ್ಟಿನಂತೆಯೇ ಆದರೂ,

ಅಲ್ಲಿ ಈ ವೇಷಕ್ಕೆ ಮಹತ್ತ್ವ ಕಡಮೆ. ಉತ್ತರ ಕನ್ನಡತಿಟ್ಟಿನಲ್ಲಿ ಇನ್ನಷ್ಟು ಕಡಮೆ. ಈಗ ಇವೆರಡೂ ತಿಟ್ಟುಗಳಲ್ಲಿ ಈ ವೇಷವು ಲುಪ್ತ ವಾಗುತ್ತ ಬಂದಿದೆ. ಬಣ್ಣದ ವೇಷವು ಮುಖ್ಯವಾಗಿ ತೆಂಕುತಿಟ್ಟಿನ ವೈಶಿಷ್ಟ್ಯ.

ಬಣ್ಣದ ವೇಷದ ಪ್ರವೇಶ ಕ್ರಮವು ಉಳಿದ ವೇಷಗಳಿಗಿಂತ ಭಿನ್ನ.

ನೋಡಿ: **ಪೊರಪ್ಪಾಡ್, ಕೇಶಾವರಿ ಕಿರೀಟ, ಪ್ರವೇಶ, ಅಟ್ಟಹಾಸ.**

ಬಣ್ಣದ ವೇಷದ ಒಡ್ಡೋಲಗ (-ಪ್ರವೇಶ): ನೋಡಿ: **ಒಡ್ಡೋಲಗ; ಪೊರಪ್ಪಾಡ್; ಪ್ರವೇಶ.**

ಬತ್ತಿ: ದೀಪದ ಬತ್ತಿ, ಹತ್ತಿಯ ಸುರುಳಿ.

ಬತ್ತೀಸ ತಾಳ: ಮೂವತ್ತೆರಡು ತಾಳಗಳು. ತಾಳ ಪದ್ಧತಿಯ ವಿಕಾಸದ ಒಂದು ಹಂತದಲ್ಲಿ ಇದ್ದ ತಾಳಗಳ ಸಂಖ್ಯೆ ಮತ್ತು ವಿಧಾನ. ಪಾರ್ತಿಸುಬ್ಬನ ಪಂಚವಟಿ ಪ್ರಸಂಗದಲ್ಲಿ – ''ಬತ್ತೀಸಾಕೃತಿ ರಾಗ ತಾಳ ವಿಧದಿಂ। ರಾಮಾಯಣಂ ಪೇಳಿದ।'' ಎಂದು ಇದೆ. ಹೀಗಾಗಿ, ಯಕ್ಷಗಾನದಲ್ಲೂ ಬತ್ತೀಸ ತಾಳಗಳು ಬಳಕೆಯಿದ್ದುವೆಂದೂ, ಈಗಲೂ ಅವು, ಸದ್ಯ ಇರುವ ತಾಳ ಪದ್ಧತಿಯಲ್ಲಿ ಅಂತರ್ಗತವಾಗಿವೆಯೆಂದೂ ಒಂದು ಅಭಿಪ್ರಾಯ ವಿದೆ. (ದಿ। ಕುಕ್ಕಿಲ ಕೃಷ್ಣ ಭಟ್ಟ: ಪಾರ್ತಿಸುಬ್ಬನ ಯಕ್ಷಗಾನಗಳು, ಸಂ. 1975).

ಬತ್ತೀಸ ರಾಗ: ಮೂವತ್ತೆರಡು ರಾಗಗಳು. ರಾಗಗಳ ಬೆಳವಣಿಗೆಯ ಆರಂಭಿಕ ಹಂತದಲ್ಲಿದ್ದ ರಾಗಸಂಖ್ಯೆ ಮತ್ತು ವಿಧಾನ. ಇದು ಮೇಳಕರ್ತ, ಜನ್ಯ-ಜನಕಾದಿ ರಾಗಗಳ ವಿಭಾಗದ ಹಂತಕ್ಕಿಂತ ಹಿಂದಿನ ಸ್ಥಿತಿ. ಯಕ್ಷಗಾನದಲ್ಲೂ ಇವು ಬಳಕೆಯಲ್ಲಿದ್ದುವೆನ್ನುವರು. (ಕುಕ್ಕಿಲ: ಪೂರ್ವೋಕ್ತ ಕೃತಿ)

ಬನ್ನಿರಯ್ಯ = ನೋಡಿ: **ಬಲ್ಲಿರೇನಯ್ಯ.**

ಬಯಲಾಟ / ಬೈಲಾಟ: 1. ಇಂದು ನಾವು ಯಕ್ಷಗಾನ ಪ್ರದರ್ಶನವೆಂದು ಕರೆಯು ತ್ತಿರುವುದರ, ಹಳೆಯ ಹೆಸರು. ಪ್ರಾಚೀನ ರಂಗ ಸಂಪ್ರದಾಯಗಳಿಗೆ ಹಲವು ಕಡೆ ಇದೇ ಅರ್ಥದ ಹೆಸರುಗಳಿವೆ. ಉದಾ: **ತೆರುಕೂತ್ತು** (ಬೀದಿ ಆಟ).

ಬಯಲಲ್ಲಿ ಆಡುವುದರಿಂದ ಬಯಲಾಟ. ನಾಟ್ಯ ಶಾಸ್ತ್ರೋಕ್ತವಾದ 'ಬಾಹ್ಯ' 'ಅಭ್ಯಂತರ' ವೆಂಬ ಪ್ರಕಾರಗಳಲ್ಲಿ ಬಾಹ್ಯ, ಎಂದರೆ ನಾಟ್ಯ ಮಂದಿರದಲ್ಲಿ ಆಡದೆ, ಹೊರಗೆ ಆಡುವಂತಹದು.

2. ಈಗ ಸೀಮಿತ ಅರ್ಥದಲ್ಲಿ, ಡೇರೆ ಅಥವಾ ಸಭಾಭವನಗಳಲ್ಲಾಡುವ ಆಟಗಳಿಗಿಂತ ಭಿನ್ನ ವಾಗಿ, ಬಯಲಲ್ಲಿ ಆಡುವ ಧರ್ಮಾರ್ಥ ಆಟ, ಸೇವೆ, ಹರಕೆ, ಆಟಗಳಿಗೆ ಮಾತ್ರ ಈ ಹೆಸರಿದೆ. ಟಿಕೇಟು ಮೂಲಕ ಪ್ರವೇಶದ ಯಕ್ಷಗಾನ ಪ್ರದರ್ಶನಗಳಿಗೆ ಸ್ಟೇಜಿನ ಆಟ ಅಥವಾ ಟೆಂಟು ಆಟವೆಂದು ಹೆಸರಾಗಿದೆ.

ಬಯಲಾಟದ ಮೇಳ: 1. ಯಕ್ಷಗಾನ ಮೇಳ, ತಂಡ. 2. ಧರ್ಮಾರ್ಥ (ಪುಕ್ಕಟೆ) ಆಟಗಳನ್ನಾಡುವ ಮೇಳ. **ಡೇರೆ ಆಟ** ಆಡುವ ಮೇಳ ಅಲ್ಲದ್ದು.

ಬರವಣಿಗೆ: ವೇಷದ ಮುಖದ ಮೇಲೆ ಬರೆಯುವ ಬರವಣಿಗೆ. ಮೂಲವರ್ಣವನ್ನು ಬಿಟ್ಟು, ಉಳಿದ ನಾಮ, ಮುದ್ರೆ, ಮುತ್ತೆರಿ, ರೇಖೆ ಇತ್ಯಾದಿಗಳು.

ಬಲ (ತೆ.): ಮುಖ್ಯ ವೇಷದ ಜತೆ ಬರುವ ಬಲಗಳು. ಮಂತ್ರಿ, ಸೇನಾಪತಿ, ದಿಕ್ಪಾಲಕರು, ಮಕ್ಕಳು, ಕಿರಾತಪಡೆ, ರಕ್ಕಸ ಬಲ ಇತ್ಯಾದಿ.

ಬಲದ ಚೌಕಿ (ತೆ./ಬ.): ಬಣ್ಣದ ಮನೆ ಅಥವಾ ಚೌಕಿಯಲ್ಲಿ, ದೇವರ ಬಲಭಾಗದ ಸಾಲು, ಎಂದರೆ ದೇವರಿಗೆ ಅಭಿಮುಖವಾಗಿ ನಾವು ನಿಂತರೆ, ನಮ್ಮ ಎಡ ಭಾಗದ ಚೌಕಿ. ಇದಕ್ಕೆ ಸ್ಥಾನತಃ ಪ್ರಾಶಸ್ತ್ಯ ಹೆಚ್ಚು. ಬಡಗುತಿಟ್ಟಿನ ಪದ್ಧತಿಯಂತೆ ಈ ಭಾಗದಲ್ಲಿ ಎರಡನೆಯ ವೇಷ, ಪುರುಷವೇಷ, ಮುಖ್ಯ ಸ್ತ್ರೀವೇಷ, ಪುಂಡುವೇಷಗಳೂ, ತೆಂಕುತಿಟ್ಟಿನ ಪದ್ಧತಿಯಂತೆ ಬಣ್ಣದ ವೇಷ, ಇದಿರುವೇಷ, ಪುಂಡುವೇಷ, ಮುಖ್ಯ ಸ್ತ್ರೀವೇಷ ಗಳೂ ಕುಳಿತುಕೊಳ್ಳುವುದು ಸಂಪ್ರದಾಯ.

ನೋಡಿ: **ಚೌಕಿ, ಎಡ ಚೌಕಿ.**

ಬಲ್ಲಿರೇನಯ್ಯ/ಬನ್ನಿರಯ್ಯ: ಪುರುಷ ಪಾತ್ರಗಳ ಪ್ರವೇಶದಲ್ಲಿ, ಭಾಗವತನಿಗೂ, ವೇಷಕ್ಕೂ ನಡೆಯುವ ಮಾತಿನ ಒಂದು ಭಾಗ. ವೇಷವು ಬಂದೊಡನೆ ಭಾಗವತರು ''ರಾಜ ರಾಜೋತ್ತಮ, ರಾಜನಕ್ಷತ್ರ ಚಂದ್ರೋದಯ'' ಅಥವಾ ರಾಕ್ಷಸರಿಗಾದರೆ ''ಭಳಿರೇ ರಾಕ್ಷಸ ಕುಲೋದ್ಧಾರಕ'' ಎನ್ನಬೇಕು. ಆಗ ವೇಷವು ''ಬಲ್ಲಿರೇನಯ್ಯಾ''-ಎಂದಾಗ, ಭಾಗವತರು ''ಇರುವಂತಹ ಸ್ಥಳ''-ಎನ್ನಬೇಕು.

ಬಹುಪರಾಕ್ / ಭೋಪರಾಕು ಹಾಕುವುದು:

(ಬ.) 1. ಹೊಗಳಿಕೆ. ಚೌಕಿಯಲ್ಲಿ ಪೂಜೆಯಾಗಿ ಹಿಮ್ಮೇಳವು ರಂಗಸ್ಥಳಕ್ಕೆ ಬರುವಾಗ, ಕೋಡಂಗಿ ಗಳೊಂದಿಗೆ ಎಲ್ಲ ವೇಷಧಾರಿಗಳು ''ಕಸ್ತೂರಿ ಕೋಲಾಹಲೋ ಬಹುಪಾರಾಕ್, ಬಹುಪರಾಕ್''

''ಶರಧಿ ಗಂಭೀರೋ ಬಹುಪರಾಕ್ ಬಹುಪರಾಕ್'', ''ಧೀರವಯ್ಯಾರೋ ಬಹುಪರಾಕ್...'' ಎನ್ನುತ್ತ ಬಂದು ರಂಗಕ್ಕೆ ಸುತ್ತು ಬರುವ ಹಿಂದಿನ ಕ್ರಮ. ಉಳಿದವರು ನಿರ್ಗಮನವಾದ ಅನಂತರ ಹಿಮ್ಮೇಳ, ಕೋಡಂಗಿ ಮಾತ್ರ ಉಳಿಯುತ್ತಾರೆ.

ಉ: ಇದೇ ಕ್ರಮವು ಸ್ವಲ್ಪ ವ್ಯತ್ಯಾಸದಿಂದ ಬಳಕೆಯಿತ್ತು. ಕೋಡಂಗಿ ಮಾತ್ರ ಇದನ್ನು ಹೇಳುತ್ತಾನೆ. ಎಲ್ಲ ವೇಷಧಾರಿಗಳು ಬರುವುದಿಲ್ಲ.

2. ಹೊಗಳಿಕೆ. ರಾಜನಲ್ಲಿ ಆಸ್ಥಾನ ಚಾರಕನು ಹೊಗಳುವಾಗ, ಕೊನೆಗೆ ಬಳಸುವ ಶಬ್ದ. ''ರಾಜರಾಜಾಧೀಶ ಅರಿತಿಮಿರ ಮಾರ್ತಾಂಡ... ಬಹುಪರಾಕ್.''

ಬಳಿ (ಬ.) : ಬಲಿ ? ಬಲಿವಿಧಿಯ ಅಣಕ; ಹಾಸ್ಯ. ನೋಡಿ : **ತಟ್ಟೇಬಳಿ.**

ಬಳೆ: 1. ಕೈಬಳೆ.

2. ಕಾಲ್ಬಳೆ. ಕಾಲಕಡಗ.

3. ಸ್ತ್ರೀವೇಷದ ಮುಡಿಯ ಆಧಾರಕ್ಕೆ ಕಟ್ಟುವ ಬಟ್ಟೆಯ ಬಳೆ.

4. ಚೆಂಡೆಯ ಮುಚ್ಚಿಗೆಗೆ ಆಧಾರವಾದ ಅಟ್ಟೆ. ಬಿದಿರು ಅಥವಾ ಬೆತ್ತದ ಬಳೆ.

5. ಮದ್ದಲೆಯ ಇಂಡಿಗೆ ಬಳೆ.

ಬಾಗಿಲು ದೂತ: 1. ದ್ವಾರಪಾಲಕ; ಹಾಸ್ಯಪಾತ್ರ.

ಬಾಗಿಲ ಹಾಸ್ಯ (ಬ.) : 1. ಹೊಗಳಿಕೆ ಹಾಸ್ಯ. ರಾಜನ ಪ್ರವೇಶವಾದೊಡನೆ ಹೊಗಳಿಕೆ ಹೇಳುವ ಪಾತ್ರ.

2. ಬಾಗಿಲು ದೂತ. ಆಸ್ಥಾನ ದ್ವಾರದ ವಾರ್ತೆಯನ್ನು ರಾಜನಿಗೆ ಹೇಳುವ ಚಾರಕ.

ಬಾಜೂ ಬಂದು (ಉ./ಬ.) : ಬಾಜೂ ಬಂದ್ (ಹಿಂದಿ). **ತೋಳಕಟ್ಟು, ತೋಳಚಿನ್ನ, ಬಾಪುರಿ.**

ಬಾಣ / ಬಾಣದ ಕಡ್ಡಿ : ಕಟ್ಟಿಗೆಯ ಬಾಣ. ಇದಕ್ಕೆ ಬಿಳಿ ಅಥವಾ ಹಳದಿ ಬಣ್ಣ ಹಚ್ಚುವರು.

ಬಾಣದ ಕಡ್ಡಿ (ಬ.) = ನೋಡಿ : **ಬಾಣ.**

ಬಾಪುರಿ / ಬಾಹುಪೂರ: ಬಾಹುಪೂರ. **ತೋಳ ಬಾಪುರಿ, ತೋಳಕಟ್ಟು, ಬಾಜೂ ಬಂದು.**

ಬಾಯಿತಾಳ: 1. ಬಾಯಿಯಲ್ಲಿ ಹೇಳುವ ತಾಳದಸ್ತಗಳು. ಪಾಟಾಕ್ಷರಗಳು, ತತ್ಕಾರಗಳು.

2. ಅಭ್ಯಾಸದ ಮೂಲ ತತ್ಕಾರಗಳು.

3. ಆಟದಲ್ಲಿ, ಪದ್ಯದ ನಡುವೆ, ವೇಷಗಳನ್ನು ಕುಣಿಸುವುದಕ್ಕಾಗಿ ಹೇಳುವ ಬಾಯಿತಾಳ. ಇದನ್ನು ಹಿಂದೆ ಭಾಗವತ ಹೇಳುತ್ತಿದ್ದಂತೆ ಜೊತೆಗೇ ಮದ್ದಲೆ, ಚೆಂಡೆಗಳಲ್ಲಿ ಬಾರಿಸುತ್ತಿದ್ದರು. ಈಗ ಭಾಗವತನು ಹೇಳಿದ ಅನಂತರ ಬಾರಿಸುವರು. ಬಾಯಿತಾಳ ಹೇಳಿ, ಮದ್ದಲೆಯಲ್ಲಿ ನುಡಿಸಿ, ಅನಂತರ ಚೆಂಡೆಯಲ್ಲಿ ನುಡಿಸಿ ಕುಣಿಸುವ ಕ್ರಮವೂ ಬಳಕೆಗೆ ಬಂದಿದೆ. ಮುಖ್ಯವಾಗಿ ಶೃಂಗಾರ ಸಂವಾದ, ಜಲಕೇಳಿ ಮೊದಲಾದ ಸನ್ನಿವೇಶಗಳಲ್ಲಿ ಬಳಕೆ.

ಬಾರ / ಬಾರು: ಚೆಂಡೆ ಮದ್ದಲೆಗಳ ಮುಚ್ಚಿಗೆ ಚರ್ಮಗಳನ್ನು ಬಿಗಿದುಕಟ್ಟಲು ಬಳಸುವ ಹಗ್ಗಗಳು. ಮದ್ದಲೆಗೆ ಚರ್ಮದ ಬಾರ. ಚೆಂಡೆಗೆ ಹಗ್ಗದ ಬಾರ. ಮದ್ದಲೆಗೆ ಬೇಕಾದ ಚರ್ಮದ ಬಾರಗಳು, ಸುಮಾರು ಎರಡು ವರ್ಷ ಪ್ರಾಯದ ಎಮ್ಮೆಯ ಅಥವಾ ಕೋಣನ ಚರ್ಮದ್ದಾಗಬೇಕು. ಚೆಂಡೆಗೆ ಊರಸಣಬಿನ ಹಗ್ಗಗಳ ಬಾರಗಳು. ಈಗ ಫೈಬರ್ ಹಗ್ಗಗಳನ್ನು ಬಳಸುತ್ತಾರೆ.

ಮುಚ್ಚಿಗೆ ಚರ್ಮದ ಅಂಚಿನಲ್ಲಿ ಕೊರೆದ ತೂತುಗಳ ಮೂಲಕ ಬಾರಗಳನ್ನು ಸಿಕ್ಕಿಸಿ ಎಳೆಯುತ್ತಾರೆ.

– ಇಂಡಿಗೆ, ಮತ್ತು ಚೆಂಡೆಯ ಅಟ್ಟೆಯನ್ನು ಸುತ್ತಿ ಬಲಪಡಿಸಲಿಕ್ಕೆ ಬಾರಗಳು ಅಗತ್ಯ.

ಬಾರ ಎಳೆಯುವುದು = ನೋಡಿ : **ಬಾರ ಹಿಡಿಯುವುದು.**

ಬಾರಣೆ (ತೆ./ಬ.): ಕೆಲವು ಬಣ್ಣದ ವೇಷಗಳ ಆಹಾರ ಸ್ವೀಕಾರ ದೃಶ್ಯ. 'ಬಾರಣೆ' ಎಂದರೆ ಊಟ. ಭೂತದ ಆಹಾರ ಸ್ವೀಕಾರಕ್ಕೂ ಇದೇ ಹೆಸರು. ಕುಂಭಕರ್ಣ, ವೀರಭದ್ರ ವೇಷಗಳಿಗೆ ವಿಶೇಷ. ಈ ದೃಶ್ಯಕ್ಕೆ ರಂಗದಲ್ಲಿ ಬೆಂಚಿನ ಮೇಲೆ ಅಥವಾ ರಥದ ಮೇಲೆ, ಎಳನೀರು, ಅರಳು, ಬಾಳೆಹಣ್ಣು, ತಿಂಡಿಗಳನ್ನಿಡುವರು. ವೇಷವು ತಾಳಬದ್ಧವಾಗಿ ಅವುಗಳನ್ನು (ಸಾಂಕೇತಿಕವಾಗಿ) ತಿಂದು, ಕುಡಿದು, ಅತ್ತಿತ್ತ ಚೆಲ್ಲುತ್ತ ಕೊನೆಗೆ, ತೃಪ್ತಿಯಾದುದರ ದ್ಯೋತಕವಾಗಿ ದೊಡ್ಡ ಆರ್ಭಟೆ ಕೊಡಬೇಕು.

ಬಾರ ಸುರಿಯುವುದು: 1. ಚೆಂಡೆ, ಮದ್ದಲೆಗಳ ಮುಚ್ಚಿಗೆ ಚರ್ಮವನ್ನು ಕೂರಿಸಲು, ಅಷ್ಟ ಬಾರಗಳನ್ನು ತೂತುಗಳ ಮೂಲಕ ಸಿಕ್ಕಿಸಿ ಎಳೆಯುವುದು.

2. ಚರ್ಮಗಳು ಕಳಸಿಗೆಗೆ ಒತ್ತಿ ಕುಳಿತ ಬಳಿಕ, ಅಷ್ಟ ಬಾರಗಳನ್ನು ತೆಗೆದು, ನಿಜಬಾರಗಳನ್ನು ಸಿಕ್ಕಿಸಿ ಎಳೆದು ಕಟ್ಟುವುದು.

ಬಾರಹಿಡಿಯುವುದು (- ಎಳೆಯುವುದು) : ಚೆಂಡೆ, ಮದ್ದಲೆಗಳ ನಾದವನ್ನು ಸರಿಪಡಿಸುವುದಕ್ಕಾಗಿ, ಬಾರಗಳನ್ನು ಎಳೆದು, ನೀವಿ ಬಿಗಿಯನ್ನು ಹದಗೊಳಿಸುವುದು.

ಬಾರು = ನೋಡಿ : ಬಾರ.

ಬಾಲಗೋಪಾಲ : ಪೂರ್ವರಂಗದ ಪೂರ್ವಾರ್ಧದಲ್ಲಿ ಬರುವ ಎರಡು ವೇಷಗಳು. ಬಲ, ಗೋಪಾಲ ? ಪ್ರಾಯಶಃ ಬಲರಾಮ, ಕೃಷ್ಣರೆಂಬ ಅರ್ಥ. ಈ ವೇಷಗಳಿಗೆ ನಿತ್ಯವೇಷಗಳೆಂದೂ ಹೆಸರಿದೆ.

ಕೋಡಂಗಿ ವೇಷಗಳು ರಂಗಕ್ಕೆ ಬಂದು ಸ್ತುತಿಗಳು, ಕೆಲವು ಶ್ಲೋಕಗಳು ಆದ ಮೇಲೆ, ''ಆದೌ ದೇವಕಿ ದೇವಿ ಗರ್ಭಜನನಂ। ಗೋಪೀಗೃಹೇ ವರ್ಧನಂ॥...'' ಎಂಬ ಶ್ಲೋಕಕ್ಕೆ ಬಾಲಗೋಪಾಲರ ಪ್ರವೇಶವಾಗುವುದು. ಅನಂತರ ಗಣಪತಿಸ್ತುತಿಗಳಾಗಿ, ಗಣಪತಿ ಕೌತುಕ ನೃತ್ಯದ ತನಕ ಈ ವೇಷಗಳು ರಂಗದಲ್ಲಿರುತ್ತವೆ. ಇವರೊಂದಿಗೆ ಕೋಡಂಗಿಗಳೂ ಇರುವರು.

ನಾಟ್ಯಶಾಸ್ತ್ರ ಪರಂಪರೆಯಲ್ಲಿಯ ''ವೈಷ್ಣವ ಬಾಲ ಕ್ರೀಡಾ'' ಎಂಬುದು, ನಮ್ಮ ಬಾಲಗೋಪಾಲರ ಕುಣಿತಕ್ಕೆ ಸಂವಾದಿಯಾದುದೆಂದು ಒಂದು ಅಭಿಪ್ರಾಯ (ದಿ। ಕುಕ್ಕಿಲ ಕೃಷ್ಣಭಟ್ಟ : ಮಂದಾರ : 1986).

ಬಾಲಮುಂಡು/ಬಾಳಮುಂಡು/ಬಾಲ್ಮುಂಡು (ತೆ.) : ಪುರುಷ ವೇಷಗಳೆಲ್ಲ (ಋಷಿ ಹೊರತು) ಸೊಂಟದ ಸುತ್ತ ಕಟ್ಟುವ ಲಂಗದಂತಹ ಬಟ್ಟೆ. ನೆರಿ. ಇದು ಸೊಂಟದಿಂದ ಕೆಳಗೆ, ಮೊಣಕಾಲಿಗಿಂತ ತುಸು ಕೆಳಗಿನವರೆಗೆ ನಿಲ್ಲಬೇಕು. ಹಿಂದೆ, ಕಾಲ್ಚೆಂಡು, ಕಾಲ್ಮುಳ್ಳುಗಳನ್ನು ಕಟ್ಟುತ್ತಿದ್ದಾಗ ಮೊಣಕಾಲಿನಿಂದ ಸ್ವಲ್ಪವೇ ಕೆಳಗೆ ನಿಲ್ಲುತ್ತಿತ್ತು. ಈಗ ಹೆಚ್ಚು ಕೆಳಗೆ ನಿಲ್ಲುವಂತೆ ಕಟ್ಟುವರು.

ಬಾಲಕರು ಉಡುವ, ಗಿಡ್ಡ ಮುಂಡು, (ಬಾಲಮುಂಡು) ಪಂಚೆಯಂತೆ ಇರುವುದರಿಂದ ಈ ಹೆಸರಿರಬಹುದು.

– ಇದು ಬಿಳಿಬಣ್ಣದ ಬಟ್ಟೆ. ಅದಕ್ಕೆ ಕೆಂಪು, ಹಸುರು, ಕಪ್ಪು ಗೋಟು (ಅಡ್ಡ ನಾಮ) ಗಳಿರುತ್ತವೆ. ಹಿಂದೆ, ಇದನ್ನು ಹಗ್ಗವೊಂದಕ್ಕೆ ಹರಡಿ, ನೆರಿ ಮಾಡಿಕೊಂಡು ಕಟ್ಟುತ್ತಿದ್ದರು. ಈಗ ಅಂಚಿಗೆ ಹಗ್ಗವನ್ನು ಹೊಲಿದಿಡುತ್ತಾರೆ.

ಹಿಂದೆ, ಒಂದು ಸಾದಾ ಬಿಳಿ 'ಬಾಲ್ಮುಂಡ'ನ್ನು ಕಟ್ಟಿ ಅದರ ಮೇಲೆ 'ಗೋಟು'ಗಳಿರುವ ಇನ್ನೊಂದನ್ನು ಕಟ್ಟುವ ಕ್ರಮವಿದ್ದಿತು.

ಬಾಲ್ದಿಕಿರೀಟ : ಬಾಲ್ದಿ (ಬಕೆಟ್) ಆಕಾರದ ಕಿರೀಟ. ಹೆಣ್ಣು ಬಣ್ಣದ ಕಿರೀಟ.

ನೋಡಿ : ಕುತ್ತರಿ, ಹೆಣ್ಣುಬಣ್ಣ.

ಬಾಲ್ಮುಂಡು = ನೋಡಿ : ಬಾಲಮುಂಡು.

ಬಾಹುಪೂರ = ನೋಡಿ : ಬಾಪುರಿ.

ಬಾಳಮುಂಡು = ನೋಡಿ : ಬಾಲಮುಂಡು.

ಬಾಳೆದಿಂಡು : ಬಾಳೆಯ ಕಾಂಡ; ಬಾಳೆಯ ದಿಂಡು.

1. ಬಾಳೆಕಾಂಡದ ಕವಚ ಅಥವಾ ಸಿಪ್ಪೆಗಳನ್ನು ದೀವಟಿಗೆಗೆ ಸುತ್ತುತ್ತಾರೆ.

2. ಬಾಳೆದಿಂಡನ್ನು ಇಡಿಯಾಗಿ ರಂಗಸ್ಥಳಕ್ಕೆ, ಅಲಂಕಾರಕ್ಕಾಗಿ ಕಟ್ಟುವರು.

(ಬ.) 3. ಬಾಳೆದಿಂಡಿನ ಹಸಿ ಪಟ್ಟೆಗಳನ್ನು ಕೇದಗೆ ಮುಂದಲೆ, ಮುಂಡಾಸುಗಳಿಗೆ ಜರಿಯಾಗಿ ಉಪಯೋಗಿಸುತ್ತಿದ್ದರು. ಹಿಂದೆ ಜರಿಲಾಡಿಗಳ ಬಳಕೆ ಇರಲಿಲ್ಲ.

ಬಾಳೆಪಟ್ಟೆ : ಬಾಳೆ ಹಗ್ಗ. ಹಸಿಬಾಳೆ ಪಟ್ಟೆಯನ್ನು ಮುಂಡಾಸು, ಪಗಡಿಗಳಿಗೆ ಸುತ್ತುತ್ತಿದ್ದರು.

ಬಿಂಗ : ಅಭ್ರಕ, ಕಾಗೆ ಬಂಗಾರ. ಇದರ ಹುಡಿಯನ್ನು ಮುಖದ ಹೊಳಪಿಗಾಗಿ ಬಳಸುತ್ತಾರೆ. ಜಿಗ್‌ಜಿಗ್ ಪುಡಿ ಎಂಬುದು ಬಿಂಗದ ಹುಡಿ.

ಬಿಗಿ : ಚೆಂಡೆ, ಮದ್ದಲೆಗಳ ಬಾರಗಳ ಬಿಗಿತ; ಬಿಗಿತದ ಹದ.

ಬಿಗಿ ತೆಗೆಯುವುದು : ಮೇಲೆ ಹೇಳಿದ ಬಿಗಿಯನ್ನು ಬಿಚ್ಚಿ ಸಡಿಲಗೊಳಿಸುವುದು.

ಬಿಗಿ ಹಾಕುವುದು : ಬಿಡಿಸಿದ ಬಾರಗಳನ್ನು ಮರಳಿ ಬಿಗಿಯುವುದು.

ಬಿರುದಾವಳಿ : 1. ಭಾಗವತನು ವೇಷದ ಪ್ರವೇಶ ಸಂದರ್ಭದಲ್ಲಿ ಹೇಳುವ ಬಿರುದಾವಳಿ ''ರಾಜರಾಜಾಧೀಶ'' ''ದೇವ ದೇವೋತ್ತಮ'' – ಇತ್ಯಾದಿ.

2. ಹೊಗಳಿಕೆ ದೂತನು ರಾಜನನ್ನು ಹೊಗಳುವ ಪದಗಳು.

ಬಿಡಾರ : ಮೇಳದವರ ಬಿಡಾರ. ಅಡುಗೆ, ಊಟ, ವಿಶ್ರಾಂತಿ ವ್ಯವಸ್ಥೆಯ ಸ್ಥಳ. ಆಟ ಆಡಿಸುವವರು ಬಿಡಾರದ ವ್ಯವಸ್ಥೆ ಮಾಡಬೇಕು. ಡೇರೆ ಮೇಳಗಳು ತಾವೇ ವ್ಯವಸ್ಥೆ ಮಾಡಿಕೊಳ್ಳುತ್ತವೆ.

ಬಿಡಾರದ ಊಟ : ಮೇಳದ ಬಿಡಾರದ ಊಟ. ಪ್ರತ್ಯೇಕ ಅಡುಗೆ ಮಾಡಿಸದೆ, ಆಟ ಆಡಿಸುವವರು ಅಥವಾ ಅಭಿಮಾನಿಗಳು ಊಟವಿಕ್ಕಿದರೆ, ಅದು 'ಮನೆಯ ಊಟ'.

ಬಿಡಾರಕ್ಕಪ್ಪಣೆ (ತೆ.) : ಬೆಳಗಿನ ಜಾವ ಆಟ ಮುಗಿದು, ಚೌಕಿಗೆ ಬಂದು, ಆರತಿ ಆದನಂತರ 'ಬಿಡಾರಕ್ಕಪ್ಪಣೆ' ಕೊಡುತ್ತಾರೆ.

ನೋಡಿ : ರಂಗಸ್ಥಳಕ್ಕೆ ಅಪ್ಪಣೆ.

ಬಿಡಿತ = ನೋಡಿ : ಬಿಡ್ತಿಗೆ.

ಬಿಡುಸ್ವರ (ತೆ.) : ಚಂಡೆಯ ನಾದದ ಒಂದು ಬಗೆ. ನಾದವು ಬಿಟ್ಟು ಕೇಳುವಂತೆ ಬಾರಿಸುವುದು. ಟಂ, ಟಂ, ಟ್ರಂ ಇತ್ಯಾದಿ, ಕಂಪನವುಳ್ಳನಾದ. ಇದಕ್ಕೆ ಭಿನ್ನವಾದದ್ದು ಕಟ್ಟುಸ್ವರ, ಟಕ್‌ಟಕ್ ಸ್ವರ.

ಬಿಡ್ತಿಗೆ : ಬಡಿತ, ಬಡ್ತಿಗೆ.

(ತೆ.) 1. ಪದ್ಯದ ಮೊದಲ ಚರಣವನ್ನು ಹೇಳಿದ ಅನಂತರ ಬಾರಿಸುವ ದೀರ್ಘ ಮುಕ್ತಾಯ. ಬಿಟ್ಟು ಬಾರಿಸುವಿಕೆ, ವಾದ್ಯಗಳಿಗೆ ಬಿಡುವಿಕೆ ಇದ್ದುದರಿಂದ ಬಿಡ್ತಿಗೆ. ಇದರಲ್ಲಿ ಮೂರು ಭಾಗಗಳು ದಸ್ತುಗಳು, ಉರುಳಿಕೆ, ಮುಕ್ತಾಯ.

ಉದಾ : ಏಕತಾಳ :

1. x ಧೀಂತಕ ತರಿಕಿಟ / x ತಾಂತಕತರಿಕಿಟ
   ,, ,,

2. x ಧಿತ್ತರಿ x ಕಿಟತಕ / x ತರಿಕಿಟ x ಕಿಟತಕ /

3. x ದದ್ದಿಂದತ್ತಾ x ಧಿಂದತ್ತಾ / x ತರಿಕಿಟಧಿಂ /
   x ತರಿಕಿಟಧಿಂ / x ತರಿಕಿಟ / ಧಿಂ

ಏರುಪದ್ಯಗಳಿಗಾದರೆ, ಬಿಡ್ತಿಗೆಯ ಉದ್ದವು, ವೇಷಧಾರಿಯ ಮನೋಧರ್ಮವನ್ನು ಹೊಂದಿಕೊಂಡು ವ್ಯತ್ಯಾಸವಾಗುತ್ತದೆ.

ಬಡಗುತಿಟ್ಟಿನಲ್ಲಿ ಬಿಡ್ತಿಗೆಯ ಸ್ಥಾನದಲ್ಲಿ ಎತ್ತುಗಡಿ ಮುಕ್ತಾಯ ಅಥವಾ ಮೊದಲ ಮುಕ್ತಾಯವಿದೆ. ಪದ್ಯದ ಕೊನೆಯ ಮುಕ್ತಾಯ, ಮತ್ತು ಈ ಮೊದಲ ಮುಕ್ತಾಯಗಳ ಉದ್ದ ಒಂದೇ ರೀತಿ.

ಉತ್ತರ ಕನ್ನಡ ಸಂಪ್ರದಾಯದಲ್ಲಿ, ಹಿಂದೆ ತೆಂಕುತಿಟ್ಟಿನಂತೆ ಬಿಡ್ತಿಗೆ ಬಾರಿಸುವಿಕೆಯಿತ್ತು. ಈಗ ಬಡಗುತಿಟ್ಟಿನ ಕ್ರಮವೇ ಬಳಕೆಯಲ್ಲಿದೆ.

(ಬ./ಉ.) 2. ತಾಳದ ದಸ್ತೆಗಳು, ಬಡಿತಗಳ ಬೋಲ್‌ಗಳು ತತ್ಕಾರಗಳು ಅದರ ಬಡಿತಗಳು ಬಡ್ತಿಗೆ.

ಬಿಲ್ಲು : ಆಯುಧಗಳಲ್ಲೊಂದು. ನೇರ ಸಲಾಕೆ. ಇದಕ್ಕೆ ಬಣ್ಣ ಬಳಿದು, ಗೊಂಡೆಗಳನ್ನು ಕಟ್ಟಿ, ಹಗ್ಗ ಕಟ್ಟಿರುತ್ತಾರೆ. ಬಿಲ್ಲು ತಯಾರಿಗೆ ಹೆಚ್ಚಾಗಿ ಅಡಕೆ ಮರದ ದಬ್ಬೆಯನ್ನು ಉಪಯೋಗಿಸುತ್ತಾರೆ.

ಬಿಳಿಕೇಸರಿ : ಬಿಳಿಕೂದಲು. ಅನನಾಸು, ದಡ್ಡಾಲ ಅಥವಾ ಕಳ್ಳಿ ನಾರಿನಿಂದ ತಯಾರಿಸಿದ್ದು. ಮೀಸೆ, ಕಿರೀಟದ ಹಿಂದೆ ಇಳಿ ಬಿಡುವ ಕೂದಲಿಗೆ ಉಪಯೋಗ.

ಬೀದಿಕುಣಿತ (ಗ.) : ರಾಕ್ಷಸಪಾತ್ರಗಳನ್ನು ದೂರದಿಂದ ಹೊರಡಿಸಿಕೊಂಡು ಬರುವ ಕ್ರಮ. ವೇಷದ ಜೊತೆ ಪಂಜಿನ ಬೆಳಕು, ತಮ್ಮಟೆ ಬಡಿತಗಳು ಇರುತ್ತವೆ. ಬ. ಉ. ಗಳಲ್ಲಿರುವ ಲಾಲಿ ಕುಣಿತ, ತೆ.ನಲ್ಲಿರುವ ಹೊರಡಿಸುವಿಕೆಗಳಿಗೆ ಸಂವಾದಿಯಾಗಿದೆ.

ಬೀಸಣಿಗೆ : = ನೋಡಿ : ಆಲವಟ್ಟ.

ಬುಗುಡಿ : 1. ಸ್ತ್ರೀವೇಷದ ಒಂದು ಕರ್ಣಾಭರಣ. ಕಿವಿಯ ಮೇಲ್ಗಡೆ ಅಥವಾ ಅಂಚಿನಲ್ಲಿ ಧರಿಸುತ್ತಾರೆ. ಚಿಕ್ಕಗೋಪುರವುಳ್ಳ, ಲವಂಗ ಅಥವಾ ದಾಲ್ಚೀನಿ ಮೊಗ್ಗಿನ ಆಕಾರದಲ್ಲಿರುತ್ತದೆ.
2. ಓಲೆಕುಚ್ಚು ಎಂಬ, ಸ್ತ್ರೀವೇಷದ ಕರ್ಣಪಾತ್ರದ ಒಂದು ಭಾಗ.

ಬುಯ್ಯೋ... ಹ : ಕಪಿವೇಷದ ಆರ್ಭಟೆ. ಪ್ರವೇಶ ಕಾಲದಲ್ಲಿ ಬಣ್ಣದ ವೇಷಗಳ ಅಟ್ಟಹಾಸದಂತೆ, ಕಪಿವೇಷಗಳಿಗೆ ಈ ಬೊಬ್ಬೆ.

ಕಪಿವೇಷದ ಇನ್ನೊಂದು ಸ್ವರವಿಶೇಷ, ನೋಡಿ ಹೈಕ್.. ಟುರ್‌.

ಬುರುಡೆ ಶ್ರುತಿ : ನೋಡಿ : ಪುಂಗಿ.

ಬುರುಡೆ : ಕಿರೀಟದ ಮಧ್ಯಭಾಗ; ತಂಬಿಗೆ ಅಥವಾ ಕಲಶಾಕೃತಿ.

ಬುಲಾಕು : ನಾಸಾಭರಣ. ಚಿಕ್ಕ ಉಂಗುರದಂತಿದ್ದು ಮುತ್ತು ಅಥವಾ ಕಲ್ಲುಗಳಿಂದ ಅಲಂಕೃತವಾಗಿರುತ್ತದೆ. ಒಂಟಿ ಮುತ್ತು ಮಾತ್ರ ಇರುವುದೂ ಉಂಟು. ಮೂಗಿನ ಮರಕ್ಕೆ ಸಿಕ್ಕಿಸಿ ಒತ್ತಿ ನಿಲ್ಲಿಸುವುದು. ಸ್ತ್ರೀವೇಷಗಳ ಆಭರಣ. ಹಿಂದೆ ಕೃಷ್ಣನ ವೇಷವೂ ಧರಿಸುತ್ತಿದ್ದಿತು.

ಬೆಂಡಿನ ದಂಡೆ : ಬೆಂಡು ಮರದಿಂದ ತಯಾರಿಸಿದ ಹೂವಿನ ದಂಡೆಯಂತಹ ಆಕೃತಿ. ಮುಂಡಾಸು, ಕೇದಗೆ ಮುಂದಲೆ, ಪಗಡಿಗಳ ತುದಿಗೆ ಸಿಕ್ಕಿಸುವರು. ಈಗ ಇದರ ಬದಲು ಬಟ್ಟೆ ಮತ್ತು ಜರಿಯ 'ಸುತ್ತು' ಬಳಕೆಯಲ್ಲಿದೆ.

ಸ್ತ್ರೀವೇಷದ ಮುಡಿಗೂ ಬೆಂಡಿನ ದಂಡೆಯನ್ನು ಹೂವಿನ ದಂಡೆಯಾಗಿ ಬಳಸುವರು.

ಬೆಂಡೋಡು (ತೆ.) : ಒಂದು ಬಗೆಯ ಗಟ್ಟಿ ಚಿಪ್ಪಿನ ಹುಳು. ಹಸುರು, ನೀಲಿ ಬಣ್ಣಗಳಲ್ಲಿರುತ್ತದೆ. ಚಿಪ್ಪಿಗೂ ಇದೇ ಹೆಸರು. ಇದನ್ನು ಕಿರೀಟದ ಅಲಂಕಾರಕ್ಕೆ, ವಿಶೇಷತಃ ಬಣ್ಣದ ಕಿರೀಟಗಳಲ್ಲಿ ಬಳಸುತ್ತಿದ್ದರು.

ಬೆಂಡೋಲೆ : 1. ಸ್ತ್ರೀವೇಷದ ಕಿವಿಯೋಲೆ. ಉರುಟು ಆಕೃತಿಯದಾಗಿದ್ದು, ಕಿವಿಯ ಕೆಳ ತುದಿಯಲ್ಲಿ ಧರಿಸುವರು.

2. ಸ್ತ್ರೀವೇಷದ ಕರ್ಣಾಭರಣವಾದ ಓಲೆಕುಚ್ಚು ಎಂಬುದರ ಒಂದು ಭಾಗ.

ಬೆನ್ನುತುಂಡು (ಉ.) : ಪುರುಷ ಪಾತ್ರಗಳ ಬೆನ್ನಿನಲ್ಲಿ ಬಿಗಿದು ಮೊಣಕಾಲಿನವರೆಗೆ ಇಳಿಬಿಡುವ ವಸ್ತ್ರ. ಬೆನ್ನುಶಾಲು.

ಬೆನ್ನು ವಸ್ತ್ರ (ಬ.) : 1. 'ಬೆನ್ನು ತುಂಡು'ವಿನಂತಹ ಆದರೆ ಅದಕ್ಕಿಂತ ಚಿಕ್ಕ ವಸ್ತ್ರ. ಬೆನ್ನಿನ ಅರ್ಧಕ್ಕೆ ಮಾತ್ರ ಬರುತ್ತದೆ.

2. ಶಿರೋಭೂಷಣದ ಹಿಂದಕ್ಕೆ ಸಿಕ್ಕಿಸಿ, ಸೊಂಟದವರೆಗೆ, ತ್ರಿಕೋಣಾಕೃತಿಯಲ್ಲಿ ನಿಲ್ಲುವಂತೆ ಇಳಿಸಿ, ಸೊಂಟಕ್ಕೆ ಸಿಕ್ಕಿಸುವ ಶಲ್ಲೆ.

ಬೆನ್ನುಶಾಲು : 'ನಾಟಕದ ವೇಷ' ವೆಂಬ ಜಾತಿಯ ಅರ್ವಾಚೀನ ವೇಷ ವಿಧಾನದಲ್ಲಿ, ಬೆನ್ನಿಗೆ ಕಟ್ಟಿ ಇಳಿಬಿಡುವ ಬಟ್ಟೆ; ಬೆನ್ನು ಪರದೆ.

ಬೆರಳು ಉರುಳಿಕೆ : ಮದ್ದಲೆ ಬಡಿತದ ಒಂದು ವಿಧ. ಬೆರಳುಗಳನ್ನು ಉರುಳಿಸಿ ಬರಿಸುವ ನಾದಗಳು. (ಇದಕ್ಕೆ ಭಿನ್ನವಾದದ್ದು **ಕೈ ಉರುಳಿಕೆ, ಗಂಟು ಉರುಳಿಕೆ ಅಥವಾ ಹಸ್ತ ಉರುಳಿಕೆ**)

ಬೆವರು ಪ್ರತಿ : ಕೃಷ್ಣಾರ್ಜುನ ಕಾಳಗದ ಒಂದು ಬಗೆಯ ಕಥೆಯನ್ನಾಧರಿಸಿದ ಪ್ರಸಂಗ ರಚನೆ. ಇದರ ಪ್ರಕಾರ ಕೃಷ್ಣನ ಅರ್ಘ್ಯ ಜಲಕ್ಕೆ ಗಯನೆಂಬ ಗಂಧರ್ವನ ಕುದುರೆಯ ಬೆವರು ಬಿದ್ದುದರಿಂದ ಅದು ಕೆಟ್ಟು, ಕೃಷ್ಣನಿಗೆ ಸಿಟ್ಟು ಬರುವುದು. ಶ್ರೀ ಕೃಷ್ಣನ ಅರ್ಘ್ಯಜಲಕ್ಕೆ ಗಯನ ಕುದುರೆಯ ಬೆವರು ಬಿದ್ದುದೆನ್ನುವ ಈ ಕಥೆಯನ್ನನುಸರಿಸುವ ಪ್ರತಿಯು 'ಬೆವರು ಪ್ರತಿ'.

ಬಾಯಾರು ಸಂಕಯ್ಯ ಭಾಗವತ, ಬಲಿಪ ನಾರಾಯಣ ಭಾಗವತರ ರಚನೆಗಳು ಬೆವರು ಪ್ರತಿಗಳು. ಇದಕ್ಕೆ ಭಿನ್ನವಾದದ್ದು **ತಾಂಬೂಲ ಪ್ರತಿ.**

ಬೆಳಗಿನ ಜಾವದ ಆಟ : ನಾಲ್ಕನೆಯ ಕಾಲದ ಆಟ. ವೇಗವಾಗಿ ಸಾಗುವ ಕಥೆ.

ವಾಗ್ರೂಢಿಯಲ್ಲಿ, ಕೊನೆಯ ಹಂತದ ರಭಸದ ಚಟುವಟಿಕೆ ಎಂದೂ, ಕೆಲವೊಮ್ಮೆ ಅಂತ್ಯಸ್ಥಿತಿಯ ಚಡಪಡಿಕೆಯೆಂದೂ ಅರ್ಥವಿದೆ.

ಬೆಳಗಿನ ಜಾವದ ಪದ : ಬೆಳಗಿನ ಜಾವದ ಹಾಡುಗಾರಿಕೆ. ವೇಗವಾಗಿ ಸಾಗುವ ಭಾಗವತಿಕೆ. ಬೆಳಗಿನ ಜಾವಕ್ಕೆ ಹೊಂದುವ ಮೋಹನ, ರೇಗುಪ್ತಿ, ಭೂಪಾಳಿ, ಆರಭಿ ಮೊದಲಾದ ರಾಗಗಳಿಂದ ಕೂಡಿರುತ್ತದೆ.

ಬೆಳಗಿನ ಜಾವದ ಪ್ರಸಂಗ : ರಾತ್ರಿಯ ಉತ್ತರಾರ್ಧಕ್ಕೆ, ಬೆಳಗಿನ ಜಾವಕ್ಕೆ ಹೊಂದುವ ಪ್ರಸಂಗ. ಮೈರಾವಣ ಕಾಳಗ, ಗದಾಯುದ್ಧ, ವೀರವರ್ಮ ಕಾಳಗ, ರತಿಕಲ್ಯಾಣ– ಇವು ಬೆಳಗಿನ ಜಾವದ ಪ್ರಸಂಗವೆಂಬ ಕಲ್ಪನೆಗೆ ಉದಾಹರಣೆಗಳು.

ಬೆಳಗಿನ ಜಾವದ ರಾಗ : ಮೋಹನ, ಭೂಪಾಳಿ, ರೇಗುಪ್ತಿ, ಸಾವೇರಿ, ಆರಭಿ, ಧವಳಾರ ಮೊದಲಾದ ರಾಗ– ಮಟ್ಟುಗಳು. ಉದಯರಾಗಗಳು.

ಬೆಳಗಿನ ಜಾವದ ವೇಷ : 1. ರಾತ್ರಿಯ ಕೊನೆಯ ಜಾವದಲ್ಲಿ, ಉತ್ತರ ರಾತ್ರಿಯಲ್ಲಿ ಬರುವ ಮುಖ್ಯ ವೇಷ. ಇವುಗಳ ಮಾತು, ಕುಣಿತ, ಚಲನೆಗಳು ರಭಸದಿಂದ ಕೂಡಿರಬೇಕೆಂದು ಸಂಪ್ರದಾಯ. ವೀರವರ್ಮ, ಕೌಂಡ್ಲಿಕ, ಶಿಶುಪಾಲ ವಧೆಯ ಶಿಶುಪಾಲ ಇವು ಈ ಜಾತಿಯ ಪ್ರಸಿದ್ಧವಾದ ವೇಷಗಳು.

2. ವಾಗ್ರೂಢಿಯಲ್ಲಿ, ಕೊನೆಯ ಹಂತದ ಆಟೋಪ ತೋರಿಸುವ ಸ್ಥಿತಿ ಅಥವಾ ವ್ಯಕ್ತಿ. ಉದಾ: ''ಅವರ ಗಲಾಟೆ ಏನಿದ್ದರೂ, ಬೆಳಗಿನ ಜಾವದ ವೇಷದ ಹಾಗೆ''.

ಬೆಳ್ಳಿಗುಬ್ಬಿ = ನೋಡಿ : ಚಿನ್ನದ ಗುಬ್ಬಿ.

ಬೇಂಡು : Band Set.

ಇತ್ತೀಚೆಗೆ, ಹರಕೆ ಆಟಗಳಲ್ಲಿ, ವೈಭವ ಸಂಭ್ರಮಕ್ಕಾಗಿ ಬ್ಯಾಂಡು ವಾಲಗಗಳನ್ನು ತರಿಸಿ ನುಡಿಸುತ್ತಾರೆ. ಇದು ಆಟದ ಹಿಮ್ಮೇಳವಲ್ಲ. ರಂಗದ ಹಿಮ್ಮೇಳಕ್ಕೆ ಇದರ ಸಂಬಂಧವೂ ಇಲ್ಲ. ಮಧ್ಯೆ ಮಧ್ಯೆ ಬಾರಿಸುತ್ತಾ ಇರುತ್ತಾರೆ. ಇದು ಗೌಜಿಗದ್ದಲಕ್ಕಾಗಿ ಮಾಡುವ ಏರ್ಪಾಡು.

ಬೇಗಡೆ : ಲೋಹದ ತೆಳ್ಳಗಿನ ಹೊಳಪುಳ್ಳ ತಗಡು. ಹಿಂದೆ ಸೀಸದ ತಗಡು ಬರುತ್ತಿತ್ತು. ಈಗ ಎಲ್ಯುಮಿನಿಯಂ, ಪ್ಲಾಸ್ಟಿಕ್ ಹಾಳೆಗಳಲ್ಲಿ ಬರುತ್ತದೆ. ಮುಖ್ಯವಾಗಿ ಹಳದಿ, ಬಿಳಿ ಬಣ್ಣಗಳ ಬೇಗಡೆಗಳನ್ನು, ವೇಷಭೂಷಣಗಳಿಗಾಗಿ ಬಳಸುವರು. ಮರದ ಅಥವಾ ರಟ್ಟಿನ ಆಭರಣಗಳಿಗೆ, ಬೇಗಡೆಯನ್ನು ಜೇನುಮೇಣ ಮತ್ತು ಹಲಸಿನ ಮೇಣದ ಮಿಶ್ರಣದಿಂದ ಅಂಟಿಸುವರು. ಮೂಗುತಿ, ತಿಲಕ, ಕುಂಡಲ ಮೊದಲಾದ ಆಭರಣಗಳನ್ನು ಆಗಾಗಲೇ ತಯಾರಿಸಿಕೊಳ್ಳಲೂ ಬಳಕೆಯಾಗುತ್ತದೆ.

ತೆಂಕುತಿಟ್ಟಿನಲ್ಲಿ ಮಣಿಹರಳುಗಳ ಬಳಕೆ ಹೆಚ್ಚಾಗಿ, ಬೇಗಡೆಯ ಪ್ರಾಶಸ್ತ್ಯ ಕಡಿಮೆಯಾಗಿದೆ.

ಬೇಟೆ : ಬೇಟೆಯ ದೃಶ್ಯ. ಇದರಲ್ಲಿ ಮುಖ್ಯ ವೇಷ (ರಾಜ ಅಥವಾ ಕಿರಾತ), ಕಿರಾತ ಪಡೆ ಇರುತ್ತವೆ.

ಒಬ್ಬ ಹಿರಿಯ ಬೇಟೆಗಾರನಾಗಿ ಹಾಸ್ಯಗಾರ ನಿರುತ್ತಾನೆ. (ಮುದಿಯಪ್ಪಣ್ಣ) ಇದಕ್ಕೆ ವಿಶಿಷ್ಟವಾದ ಬಡಿತ, ಮುಕ್ತಾಯಗಳೂ, ಅದಕ್ಕನುಸರಿಸಿದ ಕುಣಿತಗಳೂ ಇವೆ.

ಬೈರಾಗಿ : 1. ಪೂರ್ವರಂಗದ ಕಟ್ಟು ಹಾಸ್ಯಗಳಲ್ಲೊಂದು ಬೈರಾಗಿ ಹಾಸ್ಯ. ಹಿಂದಿ ಭಾಷೆ ಬೆರಸಿ ಮಾತಾಡುವುದು. ಇದು ನಾಥ ಸಂಪ್ರದಾಯದ ಸ್ಫೂರ್ತಿ.

ಒಂಟಿ ಬೈರಾಗಿ (ರಾಂಬೈರಾಗಿ), **ಹಿಂಡು ಬೈರಾಗಿ** ಎಂದು ಇದರಲ್ಲಿ ಎರಡು ವಿಧ.

2. ಕಥೆಯಲ್ಲಿ ಬರುವ ಬೈರಾಗಿ ಪಾತ್ರ– ಉದಾ: ಗಿರಿಜಾಕಲ್ಯಾಣದ ಯೋಗಿ ಅಥವಾ ಬೈರಾಗಿ ವೇಷ.

ಬೈಲಾಟ : ನೋಡಿ : **ಬಯಲಾಟ.**

ಬೊಂಬೆಯಾಟ : ಬೊಂಬೆಗಳನ್ನು ಪಾತ್ರಗಳನ್ನಾಗಿಸಿ ಕುಣಿಸಿ ಆಡಿಸಿ ತೋರಿಸುವ ಆಟ. ಗೊಂಬೆಯಾಟ. ಇದರಲ್ಲಿ **ಸೂತ್ರದ ಬೊಂಬೆಯಾಟ, ತೊಗಲು ಬೊಂಬೆಯಾಟ** ಎಂದು ಎರಡು ವಿಧ. ಯಕ್ಷಗಾನ ಬೊಂಬೆಯಾಟವು ಮುಖ್ಯವಾಗಿ ಸೂತ್ರದ ಬೊಂಬೆಯಾಟ. ಎಂದರೆ, ಮರದ ಅಥವಾ ಬಟ್ಟೆಯ ಬೊಂಬೆಗಳನ್ನು ಹಗ್ಗಗಳಿಗೆ ನೇತು ಹಾಕಿ ಅಥವಾ ಕಡ್ಡಿಗಳಿಂದ ಕುಣಿಸುವುದು. ಬೊಂಬೆಯಾಟಗಳು ಕರ್ನಾಟಕದಾದ್ಯಂತ ಇದ್ದು, ಯಕ್ಷಗಾನ ಬೊಂಬೆಗಳೂ, ಅದರ ಆಟಗಳೂ ತೆಂಕು, ಬಡಗು, ಮೂಡಲಪಾಯ ಶೈಲಿಯಲ್ಲಿ ದೊರೆಯುತ್ತವೆ. ಪ್ರತ್ಯೇಕ ಶೈಲಿಯ ತೊಗಲು ಗೊಂಬೆಯಾಟಗಳಿಗೂ ಹಿಮ್ಮೇಳಕ್ಕೆ ಯಕ್ಷಗಾನ ಪ್ರಸಂಗಗಳನ್ನು, ಯಕ್ಷಗಾನ ಶೈಲಿಯ ಸಂಗೀತವನ್ನು ಬಳಸುತ್ತಾರೆ.

ಯಕ್ಷಗಾನ ಬೊಂಬೆಯಾಟಗಳ ಪೈಕಿ ಕುಂದಾಪುರದ ಬಳಿಯ ಉಪ್ಪಿನಕುದ್ರು ಕಾಮತ್ ಮನೆತನದ ಬೊಂಬೆಯಾಟಕ್ಕೆ ಸುಮಾರು 300 ವರ್ಷಗಳಿಗೂ ಮಿಕ್ಕಿದ ಇತಿಹಾಸವಿದೆ.

ಬೊಂಬೆಯಾಟಕ್ಕೆ ಬೇಕಾದ ಗೊಂಬೆಗಳನ್ನು ಬೆಳ್‌ನಂದಿ, ಕರಿಹಾಲ, ಕಾಮಟಿ, ಎತ್ತಾಸ್ ಮೊದಲಾದ ಹಗುರ ಮರಗಳಿಂದ ತಯಾರಿಸುವರು. ಕೈ, ಕಾಲು, ಸೊಂಟ, ಕುತ್ತಿಗೆಗಳಲ್ಲಿ ಕೀಲು (ಜೋಡಣೆ)ಗಳಿದ್ದು, ಸೂತ್ರಗಳಿಂದ ಬೊಂಬೆಗಳನ್ನು ಕುಣಿಸುವರು. ಒಂದು ಬೊಂಬೆಗೆ ಆರು ಸೂತ್ರಗಳು. ಕಪಿ ವೇಷಗಳಿಗೆ ಬಾಲದ ಸೂತ್ರ ಸೇರಿ ಏಳು ಸೂತ್ರಗಳು. ಬೊಂಬೆ ಕುಣಿಸುವವನು ಸೂತ್ರಧಾರಿ.

ಕಪ್ಪು ಬಟ್ಟೆಯ ಹಿನ್ನೆಲೆ, ಅದರ ಮುಂದೆ ರಂಗಸ್ಥಳ, ಅದಕ್ಕೆ ಕಪ್ಪು ಬಟ್ಟೆಯ ಚೌಕಟ್ಟು **(Frame)** ಇದ್ದು, ಹಿಮ್ಮೇಳವು ಹಿಂದೆ, ರಂಗಸ್ಥಳದ ಮುಂದೆ ಕುಳಿತುಕೊಳ್ಳುತ್ತಿತ್ತು. ಈಗ ಹಿಂಬದಿಯಲ್ಲಿರುತ್ತದೆ.

ಈ ಶತಮಾನದ ಆರಂಭದಲ್ಲಿ ಕರಾವಳಿಯಲ್ಲಿ ಸುಮಾರು ಇಪ್ಪತ್ತೈದು ಗೊಂಬೆಯಾಟ ಮೇಳಗಳಿದ್ದಂತೆ ತಿಳಿಯುತ್ತದೆ. ಈಗ ನಾಲ್ಕು ತಂಡಗಳಿವೆ.

ಬೊಟ್ಟು : ಹಣೆಯ ಮೇಲೆ ಇಡುವ ಬೊಟ್ಟು; ತಿಲಕ. ಇದರಲ್ಲಿ **ಉರುಟು ಬೊಟ್ಟು, ಉದ್ದಬೊಟ್ಟು** ಎಂದು ಎರಡು ವಿಧ. ಪುರುಷ ವೇಷಗಳಿಗೆ ಅಡ್ಡನಾಮದ ಮಧ್ಯಕ್ಕೂ, ಉದ್ದನಾಮದ ನಡುವಿಗೂ ಉರುಟು ಬೊಟ್ಟು ಇಡುವರು. ಬಣ್ಣದ ವೇಷಗಳಿಗೆ, ಹಣೆಯ ಮಧ್ಯಕ್ಕೆ ಉರುಟು ಬೊಟ್ಟಿನಂತೆ ಚುಟ್ಟಿಗಳನ್ನು ಇಡುತ್ತಾರೆ.

ಸ್ತ್ರೀವೇಷಗಳಿಗೆ ಎರಡು ಬಗೆಯ ಉದ್ದ ಬೊಟ್ಟುಗಳಿವೆ. ಹಿಂದೆ ಸ್ತ್ರೀವೇಷಕ್ಕೆ ಉರುಟು ಬೊಟ್ಟು ಇರಲಿಲ್ಲ.

ಸ್ತ್ರೀವೇಷದ ಉದ್ದ ಬೊಟ್ಟುಗಳ ಪೈಕಿ ಒಂದು ತುದಿ ಚೂಪಾಗಿದ್ದು, ಕೆಳಗೆ ದಪ್ಪವಾಗಿರುವ ಆಕೃತಿ. ಇನ್ನೊಂದು ಕೇದಗೆಯಾಕಾರಾದ ಕೆಂಪುನಾಮಕ್ಕೆ ಸುತ್ತ ಬಿಳಿ ಚುಕ್ಕಿಗಳನ್ನಿಡುವುದು. ಇದರ ಸುತ್ತ ಬಿಳಿ ಗೆರೆಗಳನ್ನೆಳೆದು, ಹಣೆಯ ಮೇಲ್ಗಡೆವರೆಗೆ ಬೆಳೆಸುತ್ತಿದ್ದುದೂ ಉಂಟು.


ಬೋನ : ಮದ್ದಲೆಯ ಎಡಭಾಗಕ್ಕೆ ಹಚ್ಚುವ ಹಿಟ್ಟಿನ ಕರ್ನ. ಹಿಟ್ಟು, ಅನ್ನ ಮತ್ತು ಬೂದಿಯನ್ನು ಬೆರೆಸಿ ಸಿದ್ಧಪಡಿಸುವರು. ಅವಲಕ್ಕಿ, ಗೋದಿಹಿಟ್ಟುಗಳನ್ನೂ ಬಳಸುವುದಿದೆ.

ಬಡಗುತಿಟ್ಟಿನಲ್ಲಿ ಈಗಲೂ ಬೋನವು ಬಳಕೆಯಲ್ಲಿದೆ. ತೆಂಕುತಿಟ್ಟಿನಲ್ಲಿ ಎಡಕ್ಕೂ ಕಿಟ್ಟದ ಕರ್ಣವು ಬಳಕೆಗೆ ಬಂದಿದೆ.

ಬೋಯಿಬ್ರಾಣ : ಬೋವಿ ಬ್ರಾಹ್ಮಣ. ಪೂರ್ವರಂಗದ ಒಂದು ಕಟ್ಟು ಹಾಸ್ಯ. ಮೀನುಗಾರ ಮತ್ತು ಬ್ರಾಹ್ಮಣ ಎಂಬುದರ ಮಿಶ್ರ ಅಣಕ.


ಬೋಳು ಬಣ್ಣ : ಬಣ್ಣದ ವೇಷದಲ್ಲಿ ಮುಖವರ್ಣಿಕೆಯ ಒಂದು ಕ್ರಮ. ಮುಖಕ್ಕೆ ಚುಟ್ಟಿಯ ಮುಳ್ಳುಗಳ ಸಾಲುಗಳನ್ನಿಡದೆ, ಆ ಆಕೃತಿಯಲ್ಲಿ ಗೆರೆಗಳನ್ನು ಮಾತ್ರ ಬರೆಯುವುದು. ಚುಟ್ಟಿ ಇಲ್ಲದ ಬಣ್ಣದವೇಷ; ಗೀಟು ಬಣ್ಣ.

ಬೋಳುಮುಳ್ಳು : ಬೋಳು ಭುಜಮುಳ್ಳು. ಎಂದರೆ, ಬೇಗಡೆ ಹಚ್ಚಿರುವ, ಆದರೆ ಕನ್ನಡಿ ಹರಳು




ತಾಸ್ಮಾರು

ತೋಳುಕಟ್ಟು (ಸ್ತ್ರೀ)






ತೋಳುಕಟ್ಟು (ಪುರುಷ)



ಪಡಿಮಂಚ



ದೀವಟಿಕೆ





ಬಳೆ

ಬೊಟ್ಟುಗಳು

ಇಲ್ಲದಿರುವ ಭುಜಮುಳ್ಳು. ಚೂಪುತುದಿಯ ಮುಳ್ಳುಗಳ ಭುಜಕೀರ್ತಿ.

ಬ್ರಹ್ಮಸಭೆ: ಹಿಂದೆ ಹರಕೆ ಬಯಲಾಟದಲ್ಲಿ ರಂಗಸ್ಥಳದ ಮುಂಗಡೆ ಇರುವ ಬ್ರಾಹ್ಮಣ ಸಭೆಯ ಸ್ಥಳ. ಇಲ್ಲಿ ಒಂದು ಕಾಲುದೀಪ, ವೀಳ್ಯದ ತಟ್ಟೆ ಇಡುತ್ತಿದ್ದರು. ಈಗ ಈ ಕ್ರಮವಿಲ್ಲ.

ಬ್ರಾಹ್ಮಣ ಹಾಸ್ಯ: ಪೂರ್ವರಂಗದ ಒಂದು ಕಟ್ಟುಹಾಸ್ಯ. ನಕಲಿ ಪುರೋಹಿತ. ಬ್ರಾಹ್ಮಣ ನೊಂದಿಗೆ ಅವನ ಹೆಂಡತಿ ಇರುವುದೂ ಉಂಟು.

ಭಾಗವತ(ರು): ಯಕ್ಷಗಾನ ಪ್ರದರ್ಶನದ, ಪ್ರಮುಖ ವ್ಯಕ್ತಿ; ಸಾಂಪ್ರದಾಯಿಕವಾಗಿ ಮೇಳದ ಪ್ರಧಾನ ವ್ಯಕ್ತಿ ಕೂಡ. ಆಟ, ತಾಳಮದ್ದಲೆಗಳಿಗೆ ಸಂಬಂಧಪಟ್ಟ ಪ್ರಸಂಗದ ಪದ್ಯಗಳನ್ನು ಹಾಡುವುದು ಇವನ ಮುಖ್ಯ ಕಾರ್ಯ. ರಂಗದ ಲಯ, ಗತಿಗಳ ನಿರ್ಣಯ, ಸಮಯ ಹೊಂದಾಣಿಕೆ, ರಂಗ ನಿರ್ದೇಶನಗಳು ಇವನಿಗೆ ಸೇರುತ್ತವೆ. ಪಾತ್ರಗಳ ವಿತರಣೆ, ಚೌಕಿಯಲ್ಲಿ ಕಲಾವಿದರ ಶಿಸ್ತು ನಿಯಂತ್ರಣವೂ ಇವನ ವ್ಯಾಪ್ತಿಯ ಕೆಲಸಗಳು.

ಆಟದ ಪ್ರಸಂಗ ನಿರ್ಣಯ ಮಾಡುವ ಹೊಣೆ ಕೂಡ ಭಾಗವತನದಿತ್ತು. ಈಗ ಹೆಚ್ಚಾಗಿ ಈ ಹೊಣೆ ವ್ಯವಸ್ಥಾಪಕನಿಗೆ ಸಂದಿದೆ. ಪ್ರಸಂಗ, ಅದರ ಕಥೆ, ಹಿನ್ನೆಲೆ, ಪಾತ್ರಗಳ ಸ್ಥಾನ, ಅವುಗಳ ಕೆಲಸ, ರಂಗ ಪ್ರಯೋಗದ ವಿವರಗಳು– ಈ ಬಗ್ಗೆ ವೇಷಧಾರಿಗಳಿಗೆ ಮಾಹಿತಿ ನೀಡುವುದು ಭಾಗವತನ ಜವಾಬ್ದಾರಿ. ಇದಕ್ಕೆ "ಅನುಭವ **ಕೊಡುವುದು**" ಮತ್ತು "ದಾರಿ ಹೇಳುವುದು" ಎನ್ನುವರು.

ಹಾಡುಗಾರನಿಗೆ ಭಾಗವತ, ಭಾಗವತರ್ ಎಂಬ ಹೆಸರು ದಕ್ಷಿಣ ಭಾರತದಾದ್ಯಂತ ಇದೆ. ಕರ್ನಾಟಕ ಸಂಗೀತದ ಗಾಯಕನಿಗೂ ಈ ಹೆಸರು ಈಗಲೂ ಉಂಟು. ವೈಷ್ಣವ ಭಾಗವತ ಸಂಪ್ರದಾಯದಿಂದ ಬಂದಿರುವ ಹೆಸರಿದು. ದೇವಾಲಯಗಳಲ್ಲಿ, ದೇವರ ಎದುರು, ಉತ್ಸವ ಸಂದರ್ಭದಲ್ಲಿ ಸಂಗೀತ ಸೇವೆಗೆ ನಿಯುಕ್ತನಾಗುವ ವ್ಯಕ್ತಿ ಭಾಗವತ. ಈ ಉದ್ಯೋಗದಿಂದಾಗಿ ಭಾಗವತ ಎಂಬುದು ಮನೆತನದ ಅಡ್ಡ ಹೆಸರು ಆಗಿದೆ. ಈ ಭಾಗವತ ಎಂಬ ಹೆಸರು ಯಕ್ಷಗಾನಕ್ಕೆ– ದೇವಾಲಯದ ಭಾಗವತರೆಂಬ ಸ್ಥಾನದಿಂದಲೇ ಬಂದಿದೆ. ಯಕ್ಷಗಾನ ಭಾಗವತನ ಸಾಂಪ್ರದಾಯಿಕ ಪೋಷಾಕು ಗರ್ಭಸುತ್ತಿ ಮುಂಡಾಸು, ಕಪ್ಪು ಡವರಂಗಿ (ಕೋಟು), ಕೊರಳಿಗೆ ಗುಂಡುಸರ– ಇವು ಕೂಡ, ದೇವಾಲಯದ ಭಾಗವತನ ವೇಷ ದಿಂದಲೇ ಬಂದವುಗಳು.

ಪ್ರಸಂಗವನ್ನು ಹಾಡುವುದು, ರಂಗನಿರ್ದೇಶನ ನಿಯಂತ್ರಣ, ಪಾತ್ರವಿತರಣೆ, ಕಲಾವಿದರಿಗೆ ಮಾಹಿತಿ ನೀಡುವುದು. ಮೇಳದ ಒಳ ಆಡಳಿತ, ಪ್ರಸಂಗವನ್ನು ನಿರ್ಣಯಿಸುವುದು– ಇವು ಭಾಗವತನ ಕೆಲಸಗಳು. ಈ ಪೈಕಿ ಕೊನೆಯ ಎರಡು, ಈಗ ವ್ಯವಸ್ಥಾಪಕನಿಗೆ ಸೇರಿದ ಕೆಲಸಗಳಾಗಿವೆ. ಕಲಾವಿದರಿಗೆ ರಜೆ ಮಂಜೂರು ಮಾಡುವ ಅಧಿಕಾರ, ಹೆಚ್ಚಾಗಿ, ಇಂದಿಗೂ ಭಾಗವತರದ್ದೆ.

ಭಾಗವತನಾದವನಲ್ಲಿ ಭಾವಪ್ರಜ್ಞೆ, ಸಾಹಿತ್ಯ ಸಂಗೀತಗಳ ಉತ್ತಮ ಪರಿಜ್ಞಾನ, ಚೆಂಡೆ ಮದ್ದಲೆ ಗಳನ್ನು ಸ್ವತಃ ನುಡಿಸುವ ಸಾಮರ್ಥ್ಯ, ರಂಗತಂತ್ರದ ಹಿಡಿತ, ನಿಯಂತ್ರಣ ಸಾಮರ್ಥ್ಯ, ಕಲಾವಿದ ರನ್ನೂ, ಸಭೆಯನ್ನೂ ನಿಯಂತ್ರಿಸುವ ವೈಯಕ್ತಿಕ ವರ್ಚಸ್ಸು, ಕವಿತ್ವ, ಯಕ್ಷಗಾನದ ಅಂಗೋಪಾಂಗ ಗಳ ಸೂಕ್ಷ್ಮಜ್ಞಾನ ಮತ್ತು ಮುಖ್ಯವಾಗಿ ಪ್ರಸಂಗ ಗಳ ಕಂಠಪಾಠ– ಇವು ನಿರೀಕ್ಷಿತ ಗುಣಗಳು.

ಮೇಳದ ಯಜಮಾನನು, ಕಲಾವಿದರಿಗೆ ಕೊಡ ಬೇಕಾದ ಸೂಚನೆಗಳನ್ನು ಭಾಗವತರ ಮೂಲಕ ಕೊಡುವುದು, ಮೇಳದಲ್ಲಿನ ವಿವಾದ, ಸಮಸ್ಯೆ ಗಳನ್ನು ಭಾಗವತರನ್ನು ಮುಂದಿಟ್ಟುಕೊಂಡು ಪರಿಹರಿಸುವುದು ಪದ್ಧತಿ. ಮೇಳದ ಸಂಘಟನೆ, ಕಲಾವಿದರ ಸೇರ್ಪಡೆ, ಆಡಳಿತ, ಧೋರಣಾತ್ಮಕ ನಿರ್ಧಾರ– ಇವುಗಳಲ್ಲೂ ಯಜಮಾನನು ಭಾಗವತರ ಸಲಹೆ ಪಡೆಯುತ್ತಾನೆ. ಹಿಂದೆ, ಹೆಚ್ಚಾಗಿ ಭಾಗವತರೇ ಮೇಳದ ಸಂಚಾಲಕರೂ ಆಗಿರುತ್ತಿದ್ದರು.

ಮೇಳಗಳಲ್ಲಿ ಬ್ರಾಹ್ಮಣೇತರ ಕಲಾವಿದರೆ ಹೆಚ್ಚಿಗೆ ಇರುತ್ತಿದ್ದ ಕಾಲವಿತ್ತು. ಆಗಲೂ, ಭಾಗವತನು ಬ್ರಾಹ್ಮಣನೇ ಆಗಿರುತ್ತಿದ್ದನು.

ಭಾಗವತನು ನಡೆಸುವುದರಿಂದಲೂ, ಅವನ ನಿಯಂತ್ರಣದಲ್ಲಿರುವುದರಿಂದಲೂ ಯಕ್ಷಗಾನ ಆಟಕ್ಕೆ ಭಾಗವತರಾಟವೆಂದೂ ಹೆಸರಿದೆ. ಆಂಧ್ರದ ಕೂಚಿಪುಡಿ ಕಲೆಯ ಒಂದು ಪ್ರಕಾರಕ್ಕೂ ಭಾಗವತ ಮೇಳವೆಂಬ ಹೆಸರಿದೆ.

ರಂಗದಲ್ಲಿ ಭಾಗವತನು ಪದ್ಯಗಳನ್ನು ಹಾಡುವುದು ಮಾತ್ರವಲ್ಲ ಅವನು, ಅಲ್ಲಿ ಒಂದು ಜೀವಂತ ಶಕ್ತಿಯಾಗಿರಬೇಕಾಗುತ್ತದೆ. ಭಾಗವತನು ಪಾತ್ರ ಪ್ರವೇಶದಲ್ಲಿ, ಪಾತ್ರಗಳನ್ನು ಪರಿಚಯಿಸುವುದಕ್ಕಾಗಿ ಸಂಬೋಧಿಸಿ, ಸಂಭಾಷಿಸ ಬೇಕು. ಉದಾ:

ಭಾಗವತ: ರಾಜರಾಜಾಧೀಶ, ರಾಜನಕ್ಷತ್ರ ಚಂದ್ರೋದಯ– ಅಥವಾ, ಭಳಿರೇ ಪರಾಕ್ರಮ ಕಂಠೀರವ!

ಪಾತ್ರ: ಆಹಾ, ಬಲ್ಲಿರೇನಯ್ಯ?

ಭಾಗ: ಇರುವಂಥಾ ಸ್ಥಳ?
ಪಾತ್ರ: ಹಸ್ತಿನಾವತಿಗೆ ಯಾರೆಂದು ಕೇಳಿದ್ದೀರಿ?
ಭಾಗ: ಕೌರವೇಶ್ವರ ಎಂದು ಕೇಳಿದ್ದೇವೆ.
ಪಾತ್ರ: ನಾವೇ ಸರಿ.
ಭಾಗ: ಬಂದಂತಹ ಕಾರ್ಯ?
ಪಾತ್ರ: ಅನೇಕವಿರುತ್ತದೆ. ಕೇಳಿರಿ–
ಭಾಗ: ಪದ್ಯ ಹಾಡುತ್ತಾನೆ.

ಪ್ರದರ್ಶನದ ಮಧ್ಯೆ ಅಲ್ಲಲ್ಲಿ ಭಾಗವತನು ಮಾತಿಗೆ ಒತ್ತುಕೊಟ್ಟು ಜಾಗಟೆ ತಾಳಗಳ ಗತ್ತುಕೊಟ್ಟು, ಮಾತು ಸೇರಿಸಿ, ವೇಷಧಾರಿಗಳಿಗೆ ನೆನಪಿಸಿಕೊಟ್ಟು, ಎಚ್ಚರಿಕೆ ನೀಡಿ, ಪ್ರದರ್ಶನವು ಸ್ವಾರಸ್ಯವಾಗಿರುವಂತೆ ಮಾಡುತ್ತಾನೆ. ಎಲ್ಲ ಪಾತ್ರಗಳು ಸ್ವಗತವನ್ನು ಭಾಗವತನೊಂದಿಗೆ ಹೇಳುತ್ತಾರೆ. ಆಗ ಆತನು ಹೂಂಗುಟ್ಟುತ್ತ ಮತ್ತು ಪ್ರಶ್ನೆ ಕೇಳುತ್ತ ಮಾತಿಗೆ ಬಲ ಕೊಡುವನು. ಸ್ವಗತದ ಪದ್ಯಗಳ ಅರ್ಥವು ಸಾಗುವಾಗ, ಒಂದು ಪದ್ಯ ದಿಂದ ಇನ್ನೊಂದು ಪದ್ಯಕ್ಕೆ **'ಸಂದರ್ಭ'** ಅಥವಾ **'ಎತ್ತುಗಡೆ'** ಕೊಡುವುದೂ ಭಾಗವತನೇ. ಪಾತ್ರ ಗಳಿಗೆಲ್ಲ ಭಾಗವತನೇ ಅಂತರಂಗ, ಸಾಕ್ಷಿ, ಸ್ನೇಹಿತ, ಪಕ್ಷೀಯ ವ್ಯಕ್ತಿ. ಮಂತ್ರಿ, ಸೇನಾಪತಿ, ಪುರೋಹಿತ– ಮೊದಲಾಗಿ ಪೂರಕ ಪಾತ್ರವು ರಂಗದಲ್ಲಿ ಇಲ್ಲದಿದ್ದರೆ, ಭಾಗವತನು ಕುಳಿತಲ್ಲಿಂದಲೇ ಆ ಪಾತ್ರದ ಸ್ಥಾನವನ್ನೂ ಪೂರೈಸುತ್ತಾನೆ.

ಸಂದರ್ಭಕ್ಕೆ ಅಗತ್ಯವಿದ್ದಾಗ, ಹೆಚ್ಚುವರಿ ಪದ್ಯಗಳನ್ನು ಭಾಗವತನು ರಚಿಸಿ ಹಾಡುತ್ತಾನೆ. ಇವುಗಳಿಗೆ **"ಭಾಗವತರ ಪದ"** ಅಥವಾ **"ಕಿಸೆಪದ್ಯ"** ಎನ್ನುತ್ತಾರೆ.

ಹಾಡಿನೊಂದಿಗೆ ವಿವರವಾದ ಪದಾಭಿನಯ, ಪದ್ಯಾಭಿನಯಗಳಿರುವಾಗ (ವಿಶೇಷತಃ ಉತ್ತರ ಕನ್ನಡದ ಪದ್ಧತಿಯಲ್ಲಿ) ಭಾಗವತನ ಹೊಣೆ ಹೆಚ್ಚಿನದು. ಇಲ್ಲಿ ಪರಸ್ಪರ ಅನುಸರಣೆ, ಸಾಹಿತ್ಯ, ತಾಳಗಳ ಹೊಂದಾಣಿಕೆ ನಾಜೂಕಾಗಿರಬೇಕು. ಹಾಡುವಿಕೆಯ ಆವರ್ತನಗಳೂ ಹೆಚ್ಚು.

ನೋಡಿ: **ಭಾಗವತಿಕೆ, ಸಂಗೀತ, ಸಂಗೀತಗಾರ.**

ಭಾಗವತನಾಮ: 1. ಹಣೆಯ ಮೇಲೆ ಬರೆಯುವ ಉದ್ದನಾಮ.
2. ಉದ್ದನಾಮ ಮತ್ತು ಅದರ ಎರಡು ಬದಿಗಳಲ್ಲಿ ಅಡ್ಡಗೀರು ಗಂಧಗಳಿರುವ ಬರವಣಿಗೆ.

ಭಾಗವತರ ಆಟ: ಆಟ. ಯಕ್ಷಗಾನ ಪ್ರದರ್ಶನ. ಬಯಲಾಟ. ಭಾಗವತರು ಆಡಿಸುವ ಆಟ.

ಭಾಗವತರ ಮೇಳ = ನೋಡಿ: ಆಟದ ಮೇಳ.

ಭಾಗವತರ ಪದ: 1. ರಂಗದಲ್ಲಿ ಭಾಗವತರು ರಚಿಸಿ ಅಥವಾ ಬೇರೆಡೆಯಿಂದ ಹೊಂದಿಸಿ ಹಾಡುವ ಪದ್ಯ. **ಕಿಸೆಪದ್ಯ.** ಪ್ರಸಂಗ ಪಾಠದಲ್ಲಿಲ್ಲದ ಪದ್ಯ.
2. ಕತೆಯನ್ನು ಮುಂದುವರಿಸಲು, ಕೊಂಡಿಯಾಗಿರುವ ಪದ್ಯಗಳು. ಇದಕ್ಕೆ ಪಾತ್ರವು ಅರ್ಥ ಮಾತಾಡುವುದಿಲ್ಲ.

ಭಾಗವತಿಕೆ: 1. ಭಾಗವತನ ಕೆಲಸ. ಹಾಡುಗಾರಿಕೆ ಮತ್ತು ರಂಗ ನಿರ್ದೇಶನ.

– ಪೂರ್ವರಂಗದ ಕೊನೆಯಲ್ಲಿ ಬರುವ ಸ್ತ್ರೀವೇಷದ ನರ್ತನದಿಂದ ತೊಡಗಿ (ಅಥವಾ ಕಥಾರಂಭದಿಂದ ತೊಡಗಿ) ಆಟದ ಕೊನೆಯ ತನಕದ ಹಾಡುವಿಕೆಗೆ ಭಾಗವತಿಕೆ ಎಂದು ಹೆಸರು. ಅದರ ಮೊದಲಿನ ಹಾಡುಗಾರಿಕೆಗೆ **ಸಂಗೀತ** ಎಂದೂ, ಅದನ್ನು ಹಾಡುವವನಿಗೆ **ಸಂಗೀತಗಾರ** ಎಂದೂ ಹೆಸರು.

ನೋಡಿ: **ಸಂಗೀತ, ಸಂಗೀತಗಾರ.**

– ಭಾಗವತಿಕೆ ಎಂಬುದು ಭಾಗವತನ ಹೊಣೆ ಮತ್ತು ಪ್ರಾವೀಣ್ಯದ ಒಂದು ಸಮಗ್ರ ಪರಿಕಲ್ಪನೆ. ಉದಾ: ಈ ಮಾತು... "ಹಾಡಲು ಗೊತ್ತಿದ್ದರೆ ಸಾಲದು. ಭಾಗವತಿಕೆ ಗೊತ್ತಿರಬೇಕು."

ಭಾವನೆ ಕೊಡುವುದು: 1. ಮಾತಿನಲ್ಲಿ ಭಾವಾಭಿವ್ಯಕ್ತಿ. ಸ್ವರದ ಏರಿಳಿತ, ಆಂಗಿಕ ಚಲನೆ.
2. ಹಾಡುಗಾರಿಕೆಯಲ್ಲಿ ಸ್ವರ, ರಾಗಗಳ ಮೂಲಕ ಭಾವದ ಅಭಿವ್ಯಕ್ತಿ.
3. ಮಾತಿಲ್ಲದೆ, ಚಲನೆ ಮತ್ತು ಆಂಗಿಕ ಅಭಿನಯ ಮಾತ್ರ ನೀಡುವುದು, **'ನಟನೆ ಕೊಡುವುದು'.**

ಭೀಮನ ಕಿರೀಟ (-ಮುಡಿ) (ತೆ.): ಭೀಮನ ಪಾತ್ರಕ್ಕೆ ವಿಶಿಷ್ಟವಾದ ಕಿರೀಟ. **ರಾಜಕಿರೀಟ** ಅಥವಾ **ಕೋಲು ಕಿರೀಟ**ದ ಸಾಮ್ಯವುಳ್ಳದ್ದು. ಕೆಳಗೆ ಸಪೂರವಾಗಿದ್ದು, ಮೇಲಕ್ಕೆ ತೋರವಾಗುತ್ತ ಹೋಗುವ ಅನೇಕ ಸ್ತರಗಳ ಜೋಡಣೆಯಂತಿದೆ. ಈಗ, ವೀರಭದ್ರ, ಕುಂಭಕರ್ಣ ವೇಷಗಳಿಗೂ ಇದನ್ನು ಧರಿಸುವರು.

– ಭೀಮನ ವೇಷಕ್ಕೆ ಉತ್ತರ ಕನ್ನಡದಲ್ಲಿ ಮುಂಡಾಸನ್ನೂ ಬಡಗುತಿಟ್ಟಿನಲ್ಲಿ ಕಿರೀಟವನ್ನೂ ಧರಿಸುವರು.


ಭೀಮನಮುಡಿ = ನೋಡಿ: ಭೀಮನ ಕಿರೀಟ.

ಭುಜ ಕಿರೀಟ = ನೋಡಿ: ಭುಜಕೀರ್ತಿ.

ಭುಜಕಟ್ಟು = ನೋಡಿ: ಭುಜಕೀರ್ತಿ.


ಭುಜಕೀರ್ತಿ /ಭುಜ ಕಿರೀಟ / ಭುಜಕಟ್ಟು:
1. ಬೇಗಡೆ ಹಚ್ಚಿದ ಮರದ ಮುಳ್ಳುಗಳನ್ನು, ವಸ್ತ್ರದ ಮೆತ್ತೆಗೆ ಹೊಲಿದು ತಯಾರಿಸುವ

ಭುಜ ದಂಬೆಗಳು




ಗಿಳಿ ದಂಬೆ

ಭುಜಕೀರ್ತಿ





ರೆಕ್ಕೆ ದಂಬೆ



ಭುಜಮುಳ್ಳು



ಬೋಳು ಬಣ್ಣ



ಮುದ್ರೆ



ಮುದ್ರೆಗಳು

ತ್ರಿಕೋಣಾಕೃತಿಯ (ಒಡವೆಯಂತಹ) ತೊಡುಗೆ. ಪಾತ್ರಾನುಗುಣವಾಗಿ ಆಕಾರ ವ್ಯತ್ಯಾಸವಿದೆ.

2. ಬಣ್ಣದ ವೇಷಗಳು ಧರಿಸುವ ದಂಬೆ ಅಥವಾ ಭುಜದಂಬೆ. ಇದಕ್ಕೆ ಮುಳ್ಳುಗಳಿಲ್ಲ. ಒಳಗೆ ಟೊಳ್ಳಾಗಿರುವಂತೆ ಮರವನ್ನು ಕೊರೆದು ತಯಾರಿಸುವ ತೋಡಿನಂತಹ ರಚನೆ. ಹೊರಗೆ ಬೇಗಡೆ ಇರುತ್ತದೆ. ಹೊರ ಮೆಯ್ ಅಂಚಿಗೆ ಚಾಚಿಕೊಂಡ ಚಿಕ್ಕ ರೆಕ್ಕೆಗಳು ಮೇಲ್ಪದಿಗೆ ಗಿಳಿಯಂತಹ ರಚನೆಯೂ ಇರುವುದುಂಟು.

3. ಮಣಿಗಳನ್ನು ಹೊಲಿದು ಮಾಡಿದ ಭುಜಕಟ್ಟು. ಇದು ಮುಚ್ಚಳದಂತಿರುತ್ತದೆ.

ಭುಜದಂಬೆ = ನೋಡಿ : ದಂಬೆ.

ಭುಜಮುಳ್ಳು = ನೋಡಿ : ಭುಜಕೀರ್ತಿ.

ಭೂತಾಳೆ: ಭೂತಾಳೆ ಗಿಡ. **(Schefflera roxburghi)** ಹಗ್ಗವಾಗಿ ಹಾಗೂ ಮೀಸೆ, ಕೂದಲುಗಳಾಗಿ ಈ ಗಿಡದ ಎಲೆಗಳ ನಾರು ಬಳಕೆ.

ಭೈರವಿ ಅಷ್ಟತಾಳ (ತೆ.): ತ್ವರಿತ ಅಷ್ಟತಾಳದ ನಾಮಾಂತರ. ಇಲ್ಲಿ ಭೈರವಿ ಎಂಬುದು ರಾಗದ ಹೆಸರಾದರೂ, ಏರುಪದ್ಯಗಳಿಗೆ ಈ ರಾಗ ಇರುವುದರಿಂದ, ತಾಳದೊಂದಿಗೆ ಇದು ಸೇರಿ ಈ ಶಬ್ದ ನಿರ್ಮಾಣವಾಗಿದೆ. ಇದರ ಬಿಡ್ತಿಗೆ, ಮುಕ್ತಾಯಗಳು ಏಕತಾಳದ ನಡೆಯಲ್ಲಿರುತ್ತವೆ.

ಭೈರವಿ ಏಕತಾಳ (ತೆ.): ವೀರ, ರೌದ್ರ, ರಸಗಳ ಪದ್ಯಗಳಿಗೆ ಬಳಸುವ ಏಕತಾಳದ ಒಂದು ನಡೆ, ಇಂತಹದೇ ಇನ್ನೊಂದು ನಡೆ **ಮಾರವಿ ಏಕತಾಳ.** ಭೈರವಿ ಏಕತಾಳದ ಪದ್ಯದ ಪೂರ್ವಾರ್ಧದಲ್ಲಿ ಹದಿನಾರು ಮಾತ್ರೆಗಳ ಎರಡು ಚರಣಗಳಿದ್ದರೆ, ಮಾರವಿ ಏಕತಾಳದಲ್ಲಿ ನಾಲ್ಕು ಮಾತ್ರೆಗಳ ಎಂಟು ಗಣಗಳಿರುವ ಎರಡು ಚರಣಗಳಿರುತ್ತವೆ. ಹೀಗೆ, ಭೈರವಿ ಏಕತಾಳಕ್ಕೆ ವಿಶಿಷ್ಟವಾದ ಪದ್ಯ ರಚನೆ ಯಿರುತ್ತದೆ.

ಭೈರವಿ ಝುಂಪೆ: ತ್ವರಿತ ಝುಂಪೆಯ ನಾಮಾಂತರ. ಗಿಡ್ಡ ಝುಂಪೆ ತಾಳ.

ಭೈರವಿ ತ್ರಿವುಡೆ: ತ್ವರಿತ ತ್ರಿವುಡೆ ತಾಳದ ನಾಮಾಂತರ. ಗಿಡ್ಡ ತ್ರಿವುಡೆ.

ಭೋಪರಾಕು ಹಾಕುವುದು = ನೋಡಿ : ಬಹುಪರಾಕ್ ಹಾಕುವುದು.

ಮ

ಮಂಗಲ: 1. ಆಟವು ಕೊನೆಗೊಳ್ಳುವಿಕೆ. ಪ್ರದರ್ಶನ ಮುಕ್ತಾಯ.

2. ಮಂಗಲ ಪದ್ಯ.

ಮಂಗಲಪದ: ಪ್ರದರ್ಶನದ ಕೊನೆಗೆ ಹಾಡುವ ಮಂಗಲ ಪದ್ಯ. ಇದರಲ್ಲಿ ಚರಣಗಳ ಕೊನೆಗೆ ''ಮಂಗಲಂ। ಜಯ ಮಂಗಲಂ।'' ಅಥವಾ ''ಶುಭ। ಮಂಗಲಂ'' ಎಂದು ಇರುತ್ತದೆ.

ಮಂಗಲ ಪದ್ಯವಾದ ಬಳಿಕ, ಚೌಕಿಯಲ್ಲಿ ''ಕರದೊಳು ಪರಶು ಪಾಶಾಂಕುಶ ಧಾರಗೆ...'' ಎಂಬ ಒಂದು ಹಾಡನ್ನೂ ಹಾಡುವುದು ಪದ್ಧತಿ. ಇದೂ ಮಂಗಲ ಪದವೇ. ಇದು, ಆರಂಭದಲ್ಲಿ ಹಾಡುವ ''ಗಜಮುಖ ದವಗೆ। ಗಣಪಗೆ।...'' ಎಂಬ ಹಾಡಿನ ಕೊನೆಯ ಸೊಲ್ಲು.

ಮಂಡಿಕುಣಿತ ಮಂಡಿ ಹಾಕುವುದು (ಬ./ಉ.): ಮೊಣಕಾಲನ್ನು ನೆಲಕ್ಕಿಟ್ಟು, ಕಾಲುಗಳನ್ನು ಹಿಂದೆ ಚಾಚಿ ಮೊಣಕಾಲಿನ ಆಧಾರದಲ್ಲಿ ತಿರುಗುತ್ತ, ಕಾಲಿನ ಹೆಬ್ಬೆರಳನ್ನು ನೆಲಕ್ಕೆ ತಾಗಿಸಿ ಬದಲಿಸುತ್ತ ಕುಣಿಯುವ ತಿರುಗು ಕುಣಿತ. ವೇಷವು ಕುಳಿತಲ್ಲೆ ಸುತ್ತು ತಿರುಗುತ್ತ ಚಲಿಸುವಂತೆ ಕಾಣುವುದು. ವೀರ ರೌದ್ರರಸಗಳಿಗೆ ಬಳಸುವ ಕುಣಿತ. ಇನ್ನೊಂದು ಬಗೆಯ ಕುಣಿತ. ನೋಡಿ : **'ಕೂತುಮಂಡಿ'.**

ಮಂಡಿ ಹಾಕುವುದು = ನೋಡಿ : ಮಂಡಿಕುಣಿತ.

ಮಂತ್ರವಾದಿ ಹಾಸ್ಯ: ಕಟ್ಟು ಹಾಸ್ಯಗಳಲ್ಲಿ ಒಂದು. ಮಲೆಯಾಳಿ ಪಂಡಿತರ ಅಣಕ. ಜ್ಯೋತಿಷ್ಯ, ಮಂತ್ರವಾದ, ಔಷಧ ವಿಚಾರಗಳಿಗೆ ಸಂಬಂಧಿಸಿದ ಹಾಸ್ಯ. ಮಲೆಯಾಳ, ಕನ್ನಡ, ತುಳು ಭಾಷೆಗಳಲ್ಲಿ ಮಾತಾಡುವುದು. ಕಥಾಪ್ರದರ್ಶನದ ಮಧ್ಯೆ ಕೂಡ ಬಳಕೆಯುಂಟು.

ಮಂತ್ರಿ: 1. ಒಡ್ಡೋಲಗದ ವೇಷಗಳಲ್ಲೊಂದು. ಇದಕ್ಕೆ ಕಥೆಯಲ್ಲಿ ಅಸ್ತಿತ್ವವಿರಬೇಕೆಂದಿಲ್ಲ.

2. ರಾಜನೊಂದಿಗೆ, ಯುದ್ಧಕ್ಕೆ ಹೋಗುವ ಬಲ. (ಮಂತ್ರಿ, ಸೇನಾಪತಿ)

3. ಹಾಸ್ಯಗಾರನ ವೇಷ. ಉದಾ : ಬಭ್ರುವಾಹನನ ಮಂತ್ರಿ.

ಮಕರಂದ: ಹಲವು ಪ್ರಸಂಗಗಳಲ್ಲಿ ಕೃಷ್ಣನ ಜತೆಗೆ ಬರುವ ಹಾಸ್ಯ ಪಾತ್ರ. ಕೃಷ್ಣನ ಸಖ. ವಿಜಯನೆಂದೂ ಹೆಸರಿದೆ.

ಮಕರರೇಖೆ: ಸ್ತ್ರೀವೇಷದ ಮುಖದಲ್ಲಿ ಬರೆಯುವ ಒಂದು ಬಗೆಯ ಗೆರೆ. ನೆಗಳೆಮುಖದ ಆಕೃತಿಯ ಗೆರೆ. ಮಕರಿಕಾಪತ್ರ.

ಮಜಾಯಿಶಿಕೆ/ಮಜಾಶ್ಕಿ: ತಾಳಮದ್ದಲೆಯ ನಾಮಾಂತರ. ಈ ಹೆಸರು ಕಾಸರಗೋಡು ಪ್ರದೇಶದ ಕೆಲವು ಊರುಗಳಲ್ಲೂ, ಉತ್ತರ ಕನ್ನಡದ ಸಿದ್ದಾಪುರ ಪ್ರದೇಶದಲ್ಲೂ ಬಳಕೆಯಿತ್ತು. 'ಮಜಾ' – ವಿನೋದ – ಎಂಬುದರಿಂದ ಈ ಪದ. ಸಿದ್ದಾಪುರ ಪ್ರದೇಶದಲ್ಲಿ ಇದಕ್ಕೆ ಸರಳ, ವೇಷ ತೊಡುವ ಕ್ರಮವೂ ಇದ್ದಿತೆನ್ನುವರು.

ಮಟ್ಟು: ವಿಶಿಷ್ಟಕ್ರಮ, ರೀತಿ, ಸಂಪ್ರದಾಯ ಎಂದು ಸಾಮಾನ್ಯ ಅರ್ಥ.

1. ತಿಟ್ಟು. ತೆಂಕಮಟ್ಟು, ಬಡಗಮಟ್ಟು. ನೋಡಿ: **ತಿಟ್ಟು.**

2. ನಡೆ, ವಿಧಾನ. ಉದಾ: ''ಯಾವ ಮಟ್ಟಿನಲ್ಲಿ ಹೋಗೋಣ ?''.

3. ಯಾವುದಾದರೊಂದು ಪದ್ಯವನ್ನು ಹಾಡುವ ನಿಶ್ಚಿತವಾದ ಶೈಲಿ, ಸ್ವರಾವಳಿ ಮತ್ತು ತಾಳ ಸೇರಿ ಒಂದು ಮಟ್ಟು. ರಾಗದ ವಿಶಿಷ್ಟ ಸ್ವರೂಪವೂ ಆಗಬಹುದು.

ಮಟ್ಟು ಎಂದರೆ ಪದ್ಯದ ಒಂದು ಬಗೆಯ ಸಂಗೀತ ನಡೆ ಎನ್ನಬಹುದು. ರಾಗ, ತಾಳ, ಶೈಲಿ, ಗತಿ. – ಇವುಗಳ ಸಮ್ಮಿಶ್ರ ಪರಿಕಲ್ಪನೆ. ಒಂದೇ ರಾಗವನ್ನು ಬಳಸಿ ಹಲವು ಮಟ್ಟುಗಳಿರಬಹುದು. ಒಂದು ಮಟ್ಟು ಎಂಬುದು ರಾಗದ ಒಂದು ಸಾಧ್ಯತೆಯನ್ನು ಅವಲಂಬಿಸಿರುತ್ತದೆ. ಉದಾ: ಸುರುಟಿ ರಾಗ, ಏಕತಾಳದ ಪ್ರಸಿದ್ಧ ಮಟ್ಟು.

ಯಕ್ಷಗಾನದ ರಾಗಗಳು ಹಲವು ಬಾರಿ, ನಿರ್ದಿಷ್ಟ ಸಂಚಾರದ ಮಟ್ಟು ನಮೂನೆ (Pattern)ಗಳ ರೂಪದಲ್ಲೆ ಗುರುತಿಸಲ್ಪಡುತ್ತವೆ. ಹಾಡುಗಾರಿಕೆಯ ಅಭ್ಯಾಸವೂ ಇಂತಹ ಮಟ್ಟುಗಳ ಅನುಕರಣೆಯನ್ನು ಆಧರಿಸಿ ನಡೆಯುತ್ತದೆ.

ಹೆಚ್ಚಿನ ಮಟ್ಟುಗಳಲ್ಲಿ ರಾಗದ ಖಚಿತ, ಶಾಸ್ತ್ರೀಯ ಸ್ವರೂಪವು ಗೋಚರವಾಗುತ್ತದೆ. ಕೆಲವು, ಮುಖ್ಯವಾಗಿ ಏರುಪದ್ಯಗಳ ಮಟ್ಟುಗಳು ಮಾತ್ರ ರಾಗವೆಂದು ಗುರುತಿಸಬಹುದಾದ ರೂಪವನ್ನು ತೋರಿಸುವುದಿಲ್ಲ. ಅಂತಹ ಕಡೆ ಇರುವ ರಾಗದ ಹೆಸರುಗಳಾದರೂ ಅಷ್ಟೆ. ಉದಾ: ಭೈರವಿ, ಮಾರವಿ, – ಮುಂತಾದ ಅಂಕಿತವುಳ್ಳ ಏರುಪದ್ಯಗಳು.

ಯಕ್ಷಗಾನದ ಮಟ್ಟುಗಳ ಚರಿತ್ರೆಯು ರಾಗಗಳ ಪ್ರಾಚೀನ ರೂಪಗಳನ್ನು ಗುರುತಿಸಲು ತುಂಬ ಸಹಾಯಕವಾಗಿವೆ.

ಈಗ ವಿಭಿನ್ನ ಪ್ರಭಾವಗಳಿಂದ ಹೊಸ ಮಟ್ಟುಗಳು ರೂಪಿತವಾಗುತ್ತವೆ. ವಿಭಿನ್ನ ರೂಪದ ಪದ್ಯಗಳ ರಚನೆಯೂ ಇದಕ್ಕೆ ಕಾರಣವಾಗಿದೆ.

ಮಟ್ಟೆತಾಳ: ಆರು ಅಕ್ಷರ ಕಾಲದ ತಾಳ. ಮಟ್ಟೆತಾಳದ ಪದ್ಯಗಳ ರಚನೆಯು 4 + 2 = 6, 3 + 3 = 6 – ಈ ಎರಡು ಮಾತ್ರಾ ವಿಭಜನೆಯಲ್ಲಿದೆ. ಆದರೆ, ಹಾಡುವಿಕೆಯಲ್ಲಿ 3 + 3 – ಈ ಗತಿಯೇ ನಡೆಯುತ್ತದೆ. ಇದು ರೂಪಕ ತಾಳದ ತ್ವರಿತ ರೂಪವಾಗಿ ಬಳಕೆಯಲ್ಲಿದೆ.

(ತೆ.) ದಸ್ತು : $\overset{x}{\text{ತಾಂ}}$। $\overset{x}{\text{ತ}}$ದ್ದಿನ್ನಕ। $\overset{x}{\text{ಧೀಂ}}$। ತದ್ದಿನ್ನಕ।
ಬಿಡ್ತಿಗೆ: 1. ಧೀಂತರಿಕಿಟ। ಧಿನ್ನಕ್ಕ – ಮೂರು ಬಾರಿ

2. ಧೀಂತರಿಕಿಟ। ಧೀಂತರಿಕಿಟ। ಧೀಂತರಿಕಿಟ
ಧಿಂದ। ತತ್ತಾಂ॥....

ಇಲ್ಲಿ, 2ನೇ ಭಾಗದ ಕೊನೆಯಲ್ಲಿ, ಐದು ಘಾತಗಳಿಂದ, ನಾಲ್ಕು ಘಾತಗಳಿಗೆ ಬದಲಿಸಿ, ಕೊನೆಗೆ, ತ್ವರಿತ ಅಷ್ಟತಾಳದಂತೆ, ಎರಡು ಘಾತಗಳಿಗೆ ಬದಲಿಸಿ ತ್ವರಿತ ಅಷ್ಟತಾಳದ ಮುಕ್ತಾಯವನ್ನು ಬಾರಿಸುವರು. ಐದು ಘಾತಗಳಲ್ಲೇ ಆರಂಭದಿಂದ ಕೊನೆಯವರೆಗೆ ಹಾಡುವ ಸಂಪ್ರದಾಯವಿಲ್ಲ.

ಮುಕ್ತಾಯ: $\overset{x}{\text{ಧೇಂ}}$ತ। $\overset{x}{\text{ಧೆಂ}}$ತರಿಕಿಟ। $\overset{x}{\text{ಧೇಂ}}$ತ।
$\overset{x}{\text{ಧೆಂ}}$ತರಿಕಿಟ। ತಾಂ

(ಬಡಗು/ಉ.ಕ.): ಎರಡು ರೂಪಗಳಲ್ಲಿದೆ. ಐದು ಘಾತದ ಬಾರಿಸುವಿಕೆ (ಪಂಚಘಾತ ಮಟ್ಟೆ) ಮತ್ತು ನಾಲ್ಕು ಘಾತಗಳ ಬಾರಿಸುವಿಕೆ. ಇವೆರಡನ್ನೂ ಮಿಶ್ರ ಮಾಡುವ ಕ್ರಮವಿಲ್ಲ. ದಸ್ತು, ಮುಕ್ತಾಯಗಳು ರೂಪಕ ತಾಳದಂತೆಯೆ ಇದ್ದು, ಐದು ಘಾತಗಳ ರೂಪದಲ್ಲಿ ಬಾರಿಸುವ ಮುಕ್ತಾಯದ, ಅರ್ಧದಷ್ಟನ್ನೆ ನಾಲ್ಕು ಘಾತಗಳ ರೂಪದಲ್ಲಿ ಬಾರಿಸುವರು.

– ಮಟ್ಟೆತಾಳವು ಮುಖ್ಯವಾಗಿ ಏರುಪದ್ಯಗಳಿಗೆ ಬಳಸುವ ತಾಳವಾದರೂ, ಕೆಲವು ಸೌಮ್ಯಪದ್ಯಗಳೂ ಈ ತಾಳದಲ್ಲಿ ಹಾಡಲ್ಪಡುತ್ತವೆ.

ಮಡಂದಲೆ ಮಣಿ: 1. ಮುಂದಲೆ ಸರದ ಒಂದು ಭಾಗ. ಬೈತಲೆ ಸರ ಮತ್ತು ಅದರ ಬುಡದಲ್ಲಿ, ಹಣೆಯಲ್ಲಿ ನಿಲ್ಲುವ ಮುಂದಲೆ ಬೊಟ್ಟು ಸೇರಿದ ಆಭರಣ.

2. ಚಪ್ಪಟೆಯಾಕಾರದ ಬಿಲ್ಲೆ. ಮಡಂದಲೆ ಕಾಯಿ.

ಮಡಲು : ತೆಂಗಿನ ಮರದ, ಅಥವಾ ಅಡಿಕೆ ಮರದ ಸೋಗೆ. ಹಿಂದೆ, ಚೌಕಿಗೆ ಮಡಲಿನ ತಡಿಕೆಯ ಆವರಣವಿರುತಿತ್ತು.

ಮಡಿವಾಳ : ಕಟ್ಟುಹಾಸ್ಯ. ಇದರಲ್ಲಿ ಎರಡು ಬಗೆ **ಊಟ ಮಡಿವಾಳ** ಮತ್ತು **ತೆಂಕ ಮಡಿವಾಳ** (ತೆ.)

ಮಣಿ : ಆಭರಣದ ಭಾಗ. ಬೇರೆ ಬೇರೆ ಆಕಾರದ ಮಣಿಗಳು.

1. ಲೋಹದ ಮಣಿ.
2. ಮರವನ್ನು ಕೊರೆದು ತಯಾರಿಸಿದ ಮಣಿಗಳು.
3. ಕಾಯಿಗಳು, ಹೊನ್ನೆಕಾಯಿ, ತಲೆತಿರುಕನ ಮಣಿ ಇತ್ಯಾದಿ.
4. ಪ್ಲಾಸ್ಟಿಕ್, ಮತ್ತು ಸಿಂಥೆಟಿಕ್ ಜಾತಿಯ ಮತ್ತು ಗಾಜಿನ ಮಣಿಗಳು– 'ಜಪಾನ್ ಮಣಿ'.

ಮಣಿ ಸಾಮಾನು : ಮಾರುಕಟ್ಟೆಯಲ್ಲಿನ ಗಾಜು, ಪ್ಲಾಸ್ಟಿಕಿನ ಮಣಿಗಳನ್ನು ಬಳಸಿ ತಯಾರಿಸಿದ ಆಭರಣಗಳು. (ಇದಕ್ಕಿಂತ ಭಿನ್ನವಾದುದು ಮರದ ಸಾಮಾನು). ಇದರ ಬಳಕೆ ತೆಂಕುತಿಟ್ಟಿನಲ್ಲಿ ಹೆಚ್ಚು.

ಮಣಿಸ್ವರ (ತೆ.) : ಚೆಂಡೆಯ ನಾದದ ಒಂದು ಬಗೆ. ಘಂಟಾಮಣಿಯಂತಹ ಸ್ವರ. ಇದಕ್ಕೆ ಭಿನ್ನವಾದುದು ಕಟ್ಟುಸ್ವರ.

ಮದ್ದಳೆ(ಲೆ) : ಹಿಮ್ಮೇಳ ವಾದ್ಯಗಳಲ್ಲೊಂದು. ಮದ್ದಲೆಯೆಂಬುದು ಯಕ್ಷಗಾನದ ಸ್ಥಾಯಿ ಹಿಮ್ಮೇಳ ವಾದ್ಯ. ಇದು ಸಾದ್ಯಂತ ಇರಬೇಕು. ಹಿಂದೆ, ರಂಗದಲ್ಲಿ ಮಂಚ ಅಥವಾ ಮೇಜು ಬರುವ ಮೊದಲು, ಮದ್ದಲೆಯನ್ನು ಸೊಂಟಕ್ಕೆ ಕಟ್ಟಿಕೊಂಡು, ವಾದಕನು ನಿಂತುಕೊಂಡು, ಬಾರಿಸುವ ಕ್ರಮವಿತ್ತು. ರಚನೆ: ಮರದ ಟೊಳ್ಳು ಕಳಸಿಗೆಗೆ ಎರಡೂ ಕಡೆ ಚರ್ಮ ಮುಚ್ಚಿರುತ್ತದೆ. **ಪ್ರಮಾಣ : ತೆಂಕುತಿಟ್ಟು : ಕಳಸಿಗೆಯ** ಉದ್ದ : 20ರಿಂದ 25 ಇಂಚು. ಸುತ್ತಳತೆ ಮಧ್ಯದ ಡೊಳ್ಳಿನಲ್ಲಿ 30-32 ಇಂಚು. ಬಲಬದಿ ಬಾಯಿ ಅಳತೆ ಸು. 6 1/2 ಇಂಚು. ಎಡಬದಿ ಬಾಯಿ ಅಳತೆ ಸು. 7 ಇಂಚು. ಇದು ಸಾಮಾನ್ಯ ಅಳತೆ. ಶ್ರುತಿಗನುಸರಿಸಿ ಇದು ವ್ಯತ್ಯಾಸವಾಗುತ್ತದೆ. ಉದಾ: ಏರು ಶ್ರುತಿಗಳು ಎಂದರೆ, ಹಾರ್ಮೋನಿಯಂನ ಬಿಳಿಮೂರು, ಬಿಳಿನಾಲ್ಕು, ಕಪ್ಪು ಮೂರು, ಕಪ್ಪು ಐದು ಮನೆಗಳ ಶ್ರುತಿಗೆ ಉದ್ದ 22 ಇಂಚು. ಡೊಳ್ಳಿನ ಅಳತೆ 29 ಇಂಚು. ಬಲಬಾಯಿ 5 3/4 ಇಂಚು. ಎಡಬಾಯಿ 6 1/2 ಇಂಚು.

(ಬಡಗುತಿಟ್ಟು): 1. ಮೇಲಿನ ಅಳತೆಗಳೇ ಸು. 1940ರ ತನಕ ಇದ್ದು, ಮದ್ದಲೆ ಎಲ್ಲ ತಿಟ್ಟುಗಳಲ್ಲೂ ಒಂದೇ ರೀತಿಯಾಗಿತ್ತು.

2. ಈಗ 12 ಇಂಚಿನಿಂದ 18 ಇಂಚು ಉದ್ದದ, 5 ಇಂಚಿನಿಂದ 3 1/2 ಇಂಚು ಬಾಯಿ ಇರುವ ಮದ್ದಲೆಗಳು ಬಳಕೆಯಿವೆ. ಇವು ಏರು ಮದ್ದಲೆಗಳು. ಶ್ರುತಿ ಏರಿಸಲು ಸುಲಭ.

ಮದ್ದಲೆ ಕರ್ನ(ರ್ಣ) : ಕರಣಿ. ನೋಡಿ : **ಕರ್ನ, ಶಾಯಿ, ಮುಚ್ಚಿಗೆ.**

ಮದ್ದಲೆ ಕುತ್ತಿ : ನೋಡಿ : **ಕಳಸಿಗೆ, ಗುಟ್ಟಿಗೆ.**

ಮದ್ದಲೆ ಮರಗಳು : ಹಲಸು, ಖದಿರ (ಕಾಚು), ಕಕ್ಕೆ (ಕೊಂದೆ), ಹೆಬ್ಬಲಸು, ಉಂಡೆಹುಳಿ (ಓಟೆಹುಳಿ), ಹೊನ್ನೆ, ಸಂಪಿಗೆ, ನಾಗಸಂಪಿಗೆ– ಇವು ಪ್ರಶಸ್ತ. ಈ ಪೈಕಿ ಹಲಸಿನ ಮರ, ಖದಿರದ ಮರಗಳು ಅತ್ಯುತ್ತಮ. ಈಗ ತೆಂಗಿನಮರವನ್ನೂ, ಇತರ ಮರಗಳನ್ನೂ ಬಳಸುವರು. ಮರವನ್ನು ಕೊರೆದು **ಕಳಸಿಗೆ (ಕುತ್ತಿ, ಗುಟ್ಟಿಗೆ)** ತಯಾರಿಸುವರು.

ಮದ್ದಲೆ ಮುಚ್ಚಿಗೆ : ಮದ್ದಲೆಯ ಮುಚ್ಚಿಗೆಗೆ ದನದ ಕರುವಿನ ಚರ್ಮ ಮತ್ತು ಅದನ್ನು ಬಿಗಿಯಲು ಎಮ್ಮೆ ಅಥವಾ ಕೋಣನ ಚರ್ಮದ ಬಾರ ಬಳಸುವರು. ನೋಡಿ : **ಮುಚ್ಚಿಗೆ, ಚರ್ಮ, ಬಾರ, ಕರ್ನ.**

ಬಲಬದಿಗೆ ಕಬ್ಬಿಣದ ಕಿಟ್ಟದ ಕರ್ನ (ಕರಣಿ) ಇರುತ್ತದೆ. ಎಡಕ್ಕೆ ಅನ್ನದ ಬೋನವಿರುತ್ತಿತ್ತು. ಈಗ ಕೆಲವೆಡೆ ಎಡ ಬದಿಗೂ ಕರ್ನ ಹಾಕಿದ ಮದ್ದಲೆಗಳನ್ನು ಉಪಯೋಗಿಸುವರು. ನೋಡಿ : **ಬೋನ.**

ಮಯಣ = ನೋಡಿ : **ಮೇಣ.**

ಮದ್ದಳೆಶಾಯಿ = ನೋಡಿ : **ಶಾಯಿ; ಕರ್ನ.**

ಮದ್ದಳೆ(ಲೆ)ಗಾರ : ಮೇಳದ ಮುಖ್ಯ ವಾದ್ಯವಾದಕ. ಪ್ರಧಾನ ಮದ್ದಲೆಗಾರ (ಸಹಾಯಕನು : ನೋಡಿ : **ಒತ್ತು ಮದ್ದಲೆಗಾರ**) ಈತನು ಸಭಾಲಕ್ಷಣದ ಕೊನೆಯ ಭಾಗದಿಂದ ತೊಡಗಿ, ಮಂಗಲದವರೆಗೆ ಸಾಂದರ್ಭಿಕವಾಗಿ ಚೆಂಡೆಯನ್ನೂ, ಮದ್ದಲೆಯನ್ನೂ ಬಾರಿಸಬೇಕು. ರಂಗಸ್ಥಳದ ನಿರ್ದೇಶನ, ನಿಯಂತ್ರಣಗಳಲ್ಲಿ ಈತನು ಭಾಗವತನಿಗೆ ಸಹಾಯಕ. ಮದ್ದಲೆಗಾರ ತಕ್ಕಮಟ್ಟಿನ ಭಾಗವತನೂ ಆಗಿರಬೇಕೆಂಬುದು ನಿರೀಕ್ಷೆ.


ತೆಂಕುತಿಟ್ಟಿನಲ್ಲಿ ಚೆಂಡೆ ವಾದಕನಿಗೆ ಮದ್ದಲೆಗಾರನೆಂದು ಹೆಸರು. ಹಿಂದೆ, ಚೆಂಡೆಯು ಇರಲಿಲ್ಲ, ಮದ್ದಲೆಯು ಮಾತ್ರ ಇದ್ದಿತೆಂಬುದು ಇದರಿಂದ ತಿಳಿಯುತ್ತದೆ.



ಮುಂಡಾಸು – ಪಗಡಿ


ವಜ್ರಾಕೃತಿ ನಾಮ →


ಮುಂಡಾಸು/ಕೇದಗೆ ಮುಂದಲೆ
ಮುಂಡಾಸಿನ ಹಿಂಬದಿ
ಮುಡಿ ಕೇದಗೆ
ಮುಡಿ
ಶಲ್ಲೆ


ಬಲ
ಮದ್ದಲೆ
ಕರ್ನ
ಜೀವಕವಳ
ಕಟ್ಟುಕವಳ
ಇಂಡಿಗೆ
ಸರಸ್ವತಿ ಗಂಟು
ಬಾರ
ಡೊಳ್ಳು
ಎಡ
ಬೋಣ ಅಥವಾ ಕರ್ನ

ಮದ್ದಲೆ ಹೋಳು (ಗ.) = ನೋಡಿ: **ಮದ್ದಲೆ ಕುತ್ತಿ, ಗುಟ್ಟಿಗೆ, ಕಳಸಿಗೆ.**

ಮಯ್/ಮೆಯ್ (ತೆ.) : ಕಾಡಿಗೆ; ಎಣ್ಣೆಮಸಿ.

ಮಯ್‌ಕಡ್ಡಿ/ ಮೆಯ್ಕಡ್ಡಿ (ತೆ.) : ಕಾಡಿಗೆ ಹಚ್ಚಲು ಬಳಸುವ ಕಡ್ಡಿ.

ಮರಕ್ಕಾಲು ಕುಣಿತ: ಪೂರ್ವರಂಗದಲ್ಲಿ, ಈ ಶತಮಾನದ ಆರಂಭದವರೆಗೆ, ಇದ್ದಿತೆನ್ನಲಾದ ಒಂದು ಕುಣಿತ. ಮರದ ಅಥವಾ ಬಿದಿರಿನ ಉದ್ದ ಕೋಲುಗಳಿಗೆ, ನೆಲದಿಂದ ಸುಮಾರು ಒಂದು ಅಡಿ ಎತ್ತರದಲ್ಲಿ ಮೆಟ್ಟಲು ಅಥವಾ ಕೈ ಇರುತ್ತವೆ. ಇಂತಹ ಎರಡು ಕೋಲುಗಳ ಮೇಲೆ ನಿಂತು, ಅದನ್ನು ಮೇಲೆ ಹಿಡಿದುಕೊಂಡು ಕುಣಿಯುವುದು.

ಮರದ ಸಾಮಾನು: ಸಾಂಪ್ರದಾಯಿಕವಾಗಿ ಯಕ್ಷಗಾನದ 'ಸಾಮಾನು' (ವೇಷ ಸಾಮಗ್ರಿಗಳು) ಮುಖ್ಯವಾಗಿ, ಮರದ ಕೆತ್ತನೆಗಳೇ. ಹಲಸು, ಹೆಬ್ಬಲಸು, ಶ್ರೀಗಂಧ, ಕಾವಟಿ, ಕನ್ನಪ್ಪಟಿ, ಹೊನ್ನೆ, ಹೊಂಗಾರಕ, ಸಿರಿಹೊನ್ನೆ ಮೊದಲಾದ ಮರಗಳನ್ನು ಕೆತ್ತಿ ತಯಾರಿಸುತ್ತಿದ್ದುದು. ಈಗ, ಮಣಿಗಳನ್ನು ಪೋಣಿಸಿ ಮಾಡಿರುವ ಸರಕುಗಳು ಬಂದಿರುವುದ ರಿಂದ, ಪ್ರತ್ಯೇಕಿಸಿ ಹೇಳಲು ಈ ಶಬ್ದ.

ಮರ್ದಲೆ ಸರ: ಮದ್ದಲೆಯಾಕಾರದ ಕಡ್ಡಿ ಮಣಿಗಳ ಸರ.

ಮಲೆಯಾಳಿ ಮಂತ್ರವಾದಿ: ನೋಡಿ: **ಕಟ್ಟುಹಾಸ್ಯ, ಮಂತ್ರವಾದಿ.**

ಮಲೆಯಾಳಿ ಹಾಸ್ಯ (ತೆ.) : **ಮಂತ್ರವಾದಿ, ತೆಂಕ ಮಡಿವಾಳ, ಬೋಯಿಬ್ರಾಣ, ಬ್ಯಾರಿ** ಹಾಸ್ಯಗಳು.

ಮಲ್ಲಯುದ್ಧ: ಯುದ್ಧದ ಕುಣಿತಗಳಲ್ಲೊಂದು. ಏಕತಾಳದಲ್ಲಿರುವ ಕುಣಿತ. ಪಾತ್ರಗಳು, ಕೈಬೀಸಿ, ತೋಳು ತೊಡೆತಟ್ಟಿ ಒಂದನ್ನೊಂದು ಯುದ್ಧಕ್ಕೆ ಆಹ್ವಾನಿಸುವುದು, ತೋಳು ಮಡಚಿ, ಎತ್ತಿ, ಕುಳಿತು, ಎದ್ದು ಯುದ್ಧಕ್ಕೆ ಸಿದ್ಧತೆ ಮಾಡುವುದು, ಆಚೀಚೆ ಚಲನೆ ಕೊಟ್ಟು ಭುಜಗಳನ್ನು ತಾಗಿಸು ವುದು, ಮುಷ್ಟಿ ಗುದ್ದು ಕೊಡುವುದು– ಮೊದಲಾದ ಹಂತಗಳು ಇದರಲ್ಲಿರುತ್ತವೆ.

ಮಲ್ಲಿಗೆ ಚಿಟ್ಟಿ (ತೆ.) : ಚಿಕ್ಕ ನಾಜೂಕಾದ ಚಿಟ್ಟಿ ಮುಳ್ಳು. ನೋಡಿ: **ಚುಟ್ಟಿ.**

ಮಾತಾಡಿಸುವುದು: 1. ಭಾಗವತನು ಪಾತ್ರಗಳನ್ನು ಮಾತಾಡಿಸುವುದು. ಸ್ವಗತದ ಮಧ್ಯೆ ಪ್ರಶ್ನೆ ಕೇಳಿ, ಸಂಭಾಷಿಸುತ್ತ ಮಾತು ಬೆಳೆಸುವುದು.

2. ಪಾತ್ರಗಳು, ಹಾಸ್ಯಪಾತ್ರಗಳಿಗೆ ವಿಶಿಷ್ಟವಾದ ಪ್ರಶ್ನೆಗಳನ್ನು ಕೇಳಿ ನಿಶ್ಚಿತ ಹಾಸ್ಯ ಪ್ರತಿಕ್ರಿಯೆ ಬರುವಂತೆ ಮಾಡುವುದು.

ಮಾತು: ಪಾತ್ರಗಳ ಮಾತು. ನೋಡಿ: **ಅರ್ಥ. ಅರ್ಥಗಾರಿಕೆ.** ಕರಾವಳಿಯ ತಿಟ್ಟುಗಳಲ್ಲಿ ಇದು ಪಾತ್ರಧಾರಿಯೇ ರಚಿಸಿ ಆಡುವ ಆಶುಭಾಷಣ. **ಮೂಡಲಪಾಯ, ಗಟ್ಟದಕೋರೆ** ತಿಟ್ಟುಗಳಲ್ಲಿ ಬರೆದು ಕಂಠಪಾಠ ಮಾಡುವಂತಹದು. ಇದು ಪ್ರಸಂಗ ಪ್ರತಿಗಳಲ್ಲೆ ಇರುವುದುಂಟು. ಬೊಂಬೆ ಯಾಟದಲ್ಲಿ, ಪರದೆಯ ಹಿಂದೆ ಅರ್ಥಧಾರಿಗಳು ಕುಳಿತು ಮಾತು ಕೊಡುತ್ತಾರೆ.

ಮಾಧವರಾಯ: 1. ಪೂರ್ವರಂಗದ ಒಂದು ಪಾತ್ರ. ಷಣ್ಮುಖ, ಶಿವ, ಪಾರ್ವತಿ ಪಾತ್ರಗಳೊಂದಿಗೆ ಸಂಭಾಷಿಸುವ ಪಾತ್ರ.

2. ಕೃಷ್ಣನ ಒಡ್ಡೋಲಗದ ಹಾಸ್ಯಪಾತ್ರ. ಗೊಲ್ಲಮಾಧವ.

ಮಾಪಿಳ್ಳೆ: ಕಟ್ಟುಹಾಸ್ಯ. ಮಲೆಯಾಳಿ ಮುಸ್ಲಿಂ ಅಣಕ.

ಮಾಯಾ: 'ಘೋರ' ರಾಕ್ಷಸಿಯ ಮಾಯಾ ರೂಪ. ಉದಾ: ಮಾಯಾ ಶೂರ್ಪನಖಿ, ಮಾಯಾ ಪೂತನಿ, (ತದ್ಭಿನ್ನ: ಘೋರ ಶೂರ್ಪನಖಿ, ಘೋರ ಪೂತನಿ).

ಮಾರವಿ ಏಕತಾಳ: ಏಕತಾಳದ ಒಂದು ವಿಧಾನ. ಇಲ್ಲಿ ಮಾರವಿ ಎಂಬುದು ಒಂದು ರಾಗದ ಹೆಸರಾದರೂ, 'ಮಾರವಿ ಏಕ' ಎಂದರೆ, ವೀರರಸದ ಏಕತಾಳದ ಹಾಡುವಿಕೆಯ ಪ್ರಭೇದಕ್ಕೆ ಈ ಹೆಸರು ಬಿದ್ದಿದೆ. ಮಾರವಿ ಏಕತಾಳವೆಂಬುದು ಒಂದು ಪದ್ಯಬಂಧದ ಹೆಸರೂ ಆಗಿದೆ.

ಮಾರಿಮುಖ (ಬ.) : ಮಾರಿಯ ಮುಖವಾಡ. ಕಪ್ಪು – ಕೆಂಪು ಮುಖ, ಕೆನ್ನಾಲಗೆ, ಕೋರೆದಾಡೆಗಳ ಉಗ್ರಮುಖವಾಡ. ಭದ್ರಕಾಳಿ, ಚಂಡಿ ಪಾತ್ರ ಗಳಿಗೆ, ಭೂತೋಚ್ಚಾಟನೆ ದೃಶ್ಯ (ಹಾಸ್ಯ) ದ ಭೂತ ವೇಷಕ್ಕೆ ಬಳಕೆ.

ಮಾರುಮಾಲೆ (ಬ./ತೆ.): 1. ವೀರಕಸೆಯ ಬದಿಗಳಲ್ಲಿ ನೇತು ನಿಲ್ಲುವ ಸರದಂತಹ ಆಭರಣ. ಸಂಪಿಗೆ ಮೊಗ್ಗುಗಳಂತಹ ಮಣಿಗಳ ಸರ. (= **ಸಂಪಿಗೆ ಸರ**). (ಉ.) ನಾಲ್ಕುಸರಗಳು. ಇದು ಹಿಂದೆ ಪ್ರತ್ಯೇಕವಾಗಿ, ಹಗ್ಗಕ್ಕೆ ಜೋಡಿಸಿರುತ್ತಿತ್ತು. ಈಗ ವೀರಕಸೆಗೆ ಎಡ ಬಲಗಳಲ್ಲಿ ಜೋಡಿಸಿದ್ದು ಬಳಕೆಯಿದೆ.

(ಉ.) 2. ಮುಂಡಾಸಿನ ಹಗ್ಗ. ಮುಂಡಾಸಿನ ಅಟ್ಟೆಗಳನ್ನು ಬಿಗಿಯುವ ಹಗ್ಗ.

ಮಾಲೆ: ಸರ. ಹೂವಿನ, ಮಣಿಗಳ, ಕಾಯಿಗಳ ಸರ. ಮೋಹನ ಮಾಲೆ, ಪಂಚಮಾಲೆ, ಹೂವಿನ ಮಾಲೆ, ಮುತ್ತಿನ ಮಾಲೆ, ಪದಕ ಮಾಲೆ, ಮಿಸ್ರಿಮಾಲೆ ಇತ್ಯಾದಿ.

ಮಾವಿನ ಸೊಪ್ಪು: ಮಾವಿನ ಎಲೆಗಳು, ಎಲೆಗಳ ಗೊಂಚಲು. 1. ಕಿರಾತನವೇಷಕ್ಕೆ ಸೊಂಟಕ್ಕೆ, ಎದೆ ಪದಕದ ಬದಲಿಗೆ ಸೊಪ್ಪಿನ ಮಾಲೆ ಹಾಕುವರು.

2. ಕಪಿವೇಷಗಳ ಕೈಯಲ್ಲಿ ಮಾವಿನ ಸೊಪ್ಪಿನ ಕಂತೆ ಇರುತ್ತದೆ. ಮುಖ್ಯವಾಗಿ ಯುದ್ಧ ದೃಶ್ಯಗಳಲ್ಲಿ.

3. ಕೆಲವು ಕಪಿ ವೇಷಗಳಿಗೆ (ಮೈಂದ, ದ್ವಿವಿಧ, ಅಂಗದ) ಶಿರೋಭೂಷಣಕ್ಕೆ, ಕೇದಗೆಯ ಸ್ಥಾನದಲ್ಲಿ ಮಾವಿನಸೊಪ್ಪು ಸಿಕ್ಕಿಸುತ್ತಾರೆ.

4. ಶಿಕ್ಷೆ ಕೊಡುವ ದೃಶ್ಯಗಳಲ್ಲಿ, ಮಾವಿನ ಸೊಪ್ಪಿನ ಕಂತೆಯಿಂದ ಹೊಡೆಯುವುದಕ್ಕೆ ಬಳಕೆ. ಉದಾ: ಬಲರಾಮನು ಕೃಷ್ಣನಿಗೆ, ಕೃಷ್ಣನು ಮಕರಂದನಿಗೆ, ಮೈರಾವಣನು ದುರ್ದುಂಡಿಗೆ ಹೊಡೆಯುವ ದೃಶ್ಯ.

5. ಮಾವಿನ ಸೊಪ್ಪು ವೇಷ– ಕುಕ್ಕು ತಪ್ಪು– (ತುಳು). ಎಂದರೆ ಕೋಡಂಗಿ ಈ ವೇಷಕ್ಕೆ ತಲೆಗೂ, ಸೊಂಟಕ್ಕೂ ಮಾವಿನ ಎಲೆ ಸಿಕ್ಕಿಸುತ್ತಾರೆ.

– ಮಾವಿನ ಸೊಪ್ಪು ಸುಲಭವಾಗಿ ಹುಡಿಯಾಗುವುದಿಲ್ಲ. ಅದರಿಂದ ಹೊಡೆದರೆ ನೋವಾಗುವುದಿಲ್ಲ ಎಂಬುದರಿಂದ ಇದರ ಬಳಕೆ ಹೆಚ್ಚು.

ಮಿಶ್ರಮಾಲೆ: 1. ಮಿಸ್ರಿ ಎಂಬ ನಾಣ್ಯಗಳ ಸರ. ಅಡ್ಡಿಗೆ, 'ಮಿಸ್ರಿ' ಪ್ರಾಯಃ ಇಜಿಪ್ಶಿಯನ್ ಮೂಲದ ಪದ. ಚಿನ್ನದ ನಾಣ್ಯ, ಬಿಲ್ಲೆ ಎಂದು ಸಾಮಾನ್ಯಾರ್ಥ.

2. ಹಲವು ಬಗೆಯ ಮಣಿಗಳ ಮಿಶ್ರಣದ ಮಾಲೆ.

ಮೀನಾಕ್ಷಿ ಕಿರೀಟ (ಬ.): ಉರುಟಾಗಿದ್ದು, ತುದಿಯಲ್ಲಿ ಮುಗುಳಿ ಇರುವ ಒಂದು ಬಗೆಯ ಕಿರೀಟ. ತೆಂಕುತಿಟ್ಟಿನ ದೇವಿ ಕಿರೀಟದಂತಿದೆ. ಮೀನಾಕ್ಷಿ ಪಾತ್ರಕ್ಕೆ ಮೊದಲಾಗಿ ಬಳಕೆಗೆ ಬಂದುದರಿಂದ ಈ ಹೆಸರಾಗಿರಬೇಕು.

ಮೀಸೆ: ಮೀಸೆಯಲ್ಲಿ ಮೂರು ವಿಧ– ಕಟ್ಟುವ ಮೀಸೆ, ಹಚ್ಚುವ ಮೀಸೆ, ಬರೆಯುವ ಮೀಸೆ. ಈ ಪೈಕಿ ಕಟ್ಟುವ ಮೀಸೆ ಸಾಂಪ್ರದಾಯಿಕ, ಬರೆಯುವ ಮೀಸೆ ಸಾಂಪ್ರದಾಯಿಕವಾಗಿ ಕೋಡಂಗಿ ವೇಷಗಳಿಗೆ ಮತ್ತು ಹಾಸ್ಯಗಾರನಿಗೆ ಮಾತ್ರ ಇದ್ದುದು.

ಕಟ್ಟುವ ಮೀಸೆಯು ಮೂಗಿನ ಅಡಿಯಿಂದ ಕಿವಿಯವರೆಗೆ ಇರುತ್ತದೆ. ಇದರ ಹಗ್ಗವನ್ನು ತಲೆಯ ಹಿಂಬದಿಗೆ ಕಟ್ಟುವರು. ಇದಕ್ಕೆ ನಾರು ಹಗ್ಗಗಳು ಅಥವಾ ಉಣ್ಣೆದಾರಗಳು (ಉಲ್ಲನ್ ಮೀಸೆ) ಬಳಕೆ.

ಹಚ್ಚುವ ಮೀಸೆಯು, ಅರ್ವಾಚೀನ. ಕ್ರೇಪ್ ಹೇರ್ ಎಂಬುದನ್ನು ಬಿಡಿಸಿ, ಆಕಾರಕೊಟ್ಟು ಅಂಟಿನಿಂದ (ಸ್ಪಿರಿಟ್‌ಗಮ್‌ನಿಂದ) ಹಚ್ಚುವರು.

ಬರೆಯುವ ಮೀಸೆಯೆಂದರೆ ಕಪ್ಪು ಬಣ್ಣದಿಂದ ಬರೆಯುವಂತಹದು. ಕೋಡಂಗಿಗೆ ಬಿಳಿಮೀಸೆ ಬರೆಯುವುದಿದೆ.

ಇವುಗಳಲ್ಲದೆ ಹಾಸ್ಯಗಾರನಿಗೆ, ಮೂಗಿಗೆ ಸಿಕ್ಕಿಸುವ ಮೀಸೆಯೂ, ತೆಂಗಿನನಾರಿನ ಹಚ್ಚುವ ಮೀಸೆಯೂ ಬಳಕೆಯುಂಟು.

ವೃದ್ಧಪಾತ್ರಗಳಿಗೆ, ನರಸಿಂಹ ಮೊದಲಾದ ವೇಷಗಳಿಗೆ ಬಿಳಿ ಅಥವಾ ಕೆಂಚು ಮೀಸೆ. ಉಳಿದ ಪಾತ್ರಗಳಿಗೆ ಕಪ್ಪು ಮೀಸೆ. ಪುಂಡುವೇಷಗಳಿಗೆ ಮೀಸೆಯಿಲ್ಲ. ದೊಡ್ಡಪಗಡಿ (ಮುಂಡಾಸು) ವೇಷ, ಕಿರೀಟದ ವೇಷ, ಬಣ್ಣದ ವೇಷಗಳಿಗೆ ಮೀಸೆ ಅನಿವಾರ್ಯ. ಕಿರೀಟ ಇಟ್ಟು ಮೀಸೆ ಇಡದಿರುವ ವೇಷವೆಂದರೆ ಪೂರ್ವರಂಗದ ಷಣ್ಮುಖ ಸುಬ್ರಾಯ ವೇಷ ಮಾತ್ರ.


ಮುಂಡಾಸು (ಬ./ಉ.): 1. ಶಿರೋಭೂಷಣಗಳಲ್ಲೊಂದು. ದೊಡ್ಡಪಗಡಿ. ಹುಲ್ಲು ಮತ್ತು ಬಟ್ಟೆಗಳನ್ನು ಜೋಡಿಸಿ ಸುರುಳಿ ಮಾಡಿ ತಯಾರಿಸಿದ ಅಟ್ಟೆಗಳನ್ನು ಒಂದರ ಮೇಲೊಂದು ಜೋಡಿಸಿ, ಅದಕ್ಕೆ ಬಟ್ಟೆಮುಚ್ಚಿ, ಅದರ ಮೇಲೆ ಜರಿ ಮತ್ತು ಬಟ್ಟೆಯ ಲಾಡಿಗಳನ್ನು (**ಕೋರು, ಗೋಟುಗಳನ್ನು**) ಸುತ್ತಿ ಕಟ್ಟಿದಾಗ ಸುಮಾರಾಗಿ ಅಶ್ವತ್ಥ ಎಲೆ ಅಥವಾ ಕೆಸುವಿನೆಲೆಯ ಆಕಾರ ಬರುತ್ತದೆ.

ಇದರ ಮುಂಗಡೆ ಹಣೆಯ ಮೇಲೆ ಮುಂದಲೆ ಪಟ್ಟಿ ಮತ್ತು ಕೇದಗೆ ಎಂಬ ಆಭರಣಗಳು ನಿಲ್ಲುತ್ತವೆ. (ಕಪ್ಪು ಮುಂಡಾಸಿಗೆ ಕೇದಗೆಯಿಲ್ಲ) ಮುಂಡಾಸಿನ ತುದಿಗೆ ತುರಾಯಿ ಎಂಬ ಚಿಕ್ಕ ಆಭರಣ, ಅದರ ಕೆಳಗೆ ದಂಡೆ, ಚೆಂಡು ಸುತ್ತುಗಳು ಬರುತ್ತವೆ. ಈಗ ದಂಡೆ, ಚೆಂಡು, ಸುತ್ತುಗಳೆಲ್ಲ ಒಂದೇ ರಚನೆಯಾಗಿವೆ. ಮುಂಡಾಸಿನ ಮಧ್ಯಕ್ಕೆ ತಾವರೆ (ಕಮಲ, ಹೂವು, ಕುಚ್ಚು) ಎಂಬ ಬಿಲ್ಲೆಯನ್ನೂ, ಬದಿಗಳಿಗೆ ಕೆಂಚುಗಳೆಂಬ ಎರಡು ಬಿಳಿ ಉಂಡೆಗಳನ್ನೂ ಕಟ್ಟುತ್ತಾರೆ. ಹಿಂಬದಿಯಲ್ಲಿ ಮುಡಿಯ ಮೇಲೆ ಮುಡಿ ಕೇದಗೆಯಿರುತ್ತದೆ. ಅದರ ಕೆಳಗೆ ಪಾಕಿನ ವಸ್ತ್ರ ಅಥವಾ ಶಲ್ಲೆ ನೇತಾಡುತ್ತದೆ.

ಉ. ಕನ್ನಡದಲ್ಲಿ ಮುಂಡಾಸಿನ ತುದಿಗೆ ತುರಾಯಿ, ಸುತ್ತುಗಳಿರಲಿಲ್ಲ. ಅದರ ಬದಲು

ಬಣ್ಣದ ವೇಷ ಕೆಲವು ವಿಧಗಳು

(ತೆಂಕು)



ಉರುಟಾದ ಬೆಂಡಿನ ದಂಡೆಯಿತ್ತು. ಮುಂಡಾಸಿನ ಅಂಚಿಗೆ ಅಬ್ಬಲಿಗೆ ಹೂವಿನ ಮಾಲೆಯನ್ನು ಕಟ್ಟುತ್ತಿದ್ದರು.

ಮುಂಡಾಸುಗಳಲ್ಲಿ **ಕಪ್ಪು ಮುಂಡಾಸು, ಕೆಂಪು ಮುಂಡಾಸು** ಎಂದು ಎರಡು ವಿಧ. ಕಪ್ಪು ಬಟ್ಟೆ ಮುಚ್ಚಿದರೆ ಕಪ್ಪು ಮುಂಡಾಸು, ಕೆಂಪು ಮುಚ್ಚಿದರೆ ಕೆಂಪು ಮುಂಡಾಸು. ಕರ್ಣನದು ಕಪ್ಪು ಮುಂಡಾಸು ವೇಷ. ಗಂಧರ್ವ, ಕೀಚಕ ಇವು ಕೆಂಪು ಮುಂಡಾಸು ವೇಷಗಳು. ಕಿರಾತನಿಗೆ ಕೆಂಪು ಓರೆ ಮುಂಡಾಸು. ಕಿರಾತ, ಗಂಧರ್ವರ ಮುಂಡಾಸುಗಳಿಗೆ ಮುಡಿ ಕೇದಗೆಯ ಸ್ಥಾನದಲ್ಲಿ ಕೆಂಚಣಿಲ ಬಾಲವನ್ನು ಕಟ್ಟುವುದು ಕ್ರಮ.

2. ಮುಂಡಾಸು ವೇಷದವನು. ನೋಡಿ: **ಮುಂಡಾಸಿನವ.**

3. ಉರುಟು ಮುಂಡಾಸು ರುಮಾಲು. ಮಂತ್ರಿ, ಪುರೋಹಿತ ಪಾತ್ರಗಳ ಸಾದಾ ಮುಂಡಾಸು.

4. ಭಾಗವತರು, ಹಿಮ್ಮೇಳದವರು ಕಟ್ಟುವ ಮುಂಡಾಸು, ಪೇಟಾ.

ಮುಂಡಾಸಿನವ(ರು) (ಬ.) : ಮುಂಡಾಸು ವೇಷದವರೆಂಬ ಇಬ್ಬರು ಕಲಾವಿದರು. ಇದು ಸ್ಥಾನ ನಿರ್ದೇಶಕ ಪದ. ಇವರಿಗೆ **ಸಾಲಿನ ವೇಷದವರು** ಎಂದೂ ಹೆಸರಿದೆ.

ಮುಂದಲೆ: ಮುಂದಲೆ ಪಟ್ಟಿ ಎಂಬ ಆಭರಣ. ಚಿಕ್ಕ ಉರುಟು ಬಿಲ್ಲೆಗಳ ಪಟ್ಟಿಯಂತಿದ್ದು, ಹಣೆಯ ಮೇಲ್ಭಾಗದಲ್ಲಿ ಕಿವಿಯಿಂದ ಕಿವಿಯವರೆಗೆ ಕಟ್ಟುತ್ತಾರೆ. ಸ್ತ್ರೀವೇಷಗಳಿಗಾದರೆ, ಮಧ್ಯದಲ್ಲಿ ಹಣೆಯ ಮೇಲೆ ನಿಲ್ಲುವಂತೆ **ಮುಂದಲೆ ಬೊಟ್ಟು** ಎಂಬ ಪದಕವೂ, ಅದಕ್ಕೆ ನೇರವಾಗಿ ಹಿಂದೆ ಬೈತಲೆ ಸರವೂ ಇರುತ್ತವೆ.

ಮುಂದಲೆಪಟ್ಟಿ (ಉ.) : ಮುಂದಲೆ. ಹಿಂದೆ ಇದು ತಯಾರಿಯಲ್ಲ, ಬಗ್ಗಿದ, ಕಮಾನಿನಂತಹ ರಚನೆಯಾಗಿತ್ತು. ಈಗಿನಂತೆ ನೇರ ಪಟ್ಟಿಯಂತಿರಲಿಲ್ಲ.

ಮುಂದಲೆ ಬೊಟ್ಟು = ನೋಡಿ: ಮುಂದಲೆ.

ಮುಂದಲೆ ವಸ್ತ್ರ : ಮುಂದಲೆಯನ್ನು ಬಿಗಿಯುವುದಕ್ಕೆ ಆಧಾರವಾಗಿರುವ ಬಟ್ಟೆ. ಇದನ್ನೆ ಮತ್ತೆ ಮುಂಡಾಸು ಸುತ್ತಲು ಬಳಸುವರು. ಉ.ಕ.ದಲ್ಲಿ ಇವೆರಡು ಬೇರೆ ಬೇರೆ.

ಮುಂದಲೆ ಹಗ್ಗ : ಮುಂದಲೆ ಪಟ್ಟಿಯ ಎರಡು ಕಡೆಗೂ, ಮಧ್ಯದಿಂದ ಹಿಂದಕ್ಕೂ ಇರುವ ಹಗ್ಗ. ಕೆಳಗಿನ ಹಗ್ಗಗಳನ್ನು ಕಿವಿಯ ಕೆಳಗಿಂದ ತಲೆಯ ಹಿಂಬದಿಗೆ, ಮತ್ತು ನಡುವಿನ ಹಗ್ಗವನ್ನು ನೆತ್ತಿಯ ಮೇಲೆ ಬಿಗಿಯುವುದು.

ಮುಂದಲೆ ಹರಕು = ನೋಡಿ: **ಮುಂದಲೆ ವಸ್ತ್ರ.**

ಮುಕುಟ : 1. ಕಿರೀಟ. 2. ಕಿರೀಟಗಳ ತುದಿಯ ಭಾಗ. ಮುಗುಳಿ.

ಮುಕ್ತಾಯ : ಪದ್ಯದ ಮೊದಲ ಚರಣದ ಕೊನೆಗೆ, ಮತ್ತು ಪದ್ಯದ ಕೊನೆಗೆ ಬಾರಿಸುವ, ನಿಶ್ಚಿತ ಸಂಖ್ಯೆಯ ಆವರ್ತನವುಳ್ಳ ತಾಳದ ಮುಗಿತಾಯ. ವಿಶಿಷ್ಟ ಕ್ರಮದ ಮುಗಿಸುವ ಪೆಟ್ಟುಗಳು.

ಮುಖದ ಕೆಲಸ : 1. ಮುಖದ ಬಣ್ಣಗಾರಿಕೆ. 2. ಮುಖದ ಅಭಿನಯ.

ಮುಖವರ್ಣಿಕೆ : ಮುಖಕ್ಕೆ ಹಚ್ಚುವ ಮೂಲಲೇಪನ ಮತ್ತು ಅದರ ಮೇಲೆ ಬರೆಯುವ ವಿವಿಧ ವಿನ್ಯಾಸಗಳು. ಪ್ರಧಾನವಾಗಿ ಮೂಲಲೇಪನವು, ಬಿಳಿ ಕೆಂಪು ಮಿಶ್ರಣದ ಗೌರವರ್ಣ. ಕೆಲವು ವೇಷಗಳಿಗೆ ಪಚ್ಚೆ ಬಣ್ಣವನ್ನು ಬಳಿಯುತ್ತಾರೆ. ಬಣ್ಣದ ವೇಷಗಳಿಗೆ ಮೂಲಲೇಪನವಿಲ್ಲ. ಮಸಿಯ ಗೆರೆಗಳನ್ನು ಬರೆದು, ಅದರ ಮೇಲೆ ಚಿಟ್ಟಿಗಳನ್ನಿಟ್ಟು, ನಡುವಿನ ಸ್ಥಳದಲ್ಲಿ ಬಣ್ಣ ತುಂಬಿಸುವರು.

ನಾಮ, ಗೆರೆ, ಮುದ್ರೆ, ಮುತ್ತರಿ, ಹುಬ್ಬು, ಚಿಟ್ಟಿ, ತುಟಿ, ಗಡ್ಡ – ಇವು ಮುಖವರ್ಣಿಕೆಯ ವಿವಿಧ ಅಂಶಗಳು. ಪುಂಡುವೇಷಗಳಿಗೆ ಗಡ್ಡವನ್ನು ಬರೆಯುವುದಿಲ್ಲ. ನಾಮಗಳಲ್ಲಿ ಅಡ್ಡನಾಮ, ಉದ್ದನಾಮಗಳೆಂಬ ಎರಡು ಬಗೆ. ಮುದ್ರೆಗಳು, ಕೆನ್ನೆಯ ಮೇಲ್ಬದಿಯಲ್ಲಿ, ಕಣ್ಣಿನ ಕೆಳಗಡೆ. ಗೆರೆಗಳು ನಾಮದಲ್ಲಿ ಮತ್ತು ಕಣ್ಣಿನ ಕೆಳಗಿನಿಂದ. ಮುತ್ತರಿ ಎಂದರೆ ಚುಕ್ಕಿಗಳ ಸಾಲು. ಗಡ್ಡವನ್ನು ಎಣ್ಣೆಮಸಿಯಲ್ಲಿ ಗೆರೆಯಂತೆ ಬರೆದು, ಅದಕ್ಕೆ ಕೆಂಪು ಜೀವರೇಖೆ ಕೊಡುವರು. ಮುಖವರ್ಣಿಕೆಗಳು ಪಾತ್ರಾನುಗುಣವಾಗಿರುತ್ತವೆ. ಇವುಗಳು ವೈಷ್ಣವ ಸಂಪ್ರದಾಯದ ಪ್ರಭಾವದ ಸೃಷ್ಟಿಗಳಾಗಿವೆ. **ತೆಂಕುತಿಟ್ಟಿನ** ಮುಖವರ್ಣಿಕೆಗಳಲ್ಲಿ ಪ್ರಖರತೆ, ಮತ್ತು ವೈವಿಧ್ಯ ಹೆಚ್ಚು.

ಮುಖವಾಡ : ವಿವಿಧ ಮುಖವಾಡಗಳು. ಅಮುಖ್ಯಪಾತ್ರಗಳಿಗೆ ಮಾತ್ರ ಮುಖವಾಡ ಬಳಸುವರು. ನಂದಿ, ಸಿಂಹ, ಗರುಡ, ಗಣಪತಿ, ಮಾರಿ, ದೇವಿ, ವಿಕಾರ ರಕ್ಕಸ ಮೊದಲಾದ ಮುಖವಾಡಗಳು ಬಳಕೆಯಿವೆ.

ಮುಖವಾಡದ ಪೆಟ್ಟಿಗೆ (ಉ.) : ಮುಖವಾಡ ಮತ್ತು ಕಿರೀಟಗಳನ್ನಿಡುವ ಪೆಟ್ಟಿಗೆ.

ಮುಖವೀಣೆ (ಮೂ.) : ಒಂದು ಹಿಮ್ಮೇಳವಾದ್ಯ. ಚಿಕ್ಕ ನಾಗಸ್ವರದಂತಿದೆ. ವಿಶೇಷತಃ ಏರುಪದ್ಯಗಳಿಗೆ ಬಳಕೆ.

ಮುಖ್ಯ ಸ್ತ್ರೀವೇಷ: 1. ಕಥೆಯ ಮುಖ್ಯ ಸ್ತ್ರೀಪಾತ್ರ. 2. ಸಭಾಲಕ್ಷಣದಲ್ಲಿ ಬರುವ ಮುಖ್ಯ ಸ್ತ್ರೀಪಾತ್ರ. **ತೆಂಕುತಿಟ್ಟಿ**ನಲ್ಲಿ ಇದರೊಂದಿಗೆ ಹಾಸ್ಯಗಾರನೂ ಇರುತ್ತಾನೆ.

ಮುಗುಳಿ: ದೇವಾಲಯಗಳ ಮೇಲೆ ಇರುವಂತಹ ರೀತಿಯ ಕಲಾಕೃತಿ. ಮೇಲೆ ಚೂಪಾದ ತುದಿ, ಕೆಳಗೆ ಉರುಟಾದ ಗುಮ್ಮಟ, ಮಧ್ಯೆ ಏರುತಗ್ಗುಗಳುಳ್ಳ ಶಿಖರ. **ಹನುಮಂತನ ಕಿರೀಟ, ದೇವಿ ಕಿರೀಟ**, ಬಣ್ಣದ ವೇಷದ ಬುರುಡೆಗಳಲ್ಲಿ ಈ ಆಕೃತಿ ಇದೆ. **ಜಡೆ ಬಂಗಾರದ ಚೂಡಾಮಣಿ** ಸಹ ಇದೇ ರೀತಿಯ ರಚನೆ.

ಮುಚ್ಚಿಗೆ: ಚೆಂಡೆ, ಮದ್ದಲೆಗಳ ಚರ್ಮ; ವಾದ್ಯದ ಮುಚ್ಚಿಗೆ. ನೋಡಿ: **ಚೆಂಡೆ ಮುಚ್ಚಿಗೆ, ಮದ್ದಲೆ ಮುಚ್ಚಿಗೆ, ಚರ್ಮ.**

ಮುಚ್ಚಿಗೆ ಚರ್ಮ: ಚೆಂಡೆ, ಮದ್ದಲೆಗಳ ಎಡಬಲಗಳಿಗೆ ಬಳಸುವ ಚರ್ಮ. ದನದ, ದನದ ಕರುವಿನ, ಆಡಿನ ಚರ್ಮ ಬಳಕೆ. ನೋಡಿ : **ಚರ್ಮ.**

ಉ. **ಮುಚ್ಚುವ ಬಟ್ಟೆ**: ಮುಂಡಾಸು, ಪಗಡಿಗಳ ಅಟ್ಟೆಗಳನ್ನು ಮುಚ್ಚುವ ಬಟ್ಟೆ. ಕಪ್ಪು ಅಥವಾ ಕೆಂಪು ಬಣ್ಣದ ಅರಿವೆ.

ಮುಡಿ: 1. ಸ್ತ್ರೀವೇಷದ ಮುಡಿ.

2. ಬ. ಉ. ಕಿರೀಟಕ್ಕೆ ಆಧಾರವಾಗಿ ಕಟ್ಟುವ ಬಟ್ಟೆಯ ಮುಡಿ.

3. ಬ. ಉ. ಕೇದಗೆ ಮುಂದಲೆ, ಮುಂಡಾಸುಗಳ ಹಿಂಬದಿಯಲ್ಲಿ ಸುತ್ತುವ ಮುಡಿ. ಅದಕ್ಕೆ ಮುಡಿ ಕೇದಗೆ ಕಟ್ಟುವರು.

4. ಋಷಿಮುಡಿ, ಋಷಿಜುಟ್ಟು.

5. ಈಶ್ವರನ ಮುಡಿ– ಗಂಗೆ, ಚಂದ್ರಕಲೆ ಸಹಿತ.

ಮುಡಿ (ತೆ.): ಕಿರೀಟದ ಒಂದು ಬಗೆ. ಉದಾ: **ಭೀಮನ ಮುಡಿ, ಸಿರಿಮುಡಿ.**

ಮುಡಿಕೇದಗೆ (ಬ.): ಮುಂಡಾಸು, ಕೇದಗೆ ಮುಂದಲೆಗಳ ಹಿಂಬದಿಯಲ್ಲಿ ಮುಡಿಯನ್ನು ಮುಚ್ಚಿ ನಿಲ್ಲುವ ಆಭರಣ. ಕೈಕಟ್ಟಿನ ಚಿಕ್ಕ ರೂಪದಂತಿದ್ದು, ಸುಮಾರು ಅರ್ಧವಜ್ರಾಕೃತಿಯಲ್ಲಿರುತ್ತದೆ.

ಮುಡಿವಸ್ತ್ರ: ಮೇಲೆ ಹೇಳಿದ **ಮುಡಿ** 2, 3–ನ್ನು ಕಟ್ಟಿಕೊಳ್ಳಲು ಬಳಸುವ ಕಪ್ಪು ಬಟ್ಟೆಗಳು.

ಮುತ್ತರಿ/ಮುತ್ತೇರಿ (ತೆ.): ಮುಖವರ್ಣಿಕೆಯ ಒಂದು ಅಂಶ. ಚುಕ್ಕಿ. ಬಣ್ಣದ ಚುಕ್ಕಿಗಳ ಸಾಲು ಅಥವಾ ಚುಕ್ಕಿಗಳನ್ನಿಟ್ಟು ರಚಿಸುವ ಆಕಾರಗಳು. ಸ್ತ್ರೀವೇಷದ ಹುಬ್ಬಿನ ಮೇಲಿಂದ ಮುತ್ತರಿ ಸಾಲು ಇಡುವರು. ಪುರುಷ ವೇಷಗಳಿಗೆ ನಾಮಗಳಲ್ಲಿ, ಕೆನ್ನೆಯ ಮೇಲಿನ ಮುದ್ರೆಗಳಿಗೆ, ಕಣ್ಣಿನ ಕೆಳಗಿನ ಸಾಲಿಗೆ ಮುತ್ತರಿ ಇಡುತ್ತಾರೆ.

ಮುತ್ತೇರಿ = ನೋಡಿ: **ಮುತ್ತರಿ.**

ಮುದದಿಂದ: ರಂಗಸ್ಥಳದಲ್ಲಿ ಹಾಡುವ ಮೊದಲ ಪದ್ಯ. ಸ್ತುತಿಪದ್ಯ. ''ಮುದದಿಂದ ನಿನ್ನ ಕೊಂಡಾಡುವೆನು ಅನವರತ।...'' ಎಂಬ ಪದ್ಯದ ಮೊದಲ ಪದ.

ವಾಗ್ರೂಢಿಯಲ್ಲಿ ಆರಂಭ, ಮೊದಲಿನಿಂದ– ಎಂದು ಅರ್ಥ.

ಉದಾ: ''ಮುಗಿಯಲಿಕ್ಕೆ ಬರುವಾಗ, ಇವನ ಮುದದಿಂದ ಶುರುವಾಯಿತಲ್ಲ''.

ಮುದಿಯಪ್ಪಣ್ಣ: ಕಿರಾತಪಡೆಯ ಮುಖ್ಯಸ್ಥ, ಹಾಸ್ಯವೇಷ. ಬೇಟೆಯ ದೃಶ್ಯಗಳಲ್ಲಿ ರಾಜನ ಸಖ ಮತ್ತು ಸೇವಕ ಬೇಟೆಗಾರ.

ಮುದ್ರೆ: 1. ಮುಖವರ್ಣಿಕೆಯ ಅಂಗ. ಚಕ್ರಮುದ್ರೆ, ಶಂಖ ಮುದ್ರೆ, ಉರುಟು ಗೆರೆಗಳ ಮುದ್ರೆ, ಚುಕ್ಕಿಗಳ ಹೂವಿನಂತಹ ಮುದ್ರೆ, ಮೊದಲಾದ ಮುದ್ರೆಗಳು.

2. ಉ. ವೇಷಧಾರಿಯು, ಪದ್ಯದ ಸಾಹಿತ್ಯಕ್ಕೆ ಸರಿಯಾಗಿ ತೋರಿಸುವ ಹಸ್ತಮುದ್ರೆಗಳು.

ಮುಮ್ಮೇಳ: 1. ರಂಗದಲ್ಲಿರುವ ಪಾತ್ರಗಳು– (ಭಾಗವತನೂ ವಾದ್ಯಗಾರರೂ ಹಿಮ್ಮೇಳ)

2. ಗ. ಮೂ. ಭಾಗವತನು ಮುಮ್ಮೇಳ (ಅವನ ಹಿಂದಿನ ಹಾಡುಗಾರರೂ, ವಾದ್ಯಗಳೂ, ಹಿಮ್ಮೇಳ).

ಮುರ್ಗಿಸರ (ಬ.): ಮುರಿಗೆ ಸರ. ದೊಡ್ಡ ಮುಂಡಾಸಿನ ತುದಿಯಿಂದ, ಕರ್ಣಪಾತ್ರಗಳ ಮೇಲಿಂದ, ಕಿವಿಯ ಹಿಂಬದಿಗೆ ಕಟ್ಟುವ ಎರಡು ಸರಗಳು. ಜರಿ, ಮಣಿಗಳ ಎಳೆಗಳ ಸರ. ಇದು ಮುಂಡಾಸಿಗೂ, ಕರ್ಣಪಾತ್ರಕ್ಕೂ ಆಧಾರ ಕೊಡುತ್ತದೆ.

– ಎರಡು ಅಥವಾ ಮೂರು ಎಳೆಗಳನ್ನು ಹೆಣೆದು ಹುರಿಮಾಡಿ ತಯಾರಿಸುವ ಸರವಾದುದರಿಂದ– ಮುರಿಗೆ (ತಿರುಚಿದ, **twisted**) ಸರ ಎಂಬ ಹೆಸರಿರಬೇಕು.

ಮುರ್ವಲ್ಲೆ (ತೆ.): ಮುರು + ಹಲ್ಲೆ ಅಥವಾ ಮುರು+ ಓಲೆ– ?

ಕಿವಿಯ ಆಭರಣ. ಹಲ್ಲೆ ಮತ್ತು ಓಲೆ.

ಮುಸ್ತೈದೆ (ಬ.): ಮುಸ್ತೈದ್ (ಹಿಂದಿ) = ಶಿಸ್ತು, ವ್ಯವಸ್ಥೆ. ಮೇಳದ ಸಾಮಗ್ರಿ, ಮುಖ್ಯವಾಗಿ

ವೇಷಭೂಷಣ ಸಾಮಗ್ರಿಗಳು. ಜವುಳಿ, ಕಿರೀಟಗಳು, ಆಭರಣಗಳು, ಪೆಟ್ಟಿಗೆಗಳು ಸೇರಿ ಮುಸ್ತೈದೆ.

ಮುಳ್ಳು: 1. ಕಾವಂಟೆ ಮರದ ಮೈಮೇಲೆ ಬೆಳೆಯುವ ಮುಳ್ಳಿನಾಕೃತಿ. ಭುಜಕೀರ್ತಿಗೆ ಜೋಡಿಸುವರು.
2. ಮರವನ್ನು ಕೊರೆದು ಮಾಡಿದ ಮುಳ್ಳಿನ ಆಕಾರ.
3. ನೋಡಿ: ಭುಜಮುಳ್ಳು.

ಮೂಗಿನ ಉಂಡೆ: ಬಣ್ಣದವೇಷಗಳು ಮೂಗಿನ ತುದಿಗೆ ಅಂಟಿಸುವ ಹತ್ತಿಯ ಉಂಡೆ.

ಮೂಗುತಿ: ನಾಸಾಭರಣ. ಮೂಗುಬೊಟ್ಟು.

ಮೂಗುಬೊಟ್ಟು: ಮೂಗುತಿ. ನಿಜವಾದ ಮೂಗುಬೊಟ್ಟು ಅಥವಾ ಬೇಗಡೆಯ ತುಂಡನ್ನು ಮೂಗಿಗೆ ಅಂಟಿಸುವುದು.

ಮೂಡಲಕೋರೆ: ಮೂಡಲಪಾಯದ ಹಳೆಯ ಒಂದು ಹೆಸರು.

ಮೂಡಲಪಾಯ/ಮೂಡ್ಲಪಾಯ/ ಮೂಡ್ಲುಪಾಯ: ಕರ್ನಾಟಕದ ಬಯಲಾಟ ಪ್ರಭೇದಗಳಲ್ಲೊಂದು. ಕರ್ನಾಟಕದ ಪ್ರಸ್ಥಭೂಮಿಯ ದಕ್ಷಿಣೋತ್ತರ ಪ್ರದೇಶಗಳೆರಡರಲ್ಲೂ, ಬಹುಭಾಗದಲ್ಲಿ ವ್ಯಾಪಿಸಿದೆ. ಕರಾವಳಿಯಲ್ಲಿ ಇಲ್ಲ. ಉ. ಕರ್ನಾಟಕದ ಕೆಲವು ಕಡೆ ಇದಕ್ಕೆ ದೊಡ್ಡಾಟವೆಂಬ ಹೆಸರಿದೆ. ಉ. ಕರ್ನಾಟಕದ ದೊಡ್ಡಾಟಗಳು, ಪ್ರಾದೇಶಿಕ ಭಿನ್ನತೆ ಹೊಂದಿದ್ದರೂ, ಅವು ಮೂಡಲಪಾಯದ ಪ್ರಭೇದವೇ ಆಗಿವೆ. ಮೂಡಲಪಾಯ ಎಂದರೆ ಪೂರ್ವದಿಕ್ಕಿನ ಪದ್ಧತಿ. ಪಾಯವೆಂದರೆ ಸ್ಥೂಲವಾಗಿ ತಿಟ್ಟು, ಸಂಪ್ರದಾಯ ಎಂದು ಅರ್ಥ. ಇದರ ಆಧಾರದಲ್ಲಿ ಕರಾವಳಿಯ ತಿಟ್ಟುಗಳನ್ನೆಲ್ಲ ಒಟ್ಟಾಗಿ ಪಡುವಲಪಾಯ ಎಂದು ಹೇಳುವುದುಂಟು. ಆದರೆ ಇದು, ಅಧ್ಯಯನ ಸೌಕರ್ಯಕ್ಕಾಗಿ, ವಿದ್ವಾಂಸರು ಪ್ರಾಯಃ 1950ರ ಅನಂತರ ಬಳಕೆಗೆ ತಂದ ಪದ.

ಮೂಡಲ ಎಂದರೆ ಪೂರ್ವದಿಕ್ಕಿನ ಎಂದು ಅರ್ಥ. ಕರ್ನಾಟಕದ ಪೀಠಭೂಮಿಗೆ ಮೂಡು ದಿಕ್ಕಿನಲ್ಲಿರುವ ಆಂಧ್ರದ ಬಯಲಾಟ ಪರಂಪರೆಯ ವಿಸ್ತರಣೆಯು ನಮ್ಮ ಮೂಡಲಪಾಯವೆಂಬುದನ್ನು ಈ ಪದವು ಸ್ಪಷ್ಟಪಡಿಸುತ್ತದೆ. ಇದರ ವೇಷ ವಿಧಾನಕ್ಕೂ, ಆಂಧ್ರದ ಬಯಲಾಟಗಳಿಗೂ, ಕೆಲವು ವಿಷಯಗಳಲ್ಲಿ ತೆರುಕ್ಕೂತ್ತಿನ ಕ್ರಮಗಳಿಗೂ, ಸಾಮ್ಯವಿದೆ. ಬಹುಶಃ ವಿಜಯನಗರ ಕಾಲದಲ್ಲಿ ಇದು ಪ್ರಸರಣಗೊಂಡಿರಬಹುದು.

ಮೂಡಲಪಾಯದ ಪ್ರಸಂಗ ಎಂದರೆ ಕಾವ್ಯಗಳಲ್ಲಿ ಉತ್ತರ ಮತ್ತು ದಕ್ಷಿಣ ಕರ್ನಾಟಕದ ಕವಿಗಳ ರಚನೆಗಳಿವೆ. ಕರಾವಳಿಯ ಕವಿಗಳ ಯಕ್ಷಗಾನ ರಚನೆಗಳೂ ಇವೆ. ಹಲವು ಕೃತಿಕಾರರು 'ಯಕ್ಷಗಾನವನ್ನು ರಚಿಸುತ್ತೇನೆ' ಎಂದು ಹೇಳಿಕೊಂಡಿದ್ದಾರೆ. ಕಾವ್ಯಗಳಲ್ಲಿ ಶಿಷ್ಟ ಮಾದರಿಯ ಗಟ್ಟಿ ಚೌಕಟ್ಟಿನ ರಚನೆಗಳೂ, ಮೌಖಿಕ ಸಂಪ್ರದಾಯದ ಹೋಲಿಕೆಯ ಸಡಿಲ ರಚನೆಗಳೂ ಇವೆ. ಪ್ರಸಂಗಕೃತಿಗಳಲ್ಲಿ, ಪಾತ್ರಗಳ ಮಾತುಗಳೂ ಲಿಖಿತವಾಗಿಯೇ ಇರುತ್ತವಾದರೂ, ಈ ಮಾತುಗಳ ಲೇಖಕನು, ಪ್ರಸಂಗದ ಕವಿಯೇ ಆಗಿರಬೇಕೆಂದಿಲ್ಲ.

ಮೂಡಲಪಾಯದ ಹಿಮ್ಮೇಳದಲ್ಲಿ, ಮುಖ್ಯ ಭಾಗವತ, ಅವನ ಹಿಂದೆ ನಾಲ್ಕಾರು ಮೇಳ ಗಾಯಕರು, ಮದ್ದಲೆಗಾರ ಮತ್ತು ಗಾಯಕರ ತಾಳ, ಇರುತ್ತವೆ. ಕೆಲವು ಕಡೆ ಹಾರ್ಮೋನಿಯಂ ಇದೆ. ಮುಖವೀಣೆ ಎಂಬ ವಾದ್ಯವಿದೆ. ಇದು ಹೆಚ್ಚಾಗಿ ವೀರ, ರೌದ್ರ ರಸಗಳ ಸಂದರ್ಭಗಳಲ್ಲಿ ಬಾರಿಸುವಂತಹದು.

ಪೂರ್ವರಂಗದಲ್ಲಿ ಗಣೇಶ ಸ್ತುತಿ, ಬಾಲಗೋಪಾಲ ನೃತ್ಯ, ಸೂತ್ರಧಾರ–ನಟ ಸಂಭಾಷಣೆಗಳಿರುತ್ತವೆ. ಸಾರಥಿ ಅಥವಾ ದೂತನೆಂಬ ಹಾಸ್ಯಗಾರನು, ಹೆಚ್ಚು ಕಡಮೆ ಇಡಿಯ ರಾತ್ರಿ ರಂಗದಲ್ಲಿದ್ದು ದೂತನಾಗಿ, ನಿರ್ದೇಶಕನ ಒಂದು ಅಂಶವಾಗಿ, ಪಾತ್ರಗಳ ಮನಸ್ಸಾಗಿ, ಪ್ರೇಕ್ಷಕರ ಪ್ರತಿನಿಧಿಯಾಗಿ ವಿವಿಧ ಸ್ತರಗಳಲ್ಲಿ ಸ್ಪಂದಿಸುತ್ತಾನೆ. ಈತನಿಗೆ 'ಹನುಮನಾಯಕ' ನೆಂದೂ ಕೋಡಂಗಿಯೆಂದೂ ನಾಮಾಂತರಗಳಿವೆ.

ಮೂಡಲಪಾಯದ ಸಂಗೀತವು ಮುಖ್ಯವಾಗಿ ದಕ್ಷಿಣಾದಿ ಸಂಗೀತದ ಪ್ರಭೇದವೇ. ಇದರೊಳಗೆ 'ಮೂಡಲಪಾಯ' 'ಯಕ್ಷಗಾನ' ಎಂಬ ಪ್ರಭೇದಗಳನ್ನು ಗುರುತಿಸಲಾಗುತ್ತದೆ. ಮೂಡು ದಿಕ್ಕಿಗೆ ಸರಿದಂತೆ ಮೂಡಲಪಾಯ ಗಾನ ಶೈಲಿಯೂ, ಪಡುದಿಕ್ಕಿನಲ್ಲಿ ಯಕ್ಷಗಾನ ಶೈಲಿಯೂ ಮುಖ್ಯವಾಗಿ ಕಾಣುತ್ತವೆ. ಉತ್ತರ ಕರ್ನಾಟಕದಲ್ಲಿ ಉತ್ತರಾದಿ (ಹಿಂದುಸ್ತಾನಿ) ಸಂಗೀತದ ಪ್ರಭಾವವು ಕಾಣುತ್ತಿದ್ದರೂ ಮೂಲ ಶೈಲಿ ಮರೆಯಾಗಿಲ್ಲ.

ಮೂಡಲಪಾಯದ ವೇಷಭೂಷಣಗಳಲ್ಲಿ ದೊಡ್ಡಗಾತ್ರದ ಕಿರೀಟ, ಭುಜಕೀರಿಟಗಳಿದ್ದು, ಎದೆಪದಕ, ಸೊಂಟದ ಪಟ್ಟಿ ಕೈಕಟ್ಟುಗಳನ್ನು ಬಿಗಿಯುತ್ತಾರೆ. ಸೊಂಟದ ಕೆಳಗೆ ವೇಷಗಳು, ಮೇಲಿನ ಆಕಾರಕ್ಕೆ ಸಪ್ರಮಾಣವಾಗಿಲ್ಲ. ಕುಣಿತವು ಸರಳವಾಗಿದೆ.

ಹಲವು ಕಥೆಗಳು ಭಾರತ, ರಾಮಾಯಣಾದಿಗಳಿಂದಲೂ ಭಾಗವತ, ಶಿವಲೀಲಾದಿ ಪುರಾಣ

ಗಳಿಂದಲೂ ಆರಿಸಿದಂತಹವು. ಜೊತೆಗೆ ಕರಿಬಂಟ, ಕುಮಾರ ರಾಮ, ಚಂದ್ರಗುಪ್ತ ಮೊದಲಾದ ಐತಿಹಾಸಿಕ ಕತೆಗಳೂ ಶಿವಶರಣರ ಕಥೆಗಳೂ ಇವೆ.

ಮೂಡಲಪಾಯವು ಪ್ರಧಾನವಾಗಿ ಹವ್ಯಾಸಿ ರಂಗ. ಕರಾವಳಿಯಲ್ಲಿರುವಂತೆ ವೃತ್ತಿರಂಗವಲ್ಲ. ಹಾಗಾಗಿ ಕೆಲವು ಅಂಶಗಳಲ್ಲಿ ಪ್ರಾಚೀನತೆಯ ಅಂಶಗಳನ್ನು ಉಳಿಸಿಕೊಂಡಿದ್ದರೂ ಸಾತತ್ಯ ಮತ್ತು ಪ್ರತ್ಯೇಕ ವ್ಯವಸ್ಥೆಯ ಪೋಷಣೆಗೆ ಆಸ್ಪದವಿಲ್ಲದೆ ಸಂಪ್ರದಾಯ ಕೆಲವೆಡೆ ತ್ರುಟಿತ ವಾಗಿದೆ. ವೇಷಗಳೂ ಅರ್ವಾಚೀನ ನಾಟಕ ಪದ್ಧತಿಯ (ಕಂಪೆನಿ ನಾಟಕ ಮಾದರಿ) ಪ್ರಭಾವಕ್ಕೊಳಗಾಗುತ್ತಿವೆ.

ಮೂಡ್ಲಪಾಯ = ನೋಡಿ: ಮೂಡಲಪಾಯ.

ಮೂಡ್ಲುಪಾಯ = ನೋಡಿ: ಮೂಡಲಪಾಯ.

ಮೂರನೇ ಕಟ್ಟುವೇಷ: 1. (ತೆ.) ಇದಿರುವೇಷದ ಜಾತಿಯ ಎಡೆವೇಷ. ಇದಿರುವೇಷ ವರ್ಗದ ಮತ್ತೊಂದು ಪಾತ್ರ. ಕುರುಕ್ಷೇತ್ರದ ಭಗದತ್ತ ಮತ್ತು ಕೌರವ, ರಾಮಾಯಣ ಯುದ್ಧಕಾಂಡದ ಇಂದ್ರಜಿತು, ಕೆಲವು ಪ್ರಸಂಗಗಳ ಹನುಮಂತ, ಅಶ್ವಮೇಧದ ವೀರವರ್ಮ– ಇವು ಈ ಜಾತಿಯ ವೇಷಗಳು.

2. (ಬ.) ಪ್ರಧಾನ ಪುಂಡುವೇಷ ಅರ್ಥಾತ್ ಒಂದನೆಯ ಪುಂಡು. ಬಭ್ರುವಾಹನ, ಅಭಿಮನ್ಯು, ಇತ್ಯಾದಿ ವೇಷಗಳು ಮತ್ತು ಆ ಪಾತ್ರಗಳ ವೇಷಧಾರಿ.

– ಆಯಾ ಸಂಪ್ರದಾಯ ಪ್ರಕಾರ, ಹಿಂದಿನ ಪ್ರಾಶಸ್ತ್ಯಕ್ರಮದಲ್ಲಿ ಬಹುಶಃ ಈ ಪಾತ್ರಕ್ಕೆ ಮೂರನೆಯ ಸ್ಥಾನವಿತ್ತು.

ಮೂರನೇ ಕಾಲ: 1. ತಾಳಗತಿಯ ಮೂರನೇ ವೇಗ. ಎರಡನೆಯ ಕಾಲಕ್ಕಿಂತ ಮುಂದಿನದು.

2. ಇಡಿಯ ರಾತ್ರಿ ಜರಗುವ ಆಟದಲ್ಲಿ ಮೂರನೆಯ ಅವಧಿ. ಸುಮಾರು ಮೂರು ಗಂಟೆಯಿಂದ ನಾಲ್ಕೂವರೆ ಗಂಟೆಯ ತನಕದ ಅವಧಿ ಮತ್ತು ಅದರ ಅಪೇಕ್ಷಿತ ವೇಗ.

ಮೂರನೇ ಬಣ್ಣ: ಬಣ್ಣದ ವೇಷದಲ್ಲಿ ಮೂರನೆಯ ಸ್ಥಾನದ ವೇಷಗಳು ಮತ್ತು ಆ ಸ್ಥಾನದ ವೇಷಧಾರಿ. ಮೇಳದ ಕಲಾವಿದರ ಸಂಖ್ಯೆ ಬೆಳೆದಂತೆ, ನಿರ್ಮಿತ ವಾದ ಸ್ಥಾನ.

ಮೂರನೇವೇಷ = ನೋಡಿ: ಮೂರನೇ ಕಟ್ಟುವೇಷ.

ಮೂರನೇ ಹಜ್ಜೆ (ತೆ.): ನೃತ್ಯಾಭ್ಯಾಸದಲ್ಲಿ ಮೂರನೆಯ ಹಂತದ ಹಜ್ಜೆ. ಒಂದನೆಯ, ಎರಡನೆಯ ಹಜ್ಜೆಗಳ ಮಿಶ್ರಣ ಮತ್ತು ಸ್ವಲ್ಪ ಹೆಚ್ಚಿನ ಚಲನೆ. ಕಾಲುಗಳ ಬಡಿತ, ಅತ್ತಿತ್ತ ಚಲನೆ, ಹತ್ತಿರ ಮತ್ತು ದೂರ ಬರುವುದು ಮತ್ತು ಕೈಚಲನೆ– ಇವು ಸೇರಿ ಮೂರನೇ ಹಜ್ಜೆ.

ಮೂರು ಮುಕ್ತಾಯ: ಕುಣಿತದ ಅಂದಕ್ಕಾಗಿ, ಪದ್ಯದ ಮೊದಲ ಮುಕ್ತಾಯ ಅಥವಾ ಬಿಡ್ತಿಗೆಯ ಸ್ಥಾನದಲ್ಲಿ ಮೂರು ಮುಕ್ತಾಯಗಳನ್ನು ಬಾರಿಸು ವುದು. ಇದರ ಬಳಿಕ ಪದ್ಯವನ್ನು, 'ಏರಿನಲ್ಲಿ' (ಏರು ಸ್ವರದಲ್ಲಿ) ಹೇಳುವುದೂ ಇದೆ. ಹಾಸ್ಯಪಾತ್ರ ಗಳಿಗೂ, ವೀರರಸಕ್ಕೂ, ಬೇಟೆಯಾಟಕ್ಕೂ ಈ ಕ್ರಮ ಅನುಸರಿಸುವರು. ಹೆಚ್ಚಾಗಿ ಈ ಪದ್ಧತಿ ಏಕತಾಳದಲ್ಲಿ ಮಾತ್ರ ಪ್ರಯುಕ್ತ. ಐಚ್ಛಿಕ.

ಮೂಲಪೆಟ್ಟು: ತಾಳವನ್ನು ಬಾಯಿಯಲ್ಲಿ ಮತ್ತು ಚೆಂಡೆ, ಮದ್ದಲೆಗಳಲ್ಲಿ ಅಭ್ಯಾಸ ಮಾಡುವಾಗ ಬಳಸುವ ಮೂಲ ಪಾಠದ ಪೆಟ್ಟುಗಳು. ನಿಶ್ಚಿತ ವಾದ, ಏಕರೂಪದ ದಸ್ತುಗಳು. ನಿಜಪೆಟ್ಟು (ಉ.)

ಮೆತ್ತೆ: 1. ಆಭರಣ ಸಾಮಗ್ರಿಗಳ ತಯಾರಿಗೆ ಬಳಸುವ ತಳಹದಿ. ಮುಳ್ಳು, ಮಣಿ, ಹಲ್ಲೆ, ಕಡ್ಡಿ, ಹರಳು ಮೊದಲಾದುವುಗಳನ್ನು ಹೊಲಿಯುವ ಬಟ್ಟೆಯ ತಳಹದಿ. Pad.

2. ಶಿರೋಭೂಷಣಗಳನ್ನು ತಲೆಗೆ ಕಟ್ಟುವಾಗ, ಒತ್ತಿ ನೋವಾಗದಂತೆ ಇಡುವ ಚಿಕ್ಕ ದಿಂಬು. ಇದು ಕಿರೀಟಾದಿಗಳಿಗೆ ಒಳಗಿಂದ ಅಂಟಿಸಿದ್ದೂ ಇರುತ್ತದೆ.

ಮೆಯ್ = ನೋಡಿ: ಮಯ್.

ಮೆಯ್ಕಡ್ಡಿ = ನೋಡಿ: ಮಯ್‌ಕಡ್ಡಿ.

ಮೆರೆಯುವ ವೇಷ: 1. ಪ್ರಾಶಸ್ತ್ಯವುಳ್ಳ ಪಾತ್ರ. ಉದಾ: ಅಭಿಮನ್ಯು.

2. ಕಥಾ ಸ್ವರೂಪದಲ್ಲಿ ಸ್ವಾಭಾವಿಕವಾಗಿ, ಅವಕಾಶ ಕಡಿಮೆ ಇದ್ದರೂ ಸಹ, ಮಿಂಚುವ ಪಾತ್ರ. ಉದಾ: ಸಮುದ್ರ ಮಥನದ ದೂರ್ವಾಸ, ಭೀಷ್ಮ ವಿಜಯದ ಪರಶುರಾಮ, ಅಶ್ವಮೇಧದ ವೀರವರ್ಮ.

(ಇದು ವರ್ಣನಾತ್ಮಕ ಶಬ್ದ. ಪಾರಿಭಾಷಿಕ ಪದವಲ್ಲ.)

ಮೇಣ/ಮಯಣ: 1. ಅಂಟಿನ ದ್ರವ್ಯ. ಕೆತ್ತಿದ ಮರಕ್ಕೆ ಬೇಗಡೆ ಹಚ್ಚಲು ಬಳಸುವ ಮಯಣ. ಜೇನು ಮೇಣ ಮತ್ತು ಹಲಸಿನ ಮೇಣಗಳನ್ನು ಸಮ ಪ್ರಮಾಣದಲ್ಲಿ ಬೆರೆಸಿ ಕುದಿಸಿ, ತಯಾರಿಸುವರು.

2. ಪುಂಗಿಯ ಓಟೆಯ ರಂಧ್ರಗಳನ್ನು ಮುಚ್ಚಲು ಬಳಸುವ ಮೇಣ; ಮೇಣದ ಉಂಡೆಗಳು.

ಮೇಲ್ಕಾಪು (ತೆ.) : 1. ಕೆಲವೊಂದು ವೇಷಗಳ ಪ್ರವೇಶಕ್ಕೆ ವಸ್ತ್ರವನ್ನು ಕೋಲುಗಳ ಆಧಾರದಲ್ಲಿ ಹಿಡಿದು ತಯಾರಿಸುವ ಮೇಲ್ಕಟ್ಟು. ಅಂತರತೆರೆ; ರಾಮ, ಶಿವ, ರಾವಣ, ಕೃಷ್ಣ ಮೊದಲಾದ ಪಾತ್ರಗಳಿಗೆ ಪ್ರಯುಕ್ತ. ಐಚ್ಛಿಕ.

2. ರಂಗಸ್ಥಳದ ಮೇಲೆ ಒಳಗಿನಿಂದ ಮುಚ್ಚುವ ಬಟ್ಟೆ. ಮೇಲು ಕಾಪು.

ಮೇಲ್ಕಟ್ಟು ರಂಗಸ್ಥಳ : ಜಾಲರಿ, ಅಲಂಕಾರಗಳಿರುವ ರಂಗಸ್ಥಳ. ಅದ್ದೂರಿ ರಂಗಸ್ಥಳದ ಭಾವ.

ಮೇಳ : 1. ಯಕ್ಷಗಾನ ಮೇಳ. ವ್ಯವಸಾಯಿ ತಂಡ. ಸಾಮಗ್ರಿ, ಸಲಕರಣೆ, ಕಲಾವಿದರು, ಸಿಬಂದಿ, ಆಡಳಿತ– ಒಟ್ಟು ಸೇರಿ ಒಂದು ಮೇಳ.

2. ಹೊಂದಾಣಿಕೆ. ಹಾಡುಗಾರಿಕೆಗೂ– ಹಿಮ್ಮೇಳಕ್ಕೂ, ಹಿಮ್ಮೇಳಕ್ಕೂ– ಮುಮ್ಮೇಳಕ್ಕೂ, ಪಾತ್ರಗಳೊಳಗೂ ಇರುವ, ಇರಬೇಕಾದ ಹೊಂದಿಕೆ.

ಮೇಳ ಏಳುವುದು : 1. ಮೇಳದ ತಿರುಗಾಟ ಪ್ರಾರಂಭವಾಗುವುದು.

2. ಹೊಸತಾಗಿ ಅಥವಾ ಹಿಂದೆ ಇದ್ದು ಸ್ಥಗಿತವಾಗಿದ್ದ ಮೇಳವು ಆರಂಭಗೊಳ್ಳುವುದು. ಮೇಳ ಎಬ್ಬಿಸುವುದು.

ಮೇಳ ಒಳಗಾಗುವುದು : ತಿರುಗಾಟದ ಮುಕ್ತಾಯ. ತಿರುಗಾಟ ಮುಗಿದು ಸಾಮಗ್ರಿಯನ್ನು ಒಳಗಿಡುವುದು.

ಮೇಳ ತೆಗೆಯುವುದು : ಮೇಳವನ್ನು ಸಂಘಟಿಸಿ ಆರಂಭಿಸುವುದು.

ಮೇಳದ ಗಣಪತಿ : 1. ಮೇಳದಲ್ಲಿ ಗಣಪತಿಯೆಂದು ಪೂಜಿಸಲ್ಪಡುವ ಕಿರೀಟ. **ಗಣಪತಿ ಕಿರೀಟ.**

2. ಕೆಲವು ದೇವಾಲಯಗಳಲ್ಲಿ, ಅಲ್ಲಿಯ ಮೇಳದ ತಿರುಗಾಟಕ್ಕೆಂದೇ ಪ್ರತ್ಯೇಕವಾಗಿ ಇರುವ ಗಣಪತಿ ಮೂರ್ತಿ. ತಿರುಗಾಟ ಇಲ್ಲದ ಅವಧಿಯಲ್ಲಿ ಇದಕ್ಕೆ ನಿಯತವಾಗಿ ಪೂಜಾದಿಗಳು ಸಲ್ಲಬೇಕು. ಧರ್ಮಸ್ಥಳ, ಕೂಡ್ಲುಗಳಲ್ಲಿ ಇಂತಹ ಗಣಪತಿ ವಿಗ್ರಹಗಳಿವೆ.

ಮೇಳದ ಪೆಟ್ಟಿಗೆ : ಪೆಟ್ಟಿಗೆ. ಮೇಳದ ಸಾಮಗ್ರಿಗಳಿಗೆ ಸಂಬಂಧಿಸಿದ ಪೆಟ್ಟಿಗೆಗಳು. ನೋಡಿ : **ಪೆಟ್ಟಿಗೆ, ಗಂಟು, ಹೊರೆ.**

ಮೇಳದ ಗಾಡಿ : ತಿರುಗಾಟದಲ್ಲಿ ಮೇಳದ ಸರಕನ್ನು ಹೇರಿ ಕೊಂಡೊಯ್ಯುವ, ಎತ್ತಿನಗಾಡಿ. **ಆಟದಗಾಡಿ.**

ಮೇಳದ ದೇವರು : 1. ಮೇಳದಲ್ಲಿ ದೇವರೆಂದು ಪೂಜಿಸಲ್ಪಡುವ ಸ್ವಸ್ತಿಕ ಮತ್ತು ಕಿರೀಟಗಳು.

2. ಆಯಾ ಮೇಳದ ದೇವರು. ಅಂದರೆ ಸಂಬಂಧಿತ ಮೇಳದ ಮೂಲಸ್ಥಾನವಾದ ದೇವಾಲಯದ ಆರಾಧ್ಯ ದೇವರು. ಉದಾ: ಇಡಗುಂಜಿ ಮೇಳಕ್ಕೆ ಇಡಗುಂಜಿಯ ಮಹಾಗಣಪತಿ. ಕರ್ನಾಟಕ ಮೇಳಕ್ಕೆ ಇರಾ ಸೋಮನಾಥೇಶ್ವರ, ಇತ್ಯಾದಿ.

3. ಮೇಳದ ತಿರುಗಾಟಕ್ಕಾಗಿ ರಚಿಸಲಾದ ದೇವ ವಿಗ್ರಹ.

ಮೇಳ ಹಿರಿಯುವುದು (ಬ.) : ಮೇಳದ ತಿರುಗಾಟ ಮುಗಿಸಿ, ಕಲಾವಿದರು ಅಗಲುವುದು, ಚದರಿಕೆ.

ಮೈರಾವಣ : ಒಂದು ರಾಕ್ಷಸ ಪಾತ್ರ– ಅದರ ಮುಖವರ್ಣಿಕೆ ವಿಶಿಷ್ಟ. ಹಣೆಯ ಮೇಲೆ ಅರ್ಧಚಂದ್ರಾಕೃತಿಯ ಎರಡು ಸಾಲುಗಳಲ್ಲಿ ಚುಟ್ಟಿಯನ್ನಿಡಬೇಕು. ಇದಕ್ಕೆ ಗೀರುಗಂಧ **ಚುಟ್ಟಿ** ಎನ್ನುವರು.

ಬಡಗುತಿಟ್ಟಿನಲ್ಲಿ ಮೈರಾವಣನಿಗೆ **ಸರ್ಪಸುಳಿ** ಬರೆಯಬೇಕು. ಹಣೆಯಲ್ಲಿ ಎಲೆಯ ಆಕೃತಿಯ ಚಿಟ್ಟಿವಿನ್ಯಾಸ– ಪಾತಾಳ ರಾಕ್ಷಸನಾದುದರಿಂದ, ಅವನಿಗೆ ಸರ್ಪಸುಳಿ ಎಂದು ಒಂದು ವಿವರಣೆ.

ಮೈರಾವಣ ಮಾಯಕ : ಮೈರಾವಣನು ಪ್ರಯೋಗಿಸುವ ಮಾಯಾವಿದ್ಯೆ– ಮಂತ್ರ ಬೂದಿಯನ್ನೆರಚಿ ರಾಮ ಲಕ್ಷ್ಮಣರನ್ನು ಅಪಹರಿಸುವುದು, ಅಸ್ಪೃಶ್ಯನಾಗಿ ಬರುವುದು, ಯುದ್ಧರಂಗದಲ್ಲಿ ವಿಭೀಷಣ, ಜಾಂಬವ, ಸುಗ್ರೀವ ರೂಪಗಳಲ್ಲಿ ಬಂದು ಹನುಮಂತನಿಗೆ ಕಪಟ ಉಪದೇಶ ನೀಡುವುದು.

– ವಾಗ್ರೂಢಿಯಲ್ಲಿ ಮಹಾತಂತ್ರಗಾರಿಕೆ ಎಂಬ ಅರ್ಥದ ಮಾತು.

ಮೊದಲಿನ ಮುಕ್ತಾಯ : ಪದ್ಯದ ಮೊದಲ ಭಾಗದಲ್ಲಿ, ಮೊದಲಿನ ಚರಣ ಅಥವಾ ಚರಣಭಾಗವನ್ನು ಹಾಡಿ, ಬಾರಿಸುವ ಮುಕ್ತಾಯ.

ಮೊಲದ ಕಿವಿ (ಬ.) : ಬಣ್ಣದವೇಷದ ಹಣೆಯಲ್ಲಿ ಬರೆಯುವ ಒಂದು ಸುಳಿ. ಮೊಲದ ಕಿವಿಯ ಆಕೃತಿಯ ಚಿಟ್ಟಿ.

ಮೊಲೆಕಟ್ಟು : ಸ್ತ್ರೀವೇಷಧಾರಿ ಬಳಸುವ ಮೊಲೆಕಟ್ಟು. ಹಿಂದೆ, ತೆಂಗಿನಕಾಯಿಯ ಗೆರಟೆ (ಕರಟ) ಬಳಕೆಯಿತ್ತು.

ಮೊಲೆಚೆಂಡು : ಸ್ತ್ರೀವೇಷದ ಮೊಲೆಚೆಂಡು. ಬಟ್ಟೆಯ ಅಥವಾ ಸ್ಪಂಜಿನ ಆಕೃತಿಗಳು.

ಮೊಸಳೆಬೀಜ (ಬ.) : ಮಸಾಲೆ ಬೀಜ. ಸಾಂಬಾರು ಜೀನಸು ಮತ್ತು ಬೀಜಗಳು. ಹಿಂದೆ, ಮೇಳದ ಊಟದಲ್ಲಿ ಹುರುಳಿ, ಅವರೆ ಮುಂತಾದ ಬೀಜ ಒಂದು ಖಾಯಂ ಸಾಮಗ್ರಿಯಾಗಿತ್ತು.

ಮೋಹನಮಾಲೆ: ಒಂದು ಬಗೆಯ ಗುಂಡು ಸರ. ಸುಮಾರಾಗಿ ಬಟಾಣಿ ಆಕಾರದ, ಉಬ್ಬುತಗ್ಗು ವಿನ್ಯಾಸಗಳಿರುವ ಗುಂಡುಗಳ, ಎರಡೆಳೆ ಸರ.

ಯ

ಯಕ್ಷಗಾನ: 1. ಒಂದು ಪ್ರಬಂಧ ವಿಶೇಷ. ವಿವಿಧ ಜಾತಿಯ ಛಂದಸ್ಸುಗಳು, ಪದ, ಪದ್ಯಗಳಿಂದ ಕೂಡಿದ ಹಾಡುಗಬ್ಬ. ಈಗ 'ಪ್ರಸಂಗ'ವೆಂದು ಕರೆಯಲ್ಪಡುವ ಸಾಹಿತ್ಯ ರೂಪ.
2. ಆಟ, ತಾಳಮದ್ದಲೆ, ಅದರ ಸಾಮಗ್ರಿಗಳೆಲ್ಲ ಸೇರಿರುವ ಒಟ್ಟು ರಂಗಭೂಮಿ– ಅರ್ವಾಚೀನ ಅರ್ಥ.

ಯಕ್ಷಗಾನ ಮೇಳ: ವ್ಯವಸಾಯ ಮೇಳ. ಆಟದ ಮೇಳ, ದಶಾವತಾರ ಮೇಳ ಎಂಬುದರ ಅರ್ವಾಚೀನ ನಾಮಾಂತರ.

ಯಕ್ಷರಾಗ: ಅರ್ವಾಚೀನ ಪದ. ಯಕ್ಷಗಾನ ಸಂಗೀತ, ಹಾಡುವಿಕೆಗಳನ್ನು ಸ್ಥೂಲವಾಗಿ ನಿರ್ದೇಶಿಸುತ್ತದೆ.

ಯಜಮಾನ: ಮೇಳದ ಯಜಮಾನ, ಧನಿ.
1. ಸಂಬಂಧಪಟ್ಟ ದೇವಾಲಯದ ಮುಖ್ಯಸ್ಥ.
2. ಮೇಳವನ್ನು ವಹಿಸಿಕೊಂಡು ಅಥವಾ ತಾನೇ ಸಂಘಟಿಸಿ ನಡೆಸುವವನು. ಇವನು ಮಾಲೀಕ ಅಥವಾ ಒಪ್ಪಂದದ ಮೇರೆಗೆ ನೇಮಿತನಾದ ಸಂಚಾಲಕನಾಗಿರಬಹುದು.

ಯುದ್ಧ: 1. ಯುದ್ಧದ ದೃಶ್ಯ, ಸನ್ನಿವೇಶ.
2. ಯುದ್ಧಕ್ಕೆ ಸಂಬಂಧಿಯಾದ ಕುಣಿತ. ಇದರಲ್ಲಿ ನಾಲ್ಕಾರು ವಿಧಾನಗಳಿವೆ. ಏಕತಾಳದಲ್ಲಿ ನಡೆಯುವುದು.
3. ಯುದ್ಧಕ್ಕೆ ಸಂಬಂಧಿಸಿದ ದೃಶ್ಯದ ಸಂವಾದ.

ಯುದ್ಧದ ಕುಣಿತ = ನೋಡಿ: ಯುದ್ಧ.

ಯುದ್ಧ ನಾಟ್ಯ = ನೋಡಿ: ಯುದ್ಧ.

ಯುದ್ಧದೂತ: ಯುದ್ಧ ಜರಗಲಿರುವ ಅಥವಾ ಜರಗಿದ ವಿಚಾರವನ್ನು, ಆಕ್ರಮಣ ವಾರ್ತೆಯನ್ನು ತಿಳಿಸುವ ದೂತ. ಹಾಸ್ಯಪಾತ್ರ, ಗಡಿಬಿಡಿದೂತ.

ಯೋಗದಂಡ: ಋಷಿವೇಷಗಳು, ಬ್ರಹ್ಮ, ದಕ್ಷ ಪಾತ್ರಗಳೂ ಕೈಯಲ್ಲಿ ಧರಿಸುವ, ಅಥವಾ ಕೈಯನ್ನು ಆಧರಿಸಿಡುವ ದಂಡ. Y ಆಕಾರದ ಕವೆ.

ರ

ರಂಗಸ್ಥಳ: ಆಟ ನಡೆಯುವ ವೇದಿಕೆ. ಬರಿಯ ನೆಲಕ್ಕೆ ಹಗ್ಗದ ಆವರಣ ಹಾಕಿದ ಚೌಕ; ಅಥವಾ ಮಣ್ಣು ಅಥವಾ ಹಲಗೆಗಳನ್ನು ಉಪಯೋಗಿಸಿ ಎತ್ತರಿಸಿದ ವೇದಿಕೆ. ಇದರ ಅಳತೆಯು, ಸಾಂಪ್ರದಾಯಿಕವಾಗಿ 16 ಮೆಟ್ಟು X 14 ಅಥವಾ 12 ಮೆಟ್ಟು, 14 ಮೆಟ್ಟು X 12 ಮೆಟ್ಟು, 18 ಮೆಟ್ಟು X 14 ಮೆಟ್ಟು ಎಂದು ಮೂರು ಬಗೆಯಾಗಿ ರೂಢಿಯಲ್ಲಿದೆ. ಈಗ ಡೇರೆ ಮೇಳಗಳೂ, ಎತ್ತರಿಸಿದ ರಂಗಸ್ಥಳಗಳೂ ಇರುವುದರಿಂದ ಈ ಪ್ರಮಾಣಗಳು ಬದಲಾಗಿವೆ.


ರಂಗದ ಹಿಂಭಾಗದಲ್ಲಿ ಹಿಮ್ಮೇಳವಿರುತ್ತದೆ. ನಡುವೆ ಭಾಗವತ, ಅವನ ಬಲಕ್ಕೆ ಮದ್ದಲೆಗಾರ, ಎಡಕ್ಕೆ ಚೆಂಡೆಗಾರ, (ಬಡಗುತಿಟ್ಟಿನಲ್ಲಿ ಇಬ್ಬರೂ ಬಲಕ್ಕೆ) ಹಿಂದೆ ಶ್ರುತಿವಾದಕ ಇರುತ್ತಾರೆ. ಹಿಂದೆ ಇವರು ನಿಂತುಕೊಂಡೇ ಇರುತ್ತಿದ್ದರು. (ಗಟ್ಟದಕೋರೆ, ಮೂಡಲಪಾಯಗಳಲ್ಲಿ ಈಗಲೂ ನಿಂತುಕೊಂಡಿರುವುದೇ ರೂಢಿಯಿದೆ) ಈಗ ಪೀಠದಲ್ಲಿ ಕುಳಿತಿರುತ್ತಾರೆ. ವೇಷಗಳ ಪ್ರವೇಶವು ರಂಗಸ್ಥಳದ ಎಡಗಡೆಯಿಂದ, ನಿರ್ಗಮನವು ಬಲಗಡೆಯಿಂದ ಜರಗುತ್ತದೆ.

ಹಿಮ್ಮೇಳಕ್ಕೆ ತುಸು ಮುಂದೆ 'ರಥ' ಇರುತ್ತದೆ. ಇದು ಚಕ್ರಗಳುಳ್ಳ ಒಂದು ಚಿಕ್ಕಪೀಠ. ಇದೇ ಸಿಂಹಾಸನ, ರಥ, ಮರ, ಪರ್ವತ, ದೇವಾಲಯ– ಹೀಗೆ ಸಂದರ್ಭಾನುಸಾರವಾಗಿ ಎಲ್ಲವೂ ಆಗಿರುತ್ತದೆ.

ಸಭಾಲಕ್ಷಣ ಗ್ರಂಥದಲ್ಲಿ ರಂಗಸ್ಥಳದ ಆಯವು ಹೀಗೆ ಕೊಡಲ್ಪಟ್ಟಿದೆ:

ಪಂಚಹಸ್ತೇನ ವಿಸ್ತೀರ್ಣಂ
ದಶಹಸ್ತೇನ ಉನ್ನತಂ।
ಅರ್ಧಚಂದ್ರ ಪ್ರಮಾಣೇನ
ತಿಷ್ಠತೇ ರಂಗಮಂಟಪಂ।

– ಇದರ ಅರ್ಥವು ಸ್ಪಷ್ಟವಿಲ್ಲ. ಉದ್ದ, ಅಗಲಗಳೆರಡೂ ಐದೈದು ಕೈಯಷ್ಟು ಇದ್ದು,



ರಂಗಸ್ಥಳ – ರಥ – ಪಡಿಮಂಚ

ಸುತ್ತಲೂ ಜನಕುಳ್ಳಿರುವಂತೆ ಇರುವ (ಮೂರು ಕಡೆ ತೆರೆದಿರುವ) ರಂಗಸ್ಥಳ ಎಂದು ಸಾಮಾನ್ಯವಾಗಿ ಅರ್ಥೈಸಬಹುದು.

ರಂಗಸ್ಥಳಕ್ಕೆ ಅಪ್ಪಣೆ : ಚೌಕಿಯಲ್ಲಿ ಸ್ತುತಿಪದ್ಯ ಹಾಡಿ, ದೇವರಿಗೆ ಆರತಿ ಬೆಳಗಿದ ಅನಂತರ ಜರಗುವ ವಿಧಿ. ವಾದ್ಯಗಳಿಗೆ ಆರತಿ ಬೆಳಗಿ, ಪ್ರಸಾದ ಹಚ್ಚಿದ ಅನಂತರ ಭಾಗವತನು "ರಂಗಸ್ಥಳಕ್ಕೆ ಅಪ್ಪಣೆ" ಎನ್ನುತ್ತಾನೆ. (ಅಪ್ಪಣೆಯೆ ? ಎಂದು ಮೂಲ.) ಅದಕ್ಕೆ ಆರತಿ ಬೆಳಗಿದವನು "ದೇವರ ಅಪ್ಪಣೆ" ಎನ್ನುತ್ತಾನೆ. ಅನಂತರ ಹಿಮ್ಮೇಳವು ರಂಗಕ್ಕೆ ಹೋಗುತ್ತದೆ.

ರಂಗಸ್ಥಳಕ್ಕೆ ನಿಲ್ಲುವುದು : ಚೌಕಿಯಲ್ಲಿ ಪೂಜೆ ಆಗಿ, "ದೇವರ ಅಪ್ಪಣೆ" ಆದ ಬಳಿಕ, ಸಂಗೀತಗಾರ, ಮದ್ದಲೆಗಾರ, ಚಂಡೆಗಾರರು ರಂಗಕ್ಕೆ ಪ್ರವೇಶಿಸಿ, ಸಭಾಲಕ್ಷಣ ಆರಂಭಿಸುವುದರ ಮೊದಲ ಹಂತ.

ರಂಗಸ್ಥಳಕ್ಕೆ ಬೆಂಕಿ...(...ಬಿತ್ತು.) (ಬ./ಉ.) : ಜಾನಪದ ಪ್ರಶಂಸೆ. ಒಂದು ಸನ್ನಿವೇಶದಿಂದ ಅಥವಾ ಓರ್ವ ಪಾತ್ರಧಾರಿಯ ಕೆಲಸದಿಂದ ರಂಗಸ್ಥಳವು ಬೆಳಗಿತು, ಜಾಜ್ವಲ್ಯಮಾನ್ಯ ವಾಯಿತು. – ಎಂಬ ಅರ್ಥ.

ರಂಗಸ್ಥಳದ ಅನುಭವ (– ಮಾಹಿತಿ): ಮೇಲೆ ಹೇಳಿದ ಕ್ರಮಗಳ ಬಗೆಗಿನ ಮಾಹಿತಿ. ಇದನ್ನು ಭಾಗವತರು, ಹಿರಿಯ ವೇಷಧಾರಿಗಳೂ, ಕಿರಿಯರಿಗೆ ಹೇಳಿ ಕೊಡುವರು. ನೋಡಿ : **ಅನುಭವ ಕೊಡುವುದು.**

ರಂಗಸ್ಥಳದ ಕೆಲಸ : 1. ರಂಗದ ನೃತ್ಯ, ಅಭಿನಯ, ಚಲನೆ ಇತ್ಯಾದಿ. ಮಾತು ಹೊರತು, ಉಳಿದ ಎಲ್ಲ ಅಭಿವ್ಯಕ್ತಿ.
2. ರಂಗಸ್ಥಳದಲ್ಲಿ ಕೆಲಸಗಾರರ ಕೆಲಸ – ತೆರೆ ಹಿಡಿಯುವುದು, ದೀವಟಿಗೆ ಹಿಡಿಯುವುದು, ಆಯುಧ ಕೊಡುವುದು ಇತ್ಯಾದಿ.
3. ರಂಗಸ್ಥಳ ತಯಾರಿಯ ಕೆಲಸ.

ರಂಗಸ್ಥಳದ ಕ್ರಮ : ರಂಗದಲ್ಲಿ ನೃತ್ಯ, ಅಭಿನಯ, ವಾದನಗಳಿಗೆ ಸಂಬಂಧಿಸಿದ ಪದ್ಧತಿಗಳು. ನಿಶ್ಚಿತ ನಡೆಗಳು, ಅಭಿನಯ ವಿಧಾನಗಳು, ಚಲನೆಗಳು, ರಂಗತಂತ್ರ ಇತ್ಯಾದಿ. ನೋಡಿ : **ಕ್ರಮ.**

ರಂಗಸ್ಥಳ ಹುಡಿ ಹಾರಿಸುವುದು : ರಂಗಸ್ಥಳದಲ್ಲಿ ನಿರೀಕ್ಷೆ ಮೀರಿ ನಿರ್ವಹಿಸುವುದೆನ್ನುವುದನ್ನು ಸೂಚಿಸಲು ಪ್ರೇಕ್ಷಕರು ಬಳಸುವ ಪ್ರಶಂಸಾತ್ಮಕ ನುಡಿಗಟ್ಟು.
ನೋಡಿ : **ಧುಪ್ಪಧೂಳು, ಚೂರು ಹಾರಿಸುವುದು.**

ರಂಗಾರಂಗಿ (ಬ./ತೆ.) : ಕಟ್ಟುಹಾಸ್ಯ, ಗಂಡಹೆಂಡತಿ ಪಾತ್ರ.

ರಂಗಿನ ಬಟ್ಟೆ (ತೆ.) : ಬಣ್ಣ ಒರೆಸುವ ಬಟ್ಟೆ.

ರಂಗು : ಬಣ್ಣ. ವರ್ಣದ್ರವ್ಯ.

ರಡ್ಡಡ್ಡಿಂಗಿಣ/ರಡ್ಡಿಂಗಿಣ (ತೆ.) : ಧಿಗಿಣದ ಒಂದು ವಿಧ. ಬಣ್ಣದ ವೇಷದ ಪ್ರವೇಶಕ್ಕೂ, ನಿರ್ಗಮನಕ್ಕೂ, ಮರಣಕ್ಕೂ ಬಡಿಯುವ, ಚೆಂಡೆಯ ಬಡಿತ.

ರಡ್ಡಿಂಗಿಣ = 1. ನೋಡಿ: **ದಡ್ಡಿಂಗಿಣ.**
2. ನೋಡಿ: **ರಡ್ಡಡ್ಡಿಂಗಿಣ.**

ರಥ : ರಂಗಸ್ಥಳದಲ್ಲಿಡುವ, ಚಕ್ರಗಳಿರುವ ಚಿಕ್ಕ ಪೀಠ. ಸಂದರ್ಭಾನುಸಾರವಾಗಿ ಸಿಂಹಾಸನ, ರಥ, ಆಕಾಶ ಇತ್ಯಾದಿಗಳನ್ನು ಸಾಂಕೇತಿಕವಾಗಿ ಪ್ರತಿನಿಧಿಸುವ ಪೀಠ. ಇದನ್ನು ಬಿಚ್ಚಿ, ತುಂಡುಗಳಾಗಿ ವಿಭಜಿಸಲು ಬರುತ್ತದೆ. ನೋಡಿ: **ಪೀಠ.**

ರಥದ ಕಟ್ಟು = ನೋಡಿ: **ರಥದ ಹೊರೆ.**

ರಥದ ಕುಣಿತ : ರಥದ ಮೇಲೆಯೇ ನಿಂತು ಕುಣಿಯುವುದು. ಕಥೆಯಲ್ಲಿ ಪಾತ್ರವು ರಥದ ಮೇಲೆ, ಆನೆ, ಗರುಡ, ಕುದುರೆ ಇತ್ಯಾದಿ ವಾಹನಗಳ ಮೇಲೆ ಕುಳಿತುಕೊಂಡು ಹೋಗುವ ಅಥವಾ ಮಾತಾಡುವ ಸಂದರ್ಭ ಇದ್ದರೆ, ಆಕಾಶಗಮನ, ಮರವನ್ನೇರುವುದು ಇತ್ಯಾದಿ ಇದ್ದರೆ ಆಗ ರಥವನ್ನೇರಿ ನಿಲ್ಲಬೇಕು. ಆಗ ಪದ್ಯ ಇದ್ದರೆ, ಅಥವಾ ಪ್ರಯಾಣ ಇದ್ದರೆ ಅಲ್ಲಿ ಕುಣಿಯುವುದಿರುತ್ತದೆ.

ರಥದ ಪೆಟ್ಟಿಗೆ = ನೋಡಿ: **ರಥದ ಹೊರೆ.**

ರಥದ ಹೊರೆ (– ಪೆಟ್ಟಿಗೆ) : ಮೇಳದ ಹೊರೆಗಳಲ್ಲೊಂದು. 'ರಥ'ವೆಂಬ ಪೀಠ ಅಥವಾ ಆಸನವನ್ನು, ಬಿಚ್ಚಿ ಅದರ ಗಾಲಿ, ಕಾಲು, ಹಲಗೆಗಳನ್ನು ಪ್ರತ್ಯೇಕಿಸಿ ಒಟ್ಟಿಗಿಟ್ಟು, ಅದಕ್ಕೆ ಚಾಪೆ, ದೀವಟಿಗೆಗಳನ್ನು ಕಟ್ಟಿ ಬಿಗಿದು ತಯಾರಿಸುವ ಹೊರೆ. ಚರಿಗೆಯನ್ನು ಇದಕ್ಕೆ ಕಟ್ಟುವುದುಂಟು.

ಬಡಗುತಿಟ್ಟಿನಲ್ಲಿ ಇದನ್ನು ಹನುಮಂತನ ಅಂಗಿ (ರೋಮದ ಅಂಗಿ ಅಥವಾ ಕತ್ತದ ಅಂಗಿ) ಯಲ್ಲಿ ಸುತ್ತಿ ಕಟ್ಟುವ ಪದ್ಧತಿ ಇತ್ತು.

ತಿರುಗಾಟದ ಪ್ರಯಾಣದಲ್ಲಿ ರಥದ ಹೊರೆಯು ಮುಂದಿನಿಂದ ಇರಬೇಕೆಂದೂ, ಅದು ಶುಭವೆಂದೂ ನಂಬುಗೆಯಿದ್ದಿತು. ರಥವೆಂಬುದು ವಾಹನವೆಂಬುದರಿಂದ ಈ ಅಭಿಪ್ರಾಯ ಬಂದಿರಬಹುದು.

ರಥದ ಹೊರೆಯವನು : ರಥದ ಕಟ್ಟನ್ನು ಹೊರುವ ಆಳು.

ರವಕೆ : ಸ್ತ್ರೀವೇಷದ ಕುಪ್ಪಸ.

ರವಿ ಏಳುವುದು (ತೆ.) : ಮದ್ದಲೆಯ ಕರ್ಣದ ತುಂಡುಗಳು, ರವೆ ಕಿತ್ತು ಬರುವುದು. ಕರ್ನ ಏಳುವುದು.

ರಾಂ ಬೈರಾಗಿ : ಕಟ್ಟು ಹಾಸ್ಯ. ಬೈರಾಗಿ ಹಾಸ್ಯ. ಹಿಂದಿ ಭಾಷೆ ಬೆರಸಿ ಮಾತಾಡುವುದು. ನಾಥ ಪಂಥದ (ಜೋಗಿ) ಸಂನ್ಯಾಸಿಯ ಅಣಕ.

ರಾಕ್ಷಸ ದೂತ : ರಾಕ್ಷಸನ ದೂತ, ಸಖ, ಗೂಢಚರ ಇತ್ಯಾದಿ. ಇದನ್ನು ರಾಕ್ಷಸನ ವೇಷಕ್ಕೆ ಸಂವಾದಿಯಾಗಿ ಅಣಕು ಚಿಟ್ಟೆ, ವಿಕಾರ ಮುಖ, ದೊಡ್ಡ ಮಣಿಸರಗಳಿಂದ ಚಿತ್ರಿಸುವ ಕ್ರಮವು, ಇತ್ತೀಚೆಗೆ ರೂಢಿಗೆ ಬಂದಿದೆ.

ರಾಗ : ಗಾನಕ್ಕೆ ಸಂಬಂಧಿಸಿದ ರಾಗ. ಯಕ್ಷಗಾನದ ರಾಗಗಳು, ಕರ್ನಾಟಕಿ ಸಂಗೀತದ ಪ್ರಾಚೀನ ರೂಪವೊಂದನ್ನು ಪ್ರತಿನಿಧಿಸುತ್ತವೆ. ಈಗ ಸಭಾಗಾನದಲ್ಲಿ ಬಳಕೆಯಿರುವ ಕರ್ನಾಟಕಿ ಸಂಗೀತಕ್ಕಿಂತ, ಶೈಲಿಯಲ್ಲಿ ಭಿನ್ನವಾಗಿದ್ದ ಈ ರಾಗಗಳು ಒಂದೇ ಮೂಲದವುಗಳಾಗಿ ಇಂದಿಗೂ ಕಾಣುತ್ತಿವೆ. ಸ್ವಲ್ಪಾಂಶ, ಉತ್ತರಾದಿ ರಾಗಗಳ ಪ್ರಭಾವವೂ ಇದೆ. ಕೆಲವು ಕೇವಲ ಮಟ್ಟುಗಳಾಗಿ ಮಾತ್ರ ಕಾಣುತ್ತವೆ. ಯಕ್ಷಗಾನ ಪ್ರಸಂಗಗಳಲ್ಲಿ ನೂರ ಐವತ್ತಕ್ಕೂ ಮಿಕ್ಕಿದ ರಾಗಗಳ ಉಲ್ಲೇಖವಿದ್ದರೂ ಈಗ ಬಳಕೆಯಲ್ಲಿರುವ ರಾಗಗಳು ಸುಮಾರು ನಲುವತ್ತು.

ಯಕ್ಷಗಾನ ಹಾಡುಗಾರಿಕೆಯಲ್ಲಿರುವ ರಾಗಗಳ ಸ್ವರೂಪ ಮತ್ತು ಹೆಸರುಗಳಿಂದ, ಸಂಗೀತದ ಇತಿಹಾಸದ ಕುರಿತು ಮುಖ್ಯವಾದ ಮಾಹಿತಿಗಳು ಸಿಗಲು ಸಾಧ್ಯ. ರಾಗಗಳ ಹಳೆಯ ರೂಪವನ್ನು ಗುರುತಿಸಲು ಇವು ಸಹಾಯಕ. (ಉದಾ: ಯಕ್ಷಗಾನದ ನೀಲಾಂಬರಿಯು, ಪ್ರಾಚೀನವಾದ ಆನಂದ ನೀಲಾಂಬರಿಯೆನ್ನುವರು).

ಯಕ್ಷಗಾನದಲ್ಲಿ ರಾಗದ ಬಳಕೆ ವಿಸ್ತಾರವಾಗಿಲ್ಲವಾದರೂ ಶಾಸ್ತ್ರೀಯವಾಗಿಯೂ ಸಶಕ್ತವಾಗಿಯೂ ಇದೆ. ಭಾವಾಭಿವ್ಯಕ್ತಿಯ ದೃಷ್ಟಿಯಿಂದ ಯಕ್ಷಗಾನದಲ್ಲಿ ರಾಗಗಳ ಬಳಕೆ ಆಶ್ಚರ್ಯಕರವಾದ ವ್ಯಾಪ್ತಿ, ವೈವಿಧ್ಯ, ಶ್ರೀಮಂತಿಕೆಗಳನ್ನು ಹೊಂದಿದೆ. ಯಕ್ಷಗಾನ ಸಂಗೀತದಲ್ಲಿ ಪ್ರಾದೇಶಿಕ ವ್ಯತ್ಯಾಸಗಳಿವೆ. ಆದರೂ ಇದು ಯಕ್ಷಗಾನದ ಹಾಡುಗಾರಿಕೆಯ ಶೈಲಿ ಎಂದು ಖಚಿತವಾಗಿ ಗುರುತಿಸಬಹುದಾದ ರೂಪವು ಹಲವು ರಾಗಗಳಲ್ಲಿ ಗೋಚರವಾಗುತ್ತದೆ. ಇಂದು ಹಾಡುಗಾರಿಕೆಯು, ಆಧುನಿಕ ಶಾಸ್ತ್ರೀಯ ಸಂಗೀತ, ಸಿನಿಮಾ ಸಂಗೀತದಿಂದಲೂ ತಿಟ್ಟುಗಳ ಪರಸ್ಪರ ಸಂಪರ್ಕದಿಂದಲೂ ಪ್ರಭಾವಿತವಾಗುತ್ತಿದ್ದು ರಾಗಗಳೂ ಹೊಸ ರೂಪ ಪಡೆಯುತ್ತಿವೆ.

ರಾಗಗಳ ಬಳಕೆಯಲ್ಲಿ, ರಸಾನುಗುಣವಾದ ಮತ್ತು ಕಾಲಾನುಗುಣವಾದ ವಿಭಾಗವಿದೆ. ವೀರ, ರೌದ್ರ ರಸಗಳಿಗೆ ಮಾರವಿ, ಭೈರವಿ, ಕೇದಾರಗೌಳ, ಸೌರಾಷ್ಟ್ರ ರಾಗಗಳು. ದುಃಖಕ್ಕೆ ನೀಲಾಂಬರಿ, ಆನಂದಭೈರವಿ, ದೈನ್ಯಕ್ಕೆ ಕಾನಡಾ ಇತ್ಯಾದಿ. ಕಾಲಾನುಗುಣವಾಗಿ ರಾತ್ರಿಯ ಮೊದಲ ಭಾಗವಾದ 'ಒಂದನೇ ಕಾಲ'ದಲ್ಲಿ ನಾಟಿ, ಶ್ರೀರಾಗ, ಮಧ್ಯಮಾವತಿ, ಎರಡನೇ ಭಾಗವಾದ 'ಎರಡನೆ ಕಾಲ'ಕ್ಕೆ ಹಂಸಧ್ವನಿ, ಮೂರನೇ ಭಾಗಕ್ಕೆ ಆರಭಿ, ನಾಲ್ಕನೇ ಭಾಗಕ್ಕೆ ಮೋಹನ, ಸಾವೇರಿ, ರೇವತಿ, ಮಧ್ಯಮಾವತಿ, ರೇಗುಪ್ತಿ ಇತ್ಯಾದಿ. ಇದು ಕಟ್ಟುನಿಟ್ಟಿನ ನಿಯಮವಲ್ಲ. ಅಲ್ಲದೆ ಕಾಲ ನಿಯಮವಿಲ್ಲದ ರಾಗಗಳೂ ಇವೆ. ಉದಾ: ನವರೋಜು, ಸುರುಟಿ ಇತ್ಯಾದಿ.

ರಾಜ ಕಿರೀಟ : ಮುಖ್ಯವಾಗಿ 'ರಾಜ ವೇಷ'ಗಳು ಧರಿಸುವ ಕಿರೀಟ. ರಾಜ ವೇಷ ಅಲ್ಲದ ವೇಷಗಳು– (ಹಿರಣ್ಯಾಕ್ಷ, ಇಂದ್ರಜಿತು, ಸೇನಾಪತಿ) ಧರಿಸುವುದುಂಟಾದರೂ ಇಲ್ಲಿ ಆ ವೇಷಗಳಿಗೇ ರಾಜ ವೇಷವೆಂದು ಹೆಸರು. ನೋಡಿ: **ಕಿರೀಟ, ಕೋಲು ಕಿರೀಟ.**

ರಾಜ ಬಣ್ಣ : ಬಣ್ಣದ ವೇಷದ ಎರಡು ವಿಧಗಳಲ್ಲಿ ಒಂದು. (ಇನ್ನೊಂದು **ಕಾಟು ಬಣ್ಣ**). ರಾಜ ಬಣ್ಣವೆಂದರೆ ರಾಜನ ಸ್ಥಾನವುಳ್ಳ ಬಣ್ಣದ ವೇಷಗಳು– ರಾವಣ, ಮಾಗಧ, ವಾಲಿ, ಯಮ (ಕಾಟು ಬಣ್ಣಗಳೆಂದರೆ ಕಾಡುರಕ್ಕಸರು. ಉದಾ: ಬಕಾಸುರ).

ರಾಜ ಬಣ್ಣದ ಚುಟ್ಟಿಯಲ್ಲಿ ಹಣೆಯಲ್ಲಿ ಸುಳಿಗಳು ಬರಬೇಕು. ಚುಟ್ಟಿಯ ಸಾಲುಗಳು ಒಂದನ್ನೊಂದು ನೇರವಾಗಿ, ವಕ್ರಗತಿಯಿಲ್ಲದೆ ಸೇರಬಾರದು. ರಾಜ ಬಣ್ಣಗಳ ಆರ್ಭಟೆಯೂ ಕುಣಿತವೂ ಗಂಭೀರವಾಗಿರಬೇಕು.

ನೋಡಿ: **ಬಣ್ಣದ ವೇಷ, ಕಾಟುಬಣ್ಣ.**

ರಾಜವೇಷ : ರಾಜ ಕಿರೀಟ ಅರ್ಥಾತ್ **ಕೋಲು ಕಿರೀಟ** (ರೂಢಿಯಲ್ಲಿ 'ಕಿರೀಟ'ವೆಂದು ಮಾತ್ರ ಹೇಳುವುದುಂಟು) ಎಂಬ ಶಿರೋಭೂಷಣ ವನ್ನಿಡುವ ವೇಷ. ಪಗಡಿ, ಮುಂಡಾಸು, ಕೇಶಾವರಿಗಳನ್ನಿಡುವ ವೇಷವಲ್ಲ. ಈ ಪಾತ್ರವು ಕತೆಯಲ್ಲಿ

ರಾಜನೇ ಆಗಿರಬೇಕೆಂದಿಲ್ಲ. ಉದಾ: ಅರ್ಜುನ (ತೆ./ಉ.), ಇಂದ್ರಜಿತು, ಅತಿಕಾಯ, ಪರಶುರಾಮ– ಇವರು ರಾಜರಲ್ಲ. ಆದರೆ ರಾಜ ವೇಷಗಳು.

ಒಂದೇ ವೇಷವು ರಾಜ ವೇಷವಾಗಿಯೂ ಪುಂಡು ವೇಷವಾಗಿಯೂ ಬರಬಹುದು. ಉದಾ: (ತೆ.) ಭೀಷ್ಮಪರ್ವದ ಕರ್ಣನದು ಪಗಡಿ ವೇಷ, ಕರ್ಣಪರ್ವದಲ್ಲಿ ರಾಜ ವೇಷ. ರಾಜ ವೇಷ ಧರಿಸದ ರಾಜರೂ ಇದ್ದಾರೆ. ಉದಾ: ಬಭ್ರುವಾಹನ, ಶಲ್ಯ.

ರಾಣಿ ಪಾತ್ರ: ಮುಖ್ಯ ರಾಜ ವೇಷದ ಹೆಂಡತಿಯ ಪಾತ್ರ. ಮೂಡಲಪಾಯ ಸಂಪ್ರದಾಯದಲ್ಲಿ ಮುಖ್ಯ ಸ್ತ್ರೀ ಪಾತ್ರ.

ರಾಧಾಕೃಷ್ಣ ವೇಷ: ರಾಧೆ ಮತ್ತು ಕೃಷ್ಣ ವೇಷಗಳು.

1. **ದಾನಾವರ್ತ** (**ಚಿಕ್ಕ ಮೇಳ**)ವೆಂಬ ಮಳೆಗಾಲದ ಸಂಭಾವನೆ ತಿರುಗಾಟದಲ್ಲಿ ಒಂದು ಸ್ತ್ರೀ ವೇಷ, ಒಂದು ಪುಂಡು ವೇಷಗಳನ್ನು ಕರೆದುಕೊಂಡು ಹೋಗುವುದು ಪದ್ಧತಿ. ಆ ಎರಡು ವೇಷಗಳಿಗೆ ಈ ಹೆಸರು.

2. ಒಂದು ಮೇಳವು, ಕ್ಷೇತ್ರವೊಂದಕ್ಕೆ ಬಂದಾಗ. ಅಲ್ಲಿಯ ದೇವಾಲಯದಲ್ಲಿ ಚಿಕ್ಕ ಸೇವೆಯೊಂದನ್ನು ಆಡಬೇಕು. ಆಗಲೂ ಇದೇ ವೇಷಗಳನ್ನು ಕುಣಿಸುವರು.

ರಾಮಲಕ್ಷಣ ಕಿರೀಟ (ತೆ.): ಮೇಳದಲ್ಲಿ ಪೂಜೆಗಿರಿಸಲಾಗುವ ಎರಡು ಕಿರೀಟಗಳು. ಅನಂತರ ಇವನ್ನು ವೇಷಗಳು ಧರಿಸಬಹುದು. (**ದೇವರ ಕಿರೀಟ, ಗಣಪತಿ ಕಿರೀಟ.** ಬ. ಉ.).

ಇವುಗಳ ಹೆಸರಿನಿಂದಾಗಿ, ಯಕ್ಷಗಾನದ ಮೇಳವು ರೂಪುಗೊಂಡ ಕಾಲದಲ್ಲಿ ರಂಗಕ್ಕೆ ಬಂದ ಮೊದಲ ಕೃತಿಗಳು ರಾಮಾಯಣದ ಪ್ರಸಂಗಗಳೆಂದು ಊಹಿಸಬಹುದು.

ರಾವಣ (ಬ./ತೆ.): ಬಣ್ಣದ ವೇಷಗಳಲ್ಲಿ ವಿಶಿಷ್ಟ ಪಾತ್ರ. ಇದರ ಮುಖವರ್ಣಿಕೆ ಪ್ರತ್ಯೇಕವಾದದ್ದು. ಇದರ ಚುಟ್ಟಿಯ ಕೊನೆಗಳು ಹಣೆಯ ಮೇಲೆ ಅರ್ಧವೃತ್ತಾಕಾರದ ಸುಳಿಗಳಾಗಿ ಕೊನೆಗೊಳ್ಳುತ್ತವೆ. ಇನ್ನೊಂದು ಚುಟ್ಟಿಯು ಹಣೆಯಲ್ಲಿ ಅರ್ಧವಜ್ರಾಕೃತಿಯಂತೆ ಬರುತ್ತದೆ. ಇದರ ಮೇಲೆ ಒಂದು ಗೀರುಗಂಧ ಚುಟ್ಟಿ ಇರುತ್ತದೆ. ಈ ಅರ್ಧವೃತ್ತಗಳ ಮತ್ತು ಗೀರುಗಂಧದ ಮಧ್ಯೆ ಹತ್ತಿಯ ಗೊಂಡೆಗಳಿರುತ್ತವೆ.

ಈ ವೇಷಕ್ಕೆ ಕಣ್ಣಿನ ಕೆಳಗೆ ಬರೆಯುವ ರೇಖೆಗಳಲ್ಲಿ ಹಸುರು ಬಣ್ಣದ ರೇಖೆಯೂ ಇರುತ್ತದೆ. ಬೇರೆ ಬಣ್ಣದ ವೇಷಗಳಿಗೆ ಇದು ನಿಷಿದ್ಧ. ರಾವಣನು ರಕ್ಕಸನಾದರೂ ಅವನಲ್ಲಿ ಶೃಂಗಾರದ ಅಂಶವಿದೆ ಎಂಬುದರ ಸಂಕೇತವಾಗಿ ಹಸುರು ರೇಖೆಯಿರುವುದೆನ್ನುವರು.

ಹಿಂದೆ ಹಣೆಯಲ್ಲಿ **ಸುಳಿಚುಟ್ಟಿ** ಇದ್ದುದು ರಾವಣನಿಗೆ ಮಾತ್ರ. ಅದೇ ರೀತಿ ಪ್ರವೇಶದಲ್ಲಿ ಶಿವಪೂಜೆಯ ಅಭಿನಯಗಳು ಕೂಡ ರಾವಣ, ಮಾಗಧರಿಬ್ಬರಿಗೆ ಮಾತ್ರ. ಕ್ರಮೇಣ ಸುಳಿಚುಟ್ಟಿ ಮತ್ತು ಶಿವಪೂಜೆಯ ಅಭಿನಯವು ಇತರ ಬಣ್ಣದ ವೇಷಗಳಿಗೂ ವಿಸ್ತರಿಸಿತು.

ಗಟ್ಟದ ಕೋರೆ ಸಂಪ್ರದಾಯದಲ್ಲಿ ಶಿವ ಪೂಜೆಯು ಈಗಲೂ ರಾವಣನಿಗೆ ಮಾತ್ರ ಇರುವಂತಹ ಅಭಿನಯ.

ರಾವಣ ಸುಳಿ = ನೋಡಿ: **ರಾವಣ.**

ರಾಹು: ನಿಶ್ಚಿತ ದಿನಗಳಲ್ಲಿ ನಿಶ್ಚಿತ ದಿಕ್ಕುಗಳಲ್ಲಿ ಸಂಚರಿಸುವ ದೇವತೆ, ರಾವು ಎಂಬ ನಂಬಿಕೆ.

ರಾಹುದಿಕ್ಕು(-ಮುಖ): ವಾರದ ನಿಶ್ಚಿತದಿನಗಳಲ್ಲಿ ರಾಹುವು ಇಂತಿಂತಹ ದಿಕ್ಕುಗಳಲ್ಲಿ ಇರುವನೆಂದು ನಂಬುಗೆಯಿದೆ. ಇದನ್ನು ಗುರುತಿಸುವ ಕ್ರಮವೆಂದರೆ, ಆದಿತ್ಯವಾರದಿಂದ ತೊಡಗಿ ದಿನಕ್ಕೊಂದು ವಾರವನ್ನೆಣಿಸುತ್ತ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ಈ ಕ್ರಮದಲ್ಲಿ ಲೆಕ್ಕಿಸಬೇಕು. ಇದರಂತೆ– ರವಿ, ಗುರುವಾರಗಳಲ್ಲಿ ಪೂರ್ವ, ಸೋಮ, ಶುಕ್ರವಾರಗಳಿಗೆ ದಕ್ಷಿಣ, ಮಂಗಳವಾರಕ್ಕೆ ಪಶ್ಚಿಮ, ಬುಧ, ಶನಿವಾರಗಳಿಗೆ ಉತ್ತರ ದಿಕ್ಕುಗಳು ರಾಹುದಿಕ್ಕು ಅಥವಾ ರಾಹು ಮುಖಗಳಾಗುತ್ತವೆ. ಇದರಲ್ಲಿ ಒಂದು ಸಂಪ್ರದಾಯ ವ್ಯತ್ಯಾಸವಿದೆ. ಅದರ ಪ್ರಕಾರ ಮಂಗಳ, ಶನಿ ಪಶ್ಚಿಮಕ್ಕೆ, ಬುಧವಾರ ಮಾತ್ರ ಉತ್ತರಕ್ಕೆ ಎಂದು ನಂಬುಗೆ.

ಇದಕ್ಕೆ **ಕಡ್ಪುವಾರ** (ಕಡ್ಪು-ಕಡಪು ತುಳು. ದಾಟುವಿಕೆ, ರಾಹುವಿನ ದಾಟುವಿಕೆ ಅಥವಾ ಕಡ್ಪು-ಕಡು. ಉಗ್ರ, ನಿಷಿದ್ಧ ಎಂದರ್ಥ).

ರಾಹು ಮುಖ ಇರುವ ದಿಕ್ಕಿಗೆ ಮುಖ ಮಾಡಿ ರಂಗಸ್ಥಳ ಇರಬಾರದು, ಇದ್ದರೆ ಆಪತ್ತು ಎಂದು ಪೂರ್ವಕಟ್ಟಲೆ ಇದೆ. ಇದಕ್ಕಾಗಿ ಆ ದಿಕ್ಕುಗಳನ್ನು ವರ್ಜಿಸುವರು ಅಥವಾ ತುಸು ಓರೆ ಮಾಡಿ ರಂಗಸ್ಥಳ ಹಾಕುವರು. ಇದಕ್ಕೆ **ರಾಹು ದಿಕ್ಕು ತಪ್ಪಿಸುವುದು** ಎಂದು ಹೆಸರು.

ನಿಷಿದ್ಧ ದಿಕ್ಕಿಗೆ ರಂಗಸ್ಥಳ ಹಾಕಬೇಕಾದರೆ ಎರಡು ಪ್ರತ್ಯಾಮ್ನಾಯಗಳಿವೆ:

1. ರಂಗದ ಇದಿರಿಗೆ ದೇವಾಲಯ ಭೂತಾಲಯ ಗಳಿದ್ದರೆ ನಿಷಿದ್ಧವಲ್ಲ.

2. ತೆಂಗಿನಕಾಯಿ ಒಡೆದು, ಓಕುಳಿ ನೀರು ಚೆಲ್ಲಿ ಪ್ರಾರ್ಥನೆ ಮಾಡುವುದು.

ರಾಹು ದಿಕ್ಕು ತಪ್ಪಿಸುವುದು : ನೋಡಿ: ರಾಹು ದಿಕ್ಕು.

ರಾಹುಮುಖ : ನೋಡಿ : ರಾಹುದಿಕ್ಕು.

ರಾಳ : ಧೂಪದ ಮರ (Vateria indica, Shorea Robusta) ಮತ್ತು ಗುಗ್ಗುಳ ಧೂಪದ ಮರ (Balsamodendron mukul) [illegible] ಅಂಟು. ರಾಳದ ಹುಡಿ. ಗುಗ್ಗುಳ, ದುಗ್ಗುಳ. ಇದನ್ನು ಬಣ್ಣದ ವೇಷದ ಪ್ರವೇಶಕ್ಕೆ, ದೀವಟಿಗೆಗೆ ಹೊಡೆದು ಬೆಂಕಿ ಎಬ್ಬಿಸುವರು. ಇದಕ್ಕೆ ರಾಳ ಹೊಡೆಯುವುದು, ದುಗ್ಗುಳ ಹಾರಿಸುವುದು (ಗ. ಮೂ.) ಎನ್ನುವರು. ಇದು ಎಲ್ಲ ತಿಟ್ಟುಗಳಲ್ಲಿ ಮತ್ತು ಹಲವು ಇತರ ರಂಗ ಸಂಪ್ರದಾಯಗಳಲ್ಲೂ ಇದೆ.

ತೆಂಕುತಿಟ್ಟಿನಲ್ಲಿ ಜಲಸ್ತಂಭನದಿಂದ ಹೊರಡುವ ದುರ್ಯೋಧನನೂ ಕೂಡ ರಾಳ ಹಾರಿಸುವ ಕ್ರಮವಿದೆ.

ಬಯಲಾಟ ಆಡಿಸುವವನು ಮೇಳಕ್ಕೆ ಕೊಡ ಬೇಕಾದ ಸಾಮಗ್ರಿಗಳಲ್ಲಿ ರಾಳವೂ ಒಂದು.

ರಾಳವನ್ನು ಸ್ಪಿರಿಟ್‌ನಲ್ಲಿ ಸುಟ್ಟು ಅಂಟಿ ಗಾಗಿಯೂ ಬಳಸುವರು. ಇದು ತುಂಬ ಜಿಗುಟಾದ ಅಂಟು. ನೋಡಿ : ಸ್ಪಿರಿಟ್‌ಗಮ್.

ರುದ್ರಭೀಮ (ತೆ.) : ದುಶ್ಶಾಸನ ವಧೆಯ ಭೀಮನ ವೇಷ. ಮೂಗಿನಿಂದ ಹಣೆಯ ವರೆಗೆ ನಾಮವನ್ನು ಬರೆದು, ಕೆಂಪುಬಣ್ಣ ತುಂಬಿಸುವರು. ಹಣೆಯಲ್ಲಿ ಎರಡು ತುಸು ಉದ್ದವಾಗಿರುವ ಕಣ್ಣುಗಳನ್ನು ಬರೆಯುವರು. ಇವುಗಳಿಗೆ **'ಆನೆ ಕಣ್ಣು'** ಎಂದು ಹೆಸರು. ಗಲ್ಲಗಳ ಮೇಲೆ ಎರಡು ವರ್ತುಲ ವಿನ್ಯಾಸ ಗಳಿರುತ್ತವೆ.

ಕೆಳಗಿಂದ ಮೇಲಕ್ಕೆ ಅಕಾರದಲ್ಲಿ ದೊಡ್ಡದಾಗುತ್ತ ಹೋಗುವ ಭೀಮನ ಮುಡಿಯೆಂಬ ವಿಶಿಷ್ಟ ಕಿರೀಟವನ್ನು ಧರಿಸುವರು. ಈ ಕಿರೀಟದ ಕಿವಿಗಳೂ ದೊಡ್ಡದಾಗಿದ್ದು, ಅದರ ಕೆಳಗೆ ಎರಡು ಉರುಟು ಓಲೆಗಳು ಕಿರೀಟದಲ್ಲೆ ಇರುತ್ತವೆ. ಭೀಮನ ವೇಷಕ್ಕೆ ಕಿವಿಗಳ ಮೇಲೆ ಓಲೆ ಅಥವಾ ಪತ್ರವೆಂಬ ವೃತ್ತಾಕಾರದ ರಚನೆಗಳನ್ನು ಕಟ್ಟುವರು; ಗದ್ದಕ್ಕೆ ಗಡ್ಡವನ್ನು ಕಟ್ಟುತ್ತಾರೆ.

ಇತರ ಪ್ರಸಂಗಗಳ ಭೀಮನೂ ಇದೇ ರೀತಿ ಯಾಗಿದ್ದರೂ ಮುಖವರ್ಣಿಕೆ ಸೌಮ್ಯವಾಗಿರು ತ್ತದೆ.

ಬಡಗುತಿಟ್ಟಿನಲ್ಲಿ ಸಾಮಾನ್ಯ ಭೀಮನು ಬೇರೆ, ರುದ್ರಭೀಮನು ಬೇರೆ. ಸಾಮಾನ್ಯ ಭೀಮನು, ಮಾಮೂಲು ರಾಜ ವೇಷ. ಧರ್ಮರಾಜ, ಬಲರಾಮರಂತೆ ಈ ವೇಷ ಇರುತ್ತದೆ.

ರುದ್ರಭೀಮನು ತೆಂಕುತಿಟ್ಟಿನ ಪ್ರಭಾವದ ಸೃಷ್ಟಿ. ಮುಖವರ್ಣಿಕೆ ತೆಂಕುತಿಟ್ಟಿನಂತೆಯೇ ಇದ್ದು, ತಲೆಗೆ ಕಿರೀಟದ ಬದಲು ದೊಡ್ಡ ಕೆಂಪು ಮುಂಡಾಸನ್ನು ಸುತ್ತುವರು. ಸೊಂಟದ ಸುತ್ತ ನೆರಿ ಕಟ್ಟುತ್ತಾರೆ. ಹಿಂದೆ ತಟ್ಟಿ ಕಿರೀಟ ಕಟ್ಟುವ ಸಂಪ್ರದಾಯವೂ ಇತ್ತು. 'ದುಃಶಾಸನ ವಧೆ'ಯ ಭೀಮ ತಟ್ಟಿ ಕಿರೀಟದ ಭೀಮನಾಗಿದ್ದ.

ತೆಂಕುತಿಟ್ಟಿನ ಒಂದು ವಿಶಿಷ್ಟ ಸಂಪ್ರದಾಯ ವೆಂದರೆ, ದುಶ್ಶಾಸನ ವಧೆಯ ದುಶ್ಶಾಸನನ ವೇಷವು, ಭೀಮನ ವೇಷದ ಪ್ರತಿರೂಪ, ಕಿರೀಟ ಮಾತ್ರ ರಾಜ ಕಿರೀಟವಾಗಿರುತ್ತದೆ. ಉಳಿದ ಪ್ರಸಂಗಗಳಲ್ಲಿ ದುಶ್ಶಾಸನನು ಪುಂಡು ವೇಷ. ಈ ಪ್ರಸಂಗದಲ್ಲಿ ಭೀಮ-ದುಶ್ಶಾಸನರಲ್ಲಿ ಅನುರೂಪ್ಯಕ್ಕಾಗಿ ಈ ಕಲ್ಪನೆ.

ರುದ್ರಾಕ್ಷಿ : ರುದ್ರಾಕ್ಷಿಕಾಯಿ. ಋಷಿ ವೇಷ, ಜೋಗಿ ವೇಷಗಳಿಗೂ, ಹಾಸ್ಯಪಾತ್ರಗಳಿಗೂ ಬಳಕೆಯಿದೆ. ರುದ್ರಾಕ್ಷಿಗಾಗಿ ಕಾಡುರುದ್ರಾಕ್ಷಿ, ಎಮ್ಮೆಕಾಯಿ ಮತ್ತು ಗಾಳಿ ಮರದ ಕಾಯಿಗಳನ್ನು ಬಳಸುವರು.

ರುಮಾಲು : ತಲೆ ಪೇಟಾ. ಗುಂಡಗಿನಾಕಾರಾದ ಮುಂಡಾಸು. ಭಾಗವತರು ಕಟ್ಟುವ ಮತ್ತು ಅಮುಖ್ಯ ಮಂತ್ರಿಯ ಮುಂಡಾಸು. ಚಾರಕನ ಪೇಟಾ.

ರೂಪಕ ತಾಳ : ತಾಳಗಳಲ್ಲೊಂದು. 2+4 ವಿಭಜನೆಯ ಆರು ಮಾತ್ರಾ ಕಾಲವುಳ್ಳದ್ದು.

ಮೂಲ ಪೆಟ್ಟುಗಳು : ತೆಂಕುತಿಟ್ಟು.

x x

ದಸ್ತು : ಧೀಂ। ತತ್ತಾ ತರಿಕಿಟ ಎರಡು ಆವರ್ತ

x

ತೋಂ। ಧಿನ್ನಕ ತರಿಕಿಟ

ಬಿಡ್ತಿಗೆ : 1. ಧಿನ್ನಕ। ತರಿಕಿಟ।ತತ್ತಾಂ– 2 ಬಾರಿ

2. ಕಿಟತಕ ತರಿಕಿಟ ಧಿನ್ನತ್ತೊಂ।

3. ಧಿಡ್ಡಾ ದದಿಗಿಣತೋ ದಿದ್ದಾದಗಿಗಿಣತೋ। ದಿದ್ದಾದದಿಗಿಣತೋ।

ಮುಕ್ತಾಯ : ಮೇಲಿನ ಮೂರನೇ ಭಾಗ ಅಥವಾ

x x x

ಧಿನ್ನಕತರಿಕಿಟ ದಿಧ್ಧಿತೋಂ। ಧಿನ್ನ ತರಿಕಿಟತೊಂ

ಬಡಗುತಿಟ್ಟು : ದಸ್ತು:

x x x x

ತೈ। ತದ್ಧಿನ್ನಕ। ಧೇಂತದ್ಧಿನ್ನಕ।– 2 ಆವರ್ತ ಮುಕ್ತಾಯದಲ್ಲಿ ಎರಡು ಬಗೆ.

1. ತಾಂ ಕಿಡ್ತಕ ಧಿನ್ನ। ಧೀಂ.
ಕಡ್ತಕ ಧಿನ್ನ। ತಾಂ ಕಡ್ತಕಧಿನ್ನ।
ತೈ। ತತಾಂ।.. ತಾಂ ಕಡ್ತಕಧಿನ್ನ
2. ತೈ।. ತಾಕಡ್ತಕಧೀಂ।.. ತಾಕಡ್ತಕ।
ತೈತದ್ಧಿನ್ನಕ। ತೊಂತೊಂ ತಧಿನ್ನ। ತಾಂ
.. ವಿರಾಮ ಚಿಹ್ನೆ.

ರೆಕ್ಕೆ [1]: ಕಿರೀಟದ ಬದಿಯ ಪಕ್ಕೆಗಳು. ಕಿರೀಟದ ಕರ್ಣ ಪಾತ್ರ. ಕಿರೀಟದ ಕಿವಿ ಎನಿಸುವ 'S' ಆಕಾರದ ರಚನೆಗಳು.

ರೆಕ್ಕೆ [2]: ಗರುಡ ಮೊದಲಾದ ವೇಷಗಳ ರೆಕ್ಕೆ.

1. ವಸ್ತ್ರವನ್ನು ತಲೆ ಮುಡಿಗೆ ಸಿಕ್ಕಿಸಿ, ಹಿಂಬದಿಯಿಂದ ಇಳಿಬಿಟ್ಟು ಎರಡೂ ಕೈಗಳಿಂದ ಹಿಡಿದುಕೊಂಡು ಹಾರುವಂತೆ ಮಾಡುವುದು.

2. ಬಣ್ಣದ ವೇಷದ ಭುಜಕೀರ್ತಿ (ಭುಜದಂಬೆ) ಗಳನ್ನು, ರೆಕ್ಕೆಯೆಂದು ಕಲ್ಪಿಸಿ, ಗರುಡ, ಜಟಾಯು ಮೊದಲಾದ ಪಕ್ಷಿವೇಷಗಳಿಗೆ ಕಟ್ಟುವುದು.

ರೆಪ್ಪೆ: ಕಾಡಿಗೆಯಿಂದ ತಿದ್ದಿದ (ರೂಪಿಸಿದ) ರೆಪ್ಪೆ. ರೆಪ್ಪೆ ಬರೆಯುವುದು.

ರೇಖೆ: ಮುಖವರ್ಣಿಕೆಯಲ್ಲಿ ಬರುವ ವಿವಿಧ ರೇಖೆಗಳು. ಗೀರು, ಗೀಟು. ಗೆರೆ ನೋಡಿ: **ಗೆರೆ.**

ರೈಸುವುದು: ಮೆರೆಯುವುದು, ವಿಜೃಂಭಿಸುವುದು; ಪ್ರದರ್ಶನವು ಪಾಕವಾಗಿ, ಹದವಾಗಿ ಜನರನ್ನು ರಂಜಿಸುವುದು. ಕಲಾವಿದನಿಗೆ ಅಥವಾ ಒಟ್ಟು ಆಟಕ್ಕೆ ಸಂಬಂಧಿಸಿದ ಪ್ರಶಂಸಾತ್ಮಕ ಮಾತು. ಉದಾ: ''ಆಟ ರೈಸಿತು''. ''ಈ ದಿನದ ಆಟದಲ್ಲಿ ಭಾಗವತಿಕೆ ರೈಸಿತು'' ಇತ್ಯಾದಿ.

ಲ

ಲಂಗ: 1. **ಚಾಲ್ಮುಂಡು** ಅಥವಾ **ಸೆರಿಗೆ** (ತೆ.) ಎಂಬುದಕ್ಕೆ ಉಳಿದತಿಟ್ಟುಗಳಲ್ಲೂ, ಕೆಲವು ಪ್ರೇಕ್ಷಕರಲ್ಲೂ ಬಳಕೆಯಿರುವ ಪದ– ಲಂಗ ದಂತಿರುವ ಉಡುಗೆ ಎಂಬ ಅರ್ಥದಿಂದ.

2. ಸಖಿ ಪಾತ್ರಗಳು, ಗೋಪಿಕೆಯರು, ತೊಡುವ ಲಂಗ– ದಾವಣಿ ಉಡುಪಿನ ಲಂಗ.

3. 'ನಾಟಕ ವೇಷ'ಗಳು ಸೊಂಟದ ಸುತ್ತ ತೊಡುವ ಗಿಡ್ಡ ಲಂಗ, ಅರ್ಧಡವರು.

ಲಂಬಾಣಿ ಹಾಸ್ಯ: ಕಟ್ಟುಹಾಸ್ಯ. ಲಂಬಾಣಿ ಹೆಂಗುಸಿನ ವೇಷ.

ಲಯ: ತಾಳದ ಲಯ. ಗತಿಯ ವೇಗ ಮತ್ತು ಪ್ರಮಾಣ. ತಾಳದ ಎರಡು ಆವರ್ತಗಳ ಮಧ್ಯೆ ಇರಬೇಕಾದ ಕಾಲಸಮಾನತೆ ಮತ್ತು ಆಂತರಿಕ ವಿಭಾಗ ಸಮಾನತೆ.

ಲವಕುಶ ವೇಷಧಾರಿ (ಬ.): **ಪುಂಡುವೇಷಧಾರಿ** ಎಂಬುದರ ನಾಮಾಂತರ.

ಲಾಗ: ಕುಣಿತದಲ್ಲಿ ಬರುವ ಲಾಗ, ಹಾರಾಟ. ಇದರಲ್ಲಿ **ಗುತ್ತು**, **ತುಂಡುಗುಪ್ಪೆ**, **ಕುಮಟಿಟ್ಟು**, **ಜಾರುಗುಪ್ಪೆ**, **ತಿರುಗಣೆಲಾಗ** ಮೊದಲಾದ ವಿಧಗಳಿವೆ. ದೊಡ್ಡಲಾಗ, ಸಣ್ಣಲಾಗ ಎಂದು ಮತ್ತೊಂದು ವಿಭಾಗ.

ಗುತ್ತು ಲಾಗವು ತೆಂಕುತಿಟ್ಟು ನೃತ್ಯದ ವಿಶೇಷತೆ. ವೀರ-ರೌದ್ರ ರಸದ ಕುಣಿತದಲ್ಲಿ, ಬಿಡ್ತಿಗೆಗೆ ಬಹುಸಂಖ್ಯೆಯಲ್ಲಿ ಲಾಗಗಳನ್ನು ಹಾಕುವರು. ಪುಂಡುವೇಷಕ್ಕೆ ಇದು ವಿಶೇಷ. ರಾಜವೇಷ, ಬಣ್ಣದವೇಷ, ದೊಡ್ಡ ಪಗಡಿ ವೇಷಗಳು ಐದಕ್ಕಿಂತ ಹೆಚ್ಚು ಲಾಗ ಹಾರಬಾರದೆಂದು ಹಳೆಯ ತಿಳಿವಳಿಕೆ.

ಗುತ್ತು ಲಾಗ (ನಿಂತಲ್ಲೆ ಹಾರಿ ಇಡಿ ಸುತ್ತು ಬರುವುದು.) ಬಡಗುತಿಟ್ಟಿನಲ್ಲಿ, ಉ.ಕನ್ನಡ ತಿಟ್ಟಿನಲ್ಲಿ ಸಾಂಪ್ರದಾಯಿಕವಾಗಿ ಇರಲಿಲ್ಲ. ಈಗ ಕ್ವಚಿತ್ತಾಗಿ, ವಿಶೇಷತಃ ಪ್ರವೇಶದ ಕುಣಿತಕ್ಕೆ ಬಳಕೆಯಿದೆ.

ಲಾಡಿ: ಬಟ್ಟೆಯ, ಜರಿಯ ಪಟ್ಟಿ ಅಥವಾ ನೂಲಿನ ಹುರಿ; ನವಾರು.

1. ಮುಂಡಾಸಿನ ಲಾಡಿ. ಮುಂಡಾಸು, ಪಗಡಿಗಳ ಅಟ್ಟೆಗಳು ಒತ್ತಿಕೊಂಡು ಆಕಾರ ಬದ್ಧವಾಗಿ ನಿಲ್ಲುವಂತೆ ಕಟ್ಟುವ ಹಗ್ಗ.

2. **ಜರಿಲಾಡಿ.** ಮುಂಡಾಸು, ಪಗಡಿ, ಶಿಖೆಗಳಿಗೆ ಸುತ್ತುವ ಜರಿ ಕಂಬಿ.

3. ಸೊಂಟಕ್ಕೆ, ಕಸೆಯ ಮೇಲಿನಿಂದ ಬಿಗಿಯುವ ಹಗ್ಗ. ಕಚ್ಚೆಯ ಲಾಡಿ. **ಕಸೆಲಾಡಿ.**

4. ಕಸೆ. ದಗಲೆ ಅಂಗಿಗಳಲ್ಲಿ ಗುಂಡಿಗಳ ಬದಲು ಇರುವ ಹಗ್ಗಗಳು.

ಲಾಲಿ ಕುಣಿತ (ಉ./ಬ.): ಪ್ರವೇಶ ನೃತ್ಯಕ್ಕೆ ಪೂರ್ವಭಾವಿಯಾಗಿ ಜರಗುವ ಕುಣಿತ. ಮುಂಡಾಸು ವೇಷ, ಬಣ್ಣದ ವೇಷಗಳು ಪ್ರವೇಶಕ್ಕೆ ಮೊದಲು, ಪಂಜುಗಳನ್ನು ಹಿಡಿದು, ರಂಗಸ್ಥಳದ ಹಿಂದೆ, ಸ್ವಲ್ಪ ದೂರದಿಂದ ದೊಡ್ಡ ಹಜ್ಜೆ ಹಾಕುತ್ತ ಬರುವುದು. ತ್ರಿವುಡೆ ತಾಳದ ಕುಣಿತ.

ಲಾಲಿ ಪದ : 1. ಲಾಲಿ ಕುಣಿತದಲ್ಲಿ ಹಾಡುವ ಸೊಲ್ಲು. ಲಾಲಿ ಹೋಂ ಲಾಲಿ ಎಂಬುದನ್ನೆ ಆವರ್ತಿಸುತ್ತ ಹೋಗುವರು.

2. 'ಲಾಲಿ ಲಾಲಿ' ಎಂಬ ಉಲ್ಲೇಖ ಬರುವ ಪದ್ಯಗಳು. ಸ್ತುತಿ, ಜೋಗುಳ ಮೊದಲಾದ ಸಂದರ್ಭಗಳಲ್ಲಿ ಬರುತ್ತವೆ. ಉದಾ– ಪಕ್ಷಿ ವಾಹನ ದೇವ। ಪರಮ ಪುರುಷ ಲಾಲಿ॥ - (ಸಭಾಲಕ್ಷಣ)

ಲಾಲಿ ಹೋಂ ಲಾಲಿ : ಲಾಲಿ ಕುಣಿತಕ್ಕೆ ಹಿನ್ನೆಲೆಯಾಗಿ, ಭಾಗವತರು ಹೇಳುವ ತತ್ಕಾರ. ಅದಕ್ಕೆ ಸರಿಯಾಗಿ ಹಿಮ್ಮೇಳದ ಬಡಿತ. 'ಲಾ। ಲಿ ಹೋಂ। ಲಾಲಿ...'
X
ಎಂಬುದಕ್ಕೆ ಸುಮಾರಾಗಿ 'ತೈದತ್ತೊಂ– ತೈತ।' ಎಂದು ತ್ರಿವುಡೆ ತಾಳದ ಬಡಿತವಿರುತ್ತದೆ. 'ತೈದ।' ಎಂಬುದು ಎತ್ತುಗಡೆ. 'ತ್ತೊಂ' ಎಂಬಲ್ಲಿ ತಾಳ ಆರಂಭ.

ಲೇಪಾಕ್ಷಿ (ಮೂ.) : ಮೂಡಲಪಾಯ ಬಯಲಾಟಗಳ ಹಾಡುಗಾರಿಕೆಯಲ್ಲಿನ ಒಂದು ಒಳ ಶೈಲಿ. ಯಕ್ಷಗಾನ ಸಂಗೀತ ಶೈಲಿಯ ಒಂದು ಪ್ರಭೇದ. ಪ್ರಾಯಃ ಆಂಧ್ರದ ಲೇಪಾಕ್ಷಿ ಕ್ಷೇತ್ರದ ಪ್ರದೇಶದಿಂದ ಬಂದುದು.

ವ

ವಚನ : ಪ್ರಸಂಗದ ಮಧ್ಯೆ, ವಿಶೇಷತಃ ಸನ್ನಿವೇಶಗಳ ಮತ್ತು ಪಾತ್ರಗಳ ನಡುವೆ ಒಂದು ಕೊಂಡಿಯಂತೆ ಬರುವ ಪದ್ಯಗಂಧಿ ಗದ್ಯ–

ಉದಾ: ''ಈ ಪ್ರಕಾರ ಆ ರೋಮಪಾದ ನರೇಶ್ವರನಲ್ಲಿ ಋಷ್ಯಶೃಂಗ ಮುನೀಶ್ವರಂ ಬಂದಿಹನ್ನವನ ನೀನೀಕ್ಷಣದಿಂ ಕರೆಸೆಂದನು.''

(ಪುತ್ರಕಾಮೇಷ್ಟಿ)

''ಇಂತೆಂದು ಜಾನಕಿ ನುಡಿಯಲಾ ರಾಮಸೇವಕಂ ಹನುಮಂತಂ ಏನೆಂದನು ಎಂದರೆ...''

(ಉಂಗುರ ಸಂಧಿ).

ವಜ್ರಾಯುಧ : ದೇವೇಂದ್ರನ ಕೈಯಲ್ಲಿರುವ ಆಯುಧ. ಗದೆಯಲ್ಲೆ ಸ್ವಲ್ಪ ವ್ಯತ್ಯಸ್ತರೂಪ. ಗದೆಯನ್ನೆ ಬಳಸುವುದೂ ಇದೆ.

ವನಮಾಲೆ (ತೆ.) : ವಿಷ್ಣು, ಕೃಷ್ಣವೇಷಗಳ ಕೊರಳಿಗೆ ಹಾಕುವ ತುಳಸೀಮಾಲೆ. ಸೊಪ್ಪಿನ ಮಾಲೆಯನ್ನು ತುಳಸಿಮಾಲೆಯ ಭಾವದಲ್ಲಿ ಹಾಕುವರು. ಪ್ರವೇಶದ ಒಂದು ದೃಶ್ಯಕ್ಕೆ ಮಾತ್ರ ತೊಡುವ ಸಂಪ್ರದಾಯವಿದ್ದಿತು. ಇದು ಐಚ್ಛಿಕ.

ವರಕ : ಒಪ್ಪ, ಬೇಗಡೆ, ಬಿಂಗದ ಹುಡಿ.

ವರಹ ಪಾಲು (ಉ.) : ಆಟಕ್ಕೆ ಸಲ್ಲುವ ವೀಳ್ಯದ ಹಣವನ್ನು (ಸಂಭಾವನೆ) ಹಂಚುವ ಒಂದು ಹಳೆ ಪದ್ಧತಿ. ಇದರಲ್ಲಿ ಒಟ್ಟು ಹಣದಲ್ಲಿ ಇಂತಿಂತಹವರಿಗೆ ಇಂತಿಷ್ಟು ಸಲ್ಲಬೇಕೆಂದು ಲೆಕ್ಕವಿದ್ದು, ಒಂದು ಬಗೆಯ ನ್ಯಾಯಬದ್ಧವಾದ ಹಂಚುವಿಕೆಯ ಸಂಪ್ರದಾಯವಾಗಿದೆ. ವರಹ ಪಾಲಿನ ಕ್ರಮ ಸುಮಾರಾಗಿ ಹೀಗಿದೆ : ಇಲ್ಲಿ ವರಹ ಎಂದರೆ ಅಂಶ ಎಂದು ಅರ್ಥ. ಈ ವರಹ ಎಂಬುದರ ಮೌಲ್ಯವು, ಒಟ್ಟು ವೀಳ್ಯದ ಮೊತ್ತದ ಮೇಲೆ ಅವಲಂಬಿಸಿರುತ್ತದೆ. – ಆಟಕ್ಕೆ ನಿಶ್ಚಿತವಾದ ಹಣದಿಂದ ಒಂದು ಪಾಲನ್ನು ಬಣ್ಣದ ಖರ್ಚು, ಸಾಗಾಟ, ಹೊರೆಯಾಳುಗಳ ಕೂಲಿ, ಪಂಚಕಜ್ಜಾಯದ ಖರ್ಚು ಮೊದಲಾದುವುಗಳಿಗೆ ತೆಗೆದಿರಿಸುವುದು. ಈ ಪೈಕಿ ಪಂಚಕಜ್ಜಾಯದ ಹಣವೆಂಬುದು ಒಂದು ಮೀಸಲು ನಿಧಿ. ಇದು ಎಲ್ಲರಿಗೆ ಸೇರಿದ್ದು (Common fund). ಇದನ್ನು ತಿರುಗಾಟದ ಕೊನೆಯಲ್ಲಿ, ಸೇವೆ ಆಟದಂದು ಪಂಚಕಜ್ಜಾಯ ಮಾಡಿಸಿ, ಎಲ್ಲರೂ ಹಂಚಿಕೊಳ್ಳುವ ಬಗ್ಗೆ ಬಳಸುವುದು.

– ಉಳಿದ ಹಣವನ್ನು ವರಹ ಪಾಲಿನ ಆಧಾರದಲ್ಲಿ ಹಂಚುವುದು. ಇದರಲ್ಲಿ ಇಡಿಪಾಲು, ಮುಕ್ಕಾಲು ಪಾಲು, ಅರ್ಧಪಾಲು ಎಂದು ಮೂರು ವರ್ಗ. ಈ ವರ್ಗೀಕರಣವು ಕಲಾವಿದನ ಹಿರಿತನ, ಸ್ಥಾನಗಳಿಗೆ ಅನುಸರಿಸಿ ಇರುತ್ತದೆ. ಉದಾ: ಭಾಗವತರು, ಮುಖ್ಯ ವೇಷಧಾರಿ, ಮುಖ್ಯ ಸ್ತ್ರೀವೇಷಧಾರಿ, ಹಾಸ್ಯಗಾರ ಇವರು ಇಡಿ ಪಾಲಿನವರು. ಇಡಿಪಾಲು ಎಂದರೆ ಆರು ವರಹ, ಮುಕ್ಕಾಲು ಪಾಲು ಎಂದರೆ ನಾಲ್ಕೂವರೆ ವರಹ, ಅರ್ಧಪಾಲು ಎಂದರೆ ಮೂರು ವರಹ ಎಂದು ಸಂಕೇತ.

ಈ ಕ್ರಮದಂತೆ ಪಾಲು ಹಂಚುವ ವಿಧಾನವನ್ನು ಹೀಗೆ ಉದಾಹರಿಸಬಹುದು :

ಒಂದು ಆಟದ ವೀಳ್ಯದ ಹಣ ರೂ. 140 ಎಂದಿರಲಿ. ಈ ಪೈಕಿ ಖರ್ಚುಗಳಿಗೆ ತೆಗೆದಿರಿಸುವ ಹಣ ರೂ. 20, ಉಳಿಕೆ ಹಣ ರೂ. 120 ಆಗುತ್ತದೆ. ನಮ್ಮ ಮೇಳದಲ್ಲಿ ಇಡಿ ಪಾಲಿನವರು ಐದು ಜನ, ಮುಕ್ಕಾಲು ಪಾಲಿನವರು ನಾಲ್ಕು ಜನ, ಅರ್ಧಪಾಲಿನವರು ನಾಲ್ಕು ಜನ ಇದ್ದಾರೆ ಎಂದು ಭಾವಿಸಿದರೆ, ಮೊದಲು ಹೇಳಿದ ಲೆಕ್ಕದಂತೆ

6 x 5 = 30

4 1/2 x 4 = 18

3 x 4 = 12 – ಒಟ್ಟು ಸೇರಿ ಅರುವತ್ತು 'ವರಹ'ಗಳಾಗುತ್ತವೆ. ಮೇಲೆ ಹೇಳಿದ 120 ರೂ.ಗಳನ್ನು ಅರುವತ್ತರಿಂದ ಭಾಗಿಸಿದರೆ ಒಂದು ವರಹವೆಂದರೆ ಎರಡು ರೂಪಾಯಿಗಳಾಗುತ್ತವೆ. ಇಡಿಪಾಲಿನವರಿಗೆ ಹದಿನೆರಡು, ಮುಕ್ಕಾಲು ಪಾಲಿನವರಿಗೆ ಒಂಬತ್ತು, ಅರ್ಧಪಾಲಿನವರಿಗೆ ಆರು ರೂ.ಗಳು ಸಿಗುತ್ತವೆ.

ಇದಕ್ಕೆ ಸಂವಾದಿಯಾದ ಪಾಲಿನ ಕ್ರಮವು ದಕ್ಷಿಣ ಕನ್ನಡದ ತೆಂಕು, ಬಡಗು ತಿಟ್ಟುಗಳ ಮೇಳಗಳಲ್ಲೂ ಹಿಂದೆ ಬಳಕೆಯಲ್ಲಿದ್ದಿತೆಂದು ತಿಳಿದು ಬರುತ್ತದೆ.

ವರ್ಣತಗಡು: ವೇಷಭೂಷಣಗಳ ಪ್ರಧಾನ ಅಲಂಕರಣ ಸಾಮಗ್ರಿ. ಲೋಹದ ಬಿಳಿ ಮತ್ತು ಹಳದಿ ಬಣ್ಣದ ತೆಳುವಾದ ತಗಡು. ಕೆಂಪು, ಹಸುರು, ನೀಲಿ ಬಣ್ಣಗಳದೂ ಇದೆ.

ವಲ್ಲಿ: 1. ಹೆಗಲವಲ್ಲಿ ಅರ್ಥಾತ್ ಸೋಗೆವಲ್ಲಿ.
2. ತೆರೆವಲ್ಲಿ. ತೆರೆಬಟ್ಟೆ. ತೆರೆ ಸೀರೆ.
3. ಬಡಗುತಿಟ್ಟಿನ ಚೌಕುಳಿ ಕಸೆಸೀರೆಗೆ ತೆಂಕುತಿಟ್ಟಿನಲ್ಲಿ ಕೆಲವರು ಹೇಳುವ ಹೆಸರು.

ವಾಲಿಗ್ರಂಥ: ವಾಲಿವಧೆ ಪ್ರಸಂಗದಲ್ಲಿ, ವಾಲಿಯು ರಾಮನನ್ನು ನಿಂದಿಸುವ ಸಂದರ್ಭದ ಹದಿನೈದು ಭಾಮಿನಿಷಟ್ಪದಿಗಳು ಹಾಗೂ ಈ ಪದ್ಯಗಳ ಅರ್ಥ.

ಇವು ಮೂಲಪ್ರಸಂಗದಲ್ಲಿ ಇಲ್ಲದ ಪದ್ಯಗಳು. ತೊರವೆ ರಾಮಾಯಣದಿಂದ ತೆಗೆದು ಪ್ರಸಂಗಗಳಿಗೆ ಪ್ರಕ್ಷೇಪಿಸಿದ ಭಾಗವಿದು.

ವಾಲಿಸುಳಿ: ವಾಲಿಯ ಮುಖದ ಚುಟ್ಟಿ. ಯಮನಿಗೂ ವಾಲಿಗೂ ಚುಟ್ಟಿಗಳ ವಿನ್ಯಾಸ ಒಂದೇ. ಆದರೆ, ವಾಲಿಯ ಚುಟ್ಟಿಯನ್ನು ಹತ್ತಿಯ ಸುರುಳಿಯಿಂದ ಇಡುತ್ತಾರೆ, ಹಿಟ್ಟಿನಿಂದಲ್ಲ.

ವಾಲೆಕಾರ: ಕಟ್ಟುಹಾಸ್ಯ ಪ್ರಸಂಗದಲ್ಲೂ ಬರುತ್ತದೆ. ಓಲೆ ತರುವವನು. ಓಲೆದೂತ.

ವಾಲೆಕುಚ್ಚು: ಕುಚ್ಚಿನ ಓಲೆ. ಸ್ತ್ರೀವೇಷದ ಸಾಂಪ್ರದಾಯಿಕ ಕರ್ಣಾಭರಣ. ಕರ್ಣಪಾತ್ರದ ಇನ್ನೊಂದು ರೂಪ. ಕಿವಿಯನ್ನು ಮುಚ್ಚಿ ನಿಲ್ಲುತ್ತದೆ. ಇದರ ಕೆಳಗಿನ ಭಾಗಕ್ಕೆ ಮುತ್ತಿನ ಕುಚ್ಚು ಇರುತ್ತದೆ, ಕೊಪ್ಪು, ಬುಗುಡಿ, ಗಿಳಿಯೋಲೆ– ಇವು ಇದರ ಬೇರೆ ಬೇರೆ ಭಾಗಗಳ (ಎಂದರೆ ಸ್ಥಾನಗಳ) ಹೆಸರುಗಳು. ಹಾಗಾಗಿ ಇದು ಕಿವಿ ಎಂದೇ ಭಾವ. ನೋಡಿ: ಓಲೆಕುಚ್ಚು.

ವಿಜಯ (ತೆ.): ಕೃಷ್ಣನ ಸಖ. ಮಕರಂದನಂತೆಯೇ ಇನ್ನೊಂದು ಪಾತ್ರ. ಹಾಸ್ಯವೇಷ.

ವಿನಾಯಕತಾಳ: ಗಣಪತಿ ಕೌತುಕ ನೃತ್ಯಕ್ಕೆ ಬಳಸುತ್ತಿದ್ದರು ಎನ್ನಲಾಗುವ ನೂರೆಂಟು ಮಾತ್ರೆಗಳ ಒಂದು ತಾಳ.


ವಿಶ್ವರೂಪ (ತೆ.): ವಿಶ್ವರೂಪ ದರ್ಶನದ ವಿಶಿಷ್ಟ ಕಲ್ಪನೆ, ವಿಶ್ವರೂಪ ತೋರಿಸಬೇಕಾದ ವೇಷ (ದೇವಿ, ಕೃಷ್ಣ, ವಿಷ್ಣು ಇ.) ರಥದ ಮೇಲೆ ನಿಂತುಕೊಳ್ಳುತ್ತದೆ. ಆಗ ಹಿಂದಿನಿಂದ ಚೌಕಿಯಲ್ಲಿರುವ ಆಯುಧಗಳನ್ನು, ಕಿರೀಟಗಳನ್ನು ಎಲ್ಲ ತಂದು ಆ ವೇಷದ ಮೈಯ ಸುತ್ತ ಪ್ರಭಾವಳಿಯಂತೆ ಹಿಡಿಯುತ್ತಾರೆ. ಹಿಡಿಯುವ ಕೈಗಳು ಕಾಣಬಾರದು.

ವಿಷಮ/ವಿಷಮ ಪೆಟ್ಟು: ವಿಷಮಲಯ (ನೋಡಿ: ಇದಿರುಲಯ)ದಲ್ಲಿ ಬಾರಿಸುವ ಚೆಂಡೆ, ಮದ್ದಲೆ ಅಥವಾ ಜಾಗಟೆಯ ಪೆಟ್ಟು. ತಾಳವಿನ್ಯಾಸದ ಒಂದು ಜಾಣ್ಮೆ, ಮನೋಧರ್ಮದ ಬಡಿತ. ಸಂಬಂಧಿತ ಘಾತಕ್ಕೆ ಅಥವಾ ಸ್ಥಾನಕ್ಕೆ ಹಿಂದೆ ಅಥವಾ ಮುಂದೆ ಬರುವಂತೆ ಬಡಿಯುವುದು, ಸ್ಥಾನ ತಪ್ಪಿಸುವುದು, ವಕ್ರಗತಿ, ಒಂದು ತಾಳದ ಬಡಿತವನ್ನು ಇನ್ನೊಂದಕ್ಕೆ ಸರಿಬರುವಂತೆ ಹೊಂದಿಸಿ ಬಾರಿಸುವುದು– ಇವೆಲ್ಲ ವಿಷಮಗಳು, ವಿಷಮ ಪೆಟ್ಟುಗಳು. ನೃತ್ಯದಲ್ಲೂ ಇಂತಹದೇ ಪ್ರಯೋಗಗಳಿರುತ್ತವೆ. ವಿಷಮವು ಕಲಾವಿದನ ಜಾಣ್ಮೆಯೆಂದೂ ಪ್ರಾವೀಣ್ಯವೆಂದೂ ಪರಿಗಣಿತವಾಗುತ್ತದೆ. ಹೊಂದಾಣಿಕೆ ಇಲ್ಲದಿದ್ದರೆ, ರಂಗದಲ್ಲಿ ಇದು ವಿಷಮಕ್ಕೆ ಕಾರಣವಾಗುವುದುಂಟು.

ವಿಷಮಲಯ: ಸಹಜ ಲಯಕ್ಕೆ ಭಿನ್ನವಾದ ಲಯ. ವಕ್ರನಡೆ. ನೋಡಿ: ವಿಷಮ, ಇದಿರುಲಯ.


ವೀರಕಚ್ಚೆ: ಎರಡು ಭಾಗಗಳಾಗಿ ಉಡುವ ವೀರಕಚ್ಚೆ.
1. ಸೈಕಲ್ ಕಚ್ಚೆ.
2. ಕಸೆ ಕಚ್ಚೆ, ಕಸೆ ಸೀರೆಯ ಬದಿಗಳನ್ನು ಮುಂದಿನಿಂದ ಹೆಗಲಮೇಲೆ ಹಾಕಿ, ಕಸೆಉಟ್ಟ ಅನಂತರ, ಅವುಗಳನ್ನು ಸೊಂಟದಿಂದ ಕೆಳಗೆ ಒಟ್ಟಿಗೆ, ಸೊಂಟದಿಂದ ಮೊಣಕಾಲಿನವರೆಗೆ ಇಳಿಸಿ ಬಿಟ್ಟಾಗ ಸುಮಾರಾಗಿ ವಜ್ರಾಕೃತಿಯಾಗುತ್ತದೆ. ಸೈಕಲ್ ಕಚ್ಚೆಯ ಪರಿವರ್ತಿತ ರೂಪ. ಹೆಚ್ಚು ...ಾರ ಶುದ್ಧ. ಕಸೆ.

ವೀರಕಸೆ (...): ಸೊಂಟದ ಮುಂದೆ, ಎರಡುಕಾಲಗಳ ಮಧ್ಯೆ ಇಳಿದು ನಿಲ್ಲುವಂತೆ




ವೀರಗಸೆ

ವೀರಗಸೆ, ಮಾರುಮಾಲೆ



ಸರಗಳು




ಗುಂಡು ಸರ




ಕನ್ನಡಿ ಸರ



ಕನ್ನಡಿ ಸರ



ಹವಳ ಸರ



ಮೋಹನಮಾಲೆ



ಏಕಾವಳಿ

ಕಟ್ಟುವ ದೀರ್ಘವೃತ್ತಾಕಾರದ ಆಭರಣ. ಒತ್ತೆನಾಕು. ಮುನ್ನಿ. ಇಳಿಗುಂಜಿ.

ಇದು ಬಟ್ಟೆಯ ಮೆತ್ತೆಗೆ ಮಣಿ, ಹಲ್ಲೆಗಳನ್ನು ಹೊಲಿದು ತಯಾರಿಸುವಂತಹದು. ಸುತ್ತ ಉಣ್ಣೆಯ ಅಟ್ಟೆಯೂ, ಕೆಳಗೆ ಗೊಂಡೆಯೂ ಇರುತ್ತವೆ. ಇದರ ಆಚೀಚೆ ಮಾರುಮಾಲೆ (ಸಂಪಿಗೆ ಸರ) ಗಳಿರುತ್ತವೆ. ತುಸು ಮೇಲೆ ಒಡ್ಯಾಣ (ಡಾಬು) ಕಟ್ಟುತ್ತಾರೆ.

ಹೆಣ್ಣು ಬಣ್ಣದ ವೇಷಗಳಿಗೆ ಇದನ್ನು ಕೊರಳಾರವಾಗಿ ಕಟ್ಟುತ್ತಾರೆ. ಪೂರ್ವರಂಗದಲ್ಲಿ ಪೂಜೆಗೆ ಗಣಪತಿ ಕಿರೀಟದ ಮುಂದೆ ಸೊಂಡಿಲಾಗಿ ಕಲ್ಪಿಸಿ ಇಳಿಸುತ್ತಾರೆ.

ವೀರಗಸೆ = ನೋಡಿ : ವೀರಕಸೆ.

ವೀರಮದ್ದಲೆ = ನೋಡಿ : ಏರುಮದ್ದಲೆ.

ವೀರರಸ : ವೀರ, ರೌದ್ರ, ರಸಗಳು ಸೇರಿದ ಕಲ್ಪನೆ. ಒಡ್ಡೋಲಗ, ಯುದ್ಧ, ಪ್ರಯಾಣಗಳೂ, ಉತ್ಸಾಹ, ಭಯ, ಉಗ್ರತೆ, ಭಯಾನಕತೆ, ಭಾವಗಳೂ ಸೇರಿದ ಸಡಿಲವಾದ ಪರಿಕಲ್ಪನೆ.

ವೀರರಸದ ಹಾಡುಗಾರಿಕೆ ಏರುದನಿಯಲ್ಲಿ, ತೀವ್ರವಾಗಿರಬೇಕು. ಇದರಲ್ಲಿ ಪಾತ್ರಾನುಗುಣ ಮತ್ತು ಸನ್ನಿವೇಶದ ಹದಕ್ಕೆ ಅನುಸರಿಸಿ ವ್ಯತ್ಯಾಸಗಳಿವೆ.

ವೀರಾವೇಶ : 1. ಸಾಮಾನ್ಯ ಅರ್ಥದಲ್ಲಿ ವೀರ ಆವೇಶ.

2. (ತೆ.) ಯುದ್ಧದಲ್ಲಿ, ಸೋಲುವ ವೇಷವು (ಮುಖ್ಯವಾಗಿ ಪುಂಡುವೇಷ), ಯುದ್ಧ ಕುಣಿತದ ಕೊನೆಗೆ ಮುಂದೆ ಬಗ್ಗಿ, ಕೈಕಾಲುಗಳನ್ನು ಜೋರಾಗಿ ಆಡಿಸುತ್ತ, ತಲೆಯನ್ನು ಕೆಳಗೆ ಮೇಲೆ ಆಡಿಸುತ್ತ ಕುಣಿದು, ಪರಾಕ್ರಮ ತೋರಿಸುವುದು. ವೀರಾವೇಶ ಕುಣಿತ.

ವೀಳ್ಯ : 1. ಆಟ ಆಡಿಸುವವನು ಮೇಳಕ್ಕೆ ಕೊಡುವ ಸಂಭಾವನೆಯ ಮೊತ್ತ. ಇದನ್ನು ಬೆಳಗ್ಗೆ ಮಂಗಲಪದ್ಯವಾದೊಡನೆ, ರಂಗದಲ್ಲಿ ಪಡೆದು (ಬಡಗುತಿಟ್ಟಿನಲ್ಲಿ ಸ್ತ್ರೀವೇಷದವನು, ತೆಂಕುತಿಟ್ಟಿನಲ್ಲಿ ಹಾಸ್ಯಗಾರನು) ಭಾಗವತರ ಕೈಗೆ ಕೊಡಬೇಕು. ಅವರಿಂದ ಯಜಮಾನನಿಗೆ ಸಲ್ಲುವುದು. ವೀಳ್ಯ ಪಡೆಯುವಾಗ ಪಡೆಯುವವರು ಆಟ ಆಡಿಸಿದವರಿಗೆ ಶುಭ ಹಾರೈಸುವುದಿದೆ.

ನೋಡಿ : **ದಕ್ಕಿತೋ ದಕ್ಕಿತು. ಆಹೋಹೊ.**

2. ಕಲಾವಿದರಿಗೆ ಬೆಳಗ್ಗೆ, ಮತ್ತು ಸಂಜೆ ಆಟ ಆಡಿಸುವವನು ಕೊಡಬೇಕಾದ ವೀಳ್ಯ ಸಾಮಗ್ರಿ. ವೀಳ್ಯದ ಪಟ್ಟಿ.

ವೆಳ್ಳೂರು ಗೆಜ್ಜೆ = ನೋಡಿ : ಎಳ್ಳೂರ ಗೆಜ್ಜೆ.

ವೇಷ : 1. ಪಾತ್ರ. ಉದಾ : ಅರ್ಜುನನ ವೇಷ.

2. ಪಾತ್ರಜಾತಿ – ಬಣ್ಣದವೇಷ, ಇದಿರುವೇಷ.

3. ಬಣ್ಣಗಾರಿಕೆ. ಉದಾ : "ನಾನಿನ್ನು ವೇಷಕ್ಕೆ ಕುಳಿತುಕೊಳ್ಳುತ್ತೇನೆ."

4. ಬಣ್ಣ, ಜವುಳಿ, ಆಭರಣ ಇತ್ಯಾದಿಗಳೆಲ್ಲವುಗಳ ಒಟ್ಟು ಸರಕು.

ವೇಷಧಾರಿ : ವೇಷ ಧರಿಸುವವನು. ವೃತ್ತಿಕಲಾವಿದ.

ವೈಷ್ಣವನಾಮ : ಹಣೆಯ ಮೇಲೆ ಬರೆಯುವ ಉದ್ದ ನಾಮ. ಗೂಟನಾಮ. ಇದರಲ್ಲಿ ವೈಷ್ಣವ, ಶ್ರೀವೈಷ್ಣವ, ಮಾಧ್ವ ಸಂಪ್ರದಾಯದ ಪ್ರಭಾವಗಳು ಕಾಣುತ್ತವೆ. ನೋಡಿ : ಉದ್ದನಾಮ.

ಶ

ಶಂಖ ಚಕ್ರಮುದ್ರೆ : 1. ಶಂಖಮುದ್ರೆ ಮತ್ತು ಚಕ್ರಮುದ್ರೆ.

2. ಗಲ್ಲದ ಮೇಲ್ಭಾದಿಯಲ್ಲಿ, ತುದಿಕಣ್ಣಿನ ಕೆಳಗೆ ಬರೆಯುವ ಶಂಖ ಚಕ್ರ ಸಮನ್ವಿತ ಮುದ್ರೆ. ಚಕ್ರಾಕೃತಿ ಬರೆದು ಅದಕ್ಕೆ ಹಿಂದಿನಿಂದ ಬಾಲದಂತೆ ಶಂಖ ಮುದ್ರೆ ಜೋಡಣೆ.

ಶನಿ ಕತೆ/ಶನಿ ಮಹಾತ್ಮೆ : ತಾಳಮದ್ದಲೆ ಪ್ರಕಾರದ ಒಂದು ರೂಪ. ಹರಕೆ ರೂಪದಲ್ಲಿ ಆಡಿಸುವ ತಾಳಮದ್ದಲೆ. ಶನಿ ಕತೆ ಹರಕೆ. ಇದು ಮಂಗಳೂರಿನಿಂದ ಭಟ್ಕಳದ ತನಕ ಕರಾವಳಿಯ ಅಂಚಿನ ಉದ್ದಕ್ಕೂ, ಗಟ್ಟದ ಮೇಲೆ ಶಿರಸಿ, ಸಿದ್ದಾಪುರ ಪ್ರದೇಶಗಳಲ್ಲೂ ಬಳಕೆಯಲ್ಲಿದೆ. ಇದರ ಪ್ರಯೋಗದಲ್ಲಿ ಅಲ್ಪಸ್ವಲ್ಪ ಪ್ರಾದೇಶಿಕ ವ್ಯತ್ಯಾಸಗಳಿವೆ. ಶನಿ ಕತೆ ಅಥವಾ "ಶನಿ ಮಾಹಾತ್ಮ್ಯ"ವೆಂಬ ಪ್ರಸಂಗದ ಪ್ರದರ್ಶನವಿದು.

ಹರಕೆ ಹೊತ್ತವರು, ಶನಿಕತೆ ಮಾಡಿಸುವುದಾಗಿ ಸಂಕಲ್ಪಿಸಿ, ಅದನ್ನು ನಡೆಸಿಕೊಡುವ ಮೇಳ (ತಂಡ)ಕ್ಕೆ ಆಹ್ವಾನ ಕೊಡುತ್ತಾರೆ. ವ್ಯಕ್ತಿಶಃ ಕಲಾವಿದರನ್ನು ಆಹ್ವಾನಿಸಿ ಮಾಡುವುದೂ ಇದೆ. ಕುಂದಾಪುರ, ಭಟ್ಕಳ ಪ್ರದೇಶದಲ್ಲಿ ಶನಿ ಕತೆ ನಡೆಸುವ ಹತ್ತಾರು ಮೇಳಗಳಿವೆ. ಮಂಗಳೂರು ಕರಾವಳಿಯಲ್ಲು ಇಂತಹ ತಂಡಗಳಿವೆ. ಈ ಮೇಳಕ್ಕೆ ನಿಶ್ಚಿತ ಸಂಭಾವನೆ, ಊಟ, ಉಪಾಹಾರ, ಮತ್ತು ಸಂಬಂಧಪಟ್ಟ ಪೂಜಾದ್ರವ್ಯಗಳನ್ನು ನೀಡಬೇಕು. ಹರಕೆ ಹೊತ್ತುವರು ಕಾರ್ಯಕ್ರಮಕ್ಕೆ ಒಂದು ವಾರ ಮೊದಲಿನಿಂದ ಮದ್ಯ, ಮಾಂಸ ತ್ಯಜಿಸಿ 'ಶುದ್ಧ'ದಲ್ಲಿರ ಬೇಕೆಂಬುದು ನಿಯಮ.

ಅಂಗಳಕ್ಕೆ ಚಪ್ಪರ ಹಾಕಿ, ಅದರ ಮಧ್ಯದಲ್ಲಿ ಬಾಳೆಗಿಡದ ಮಂಟಪಕಟ್ಟಿ, ಅಲಂಕರಿಸಿ ಅದರಲ್ಲಿ

ಶನಿ ದೇವರ, ಮತ್ತಿತರ ಚಿತ್ರಗಳನ್ನು ಇಡುತ್ತಾರೆ. ದೊನ್ನೆಗಳಲ್ಲಿ ನವಧಾನ್ಯಗಳನ್ನು ನವಗ್ರಹಗಳ ಪ್ರೀತ್ಯರ್ಥವಾಗಿಟ್ಟು, ಮಧ್ಯದಲ್ಲಿ ಕರಿಎಳ್ಳು ರಾಶಿ ಹಾಕಿ, ಅದರಲ್ಲಿ ಕುದುರೆ ಲಾಳವನ್ನಿಟ್ಟು ಅದರ ಮೇಲೆ ಎಳ್ಳೆಣ್ಣೆಯ ದೀಪವನ್ನಿಡುವರು. ಇದು ಶನಿದೇವರ ಪ್ರತೀಕ. ಆಚೀಚೆ ಎರಡು ದೀಪ ಗಳಿರಬೇಕು. ಶನಿ ಕತೆ ಮೇಳಗಳಿರುವಲ್ಲಿ ಈ ಸಿದ್ಧತೆಗಳನ್ನೆಲ್ಲ ಮೇಳದವರೇ ಮಾಡುತ್ತಾರೆ.

ಶನಿ ಕಥಾಪ್ರಸಂಗವನ್ನು ನಿರ್ವಹಿಸುವ ಕ್ರಮ ಗಳಲ್ಲಿ ಮೂರು ಪದ್ಧತಿಗಳಿವೆ– ಒಂದನೆಯದು, ಪುರಾಣಪ್ರವಚನದಂತೆ ಪದ್ಯಗಳನ್ನು ಓದಿ ಅರ್ಥ ಹೇಳುವ ಕ್ರಮ. ಇದರಲ್ಲಿ ಅರ್ಥಹೇಳುವವನು ಒಬ್ಬನೇ. ಇನ್ನೆರಡು ಕ್ರಮಗಳು ತಾಳಮದ್ದಲೆ ಯವು. ಒಂದು ಕ್ರಮದಂತೆ, ಭಾಗವತನು, ಪದ್ಯ ಗಳನ್ನು ಯಕ್ಷಗಾನ ಧಾಟಿಯಲ್ಲಿ ಶ್ರುತಿ ಇಟ್ಟು ಹಾಡುತ್ತಾನೆ. ಕೈಯಲ್ಲಿ ತಾಳವಿರುತ್ತದೆ. ಹಿಮ್ಮೇಳ ವಾದ್ಯಗಳಿಲ್ಲ. ಅರ್ಥಗಾರಿಕೆಗೆ ಹಲವರು, ಪಾತ್ರ ಗಳಿಗನುಸರಿಸಿ ಇರುವರು. ಮತ್ತೊಂದು ಕ್ರಮ, ಹಿಮ್ಮೇಳ ವಾದ್ಯಗಳ ಸಹಿತ ಹಾಡುಗಾರಿಕೆ ಮತ್ತು ಅರ್ಥಗಾರಿಕೆ ಇರುವ ಪೂರ್ಣ ಪ್ರಮಾಣದ ತಾಳ ಮದ್ದಲೆ. ಶನಿ ಕತೆಯ ಈ ಮೂರು ಕ್ರಮಗಳು, ತಾಳಮದ್ದಲೆಯ ಬೆಳವಣಿಗೆಯ ಹಂತಗಳನ್ನು ಸೂಚಿಸುತ್ತಿರಬಹುದೆ?– ಇದಲ್ಲದೆ, ಪದ್ಯ ಗಳನ್ನೆಲ್ಲ ಭಜನೆಯಂತೆ ಹಾಡಿ, ಅನಂತರ ಒಬ್ಬನು ಕಥೆ ಹೇಳುವ ಕ್ರಮವೂ ಕೆಲವೆಡೆ ರೂಢಿಯಿದೆ.

ಕಥೆಯು ಹೆಚ್ಚಾಗಿ ಇಡಿಯ ರಾತ್ರಿ ನಡೆಯುತ್ತದೆ. ಪ್ರತಿಯೊಂದು ಅಧ್ಯಾಯ ಮುಗಿದಾಗ ಹಣ್ಣುಕಾಯಿ ಅರ್ಪಿಸಿ ಆರತಿ ಮಾಡಬೇಕು. ವಿಕ್ರಮಾದಿತ್ಯನ ಕೈಕಾಲು ಕಡಿಯುವ ಸನ್ನಿವೇಶಕ್ಕೆ ಬೂದುಗುಂಬಳ ಕಾಯಿ ಕಡಿಯಬೇಕು. ಇದನ್ನು ತಿನ್ನಬಾರದು. ಹೊಳೆ ಅಥವಾ ಸಮುದ್ರಕ್ಕೆ ಎಸೆಯಬೇಕು. ವಿಕ್ರಮಾದಿತ್ಯನಿಗೆ ಗಾಣಿಗನು ಆಶ್ರಯವಿತ್ತಾಗ ಮೇಳದವರಿಗೆ ಹಾಲು ಹಂಚುತ್ತಾರೆ. ಹೊಸ ಮಡಕೆಯಲ್ಲಿ ದನದ ಹಾಲು, ತುಪ್ಪ ಮತ್ತು ಜೇನು ಬೆರೆಸಿದ ''ಅಮೃತ'' ಎಂಬ ಮಿಶ್ರಣ ಬೆರೆಸಿಟ್ಟು, ಮಂಗಲವಾದ ಬಳಿಕ ಆಪ್ತೇಷ್ಟರ ಸಹಭೋಜನ ದಲ್ಲಿ ಇದನ್ನು ಹಾಕಿಕೊಂಡು ಉಣ್ಣುವುದು ವಿಧಿ.

ಕರಾವಳಿಯಲ್ಲಿ ಶನಿಕತೆಯಲ್ಲಿ ಅರ್ಥಧಾರಿ ಗಳಾಗಿರುವವರು, ಹೆಚ್ಚಿನವರು ಮೀನುಗಾರ ವರ್ಗದವರು (ಮೊಗವೀರ, ಮರಕಾಲ) ಇತರರೂ ಸೇರಿಕೊಳ್ಳುತ್ತಾರೆ. ಮಾಡಿಸುವವರೂ ಬ್ರಾಹ್ಮಣೇತರರೇ ಹೆಚ್ಚು.

ಶಿರಸಿ ಬಳಿಯ ಶಿಂಡ್ಲೆ ಎಂಬಲ್ಲಿ ಶನೀಶ್ವರ ದೇವಾಲಯವಿದೆ. ಅಲ್ಲೂ ಶನಿಕತೆ ಹರಕೆ ನಡೆಯುತ್ತದೆ. ಅಲ್ಲಿ ಪದ್ಯಗಳನ್ನು ಮೊದಲು ಹಾಡಿ, ಬಳಿಕ ಕಥಾ ಪ್ರವಚನ ನಡೆಸುವ ಕ್ರಮ ರೂಢಿಯಲ್ಲಿದೆ.

ಈ ಶನಿಕತೆ ನಡೆಸುವುದು ಶನಿವಾರದಂದು. ಇದು ಜರಗುವಲ್ಲಿ, ಇದನ್ನು ಆಡಿಸುವ ಮನೆ ಯವರಲ್ಲದೆ, ಸುತ್ತಣ ಭಕ್ತರೂ ಹರಕೆ, ಪೂಜೆ ಸಲ್ಲಿಸುವುದುಂಟು.

ಶನಿ ಕತೆ ತಾಳಮದ್ದಲೆಯಲ್ಲಿ ಸಂದರ್ಭೋಚಿತ ವಾಗಿ, ಒಬ್ಬನೇ ಎರಡು, ಮೂರು ಪಾತ್ರಗಳನ್ನು ನಿರ್ವಹಿಸುತ್ತಾನೆ. ಒಂದು ಪಾತ್ರವನ್ನು ಇಬ್ಬರು ನಿರ್ವಹಿಸಲೂಬಹುದು. ಆದರೆ, ಶನಿಯ ಪಾತ್ರ ಬದಲಿಸಬಾರದು.

ಶನಿ ಕತೆ ಮಾಡಿಸಿದರೆ ಕಷ್ಟ ನಿವಾರಣೆಯೆಂದು ನಂಬುಗೆ. ಈ ಆಚರಣೆ ಈಗಲೂ ಜನಪ್ರಿಯ ವಾಗಿದ್ದು, ಅದರ ನಿಯಮಗಳೆಲ್ಲ ಕಟ್ಟುನಿಟ್ಟಾಗಿ ಆಚರಿಸಲ್ಪಡುತ್ತವೆ.

ಶನಿ ಕತೆ ಮೇಳ: ಮೇಲೆ ಹೇಳಿದ ಶನಿ ಕತೆ ತಾಳಮದ್ದಲೆಗಳನ್ನು ಜರಗಿಸುವ ತಂಡ. ಶನಿ ಮಹಾತ್ಮೆ ಮೇಳವೆಂದೂ ಹೆಸರಿದೆ. ಹಾಡುಗಾರ ನೊಬ್ಬ ಹಿಮ್ಮೇಳ ವಾದಕರು ಇರಬಹುದು. ಇಲ್ಲದಿರಬಹುದು. ಆರೆಂಟು ಜನ ಅರ್ಥಧಾರಿ ಗಳಿರುತ್ತಾರೆ. ಇವರಿಗೆ ಸಂಭಾವನೆ ಮತ್ತು ಪೂಜೆಗೆ ಸಂಬಂಧಿಸಿದ ಧಾನ್ಯ ಮುಂತಾಗಿ ಕೊಡಬೇಕು. ಅದಕ್ಕೆ ಮೇಳದವರು ಪಟ್ಟಿಕೊಡುತ್ತಾರೆ. ಸಿದ್ಧತೆ, ಪೂಜೆಗಳನ್ನು ಇವರೇ ನಿರ್ವಹಿಸುವರು.

ಶಲ್ಲೆ: 1. ಶಾಲು. ಹೆಗಲವಲ್ಲಿ.
2. (ಬ.) ಕಿರೀಟ, ಮುಂಡಾಸು, ಕೇದಗೆ ಮುಂದಲೆಗಳಿಗೆ ತಲೆಯ ಮುಡಿಯಿಂದ ಸೊಂಟದ ವರೆಗೆ ಕಟ್ಟುವ ಶಲ್ಲೆ. ಇದನ್ನು ಮುಡಿಗೆ ಸಿಕ್ಕಿಸಿ, ಎರಡು ಬದಿಗಳನ್ನು ಸೊಂಟಕ್ಕೆ ಸಿಕ್ಕಿಸಿದಾಗ ಸುಮಾರಾಗಿ ತ್ರಿಕೋಣಾಕೃತಿಯಾಗುವುದು.

ಶಾಬಾ, ಬಾಲಾ (ತೆ.): ಶಾಭಾಸ್, ಭಲಾ, ಭಲೆ. ದೇವರ ಹೊಗಳಿಕೆ ಮತ್ತು ಆಟ ಆಡಿಸುವವರ ಹೊಗಳಿಕೆಯ ಸಂದರ್ಭಗಳಲ್ಲಿ ಹೇಳುವ ಶಬ್ದಗಳು. ಭಾಗವತರು ಉಲ್ಲೇಖಗಳನ್ನು, ಶ್ಲೋಕಗಳನ್ನು ಹೇಳುವಾಗ, ಹಾಸ್ಯಗಾರನು ಮಧ್ಯ ಭಾಲಾ, ಶಾಬಾ– ಎನ್ನುತ್ತಿರಬೇಕು.

ಶಾಯಿ = ನೋಡಿ: ಮದ್ದಲೆಶಾಯಿ, ಕರ್ನ.

ಶಿಖೆ (ಉ.): ಋಷಿ ವೇಷಗಳಿಗೆ, ಅಗ್ನಿ, ಶಿವ, ಮೊದಲಾದ ಪಾತ್ರಗಳಿಗೆ ಬಳಸುವ ವಿಶಿಷ್ಟ ಶಿರೋಭೂಷಣ. ಋಷಿ ಜುಟ್ಟು ಕಟ್ಟಿ ಅದಕ್ಕೆ ಹಲ್ಲೆಯೊಂದನ್ನು ಸಿಕ್ಕಿಸಿ, ಹದವಾಗಿ ಜರಿಲಾಡಿ

ಸುತ್ತುವರು. ಇದು ಕಿರೀಟ, ಮುಂಡಾಸುಗಳಿಗೆ ಸಂವಾದಿಯಾದ ಒಂದು ತೊಡುಗೆ.

ಶಿವಣೆ: ವೇಷ ಸಾಮಾಗ್ರಿ, ಬೊಂಬೆಗಳ ತಯಾರಿಗೆ ಬಳಸುವ ಒಂದು ಮರ. ಗಾಂಧಾರಿಮರ. (Gmelina arborea.)

ಶಿವಪೂಜೆ: ಬಣ್ಣದ ವೇಷವು ಪ್ರವೇಶ ನೃತ್ಯದಲ್ಲಿ ತೋರಿಸುವ ಒಂದು ಅಭಿನಯ. ತೆರೆಯನ್ನು ತಗ್ಗಿಸಿ, ಹಿಮ್ಮೇಳದ ಬಡಿತಗಳಿಗೆ ಸರಿಯಾಗಿ, ಶಿವಲಿಂಗ ನಿರ್ಮಾಣ, ಅಭಿಷೇಕ, ಹೂ ಹಾಕುವುದು, ಆರತಿ, ಮಂತ್ರಪುಷ್ಪ, ತೀರ್ಥ ಸ್ವೀಕಾರ ಮೊದಲಾದ ಮುದ್ರೆಗಳನ್ನು ತೋರಿಸುವುದು. ಇದು ಮೂಲತಃ ರಾವಣನ ವೇಷಕ್ಕೆ ಮಾತ್ರ ಇದ್ದುದು. ಈಗ ಬೇರೆ ರಾಕ್ಷಸ ರಾಜರಿಗೂ (ರಾಜಬಣ್ಣ) ಬಳಕೆಯಿದೆ.

ಶೂರ್ಪನಖಿ ಕಿರೀಟ: ರಾಕ್ಷಸಿ ಕಿರೀಟ. **ಹೆಣ್ಣುಬಣ್ಣದ ಕಿರೀಟ. ಕುತ್ತರಿ. ಬಾಲ್ದಿ ಕಿರೀಟ. ಉದ್ದಂಡಿ ಕಿರೀಟ.** ಕೆಳಗಿನಿಂದ ಮೇಲಕ್ಕೆ ಅಗಲವಾಗುವ ಕುತ್ತರಿ ಅಥವಾ ಬಾಲ್ದಿಯ ಆಕಾರ. ಮೇಲ್ಬದಿಗೆ ಸುತ್ತ ನವಿಲು ಹೀಲಿಗಳನ್ನು ಸಿಕ್ಕಿಸಿರುತ್ತದೆ.

ಶೂಲ = ನೋಡಿ : ತ್ರಿಶೂಲ.

ಶೃಂಗಾರಬಣ್ಣ (ತೆ.): ಬಣ್ಣದವೇಷದಲ್ಲಿ, ನಾಜೂಕಾಗಿ ಬಣ್ಣ ಬರೆದು, ಚಿಕ್ಕ ಚಿಟ್ಟೆ ಇಟ್ಟ ಸೊಗಸಾದ ಬಣ್ಣದವೇಷ. ರಾವಣ, ಮಾಗಧ, ಶುಂಭ– ಇವು ಶೃಂಗಾರ ಬಣ್ಣಗಳು. (ತದ್ವಿರುದ್ಧವಾದುದು **'ಘೋರಬಣ್ಣ'**).

ಶೃಂಗಾರ ರಾವಣ = ನೋಡಿ : ಸುಂದರರಾವಣ.

ಶೈವನಾಮ: ನಾಮದ ಬರವಣಿಗೆಯ ಒಂದು ಬಗೆ. ತ್ರಿಪುಂಡ್ರ ಋಷಿ ವೇಷಗಳಿಗೂ, ಇನ್ನಿತರ ಕೆಲವು ಪಾತ್ರಗಳಿಗೂ ಈ ನಾಮಗಳು. ಬಣ್ಣದವೇಷ (ರಾಕ್ಷಸ ಪಾತ್ರ)ಗಳ ಹಣೆಯಲ್ಲೂ ಶೈವನಾಮ ವಿದೆ.

ನೋಡಿ: **ಅಡ್ಡನಾಮ, ವೈಷ್ಣವನಾಮ, ಉದ್ದನಾಮ**

ಶ್ರುತಿ: ಹಾಡುಗಾರಿಕೆಗೂ, ವಾದ್ಯಗಳಿಗೂ ಆಧಾರವಾಗಿರುವ ಶ್ರುತಿ. ಶ್ರುತಿವಾದ್ಯ.

ಶ್ರುತಿಪೆಟ್ಟಿಗೆ: ಶ್ರುತಿವಾದ್ಯ (ಹಾರ್ಮೋನಿಯಂ ಅಥವಾ ಪುಂಗಿ, ಚಂಡೆ, ಮದ್ದಲೆ, ತಾಳ, ಜಾಗಟೆಗಳನ್ನು ತುಂಬಿಸಿದ ಪೆಟ್ಟಿಗೆ.

ಶ್ರುತಿಪೆಟ್ಟಿಗೆಯವನು: ಶ್ರುತಿ ಮತ್ತಿತರ ವಾದ್ಯಗಳನ್ನು ಸಾಗಿಸುವುದು, ಅವುಗಳ ರಕ್ಷಣೆ, ಆಟಕ್ಕೆ ಶ್ರುತಿ ಬಾರಿಸುವುದು, ವಾದ್ಯಗಳನ್ನು ಸಿದ್ಧಪಡಿಸುವುದು- ಇವನ ಕೆಲಸಗಳು.

ಶ್ರುತಿ ಬುರುಡೆ 1. = ನೋಡಿ : **ಪುಂಗಿ ಬುರುಡೆ, ಪುಂಗಿ.** 2. ಪುಂಗಿಗೆ ಬಳಸುವ ತೆಂಗಿನಕಾಯಿಯ, ಸೋರೆಯ ಅಥವಾ ಕಾಡುಸೋರೆಯ ಬುರುಡೆ.

ಷ

ಷಟ್ಪುಚ್ಛ ಕಚ್ಚೆ: ಷಟ್ಕಚ್ಚೆ. ಆರು ಪುಚ್ಛ ಎಂದರೆ ಮುನ್ನಿಗಳಿರುವ ಕಚ್ಚೆ. ಸೊಂಟದ ಎಡಬಲಗಳಲ್ಲಿ ಎರಡು, ಮುಂದೆ ಎರಡು ಹಿಂದೆ ಪಟ್ಟಿ ಅಥವಾ ರೆಕ್ಕೆಯಂತೆ ಎರಡು ಅಂಚುಗಳು ಬರುವ ಕಚ್ಚೆ. ಮೂಲತಃ ಇದು ರಂಗಕ್ಕೆ ಹೊಂದುವ ಕಚ್ಚೆಯಲ್ಲ. ಕಾರಣ, ಇದರಲ್ಲಿ ಒಂದುಕಾಲು ಸ್ವಲ್ಪ ಕಾಣುವಂತಿರುತ್ತದೆ. ಬ್ರಾಹ್ಮಣ ಪಾತ್ರಕ್ಕೆ ಬಳಕೆಯಿದೆ. – 'ಕಸೆ' ಎಂಬ ಕಚ್ಚೆಗೆ, ಐದೇ ಪುಚ್ಛಗಳಾಗುವುವು.

ಷಣ್ಮುಖ ಸುಬ್ರಾಯ: ಪೂರ್ವರಂಗದ ಒಂದು ವೇಷ. ಸುಬ್ರಾಯ ವೇಷವೆಂದೂ, ಷಣ್ಮುಖ ವೇಷವೆಂದೂ ಹೇಳುವರು. ಸುಬ್ರಹ್ಮಣ್ಯ ಮತ್ತು ನಾಗದೇವತೆಯ ಸಂಮಿಶ್ರ ಕಲ್ಪನೆ. ಕರಾವಳಿಯಲ್ಲಿ ಇದು ಒಂದು ಅಂಗೀಕೃತ ಸಂಯೋಗ.

ಈ ವೇಷವು ಗಣಪತಿ ಕೌತುಕವಾದೊಡನೆ ಬರುವುದು. ಜತೆಗೆ ಕೋಡಂಗಿಯೂ ಇರುವನು.– ''ತಾರಕನ ಕೊಲಲೆಂದು ಶಿವನ ಕು। ಮಾರ ಪಾರ್ವತಿಯಲ್ಲಿ ಜನಿಸಿಹ...'' ಎಂಬ ಭಾಮಿನಿಗೆ ತೆರೆಯಲ್ಲಿ ಪ್ರವೇಶಿಸುವುದು. ''ಕುಂಡಲ ಮಣಿಭೂಷಣಾ। ಸ್ವಾಮಿ ಸುಬ್ಬರಾಯ...'' ಎಂದು ಆರಂಭವಾಗುವ ಆರು ಪದ್ಯಗಳಿಗೆ ನರ್ತಿಸಿದ ಬಳಿಕ, ಕೋಡಂಗಿಯಿಂದ ಸಂಭಾಷಣೆ. ಅನಂತರ ''ನವಿಲ ವಾಹನವನೇರಿ। ವೊಯಲಂ ಪಿಡಿದ ಕುಂಡಲಾ। ವಿಳಂಗ ದೇವೋ ಸೇನಾಪತಿ..'' ಎಂಬಲ್ಲಿಂದ ಎರಡು ಪದ್ಯಗಳಿಗೂ ಕೆಲವು ಬಾಯಿ ತಾಳಿಗೆ ಕುಣಿದು, ಪುನಃ ಎರಡು ಪದ್ಯಗಳಿಗೆ ನರ್ತಿಸಿ– ಕೊನೆಗೆ ''ಬಂದ ಹಾಗೆ। ಹಿಂದೆ ಹೋಗೊ। ಸುಬ್ಬರಾಯಾ'' – ಎಂಬ ಪದ್ಯದ ಕೊನೆಗೆ ನಿರ್ಗಮನ. ''ಬಂದ ಹಾಗೆ ಹಿಂದೆ ಹೋಗು'' – ಎಂದು ನಾಗನನ್ನೂ ಪ್ರಾರ್ಥಿಸುವ ಕ್ರಮವಿದೆ.

ಈ ವೇಷವು ರಾಜವೇಷದಂತೆ ಕಿರೀಟ ಕಟ್ಟಿದ ಆದರೆ, ಮೀಸೆ ಇಲ್ಲದ ವೇಷ. ''ಕುಂಡಲಮಣಿ ಭೂಷಣ'' ಎಂಬ ಪದ್ಯದಲ್ಲಿ– ಕುಂಡಲ, ಮಣಿ ಎಂದರೆ, ಸರ್ಪದ ಹೆಡೆಯ ನಾಮ (' ' ಗುರುತು) ಮತ್ತು ಸರ್ಪನ ತಲೆಯಲ್ಲಿದೆಯೆಂದು ಕಲ್ಪಿತವಾದ ಮಣಿಯೂ ಹೌದು. ಸುಬ್ರಹ್ಮಣ್ಯನ ಆಭರಣಗಳೂ ಹೌದು. ಈ ಪದ್ಯಕ್ಕೆ ಸರ್ಪನಂತೆ ಎರಡೂ ಕೈಗಳನ್ನೂ ಕಿರೀಟದ ಮುಂದೆ ಹಿಡಿದು, ಅಭಿನಯಿಸುವುದಿದೆ.

ಸ

ಸಂಗೀತ : 1. **ಸಭಾಲಕ್ಷಣವೆಂಬ** ಪೂರ್ವರಂಗದ ಹಾಡುಗಾರಿಕೆ. ಗೌಣಾರ್ಥದಲ್ಲಿ ಪೂರ್ವರಂಗದ ಹಾಡು, ನೃತ್ಯ ಮುಂತಾಗಿ ಎಲ್ಲವೂ.

''ಈಗ ಸಂಗೀತ ನಡೆಯುತ್ತಾ ಇದೆ, ಸಂಗೀತ ಮುಗಿಯಲಿಲ್ಲ'' – ಎನ್ನುವಾಗ, ಸಭಾಲಕ್ಷಣ ಪ್ರಯೋಗವೆಂದು ಅರ್ಥ.

ಸಂಗೀತಗಾರ/ಸಂಗೀತ ಭಾಗವತ : ಸಭಾಲಕ್ಷಣದ ಹಾಡುಗಾರ. ಮೇಳದ ಉಪ ಭಾಗವತ. ಮುಖ್ಯ ಹಾಡುಗಾರನಿಗೆ 'ಭಾಗವತ'ನೆಂದೂ, ಅವನ ಹಾಡುಗಾರಿಕೆ, ನಿರ್ದೇಶನಗಳಿಗೆ 'ಭಾಗವತಿಕೆ' ಎಂದೂ ಹೆಸರು.

ಬಡಗುತಿಟ್ಟಿನಲ್ಲಿ ಈ ಸಂಗೀತಗಾರನು, ಪ್ರಸಂಗ ಆರಂಭವಾದ ಬಳಿಕ, ಭಾಗವತನ ಹಿಂದೆ ನಿಂತು, ಆತನ ಹಾಡುವಿಕೆಗೆ, ಆಲಾಪನೆ ಸೇರಿಸುವ, ಕೆಲವೊಮ್ಮೆ ಸ್ವಲ್ಪಾಂಶ ಪದ್ಯವನ್ನು ಹಾಡುವ ಕ್ರಮವಿತ್ತು.

ದೊಡ್ಡಾಟ, ಮೂಡಲಪಾಯ, ಗಟ್ಟದ ಕೋರೆಗಳಲ್ಲಿ ನಾಲ್ಕಾರು ಮೇಳಗಾಯಕರು ಭಾಗವತನ ಹಿಂದೆ ಇರುತ್ತಾರೆ.

ಈ ಸಂಗೀತ, ಸಂಗೀತಗಾರ ಎಂಬ ಪದಗಳಿಗೆ, ಸಾಮಾನ್ಯ ಭಾಷೆಯಲ್ಲಿ ನಾವು ಬಳಸುವ ಗಾಯನ, ರಾಗ ತಾಳಾದಿ ವಿಚಾರ, Music, ಎಂಬ ಅರ್ಥಕ್ಕಿಂತ ಭಿನ್ನವಾದ ಅರ್ಥವಿದೆ. ಇದು ಹೇಗೆ ಬಂದಿರಬಹುದು ಎಂಬುದಕ್ಕೆ ಎರಡು ಊಹೆ ಗಳಿವೆ:

ಅ) 'ಪೂರ್ವ ರಂಗೇತು ಗಾಂಧರ್ವಂ', 'ಪೂರ್ವರಂಗ ಪ್ರಯೋಗೇತು ಕರ್ತವ್ಯೋ ರಾಗಜೋ ವಿಧಿಃ' – ಎಂಬ ಲಕ್ಷಣದಂತೆ, ಪೂರ್ವರಂಗ ವಿಭಾಗದಲ್ಲಿ ಹಾಡಬೇಕಾದುದು ಗಾಂಧರ್ವವೆಂಬ ದೇವತಾಸ್ತುತ್ಯಾಶ್ರಯವಾದ ವಿಧಾನ. ಹಾಗಾಗಿ ಈ ಹೆಸರು. ಅಂದರೆ, ಅನಂತರದ ಭಾಗವತಿಕೆ ಎಂಬುದು ಶಾಸ್ತ್ರೀಯ ವಾದ ದೇಶೀ ರಾಗತಾಳಗಳಲ್ಲಿ, ಸ್ವರಾಲಾಪ ಗಳಿಲ್ಲದೆ ಹಾಡುವುದಾಗಿದೆ. ಹಾಗಾಗಿ ಸಂಗೀತ ವೆಂಬ ಹೆಸರಿನ ಔಚಿತ್ಯ (ದಿ। ಕುಕ್ಕಿಲ ಕೃಷ್ಣ ಭಟ್ಟರ ಲೇಖನ: ಮಂದಾರ: ಮುಂಬಯಿ 1986).

ಆ) ''ಗೀತಂ ನೃತ್ಯಂಚ ವಾದ್ಯಂಚ ಸಂಗೀತ ಮಿತ್ಯಭಿಧೀಯತೇ'' ಎಂಬ ಲಕ್ಷಣದಂತೆ, ಸಂಗೀತವೆಂದರೆ ಗೀತ, ನೃತ್ಯ, ವಾದ್ಯಗಳು ಸೇರಿರುವ ಪರಿಕಲ್ಪನೆ. ಪೂರ್ವರಂಗದಲ್ಲಿ ಇವೇ ಇರುವುದು. ಮಾತುಗಳಿಲ್ಲ. ಮಾತುಗಳು ಇದ್ದರೂ, ಅವು ಪ್ರತ್ಯೇಕವಾದುವುಗಳು. ಪ್ರಸಂಗ ಕಥಾಭಾಗದಲ್ಲಿರುವಂತೆ ಆಯಾ ಪದ್ಯದ ಅರ್ಥ ವನ್ನು ಪಾತ್ರವು ಇಲ್ಲಿ ಹೇಳುವುದಿಲ್ಲ. ಎಂದರೆ, ಪೂರ್ವರಂಗದಲ್ಲಿ ಗೀತ– ಮಾತುಗಳಿಗೆ ನೇರ ಸಂಬಂಧವಿಲ್ಲ. ಹಾಗಾಗಿ ಇದು ಸಂಗೀತ ಮಾತ್ರ ಎಂಬ ಅರ್ಥ.

ಸಂಗೀತ ಭಾಗವತ = ನೋಡಿ : ಸಂಗೀತಗಾರ.

ಸಂಘ : 1. ತಾಳಮದ್ದಲೆ, ಆಟಗಳನ್ನು ಆಡುವ ಹವ್ಯಾಸಿ ತಂಡ. ವ್ಯವಸಾಯಿ ಅಲ್ಲದ ಮೇಳ. ''ಸಂಘದ ಆಟ'' ವೆಂದರೆ, ಮೇಳದ ಆಟವಲ್ಲ ಎಂದೇ ಅರ್ಥವಿದೆ. – ಅರ್ವಾಚೀನ ಶಬ್ದ.

2. ತಾಳಮದ್ದಳೆ ನಡೆಸುವ, ಅಭ್ಯಸಿಸುವ ತಂಡ.

ಸಂದರ್ಭ (ಉ.) : ಮಾತಿನಲ್ಲಿ ಮುಂದಿನ ಮಾತಿಗೆ ಕೊಂಡಿ ಬರುವ ಮಾತು. ಮಾತಿನ ಎತ್ತುಗಡೆ. ಮುಂದಿನ ಪದ್ಯದ ಆರಂಭಕ್ಕೆ ಬಂದು ನಿಲ್ಲುವ ಹಾಗೆ ತನ್ನ ಮಾತನ್ನು ಬಳಸುವುದು. ಅಥವಾ ಇನ್ನೊಬ್ಬನ ಮಾತಿಗೆ, ಅನುವು ಮಾಡಿ ಕೊಡುವುದು. ಸಂದರ್ಭ (Touch) ಕೊಡುವುದು ಮಾಡುವುದು. ನೋಡಿ: **ಎತ್ತುಗಡೆ.**

ಸಂಧಿ : ಪ್ರಸಂಗ ಕಾವ್ಯಕ್ಕೆ, ವಿರಳವಾಗಿ ಈ ಹೆಸರಿತ್ತು. ಉದಾ: ಪಾರ್ತಿಸುಬ್ಬನ ಉಂಗುರ ಸಂಧಿ. ಇನ್ನೋರ್ವ ಕವಿಯ ಪಠದ ಸಂಧಿ (ಲವಕುಶ). ಉದಾ: ''ತರಳಕೇಳಿಪ್ಪತ್ತಯಿದು ದಿನಕೆ.........
.....ಬೀಳ್ಕೊಟ್ಟು ರಘುರಾಮ ಸೋದರ ಸಹಿತ ಶ್ರವಣ ಪರ್ವತಕೆ ನಡೆದಂತಲ್ಲಿ ಇರುವರೆಂಬಲ್ಲಿ ಗಾಯಿತು ಸಂಧಿ ಕಣ್ವಪುರ ಕೃಷ್ಣನ ಕಟಾಕ್ಷ ದಿಂದ–'' (ಪಾರ್ತಿಸುಬ್ಬನ ವಾಲಿಸಂಹಾರ)

ಸಂಪಿಗೆ ಸರ (ಉ.) = ನೋಡಿ : ಮಾರುಮಾಲೆ.

ಸಖಿ/ಸಖಿಪಾತ್ರ (- ವೇಷ) : 1. ಸಖಿ ಪಾತ್ರ. ಬ.ಗ.ಮೂ. 2. ಉಪ ಸ್ತ್ರೀವೇಷ. ಒತ್ತು ಸ್ತ್ರೀವೇಷ.

ಸಖಿಪಾತ್ರ = ನೋಡಿ : ಸಖಿ.

ಸಖಿವೇಷ : = ನೋಡಿ : ಸಖಿ.

ಸಣ್ಣ ಎಡ (ಬ.) : ಮದ್ದಲೆಯಲ್ಲಿ ಎಡಭಾಗದ ಸಣ್ಣಪೆಟ್ಟು. ಸಣ್ಣ 'ಧೀ', ಸಣ್ಣ 'ಧಿಂ'.

ಸಣ್ಣ ತಡ್ಪೆ (ತೆ.) : ಕೇಶಾವರಿ ಕಿರೀಟಗಳಲ್ಲಿ ಸಣ್ಣದು. ಸಣ್ಣ ಬಣ್ಣದ ಕಿರೀಟ. **ಕುಟ್ಟಿಚಾಮರ**, ಧರ್ಮರಾಯ, ಮಯೂರ ಧ್ವಜ, ಸುಗ್ರೀವ ಪಾತ್ರಗಳಿಗೆ, ಎರಡನೆಯ ಬಣ್ಣದ ವೇಷಗಳಿಗೆ– ಬಳಕೆ.

ಸಣ್ಣ ಪಗಡಿ (ತೆ.) : ಪಗಡಿ ಎಂಬ ಶಿರೋಭೂಷಣಗಳಲ್ಲಿ ಸಣ್ಣ ಆಕಾರದ್ದು. ಅಭಿಮನ್ಯು, ಕೃಷ್ಣ, ಬಭ್ರುವಾಹನ ಮೊದಲಾದ ಪುಂಡುವೇಷ (ಯುವಕ)ಗಳು ಧರಿಸುವಂತಹದು. ಕೀಚಕ, ಶಲ್ಯ ಮೊದಲಾದವರು ಧರಿಸುವುದು ದೊಡ್ಡ ಪಗಡಿ.

ಸಣ್ಣ ಪೆಟ್ಟು : 1. ಚೆಂಡೆ, ಮದ್ದಲೆಗಳಲ್ಲಿ ಬಾರಿಸುವ ಸಣ್ಣ ಪೆಟ್ಟು.

2. ತಾಳದ ಪೆಟ್ಟುಗಳಲ್ಲಿ, ಸಣ್ಣಪೆಟ್ಟು. ಉದಾ: ಏಕತಾಳದಲ್ಲಿ: 'ತಾಂ ಧಿನ್ನಕ'. ಎಂಬಲ್ಲಿ 'ತಾಂ' ಎಂಬುದು ದೊಡ್ಡ ಪೆಟ್ಟು, 'ಧಿ.ನ್ನ.ಕ.' – ಇವು ಸಣ್ಣವು.

3. ಜಾಗಟೆಯಲ್ಲಿ ಬಾರಿಸುವ ಘಾತ ಪೆಟ್ಟು ಅಥವಾ ಪ್ರಾಣ ಪೆಟ್ಟು ಬಿಟ್ಟು ಉಳಿದ ಪೆಟ್ಟುಗಳು.

ಸಣ್ಣ ಮುಕ್ತಾಯ : 1. ಮುಕ್ತಾಯದಲ್ಲಿ ಹ್ರಸ್ವ ಜಾತಿ. **ಗಿಡ್ಡ ಮುಕ್ತಾಯ.** ಮುಕ್ತಾಯದ ಅರ್ಧಾಂಶವನ್ನೊ, ಭಾಗವನ್ನೊ ಮಾತ್ರ ಬಾರಿಸುವುದು. ಹೊಂದಾಣಿಕೆಯ ಕ್ರಮ.

ಸತ್ತಿಗೆ : ಕೊಡೆಯಂತಹ ರಚನೆ; ಛತ್ರಿ.

1. ಬಣ್ಣದ ವೇಷದ ಕಿರೀಟದ ಬುರುಡೆಯ ಮೇಲ್ಭಾಗಕ್ಕೆ ಸಿಕ್ಕಿಸುವ, ಅರಳೆಲೆ ಜಾಲರಿಯ ಎರಡು ಅಥವಾ ಮೂರು ಸ್ತರಗಳ (ಅಂತಸ್ತುಗಳ) ಬೆಳ್ಳಿ ಸತ್ತಿಗೆ.

2. ಹನುಮಂತನ ಕಿರೀಟದ ಮೊದಲ ಅಂತರ. ಅಗಲವಾಗಿ ಚಾಚಿಕೊಂಡಿರುವ ಹ್ಯಾಟ್ (hat) ನಂತಹ ರಚನೆ. ಇದಕ್ಕೆ ಅರಳೆಲೆ ಜಾಲರಿ ಇರುತ್ತದೆ.

ಸದರು : = ನೋಡಿ : ಸದ್ರು.

ಸದ್ದು : ಶಬ್ದ, ನಿಶ್ಶಬ್ದ, ಮೌನವೆಂದು ಅರ್ಥ. (ಸದ್ದೋ ಸದ್ದು = ಸದ್ದು ಮಾಡದಿರಿ.)

– ಪೂರ್ವರಂಗದಲ್ಲಿ ಭಾಗವತ, ಕೋಡಂಗಿ ಸಂಭಾಷಣೆಯಲ್ಲಿ ಬರುವ ಶಬ್ದ.

ಸದ್ರಾಂಸೋಂಟೆ : ಹಾಸ್ಯಗಾರನ ಕೈಯಕೋಲು. ಉದಾ: ''ಸದ್ರಾಂ ಸೋಂಟೆಯಿಂದ ಹೊಡೆದೇನು''.

ಸದ್ರು/ಸದರು : ಸಿಂಹಾಸನ. ಪೀಠ. ಹಾಸ್ಯಗಾರ ನೊಂದಿಗೆ ಭಾಗವತನು, ಪಾತ್ರವು ಸಂಭಾಷಿಸುವಾಗ ಬರುವ ಪದ. ''ಸದ್ರುಮಾಡಲಾ''.

ಸಪೇತ : – ಸಫೇದ್ (ಹಿಂದಿ) ಬಿಳಿ ವರ್ಣದ್ರವ್ಯ. **(Zinc Oxide)** ಹಿಂದೆ ಅರದಾಳ ಬಳಸುತ್ತಿದ್ದಂತೆ, ಈಗ ಗೌರವರ್ಣ ಮೂಲಲೇಪನಕ್ಕಾಗಿ ಹಳದಿ, ಕೆಂಪು ಬೆರೆಸಿ ತಯಾರಿಸಿ ಬಳಸುವರು. ಅಂಚಿನ ಬಿಳಿಗೆ, ಇದನ್ನು ಮಾತ್ರ ಉಪಯೋಗಿಸುವರು.

ಸಬ್ ಮಾರ್ ದೌಲತ್ ಜ್ಯಾದಾ : ದೌಲತ್ ಜ್ಯಾದಾ ನಾಟ್ಯದಲ್ಲಿ ಹಾಸ್ಯಗಾರನು ಹೇಳುವ ಶುಭಾಶಯ. ನೋಡಿ : **ದೌಲತ್ ಜ್ಯಾದಾ.**

ಸಭಾಕಲಾಸು (ತೆ.) : ಸಭಾಕಲಾಶ. ಸಭಾ ನೃತ್ಯ. ರಾಮ, ಅರ್ಜುನ, ದೇವೇಂದ್ರ– ಈ ಪಾತ್ರಗಳು ಕುಣಿಯುವ ವಿಶಿಷ್ಟ ನೃತ್ಯ. **ತೆರೆ ಕಲಾಸು** ಆದ ಬಳಿಕ ಪ್ರವೇಶವಾದ ಅನಂತರ ಈ ನೃತ್ಯವನ್ನು ಕುಣಿಯುವರು. ನಿಂತಲ್ಲೆ ಒಂಟಿಕಾಲು ಹಜ್ಜೆಯಲ್ಲಿ ಎರಡೂ ಬದಿಗಳಿಗೆ ಕುಣಿದು, ಹಸ್ತಭಾವ ಸಹಿತ, ಅಡ್ಡ ಸರಳರೇಖೆಯಲ್ಲಿ ಚಲಿಸಿ, ತೆರೆಯಂತೆ ಹಸ್ತಮುದ್ರೆ ತೋರಿಸಿ ಕುಣಿದು, ಮುಕ್ತಾಯವಾಗಿ, ಕೂಡಲೇ ಧಿಗಿಣ ಕುಣಿತವಿರುತ್ತದೆ.

ಈ ಪೈಕಿ ರಾಮನ ಕುಣಿತ ಬೇರೆ ತೆರನಾಗಿರುತ್ತದೆ. ಇದರಲ್ಲಿ ರಂಗದಲ್ಲಿ ನಾಲ್ಕು ಕಡೆ ಒಂದೊಂದು 'ಗುತ್ತು' (ಸುತ್ತು ಹಾರಾಟ) ವಿರುತ್ತದೆ.

ಸಭಾ ಪ್ರವೇಶ : ಪ್ರವೇಶ ನೃತ್ಯ ಅಥವಾ ನೃತ್ಯವಿಲ್ಲದೆ ಪ್ರವೇಶ.

ಸಭಾಲಕ್ಷಣ : ಪೂರ್ವರಂಗ; ಪೂರ್ವರಂಗದ ಹಾಡುಗಳು, ಮಾತುಗಳು. ಅದರ ಪ್ರಯೋಗ ಸ್ವರೂಪ. ಸಭಾ ವಂದನೆ ಎಂದೂ ಹೆಸರಿದೆ.

ಇದಕ್ಕೆ ಈ ಹೆಸರು ಬರಲು ಕಾರಣವಾಗಿರುವ ಶ್ಲೋಕಗಳು ಇಂತಿವೆ :

''ಸಭಾಕಲ್ಪತರುಂ ವಂದೇ
ಋಗ್ಯಜುಸ್ಸಾಮಶಾಖಿನಂ॥
ಷಡಂಗ ಕುಸುಮೋಪೇತಂ.... ತತ್ವಜ್ಞಾನ
ಫಲೋದಯಂ'' ॥

– (ಇದು ನಂದಿಕೇಶ್ವರ ವಿರಚಿತ 'ಅಭಿನಯ ದರ್ಪಣ'ದ ಶ್ಲೋಕವೊಂದರ ರೂಪಾಂತರ.)

''ಸತ್ಯಾಚಾರ ಸಭಾ ಗುಣೋಜ್ವಲ ಸಭಾ
ಸದ್ಧರ್ಮಕೀರ್ತಿಸ್ಸಭಾ।
ವೇದಾಲಂಕೃತ ಶಾಸ್ತ್ರಪೂರಿತ ಸಭಾ ವಿಖ್ಯಾತ
ವೀರಾಸಭಾ।
ರಾಜಾದ್ರಾಜ ಕುಮಾರ ಶೋಭಿತ ಸಭಾ ರಾಜ
ಪ್ರಕಾಂತಿಸ್ಸಭಾ
ಸಂಗೀತಾದಿ ಲಸಿತಾ ಸಭಾ ಕವಿಸಭಾ ಸಾಮ್ರಾಜ್ಯ
ಲಕ್ಷ್ಮೀಸಭಾ॥''

ಅಲ್ಲದೆ, ಪೂರ್ವರಂಗದ ಮೊದಲ ಭಾಗದಲ್ಲಿ, ದೇವತಾಸ್ತುತಿಗಳಾದ ಬಳಿಕ, ಸಭಾವಂದನೆ, ಸಭೆಯ ಅಂಗಗಳ ಲಕ್ಷಣಗಳು ಬರುತ್ತವೆ. ಇದರಲ್ಲಿ ಸಭೆಗಳ ವಿಧಗಳು, ಸಭಾನಾಯಕನ ಲಕ್ಷಣ, ರಾಜ, ಮಂತ್ರಿ, ಪರಿವಾರ ಲಕ್ಷಣ,

ವಿದ್ವಾಂಸರ ಲಕ್ಷಣ, ಸಾಮಾಜಿಕ ಲಕ್ಷಣ, ಮೇಳಲಕ್ಷಣ, ಭಾಗವತ ಲಕ್ಷಣ, ತಾಳ, ಮೃದಂಗ, ಶ್ರುತಿಲಕ್ಷಣ, ಹಾಸ್ಯಗಾರನ ಲಕ್ಷಣ, ನೃತ್ಯ ಲಕ್ಷಣ ಮುಂತಾದವುಗಳಿವೆ. ಸಭಾಲಕ್ಷಣವೆಂಬುದು ಮೂಲತಃ ಈ ಲಕ್ಷಣವರ್ಣನೆಯ ಭಾಗಕ್ಕೆ ಇದ್ದ ಹೆಸರಾಗಿರಬೇಕು. ಬಳಿಕ ಅದು ಇಡಿಯ ಪೂರ್ವ ರಂಗವೆಂಬ ಅರ್ಥವನ್ನು ಪಡೆದು ರೂಢಿಯಲ್ಲಿದೆ.

ಸಭಾಲಕ್ಷಣದಲ್ಲಿ ಬರುವ ವಿಷಯಗಳು ಮತ್ತು ರಂಗ ಪ್ರಯೋಗದ ಅನುಕ್ರಮವು ಸುಮಾರಾಗಿ ಹೀಗಿದೆ: (ಇದರಲ್ಲಿ ಸ್ವಲ್ಪಾಂಶ ವ್ಯತ್ಯಾಸ ಗಳಿದ್ದರೂ, ಎಲ್ಲ ತಿಟ್ಟುಗಳಲ್ಲಿ ಸಭಾ ಲಕ್ಷಣದ ಪಾಠ ಮತ್ತು ರಂಗದ ನಡೆ ಬಹುಭಾಗ ಒಂದೇ ತೆರನಾಗಿದೆ.)

ಚೌಕಿಯಲ್ಲಿ ಗಣಪತಿ ಪೂಜೆಯಾಗಿ, ಹಿಮ್ಮೇಳವು, ಕೋಡಂಗಿಗಳು, ದೀಪ ಸಹಿತ ರಂಗಕ್ಕೆ ಬರಬೇಕು. ಬರುವಾಗ ವಾದ್ಯಗಳನ್ನು ಬಾರಿಸುತ್ತ ಬರುವುದು. ಈ ಶತಮಾನದ ಆದಿಯವರೆಗೆ, ಎಲ್ಲ ಕಲಾವಿದರೂ, ಒಮ್ಮೆ ಹಿಮ್ಮೇಳದ ಜತೆ, ದೇವರಿಗೆ ಪರಾಕು ಹಾಕುತ್ತ ರಂಗಕ್ಕೆ ಬಂದು, ಅನಂತರ ಹಿಮ್ಮೇಳ, ಕೋಡಂಗಿ ಮಾತ್ರ ರಂಗಕ್ಕೆ ಬಂದು ರಂಗದಲ್ಲಿ ಉಳಿಯುವ ಕ್ರಮವಿತ್ತು. ಈಗ ರಂಗಕ್ಕೆ ಹಿಮ್ಮೇಳ ಬಂದ ಮೇಲೆ ಬೇರೆ ಕಲಾವಿದರು ಬರುವ ಕ್ರಮವಿಲ್ಲ. ("ರಂಗಸ್ಥಳಕ್ಕೆ ನಿಲ್ಲುವುದು" ಎಂದು ಇದಕ್ಕೆ ಹೆಸರು.)

1. ಗಣಪತಿ ಸ್ತುತಿ: "ಮುದದಿಂದ ನಿನ್ನ ಕೊಂಡಾಡುವೆನು।" – ನಾಟಿರಾಗ, ಝಂಪೆ ತಾಳ.

2. "ಶರಣು ತಿರುವಗ್ರಶಾಲಿ ವಾಹಿನಿ" – ಪದ್ಯ ಮಧ್ಯಮಾವತಿ ರಾಗ, ತ್ರಿವುಡೆ ತಾಳ.

3. ಮೂಕಾಂಬಿಕಾಸ್ತುತಿ.

4. ಸಭಾವಂದನ ಶ್ಲೋಕ.

5. ಶ್ರೀರಾಮ ಸ್ತುತಿ.

6. ಶ್ರೀಕೃಷ್ಣ – ಗದುಗುನಾರಾಯಣ ಸ್ತುತಿ.

7. ಭೂಮಿ, ಆಕಾಶ, ದಶಾವತಾರ, ವಿಷ್ಣು, ಅಷ್ಟದಿಕ್ಪಾಲಕ ಸ್ತುತಿ.

8. ಸಭಾಲಕ್ಷಣ, ಸಭಾನಾಯಕ ಲಕ್ಷಣ ಮುಂತಾಗಿ (ಮೇಲೆ ಪ್ರಸ್ತಾವಿಸಿದೆ, ನೋಡಿ).

9. ಸಭೆಯಲ್ಲಿರುವವರ ಹೋಲಿಕೆಗಳು.

10. ಸಭೆಯಲ್ಲಿ ದೇವರ ಸೇವೆಯಾಗಿ ಆಟವಾಡುತ್ತೇವೆಂಬ ಮಾತು. ಭಾಗವತ– ಕೋಡಂಗಿಗಳ ವಚನ.

11. ವೈಕುಂಠ ಪ್ರಶಂಸೆ, ನೃತ್ಯ ಪ್ರಶಂಸೆಯ ಶ್ಲೋಕಗಳು.

12. ಗೋವಿಂದ ಸ್ತುತಿ.

ಇಲ್ಲಿಯ ತನಕ ಕೋಡಂಗಿಗಳು ಮಾತ್ರ ರಂಗದಲ್ಲಿರುವವರು. ಇಲ್ಲಿಂದ ಮುಂದೆ ನಿತ್ಯವೇಷ (ಬಾಲಗೋಪಾಲರು) ಪ್ರವೇಶ.

13. ಶಾರ್ದೂಲವಿಕ್ರೀಡಿತ: ಭಾಗವತ ಸಾರ– "ಆದೌ ದೇವಕಿದೇವಿ ಗರ್ಭ ಜನನಂ।..."

14. ಗೋವಿಂದ ಸ್ತುತಿ.

15. ಕೋಡಂಗಿ– ಭಾಗವತ ಸಂಭಾಷಣೆ.

16. ಕೃಷ್ಣಸ್ತುತಿ. ದಶಾವತಾರ ಸ್ತುತಿ.

17. ವಿಷ್ಣು, ಮಹಾಲಿಂ[illegible] ಶಂಕರನಾರಾಯಣ ಸ್ತುತಿ.

18. ಗಣಪತಿ ಸ್ತುತಿ [illegible] ಪದ್ಯಗಳು.

19. ಕೋಡಂಗಿ– ಭಾ[illegible] ಸಂವಾದ: ಗಣಪತಿಯ ಕುರಿತು.

20. ಗಣಪತಿ ಕೌತುಕ ಕುಣಿತ– ಕಿರೀಟದ ಮುಂದೆ ಕುಣಿತ.

ಇಲ್ಲಿಯವರೆಗೆ ಬಾಲಗೋಪಾಲರು ಇರುತ್ತಾರೆ. ಇಲ್ಲಿ ಅವರು ನಿರ್ಗಮಿಸುತ್ತಾರೆ. ಒಬ್ಬ ಕೋಡಂಗಿಯು ನಿರ್ಗಮಿಸಿ, ಒಬ್ಬನು ಉಳಿಯುತ್ತಾನೆ.

21. ಷಣ್ಮುಖ ಸುಬ್ರಾಯ ಪ್ರವೇಶ. ನೃತ್ಯ.

22. ಷಣ್ಮುಖ– ಕೋಡಂಗಿ ಸಂಭಾಷಣೆ.

23. ಷಣ್ಮುಖ ಸ್ತುತಿ. ನೃತ್ಯಗಳು.

24. ಅರ್ಧನಾರೀಶ್ವರ ಪ್ರವೇಶ. ಶಿವ– ಕೋಡಂಗಿ ಸಂವಾದ.

25. ಪಾರ್ವತಿ ಪ್ರವೇಶ. ಪಾರ್ವತಿ– ಕೋಡಂಗಿ ಸಂವಾದ.

26. ಶಿವ– ಪಾರ್ವತಿಯ ನೃತ್ಯ ಅಥವಾ ಮೇಲಿನ 24,25,26ಕ್ಕೆ 'ಅರ್ಧನಾರೀಶ್ವರ' ಎಂಬ ಅರ್ಧ ಶಿವ– ಅರ್ಧ ಪಾರ್ವತಿ ವೇಷವು ಬಂದು ಮಾತಾಡಿ, ಕುಣಿಯುವ ಕ್ರಮವಿತ್ತು.

ಇಲ್ಲಿಗೆ, ಕೋಡಂಗಿಗಳ ನಿರ್ಗಮನ.

27. ಕಟ್ಟು ಹಾಸ್ಯಗಳು: ಕೊಕ್ಕೆಚಿಕ್ಕ, ಪುರೋಹಿತ, ವ್ಯಾಪಾರಿ, ಕುಂಬಾರ, ಗಾಣಿಗ, ವಿಶ್ವಕರ್ಮ, ಬೋಯಿಬ್ರಾಣ, ಮುಸಲ್ಮಾನ, ಕ್ರಿಶ್ಚಿಯನ್, ಹಾಲಕ್ಕಿ ನರ್ಸಣ್ಣ, ಕಳ್ಳ, ಮಡಿವಾಳ, ತೆಂಕಮಡಿವಾಳ, ರಂಗಾರಂಗಿ, ಸಿಂಗರ ಪಾಟ್ಟು, ಸಿಂಗಾಸಿಂಗಿ, ಹರಿವೆಸೊಪ್ಪು ಮಲ್ಲಮ್ಮ, ಕೊರವಂಜಿ, ಸರ್ವಜ್ಞ, ಏಕಪಾತ್ರ, ಬೈರಾಗಿ, ಹಿಂಡುಬೈರಾಗಿ ಜಂಗಮ– ಮೊದಲಾಗಿ ಹಲವು ಕಟ್ಟು ಹಾಸ್ಯಗಳು, ಸಮಯಾವಕಾಶಕ್ಕೆ ಅನುಸಾರ ಪ್ರಯೋಗ. ಈ ಕಟ್ಟು ಹಾಸ್ಯಗಳೊಂದಿಗೆ, ಚಪ್ಪರ ಮಂಚದಾಟ (ಅರೆಪ್ಪಾವಿನಾಟ=ಸೊಂಟಕ್ಕೆ

ಜಾಲರಿ ತಟ್ಟಿಯ ಮಂಚವನ್ನು ಕಟ್ಟಿಕೊಂಡು ಕುಣಿಯುವುದು), ಮರಕಾಲು ಕುಣಿತ (ಮರದ ಕೋಲಿನಲ್ಲಿ ನಿಂತು, ಕೈಯಿಂದ ಹಿಡಿದುಕೊಂಡು ಕುಣಿಯುವುದು) – ಇವೂ ಇದ್ದುವು. ಇದಕ್ಕೆ ಹಾಡು, ಹಿಮ್ಮೇಳಗಳಿರುತ್ತಿದ್ದುವು.

ಈ ಕಟ್ಟು ಹಾಸ್ಯಗಳಿಗೆ ಭಾಗವತರ ಪದ್ಯಗಳಿಲ್ಲ. ಅಗತ್ಯವಿರುವಲ್ಲಿ ಹಿಮ್ಮೇಳದವರು ಗ[illegible]ನ್ನು ಬಾರಿಸುತ್ತಾರೆ.

28. ಚಂದಭಾಮಾ ಸ್ತ್ರೀ ವೇಷಗಳು.

29. ಮುಖ್ಯ ಸ್ತ್ರೀ ವೇಷ – ತೆಂಕುತಿಟ್ಟಿನಲ್ಲಿ ಮುಖ್ಯ ಸ್ತ್ರೀ ವೇಷದ ಕುಣಿತದ ಕೊನೆಯಲ್ಲಿ ದಶಾವತಾರ ಕೋಲಾಟ, ದಶಾವತಾರ ಸಂವಾದ ಎಂಬ ಎರಡು ಕುಣಿತಗಳಿರುತ್ತಿದ್ದುವು.

ಈ ಮುಖ್ಯ ಸ್ತ್ರೀ ವೇಷಗಳು ಸಾಂಪ್ರದಾಯಿಕವಾಗಿ ಬಡಗುತಿಟ್ಟಿನಲ್ಲಿ ಎರಡು ವೇಷಗಳು. ತೆಂಕುತಿಟ್ಟಿನಲ್ಲಿ ಒಂದೇ ಇದ್ದುದು. ಈಗ ಎರಡು ಇರುವುದಿದೆ. ಈ ಮುಖ್ಯ ಸ್ತ್ರೀ ವೇಷದ ನೃತ್ಯದಲ್ಲಿ, ಸ್ವಲ್ಪಾಂಶ ನಡೆದ ಬಳಿಕ, ಹಾಸ್ಯಗಾರನೂ ಬಂದು ಸೇರಿ ಕೊಳ್ಳುವುದು ತೆಂಕುತಿಟ್ಟಿನ ವಿಶೇಷತೆ. ಈ ಹಾಸ್ಯಗಾರನೂ, ಭಾಗವತರೂ ಸೇರಿ, ಮೇಳದ ದೇವರು, ಆಯಾ ಸ್ಥಳದ ದೇವರುಗಳು, ಆಟ ಆಡಿಸುವವರು – ಇವರ ಹೊಗಳಿಕೆಯನ್ನು ಮಾಡುವ ಪದ್ಧತಿ ಇದೆ. ಬಡಗುತಿಟ್ಟಿನಲ್ಲಿ, ಹಾಸ್ಯಗಾರನ ಪ್ರವೇಶವಾಗಲಿ, ಹೊಗಳಿಕೆಗಳಾಗಲಿ ಇಲ್ಲ.

30. ಪೀಠಿಕೆ ಬಾರಿಸುವುದು: ಚೆಂಡೆ ಮದ್ದಲೆ ಗಳನ್ನು ಏಕತಾಳದಲ್ಲಿ, ವಿವಿಧ ತಾಳಗಳ ನಡೆಗಳನ್ನಳವಡಿಸಿ ಬಡಿಯುವುದು. ಇದು ಸುಮಾರು ಹದಿನೈದು ನಿಮಿಷಗಳ ಕಾಲ ಜರಗುವ ಗೀತರಹಿತ ವಾದನ.

31. ಪೀಠಿಕೆ ಸ್ತ್ರೀ ವೇಷಗಳು – ವೀರಕಚ್ಚೆ ಉಟ್ಟ ಎರಡು ಸ್ತ್ರೀ ವೇಷಗಳ ಕುಣಿತ. ಸ್ತುತಿ ಪದ್ಯಗಳು. ಈ ಪದ್ಯಗಳನ್ನು ಏರಿಕೆಯಲ್ಲೆ ಹಾಡುವುದು ಸಂಪ್ರದಾಯ. ಇವು ತೆಂಕುತಿಟ್ಟಿನಲ್ಲಿ ಮಾತ್ರ ಇರುವ ವೇಷಗಳು. ಬಡಗುತಿಟ್ಟಿನಲ್ಲೂ ಇದಕ್ಕೆ ಸಂಬಂಧಿಸಿದ ಪದ್ಯಗಳನ್ನು ಹಾಡುವುದಿದೆ. ಆದರೆ, ವೇಷಗಳಿಲ್ಲ.

ತಿಟ್ಟುಗಳಲ್ಲಿನ ವ್ಯತ್ಯಾಸ: 1. ಮುಖ್ಯ ಸ್ತ್ರೀ ವೇಷದ ಜತೆಗೆ ಹಾಸ್ಯಗಾರನ ಕುಣಿತ. ತೆಂಕುತಿಟ್ಟಿನಲ್ಲಿ ಮಾತ್ರ. ಬಡಗುತಿಟ್ಟಿನಲ್ಲಿಲ್ಲ.

2. ಪೀಠಿಕೆ ಸ್ತ್ರೀ ವೇಷಗಳೆಂಬ ಎರಡು ವೇಷಗಳು – ತೆಂಕುತಿಟ್ಟಿನಲ್ಲಿ ಮಾತ್ರ. (ಉ.ಕ.ದಲ್ಲಿ ಚಂದಭಾಮಾ ಸ್ತ್ರೀ ವೇಷಗಳಿಗೂ, ಮುಖ್ಯ ಸ್ತ್ರೀ ವೇಷಕ್ಕೂ ಪೀಠಿಕೆ ಸ್ತ್ರೀ ವೇಷವೆಂದು ಹೆಸರು).

3. ದಶಾವತಾರ ಸಂವಾದವೂ, ದಶಾವತಾರ ಕೋಲಾಟವೂ-- ಪ್ರಾಯಃ ತೆಂಕುತಿಟ್ಟಿನಲ್ಲಿ ಮಾತ್ರ ಇದ್ದುವು.

ಕೆಲವು ವಿಶೇಷಾಂಶಗಳು: 1. ಈ ಸಭಾಲಕ್ಷಣವು ನಾಟ್ಯ ಶಾಸ್ತ್ರೋಕ್ತವಾದ ಪೂರ್ವರಂಗ ಸಂಪ್ರದಾಯವೆಂದೂ, ಇದರ ಪ್ರಯೋಗವೂ ಇಂದಿಗೂ ಶಾಸ್ತ್ರೋಕ್ತ ಕ್ರಮದಲ್ಲೆ ಇದೆಯೆಂದೂ ವಿದ್ವಾಂಸರು ಸಾಧಿಸಿ ತೋರಿಸಿದ್ದಾರೆ. (ದಿ। ಕುಕ್ಕಿಲ ಕೃಷ್ಣ ಭಟ್ಟರ ಲೇಖನ: ಮಂದಾರ: ಮುಂಬಯಿ: 1986.) ಅವರು ಹೇಳುವಂತೆ ಪ್ರತ್ಯಾಹಾರ, ಆಶ್ರಾವಣ, ಆರಂಭ, ಸಂಗೀತ ವಿಧಿ, ನಿರ್ಗೀತ ವಿಧಿ, ಉದ್ಘಾಪನ, ಪರಿವರ್ತನ, ರಂಗ ದ್ವಾರಚಾರಿ – ಮೊದಲಾದುವು ಸಭಾಲಕ್ಷಣ ಪ್ರಯೋಗದಲ್ಲಿ ಇವೆ. ಕ್ರೀಡನೀಯಕವೆಂದರೆ ಆಟ, ಆಶ್ರಾವಣ ಎಂದರೆ ಕೇಳಿ, ಪೀಠಿಕೆ ಬಾರಿಸುವಿಕೆಯೇ ನಿರ್ಗೀತ ವಿಧಿ, ಸಂಗೀತವೆಂಬ ಹಾಡುವಿಕೆ (ಸಂಗೀತಗಾರನೆಂದರೆ ಸಭಾಲಕ್ಷಣದ ಹಾಡುಗಾರನೆಂದೇ ಬಳಕೆಯಷ್ಟೆ), ಕೋಡಂಗಿ ಗಳೆಂದರೆ ಪಾರಿಪಾರ್ಶ್ವಕರು.

ಸಭಾಲಕ್ಷಣದಲ್ಲಿ ಹೇಳಿದ ಚಚ್ಚತ್ಪುಟ, ದರ್ಪಣ ಕುಡುಕಾದಿತಾಳಗಳೂ, ಧ್ರುವ, ಮಠ್ಯಾದಿ ತಾಳಗಳೂ, ಶಾಸ್ತ್ರೀಯ ತಾಳಗಳು. ಬಾಲಗೋಪಾಲ ಕುಣಿತವೆಂದರೆ, 'ವೈಷ್ಣವ ಬಾಲಕ್ರೀಡಾ' ಎಂಬ ಶಾಸ್ತ್ರೋಕ್ತ ಪದ್ಧತಿ. ಗಣಪತಿ ಕೌತುಕ, ಸುಬ್ರಾಯ ವೇಷ, ಶಿವನ ವೇಷಗಳೂ ಶಾಸ್ತ್ರೋಕ್ತವೇ.

ಅಲ್ಲದೆ, ಕಟ್ಟು ಹಾಸ್ಯಗಳೆಂಬ ಕೆಲವು ರಂಜನೆಗಳು ಸಹ ಶಾಸ್ತ್ರದಲ್ಲಿ ''ಪ್ರರೋಚನ'', ''ಆಮುಖ'' ''ವೀಥೀಪ್ರಹಸನ'' – ಎಂದು ಕರೆಯಲ್ಪಟ್ಟು ಉಕ್ತವಾದವುಗಳೇ ಆಗಿವೆ.

– ಇದು ದಿ। ಕುಕ್ಕಿಲ ಕೃಷ್ಣ ಭಟ್ಟರ ಪ್ರತಿಪಾದನೆ. ಇದು ಯುಕ್ತಿಯುಕ್ತವಾಗಿದ್ದು, ಸಂಗತವಾಗಿದೆ.

ಸಭಾ ಲಕ್ಷಣ ಮತ್ತು ರಾಮಾಯಣ ಪ್ರಸಂಗಗಳು: ಹಿಂದೆ ಸಭಾಲಕ್ಷಣ ಪ್ರಯೋಗದಲ್ಲೆ ರಾಮನ ವೇಷದ ಒಡ್ಡೋಲಗವು ಆಗಬೇಕೆಂಬ ವಿಧಿ ಯಿತ್ತು. ಪ್ರಸಂಗ ಯಾವುದೇ ಇದ್ದರೂ, ರಾಮನ ಒಡ್ಡೋಲಗವು ಕಟ್ಟಳೆಯಾಗಿತ್ತಂತೆ. (ದಿ। ಕುಕ್ಕಿಲ: ಪಾರ್ತಿಸುಬ್ಬನ ಯಕ್ಷಗಾನಗಳು, 1975)

ಸಭಾ ಲಕ್ಷಣದ ಹಳೆಯ ಪ್ರತಿಯೊಂದರಲ್ಲಿ (ಕಾಲ ಕ್ರಿ.ಶ. 1621) ಸಭಾ ಲಕ್ಷಣದ ಕೊನೆಯಲ್ಲಿ ಪಂಚವಟಿ ಕಥಾನಕದ ವಿಚಾರ ಬರುತ್ತದೆ ಎಂದು

ಡಾ। ಶಿವರಾಮ ಕಾರಂತರು ಹೇಳಿದ್ದಾರೆ. (ಯಕ್ಷಗಾನ: 1974: ಮೈಸೂರು ವಿವಿ.) ಇದರಿಂದ, ರಾಮಾಯಣ ಪ್ರಸಂಗವೇ ಸಭಾಲಕ್ಷಣದೊಂದಿಗೆ ರಂಗಕ್ಕೆ ಬಂದ ಮೊದಲ ಪ್ರಸಂಗವಿರಬಹುದೆಂಬ ಊಹೆಯನ್ನು ಅವರು ಮಂಡಿಸಿದ್ದಾರೆ.

ಸಭಾಲಕ್ಷಣದ ಕರ್ತೃವು (ಸಂಕಲನಕಾರನು) ಪ್ರಸಿದ್ಧ ರಾಮಾಯಣ ಪ್ರಸಂಗಗಳ ಕರ್ತೃವಾದ ಪಾರ್ತಿಸುಬ್ಬನೆಂದು, ಕಾಸರಗೋಡು ಪ್ರದೇಶದಲ್ಲಿ ಬಲವಾದ ಜನಶ್ರುತಿ ಇದೆ. ಈ ಪ್ರದೇಶದ ಹಳೆಯ ಸಭಾಲಕ್ಷಣದ ಓಲೆಗಳಲ್ಲಿ ಕಥಕಳಿಯ ರಾಮಪರವಾದ ಶ್ಲೋಕಗಳು ದೊರೆತಿವೆ. ಸಭಾಲಕ್ಷಣದ ಎಲ್ಲ ಪಾಠಗಳಲ್ಲಿ ದೊರೆಯುವ "ಶರಣು ತಿರುವಗ್ರಶಾಲಿವಾಹಿನಿ..." ಎಂಬ ಪದ್ಯವೂ, ಗಣಪತಿ ಕೌತುಕದ "ಅರದಿರು ಮರದಿರು" ಎಂಬ ವಚನವೂ, "ಪರಿಪಾಹಿ ಮಾಂ... ರಾಮ", "ಪಂಪಾರ್ಬಲ। ಪಯ ಮಾಂಪಲ"... ಎಂಬ ಹಾಡುಗಳೂ ಮಲೆಯಾಳ ಮೂಲದವುಗಳು.

ಬಹುಪ್ರಾಚೀನದಲ್ಲಿ, ತೆಂಕುತಿಟ್ಟಿನಲ್ಲಿ ಸಭಾಲಕ್ಷಣದಲ್ಲಿ ರಾಮದೇವರ ಒಡ್ಡೋಲಗವೂ ಸೇರಿರುತ್ತಿತ್ತು. ಅಂದರೆ, ಅಂದು ಆಡುವ ಪ್ರಸಂಗ ಯಾವುದೇ ಆದರೂ ರಾಮನ ಒಡ್ಡೋಲಗ ಆಗಲೇಬೇಕು. ಶಾಸ್ತ್ರೀಯವಾಗಿ ಇದು 'ರಂಗಾವತಾರ'ವೆನಿಸುತ್ತದೆ (ಕುಕ್ಕಿಲ: ಪೂರ್ವೋಕ್ತ ಗ್ರಂಥ).

ಈಯೆಲ್ಲವುಗಳ ಮೇಲಿನಿಂದ, ಸಭಾಲಕ್ಷಣಕ್ಕೆ ಪಾರ್ತಿಸುಬ್ಬನ ಕರ್ತೃತ್ವವನ್ನೂ, ರಾಮಾಯಣ ಪ್ರಸಂಗಗಳೇ ಸಭಾಲಕ್ಷಣ ಸಹಿತ ರಂಗಕ್ಕೆ ಮೊದಲಾಗಿ ಬಂದಿರಬೇಕೆಂದೂ ನ್ಯಾಯವಾಗಿ ತರ್ಕಿಸಬಹುದು.

ಮದವೂರಿನಿಂದ ಇಡಗುಂಜಿಗೆ

ಸಭಾಲಕ್ಷಣದ ಎಲ್ಲ ಪಾಠಗಳಲ್ಲಿ ತಪ್ಪದೆ ಸಿಕ್ಕುವ ಮೊದಲ ಪದ್ಯವು "ಮುದದಿಂದ ನಿನ್ನ ಕೊಂಡಾಡುವೆನು ಅನವರತ। ಮದವೂರ ವಿಘ್ನೇಶ ದೇವಜಗದೀಶ."... ಎಂಬುದು. ಈ ಮದವೂರು ಕಾಸರಗೋಡಿನ ಮದವೂರೆಂಬುದರಲ್ಲಿ ಸಂದೇಹವಿಲ್ಲ.

ಸಭಾಲಕ್ಷಣದ ಕೊನೆಯ ಭಾಗದಲ್ಲಿ ಬರುವ ಒಂದು ಪದ್ಯವು ಇಡಗುಂಜಿ ಗಣಪತಿಗೆ ಸಂಬಂಧಿಸಿದ್ದು, "ಪೊಡವಿಯೊಳುತ್ತಮ। ಇಡಗುಂಜಿ ಪುರದೊಳು। ದೃಢದಲಿ ನೆಲಸಿಹ। ಒಡೆಯಾ ವಿಘ್ನೇಶಾ" – ಎಂಬ ಪದ್ಯವಿದು. ಇದರಿಂದಾಗಿ ಸಭಾಲಕ್ಷಣವು ಮದವೂರಿನಿಂದ, ಇಡಗುಂಜಿತನಕ ಪಸರಿಸುತ್ತ ಬೆಳೆಯಿತೆಂದು ಊಹಿಸಲೆಡೆಯಿದೆ.

ಸದ್ಯ ನಿಶ್ಚಿತವೆನಿಸಿರುವ ಮುದ್ರಿತ ಪ್ರತಿಗಳಲ್ಲೂ, ಹಸ್ತಪ್ರತಿಗಳಲ್ಲೂ ಸಿಕ್ಕುವ, ಈಗ ರಂಗದಲ್ಲಿ ಬಳಕೆಯಿರುವ ಸಭಾಲಕ್ಷಣದ ಸ್ವರೂಪವು ಈ ಶತಮಾನದ ಆರಂಭಕ್ಕೆ ಮೊದಲೇ ಸ್ಥಿರೀಕೃತವಾಗಿರಬೇಕು. ಈ ಶತಕದ ಆರಂಭದಲ್ಲಿ ಮುದ್ರಿತವಾದ ಪ್ರತಿಗಳಿಂದ (ಉದಾ: ಹೆರಗದ ಅಂಗಡಿ ಸುಬ್ಬಣ್ಣ ಪ್ರಭುಗಳು, ಹರಿಹರಪುರ ಇವರ ಪ್ರಕಾಶಿತ ಪ್ರತಿ 1915)ಲೂ, ಹಲವು ಭಾಗವತರುಗಳ ಬಾಯಿಪಾಠದ ಪ್ರತಿಗಳಿಂದಲೂ ವಿದಿತವಾಗುತ್ತದೆ.

ಕೆಲವೇ ಕೆಲವು ಹಾಡುಗಳು, ಒಂದೆರಡು ಸನ್ನಿವೇಶಗಳನ್ನು ಬಿಟ್ಟರೆ, ಈ ಸ್ಥಿರೀಕೃತ ಪಾಠವೇ ತೆಂಕು, ಬಡಗುತಿಟ್ಟುಗಳೆರಡರಲ್ಲೂ ಒಂದೇ ರೀತಿಯಾಗಿದೆ.

ಸಭಾವಂದನೆ: 1. ಸಭಾಲಕ್ಷಣ. ಸಮಗ್ರ.

2. ಸಭಾಲಕ್ಷಣದ ಸಭಾವಂದನೆಯ ಭಾಗ, – "ವಂದೇ ಸಭಾ ಮಂಡಲಮ್" – ಇತ್ಯಾದಿ.

3. ವೇಷವು ಸಭೆಯನ್ನು ವಂದಿಸುವುದು.

ಸಭೆ: ಜನರು, ಪ್ರೇಕ್ಷಕರು, ಸಭಾಸದರು.

ಸಭೆಯಲ್ಲಿ ಬರುವುದು (ತೆ.): ಕೆಲವು ವೇಷಗಳು, ಚೌಕಿಯಿಂದ ಹೊರಡದೆ, ಸಭೆಯ ಕಡೆಯಿಂದ ರಂಗಸ್ಥಳಕ್ಕೆ ಬರುವುವು. ಉದಾ: ಮಹಿಷಾಸುರ, ಚಾಣೂರ ಮುಷ್ಟಿಕರು, ಸೀತಾಕಲ್ಯಾಣದ ಪರಶುರಾಮ ಮುಂತಾದ ವೇಷಗಳ ಪ್ರವೇಶ.

ಈ ಪದ್ಧತಿಯು ದೊಡ್ಡಾಟ, ಗಟ್ಟದ ಕೋರೆಗಳಲ್ಲೂ ಇದ್ದು, ಹಲವು ಸಾಂಪ್ರದಾಯಿಕ ರಂಗಭೂಮಿಗಳಲ್ಲಿ ಕಂಡುಬರುವ ವಿದ್ಯಮಾನವಾಗಿದೆ.

ಸರಕಿನ ಪೆಟ್ಟಿಗೆ (ಬ.): ಮೇಳದ ಸಾಮಗ್ರಿಗಳನ್ನು ತುಂಬಿಸುವ ಪೆಟ್ಟಿಗೆಗಳಲ್ಲಿ ಒಂದು ಪ್ರಕಾರ, ಜವುಳಿ ಹೊರತಾದ, ವೇಷ ಸಾಮಗ್ರಿಗಳನ್ನು ಸರಕಿನ ಪೆಟ್ಟಿಗೆಗಳಲ್ಲಿ ತುಂಬಿಸುವರು. ಇಂತಹ ಮೂರು ಪೆಟ್ಟಿಗೆಗಳಿರುತ್ತಿದ್ದುವು.

ನೋಡಿ: **ಪೆಟ್ಟಿಗೆ, ಹೊರೆ, ದೊಡ್ಡಪೆಟ್ಟಿಗೆ, ದೇವರ ಪೆಟ್ಟಿಗೆ.**

ಈಗ ಒಬ್ಬ ವೇಷಧಾರಿಗೊಂದರಂತೆ ಪೆಟ್ಟಿಗೆಗಳಿರುತ್ತವೆ.

ಸರಪಳಿ:

1. ಸರಪಳಿ ಸರ, ಚೈನ್.

2. ಕರ್ಣಾಭರಣಗಳಿಗೆ ಇರುವ ಸರಪಣಿಗಳು, ಓಲೆ ಸರಪಣಿ, ತಾಂಗು ಸರಪಣಿ, ಕೆನ್ನೆಸರಪಣಿ ಇತ್ಯಾದಿ.

ಸರಸ್ವತಿ ಗಂಟು: ಚೆಂಡೆ, ಮದ್ದಲೆಗಳ ಬಾರಗಳ ಕೊನೆಗಳನ್ನು ಜೋಡಿಸಿ, ವಿಶಿಷ್ಟ ರೀತಿಯಲ್ಲಿ

ಬಿಗಿಯುವ ಗಂಟು (end knot). ಚೆಂಡೆ, ಮದ್ದಲೆಗಳ ಮುಚ್ಚಿಗೆಗಳನ್ನು ಬಿಗಿಯುವ ಬಾರ ಒಂದೇ ಇದ್ದು, ಅದೇ ಹಗ್ಗವು ಎಲ್ಲ ತೂತುಗಳ ಮೂಲಕ ಹಾದು ಬರುತ್ತದೆ. ಇದರ ಕೊನೆಗಳನ್ನು ಜೋಡಿಸುವ ಗಂಟು ಇದು. ಇದನ್ನು, ಬಾರದ ತುದಿಗಳನ್ನು ಕಳಸಿಗೆಯ ಬದಿಗೆ, ಸೇರಿಸಿ ಬಿಗಿಯ ಬಹುದು ಅಥವಾ ಇಂಡಿಗೆಗೆ ಒಂದು ಹೆಚ್ಚುವರಿ 'ಕಣ್ಣು' (ತೂತು) ಮಾಡಿ ಸಿಕ್ಕಿಸಿ ಬಿಗಿಯಬಹುದು.

ಚರ್ಮವು ದೇವಾಲಯದೊಳಗೆ ನಿಷಿದ್ಧ ವಸ್ತುವಷ್ಟೆ. ಚರ್ಮವಾದ್ಯಗಳಿಗೆ 'ಸರಸ್ವತಿಗಂಟು' ಇರುವುದರಿಂದ, ದೋಷವು ಪರಿಹಾರವಾಗುತ್ತದೆಂದೂ, ಹಾಗಾಗಿಯೇ ಎಲ್ಲ ಚರ್ಮವಾದ್ಯಗಳ ಗಂಟಿಗೆ ಈ ಹೆಸರು ಬಂದಿರುವುದೆಂದೂ ನಂಬುಗೆ.

ಸರ್ಪಸುಳಿ (ಬ.): ಬಣ್ಣದ ವೇಷದ ಹಣೆಯ ಮೇಲಿನ ಒಂದು ಬಗೆಯ ಸುಳಿ, ಸುಮಾರಾಗಿ ಸರ್ಪದ ಹೆಡೆಯ ಆಕಾರದ ಚುಟ್ಟಿಗಳ ವಿನ್ಯಾಸ. ಪಾತಾಳ ರಾಕ್ಷಸರಿಗೆ (ಮೈರಾವಣ, ಸಂಶಪ್ತಕ) ಈ ಸುಳಿಯೆಂದು ಪದ್ಧತಿ.

ಸರ್ಪಾಸ್ತ್ರ: 1. ಸರ್ಪಾಸ್ತ್ರ ಪ್ರಯೋಗಕ್ಕೆ ಬಳಕೆಯಾಗುವ ಬಟ್ಟೆಯ ಅಥವಾ ಮರದ ಸರ್ಪ.
2. ಸರ್ಪಾಸ್ತ್ರದ ವೇಷ.

ಸರ್ವಜ್ಞಹಾಸ್ಯ: ಪೂರ್ವರಂಗದ ಕಟ್ಟು ಹಾಸ್ಯಗಳಲ್ಲೊಂದು. ಅಣಕು ಸರ್ವಜ್ಞಪದಗಳನ್ನು ಹಾಡಿಕೊಂಡು ಬರುವುದು.

ಸಲಾಂಹಜ್ಜೆ: ನೋಡಿ: **ನಮಸ್ಕಾರ ಹಜ್ಜೆ** ಇದು ಸಲಾಂ ಕೊಟ್ಟಂತೆ ಇರುವುದರಿಂದ ಈ ಹೆಸರು. ತೆಂಕುತಿಟ್ಟಿನ ಈ ಹಜ್ಜೆಗೆ ಮುಂದಕ್ಕೆ ಬಾಗುವಿಕೆ ಮತ್ತು ಕೈಯನ್ನು ಮುಖದವರೆಗೆ ತರುವಿಕೆ–ಹೆಚ್ಚು. ಬಡಗುತಿಟ್ಟಿನಲ್ಲಿ ಇದೇ ಹಜ್ಜೆಗೆ ಬಗ್ಗುವಿಕೆ, ಕೈಯನ್ನು ಮುಖದವರೆಗೆ ತರುವಿಕೆ ಇಲ್ಲ. ತುಸುಬಗ್ಗಿ, ಕೈಗಳನ್ನು ಮೇಲೆ ಕೆಳಗೆ ಮಾಡುತ್ತಾರೆ.

ಸವಾರಿ: 1. (ಬ.) ಪ್ರಯಾಣ. ಪ್ರಯಾಣದ ಹಜ್ಜೆಗಳು.
2. (ಉ.) ಮೇಳದ ತಿರುಗಾಟ, ನೋಡಿ: **ತಿರುಗಾಟ**.

ಸವಾರಿ ಮೇಳ (ಉ.): ತಿರುಗಾಟದ ಮೇಳ, ವ್ಯವಸಾಯಿ ತಂಡ.

ಸವಾರಿ ಹೆಜ್ಜೆ: ಪ್ರಯಾಣ ಕುಣಿತ. ಸವಾರಿ.

ಸಾಗುವಾನಿ: ತೇಗದ ಮರ (Tectoma grandis) ವೇಷ ಸಾಮಗ್ರಿಗೂ, ಮದ್ದಲೆ ಕಳಸಿಗೆಗೂ ಬಳಕೆ.

ಸಾಕ್ಸ್: ಕಾಲುಚೀಲ. Stockings. ನೋಡಿ: **ಚೋಕಿನ್ಸ್**; ಸ್ಟಾಕಿಂಗ್ಸ್, ಈಚಿನ ಬಳಕೆ.

ಸಾಮಾನು: 1. ಮೇಳದ ಎಲ್ಲ ಸಾಮಗ್ರಿ.
2. ವಿಶಿಷ್ಟ ಸಂದರ್ಭದ ಸಾಮಾನುಗಳು- ಉದಾ: ಅಡುಗೆ ಸಾಮಾನು, ವೇಷ ಸಾಮಾನು, ದೇವರ ಸಾಮಾನು, ತಲೆ ಸಾಮಾನು, ಇತ್ಯಾದಿ.
3. ಆಭರಣಗಳು ಮಾತ್ರ. ಉದಾ: ''ಸಾಮಾನು ಸರಿಯಾಗಿ ಕಟ್ಟಿಕೊಳ್ಳಬೇಕು.''
– ಜವುಳಿ, ಸಾಮಾನು, ಬಣ್ಣ- ಇವು ಸೇರಿ ವೇಷವಾಗುವುದು.

ಸಾಯಿಬ/ಸಾಯ್ಬ: ಕಟ್ಟು ಹಾಸ್ಯಗಳಲ್ಲೊಂದು. ಮುಸ್ಲಿಂ ಹಾಸ್ಯ. ಉರ್ದು ಮಿಶ್ರಿತ ಕನ್ನಡ ಮಾತಾಡುವವನು.

ಸಾಯ್ಬ = ನೋಡಿ: ಸಾಯಿಬ.

ಸಾರಥಿ (ಗ./ಮೂ.): ದೂತ. ಹಾಸ್ಯಗಾರ. ಎಲ್ಲ ಪಾತ್ರಗಳ ಜತೆಗಿರುವ ಒಂದು ವೇಷ. ಹೊಗಳಿಕೆ ಹಾಸ್ಯಗಾರ, ದೂತ, ಸಾರಥಿ, ಸಖ- ಎಲ್ಲವೂ ಸೇರಿದ ಪಾತ್ರ.

ಸಾಲಿನ ವೇಷ (ಬ.): ಎರಡು ವೇಷಗಳು, ವೇಷಧಾರಿಗಳ ಸ್ಥಾನ ಕೂಡ. ಕಪ್ಪು ಮುಂಡಾಸು, ಕೆಂಪು ಮುಂಡಾಸು ವೇಷಗಳು. ಎಡದ ಚೌಕಿಯಲ್ಲಿ ಕುಳ್ಳಿರುವ ವೇಷಗಳು.
'ಸಾಲಿನ' ಎಂದರೆ, ಮುಖ್ಯವಲ್ಲದ ಎಂಬ ಅರ್ಥ ಬರುವಂತಿದೆ.

ಸಾಲುರಂಗಸ್ಥಳ: ಜೋಡಾಟಗಳಿಗೆ ರಂಗಸ್ಥಳಗಳನ್ನು ಹಾಕುವ ಒಂದು ಕ್ರಮ. ಒಂದಕ್ಕೊಂದು ತಾಗಿದಂತೆ, ಸ್ಥಳಬಿಟ್ಟು, ಸಾಲಾಗಿ ಹಾಕಿದ ರಂಗಸ್ಥಳಗಳು. – ಇನ್ನೊಂದು ಕ್ರಮ ಮುಖಾಮುಖಿಯಾದ ಎದುರೆದುರು ರಂಗಸ್ಥಳ.

ಸಾಹಿತ್ಯ: 1. ಪ್ರಸಂಗ ಸಾಹಿತ್ಯ. ಪದ್ಯಗಳು.
2. ಮಾತುಗಾರಿಕೆ. ಅರ್ಥಗಾರಿಕೆ.
3. ಸಾಮಗ್ರಿಗಳು; ಉದಾ: ಪಡಿ ಸಾಹಿತ್ಯ, ವೇಷದ ಸಾಹಿತ್ಯ- ಇತ್ಯಾದಿ.
4. ತಾಳದ ಸಾಹಿತ್ಯ- ಪೆಟ್ಟುಗಳ ನುಡಿಕಾರಗಳು, ಬೋಲ್‌ಗಳು. ಬಡಿತಗಳು ಸಹ.
5. ಮಾತುಗಾರಿಕೆಗೆ ಪೂರಕವಾದ ಸಂಗತಿಗಳ ಸಂಗ್ರಹ. ಪದ್ಯಗಳ ಸರಳ ಅನುವಾದಕ್ಕಿಂತ ಭಿನ್ನವಾಗಿ ಇರುವಂತೆ ಸೇರಿಸುವ ವಿಷಯಗಳು. ಉದಾ: ''ಅವರು ಪದ್ಯದ ಅರ್ಥಕ್ಕೆ ಸಾಹಿತ್ಯ ಹಾಕಿ ಮಾತಾಡಿದರು.''

ಸಿಂಗರಪಾಟ್ಟು ಹಾಸ್ಯ (ತೆ.): ಕಟ್ಟು ಹಾಸ್ಯಗಳಲ್ಲೊಂದು. ಮಲೆಯಾಳಿ ಹಾಡುಗಳಿಂದ ಕೂಡಿರುತ್ತದೆ.

ಸಿಂಗಲ್ ಉರುಳಿಕೆ: ಒತ್ತೆ ಉರುಳಿಕೆ. ಚೆಂಡೆ, ಮದ್ದಲೆಗಳ ಉರುಳಿಕೆಯ ಒಂದು ಬಗೆ. ಒಂದು ಮಾತ್ರಾಕಾಲಕ್ಕೆ ಒಂದೇ ಪೆಟ್ಟಿನ ಉರುಳಿಕೆ.
ಉ: ತ। ರಿ। ಕಿ। ಟ। ಕಿ। ಟ। ತ।ಕ.
-ಇದಕ್ಕೆ ಭಿನ್ನವಾಗಿ-ಡಬ್ಬಲ್ ಉರುಳಿಕೆ.
ನೋಡಿ: **ಒತ್ತೆ ಉರುಳಿಕೆ, ಎರಟ್ಟೆ ಉರುಳಿಕೆ.**

ಸಿಂಗಲ್‌ಲಾಗ (ತೆ.): ಒಂಟಿಲಾಗ. ಒಂದು ತಾಳಾವರ್ತಕ್ಕೆ ಒಂದು ಲಾಗ. ಇದಕ್ಕೆ ಭಿನ್ನವಾದದ್ದು **ಡಬಲ್‌ಲಾಗ.**

ಸಿಂಗಿ ಸಿಂಗ: ಕಟ್ಟು ಹಾಸ್ಯ. ಗಂಡ ಹೆಂಡತಿ ವಿನೋದ ಪ್ರಸಂಗ.

ಸಿಂಹ: ಸಿಂಹ, ನರಸಿಂಹ ವೇಷಗಳು.
1. ಮೈಗೆ ರೋಮದ ಅಂಗಿ ಹಾಕಿ, ಮುಖವಾಡ ಇಟ್ಟು ಬರುವ ಸಿಂಹ. ಉದಾ: ದೇವಿ ಮಹಾತ್ಮೆ ಪ್ರಸಂಗದ ಸಿಂಹ.
2. ನರಸಿಂಹ ವೇಷ. ಸೊಂಟದ ಕೆಳಗೆ **ಕಸೆ, ನೆರಿ** ಉಟ್ಟು, ಮೈಗೆ ಬಣ್ಣ ಬಳಿದು, ಮುಖಕ್ಕೆ ಬಣ್ಣ ಬರೆದು, ತಲೆಗೆ ಕೆಂಚು ಕೇಸರಿ ಇಟ್ಟ ವೇಷ. ತಲೆಗೆ ಚಿಕ್ಕ ತುರಾಯಿ ಬಿಗಿದು, ಕೇಸರಿ ಸಿಕ್ಕಿಸುವುದೂ ಉಂಟು.

ಸಿರಿಮುಡಿ: 1. (ತೆ.) **ಚಿಕ್ಕ ಪಗಡಿ.** ಕೃಷ್ಣ, ಅಭಿಮನ್ಯು, ಲವಕುಶ ಇತ್ಯಾದಿ ವೇಷಗಳ ಶಿರೋಭೂಷಣ. ಬಡಗಿನ ಕೇದಗೆ ಮುಂದಲೆಗೆ ಸಮ.
2. ಸ್ತ್ರೀವೇಷದ ಮುಡಿಗೆ ಸಿಕ್ಕಿಸುವ ಪಗಡಿಯಾಕಾರ. **ಕಿರಣ.** (ಇದು ಡಾ। ಶಿವರಾಮ ಕಾರಂತ, ಕೆ. ಕೆ. ಹೆಬ್ಬಾರ್ ಅವರು ರೂಪಿಸಿದ ಶಿರೋಭೂಷಣ) ಈಗ ಮೂರೂ ತಿಟ್ಟುಗಳಲ್ಲಿ ಬಳಕೆಯಲ್ಲಿದೆ.

ಸೀರೆ: ಗಂಡು, ಹೆಣ್ಣು ವೇಷಗಳ ಉಡುಗೆಯ ಸೀರೆ.
1. ಸ್ತ್ರೀವೇಷದ ಸೀರೆ, ಕಪ್ಪು, ಕೆಂಪು, ಹಸುರು ಸೀರೆಗಳು.
2. (ಬ./ಉ.) ಕಸೆ ಸೀರೆ. ಹಳದಿ, ಕಪ್ಪು ಚೌಕುಳಿಗಳ ಸೀರೆ. ಸ್ತ್ರೀ, ಪುರುಷ ವೇಷಗಳಿಗೆ ಬಳಕೆ.
3. (ತೆ.) ಪುರುಷ ವೇಷದ ಕಸೆ ಸೀರೆ, ಜರಿ ಅಂಚಿನ ಕಪ್ಪು ಅಥವಾ ಕೆಂಪು ಸೀರೆ.-ಈಗ ಚಲ್ಲಣ ರೂಢಿಯಾಗಿದೆ.
4. ತೆರೆ ಸೀರೆ. ತೆರೆಗೆ ಬಳಸುವ ಸೀರೆ ಅಥವಾ ವಲ್ಲಿ.

ಸುಂದರ ರಾವಣ: ಚೂಡಾಮಣಿ ಪ್ರಸಂಗದ ಶೃಂಗಾರ ರಾವಣ. ರಾವಣನ ಸುಂದರ ರೂಪ. ತೆಂಕುತಿಟ್ಟಿನಲ್ಲಿ ದೊಡ್ಡ ಪಗಡಿಯ, ಬಡಗುತಿಟ್ಟಿನಲ್ಲಿ ಕೆಂಪು ಮುಂಡಾಸಿನ ವೇಷ. ಇದರ ಮುಖವರ್ಣಿಕೆ ಉಳಿದ ವೇಷಗಳಂತೆ, ಗೌರವರ್ಣ, ಮುದ್ರೆಗಳಿಂದ ಕೂಡಿದ್ದು, ಹಣೆಗೆ ಅರ್ಧನಾಮವಿರುತ್ತದೆ.

ಸುಂದರ ವೇಷ: ಸೌಮ್ಯ, ಸುಂದರ ಮುಖವರ್ಣಿಕೆಯ ವೇಷ. ಮುಖ್ಯವಾಗಿ ಪುಂಡುವೇಷ.
(ವರ್ಣನಾತ್ಮಕ ಪದ– ಪಾರಿಭಾಷಿಕವಲ್ಲ.)

ಸುತ್ತಿಗೆ: ಮದ್ದಲೆ ಶ್ರುತಿ ಮಾಡಲು ಬಳಸುವ ಲೋಹದ ಸುತ್ತಿಗೆ.

ಸುತ್ತು: 1. (ಬ.) ಮುಂಡಾಸು, ಕೇದಗೆ ಮುಂದಲೆಗಳ ತುದಿಯ ಅಲಂಕಾರ. ಜರಿ, ಹೂವು, ಬಟ್ಟೆಗಳ ಸುತ್ತುಗಳು.
2. ಕುಣಿತದಲ್ಲಿ, ರಂಗಕ್ಕೆ ಸುತ್ತು ಬರುವಿಕೆ.
3. (ತೆ.) ಧೀಗಿಣದಲ್ಲಿ, ಏರುಪದ್ಯದ ಕುಣಿತದಲ್ಲಿ ಹಜ್ಜೆ ಇಡುತ್ತ ರಂಗಕ್ಕೆ ಸುತ್ತು ಬರುವಿಕೆ.
4. (ತೆ.) ಏರುಪದ್ಯಗಳ ಕುಣಿತದಲ್ಲಿ, ಬಿಡ್ತಿಗೆಯ ಕುಣಿತದ ಒಂದು ಭಾಗ. ರಂಗಸ್ಥಳವನ್ನು ಬಳಸಿಕೊಂಡು ಬಂದು, ಲಾಗ (ಗುತ್ತು) ಹಾರಿ, ಪುನಃ ಅರ್ಧಚಂದ್ರಾಕೃತಿ ಕುಣಿದು, ಬಳಿಕ 'ತಿರುಗುವುದು'. ಎರಡೂ ತುದಿಗಾಲುಗಳನ್ನು ಬಳಸಿ ನೆಲ ಬಿಡದೆ, ಸುತ್ತುವುದು. ತಿರುಗಣೆ ಸುತ್ತು.

ಸುತ್ತುಬಲಿ (ಬ.): ಕುಣಿತದ ಒಂದು ವಿಧ. ಯುದ್ಧ, ಪ್ರಯಾಣ, ಒಡ್ಡೋಲಗಗಳ ಕುಣಿತದಲ್ಲಿ ಬಳಕೆ.

ಸುದರಿಕೆ/ಸುಧಾರಣೆ (ತೆ.): ಹೊಂದಾಣಿಕೆಯ ಏರ್ಪಾಡು. ಪೂರ್ತಿಯಾಗಿ ಕ್ರಮಬದ್ಧವಲ್ಲದ, ವ್ಯತ್ಯಸ್ತ ಕ್ರಮದಿಂದ ಪೂರೈಸುವುದು, ಹೊಂದಿಸುವುದು.
ಉದಾ: ಒಂದೇ ದೃಶ್ಯಕ್ಕಿರುವ ಒಂದು ವೇಷ. ವರ ಕೊಡುವ ಬ್ರಹ್ಮ. ಒಂದು ಕಚ್ಚೆಹಾಕಿ, ಶಾಲು ಹೊದೆದು, ಗಡ್ಡ ಕಟ್ಟಿ ಬಂದು, ಹೋಗುವುದು.


ಸುದರಿಕೆ ಹಾಸ್ಯ: ಮದುವೆ ದೃಶ್ಯದಲ್ಲಿ ಆತಿಥ್ಯ ಮೊದಲಾಗಿ ಏರ್ಪಾಡು ಮಾಡುತ್ತ ಓಡಾಡುವ ಹಾಸ್ಯಪಾತ್ರ. ದಿಬ್ಬಣ ಇದಿರುಗೊಳ್ಳುವ ಹಾಸ್ಯ ಇತ್ಯಾದಿ.

ಸುದರ್ಶನ ಚಕ್ರ: ಆಯುಧಗಳಲ್ಲೊಂದು; ಚಕ್ರಾಯುಧ, ಇದಕ್ಕೆ ಎಲೆಯ ತೊಟ್ಟಿನಂತಹ ಹಿಡಿ ಇರುತ್ತದೆ.


ಸುಧಾರಣೆ = ನೋಡಿ: ಸುದರಿಕೆ.

ಸುನೇರಿ: ಸುನೇರಿ ಬಣ್ಣದ ಕಾಗದ. ಹಳದಿ ಬೇಗಡೆ.

ಡಾಬು-ಸೊಂಟಪಟ್ಟಿ ಒಡ್ಯಾಣ



(ಹಿಂಭಾಗ)



ಸುರವಾಲು (ಬ.) : ಹಾಸ್ಯಗಾರನ ಪಾಯಿಜಾಮ. ತೆಳು ಚಲ್ಲಣ.

ಸುರ್ಜಿ : ಚೂಪುತುದಿಯಿರುವ ಕಬ್ಬಿಣದ ಸರಳು. ಮದ್ದಲೆ, ಚೆಂಡೆಗಳಿಗೆ ಬೇಕಾದ ಚರ್ಮಕ್ಕೆ ತೂತು ಕೊರೆಯಲು, ಬಾರ ಸಿಕ್ಕಿಸಲು ಬಳಸುವ ಸಲಕರಣೆ.

ಸುಲ್ತಾನ್/ಸುಲ್ತಾನ್ ಮಾಡುವುದು : ಸುರ್‌ತಾನ್, ಶ್ರುತಾನ. ವಾದ್ಯಗಳ ಸ್ವರವನ್ನು ಅಪೇಕ್ಷಿತ ಶ್ರುತಿಗೆ ಸರಿಪಡಿಸುವುದು. ಸುಲ್ತಾನ್ ಮಾಡುವುದು.

ಸುಳಿ : ಬಣ್ಣದ ವೇಷಗಳ, ಹನುಮಂತ, ಅಂಗದ ಇತ್ಯಾದಿ ಪಾತ್ರಗಳ ಮುಖವರ್ಣಿಕೆಯಲ್ಲಿ ಬರೆಯುವ ಸುಳಿಯಾಕಾರ, ವೃತ್ತರೇಖಾ ವಿನ್ಯಾಸ. ಇವು ಪಾತ್ರಾನುಗುಣವಾಗಿರುತ್ತವೆ.

ಬಡಗುತಿಟ್ಟಿನಲ್ಲಿ, ಹನುಮಂತನ ಸುಳಿ, ಚೇಳು ಕೊಂಡಿಸುಳಿ, ಮೊಲದ ಕಿವಿಸುಳಿ, ಸರ್ಪಸುಳಿ, – ಇವು ಮುಖ್ಯವಾಗಿ ಬಳಕೆಯಲ್ಲಿವೆ.

ತೆಂಕುತಿಟ್ಟಿನಲ್ಲಿ ಪಾತ್ರಾನುಗುಣವಾಗಿ, ಹನುಮಂತನ ಸುಳಿ, ಅಂಗದನ ಸುಳಿ, ಯಮನ ಸುಳಿ, ರಾವಣನ ಸುಳಿ, ಮೈರಾವಣನ ಸುಳಿ ಮುಂತಾಗಿ ವಿಭಾಗ.

ಕಾಟುಬಣ್ಣಗಳಿಗೆ ಸುಳಿಗಳಿಲ್ಲ.

ಸುಳಿ ಚುಟ್ಟಿ : ಸುಳಿಯಾಕಾರದ ಚುಟ್ಟಿ. ಚುಟ್ಟಿಯನ್ನು ಸುಳಿಯಾಕಾರದಲ್ಲಿ ಇಡುವುದು. ನೋಡಿ : ಸುಳಿ.

ಸುಳಿಬಣ್ಣ : 'ಸುಳಿ' ಇರುವ ಬಣ್ಣದ ವೇಷ. ಉದಾ : ರಾವಣ, ವಾಲಿ, ಯಮ ಇತ್ಯಾದಿ ವೇಷಗಳು.

ಸುಳ್ಳುಪದ : ಪ್ರಸಂಗದಲ್ಲಿ ಇಲ್ಲದ ಪದ್ಯ. ರಂಗದಲ್ಲೆ ಕಟ್ಟಿದ ಅಥವಾ ಅನ್ಯಮೂಲದಿಂದ ಆಯ್ದು ಹಾಡುವ ಪದ್ಯ.

ಸೂಜಿಮುಖಿ-ದಧಿಮುಖಿ (ಬ.) : ಎರಡು ವಿಕಾರ ರಾಕ್ಷಸ ಮುಖವಾಡಗಳು. ಸೂಜಿಮುಖಿ, ದಧಿ ಮುಖಿ– ಈ ಪಾತ್ರಗಳು ಮೈರಾವಣ ಕಾಳಗ ದಲ್ಲಿ ಬರುತ್ತವೆ. ಅದೇ ಹೆಸರು ಮುಖವಾಡ ಗಳಿಗೆ. ರಾಕ್ಷಸ ಭಟ, ಹಾಸ್ಯಗಾರನನ್ನು ಹೆದರಿಸುವ ರಕ್ಕಸ-ಮೊದಲಾದುವಕ್ಕೂ ಬಳಸುವರು.

ಸೂಡಿ : 1. ಸ್ತ್ರೀವೇಷದ ಮುಡಿ. ಉರುಟು ಮುಡಿ, ಜೋಲು ಮುಡಿ ಇತ್ಯಾದಿ.

2. ಒಣಗಿದ ತೆಂಗಿನ ಗರಿ, ಅಡಕೆಗರಿ, ಸಲಾಕೆ ಇತ್ಯಾದಿಗಳ ಸೂಡಿ; ಕಂತೆ; ಪಂಜು, ದೀವಟಿಗೆ ಲಾಲಿ ಕುಣಿತಕ್ಕೆ, ಬಣ್ಣದ ವೇಷಗಳ ಪ್ರವೇಶಕ್ಕೆ (ಬ. ಉ.) ಬಳಕೆ.

ಸೂತ್ರ : ಬೊಂಬೆಯಾಟದ ಬೊಂಬೆಗಳನ್ನು ಕುಣಿಸುವ ಹಗ್ಗಗಳು.

ಸೂತ್ರದ ಕೋಲು : ಬೊಂಬೆಯಾಟದ ಬೊಂಬೆಗಳ ಸೂತ್ರಗಳನ್ನು ಹಿಡಿದುಕೊಳ್ಳಲು ಬಳಸುವ ಕೋಲುಗಳು.

ಸೂತ್ರದ ಬೊಂಬೆ : ಸೂತ್ರದಿಂದ ಕುಣಿಸುವ ಬೊಂಬೆ.

ಸೂತ್ರಧಾರ : 1. ಬೊಂಬೆಗಳನ್ನು ಸೂತ್ರಗಳಿಂದ ಕುಣಿಸುವವನು. ಬೊಂಬೆಯಾಟ ಕಲಾವಿದ.

2. (ಉ.) ಭಾಗವತ– ನಿರ್ದೇಶಕ.

ಸೂರ್ಯಬೊಟ್ಟು : ಚಿಕ್ಕ 'ಕಿರಣ'ಗಳಿರುವ ಚಕ್ರಾಕಾರದ ಬೊಟ್ಟು. ಹಣೆಯ ಒಂದು ಬಗೆಯ ಅಲಂಕಾರ.

ಸೂಳೆ ಬೊಟ್ಟು : ಕೆಲವು ಬಗೆಯ ಸ್ತ್ರೀವೇಷಗಳು ಇಡುವ, ಚಿಕ್ಕ ಉದ್ದ ಬೊಟ್ಟು. ಇದಕ್ಕೆ ಬಿಂಗದ ಹುಡಿ ಅಥವಾ ಬೇಗಡೆ ಬಳಸುವುದುಂಟು.

ಸೂಳೆ ಸ್ತ್ರೀವೇಷ : ಗರತಿಯಲ್ಲದ ವೇಷ. ಮಾಯಾಶೂರ್ಪನಖಿ, ಮೇನಕೆ, ಅಜಮುಖಿ. ಇತ್ಯಾದಿ ವೇಷಗಳು. ಇವುಗಳ ವೇಷವೂ, ಅಭಿನಯ, ಕುಣಿತಗಳೂ ಗಂಭೀರವಾಗಿರಬಾರ ದೆಂದು ಅಭಿಪ್ರಾಯ.

ಸೇನೆ (ಉ.) : ಮುಖ್ಯ ವೇಷದೊಂದಿಗೆ, ಬರುವ ಮಂತ್ರಿ, ಸೇನಾಪತಿ ಮೊದಲಾದ ಪಾತ್ರಗಳು, ಬಲಗಳು. ಉದಾ– ರಕ್ಕಸ ಬಲ, ದೇವ ಬಲ, ಕಿರಾತ ಪಡೆ ಇತ್ಯಾದಿ.

ನೋಡಿ : ಬಲ.

ಸೇವೆ : ಸೇವೆ ಆಟ. ಇದಕ್ಕೆ ಸಂಭಾವನೆ ಕಡ್ಡಾಯವಲ್ಲ.

1. ಮೇಳದ ಹೊರಡುವ ದಿನ ಮತ್ತು ಮುಕ್ತಾಯದ ದಿನ ಸಂಬಂಧಪಟ್ಟ ದೇವಾಲಯದ ಬಳಿ ಆಡುವ ಆಟ.

2. ವಿಶಿಷ್ಟ ಕ್ಷೇತ್ರಗಳಲ್ಲಿ ಮೇಳವು ಆಡಬೇಕಾದ ಆಟ. ಈಗ ಇದು ಸಂಕ್ಷೇಪ ಸಾಂಕೇತಿಕ ರೂಪಕ್ಕೆ ಬಂದಿದೆ.

ಸೇವೆ ಆಟ = ನೋಡಿ: ಸೇವೆ.

ಸೊಂಟಪಟ್ಟಿ : ಸೊಂಟದ ಪಟ್ಟಿ. ನೋಡಿ. ಒಡ್ಯಾಣ, ಡಾಬು.

ಸೊಪ್ಪಿನಕಾಳಗ (ಬ.) : ನೋಡಿ: ಸೊಪ್ಪು ಸವರುವುದು

ಸೊಪ್ಪಿನಮಾಲೆ : ಕಿರಾತವೇಷವು ಕೊರಳಿಗೂ, ಸೊಂಟಕ್ಕೂ ಕಟ್ಟಿಕೊಳ್ಳುವ ಮಾವಿನಸೊಪ್ಪಿನ ಹಾರ.

ಸೊಪ್ಪು ಸವರುವುದು (ಬ.) : ಕಿರಾತಾರ್ಜುನ ಪ್ರಸಂಗದ ಒಂದು ದೃಶ್ಯ. ಸೊಪ್ಪಿನ ಕಾಳಗ. ಅರ್ಜುನನು ಕತ್ತಿಯಿಂದ ಕಿರಾತನ (ಶಿವನ)

ಸೊಂಟದ ಸೊಪ್ಪನ್ನು ಸವರುವುದು. ಕಿರಾತನು ಸುಮ್ಮನೆ ನಿಂತಿರಬೇಕು.

ಇದು ಅರ್ಜುನನು ಶಿವನ ಕಿರಾತತ್ವವನ್ನು ಅನಾವರಣಗೊಳಿಸುವುದರ ಸಂಕೇತವಾಗಿರ ಬೇಕೆಂದು ತೋರುತ್ತದೆ.

ಸೋಗೆವಲ್ಲಿ/ಸೋಗೋಲಿ(ಲೆ) (ತೆ.): ರಾಜ ವೇಷ, ಬಣ್ಣದವೇಷ ಮತ್ತು ದೊಡ್ಡ ಪಗಡಿ ವೇಷಗಳು ಹೆಗಲ ಮೇಲೆ ಹಾಕಿ ಇದಿರಿಂದ ಇಳಿ ಬಿಡುವ, ಸೋಗೆಯಂತೆ ನೇತಾಡುವ ವಲ್ಲಿಗಳು. ಕಪ್ಪು, ಕೆಂಪು, ಹಸರು– ಮೂರುಬಣ್ಣಗಳ ಸೋಗೆವಲ್ಲಿಗಳಿರುತ್ತವೆ. ಮೂರನ್ನು ಧರಿಸ ಬೇಕು. ಈ ಪೈಕಿ, ಆಯಾ ವೇಷದ ದಗಲೆ (ಅಂಗಿ)ಯ ಬಣ್ಣದ ಸೋಗೆವಲ್ಲಿಯು ಮೇಲೆ ಇದ್ದು, ಉಳಿದವು ಅಡಿಯಲ್ಲಿರಬೇಕು.

ದೊಡ್ಡ ಪಗಡಿಯ ವೇಷಗಳ ಸೋಗೆವಲ್ಲಿಗಳು ಸೊಂಟದ ಪಟ್ಟಿಯ (ಡಾಬಿನ) ಒಳಗಿನಿಂದ ನಿಲ್ಲ ಬೇಕು. ಋಷಿ ವೇಷಗಳಿಗೆ ಸೋಗೆವಲ್ಲಿಯನ್ನು, ಎಡ ಭುಜದಿಂದ ಬಲಕ್ಕೂ, ಬಲದಿಂದ ಎಡಕ್ಕೂ ಇಳಿಸಿ, ಗಂಟು ಕಟ್ಟಿ **ಕತ್ರಿ ಸೋಗೋಲಿ** ಅಥವಾ **ಸೋಗೋಲಿ ಕತ್ರಿ**ಯೆಂಬ ಉಡುಪು ಮಾಡುವರು.

ಬಣ್ಣದ ವೇಷವು ಪ್ರವೇಶದಲ್ಲೂ, ಯುದ್ಧ ನೃತ್ಯದಲ್ಲೂ, ಸೋಗೆವಲ್ಲಿಯನ್ನು ಒಂದು ಕೈಯಿಂದ ಎತ್ತಿ ಬಿಡಿಸಿ ಹಿಡಿದು ಕುಣಿಯಬೇಕು. ನೋಡಿ: **ಹೆಗಲವಲ್ಲಿ**.

ಸೋಗೋಲಿ (ಲೆ) = ನೋಡಿ: **ಸೋಗೆವಲ್ಲಿ**.

ಸೋಗೋಲಿ ಕತ್ರಿ = ನೋಡಿ: **ಕತ್ರಿ ಸೋಗೋಲಿ**.

ಸೌಮ್ಯದ ಪದ: ಒಂದು ಬಗೆಯ ಸ್ಥೂಲವಾದ ಭಾವವಿಭಾಗ. ಏರು ಪದ ಅಥವಾ ಜೋರಿನ ಪದ ಅಲ್ಲದಿರುವುದೆಲ್ಲ ಸೌಮ್ಯದ ಪದ. ಇಂತಹ ಪದ್ಯಗಳು ಮತ್ತು ಅವುಗಳ ಹಾಡುಗಾರಿಕೆ ಎರಡಕ್ಕೂ ಈ ಹೆಸರು. ನಿಧಾನ ಪದ.

ಸೌಮ್ಯರಸ: ವೀರ, ರೌದ್ರಾದಿ ರಸ ಅಲ್ಲದಿರುವ ರಸ. ಒಂದು ಸ್ಥೂಲ ವಿಭಾಗ. ನೋಡಿ: **ಸೌಮ್ಯದ ಪದ**.

ಸೌರಾಷ್ಟ್ರ ತ್ರಿವುಡೆ: ತ್ವರಿತ ತ್ರಿವುಡೆ ತಾಳದ ನಾಮಾಂತರ. ಸೌರಾಷ್ಟ್ರ ಎಂಬುದು ರಾಗದ ಹೆಸರಾದರೂ, ಸೌರಾಷ್ಟ್ರ ರಾಗ ತ್ರಿವುಡೆ ತಾಳದ ಪದ್ಯಗಳನ್ನು ತ್ವರಿತ ತ್ರಿವುಡೆ ತಾಳದಲ್ಲೆ ಹಾಡುವುದು ಸಂಪ್ರದಾಯವಾದ್ದರಿಂದ ಈ ಹೆಸರು ತಾಳಕ್ಕೆ ಬರಲು ಕಾರಣ.

ಸ್ಟಾಕಿಂಗ್ಸ್ (ತೆ.): ಕಾಲುಚೀಲ; Stockings. **ಟೋಕಿನ್ಸ್**; ನೋಡಿ: **ಸಾಕ್ಸ್**.

ಸ್ಟೇಜಿನ ಆಟ: ಡೇರೆ ಹಾಕಿ ಪ್ರದರ್ಶಿಸುವ ಮೇಳದ ಆಟ.

ಸ್ಟೇಜು: 1. ಆಟದ ಡೇರೆ. ಟೆಂಟು.
2. ರಂಗಸ್ಥಳ. ವಿಶೇಷತಃ ಡೇರೆ ಮೇಳಗಳ ಹಲಗೆ ವೇದಿಕೆ.
3. ಸಿದ್ಧವಾದ ವೇದಿಕೆ.

ಸ್ತುತಿ/ಸ್ತುತಿಪದ್ಯ: 1. ಚೌಕಿಯಲ್ಲಿ ಪೂಜಾ ಸಂದರ್ಭದಲ್ಲಿ, ಪ್ರದರ್ಶನ ಆರಂಭದಲ್ಲಿ ಹಾಡುವ ಸ್ತುತಿ.
2. ಸಭಾಲಕ್ಷಣದಲ್ಲಿ ಬರುವ ವಿವಿಧ ದೇವತಾ ಸ್ತುತಿಗಳು.
3. ಕಥೆಯ ಮಧ್ಯದಲ್ಲಿ ಬರುವ ವಿವಿಧ ಸ್ತುತಿಗಳು.

ಸ್ತ್ರೀವೇಷ/ಸ್ತ್ರೀವೇಷಧಾರಿ: ಸ್ತ್ರೀಪಾತ್ರ, ಸ್ತ್ರೀಪಾತ್ರಧಾರಿ. ಇದರಲ್ಲಿ ಮುಖ್ಯ ಸ್ತ್ರೀವೇಷ, **ಒತ್ತು ಸ್ತ್ರೀವೇಷ ಅಥವಾ ಎರಡನೆ ಸ್ತ್ರೀವೇಷ** (**ಸಖಿವೇಷ.** ಬ.) ಎಂದು ಮುಖ್ಯವಿಭಾಗ.

ಹಿಂದೆ ಸ್ತ್ರೀವೇಷಗಳೆಲ್ಲವೂ ಕಚ್ಚೆ ಉಡುತ್ತಿದ್ದುವು. ಹಣೆಗೆ ಅಡ್ಡನಾಮ ಅಥವಾ ಉದ್ದನಾಮವಿರುತ್ತಿತ್ತು. ಉರುಟು ಬೊಟ್ಟು ಇಡುವ ಪದ್ಧತಿ ಬಂದುದು ಪ್ರಾಯಃ 1920ರಿಂದ ಈಚೆಗೆ. ಕಾಲಿಗೆ ಗೆಜ್ಜೆ, ಪಾಡಗ, ಸೊಂಟಕ್ಕೆ ಡಾಬು, ಉಡಿಗೆಜ್ಜೆ, ಕೈಗೆ ಕೈಕಟ್ಟು, ತೋಳ್ಕಟ್ಟು, ಕೊರಳಿಗೆ ಹವಳಸರ, ತ್ರಿಸರ, ಮೋಹನ ಮಾಲೆ, ಅಡ್ಡಿಗೆ, ಪದಕಮಾಲೆ, ಪಂಚಮಾಲೆ, ಈ ಪೈಕಿ ಕೆಲವನ್ನು, ಗಂಟಲಿನ ಕಂಠಮಣಿಯನ್ನು ಮುಚ್ಚಲು ಚಿಂತಾಕು ಎಂಬ ಪಟ್ಟಿ, ಮೂಗಿಗೆ ನತ್ತು, ಬುಲಾಕು, ಅಥವಾ ಉದ್ದ ಮೂಗುತಿ, ಕಿವಿಗೆ ಗಿಳಿಯೋಲೆ, ಕೊಪ್ಪು, ಬುಗುಡಿ, ಸರಪಳಿ, ಬೆಂಡೋಲೆಗಳನ್ನು ಅಥವಾ ಕಿವಿಯನ್ನು ಮುಚ್ಚುವ ಓಲೆಕುಚ್ಚು ಎಂಬ ಕರ್ಣಪಾತ್ರ, ಹಣೆಗೆ ಮುಂದಲೆಪಟ್ಟಿ, ಬೈತಲೆ ಸರ, ಮುಡಿಗೆ ಅಡ್ಡಕೇದಗೆ, ತಿರುಪಿನ ಹೂವು, ಚೂಡಾಮಣಿ ಅಥವಾ ಜಡೆ ಬಿಟ್ಟರೆ ಜಡೆ ಬಂಗಾರ– ಇವು ಸಾಂಪ್ರದಾಯಿಕ ಸ್ತ್ರೀವೇಷದ ಆಭರಣಗಳು. ಹುಬ್ಬಿನ ಮೇಲಿಂದ ಮುತ್ತರಿಗಳ ಸಾಲು, ಕೆನ್ನೆಗೆ ಮುದ್ರೆ, ಮಕರರೇಖೆಗಳನ್ನು ಬರೆಯುತ್ತಿದ್ದರು. ಸೆರಗನ್ನು ಸೊಂಟದ ಪಟ್ಟಿಯ ಒಳಗೆ ಸೇರಿಸಿ ಎಳೆದು ಬಿಡುತ್ತಿದ್ದರು.

ಉಪ ಪಾತ್ರಗಳು, ಸಖಿ ಮೊದಲಾದ ಪಾತ್ರ ಗಳ ಅಲಂಕಾರ ಇದಕ್ಕಿಂತ ಸರಳವಾಗಿರುತ್ತದೆ. ವೀರಕಚ್ಚೆ ಹಾಕಿ ಉಡುವ ಕಸೆ ಸ್ತ್ರೀವೇಷಗಳಿಗೆ, (ಪ್ರಮೀಳೆ, ಮೀನಾಕ್ಷಿ) ಎದೆಗೆ ಸೆರಗಿನ ಮೇಲೆ

ಕತ್ತರಿ ಶಾಲು ಮತ್ತು ಕತ್ರಿಸರವೆಂಬ ಆಭರಣವಿರುತ್ತದೆ.

ಈ ಬಗೆಯ ಸ್ತ್ರೀಪಾತ್ರದ ಕ್ರಮಗಳು ಶಿಥಿಲವಾಗುತ್ತ ಬಂದು, ಸ್ತ್ರೀವೇಷವು ಸಮಕಾಲೀನ ಸ್ತ್ರೀಯಂತಾಗತೊಡಗಿತ್ತು. ಇದೀಗ ಪುನಃ ಅದನ್ನು 'ಪ್ರಾಚೀನ' ಗೊಳಿಸುವ ಯತ್ನಗಳು ನಡೆದಿದ್ದು, ಹಳೆಯ ತೆರದ ಆಭರಣಗಳೂ, ನೂತನವಾಗಿ ರೂಪಿತವಾದ ಶಿರೋಭೂಷಣ ಗಳೂ ಬಳಕೆಗೆ ಬಂದಿವೆ.

ಸ್ತ್ರೀವೇಷಧಾರಿ : ಸ್ತ್ರೀವೇಷಗಳನ್ನು ಧರಿಸುವವನು. ಮುಖ್ಯವಾಗಿ ಪ್ರಧಾನ ಸ್ತ್ರೀಪಾತ್ರಧಾರಿ.

ಸ್ತ್ರೀವೇಷದ ಪ್ರವೇಶ : ನಾಲ್ಕು ಬಗೆ. ನೋಡಿ : ಪ್ರವೇಶ.

ಸ್ತ್ರೀವೇಷದ ಸಾಮಾನು : ಸ್ತ್ರೀವೇಷಕ್ಕೆ ಸಂಬಂಧಿಸಿದ ವೇಷಭೂಷಣ ಸಾಮಗ್ರಿಗಳು. ಸೀರೆ, ಆಭರಣಗಳು, ಮೊಲೆಕಟ್ಟು, ಚವರಿ ಇತ್ಯಾದಿ. ನೋಡಿ : ಸ್ತ್ರೀವೇಷ.

ಸ್ತ್ರೀವೇಷದ ಹಜ್ಜೆ : ಸ್ತ್ರೀವೇಷದ ನರ್ತನ. ಕಿರುಹಜ್ಜೆ ಗಳು, ನಾಜೂಕಾದ ಹೆಣ್ಣುಹಜ್ಜೆ, ಬಳುಕುಗಳಿಂದ ಕೂಡಿರಬೇಕು.

ಸ್ಥಳವಂದಿಗರು : ಮೇಳದ ಊರಿಗೆ ಸಂಬಂಧಿಸಿದ, ವಿಶೇಷತಃ ಆ ಊರಿನ ದೇವಾಲಯಕ್ಕೆ ಸಂಬಂಧಿಸಿದವರು. ಇವರಿಗೆ ಆಟದ ಸಭೆಯಲ್ಲಿ ಪ್ರತ್ಯೇಕ ಸ್ಥಾನ ಮೀಸಲಿಡುವ ಕ್ರಮವಿತ್ತು.

ಸ್ಪಿರಿಟ್‌ಗಮ್ : ರಾಳದ ಹುಡಿಯನ್ನು 'ಸ್ಪಿರಿಟ್' ದ್ರವದಲ್ಲಿ (Methyle-hydrocarbon radical) ಸುಟ್ಟು ತಯಾರಿಸುವ ಅಂಟು. ಮೀಸೆ, ಗಡ್ಡಗಳನ್ನು ಅಂಟಿಸಲು ಬಳಕೆ. Spirit-gum.

ಸ್ವಸ್ತಿಕ (ಕೆ) : ಚೌಕಿಯಲ್ಲಿ ದೇವರ ಸ್ಥಾನದಲ್ಲಿಡುವ ಅಕ್ಕಿ ಮತ್ತು ತೆಂಗಿನಕಾಯಿ.

ಸ್ವರ್ಗದೂತ : ಸ್ವರ್ಗದ ಬಾಗಿಲ ದೂತ. ಇವನ ವೇಷವೂ, ಹಾಸ್ಯವೂ, ಉಳಿದ ದೂತರಂತೆ ವಿಕಾರವಾಗಿರಬಾರದೆಂದು ನಿರೀಕ್ಷೆ.

ಸ್ಥಳ ದೇವರು (ತೆ.) : ಆಟವನ್ನಾಡುವ ಊರಿನ ದೇವರು ಗಳು. ಇವರಿಗೆ ಸಭಾಲಕ್ಷಣದಲ್ಲಿ ಭಾಗವತ-ಹಾಸ್ಯಗಾರ ಇವರಿಂದ ಹೊಗಳಿಕೆ ಸಲ್ಲಬೇಕು.

ಹ

ಹಂದಿ ಓಡಿಸುವುದು (ತೆ.) : ವರಾಹಾವತಾರ ಕಥೆಯ ಒಂದು ದೃಶ್ಯ. ಹಿರಣ್ಯಾಕ್ಷ-ರಾಹರು ಒಬ್ಬರನ್ನೊಬ್ಬರು ಓಡಿಸಿ ಬೆರಸುವುದು. ಇದು ರಂಗಸ್ಥಳದಲ್ಲೂ, ಸಭೆಯ ಸುತ್ತಲೂ ಜರಗುವ ದೃಶ್ಯ.

ಹಂದಿ ಹೊರಡಿಸುವುದು (ತೆ.) : ವರಾಹವೇಷದ ಪ್ರವೇಶ. ರಂಗಕ್ಕೆ ದೂರದಿಂದ, ವಾಲಗ, ಹಿಲಾಲು, ಸೂಡಿಗಳೊಂದಿಗೆ ಹೊರಡುವುದು, ಸಭೆಯ ಮೂಲಕ ರಂಗಕ್ಕೆ ಬರುವುದು. ಪೊದರು ಅಥವಾ ಹೊಂಡದಿಂದ ಹೊರಡುವ ಕ್ರಮವೂ ಇದೆ.

ಹಗಲು ವೇಷ : ಬಣ್ಣಗಾರಿಕೆ, ವೇಷಗಳಲ್ಲಿ ಗುಣಮಟ್ಟವಿಲ್ಲದಿದ್ದರೆ ಹೇಳುವ ಆಕ್ಷೇಪಾರ್ಥಕ ಪದ. ಉದಾ : ''ಇದು ಹಗಲು ವೇಷದ ಹಾಗಿದೆ.''

ಹಗ್ಗ : ವೇಷಭೂಷಣಗಳನ್ನು ಕಟ್ಟಲೂ, ಅಲ್ಲಲ್ಲಿ ಬಿಗಿತಕ್ಕಾಗಿಯೂ, ವೇಷಭೂಷಣ ಜೋಡಣೆಗೂ ಬಳಸುವ ಹಗ್ಗಗಳು. ನೂಲಿನ ಹುರಿ, ನಾರಿನ ಹುರಿ ಇತ್ಯಾದಿ.

ಉದಾ : ಆಭರಣಗಳ ಭಾಗಗಳ ಜೋಡಣೆಯ ಹಗ್ಗಗಳು, ಅಂಡಿನಹಗ್ಗ, ಬಾಲುಮುಂಡಿನ ಹಗ್ಗ, ಗೆಜ್ಜೆ, ಕಾಲುಮುಳ್ಳು, ಕಿರೀಟಗಳ ಹಗ್ಗಗಳು. ಸೊಂಟದ ಹಗ್ಗ, ತಾಂಗಿನ ಹಗ್ಗ, ಜಾಗಟೆ ಹಗ್ಗ. ಇತ್ಯಾದಿ.

ಚೆಂಡೆಯ ಮುಚ್ಚಿಗೆ ಬಿಗಿಯುವುದಕ್ಕೆ ಸೆಣಬಿನ ಅಥವಾ ಫೈಬರ್ ನಾರಿನ ಹಗ್ಗಗಳನ್ನು ಬಳಸುವರು.

ಹಗ್ಗ ಹಿಡಿಯುವುದು : ಚೆಂಡೆಯ ಶ್ರುತಿ ಸರಿಪಡಿಸಲು ಅದರ ಹಗ್ಗಗಳನ್ನು ಹಿಡಿದು ಎಳೆದು ಹೊಂದಿಸಿ, ಪುನಃ ಕಟ್ಟುವುದು.

ಹಜ್ಜೆ / ಹೆಜ್ಜೆ : ಹೆಜ್ಜೆ. ಹಜ್ಜೆಗಾರಿಕೆ. ಕುಣಿತ. ಸಂದರ್ಭಾನುಸಾರವಾಗಿ ಹೆಸರುಗಳು : ಪ್ರವೇಶ ಹಜ್ಜೆ, ಪ್ರಯಾಣದ ಹಜ್ಜೆ ಇತ್ಯಾದಿ.

ಪಾತ್ರಾನುಗುಣವಾಗಿ ಸ್ತ್ರೀವೇಷದ ಹಜ್ಜೆ, ಬಣ್ಣದ ವೇಷದ ಹಜ್ಜೆ ಇತ್ಯಾದಿ.

ತೆಂಕುತಿಟ್ಟಿನಲ್ಲಿ, ಕುಣಿತದ ಅಭ್ಯಾಸದ ಹಂತಗಳಾಗಿ- ಒಂದನೇ ಹಜ್ಜೆ, ಎರಡನೆ ಹಜ್ಜೆ, ಮೂರನೆ ಹಜ್ಜೆ, ನಾಲ್ಕನೇ ಹಜ್ಜೆ.

ಹಚ್ಚೆಗಾರಿಕೆ/ಹೆಚ್ಚೆಗಾರಿಕೆ: ಕುಣಿತದ ವಿಧಗಳು, ಕ್ರಮ, ಸಂಪ್ರದಾಯಗಳು.

ಹತ್ತ್ರಕಟ್ಟು: ಹಸ್ತಕಟಕ. ನೋಡಿ: ಕೈಕಟ್ಟು.

ಹತ್ತಿಉಂಡೆ: ಬಣ್ಣದ ವೇಷಗಳು ಮುಖದ ವಿವಿಧ ಭಾಗಗಳಲ್ಲಿ ಅಂಟಿಸಿಕೊಳ್ಳುವ ಹತ್ತಿಯ ಉಂಡೆ. ಮೂಗಿನ ತುದಿಗೆ, ಹಣೆಯ ಮಧ್ಯಕ್ಕೆ, ಹಣೆಯ ಇಕ್ಕೆಲಗಳಿಗೆ ಇಡುವ ಹತ್ತಿಯ ಗೊಂಡೆ. ಈ ಗೊಂಡೆಗಳಿಗೆ ಕೆಂಪು, ಹಸುರು ಬಣ್ಣ ಬಳಿಯುವುದಿದೆ.

ರಾವಣನಿಗೆ ನಾಲ್ಕು ಉಂಡೆ, ಅರ್ಧಚಂದ್ರಾಕೃತಿ ಬಣ್ಣಗಳಿಗೆ (ಮೈರಾವಣ ಇತ್ಯಾದಿ) ಆರು, ಕತ್ತಿ ಬಣ್ಣಗಳಿಗೆ ಎರಡು, ಚೇಳು ಬಣ್ಣಕ್ಕೆ ಎರಡು, ಏಣಿ ಬಣ್ಣಕ್ಕೆ ಒಂದೇ ಉಂಡೆ ಎಂಬುದು ಸಾಮಾನ್ಯ ನಿಯಮ.

ಹನುಮಂತನ ಕಿರೀಟ: ಹನುಮಂತನ ಪಾತ್ರಕ್ಕೆ ಮೀಸಲಾದ ವಿಶಿಷ್ಟ ಕಿರೀಟ. ಹಿಂದೆ ಬಹುಶಃ ಜಾಂಬವಂತನ ವೇಷಕ್ಕೂ ಇಂತಹದೇ ಕಿರೀಟ ವಿತ್ತು.

ಈ ಕಿರೀಟವು, ಅಗಲವಾದ ಟೊಪ್ಪಿಗೆ (hatಗೆ) ಕಲಶ ಕೂಡಿಸಿದಂತೆ ಇರುತ್ತದೆ. ಈ ಸಾಮ್ಯದಿಂದಲೇ ಇದಕ್ಕೆ **ದೊರೆ ಕಿರೀಟ** (ಯುರೋಪಿಯನ್ ವ್ಯಕ್ತಿ: ದೊರೆ;) ಎಂದೂ ಹೆಸರಿದೆ.

ಮಧ್ಯದಲ್ಲಿ ತಲೆಗೆ ಸಿಕ್ಕಿಸಲು ತೂತು ಇರುವ ಅಗಲ ಬಟ್ಟಲು, ಮೇಲೆ ದೇವಾಲಯದ ಮಾಡಿನ ಮೇಲಿನ ಕಲಶವನ್ನು ಹೋಲುವ 'ಮುಗುಳಿ' ಬಟ್ಟಲಿನ ಬದಿಗೆ ಅಶ್ವತ್ಥ ಎಲೆ ಜಾಲರಿ ಇರುತ್ತವೆ. ಬಟ್ಟಲು ಭಾಗ ತಲೆಯ ಸುತ್ತ ಚಾಚಿಕೊಂಡು ನಿಲ್ಲುತ್ತದೆ. ಹಿಂದಿನಿಂದ ಬಿಳಿ ನಾರು ಕೇಸರಿ ತೂಗಿಸುವರು.

ಈ ಕಿರೀಟವು ಯಕ್ಷಗಾನದ ಮೂರು ತಿಟ್ಟುಗಳಲ್ಲೂ, ಕಥಕಳಿ, ಕೂಡಿಯಾಟ್ಟಮ್ ಗಳಲ್ಲೂ ಒಂದೇ ತರನಾಗಿದೆ. ಇದು ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಬಹುಕಾಲ ಉಳಿದು ಬಂದಿರುವ ಒಂದು ತೊಡುಗೆಯಾಗಿ ತೋರುತ್ತದೆ.

ಬಡಗುತಿಟ್ಟಿನಲ್ಲಿ ಈ ಬಗೆಯ ಕಿರೀಟವು, ಮತ್ತು ಇದರಂತೆ ಇದ್ದ, ವಾಲಿಯ ಕಿರೀಟವೂ, ಪೂರ್ತಿ ಮರೆಯಾಗಿವೆ. ಉತ್ತರ ಕನ್ನಡ ತಿಟ್ಟಿನಲ್ಲಿ ಈಗ ಇರುವ ಹನುಮಂತನ ಕಿರೀಟವೆನ್ನುವ ಒಂದು ಚಿಕ್ಕ ಕಿರೀಟವನ್ನು ನೋಡಿದರೆ, ಅಲ್ಲೂ ಹಿಂದೆ ಈ ಕಿರೀಟವೇ ಇದ್ದಿರಬೇಕೆಂದು ತೋರುತ್ತದೆ.

ಹನುಮಂತನ ತೆರೆ ಪೊರಪ್ಪಾಡು/ಹನುಮಂತನ ಪೊರಪ್ಪಾಡು/ ಹನುಮಂತನ ಪ್ರವೇಶ (ತೆ.): ಹನುಮಂತನ ಪಾತ್ರದ ವಿಶಿಷ್ಟ ಪ್ರವೇಶ ಕ್ರಮ. ಉಳಿದ ಪಾತ್ರಗಳಂತೆ, ರಂಗದ್ವಾರದಲ್ಲಿ ತೆರೆಕುಣಿತವಾದ ಮೇಲೆ, ರಂಗದಲ್ಲಿ ತೆರೆಯ ಮರೆಯಿಂದ, ತೆರೆಯ ಎರಡು ಪಕ್ಕಗಳಿಂದ, ಕಪಿಚೇಷ್ಟೆಗಳನ್ನು ಅಭಿನಯಿಸಿ, ತೆರೆಯ ಅಡಿಯಿಂದ ತಲೆಹಾಕಿ ಸಭಾವೀಕ್ಷಣೆ ಮಾಡಿ, ತೆರೆತಗ್ಗಿಸಿ, ಸಭಾವಂದನೆ ಮಾಡಬೇಕು.

ಆ ಬಳಿಕ ತೆರೆತಗ್ಗಿಸಿ ಒಂದೊಂದಾಗಿ ವಿಷ್ಣುವಿನ ದಶಾವತಾರ ಮುದ್ರೆಗಳನ್ನು, ಕುಣಿತ ಸಹಿತ ತೋರಿಸುವುದು. ಈ ಪೈಕಿ ರಾಮಾವತಾರದ ಅಭಿನಯದಲ್ಲಿ ಸೇತುಬಂಧನ ಮತ್ತು ರಾಕ್ಷಸ ವಧೆಗಳ ಅಭಿನಯವನ್ನು ತೋರಿಸುತ್ತಾರೆ.

ಹನುಮಂತನ ಪಾತ್ರವು ರಾಮಾವತಾರ ಕಾಲದ್ದಾದುದರಿಂದ, ಅನಂತರದ ಅವತಾರ ಗಳಾದ ಕೃಷ್ಣ, ಬೌದ್ಧ, ಕಲ್ಕಿ ಅವತಾರಗಳನ್ನು ತೋರಿಸುವುದು ಸರಿಯಲ್ಲವಾಗಿ, ಏಳು ಅವತಾರಗಳನ್ನು ಮಾತ್ರ ಅಭಿನಯಿಸಬೇಕೆಂದು ಒಂದು ಸಂಪ್ರದಾಯ. ಆದರೆ, ದಶಾವತಾರ ಮುದ್ರೆ ಎಂದಿರುವುದರಿಂದಲೂ, ರಂಗ ಸಂಪ್ರದಾಯ ಗಳಿಗೆ ಇಂತಹ ಪ್ರಶ್ನೆಗಳು ಅಪ್ರಸ್ತುತ ವಾದುದರಿಂದಲೂ, ಹಿಂದೆ, ಹತ್ತು ಅವತಾರ ಗಳನ್ನು ತೋರಿಸುವ ಕ್ರಮವಿದ್ದಿತು. ಇದೇ ಪ್ರಾಚೀನ ಸಂಪ್ರದಾಯವಿರಬೇಕು.

ಈ ಅಭಿನಯಗಳು ಆದ ಬಳಿಕ, ತೆರೆತೆಗೆದು ಧೀಂಗಿಣ ಕುಣಿತವಾದಲ್ಲಿಗೆ ಪ್ರವೇಶ ಪೂರ್ತಿಯಾಗುವುದು. ಪ್ರವೇಶದ ಆರಂಭದಲ್ಲೂ ಕೊನೆಗೂ 'ಹೈಕ್‌ಟುರ್‌' ಎಂಬ ಧ್ವನಿಗಳನ್ನು ಕಪಿತ್ವದ ಸೂಚಕವಾಗಿ, ಉಚ್ಚರಿಸಬೇಕು.

ಬಡಗುತಿಟ್ಟಿನಲ್ಲೂ ಹಿಂದೆ ಈ ಪ್ರವೇಶಕ್ರಮ ಇದ್ದಿರಬೇಕು. ಈಗ 'ಕಪಿರೂಪದ' ಹನುಮಂತನ ವೇಷವು ಬಂದನಂತರ, ನಾಟಕ ಸಂಪ್ರದಾಯ ದಂತೆ, ರಾಮ ಪರವಾದ ಪದ್ಯವೊಂದರೊಡನೆ, ಕೈ ಮುಗಿದು ಪ್ರವೇಶಿಸುವ ಕ್ರಮವು ಬಂದಿದೆ.

ದಶಾವತಾರ ಅಭಿನಯವು ಬೇರಾವ ಪಾತ್ರಕ್ಕೂ ಇಲ್ಲದೆ, ಹನುಮಂತನ ಪಾತ್ರಕ್ಕೆ ಇರುವುದು, ಮಾಧ್ವ ಸಂಪ್ರದಾಯದ ಪ್ರಭಾವದ ದ್ಯೋತಕವೆಂದು ತೋರುತ್ತದೆ. (ಮಾಧ್ವ ಸಂಪ್ರದಾಯದಲ್ಲಿ ಹನುಮಂತನು– ಜೀವೋತ್ತಮ ವಾಯುವಿನ ಅವತಾರ. ಹರಿಭಕ್ತರಲ್ಲಿ ಪ್ರಮುಖ).

ಹನುಮಂತನ ಪೊರಪ್ಪಾಡು = ನೋಡಿ: **ಹನುಮಂತನ ತೆರೆಪೊರಪ್ಪಾಡು.**

ಹನುಮಂತನ ಪ್ರವೇಶ = ನೋಡಿ: ಹನುಮಂತನ ತೆರೆಪೊರಪ್ಪಾಡು.

ಹನುಮನಾಯಕ: ಹಾಸ್ಯಗಾರನ ರಂಗದ ಮೇಲಿನ ಹೆಸರು. ಮುಖ್ಯವಾಗಿ ದೂತನಿಗಿರುವ ಹೆಸರು. ಇಲ್ಲಿ 'ಹನುಮ' ಎಂಬುದಕ್ಕೆ ಕಪಿರೂಪ, ಚೇಷ್ಟೆ ಮಾಡುವ ಎಂಬ ಅರ್ಥವು ತೋರುತ್ತದೆ. ಇದಕ್ಕೆ ಸಭಾಲಕ್ಷಣಗ್ರಂಥದ ಪ್ರಾಚೀನ ಪಾಠವೊಂದರಲ್ಲಿ ಕಾಣುವ ಈ ಶ್ಲೋಕವು ಮೂಲವಾಗಿರಬೇಕು: (ಪಾರ್ತಿಸುಬ್ಬನ ಯಕ್ಷಗಾನಗಳು: ಮೈಸೂರು ವಿ.ವಿ. 1975)

ವಚನ:

''ಇಂತೀ ತಾಳಮದ್ದಲೆ ಶ್ರುತಿ ಸಮೇತ ವಾದರಂಗಸ್ಥಳದಲ್ಲಿ
ನಿಲ್ಲುವಂಥ ಹಾಸ್ಯಗಾರನ ಲಕ್ಷಣವು ಹ್ಯಾಗಯ್ಯಾ ಎಂದರೆ–''

ಶ್ಲೋಕ:

'ಸಭಾನಾಯಕ ಭಾವಜ್ಞಃ ಸರ್ವಭಾಷಾ ವಿಶಾರದಃ।।
ಪರಿಹಾಸಕಥಾಭಿಜ್ಞೋ ವಿಶೇಷೋ ಹರಿದೇಹಿತಾ।'

ಇಲ್ಲ ಹರಿ ಎಂದರೆ ಕಪಿ ಎಂದರ್ಥ. ಇದರಿಂದಲೇ ಹನುಮನಾಯಕನೆಂಬ ಮಾತು ಬಂದಿರಬೇಕು.

ಹರಕೆ: ಇಂತಹ ಮೇಳದ ಆಟವನ್ನು ಆಡಿಸುತ್ತೇನೆ ಎಂದು ಹೇಳಿಕೊಳ್ಳುವ ಹರಕೆ, ಸಂಕಲ್ಪ. ವಿವಾಹ, ಸಂತಾನ, ಕಷ್ಟಪರಿಹಾರ, ಕೋರ್ಟು ವಿವಾದದಲ್ಲಿ ಜಯ, ವ್ಯಾಪಾರ ವ್ಯವಹಾರ ಅಭಿವೃದ್ಧಿ ಮೊದಲಾದ ವಿಚಾರಗಳಿಗೆ ಹರಕೆ ಹೊರುವರು. ಸಂತಾನಾರ್ಥವಾಗಿ ಪುತ್ರಕಾಮೇಷ್ಟಿಯನ್ನೂ, ವಿವಾಹಾರ್ಥ, ಕಲ್ಯಾಣ ಪ್ರಸಂಗಗಳನ್ನೂ ಆಡಿಸಲು ಸಂಕಲ್ಪಿಸುತ್ತಾರೆ.

ಹರಕೆ ಆಟ: ಹರಕೆ ಹೊತ್ತುದರ ಪೂರೈಕೆಗಾಗಿ ಆಡಿಸುವ ಆಟ. ಹರಕೆ ಬಯಲಾಟ. ಇದಕ್ಕೆ ನಿಶ್ಚಿತವಾದ ವೀಳ್ಯ (ಸಂಭಾವನೆ), ಪಡಿಸಾಹಿತ್ಯ, ಬಿಡಾರ ವ್ಯವಸ್ಥೆ, ಪೂಜೆ ಸಾಮಗ್ರಿಗಳನ್ನು ಕೊಡಬೇಕು.

ಹರಿವಾಣ: ಹರಿವಾಣ; ತಟ್ಟೆ. ಚೌಕಿಯಲ್ಲಿ ಪೂಜೆಗೆ, ಆರತಿಗೆ, ಪೂಜಾ ದೃಶ್ಯಗಳಿಗೆ, ವೀಳ್ಯಕೊಡುವುದಕ್ಕೆ ಬಳಕೆ.

ಹರಿವೆ ಸೊಪ್ಪು ಮಲ್ಲಮ್ಮ (ತೆ.): ಕಟ್ಟುಹಾಸ್ಯಗಳಲ್ಲೊಂದು. ಹರಿವೆ ಸೊಪ್ಪು ಮಾರುವ ಮಲ್ಲಮ್ಮ. ಅರ್ವಾಚೀನ ಪ್ರಯೋಗ. ಬಹುಶಃ ನಾಟಕಗಳಿಂದ ಬಂದುದು.

ಹಲಲಲಲ ಕೀ...ಹಾ(ಬ./ಉ.): 1. ಕಿರಾತನ ಪ್ರವೇಶದಲ್ಲಿ ಕಿರಾತನೂ, ಅವನ ಪಡೆಯವರೂ ಹೊಡೆಯುವ ಬೊಬ್ಬೆ. ಯುದ್ಧದ ವೇಳೆ ವೀರರು ಪರಸ್ಪರ ಸವಾಲಿಕ್ಕುವ ಕೂಗು.

2. (ಉ.) ಹಿಂದೆ, ಪ್ರತಿಯೊಂದು ವೇಷವೂ ವೀರರಸದ ಪದ್ಯಗಳಿಗೆ, ಯುದ್ಧ, ವೀರರಸದ ಸಂವಾದಗಳಲ್ಲಿ ಬಳಸುತ್ತಿದ್ದ ಬೊಬ್ಬೆ.

ಹಲಸಿನ ಮರ: ಮದ್ದಲೆಯ ಕಳಸಿಗೆಗೆ ಉತ್ತಮವಾದ ಮರಗಳಲ್ಲೊಂದು.

ಹಲ್ಲು = ನೋಡಿ: ದಂಷ್ಟ್ರ.

ಹಲ್ಲೆ: ಆಭರಣಗಳ ಬಿಡಿಭಾಗಗಳಲ್ಲೊಂದು. (ಮಣಿ ಮುಳ್ಳು, ಕಡ್ಡಿ, ಕಾಯಿ ಇತ್ಯಾದಿ ಇದ್ದಂತೆ). ಪಲ್ಲೆ; ಬಿಲ್ಲೆ. ಚೌಕ, ಆಯತ, ಉರುಟು, ಉಬ್ಬಿದ ಉರುಟು, ತಗ್ಗು ಉರುಟು, ಪಟ್ಟಿಕೆ, ತ್ರಿಕೋಣ, ವಜ್ರ, ಎಲೆ– ಮುಂತಾದ ಆಕೃತಿಯ ಬಿಲ್ಲೆಗಳು. ಮುಖ್ಯವಾಗಿ ಮರದ ಕೆತ್ತನೆಗಳು. ಇವುಗಳಿಗೆ ಬೇಗಡೆ, ಕನ್ನಡಿ ಹರಳುಗಳನ್ನು ಕೂರಿಸಿ ಅಲಂಕರಿಸುವರು. ಹಲ್ಲೆಗಳನ್ನೆ ಹಗ್ಗಗಳಿಂದ ಜೋಡಿಸಿದ ಆಭರಣಗಳಿವೆ. ಕೈಕಟ್ಟು, ಸೊಂಟದ ಡಾಬು ಇತ್ಯಾದಿ. ಹಲ್ಲೆಯನ್ನು ಮಾತ್ರ ಆಭರಣವಾಗಿ ಬಳಸಬಹುದು. ಉದಾ: ತಿರುಪಿನ ಹೂವು. ಹಲ್ಲೆಗಳನ್ನು ಬಟ್ಟೆಗೆ ಹೊಲಿದು ಬಳಸಬಹುದು. ಉದಾ: ವೀರಗಸೆ, ಎದೆಪದಕ ಇತ್ಯಾದಿ.

ಹಲ್ಲೆಗೆಜ್ಜೆ: 1. ಹಲ್ಲೆ ಮತ್ತು ಗೆಜ್ಜೆ ಮಣಿ ಸೇರಿದ ಆಭರಣ ಅಥವಾ ಆಭರಣ ಭಾಗ. ಉದಾ: ಗೆಜ್ಜೆಅಡ್ಡಿಗೆ.

2. ಚರ್ಮ ಅಥವಾ ಬಟ್ಟೆಯ ಮೆತ್ತೆಗೆ ಹೊಲಿದ ಗೆಜ್ಜೆ (ಹಗ್ಗದಲ್ಲಿ ನೇಯ್ದ ಗೆಜ್ಜೆ ಸರಕ್ಕಿಂತ ಬೇರೆ).

ಹವಳ: ಕೆಂಪುಮಣಿ. ಸರ, ಕೈಕಟ್ಟು, ತೋಳ್ಕಟ್ಟುಗಳಿಗೆ ಪೋಣಿಸುವರು.

ಹವಳ ಸರ: ಹವಳದಸರ, ಕೆಂಪು ಮಣಿಸರ. ಹವಳಗಳನ್ನು ಮಾತ್ರ, ಅಥವಾ ಹವಳ, ಮಣಿ, ಮುತ್ತು, ಕಾಯಿಗಳನ್ನು ಸೇರಿಸಿ ಮಾಡಿದ ಹಾರ.

ಹಸಿಬಣ್ಣ: ಹಸಿ ಹೊಳಪಿನ ಬಣ್ಣಗಾರಿಕೆ. ಎಣ್ಣೆ ಹೊಳಪು ಕಾಣುವ, ಪೌಡರ್ ಹಾಕಿ ಒಣಗಿಸದಿರುವ ಮುಖವರ್ಣಿಕೆ. ಹಿಂದೆ ಎಲ್ಲ ವೇಷಗಳಿಗೂ ಹಸಿಬಣ್ಣಗಳೇ ಇದ್ದುದು.

ಈಗಲೂ, ಕೆಲವೊಮ್ಮೆ ಒಂದು ಅಂದವೆಂದು, ವಿಶೇಷತೆಯೆಂದು, ಕೆಲವು ವೇಷಗಳನ್ನು ಹಸಿಬಣ್ಣಗಳಾಗಿ ಬರೆಯುವರು. (ಉದಾ: ಬಲರಾಮ, ಕೌಂಡ್ಲಿಕ, ವೀರವರ್ಮ).

ಹಸುರು : 1. ಹಸಿರು. ವರ್ಣದ್ರವ್ಯ. ಹಿಂದೆ ಜಂಗಮ ಅಥವಾ ನೆಲ್ಲಿ ಎಲೆಗಳ ಹುಡಿ ಬಳಸುತ್ತಿದ್ದರು. ಈಗ ರಾಸಾಯನಿಕ ಬಣ್ಣವನ್ನು ಬಳಸುತ್ತಾರೆ.

2. ಹಸಿರು ಮುಖದ ಬಣ್ಣಗಾರಿಕೆ, ವೇಷ. ಅತಿಕಾಯ, ವೀರವರ್ಮ, ಕೌಂಡ್ಲಿಕ, ಕೃಷ್ಣ (ತೆ.) ಇತ್ಯಾದಿ.

ಹಸ್ತ ಉರುಳಿಕೆ (ಉ.) : ನೋಡಿ : ಗಂಟು ಉರುಳಿಕೆ. ಮದ್ದಲೆಯಲ್ಲಿ ಬಾರಿಸುವ ಉರುಳಿಕೆ ಪೆಟ್ಟುಗಳ ಒಂದು ವಿಧ. ಅಂಗೈಯ ಮೇಲ್ಭಾಗ, ಹೆಬ್ಬೆರಳು ಮತ್ತು ಉಳಿದ ನಾಲ್ಕು ಬೆರಳನ್ನು ಒಟ್ಟಾಗಿ ಜೋಡಿಸಿ ಹಿಡಿದು ಮದ್ದಲೆಯ ಮೇಲೆ ಉರುಳಿಸುವುದು. ಮದ್ದಲೆ ಬಲದ ಬಾಯಿ ಕಿರಿದಾಗುತ್ತ ಬಂದಂತೆ ರೂಢಿಸಿದ ವಾದನ ವಿಧಾನ.

(ಇದಕ್ಕೆ ಭಿನ್ನವಾಗಿ, ನಾಲ್ಕು ಬೆರಳುಗಳನ್ನು ಬಿಡಿಯಾಗಿ ಬಳಸಿ ಬಾರಿಸುವುದು. – ಬೆರಳು ಉರುಳಿಕೆ).

ಹಾರ್ಮೋನಿಯಂ : ಶ್ರುತಿಗಾಗಿ ಬಳಕೆಗೊಳ್ಳುವ ಹಾರ್ಮೋನಿಯಂ. ಹಾರ್ಮೋನಿಯಂ ಪೆಟ್ಟಿಗೆ

ಹಾಲಕ್ಕಿ ಹಾಸ್ಯ : ಕಟ್ಟು ಹಾಸ್ಯಗಳಲ್ಲೊಂದು. ಹಾಲಕ್ಕಿ ಒಕ್ಕಲಿಗ ಮತ್ತು ಹಾಲಕ್ಕಿ ನರ್ಸಣ್ಣ (ಶಕುನಗಾರ)ನ ಅಣಕ.

ಹಾಲೆ(ಳೆ) ಮರ : ಒಂದು ಬಗೆಯ ಹಗುರವಾದ, ಮೆದು ಮರ (Alstonia scholaris), ಸಪ್ತಪರ್ಣಿ. ಬೊಂಬೆ, ವೇಷ ಸಾಮಗ್ರಿ ತಯಾರಿಗೆ ಉಪಯುಕ್ತ.

ಹಾಸ್ಯ : 1. ಹಾಸ್ಯಗಾರ.

2. ಹಾಸ್ಯಪಾತ್ರ.

3. ಹಾಸ್ಯ ಸನ್ನಿವೇಶ.

ಹಾಸ್ಯವು ಪೂರ್ವ ರಂಗದಲ್ಲಿ ಕೋಡಂಗಿ ಮತ್ತು ಕಟ್ಟು ಹಾಸ್ಯಗಳ ರೂಪದಲ್ಲೂ, ಕತೆಯಲ್ಲಿ ಹೊಗಳಿಕೆ ದೂತ, ಯುದ್ಧ ದೂತ, ಕಿರಾತ ಪಡೆ, ಮಂತ್ರವಾದಿ, ಜ್ಯೋತಿಷಿ, ಪುರೋಹಿತ, ಅಪಶಕುನ ಹಾಸ್ಯ, ಚಾರಕ, ಗೂಢಚಾರ, ಸಂದೇಶಚರ, ಸಖಿ, ಮಕರಂದ, ಮಂತ್ರಿ (ಕೆಲವೊಮ್ಮೆ ಮಾತ್ರ), ಮೊದಲಾದ ಪಾತ್ರಗಳ ರೂಪದಲ್ಲೂ, ಸಖಿ, ಹಾಸ್ಯಗಾರನ ಹೆಂಡತಿ, ಕೊರವಂಜಿ, ದೂತಿ– ಮೊದಲಾಗಿ ಹೆಣ್ಣು ಹಾಸ್ಯರೂಪದಲ್ಲೂ ಬರುತ್ತದೆ.

ಹಾಸ್ಯಗಾರನು ವಹಿಸುವಾಗ ಬ್ರಹ್ಮ, ಋಷಿ, ನಾರದ ಮೊದಲಾದವೂ– ಹಾಸ್ಯಪಾತ್ರಗಳೆಂದೇ ಗ್ರಹಿಕೆ. ಹಾಸ್ಯಕ್ಕೆ ಸಂಬಂಧಿಸಿ ಕೆಲವು ಸಂಪ್ರದಾಯಗಳಿದ್ದು, ಉಳಿದ ಪಾತ್ರಗಳು, ಹಾಸ್ಯಕ್ಕೆ ಅನುವಾಗುವಂತೆ, ಅದನ್ನು ಅನುಸರಿಸಬೇಕು. ನಿರ್ದಿಷ್ಟ ಪ್ರಶ್ನೆಗಳನ್ನು ಕೇಳಬೇಕು, 'ಕ್ರಮ'ದಂತೆ 'ಹಾಸ್ಯ'ವನ್ನು ಮಾತಾಡಿಸಬೇಕೆಂಬುದು ಪದ್ಧತಿ.

ಹಾಸ್ಯಗಾರ : ಹಾಸ್ಯಕಾರ, ವಿದೂಷಕ. ಮೇಳದ ಪ್ರಮುಖ ವ್ಯಕ್ತಿಗಳಲ್ಲೊಬ್ಬ. ಭಾಗವತನ ಬಳಿಕ, ಮದ್ದಲೆಗಾರ, ಮುಖ್ಯವೇಷದವನು (ತೆಂಕುತಿಟ್ಟಿನಲ್ಲಿ ಬಣ್ಣದ ವೇಷಧಾರಿ, ಬಡಗುತಿಟ್ಟಿನಲ್ಲಿ ಎರಡನೆಯ ವೇಷಧಾರಿ), ಹಾಸ್ಯಗಾರ– ಇವರಿಗೆ ಸಮಾನ ಸ್ಥಾನವೆಂಬ ಸಂಪ್ರದಾಯ.

ಹಾಸ್ಯಗಾರನಿಗೆ, ಹಾಸ್ಯ ಪ್ರತಿಭೆಯೊಂದಿಗೆ, ಯಕ್ಷಗಾನದ ಅಂಗೋಪಾಂಗಗಳ ಜ್ಞಾನವಿರಬೇಕೆಂದೂ, ಭಾಗವತಿಕೆ, ಮದ್ದಲೆ ವಾದನಗಳಲ್ಲಿ ಪ್ರಯೋಗ ಸಾಮರ್ಥ್ಯ ಮತ್ತು ಇತರ ವೇಷಗಳನ್ನೂ ಮಾಡಬಲ್ಲ ಸಾಮರ್ಥ್ಯವಿರಬೇಕೆಂದೂ ಸಾಂಪ್ರದಾಯಿಕ ನಿರ್ಣಯ.

ಹಿಂದೆ, ಈಗಿನಂತೆ, ಕಲಾವಿದನು ನೇರವಾಗಿ ಹಾಸ್ಯಗಾರನಾಗಿ ಬರುವ ಕ್ರಮವಿರಲಿಲ್ಲ. ಕೋಡಂಗಿ, ನಿತ್ಯವೇಷ, ಪುಂಡುವೇಷ, ಸ್ತ್ರೀವೇಷಗಳನ್ನು ಮಾಡಿದ ಬಳಿಕ ಹಾಸ್ಯಗಾರನಾಗುವ ಕ್ರಮವಿತ್ತು. ಅಥವಾ ಪ್ರಧಾನ ವೇಷಧಾರಿಯಾಗಿ, ಬಣ್ಣದ ವೇಷಗಳ ಹಂತವನ್ನೂ ಮುಗಿಸಿ ಹಾಸ್ಯಗಾರನ ಸ್ಥಾನಕ್ಕೆ ಬರುವುದೂ ಇತ್ತು. ಈ ಹಾಸ್ಯಗಾರನೆಂಬವನು, ವಿದೂಷಕನೂ, ರಂಗಕರ್ಮಿಯೂ, ಸಾಮಾಜಿಕನೂ ಎಲ್ಲವೂ ಆಗಿದ್ದು, ಈ ಪಾತ್ರವು ಭಾರತದ ಬಹುಶಃ ಎಲ್ಲ ಸಾಂಪ್ರದಾಯಿಕ ರಂಗಭೂಮಿಗಳಲ್ಲೂ ಇರುವಂತಹದು. 'ಮೂಡಲಪಾಯ'ದ 'ಸಾರಥಿ'ಯಲ್ಲೂ, ತೆರುಕ್ಕೂತ್ತಿನ 'ಕಟ್ಟಿಯಕ್ಕಾರ'ನಲ್ಲೂ, ಇದರ ಪ್ರಾಚೀನ ರೂಪದ ಹೆಚ್ಚಿನ ಅಂಶಗಳು ಕಾಣುತ್ತವೆ.

ಹಾಸ್ಯಗಾರನ ಕೆಲಸಗಳನ್ನು ಎರಡು ವಿಭಾಗವಾಗಿ ನೋಡಬಹುದು : ರಂಗದ ಒಳಗೆ ಮತ್ತು ಹೊರಗೆ. ರಂಗದ ಹೊರಗೆ, ಭಾಗವತನಿಗೆ ಈತನು ಸಹಾಯಕನೆನ್ನಬಹುದು. ರಾತ್ರಿಯಿಡೀ ರಂಗಕ್ಕೂ ಚೌಕಿಗೂ ಹೊಂದಾಣಿಕೆ ಇರುವಂತೆ ಮಾಡುವುದು ಇವನ ಒಂದು ಕೆಲಸ. ವೇಷಗಳು ಸಮಯಕ್ಕೆ ಸರಿಯಾಗಿ ರಂಗಕ್ಕೆ ಹೋಗುವಂತೆ ನೋಡಿಕೊಳ್ಳುವುದು ಇವನ ಹೊಣೆ. ಅಗತ್ಯವಿದ್ದಲ್ಲಿ, ಬದಲಿ ವೇಷ ಮಾಡಿಸುವ ಅಧಿಕಾರವೂ ಇವನಿಗಿದ್ದಿತು. ಮೇಳವು ಆಟ ಆಡಿಸುವವರ ಮನೆಗೆ ಬಂದಾಗ, ನೀಡುವ ಬೆಲ್ಲ ನೀರು ಮತ್ತು ತಾಂಬೂಲಗಳನ್ನು ಪಡೆದು ಹಂಚುವುದು ಈತನಿಗೆ ಸೇರಿದ್ದು. ಆಟದ ಕೊನೆಯಲ್ಲಿ ವೀಳ್ಯವನ್ನು ಈತನೇ ಪಡೆದು ಭಾಗವತರ ಕೈಗೆ ನೀಡುತ್ತಾನೆ. (ಬಡಗುತಿಟ್ಟಿನಲ್ಲಿ ಸ್ತ್ರೀ ವೇಷದವನು ಈ ಕೆಲಸ ಮಾಡುವನು).

ರಂಗದಲ್ಲಿ, ಹಲವು ಪಾತ್ರಗಳನ್ನು ನಿರ್ವಹಿಸುವ ಈತನು, ನಿಜವಾಗಿಯೂ ಬಹುರೂಪಿ. ಹಳೆಯ ಕ್ರಮದಂತೆ ಆಟದ ಅವಧಿಯ ಬಹುಭಾಗ, ಹೆಚ್ಚುಕಡಿಮೆ ರಾತ್ರಿ ಯುದ್ಧಕ್ಕೂ ಈತನು ರಂಗದಲ್ಲಿರಬೇಕಿತ್ತು. ಈಗೀಗ ಈ ಅವಧಿ ತುಸು ಕಡಿಮೆಯಾಗಿದೆ.

ಹಾಸ್ಯಗಾರನು ವಹಿಸುವ ಪಾತ್ರಗಳು :

1. ದೂತ/ಚಾರಕರು : ಸ್ವರ್ಗದೂತ, ರಾಕ್ಷಸ ದೂತ, ದ್ವಾರಪಾಲಕ, ಕುದುರೆದೂತ, ಗಡಿಬಿಡಿ ದೂತ, ಕಾವಲುಗಾರ, ಸಂದೇಶ ವಾಹಕ, ಹೊಗಳಿಕೆ ದೂತ, ಸುದರಿಕೆ ಹಾಸ್ಯ, ಕರೆದಾಗ ಬರುವ ಸೇವಕ ಇತ್ಯಾದಿ– ಇಲ್ಲೆಲ್ಲ ದೂತನೆಂದರೆ ಚಾರಕ, ಸೇವಕನೆಂದರ್ಥ.

2. ಋಷಿಗಳು : ನಾರದ, ದೂರ್ವಾಸ, ಶಾಪಕೊಡುವ ಋಷಿಗಳು, ಕೆಲವು ಅಮುಖ್ಯ ಋಷಿ ಪಾತ್ರಗಳು, ಬೈರಾಗಿ.

3. ಅಪಶಕುನ ಬ್ರಾಹ್ಮಣ, ಪುರೋಹಿತ, ಜ್ಯೋತಿಷಿ, ಮಂತ್ರವಾದಿ.

4. ಅಪಶಕುನ ಹಾಸ್ಯಗಳು : ಒಂಟಿ ಬ್ರಾಹ್ಮಣ, ವಿಧವೆ, ಕುಂಬಾರ, ಗಾಣಿಗ ಇತ್ಯಾದಿ.

5. ಆಪ್ತ ಸಖ, ಕೊಕ್ಕೆಚಿಕ್ಕ ಮೊದಲಾದವು.

6. ಮಂತ್ರಿ : ಬಭ್ರುವಾಹನನ ಮಂತ್ರಿ, ಗದಾಪರ್ವದ ಸಂಜಯ.

7. ಕೆಲವು ವಿಶಿಷ್ಟ ಪಾತ್ರಗಳು : ಮುದಿಯಪ್ಪಣ್ಣ, (ಬೇಟೆಗಾರರ ಮುಖ್ಯಸ್ಥ) ವನಪಾಲಕ, ನಳಚರಿತ್ರೆಯ ಶನಿ ಬ್ರಾಹ್ಮಣ, ಬಾಹುಕ, ಕೊರವಂಜಿ, ಚಿತ್ರಗುಪ್ತ, ದಾರುಕ, ಭಿಕ್ಷುಕ, ಜಾಂಬವಂತ, ಗುಹ, ದಾಶರಾಜ, ಅಧಿರಥ ಇತ್ಯಾದಿ.

8. ವರಕೊಡುವ ಬ್ರಹ್ಮ (ಪ್ರತ್ಯಕ್ಷಬ್ರಹ್ಮ), ಮಿತಾವಕಾಶದ ಬೃಹಸ್ಪತಿ, ಶುಕ್ರ, ವಸಿಷ್ಠ ಇತ್ಯಾದಿ.

9. ಸ್ತ್ರೀ ಪಾತ್ರಗಳು : ಅತ್ತೆ, ಭಿಕ್ಷುಕಿ, ಮುದುಕಿ, ಮಂಥರೆ, ಕುಬ್ಜೆ, ಕೊರವಂಜಿ, ದೂತಿ.

10. ಪೂರ್ವರಂಗದ ಕಟ್ಟು ಹಾಸ್ಯಗಳು ಹಲವು.

11. ತೆ. ಹೊಗಳಿಕೆ ಹಾಸ್ಯ : ಎಂದರೆ, ಪೂರ್ವರಂಗದ ಕೊನೆಯ ಭಾಗದಲ್ಲಿ ಮುಖ್ಯ ಸ್ತ್ರೀ ವೇಷದೊಡನೆ ಈ ಪಾತ್ರ ಬರುತ್ತದೆ. ಮೇಳದ ದೇವರು, ಸ್ಥಳ ದೇವರು, ಆಟ ಆಡಿಸಿದವರ ಹೊಗಳಿಕೆಗಳನ್ನು, ಭಾಗವತನೊಂದಿಗೆ ಸೇರಿಕೊಂಡು, ಹೇಳಬೇಕು. (ನೋಡಿ : **ಆಹೋಹೋ, ದಕ್ಕಿತೋ ದಕ್ಕಿತು, ಹೊಗಳಿಕೆ**)

ಇದೇ ರೀತಿಯಲ್ಲಿ ಆಟದ ಕೊನೆಗೆ ವೀಳ್ಯ ಪಡೆಯುವಾಗ ದೇವರ ಮತ್ತು ಆಡಿಸಿದವರ ಹೊಗಳಿಕೆ ಹೇಳಬೇಕು.

ಹಾಸ್ಯಗಾರನು ಬಣ್ಣಕ್ಕೆ ಕುಳಿತುಕೊಳ್ಳುವ ಸ್ಥಳಕ್ಕೆ **ಅಡ್ಡಚೌಕಿ** ಎನ್ನುವರು. ಇದು ಚೌಕಿಯಲ್ಲಿ ದೇವರಿಗೆ ಇದಿರಾಗಿದ್ದು, ವೇಷಧಾರಿಗಳ ಎರಡು ಸಾಲುಗಳ ಕೊನೆಗೆ ಇರುತ್ತದೆ. ಹಾಸ್ಯವೆಂಬುದು ಒಂದು ಅರ್ಥದಲ್ಲಿ 'ವೇಷ' ಅಲ್ಲ. ವ್ಯಕ್ತಿಯೇ. ಹಾಸ್ಯಗಾರನೇ ಹಾಸ್ಯಪಾತ್ರ. ಅವನಿಗೊಂದು ಪ್ರತ್ಯೇಕತೆ ಇದ್ದು, ಅವನ ಮಟ್ಟಿಗೆ ಔಚಿತ್ಯದ ನಿಯಮಗಳು ಸಡಿಲಾಗಿರುತ್ತವೆ.

ಈ ಹಾಸ್ಯಗಾರನೆಂಬವನು, ಏಕಕಾಲಕ್ಕೆ ಒಂದು ಪಾತ್ರವೂ, ರಂಗದ ಪಾತ್ರಗಳ ಆತ್ಮೀಯ ವ್ಯಕ್ತಿಯೂ, ಅವರ ಅಂತರಂಗದ ಒಂದು ಅಂಶವೂ, ಪ್ರೇಕ್ಷಕರ ಪ್ರತಿನಿಧಿಯೂ ಆಗಿದ್ದು, ಪುರಾಣ– ವರ್ತಮಾನ, ಪಾತ್ರ– ಪ್ರೇಕ್ಷಕ, ಪ್ರಸಂಗ– ಪ್ರದರ್ಶನ, ಕಥೆ– ನಿಜಜಗತ್ತು ಹೀಗೆ ವಿವಿಧ ದ್ವಂದ್ವಗಳ ಕೊಂಡಿಯೂ, ಆಗಿರುವ ಒಂದು ಸಂಕೀರ್ಣ ಪರಿಕಲ್ಪನೆಯಾಗಿದ್ದಾನೆ.

ಹಾಸ್ಯಗಾರನು ಭಾಗವತರನ್ನು, ಪಾತ್ರಗಳನ್ನು, ದೇವರನ್ನು ಸಹ ಟೀಕಿಸಬಹುದು. ತಮಾಷೆ ಮಾಡಬಹುದು. ಇದು ಹೆಚ್ಚು ಮುಕ್ತವಾದ, ಒಂದು ಸ್ಥಾನ.

ಹಾಸ್ಯ ಪಾತ್ರಗಳ ಮುಖವರ್ಣಿಕೆಗಳಲ್ಲಿ ಹಿಂದೆ ಅಂತಹ ವೈವಿಧ್ಯವಿರಲಿಲ್ಲ. ಅಲ್ಪಾಲ್ಪ ವ್ಯತ್ಯಾಸಗಳು ಮಾತ್ರ, ಆಗಿಂದಾಗ ಮೂಡಿ ಬರುತ್ತಿದ್ದುವು. ವೇಷ ಸಾಮಗ್ರಿಯೂ ಮಿತವಾಗಿತ್ತು.

ಈಗ ದೂತರ ಹಲವು ಬಗೆಗಳನ್ನು ಬೇರೆ ಬೇರೆಯಾಗಿ, ಚಿತ್ರಿಸುವ ಕ್ರಮವಿದೆ. ಅದೇ ರೀತಿಯಲ್ಲಿ ಮಾಂತ್ರಿಕ, ಗೂಢಚಾರಕ, ಗೋಪಾಲಕ, ಮುದಿಯಪ್ಪಣ್ಣ, ವನಪಾಲಕ– ಮೊದಲಾದ ಪಾತ್ರಗಳಿಗೆ ಬೇರೆ ಬೇರೆ ವೇಷ ಸಾಮಗ್ರಿಗಳೂ ಇವೆ.

ಹಾಸ್ಯಗಾರನ ಚಾಪೆ 1. ಚೌಕಿಯ ಬುಡದಲ್ಲಿ, ಹಾಸ್ಯಗಾರನು ಬಣ್ಣಕ್ಕೆ ಕುಳಿತುಕೊಳ್ಳುವ ಸ್ಥಾನ. ಅಡ್ಡಚೌಕಿ.

2. ರಂಗಸ್ಥಳದ ಹತ್ತಿರ, ಹಿಮ್ಮೇಳದ ಹಿಂಬದಿಯಲ್ಲಿ ಹಾಸ್ಯಗಾರನ ಹೆಚ್ಚುವರಿ ಚಾಪೆ. ಬೇಗ ಬೇಗನೆ ವೇಷ ಬದಲಾವಣೆ ಮಾಡಲು ಅನುಕೂಲವಾಗುವಂತೆ, ಈ ಏರ್ಪಾಡು. ಅಗತ್ಯದ ಬಣ್ಣಗಳು, ಸಾಮಾಗ್ರಿಗಳೂ ಈ ಚಾಪೆಯಲ್ಲಿರುತ್ತವೆ.

ಹಾಸ್ಯಗಾರನ ಚೌಕಿ = ನೋಡಿ : **ಅಡ್ಡಚೌಕಿ.**

ಹಾಸ್ಯದ ಜವಳಿ: ಹಾಸ್ಯಗಾರನ ಜವುಳಿ. ಬಟ್ಟೆಗಳು. ಸಾಂಪ್ರದಾಯಿಕವಾಗಿ ಒಂದು ಕಚ್ಚೆಸೀರೆ, ಮುಂಡಾಸಿನ ವಸ್ತ್ರ, ನಿಲುವಂಗಿ, ಜಟ್ಟಿ ವಸ್ತ್ರ, ಚಲ್ಲಣ– ಇಷ್ಟೆ ಜವುಳಿ ಇದ್ದು, ಇದರಿಂದಲೇ ಎಲ್ಲ ವೇಷಗಳ ನಿರ್ವಹಣೆಯೂ ಆಗಬೇಕಿತ್ತು. ಇದು ಮಿತವಾದ ಜವುಳಿಯಿಂದ, ವಿಶಾಲ ವ್ಯಾಪ್ತಿಯ ಪಾತ್ರಗಳ ನಿರ್ವಹಣೆಯ ಒಂದು ಶಕ್ತಿಶಾಲಿ ವಿಧಾನಕ್ಕೆ ಕಾರಣವಾಗಿತ್ತು.

ಈಗ ಹಲವು ಬಗೆಯ ಚಲ್ಲಣಗಳು, ಪಟ್ಟಿ ಅಂಗಿ, ರೋಮದ ಅಂಗಿ, ಬಣ್ಣದ ಅಂಗಿ, ಕೋಟು ಮೊದಲಾದವು ಬಳಕೆಗೆ ಬಂದಿದ್ದು ಇದರಿಂದ ಪಾತ್ರೋಚಿತ ವೈವಿಧ್ಯ ಸಾಧ್ಯವಾಗಿದೆ.

ಹಾಸ್ಯದ ಪೆಟ್ಟಿಗೆ: ಹಾಸ್ಯಗಾರನ ಜವುಳಿ, ವೇಷ ಸಾಮಗ್ರಿಗಳನ್ನು ಇಡುವ ಸಣ್ಣಪೆಟ್ಟಿಗೆ.

ಹಾಸ್ಯದ ಸಾಮಾನು: ಹಾಸ್ಯಗಾರನ ಜವುಳಿ ಮತ್ತು ಸಾಮಗ್ರಿ. ಈಗ, ಇದರಲ್ಲಿ ವಿವಿಧ ಮುಖವಾಡಗಳು, ವಿಚಿತ್ರವಾದ ಸರ, ಆಭರಣಗಳು, ಮೊದಲಾದವುಗಳ ವಿಪುಲ ಸಂಗ್ರಹವೆ ಹಾಸ್ಯಗಾರರಲ್ಲಿರುತ್ತವೆ.

ಹಾಸ್ಯಪದ: 1. ಹಾಸ್ಯ ಸನ್ನಿವೇಶದ ಪದ್ಯಗಳು, ಹಾಡುಗಾರಿಕೆ.

2. ಹಾಸ್ಯಗಾರನು ಹಾಡುವ ಪದ್ಯಗಳು.

ಹಾಸ್ಯ ಮಂಜರಿ: ಪೂರ್ವರಂಗದ ಹಾಸ್ಯ ವಿಷಯಗಳ ಸಂಗ್ರಹವುಳ್ಳ ಗ್ರಂಥ.

ಹಿಂಗಾರ ಚಿಟ್ಟೆ: ಬಣ್ಣದ ವೇಷದ ಚುಟ್ಟಿಯ ಒಂದು ಬಗೆ. ಅಡಕೆ ಮರದ ಹೂ (ಹಿಂಗಾರ)ದಂತೆ ಚಪ್ಪಟೆ, ನಾಜೂಕು ಮುಳ್ಳುಗಳ ಸಾಲು.

ಹಿಂಡಿಗೆ = ನೋಡಿ: **ಇಂಡಿಗೆ.**

ಹಿಂಡು ಬೈರಾಗಿ: ಕಟ್ಟು ಹಾಸ್ಯಗಳಲ್ಲೊಂದು ಬೈರಾಗಿಗಳ ಗುಂಪು. ಹಿಂದಿ ಮಿಶ್ರಿತ ಭಾಷೆ ಬಳಸುವರು.

ಹಿಮ್ಮೇಳ: 1. ಭಾಗವತನಿಗೆ ಚಂಡೆ, ಮದ್ದಲೆ, ಶ್ರುತಿ ಇವು ಹಿಮ್ಮೇಳ.

2. ಪಾತ್ರಕ್ಕೆ – ಭಾಗವತನೂ, ವಾದ್ಯಗಳೂ ಹಿಮ್ಮೇಳ.

3. (ಗ./ಮೂ.) ಭಾಗವತನ ಜತೆಗೆ ಹಿಂದಿನಿಂದ ಹಾಡುವ ಹಾಡುಗಾರರ ತಂಡ, ಹಿಮ್ಮೇಳ ಗಾಯಕರು. (ಇಲ್ಲಿ ಭಾಗವತನು ಮುಮ್ಮೇಳವೆಂದು ತಾತ್ಪರ್ಯ:)

ಹಿಲಾಲು = ನೋಡಿ: **ದೀವಟಿಗೆ, ದೊಂದಿ, ಪಂಜು.**

ಹೀಲಿ: ನವಿಲುಗರಿ. ಕಿರೀಟಗಳ ಅಲಂಕಾರಕ್ಕೆ ಬಳಸುವರು.

ಹೀಲಿ ಕಿರೀಟ (ಉ.) = ನೋಡಿ: **ಪೀಲಿ ಕಿರೀಟ.**

ಹೀಲಿತಟ್ಟಿ (ಉ.): ಹೀಲಿ ಇಟ್ಟ ತಟ್ಟಿ ಕಿರೀಟ. ಹೆಣ್ಣು ಬಣ್ಣದ ಕಿರೀಟ ಮತ್ತು ಗಂಡು ಬಣ್ಣದ ಕಿರೀಟಗಳು.

ಹುಟ್ಟು ಸಂಬಳ: ಆಟ ಇದ್ದರೆ ಮಾತ್ರ ಕಲಾವಿದನಿಗೆ ಸಂಬಳ ಕೊಡುವ ಒಪ್ಪಂದ, 'ಹುಟ್ಟು' (ಉತ್ಪತ್ತಿ) ಇದ್ದರೆ ಸಂಬಳ. (ಇದಕ್ಕೆ ಭಿನ್ನವಾದದ್ದು **ಕಟ್ಟು ಸಂಬಳ.** ಕಟ್ಟು (ನಿಶ್ಚಿತ) ಸಂಬಳ ನೀಡುವ ಕ್ರಮ.)

ಹುಡಿನಾಟ್ಯ: ಕಿರು ಹೆಜ್ಜೆಗಳು. ನಾಜೂಕಿನ ಕುಣಿತ.

ಹುಡಿ ಹಾರಿಸುವುದು: ರಂಗಸ್ಥಳದಲ್ಲಿ ಚೆನ್ನಾಗಿ ಮೆರೆಯುವುದು ಎಂಬರ್ಥದಲ್ಲಿ ಪ್ರೇಕ್ಷಕರು ಬಳಸುವ ಪ್ರಶಂಸಾತ್ಮಕ ಪದ. ಕುಣಿತ, ಅಬ್ಬರಗಳಿಂದ ರಂಗದಲ್ಲಿ ಹುಡಿ ಹಾರಿಸುವುದು. ನೋಡಿ: **ಚೂರು ಹಾರಿಸುವುದು, ಧುಪ್ಪಧೂಳು**

ಹುಬ್ಬು: 1. ಹುಬ್ಬಿನ ಬರವಣಿಗೆ. ಕಾಡಿಗೆಯಿಂದ ಹುಬ್ಬು ತಿದ್ದುವಿಕೆ.

2. ಕೃತಕ ಕೂದಲಿನ, ಅಂಟಿಸುವ ಹುಬ್ಬು.

ಹುರಿ: ನಾರು, ಹಗ್ಗಗಳ ಹುರಿ. ಚೆಂಡೆಯ ಹಗ್ಗ, ಕಟ್ಟುವ ಹಗ್ಗ ಮೊದಲಾದವು.

ಹುಲ್ಲಿನ ಜಡೆ (ಬ.): ಮುಂಡಾಸು, ಪಗಡಿ (ಕೇದಗೆ ಮುಂದಲೆ)ಗಳು, ಆಯವಾಗಿರಲು, ಅಟ್ಟೆಯ ಅಂಚಿಗೆ ಕಟ್ಟುವ ಹುಲ್ಲಿನ ಹೆಣೆಗೆ.

ಹುಲ್ಲು/ಹುಲ್ಲು ಬೆಂಕಿ: ಹೋಮದೃಶ್ಯಕ್ಕೆ, ಕಿರಾತ ಪ್ರವೇಶಕ್ಕೆ, ದೂರದಿಂದ ಬರುವ ವೇಷಗಳ ಪ್ರವೇಶಕ್ಕೆ ಬಳಸುವ ಹುಲ್ಲು ಮತ್ತು ಬೆಂಕಿ. ಹುಲ್ಲಿಗೆ ಬೆಂಕಿ ಹಾಕಿ ಉರಿಸುವುದು.

ಹುಲ್ಲುಸೂಡಿ: ಕಿರಾತ ಪ್ರವೇಶ, **ಲಾಲಿಕುಣಿತ** (ಬ.ಉ.), **ಬೀದಿಕುಣಿತ** (ಗ.) ಗಳಲ್ಲಿ ಉರಿಸಲು ಬಳಸುವ ಹುಲ್ಲಿನ ಸೂಡಿ ಅಥವಾ ಕಂತೆ.

ಹುಸಿಪೆಟ್ಟು: 1. ತಾಳದ ಅಂಗಗಳಲ್ಲಿ ಒಂದು ಹುಸಿ. ಘಾತಾನಂತರ ಬಿಡುವ ಸ್ಥಳ. (ಇನ್ನೊಂದು ಘಾತ)

2. ತಾಳದ ಮುಖ್ಯ ಘಾತದ ಹೊರತು ಉಳಿದ ಪೆಟ್ಟುಗಳು. ಉದಾ: ಏಕತಾಳವನ್ನು ಮೂರು ಪೆಟ್ಟುಗಳಿಂದ ತೋರಿಸುವ ಕ್ರಮದಲ್ಲಿ

ಧೀಂ। ದತ್ತಾಂ – 1. ಎಂಬುದು ಘಾತ ಪೆಟ್ಟು, 2, 3 ಇವು ಹುಸಿಪೆಟ್ಟುಗಳು.

3. ಚೆಂಡೆ, ಮದ್ದಲೆಗಳಲ್ಲಿ, ಪೆಟ್ಟುಗಳನ್ನು ಬಿಟ್ಟು, ಬಾರಿಸುವಾಗ ಬರುವ ವಿರಾಮ, ಆ ಅವಧಿಯ ಪೆಟ್ಟುಗಳು. ಉದಾ – 'ತ ರಿ ಕಿ ಟ ತಾಂ' – ಎಂಬುದನ್ನು 'ತ... ತಾಂ' ಎಂದು ಬಾರಿಸಿದರೆ, 'ರಿ, ಕಿ, ಟ' ಗಳು ಹುಸಿಪೆಟ್ಟುಗಳು. ನೃತ್ಯದಲ್ಲೂ ಹೀಗೆಯೇ. 'ಮನೋಧರ್ಮ'ದ ಒಂದು ಕ್ರಮ.

ಹುಸಿಯುದ್ಧ : ಹಾಸ್ಯ ಪಾತ್ರಕ್ಕೂ, ಗಂಭೀರ ಪಾತ್ರಕ್ಕೂ ಜರಗುವ ಅಣಕುಯುದ್ಧ. ಉದಾ – ದಿಗ್ವಿಜಯಕ್ಕೆ ಬಂದ ವೀರರಿಗೂ, ಅವರು ಗೆಲ್ಲಬೇಕಾದ ರಾಜ್ಯದ ಚಾರಕನಿಗೂ ನಡೆಯುವ ಯುದ್ಧದ ದೃಶ್ಯ.

ಹೂವಿನ ಕೋಲು (ಬ.) : ಯಕ್ಷಗಾನದ ಒಂದು ಚಿಕ್ಕ ಪ್ರಕಾರ **(minor form)**. ನವರಾತ್ರಿಯ ಸಮಯದಲ್ಲಿ, ಓರ್ವ ಭಾಗವತ, ಮದ್ದಲೆಗಾರ, ಶ್ರುತಿವಾದಕ, ಇಬ್ಬರು ಹುಡುಗರು ಇರುವ ತಂಡವು ಮನೆಮನೆಗೆ ತಿರುಗಾಡುತ್ತ ಕೆಲವು ಪದ್ಯಗಳನ್ನು ಹಾಡಿ ಒಂದು ಚಿಕ್ಕ ತಾಳ ಮದ್ದಲೆಯನ್ನು ಪ್ರದರ್ಶಿಸುತ್ತದೆ. ಈ ಹುಡುಗರ ಕೈಯಲ್ಲಿ ಅಲಂಕಾರ ಮಾಡಿದ ಒಂದೊಂದು ಕೋಲು ಇರುತ್ತದೆ. ಈ ಕೋಲುಗಳಿಂದಲೇ ಈ ಪ್ರಕಾರಕ್ಕೆ ಈ ಹೆಸರು ಬಂದಿದೆ.

ಮೊದಲಾಗಿ, ಈ ಹುಡುಗರು ಈ ಕೋಲುಗಳನ್ನು ಹಿಡಿದುಕೊಂಡು, ದಾನಿಗಳ ಮನೆಯ ಅಂಗಳದಲ್ಲಿ ಕುಳಿತು ಮಾನವಮಿ ಚೌಪದಿ ಪದಗಳನ್ನು ಹಾಡುತ್ತಾರೆ.

ಆಶ್ವೀಜ ಶುದ್ಧ ಮಾನವಮಿ ಬರಲೆಂದು
ಶಾಶ್ವತದಿ ಹರಸಿದೆವು ಬಾಲಕರು ಬಂದು।
ಈಶ ನಿಮಗತ್ಯಧಿಕ ಸುಖವ ಕೊಡಲೆಂದು
ಲೇಸಾಗಿ ಹರಸಿದೆವು ಬಾಲಕರು ಬಂದು॥

ಇದು ಮೊದಲ ಪದ್ಯ. ಅನಂತರ ಸುಮಾರು ಇಪ್ಪತ್ತು ಪದ್ಯಗಳಿದ್ದು, ಅದರಲ್ಲಿ ಉಡುಗೊರೆ ಬೇಡುವುದು, ಲೋಭಿಗಳ ನಿಂದೆ, ದಾನಪ್ರಶಂಸೆ, ಶುಭ ಹಾರೈಕೆ ಮೊದಲಾದುವು ಇರುತ್ತವೆ.

ಈ ಪದ್ಯಗಳಾದ ಬಳಿಕ, ಒಂದು ಚಿಕ್ಕ ತಾಳಮದ್ದಲೆ ಜರಗುವುದು. ಹುಡುಗರು ಅರ್ಥ ಹೇಳುವರು. ಕೊನೆಗೆ ಮನೆಯವರು ಭಾಗವತರಿಗೂ, ಹುಡುಗರಿಗೂ ಉಡುಗೊರೆ, ತಿಂಡಿ, ಹಣ ಕೊಡುವರು.

ಇದು ಮೂಲತಃ, ಐಗಳ ಮಠವೆಂಬ ಹಿಂದಿನ ಶಾಲೆಗಳ ಅಧ್ಯಾಪಕರಾದ 'ಅಯ್ಯ'ರೂ ಅವರ ವಿದ್ಯಾರ್ಥಿಗಳೂ ನಡೆಸುತ್ತಿದ್ದ ಕಾರ್ಯಕ್ರಮವಾಗಿರಬೇಕು. ಚೌಪದಿಗಳು ಮಾತ್ರ ಇದರ ಅಂಗವಾಗಿದ್ದು, ತಾಳಮದ್ದಲೆಯ ಭಾಗ, ಯಕ್ಷಗಾನ ಪ್ರಭಾವದಿಂದ ಸೇರಿರಬೇಕು. (ಐಗಳ ಮಠದಲ್ಲಿ ಯಕ್ಷಗಾನ ಪ್ರಸಂಗಗಳನ್ನೂ ಕಲಿಸುತ್ತಿದ್ದರು.)

ಕಾಲಕ್ರಮದಲ್ಲಿ, ಐಗಳ ಮಠಗಳ ಈ ಪ್ರಕಾರವು, ಭಾಗವತರುಗಳ ಕೈಯಲ್ಲಿ ಉಳಿದು ಬಂತು. ಹಲವು ಕಲಾವಿದರು, ಭಾಗವತರಲ್ಲದವರೂ ಕೂಡ, ಹೂವಿನ ಕೋಲು ತಿರುಗಾಟಗಳನ್ನು ನಡೆಸುತ್ತಿದ್ದರು, ನಡೆಸುತ್ತಿದ್ದಾರೆ.

ಕುಂದಾಪುರ, ಉಡುಪಿ ಪ್ರದೇಶದಲ್ಲಿ ತುಂಬ ಪ್ರಚಲಿತವಾಗಿದ್ದ ಈ ಪ್ರಕಾರವು ಈಗ ಕ್ಷೀಣವಾಗುತ್ತ ಬಂದಿದೆ.

ನೋಡಿ : **ಚಿಕ್ಕಮೇಳ, ದಾನಾವರ್ತ.**

ಹೂವಿನ ಚೆಂಡು (ಬ.) : ಕೇದಗೆ ಮುಂದಲೆ (ಪಗಡಿ) ಮುಂಡಾಸುಗಳ ತುದಿಗೆ ಅಲಂಕಾರವಾಗಿ ಸಿಕ್ಕಿಸುವ ಹೂವಿನಚೆಂಡು. ಹೆಚ್ಚಾಗಿ ಮಲ್ಲಿಗೆ ಹೂವಿನದು. ಈಗ ಬಿಳಿ ಕಾಗದದ ಹೂವೂ ಬಳಕೆಯಿದೆ. ಅಲ್ಲದೆ, **ಸುತ್ತು, ಚೆಂಡಿನದಂಡ,** ಹೂಚೆಂಡು – ಎಲ್ಲವೂ ಸೇರಿರುವ ಬಟ್ಟೆಯ ಸುತ್ತು ಬಂದಿದೆ.

ಹೂವು, ಹೂ : ನೋಡಿ : **ಕುಚ್ಚು, ತಾವರೆ.**

ಹೆಗಲವಲ್ಲಿ (ಬ./ಉ.) : ಪುರುಷ ವೇಷಗಳಲ್ಲಿ ಹೆಗಲಲ್ಲಿ ಧರಿಸಿ ಮುಂದಿನಿಂದ ಇಳಿಬಿಡುವ ವಲ್ಲಿ. ಶಾಲುಗಳು ; ಹೆಗಲವಲ್ಲಿಗಳು ಕೆಂಪು ಮತ್ತು ಬಿಳಿ ಎಂದು ಎರಡು ಬಗೆ ಮಾತ್ರ. (ತೆಂಕುತಿಟ್ಟಿನ **ಸೋಗೆವಲ್ಲಿಗೆ** ಸಮಾನ: ಆದರೆ ಚಿಕ್ಕವು) ಇವು ಬಿಳಿ, ಕೆಂಪು ಬಣ್ಣದ ಶಾಲುಗಳಾಗಿದ್ದು, ಇವನ್ನು ಇಳಿಬಿಟ್ಟ ಅನಂತರ **ಡಾಬು** ಮತ್ತು **ವೀರಗಸೆ, ಮಾರುಮಾಲೆ (ಸಂಪಿಗೆ ಸರ)**ಗಳನ್ನು ಅದರ ಮೇಲಿಂದ ಕಟ್ಟುವರು.


ಹೆಚ್ಚಿಗೆ ಗಂಟು : ತಿರುಗಾಟದ ಮೇಳದ ಹೊರೆಗಳಲ್ಲಿ ಒಂದು. ಅಡುಗೆ ಮಾಡಿ ಉಳಿದ ಸಾಮಗ್ರಿ ಮತ್ತು ಚಿಕ್ಕಪುಟ್ಟ ಉಳಿಕೆ ಸಾಮಗ್ರಿ ಇರುವ ಗಂಟು. **(Sundry ; Miscellaneous)** ಇದನ್ನು ಅಡ್ಡಹೊರೆಯ ಜೊತೆ ಅಥವಾ ದಾಸ್ತಾನು ಪೆಟ್ಟಿಗೆಯಲ್ಲಿ ಸಾಗಿಸುತ್ತಾರೆ.

ಹೆಜ್ಜೆ = ನೋಡಿ : **ಹಜ್ಜೆ.**

ಹೆಜ್ಜೆಗಾರಿಕೆ = ನೋಡಿ : **ಹಜ್ಜೆಗಾರಿಕೆ.**

ಹೆಣ್ಣುಬಣ್ಣ/ಹೆಣ್ಣುಬಣ್ಣದ ವೇಷ : ಹೆಣ್ಣು ಬಣ್ಣದ ವೇಷ, ರಾಕ್ಷಸಿ ಪಾತ್ರ. ಶೂರ್ಪನಖಿ, ಹಿಡಿಂಬಿ, ಅಜಮುಖಿ, ಲಂಕಿಣಿ, ವೃತ್ರಜ್ವಾಲೆ ಇತ್ಯಾದಿ ಪಾತ್ರಗಳು.





ಹೆಣ್ಣು ಬಣ್ಣ (ರಾಕ್ಷಸಿ)
(ತೆಂಕು)





ಹೆಣ್ಣು ಬಣ್ಣ (ತೆಂಕು) ಭೀಮ

ಇದರ ಮುಖದ ಬಣ್ಣ ಕಪ್ಪಾಗಿದ್ದು, ಮೂಗಿನಿಂದ ಹಣೆಯ ತನಕ ನಾಮವಿರುತ್ತದೆ. ಮೂಗಿನ ಹೊಳ್ಳೆಯ ಬದಿಗೆ ಬಿಳಿ ಬಣ್ಣದಲ್ಲಿ ಮೂಗುತಿ ಬರೆಯುತ್ತಾರೆ. ಹಣೆಯಲ್ಲೂ, ಕೆನ್ನೆಗಳಲ್ಲೂ ಚಕ್ರಗಳನ್ನು ಬರೆದು, ಅವುಗಳ ಸುತ್ತ ಕೆಂಪು ರೇಖೆ, ಮಧ್ಯಕ್ಕೆ ಕೆಂಪು ಬಣ್ಣ, ನಾಮದ ಮಧ್ಯಕ್ಕೂ ಕೆಂಪು ತುಂಬಿಸುವರು. ಕೆಳತುಟಿಯ ಕೆಳಗೆ, ಬಾಯಿಯ ಇಕ್ಕಡೆಗಳಲ್ಲಿ ಎರಡು ಕೋರೆ ಹಲ್ಲುಗಳನ್ನು ಬಿಳಿಬಣ್ಣದಲ್ಲಿ ಬರೆಯುತ್ತಾರೆ. ಹಣೆಗೆ ಚುಟ್ಟಿಯಲ್ಲಿ ಅಡ್ಡನಾಮವಿಡುವ ಕ್ರಮವೂ ಉಂಟು. ತುಟಿಯ ಕೆಳಗಿನ ಹಲ್ಲುಗಳ ಮಧ್ಯೆ ಒಂದು ಚಕ್ರವನ್ನೂ ಬಿಡಿಸುವುದಿದೆ.

ಭುಜಕ್ಕೆ ಬಣ್ಣದ ವೇಷದ ಭುಜಕೀರ್ತಿ (ದಂಬೆ)ಯನ್ನು ಕಟ್ಟಿ, ಹೆಗಲಮೇಲಿನಿಂದ ಮುಂದಕ್ಕೆ, ಗಂಡು ವೇಷಗಳಂತೆ ಸೋಗೆ ವಲ್ಲಿಗಳನ್ನು ಇಳಿಸುವರು. ಇಡಿತೋಳಿನ ದಗಲೆ ಹಾಕಿರುತ್ತಾರೆ. ಕೈಗೆ ಕೈಕಟ್ಟು, ತೋಳ್ಕಟ್ಟು ಕೊರಳಿಗೆ ಅಡ್ಡಿಗೆ ಮತ್ತು ಬಣ್ಣಬಣ್ಣದ ಮಣಿಸರಗಳು, ಸೊಂಟಕ್ಕೆ ಡಾಬುಗಳಿರುತ್ತವೆ. ಹಿಂದಿನಿಂದ ಕೇಸರಿಯನ್ನು ಇಳಿಬಿಡುವರು. ಎದೆಪದಕವಾಗಿ, ವೀರಗಸೆಯನ್ನೆ ಕೊರಳಿಗೆ ಕಟ್ಟಿ ಇಳಿಬಿಡುವ ಕ್ರಮವಿದ್ದಿತು. ಈಗ ಗಂಡು ಬಣ್ಣದ ಎದೆಪದಕವನ್ನು ಕಟ್ಟುತ್ತಾರೆ.

ಸೊಂಟದ ಕೆಳಗೆ ಮೂರಂತರದ ನೆರಿಗೆ ಲಂಗವಿರುತ್ತದೆ. ಇದು ಸಿದ್ಧವಲ್ಲ, ಜೋಡಣೆ. ಕೆಂಪು ತೊಟ್ಟುಗಳುಳ್ಳ ದೊಡ್ಡ ಮೊಲೆಕಟ್ಟುಗಳನ್ನು ಎದ್ದು ಕಾಣುವಂತೆ ಕಟ್ಟುವ ಕ್ರಮವಿತ್ತು. ಈಗ ದಗಲೆಯ ಒಳಗಿಂದ ಬಟ್ಟೆಯಿಟ್ಟು ಉಬ್ಬು ಮಾಡುವ ಕ್ರಮವು ಬಂದಿದೆ.

ಈ ವೇಷದ ಕಿರೀಟಕ್ಕೆ ಹೆಣ್ಣುಬಣ್ಣದ ಕಿರೀಟ ಅಥವಾ ಶೂರ್ಪನಖಿ ಕಿರೀಟವೆನ್ನುವರು. (ರಾಮಾಯಣ ಪ್ರಸಂಗಗಳೇ ಪ್ರಾಚೀನ ಎಂಬುದಕ್ಕೆ ಇದೊಂದು ಆಧಾರ.) ಈ ಕಿರೀಟವು ಕೆಳಗಿಂದ ಮೇಲಕ್ಕೆ ಅಗಲವಾಗುತ್ತ ಹೋಗುವ, ಬಾಲ್ದಿಯಂತಿರುತ್ತದೆ. (ಬಕೆಟ್ ಆಕಾರ) ಇದಕ್ಕೆ ಮೇಲ್ಬದಿಯಲ್ಲಿ ಉದ್ದವಾದ ನವಿಲುಗರಿಗಳನ್ನು ಸಿಕ್ಕಿಸಿರುತ್ತದೆ. ದೊಡ್ಡಗಾತ್ರದ ಕರ್ಣಪಾತ್ರ (ಓಲೆ)ಗಳನ್ನು ಕಟ್ಟುವರು. (ಮೂಡಲ ಪಾಯದ ಸುಮಾರಾಗಿ ಇದೇ ಆಕಾರದ ಕಿರೀಟಕ್ಕೆ 'ಉದ್ದಂಡಿ ಕಿರೀಟ' ಎನ್ನುವರು.)

ಹೆಣ್ಣುಬಣ್ಣದ ಕಿರೀಟ : ರಾಕ್ಷಸಿ ಕಿರೀಟ. ಕುತ್ತರಿ.

ಬಾಲ್ದಿ ಕಿರೀಟ : ನೋಡಿ : ಹೆಣ್ಣುಬಣ್ಣ.

ಹೆಣ್ಣುಬಣ್ಣದ ಪೊರಪ್ಪಾಡು = ನೋಡಿ : ಹೆಣ್ಣುಬಣ್ಣದ ಪ್ರವೇಶ.

ಹೆಣ್ಣುಬಣ್ಣದ ಪ್ರವೇಶ (–ಪೊರಪ್ಪಾಡು): ಗಂಡು ಬಣ್ಣದ ರೀತಿಯಲ್ಲೆ ಮೂರು ಅಟ್ಟಹಾಸ, ತೆರೆ ಕುಣಿತವಾದ ಮೇಲೆ, ಸಭಾವೀಕ್ಷಣೆ ಆದ ಬಳಿಕ, ಸ್ನಾನ, ತಲೆ ಬಾಚುವುದು, ಶೃಂಗಾರ ಮಾಡಿ ಕೊಳ್ಳುವುದು ಮೊದಲಾದ ಅಭಿನಯಗಳಿರುತ್ತವೆ. ಅದಾದ ಬಳಿಕ ತೆರೆತೆಗೆದು ಧೀಗಿಣ ಪ್ರವೇಶ.

ಹೆಣ್ಣುಬಣ್ಣದ ಆರ್ಭಟ, ಅಟ್ಟಹಾಸಗಳು. 'ಆ....'ಕಾರಗಳಾಗಿದ್ದು, ಕೀರಲು ಸ್ವರ ದಲ್ಲಿರಬೇಕು.

ಹೆಣ್ಣುಬಣ್ಣದ ಪ್ರವೇಶ ನೃತ್ಯದಲ್ಲಿ ವೈಯ್ಯಾರವೂ, ಅನಂತರ ಭಾಗವತರೊಂದಿಗೆ ಸ್ವಲ್ಪ ಹಾಸ್ಯಯುಕ್ತ ಪರಿಚಯ ಸಂಭಾಷಣೆಯೂ ಇರುತ್ತವೆ.

ಹೆಣ್ಣುಬಣ್ಣದ ವೇಷ = ನೋಡಿ : ಹೆಣ್ಣುಬಣ್ಣ.

ಹೆರಳು : ಸ್ತ್ರೀಪಾತ್ರಗಳ ಜಡೆಯಹೆರಳು, ಸಿದ್ಧಜಡೆ.

ಹೇಳುವಣಿಗೆ (ಬ.) : ಪದ್ಯದ ಹೇಳುವಿಕೆ, ಉಚ್ಚಾರಕ್ರಮ, ಲಯಶುದ್ಧಿ, ತಾಳಶುದ್ಧಿ, ಛಂದೋಗತಿಯ ಅನುಸರಣೆ ಮತ್ತು ಸ್ಪಷ್ಟತೆ–ಎಂಬ ಆವಶ್ಯಕ ಅಂಗಗಳ ಸಂಯುಕ್ತ ಪರಿಕಲ್ಪನೆ.

ಹೈಕ್‌ಟುರ್ರ್ : ಕಪಿ ಪಾತ್ರಗಳ ಮಾತಿನ ಮಧ್ಯೆ ಬರುವ ವಿಶಿಷ್ಟ ಧ್ವನಿವಿನ್ಯಾಸ; ಕಪಿಗಳ ಕೂಗಿನ ಅನುಕರಣವಾಚಿ.

ಹೊಂಗಾರಕ : ಹೊಂಗಾರಕನ ಮರ. ಪೊಂಗಾರ. **(Erithrina indica)** ಕಿರೀಟ, ಆಭರಣ, ಬೊಂಬೆಗಳ ತಯಾರಿಯಲ್ಲಿ ಬಳಕೆ.

ಹೊಂತಕಾರಿ (–ವೇಷ) : ಪುಂಡುವೇಷಕ್ಕೆ ಜನಪದರ ವರ್ಣನಾತ್ಮಕ ಪದ.

ಹೊಗಳಿಕೆ : 1. (ತೆ.) ಸಭಾಲಕ್ಷಣದ ಕೊನೆಯ ಭಾಗದಲ್ಲಿ ಬರುವ ದೇವರ ಮತ್ತು ಆಟ ಆಡಿಸುವವರ ಪ್ರಶಂಸೆ. (ನೋಡಿ: **ಆಹೋ ಹೋ,**) ಮೇಳದ ದೇವರು, (ಕೆಲವೊಮ್ಮೆ ಸ್ಥಾಪಕರು ಸಹ), ಆಟವಾಗುವ ಸ್ಥಳದ ದೇವರು, ಆಟ ಆಡಿಸುವವರು ಹೊಗಳಲ್ಪಡ ಬೇಕು.

ಈ 'ಹೊಗಳಿಕೆ'ಯನ್ನು ಹಾಸ್ಯಗಾರನೂ, ಭಾಗವತನೂ ನಡೆಸಿಕೊಡಬೇಕು.

ಬ. ಈ ಹೊಗಳಿಕೆಯು ಆರಂಭದಲ್ಲಿಲ್ಲ. ಆಟದ ಕೊನೆಗೆ ಮಾತ್ರ ಇರುತ್ತದೆ.

2. (ಬ. / ತೆ. / ಉ.) ಆಟದ ಅಂತ್ಯದಲ್ಲಿ, ದೇವರ, ಆಡಿಸಿದವರ ಹೊಗಳಿಕೆ. ಭಾಗವತ–ಹಾಸ್ಯಗಾರರಿಂದ (ಬ. ಸ್ತ್ರೀವೇಷ– ಭಾಗವತ.) 3. ಹೊಗಳಿಕೆ ದೂತ (ಹನುಮ ನಾಯಕ)ನಿಂದ, ರಾಜನ ಪ್ರಶಂಸೆ. ವಂದಿಮಾಗಧನ ಸ್ತುತಿ.

ಉದಾ : ಧರ್ಮರಾಯನ ಹೊಗಳಿಕೆ.

ಹನುಮನಾಯಕ : ''ಶ್ರೀಕೃಷ್ಣಸುಪ್ರೀತ, ಪ್ರೇತಪಾಲನ ಜಾತ, ದುರಿತವಂಶ ವಿಘಾತ, ತ್ರೈಲೋಕ್ಯ ವಿಖ್ಯಾತ, ಸಕಲಾವನೀನಾಥ, ಶರಣ ಸಂಕುಲಧಾತ, ಕಾಮಕ್ರೋಧ ವಿಘಾತ, ಮೂರು ಜಗದೊಳಜಾತಶತ್ರುವಾದಾತ, ಸರ್ವ ಶಾಸ್ತ್ರಾಧೀತ, ಸದ್ಧರ್ಮಪರಿಪೂತ, ಶ್ರೀ ಮದ್ರಾಜ ಕುಲಾಳಿಮಂಡಿತಪಾದಪದ್ಮರಾದಂಥ ಧರ್ಮರಾಜ ಮಹಾರಾಜ ಭೋ ಪರಾಕು''.

ಹೊಗಳಿಕೆ ಹಾಸ್ಯ : ಹೊಗಳಿಕೆ ಮಾಡುವ ಹಾಸ್ಯಪಾತ್ರ. ಹೊಗಳು ಭಟ. ಹನುಮನಾಯಕ.

ಹೊಟ್ಟೆಕಟ್ಟುವುದು : ಭಾಗವತರಾಗಲಿ, ಮದ್ದಲೆಗಾರರಾಗಲಿ, ತುಂಬಿದ ಅಂಗಸೌಷ್ಠವ ವಿಲ್ಲದವರಾಗಿದ್ದರೆ, ಹೆಚ್ಚು ಅರಿವೆ ಹಾಕಿ ಕೊಂಡು, ಹೊಟ್ಟೆಗೂ ಬಟ್ಟೆ ಕಟ್ಟಿ ಆಕಾರಶುದ್ಧಿ ಮಾಡಿಕೊಳ್ಳುವ ಕ್ರಮ. ಹಿಂದಿನ ಪದ್ಧತಿ.

ಹೊಡೆತ / ಹೊಡ್ತ (ಬ.) : ಅಭಿವ್ಯಕ್ತಿ, ನೃತ್ಯ ಇತ್ಯಾದಿ ಗಳ ರಭಸ, ಅಬ್ಬರ. ಜಾನಪದ ಪ್ರಶಂಸೆ.

ಹೊನ್ನೆ : ಹೊನ್ನೆಮರ (Calophillum elatum) ಮದ್ದಳೆ ಕಳಸಿಗೆ ತಯಾರಿಗೆ ಉಪಯುಕ್ತ.

ಹೊನ್ನೆಕಾಯಿ : ಹೊನ್ನೆಮರದ ಕಾಯಿ. ಒಣಗಿಸಿ, ಬೀಜ ತೆಗೆದು, ಬೇಗಡೆ ಹಚ್ಚಿ ಗುಂಡುಸರ ತಯಾರಿಕೆಗೆ ಬಳಕೆ.

ಹೊನ್ನೆಣ್ಣೆದೀಪ : ಹೊನ್ನೆಕಾಯಿಯಿಂದ ತೆಗೆದ ಎಣ್ಣೆಯದೀಪ, ರಂಗದಲ್ಲೂ, ಚೌಕಿಯಲ್ಲೂ ಬೆಳಕಿಗೆ ಬಳಕೆಯಿತ್ತು. ಹೊನ್ನೆಣ್ಣೆಯು ಉರಿದು ಮುಗಿಯುವುದು ನಿಧಾನವಾಗಿ.

ಹೊಯಿಪು / ಹೊಯ್ಪು (ಬ.) : ಕುಣಿತ, ಮಾತು, ಚಲನೆಗಳ ರಭಸ, ತೀವ್ರತೆ. ಅಭಿವ್ಯಕ್ತಿಯ ಉಜ್ವಲತೆ– ಪ್ರಶಂಸಾತ್ಮಕ.

ಹೊರಡಿಕೆ = ನೋಡಿ : ಉರುಳಿಕೆ.

ಹೊರಳಿಕೆ = ನೋಡಿ : ಉರುಳಿಕೆ.

ಹೊರೆ : ಮೇಳದ ಹೊರೆಗಳು. ಪೆಟ್ಟಿಗೆಗಳು, ಗಂಟುಗಳು– ಅಡ್ಡೋರೆ, ಜವುಳಿಗಂಟು, ರಥದ ಹೊರೆ, ಇತ್ಯಾದಿ.

ಅನುಬಂಧ

1

ಆಕರ – ಮಾಹಿತಿ – ಕ್ಷೇತ್ರಕಾರ್ಯ

ಅ) ಯಕ್ಷಗಾನ ಕ್ಷೇತ್ರದಲ್ಲಿನ ದೀರ್ಘಕಾಲದ ಸಂಪರ್ಕ ಮತ್ತು ಪ್ರಾಯೋಗಿಕ ಅನುಭವದ ಆಧಾರದಲ್ಲಿ, ಪಾರಿಭಾಷಿಕ ಪದಗಳ ಯಾದಿಯೊಂದನ್ನು ಸಿದ್ಧಗೊಳಿಸಿ, ಅದರ ಪ್ರತಿಗಳನ್ನು ಕೆಲವು ತಜ್ಞರಿಗೂ, ಕಲಾವಿದರಿಗೂ ಕಳುಹಿಸಿ ಹೊಸ ಸೇರ್ಪಡೆಗಳನ್ನು ಪಡೆದು ಕೊಳ್ಳಲಾಯಿತು.

ಆ) 1990-1993ರ ಅವಧಿಯಲ್ಲಿ ಮೇಳಗಳನ್ನು, ಕಲಾವಿದರನ್ನು, ತಜ್ಞರನ್ನು ಸಂದರ್ಶಿಸಿ ಹೆಚ್ಚುವರಿ ಮಾಹಿತಿಗಳನ್ನು ಕಲೆ ಹಾಕಿ, ತಾಳೆ ನೋಡಿ, ಟಿಪ್ಪಣಿಗಳನ್ನು ತಯಾರಿಸಿದೆ.

ಇ) ಪುನಃ ಪರಿಷ್ಕೃತ ಯಾದಿಗಳನ್ನು ತಯಾರಿಸಿ ತಜ್ಞರ, ಕಲಾವಿದರ ನೆರವಿನಿಂದ ಬೆಳೆಸಿದೆ.

ಈ) ಅಪೂರ್ಣ ಮಾಹಿತಿ, ಸಂದೇಹಗಳಿದ್ದ ವಿಷಯಗಳಲ್ಲಿ ಸಂದರ್ಶನ, ಪತ್ರ ವ್ಯವಹಾರಗಳ ಮೂಲಕ ಮತ್ತು ಗ್ರಂಥಗಳ ಪರಿಶೀಲನೆಯಿಂದ ಸ್ಪಷ್ಟಪಡಿಸಿಕೊಂಡಿದೆ.

ಉ) ಈ ರೀತಿ ಸಂಗ್ರಹವಾದ ಮಾಹಿತಿಯನ್ನು ವಿವರವಾಗಿ ಬರೆದು ತಯಾರಿಸಿದೆ. ಬರಹ ಸಾಗುತ್ತಿದ್ದಂತೆ, ಸಂದೇಹಗಳು ಬಂದಾಗ ಕ್ಷೇತ್ರಕಾರ್ಯ ಮೂಲಕ ಸ್ಪಷ್ಟೀಕರಿಸಿಕೊಂಡು ಮುಂದುವರಿಸಿದೆ.

ಅನುಬಂಧ

2

ಸಂದರ್ಶಿಸಲಾದ ಕಲಾವಿದರು, ತಜ್ಞರು

ಸರ್ವಶ್ರೀ

- **ಅಮೃತ ಸೋಮೇಶ್ವರ**, ಪ್ರಾಧ್ಯಾಪಕ, ಅಡ್ಕ, ಕೋಟೆಕಾರು, ದ.ಕ.
- **ಪಿ. ವೆಂಕಟರಾಜ ಪುಣಿಂಚತ್ತಾಯ**, ವಿದ್ವಾನ್, ಎಡನೀರು, ಕಾಸರಗೋಡು.
- **ಪಿ. ಕೃಷ್ಣ ಭಟ್ಟ**, ವಿದ್ವಾನ್, ಮುಖ್ಯೋಪಾಧ್ಯಾಯರು ಶ್ರೀ ದುರ್ಗಾಪರಮೇಶ್ವರಿ ಹಿ.ಪ್ರಾ. ಶಾಲೆ ಕಟೀಲು, ದ.ಕ.
- **ಪು. ಶ್ರೀನಿವಾಸ ಭಟ್ಟ**, ಅಧ್ಯಾಪಕರು, ಶ್ರೀ ದುರ್ಗಾ ಪರಮೇಶ್ವರಿ ಹಿ.ಪ್ರಾ. ಶಾಲೆ ಕಟೀಲು, ದ.ಕ.
- **ಎಚ್. ಸುಬ್ಬಣ್ಣ ಭಟ್ಟ**, ಅಧ್ಯಾಪಕ, ಕಲಾವಿದ, ಬ್ರಹ್ಮಾವರ, ದ.ಕ.
- **ಮುಳಿಯ ಮಹಾಬಲ ಭಟ್ಟ**, ಎಡ್ವೊಕೇಟ್, ಕೊಡಿಯಾಲಬೈಲ್, ಮಂಗಳೂರು.
- **ಕೆರೆಮನೆ ಶಂಭು ಹೆಗ್ಡೆ**, ಕಲಾವಿದರು, ಕೆರೆಮನೆ, ಗುಣವಂತೆ, ಹೊನ್ನಾವರ, ಉ.ಕ.
- **ಹೊಸ್ತೋಟ ಮಂಜುನಾಥ ಭಾಗವತ**, ಕಲಾವಿದರು, ಅಂಚೆ : ಚವತ್ತಿ, ಯಲ್ಲಾಪುರ, ಉ.ಕ.
- **ಕೆರೆಮನೆ ಮಹಾಬಲ ಹೆಗ್ಡೆ**, ಕಲಾವಿದರು, ಕೆರೆಮನೆ, ಗುಣವಂತೆ, ಹೊನ್ನಾವರ, ಉ.ಕ.
- **ಪಿ. ವಾಸುದೇವ ಮದ್ದಲೆಗಾರ**, ಕಲಾವಿದರು, ವಾದ್ಯ ತಯಾರಕರು, ಪುತ್ತೂರು, ದ.ಕ.
- **ಕೆ. ಎನ್. ಬಸವರಾಜ ಅರಸು**, ಕಲಾವಿದರು, ಕೋಳಗಾಲ. ಹೆಗ್ಗಡೆ ದೇವನ ಕೋಟೆ, ಮೈಸೂರು. ಜಿಲ್ಲೆ.
- **ಎಂ. ಎ. ಹೆಗ್ಡೆ**, ಪ್ರಾಧ್ಯಾಪಕ, ಎಂ.ಜಿ. ಸಿ. ಕಾಲೇಜು ಸಿದ್ದಾಪುರ. ಉ.ಕ.
- **ದಿ। ವಿಟ್ಲ ಗೋಪಾಲಕೃಷ್ಣ ಜೋಶಿ**, ಹಾಸ್ಯಗಾರ, ವಿಟ್ಲ, ದ.ಕ.
- **ನೆಡ್ಲೆ ನರಸಿಂಹ ಭಟ್**, ಮದ್ದಲೆಗಾರರು, ಯೆಯ್ಯಾಡಿ, ಮಂಗಳೂರು.

- ಉಪ್ಪಿನಕುದುರು ಕೊಗ್ಗ ಕಾಮತ್, ಕಲಾವಿದರು, ಉಪ್ಪಿನಕುದುರು, ಕುಂದಾಪುರ.
- ಕೆ. ಗೋವಿಂದ ಭಟ್ಟ, ಕಲಾವಿದರು, ಸಫಲಪುರ ಹೆದ್ದೂರು. ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ.
- ದಿ। ಪಿ. ವಿ. ಹಾಸ್ಯಗಾರ ಕರ್ಕಿ, ಪ್ರಾಧ್ಯಾಪಕ, ಕಲಾವಿದ, ಹೊನ್ನಾವರ, ಉ.ಕ.
- ಕುಂಬಳೆ ಸುಂದರ ರಾವ್, ಕಲಾವಿದರು, ಪಡೀಲು, ಮಂಗಳೂರು.
- ಬಣ್ಣದ ಮಾಲಿಂಗ, ಕಲಾವಿದರು, ಸಂಪಾಜೆ, ಸುಳ್ಯ ತಾಲೂಕು, ದ.ಕ.
- ಅಂಬಾತನಯ, ಕಲಾವಿದ, ಅಧ್ಯಾಪಕ, ಮುದ್ರಾಡಿ, ಕಾರ್ಕಳ ತಾಲೂಕು, ದ.ಕ.
- ಎಂ. ಎಲ್. ಸಾಮಗ, ಪ್ರಾಧ್ಯಾಪಕ, ಕಲಾವಿದ, ಮಲ್ಪೆ, ಉಡುಪಿ.
- ಮಂದಾರ ಕೇಶವ ಭಟ್, ವಿದ್ವಾನ್, ಅಧ್ಯಾಪಕ, ಕಲಾವಿದ, ಕುಡುಪು, ಮಂಗಳೂರು.
- ಬನ್ನಂಜೆ ಸಂಜೀವ ಸುವರ್ಣ, ಶಿಕ್ಷಕರು, ಯಕ್ಷಗಾನ ಕೇಂದ್ರ, ಇಂದ್ರಾಳಿ, ಉಡುಪಿ.
- ನೀಲಾವರ ಲಕ್ಷ್ಮೀನಾರಾಯಣ ರಾವ್, ಪ್ರಾಂಶುಪಾಲರು, ಯಕ್ಷಗಾನ ಕೇಂದ್ರ, ಇಂದ್ರಾಳಿ, ಉಡುಪಿ.
- ಅನಂತ ಪದ್ಮನಾಭ ಪಾಠಕ್, ಶಿಕ್ಷಕರು, ಯಕ್ಷಗಾನ ಕೇಂದ್ರ, ಇಂದ್ರಾಳಿ, ಉಡುಪಿ.
- ಸಿದ್ದಕಟ್ಟೆ ವಿಶ್ವನಾಥ ಶೆಟ್ಟಿ, ಕಲಾವಿದರು, ಸಿದ್ದಕಟ್ಟೆ, ಬಂಟ್ವಾಳ ತಾಲೂಕು.
- ಬಲಿಪ ನಾರಾಯಣ ಭಾಗವತ, ಕಲಾವಿದರು, ನೂಯಿ, ಮಾರೂರು, ಮೂಡಬಿದ್ರೆ, ದ.ಕ.
- ದಿ। ಕೋಟ ಮಹಾಬಲ ಕಾರಂತ, ಶಿಕ್ಷಕರು, ಯಕ್ಷಗಾನ ಕೇಂದ್ರ, ಇಂದ್ರಾಳಿ, ಉಡುಪಿ.
- ತೆಕ್ಕಟ್ಟೆ ಆನಂದ ಮಾಸ್ತರ್, ಕಲಾವಿದರು, ನಾಗೂರು, ಕಿರಿಮಂಜೇಶ್ವರ, ಕುಂದಾಪುರ ತಾಲೂಕು.
- ಎ. ಸದಾನಂದ ಹೆಬ್ಬಾರ, ಅಧ್ಯಾಪಕ, ಕಲಾವಿದ, ಐರೋಡಿ, ಉಡುಪಿ ತಾಲೂಕು.
- ಪಿ. ಶ್ರೀಧರ ಹಂದೆ, ಮುಖ್ಯೋಪಾಧ್ಯಾಯರು, ಕಲಾವಿದರು, ಚೇತನಾ ಹೈಸ್ಕೂಲು, ಹಂಗಾರಕಟ್ಟೆ, ಉಡುಪಿ ತಾಲೂಕು.
- ಪಾತಾಳ ವೆಂಕಟರಮಣ ಭಟ್ಟ, ಕಲಾವಿದರು, ಪಾತಾಳ ಮನೆ, ಉಪ್ಪಿನಂಗಡಿ.
- ಚಿಟ್ಟಾಣಿ ರಾಮಚಂದ್ರ ಹೆಗ್ಡೆ, ಕಲಾವಿದರು, ಅಂಚೆ : ಸಾಲ್ಕೋಡು, ಹೊನ್ನಾವರ, ಉ.ಕ.
- ದಿ। ದೀವಾಣ ಭೀಮ ಭಟ್ಟ, ಕಲಾವಿದರು, ಕೋಡಪದವು, ವಿಟ್ಲ, ದ.ಕ.
- ಚಿಪ್ಪಾರು ಕೃಷ್ಣಯ್ಯ ಬಲ್ಲಾಳ, ಕಲಾವಿದರು, ಚಿಪ್ಪಾರು, ಬಾಯಾರು, ಕಾಸರಗೋಡು ತಾಲೂಕು.
- ಪದ್ಯಾಣ ಶಂಕರನಾರಾಯಣ ಭಟ್ಟ, ಕಲಾವಿದರು, ಕರೋಪಾಡಿ, ಬಂಟ್ವಾಳ ತಾಲೂಕು. ದ.ಕ.
- ದಿ। ಕುಕ್ಕಿಲ ಕೃಷ್ಣ ಭಟ್ಟ, ಸಂಶೋಧಕರು, ವಿಟ್ಲ ಪಡ್ನೂರು, ಕೋಡಪದವು, ದ.ಕ.
- ಕೊಳಗಿ ಅನಂತ ಹೆಗಡೆ, ಶಿರಳಗಿ, ಸಿದ್ದಾಪುರ.
- ಪ್ರೊ। ಎಂ. ರಾಜಗೋಪಾಲಾಚಾರ್ಯ, ಅಲೆವೂರು, ಉಡುಪಿ.
- ಪದ್ರೆ ಚಂದು, ಕಲಾವಿದರು, ಕೊಡುಂಗಾಯಿ, ವಿಟ್ಲ.
- ಭಾಗವತ ಗೋರ್ಪಾಡಿ ವಿಠಲ ಪಾಟೀಲ, ಕಲಾವಿದರು, ಪೇತ್ರಿ, ಬ್ರಹ್ಮಾವರ, ದ.ಕ.
- ಡಾ। ಜಿ. ಎಸ್. ಹೆಗಡೆ, ಪ್ರಾಧ್ಯಾಪಕರು, ನೆಹರೂ ಸ್ಮಾರಕ ಕಾಲೇಜು, ಸುಳ್ಯ, ದ.ಕ.

ಅನುಬಂಧ

3

ಮಾರ್ಗದರ್ಶನ – ನೆರವು – ಸಹಕಾರ

- ಪ್ರೊ। ಕು. ಶಿ. ಹರಿದಾಸ ಭಟ್ಟ, ನಿರ್ದೇಶಕರು, ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, (ಆರ್.ಆರ್.ಸಿ.) ಉಡುಪಿ.
- ಎ. ವಿ. ನಾವಡ, ಆರ್.ಆರ್.ಸಿ. ಸಂಶೋಧನ ಸಮನ್ವಯಕಾರರು, ಪ್ರಾಧ್ಯಾಪಕ, ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ.
- ಎಸ್. ಎ. ಕೃಷ್ಣಯ್ಯ, ಸಂಶೋಧಕರು, ಆರ್.ಆರ್.ಸಿ. ಉಡುಪಿ.
- ಡಾ। ಕೆ. ಪದ್ಮಭಾಭ ಕೇಕುಣ್ಣಾಯ, ಉಪಸಂಪಾದಕರು, ತುಳು ನಿಘಂಟು, ರಾ.ಗೋ. ಪೈ.ಸಂ. ಕೇಂದ್ರ, ಉಡುಪಿ.
- ಡಾ। ಯು. ಪಿ. ಉಪಾಧ್ಯಾಯ, ಸಂಪಾದಕರು, ತುಳು ನಿಘಂಟು, ರಾ.ಗೋ. ಪೈ. ಸಂ. ಕೇಂದ್ರ, ಉಡುಪಿ.
- ಮುಕುಂದ ಪ್ರಭು, ಮಂಜೇಶ್ವರ, ಸಂಶೋಧಕರು, ಬಿಜೈ ನ್ಯೂ ರೋಡ್, ಮಂಗಳೂರು.
- ಡಾ। ಪಿ. ಸತ್ಯನಾರಾಯಣ ಭಟ್, ಪ್ರಾಧ್ಯಾಪಕರು, ಆಯುರ್ವೇದ ಕಾಲೇಜು, ಗಾಂಧಿನಗರ ಬೆಂಗಳೂರು.
- ಕೆ. ಎಂ. ರಾಘವ ನಂಬಿಯಾರ್, ಉಪಸಂಪಾದಕರು, ಉದಯವಾಣಿ, ಮಣಿಪಾಲ.
- ಅ. ಬಾಲಕೃಷ್ಣ ಶೆಟ್ಟಿ ಪೊಳಲಿ, ಸಿಂಡಿಕೇಟ್ ಬ್ಯಾಂಕ್, ಮಣಿಪಾಲ.
- ಸರವು ರಾಮ ಭಟ್, ಎಡ್ವೊಕೇಟ್, ''ಜಾಹ್ನವಿ'' ಸಂಪಾಜೆ, ಸುಳ್ಯ ತಾಲೂಕು.
- ಕಜೆ ಈಶ್ವರ ಭಟ್ಟ, ಕೃಷಿಕರು, ''ಕೇದಾರ'' ಇಳಂತಿಲ, ಉಪ್ಪಿನಂಗಡಿ.
- ಎಚ್. ಕೃಷ್ಣ ಭಟ್ಟ, ಪ್ರಾಧ್ಯಾಪಕ, ನಿರ್ದೇಶಕರು, ರಾ.ಗೋ.ಪೈ ಸಂಶೋಧನ ಕೇಂದ್ರ ಎಂ.ಜಿ.ಎಂ. ಕಾಲೇಜು, ಉಡುಪಿ.
- ಪಾದೆಕಲ್ಲು ವಿಷ್ಣು ಭಟ್ಟ, ಪ್ರಿನ್ಸಿಪಾಲ್, ಸರಕಾರಿ ಕಾಲೇಜು, ಉಡುಪಿ.

ಅನುಬಂಧ

4

ಅಧ್ಯಯನ ಗ್ರಂಥಗಳು

- ಡಾ। ಕೆ. ಶಿವರಾಮ ಕಾರಂತ: ಯಕ್ಷಗಾನ ಬಯಲಾಟ, ಹರ್ಷ ಪ್ರಕಟನಾಲಯ, ಪುತ್ತೂರು. 1963
- ಡಾ। ಕೆ. ಶಿವರಾಮ ಕಾರಂತ: ಯಕ್ಷಗಾನ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು. 1974.
- ಕುಕ್ಕಿಲ ಕೃಷ್ಣ ಭಟ್ಟ (ಸಂ): ಪಾರ್ತಿಸುಬ್ಬನ ಯಕ್ಷಗಾನಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. 1975.
- ಭಾಗವತ ನೀಲಾವರ ರಾಮಕೃಷ್ಣಯ್ಯ: ಯಕ್ಷಗಾನ ಸ್ವಬೋಧಿನಿ, ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ. 1986.
- ಪ್ರೊ। ಎಂ. ರಾಜಗೋಪಾಲಾಚಾರ್ಯ: ಯಕ್ಷಗಾನ ಸಂಗೀತ, ರಾ.ಗೋ. ಪೈ ಸಂಶೋಧನ ಕೇಂದ್ರ ಉಡುಪಿ. 1986.
- ಭಾಗವತ ಎಂ. ನಾರ್ಣಪ್ಪ ಉಪ್ಪೂರ: ಯಕ್ಷಗಾನ ಅಧ್ಯಯನ, ಹಂಗಾರಕಟ್ಟೆ ಯಕ್ಷಗಾನ ಕಲಾಕೇಂದ್ರ, ಕೋಟ, ಐರೋಡಿ. ದ.ಕ. 1978.
- ಎಂ ಪ್ರಭಾಕರ ಜೋಶಿ: ಜಾಗರ, ಸುಮನಸಾ ವಿಚಾರವೇದಿಕೆ, ಚೊಕ್ಕಾಡಿ, ಸುಳ್ಯ ತಾಲೂಕು. 1984.
- ಎಂ. ಪ್ರಭಾಕರ ಜೋಶಿ: ಕೇದಗೆ, ಚಿತ್ರಾ ಪ್ರಕಾಶನ ಮಂಗಳೂರು 1990.
- ಮುಳಿಯ ಮಹಾಬಲ ಭಟ್ಟ: ಬಣ್ಣದ ವೇಷ ಮತ್ತು ಇತರ ಉಪನ್ಯಾಸಗಳು, ಲೇಖಕ ಪ್ರಕಾಶಿತ, ಕರಂಗಲ್ಪಾಡಿ, ಮಂಗಳೂರು 1988.

ಸಂಕಲನಗ್ರಂಥಗಳು

ಯಕ್ಷಗಾನ ಮಕರಂದ: ಸಂ. ಮುಳಿಯ ಮಹಾಬಲ ಭಟ್ಟ ಮತ್ತು ಇತರರು, ಪೊಳಲಿ ಶಾಸ್ತ್ರಿ ಸ್ಮಾರಕ ಸಮಿತಿ ಮಂಗಳೂರು, 1980.

ದೀವಾಣ ಭೀಮಭಟ್ಟ, ಡಿ. ಕೆ. ಸುಬ್ಬಣ್ಣ ಭಟ್ಟ, ಸೇಡಿಯಾಪು ಕೃಷ್ಣಭಟ್ಟ, ಎಂ. ಎಲ್. ಸಾಮಗ, ಕುಂಬಳೆ ಸುಂದರ ರಾವ್, ಹಿರಿಯಡ್ಕ ಗೋಪಾಲ ರಾವ್, ಪಿ. ಶ್ರೀಧರ ಐತಾಳ, ಬಾ. ಸಾಮಗ– ಇವರ ಲೇಖನಗಳು.

ಮಂದಾರ: ಸಂ. ಎಚ್. ಬಿ. ಎಲ್. ರಾವ್ ಮತ್ತಿತರರು, 1986 ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ.

ಕುಕ್ಕಿಲ ಕೃಷ್ಣ ಭಟ್ಟರ ಲೇಖನ.

ಗಾನಕೋಗಿಲೆ: ಸಂ. : ಏರ್ಯಲಕ್ಷ್ಮೀನಾರಾಯಣ ಆಳ್ವ ಮತ್ತಿತರರು, ದಾಮೋದರ ಮಂಡಚ್ಚ ಸ್ಮಾರಕ ಸಮಿತಿ, ಜೋಡುಮಾರ್ಗ, ಬಂಟ್ವಾಳ. 1988 ಕುಕ್ಕಿಲ ಕೃಷ್ಣ ಭಟ್ಟ, ಅಮೃತ ಸೋಮೇಶ್ವರ, ವೆಂಕಟರಾಜ ಪುಣಿಂಚತ್ತಾಯ– ಇವರ ಲೇಖನಗಳು.

ಬಾಸಿಗ: ಸಂ.: ಎಂ. ರಾಮಚಂದ್ರ ಮತ್ತಿತರರು, ದ.ಕ. ಜಿಲ್ಲಾ ಸಾಹಿತ್ಯ ಸಮ್ಮೇಲನ ಸ್ಮೃತಿ ಸಂಪುಟ, ಜಿಲ್ಲಾ ಸಾಹಿತ್ಯ ಸಮ್ಮೇಲನ ಸಮಿತಿ, ಕಾರ್ಕಳ. 1972

ಕುಕ್ಕಿಲ ಕೃಷ್ಣ ಭಟ್ಟರ ಲೇಖನ.

ರಂಗವೈಖರಿ: ಸಂ. ಪಾದೆಕಲ್ಲು ನರಸಿಂಹ ಭಟ್ಟ, ಪಾದೆಕಲ್ಲು ವಿಷ್ಣು ಭಟ್ಟ. ಶ್ರೀ ಮಾಂಬಾಡಿ ನಾರಾಯಣ ಭಾಗವತ ಸನ್ಮಾನ ಸಮಿತಿ, ಮಿತ್ತನಡ್ಕ ಕರೋಪಾಡಿ. ದ.ಕ. 1981.

ಕುಕ್ಕಿಲ ಕೃಷ್ಣ ಭಟ್ಟರ ಲೇಖನ.


ಕೋಶಗಳು

ರೆವ. ಕಿಟ್ಟೆಲ್: ಕನ್ನಡ– ಕನ್ನಡ– ಇಂಗ್ಲಿಷ್ ಕೋಶ ಮದರಾಸು ವಿ.ವಿ. 1971.

Fowler & Fowler J. B. Sykes: The Concise Oxford Dictionary of Current English, Oxford University Press Indian Edition, Bombay: 1982.

A Dictionary of Kathakali : K.P.S. Menon Orient Longman 1978.

ಸಹಸ್ರಾರ್ಧ ವೃಕ್ಷಾದಿಗಳ ವರ್ಣನೆ: ಬಾಸೆಲ್ ಮಿಶನ್ ಪ್ರೆಸ್.



ಎಂ. ಪ್ರಭಾಕರ ಜೋಶಿ



ಯಕ್ಷಗಾನದ ಶಾಸ್ತ್ರೀಯ ವಿವೇಚನೆಯಲ್ಲಿ ಪಳಗಿದ ವಿಮರ್ಶಕ ಮಿತ್ರ ಪ್ರಭಾಕರ ಜೋಶಿಯವರ ಒಂದು ಮುಖ್ಯ ಕೃತಿ 'ಯಕ್ಷಗಾನ ಪದಕೋಶ'. ಯಕ್ಷಗಾನ ಕಲೆಯ ಸಮಗ್ರ ಪಾಂಡಿತ್ಯವನ್ನು ತನ್ನ ವ್ಯಕ್ತಿತ್ವದಲ್ಲಿ ಅನುಭವಪೂರ್ಣವಾಗಿ ಅಳವಡಿಸಿ ತನ್ನ ಉಪನ್ಯಾಸ– ಲೇಖನ– ಕಲೆಯ ಪ್ರತ್ಯಕ್ಷ ಹಾಗೂ ನಿಕಟ ದರ್ಶನಗಳಿಂದಾಗಿ ಶ್ರೀ ಜೋಶಿಯವರು ಈಗಾಗಲೇ ಯಕ್ಷಗಾನ ಪ್ರಪಂಚದಲ್ಲಿ ಸುಪ್ರಸಿದ್ಧರು. ಅವರ ತರ್ಕಶಕ್ತಿ, ವಾಗ್ಮಿಯತೆಯನ್ನು ಅರಿಯದವರಿಲ್ಲ. ಮೆಚ್ಚಿಕೊಳ್ಳದವರಿಲ್ಲ, ಅವರ ಮಾತಿನ ಸಮ್ಮೋಹಿನಿಗೆ ಮರುಳಾಗದವರಿಲ್ಲ.

– ಕು. ಶಿ. ಹರಿದಾಸ ಭಟ್ಟ